ಸಾಹಿತ್ಯರಶ್ಮಿ

ಗೋರೂರು ರಾಮಸ್ವಾಮಿ ಅಯ್ಯಂಗಾರ್

ಜ್ಯ ಸರ್ಕಾರದ ಬಹುಮಾನಿತ ಕೃತಿ

ಸುದರ್ಶನದ ಹೆಮ್ಮೆಯ ಪ್ರಕಟನೆ

ಸಾಹಿತ್ಯ ರಶ್ಮಿ

ಸಾಹಿತ್ಯ, ಸಂಸ್ಕೃತಿ, ಕಲೆ, ರಸಾನುಭವದ ವಿಚಾರ ಪ್ರಬಂಧಗಳು

ರಾಜ್ಯಸರ್ಕಾರದ ಬಹುಮಾನಿತ ಗ್ರಂಥ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪ್ರಕಾಶಕರು :

ಸುದರ್ಶನ ಪ್ರಕಾಶನ

ತಾರಾನಿವಾಸ :: ತಿಪಟೂರು

ಸುದರ್ಶನ ಪ್ರಕಟನೆ ಒಂದುನೂರ ಇಪ್ಪತ್ತೇಳು

ಮೊದಲ ಮುದ್ರಣ: ೧೯೬೩

ಪ್ರಕಾಶಕರು:

ತಾ. ರಾ. ನಾಗರಾಜ, ಶಕುಂತಲಾ ನಾಗರಾಜ

ತಾರಾನಿವಾಸ, ತಿಪಟೂರು

ಬೆಲೆ: ಆರು ರೂಪಾಯಿ ಐವತ್ತು ನಯಪೈಸೆ

ಮುದ್ರಕರು:

ರಂಗನಾಥ ಪವರ್ ಪ್ರೆಸ್, ಹಾಸನ

ಅರಿಕೆ

ಈ ಗ್ರಂಥದಲ್ಲಿ ಇಪ್ಪತ್ತು ನಾಲ್ಕು ಪ್ರಬಂಧಗಳಿವೆ. ಇವುಗಳನ್ನು ಕಳೆದ ಕೆಲವು ವರುಷಗಳಲ್ಲಿ ಸಂಭಾವನಾ ಗ್ರಂಥಗಳು, ಅಭಿನಂದನ ಗ್ರಂಥಗಳು, ನೆನಪು ಗ್ರಂಥಗಳು ಮತ್ತು ವಿಶೇಷ ಸಂಚಿಕೆ, ದೀಪಾವಳಿ ಸಂಚಿಕೆಗಳಿಗಾಗಿ ಬರೆದ ನನ್ನ ಲೇಖನಗಳಿಂದ ಆರಿಸಲಾಯಿತು. ನೋಡಬೇಕೆನ್ನುವವರಿಗೆ ಒಂದೆಡೆ ಒಟ್ಟಾಗಿ ಸಿಕ್ಕುವುದು ಒಳ್ಳೆಯದು ಎಂದು ಮಿತ್ರರನೇಕರು ಬಯಸಿದುದರಿಂದ ಇದನ್ನು ಈ ಗ್ರಂಥರೂಪದಲ್ಲಿ ಪ್ರಕಟನಗೊಳಿಸಿದ್ದೇನೆ.

ಕನ್ನಡ ಗ್ರಂಥಗಳಲ್ಲಿ ಗದ್ಯ ರಚನೆ, ಬೇಂದ್ರೆಯವರ ವ್ಯಕ್ತಿತ್ವ, ನಿಕಟ ಪರಿಚಯ, ರುಧಿರದ ತಿಲಕವಾದನವೈಧರಾಂಗನೆಗೆ ಇವು ಕ್ರಮವಾಗಿ ಶ್ರೀಮಾನ್ ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳು, ಶ್ರೀಮಾನ್ ಕವಿ ಬೇಂದ್ರೆಯವರು, ಶ್ರೀಮಾನ್ ದಿವಂಗತ ಮುಳಿಯ ತಿಮ್ಮಪ್ಪಯ್ಯ ಮತ್ತು ದಿವಂಗತ ಶ್ರೀಮಾನ್ ಕೊರಟ್ಕಲ್ ಶ್ರೀನಿವಾಸರಾಯರಿಗೆ ಅರ್ಪಿಸಿದ ಸಂಭಾವನಾ ಗ್ರಂಥಗಳಿಗಾಗಿ ಬರೆದವು. "ಶ್ರೀನಿವಾಸರ ಸಣ್ಣ ಕಥೆಗಳು" ಎಂಬ ಲೇಖನ ಒಂದು ವಿಶೇಷ ಸಂಚಿಕೆಗಾಗಿ ಬರೆಯಲ್ಪಟ್ಟುದು. ಕವಿ ಲಕ್ಷ್ಮೀಶ ರತ್ನಾಕರ ಇವು ಆ ಕವಿಗಳ ಪ್ರಶಸ್ತಿ ಗ್ರಂಥಗಳಿಗಾಗಿ ಬರೆಯಲ್ಪಟ್ಟವು. ಉಳಿದ ಲೇಖನಗಳೆಲ್ಲ ಪ್ರಬುದ್ಧ ಕರ್ಣಾಟಕ, ಜೀವನ, ಮದರಾಸಿನ ಸೇವಾ, ಕರ್ಮವೀರ, ಜನಪ್ರಗತಿ, ಪ್ರಜಾಮತ, ಪುಸ್ತಕ ಪ್ರಪಂಚ ಇವುಗಳ ವಿಶೇಷ ಸಂಚಿಕೆಗಳಲ್ಲಿಯೂ, ದೀಪಾವಳಿ ಸಂಚಿಕೆಯಲ್ಲಿಯೂ, ಬೆಳ್ಳಿಯ ಹಬ್ಬದ ಸಂಚಿಕೆಯಲ್ಲಿಯೂ ಪ್ರಕಟವಾದವು. ಈ ಲೇಖನಗಳನ್ನು ಮೊದಲು ತಮ್ಮ ಗ್ರಂಥಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಪ್ರಕಟಿಸಿದವರಿಗೆಲ್ಲ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೊನೆಯದಾದ ರವೀಂದ್ರನಾಥ ಠಾಕೂರರು ಎಂಬ ಲೇಖನ ಮೊನ್ನೆ ಮೊನ್ನೆ ಆಚರಿಸಲಾದ ವಿಶ್ವಕವಿಯ ಶತಮಾನೋತ್ಸವಕ್ಕಾಗಿ ಬರೆಯಲ್ಪಟ್ಟಿತು.

ಈ ಗ್ರಂಥದ ಪ್ರಕಾಶಕರಾದ ಶ್ರೀ ಸುದರ್ಶನ ಪ್ರಕಾಶನದ ಪ್ರಕಾಶಕರು ಸಾಹಸಿಗಳಾದ ಯುವಕರು. ಇವರು ಈಗಾಗಲೇ ಅನೇಕ ಗ್ರಂಥಗಳನ್ನು ಪ್ರಕಟಿಸಿ ನಾಡಿನಲ್ಲಿ ಹೆಸರುವಾಸಿಯಾಗಿದ್ದಾರೆ. ವಿಚಾರಪ್ರದವಾದ ಈ ಗ್ರಂಥದ ಪ್ರಕಟನೆಯನ್ನು ಇವರು ಕೈಕೊಂಡುದು ಇವರ ನುಡಿಭಕ್ತಿಯ ದ್ಯೋತಕವಾಗಿದೆ. ಇದಕ್ಕಾಗಿ ಇವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಗೊರೂರು ರಾಮಸ್ವಾಮಯ್ಯಂಗಾರ್.

ಲೇಖನ ಸೂಚಿ

ಸಾಹಿತ್ಯ ರಶ್ಮಿ

—★—

ಕನ್ನಡ ಗ್ರಂಥಗಳಲ್ಲಿ ಗದ್ಯರಚನೆ

ಕನ್ನಡ ಕಾವ್ಯಗಳು ಮೊದಲು ಸಂಸ್ಕೃತದ ಸ್ಫೂರ್ತಿಯಿಂದಲೇ ಹುಟ್ಟಿದುವು. ಸಂಸ್ಕೃತ ಕಾವ್ಯಗಳಲ್ಲಿಯೂ ಪದ್ಯಭಾಗಕ್ಕಿಂತ ಗದ್ಯಭಾಗ ಕಡಿಮೆಯೇ. ಸರಳವಾದ ತೇಜಸ್ವಿಯಾದ ಗದ್ಯವನ್ನು ಬರೆಯುವುದು ಸುಲಭವೆಂದಲ್ಲ. ಆದರೆ ಅಂದಿನ ಅಭಿರುಚಿ ಮತ್ತು ಕವಿತೆಯ ಒರೆಗಲ್ಲು, ಪದ್ಯಕಾವ್ಯ, ಶ್ಲೋಕ ಕಂದ, ವೃತ್ತಗಳ, ಕಡೆಗಿತ್ತು. ಛಂದೋಬದ್ಧವಾದ ಕವಿತೆಯನ್ನು ಬರೆದವರೆಲ್ಲ ಉತ್ತಮವಾದ ಜೀವಕಳೆಗೊಂಡ ಶಕ್ತಿಯುತವಾದ ಗದ್ಯವನ್ನು ಬರೆಯಬಲ್ಲವರಾಗಿದ್ದರೆಂದು ಹೇಳುವುದು ಕಷ್ಟ. ಸಂಸ್ಕೃತ ಸಾಹಿತ್ಯದಲ್ಲಿಯೂ ಉತ್ತಮವಾದ ಗದ್ಯಶೈಲಿಗೆ ಪುರಸ್ಕಾರವಿತ್ತು. ಕಾಳಿದಾಸನೇ ಮೊದಲಾದ ವರಕವಿಗಳ ಅಮರಕೃತಿಗಳಿಗೆ ವ್ಯಾಖ್ಯಾನ ಬರೆದಿರುವ ಮಲ್ಲಿನಾಥ ಸೂರಿಯ ಗದ್ಯಶೈಲಿ, ಉತ್ತಮವಾದ ಗದ್ಯದಿಂದ ಏನನ್ನು ಸಾಧಿಸಬಹುದೆಂಬುದಕ್ಕೆ ಉಜ್ವಲ ಉದಾಹರಣೆ. ಬಾಣನ ಕಾದಂಬರಿ ಗದ್ಯಕಾವ್ಯವಾದರೂ ಅದು ಛಂದೋಬದ್ಧವಾದ ಕವಿತೆಯಲ್ಲವೆಂಬ ಕಾರಣದಿಂದ ಪಂಡಿತರೂ ಕವಿಗಳೂ ಅದನ್ನು ಕಡೆಗಣಿಸಲಿಲ್ಲ. ಬರಬರುತ್ತ, ಉತ್ಕೃಷ್ಟವಾದ ಗದ್ಯ, ಸಾಹಿತ್ಯದ ಮುಖ್ಯ ಅಂಗವೆಂಬುದನ್ನು ಸಂಸ್ಕೃತಜ್ಞರೆಲ್ಲರೂ ಒಪ್ಪಿದರು. ಸಂಸ್ಕೃತ ಭಾಷೆಯ ವಾದಸರಣಿಯಲ್ಲಿ, ವ್ಯಾಖ್ಯಾನ ಭಾಷ್ಯಗಳಲ್ಲಿ, ತರ್ಕವ್ಯಾಕರಣಗಳಲ್ಲಿ, ವೇದಾಂತ ಮೀಮಾಂಸೆಗಳಲ್ಲಿ, ಸಂಸ್ಕೃತ ಸಾಹಿತಿಗಳು ಸಂಸ್ಕೃತ ಗದ್ಯಶೈಲಿಯಲ್ಲಿ ನಾದಿ, ಪ್ರತಿಯೊಂದು ಮಾತಿಗೂ ಪ್ರತ್ಯೇಕವಾದ ಪೃಥಕ್ಕಾದ ಅರ್ಥವನ್ನಿಟ್ಟು. ಸಂಸ್ಕೃತ ಗದ್ಯವನ್ನು ಸರ್ವಾಂಗ ಸುಂದರವಾಗಿ ಚೈತನ್ಯಯುಕ್ತವಾಗಿ ಮಾಡಿದರು. ಪತಂಜಲಿಯ ಭಾಷ್ಯದ ಗದ್ಯಶೈಲಿಯಂತಹ ಶೈಲಿ, ಈವರೆಗೆ ಹುಟ್ಟಲೇ ಇಲ್ಲವೆಂದು ಸಂಸ್ಕೃತಜ್ಞರು ಹೇಳುತ್ತಾರೆ. ಸ್ಫೂರ್ತಿದಾಯಕವಾದ ಗದ್ಯವನ್ನು ಬರೆಯದವನು ಕವಿಯೇ ಅಲ್ಲ ಎಂದೂ ಒಂದು ಭಾವನೆ ರಸಿಕರಲ್ಲಿ

ಮೂಡಿತು ‘ ಗದ್ಯಂ ಕವೀನಾಂ ನಿಕಷಂ ವದಂತಿ ’ ಎಂಬ ವಾಕ್ಯ ಪ್ರಚಾರಕ್ಕೆ ಬಂತು.

ಪದ್ಯಂ ಯದ್ಯಪಿ ವಿದ್ಯತೇ ಬಹುಸತಾಂ ಹೃದ್ಯಂ ವಿಗದ್ಯಂನತೇ
ಸ್ಗದ್ಯಂಚ ಪ್ರತಿಪದ್ಯತೇ ನವಿಜಹತ್ಪದ್ಯಂ ಬುಧಾಸ್ವಾದ್ಯತಾಂ
ಆಥಶ್ತೇಹಿ ತಯೋಃ ಪ್ರಯೋಗ ಉಭಯೋ ರಾಮೋದ ಭೂಮೋದಯಃ
ಸಂಗಃ ಕಸ್ಯಹಿ ನಸ್ವದೇತ ಮನಸೇ ಮಾದ್ವೀಕ ಮೃದ್ವೀಕಯೋಃ

(ಪದ್ಯ ಕಾವ್ಯಗಳು ಲೋಕದಲ್ಲಿ ಬೇಕಾದಂತೆ ಇವೆ. ಆದರೆ ಗದ್ಯವಿಲ್ಲದ ಪದ್ಯ ರಸಿಕರಿಗೆ ರುಚಿಸುವುದಿಲ್ಲ. ಪದ್ಯವಿಲ್ಲದ ಗದ್ಯವನ್ನು ಜಾಣರು ಒಪ್ಪುವುದಿಲ್ಲ. ಗದ್ಯಪದ್ಯಗಳೆರಡರ ಮಿಶ್ರಣ ಹಿತಕರವಾಗಿರುತ್ತದೆ. ಜೇನುತುಪ್ಪ ಮತ್ತು ದ್ರಾಕ್ಷಾರಸ ಇವೆರಡರ ಯೋಗ ಯಾರಿಗೆ ತಾನೇ ಸವಿಯಾಗುವುದಿಲ್ಲ!)

ಕನ್ನಡ ಕಾವ್ಯಗಳಲ್ಲಿ, ಗದ್ಯದ ಪ್ರಾದುರ್ಭಾವ ಯಾವಾಗ ಉಂಟಾಯಿತೆಂಬುದನ್ನು ಸ್ಪಷ್ಟವಾಗಿ ಹೇಳುವುದು ಕಷ್ಟ. ಕವಿರಾಜಮಾರ್ಗದಲ್ಲಿ (ಒಂಭತ್ತನೆ ಶತಮಾನದ ಮಧ್ಯ)

ಮಿಗೆ ಕನ್ನಡ ಕಬ್ಬಂಗಳೊ
ಳಗಣಿತ ಗುಣ ಗದ್ಯಪದ್ಯ ಸಂಮಿಶ್ರತಮಂ.
ನಿಗದಿಸುವರ್ ಗದ್ಯ ಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ೧–೨೭

(ಅಂದರೆ ಕನ್ನಡದಲ್ಲಿ ಕವಿರಾಜಮಾರ್ಗಕ್ಕಿಂತ ಹಿಂದೆ ಗದ್ಯ ಪದ್ಯ ಮಿಶ್ರವಾದ ‘ ಗದ್ಯಕತೆ ’ ಇತ್ತು) ಎಂದು ಹೇಳಿದೆ. ಈ ಗದ್ಯಕತೆ ಬರಿಯ ಚಂಪೂ ಕಾವ್ಯ ಮಾತ್ರವಾಗಿದ್ದಿರಲಾರದು. ಚಂಪೂಕಾವ್ಯಗಳಲ್ಲಿರುವುದಕ್ಕಿಂತ ‘ ಗದ್ಯಕತೆ ’ ಯಲ್ಲಿ ಗದ್ಯದ ಪ್ರಾಬಲ್ಯ ಪ್ರಾಶಸ್ತ್ಯ ಹೆಚ್ಚಾಗಿದ್ದಿರಬೇಕು. ಕವಿರಾಜಮಾರ್ಗಕ್ಕಿಂತ ಮುಂಚೆ,

ವಿಮಳೋದಯ ನಾಗಾರ್ಜುನ
ಸಮೇತ ಜಯಬಂಧುದುರ್ವಿನೀತಾದಿಗಳೀ
ಕ್ರಮದೊಳ್ ನೆಗಳ್ಚಿ ಗದ್ಯಾ
ಶ್ರಮಪದ ಗುರುತಾಪ್ರತೀತಿಯಂ ಕೈಕೊಂಡರ್ ೧–೨೯

ವಿಮಳೋದಯ ನಾಗಾರ್ಜುನ ಜಯಬಂಧು ದುರ್ವಿನೀತಾದಿಗಳು ಗದ್ಯಕಾವ್ಯಗಳನ್ನು ರಚಿಸಿದ್ದರೆಂಬುವಕ್ಕೆ ಕವಿರಾಜಮಾರ್ಗದಲ್ಲಿ ಉಲ್ಲೇಖವಿದೆ. ಈ ಗದ್ಯ ಪ್ರಕಾರವು ಕವಿರಾಜಮಾರ್ಗ ಕಾಲಕ್ಕೆ ಸುಮಾರು ಇನ್ನೂರು ವರುಷಗಳ ಹಿಂದಲಿಂದಲೂ ಇದ್ದಿರಬೇಕೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಆದರೂ ಆ ಗದ್ಯ ಗ್ರಂಥಗಳಲ್ಲಿ ಒಂದಾದರೂ ನಮಗೆ ಇನ್ನೂ ದೊರೆತಿಲ್ಲ.

೨

ಕನ್ನಡದಲ್ಲಿ ಪೂರ್ಣವಾಗಿ ಗದ್ಯ ಶೈಲಿಯಲ್ಲಿ ರಚಿತವಾಗಿರುವ ಗ್ರಂಥ ಈಗ ನಮಗೆ ದೊರಕಿರುವುದು ವಡ್ಡಾರಾಧನೆ. ಇದು ಜೈನ ಧಾರ್ಮಿಕ ಕತೆಗಳ ಸಂಗ್ರಹ. ಇದು ಸ್ವಲ್ಪ ಹೆಚ್ಚು ಕಡಿಮೆ ಪಂಪನ ಕಾಲಕ್ಕೆ ಸೇರಿದುದು. ಈ ಗ್ರಂಥಕ್ಕೆ, ಇದು ಕನ್ನಡದಲ್ಲಿ ಮೊದಲನೆಯ ಗದ್ಯ ಗ್ರಂಥವೆಂಬ ಕಾರಣದಿಂದಲೂ, ಇದರ ಶೈಲಿಯ ಕಾರಣದಿಂದಲೂ, ತುಂಬ ಪ್ರಾಮುಖ್ಯತೆ ಇದೆ. ಧಾರ್ಮಿಕ ಗ್ರಂಥವಾದುದರಿಂದ ಪ್ರಯತ್ನಪೂರ್ವಕವಾಗಿ ಕವಿ, ಇದರಲ್ಲಿ, ಹತ್ತನೆಯ ಶತಮಾನದ ಹಿಂದಲ ಹಳಗನ್ನಡವನ್ನು ಉಪಯೋಗಿಸಿದ್ದಾನೆ. 'ಈ ಪೇಳ್ದ ಪತ್ತೊಂಬತ್ತು ಕತೆಗಳು ಶಿವಕೋಟ್ಯಾಚಾರ್ಯರ ಪೇಳ್ದ ವೊಡ್ಡಾರಾಧನೆಯ ಕವಚವು, ಮಂಗಳ ಮಹಾಶ್ರೀ.' ವಡ್ಡಾರಾಧನೆ ಯತಿ ಧರ್ಮವನ್ನು ಬೋಧಿಸುವ ಗ್ರಂಥ. ಇದು ಭಗವತೀ ಆರಾಧನೆಯ ಗಾಥೆಗಳ ವಿವರಣೆಯಾದರೂ ಕಥಾ ನಿರೂಪಣೆ ಸ್ವಾರಸ್ಯವಾಗಿದೆ. ಕಥೆಗಳೆಲ್ಲ, ಸಾಂಪ್ರದಾಯಿಕ ಧಾರ್ಮಿಕ ನೀತಿ ವೈರಾಗ್ಯ ಬೋಧಕಗಳಾಗಿ ಅಲ್ಲಲ್ಲಿ ಪುನರುಕ್ತಿ ಹೆಚ್ಚಾಗಿದ್ದರೂ, ಶೈಲಿಯಲ್ಲಿರುವ ಒಂದು ಸಹಜ ಓಘದಿಂದ, ಸ್ವಾರಸ್ಯವಾದ ಭಾಗಗಳನ್ನು ಮತ್ತೆ ಮತ್ತೆ ಓದೋಣವೆನ್ನಿಸುತ್ತದೆ. ಇದರ ಶೈಲಿಯಲ್ಲಿ ಅನವಶ್ಯಕವಾದ ಸಂಸ್ಕೃತ ಆಡಂಬರ ಅಷ್ಟಾಗಿ ಇಲ್ಲ. ಕನ್ನಡ ಸಂಸ್ಕೃತಗಳ ಸಮಬೆರಕೆ ಇದರಲ್ಲಿ ತೋರಿ, ಭಾಷೆ ಸಜೀವವಾಗಿದೆ. ಧಾರ್ಮಿಕ ಕತೆಯನ್ನು ಆಕರ್ಷಣೀಯವಾಗಿ ಮಾಡುವುದು ಸುಲಭವಲ್ಲ. ಅದು ನೀರಸವಾಗುವ ಸಂಭವವೇ ಹೆಚ್ಚು. ಆದರೆ ಶಿವಕೋಟಿಯ ಗದ್ಯ ಶೈಲಿಯಿಂದ, ವಡ್ಡಾರಾಧನೆ, ರಸಿಕರನ್ನು ಆಕರ್ಷಿಸುತ್ತದೆ. 'ಅಹೋ ಸುರಲೋಕ ಮೆಂಬಮೃತ ಸಮುದ್ರದ ನೀರೆಲ್ಲಮಂ ಕುಡಿದು, ತಣಿಯದನೀ ಮನುಷ್ಯ ಭವದ ಸುಖಮೆಂಬ ಪುಲ್ಲನಿ

ಯೊಳ್ ಸಿಲ್ಕಿ, ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಳ್ಚಿದೆಂ, ನಿಸ್ಸಾರಮಪ್ಪಭೋಗದೊಳ್ ಸಿಲ್ಕಿ ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬರಿದೆ ಕಳಿದೆಂ' ಶಿವಕೋಟಿಯ ಮುಖ್ಯ ಗುಣ, ಕನ್ನಡಮಾತಿಗೆ ಅವನು ಕೊಟ್ಟ ಪ್ರಾಧಾನ್ಯತೆ. 'ಕಿರಿಯಾತಂ ವಾಯುಭೂತಿ ಸೂರ್ಯಮಿತ್ರಂಗೆಯ್ದುದೆಲ್ಲಮುಪಕಾರಮೊಂದು ಬಗೆದು, ಎಂತಪ್ಪೊಡಂ ಎಮ್ಮಮಾವಂ ಬೈಕಂದಿರಿದು ತಂದ ಕೂಳ್ಗೆನೆರೆಮೆಣ್ಣೆಯನಕ್ಕೆ ಉಪ್ಪನಕ್ಕೆ ಕಳಿಯನಕ್ಕೆ ಎಂತಪ್ಪೊಡಂ ಇಕ್ಕಿಯುಂ ಎರೆಯಿಸಿಯುಂ ಮಱಿಯಂ ಕೆರೆಗೆ ಪೋಗಿ ಮೀವಾಗಳ್ ತಲೆಯಂ ಪೂಸಲೆಣ್ಣೆಯಂ ಅಪ್ಪೊಡಂ ಎರೆಯಿಸಿಯರಿಯಂ ತಾಂ ದಿವ್ಯಮಪ್ಪ ಆಹಾರಂಗಳಂ ದಿವಸದಿವಸಕ್ಕಂ ಪಲಂಬರ್ ನೆಂಟರ್ಕಳುಂ ಆಳ್ಗಳುಂ ಬೆರಸು ಉಣ್ಬಂ ಪರ್ವದಿವಸದೊಳಪ್ಪೊಡಂ ಎಂದಾನುಮಿವರ್ಗೆ ಉಣಲಿಕ್ಕೆ ಎಂದು ಅರಿಯಂ ಪಂಚಮಹಾ ಪಾತಕ ನೆಮ್ಮನೇಳೆಂಟು ವರುಷಂ ಬರಂ ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಸಂ ಭಾವಿಸಿ ಪೊರಮಟ್ಟು ಪೋದನ್' ಇಲ್ಲಿ ಕಥನ ಕಲೆಯೂ ಗದ್ಯಶೈಲಿಯೂ ಸಿದ್ಧಿಯನ್ನು ಮುಟ್ಟಿವೆ.

ವಡ್ಡಾರಾಧನೆಯ ಕನ್ನಡ ಶೈಲಿ ಇಂದಿನವರೆಗೆ ನಡೆದು ಬಂದಿರುವ ಶೈಲಿ. ಹತ್ತು ಶತಮಾನಗಳ ಹಿಂದೆ ಬರೆದ ಆ ಗ್ರಂಥ, ಕನ್ನಡಮಾತಿನ ಭಾಗಗಳಲ್ಲಿ ಇಂದು ಬರೆದಂತೆ ತೋರುತ್ತಿದೆ. 'ನಮ್ಮ ಮಗಳಿಗೆ ನಿಮ್ಮ ವ್ರತಗಳನ್ನು ಏಕೆ ಕೊಟ್ಟಿರಿ' ಎಂದು ಬ್ರಾಹ್ಮಣ ಕೇಳಲು, ಅವನು 'ನಮ್ಮ ಮಗಳಿಗೆ ನಮ್ಮ ವ್ರತಗಳನ್ನು ನಾವು ಕೊಟ್ಟರೆ ನಿಮಗೆ ಬೇನೆ ಮಾಡಿತೇ' ಎಂದನಂತೆ! ವಿದ್ಯುತ್ ಚೋರನ ಕಥೆಯಲ್ಲಿ ಚೋರನು ಯಮದಂಡನಿಗೆ 'ಹಿಂದೆ ಪೂಣ್ದ ಪ್ರತಿಜ್ಞೆಗಳನ್ನು ನೆನೆವೆಯೋ ನೆನೆಯೆಯೋ' ಎನ್ನಲು ಅವನು 'ದೇವ ಒಳ್ಳಿತ್ತಾಗಿ ನೆನೆದೆಂ' ಎನ್ನುವನು. ಅವನು ಮತ್ತೆ 'ಮತ್ತೀಗಳ್ ನೀನೇನ್ ಸತ್ತೆಯೋ ಸಾಯೆಯೋ ಮತ್ತೇನೊ' ಎನ್ನಲು ಅವನು 'ದೇವಾ, ನೀಗೆಲ್ದೆಯಾಂ ಸೋಲ್ತೆನುಂ ಸತ್ತೆನುಂ' ಎಂದನು. ಇಂದಿಗೂ ಪ್ರಯೋಗದಲ್ಲುಳಿದುಕೊಂಡಿರುವ ಕನ್ನಡ ಶೈಲಿ ವಡ್ಡಾರಾಧನೆಯದು.

ಹೀಗೆ ನಮಗೆ ದೊರಕಿರುವ ಕನ್ನಡದ ಮೊಧಲನೆಯ ಗದ್ಯ ಕೃತಿ, ಮಹಾಕಾವ್ಯವಲ್ಲದಿದ್ದರೂ ಅಚ್ಚ ಕನ್ನಡ ಕೃತಿ. ಕನ್ನಡದ ಜೀವಾಳವನ್ನು ಅರಿತು.

ಕನ್ನಡವನ್ನು ಸಂಸ್ಕೃತದ ಅಡಿಯಾಳುಮಾಡದೆ, ತನ್ನ ಕಾಲಿನ ಮೇಲೆ ತಾನು ನಿಲ್ಲುವಂತೆ ಮಾಡಿದ ಕೃತಿ ವಡ್ಡಾರಾಧನೆ. ಕನ್ನಡ ಗದ್ಯ ರಚನೆಯಲ್ಲಿ ಇದು ಧೀರವಾದ ಸ್ಪಷ್ಟವಾದ ಹೆಜ್ಜೆ.

೩

ವಡ್ಡಾರಾಧನೆಯನ್ನು ಬಿಟ್ಟರೆ ನಮಗೆ ಮುಂದೆ ಕನ್ನಡ ಗದ್ಯ ಸಿಕ್ಕುವುದು ಚಂಪೂಕಾವ್ಯಗಳಲ್ಲಿ. ಇಲ್ಲಿಯೂ ಕವಿಕುಲ ಲಲಾಮ ಪಂಪನೇ ಎತ್ತಿದ ಕೈ. ಪಂಪನಲ್ಲಿ ಕನ್ನಡ ಸಂಸ್ಕೃತಗಳ ಸುಖವಾದ ಸಮಬೆರಕೆ ಇದೆ. ಅವನ ಉಜ್ವಲ ಪಾಂಡಿತ್ಯ, ದಿವ್ಯದೃಷ್ಟಿ, ಧರ್ಮವನ್ನೂ ಕಾವ್ಯಧರ್ಮವನ್ನೂ ಒಂದುಗೂಡಿಸಿರುವ ಉದಾತ್ತತೆ, ಲೌಕಿಕ ಮತ್ತು ಜಿನಾಗಮಗಳನ್ನು ಒಂದೊಂದು ಕಾವ್ಯದಲ್ಲಿ ಬೆಳಗಿರುವ ಇಹಪರ ದೃಷ್ಟಿ ಸಮನ್ವಯ, ಇವುಗಳು ರಸಿಕರನ್ನು ತಲೆದೂಗಿಸಿದಂತೆ, ಅವನ ಗದ್ಯದ ಮಿಂಚು ಸಹ ರಸಿಕರನ್ನು ಮೆಚ್ಚಿಸಿತು. ಮುಂದಲ ಚಂಪೂ ಕವಿಗಳೆಲ್ಲ ಪಂಪನ ಗದ್ಯಶೈಲಿಯನ್ನೇ ಅನುಕರಿಸತೊಡಗಿದರು. ಪದ್ಯಗಳಲ್ಲಿ ಯಾವ ಮೇಲ್ಮೆಯನ್ನು ಪಂಪ ಮುಟ್ಟಿದನೋ ಗದ್ಯ ಶೈಲಿಯಲ್ಲಿಯೂ ಅದೇ ಮೇಲ್ಮೆಯನ್ನು ಮುಟ್ಟಿದನು. 'ಅಂತು ಧರ್ಮಪುತ್ರನಬ್ಜಜಪುತ್ರನಂ ಮುಂದಿಟ್ಟೊಡಗೊಂಡು ಬಂದು ಮಣಿಕನಕ ರಚನೆ ವಿಚಿತ್ರವೇತ್ರಾಸನದೊಳಿರಿಸಿ ಮಹಾರ್ಘ್ಯಗುಣಮಣಿ ವಿಭೂಷಣಂಗೆ ಕನಕ ಪಾತ್ರದೊಳರ್ಘ್ಯಮೆತ್ತಿ ಕನಕ ಕಳಶ ಸಂಭೃತ ಶುಚಿ ಜಲಗಳಿಂದಮಾ ಮುನೀಶ್ವರನ ಪಾದಪದ್ಮಮಂ ಕರ್ಚಿ ತತ್ಪಾದ ಪವಿತ್ರೋದಕಗಳಿಂ ಮಹಾಋಷಿಯ ತಳಿದ ಕನಕಕಮಂಡಲುವಿನ ತೀರ್ಥೋದಕಗಳಿಂದಯ್ವರುಂ ಪವಿತ್ರೀಕೃತ ಮಸ್ತಕರಾಗಿರ್ದು ಯುಧಿಷ್ಠಿರಂ ನಾರದ ಮಹಾ ಮುನಿಯ ಮೊಗಮಂ ನೋಡಿ' (ಪಂಪ ಭಾರತ ೬-೧೧ ನೇ ಪದ್ಯದ ನಂತರದ ಗದ್ಯ)

'ಎಂದು ಗಜರಿ ಗರ್ಜಿಸುವುದು ಮುಮುಳರುಮೀ ಬೇಳ್ವೆಯ ಮಾತಂ ತೆಮಳೆ ನುಡಿದೊಡೆಮ್ಮ ಗಂಡವಾತುಮುಳುಂಬಂ ಭೃತಮುಕ್ಕುಮೆಂದು ಮೆಯ್ಮೆಯ್ಗೆ ಬೆಸಸೆಂಬುದುಂ ರಾಜಸೂಯಮುಂ ಬೇಳ್ದಲ್ಲದಿರಿಪ್ಪೊಡೆ ಗಂಗಾ ನದಿಯ ಬಡಗಣ ತಡಿಯು ಮಗಮಗಿಸುವ ವಾರಣಾಸಿ ಪುರಮನಾಳ್ವ ಬೃಹದ್ಬಳಂ ಪುತ್ರೋತ್ಪತ್ತಿ ನಿಮಿತ್ತಮಪ್ಪೊಂದು ದಿವ್ಯ ಪಿಂಡಮುಂ ತನ್ನಿರ್ವರರಸಿ

ಯರ್ಗೆ ಪಚ್ಚುಕೊಟ್ಟೊಡೆ ಪುಟ್ಟಿದೆರಡು ಪೋಳುಪುಸೀಪೆವುವೆಂದು ಬಿಸುಡೆ ಜರೆಯೆಂಬ ರಕ್ಕಸಿ ಕಂಡು ತಿನ್ನಲೆಂದೆರಡು ಪೋಳುನುನೊಂದು ಕೆಯ್ಯೊಳ್ ಪಿಡಿದೊಡೊಂದರೊಳ್ ಸಂದಿಸಿ ಮಾನಸರೂಪುಗೊಂಡೊಡೆ ಚೋದ್ಯಂ ಬಟ್ಟು ಜರಾಸಂಧನೆಂದು ಪೆಸರಿಟ್ಟು ಬೃಹದ್ರಳಂಗೆ ಕೊಟ್ಟೊಡೆ ಜರಾಸಂಧನುಂ ಸಾಲ್ವಲನುಮೆಂಬ ದೈತ್ಯನುಮೊಂದಾಗಿ ಮುವ್ವತ್ತೆರಡಕ್ಷೋಹಿಣೀ ಬಲಂ ಬೆರಸು ಮಧುರಾಪುರಕ್ಕೆವಂದೆನ್ನಂ ಮುತ್ತಿಕೊಂಡೊಡುಪಾಯ ಬಲದೊಳೆ ಸಾಲ್ವನಂ ಕೊಂದು ಜರಾಸಂಧಂಗಳ್ಕಿ ಮಧುರಾಪುರಮಂ ಬಿಸುಟ್ಟು ಪೋಗಿ ದ್ವಾರಾವತಿಯಂ ಸಮುದ್ರಮೆ ಸೀಗಾರ್ದಿಗೆಯಾಗಿ ಮಾಡಿದೆನಿನ್ನುಂ ಯಾದವರ ಸೆರೆಗಳೆಲ್ಲಾ ತನ್ನಲ್ಲಿರ್ದರಾತನುಂ ಭೀಮನ ಕೈಯೊಳಲ್ಲದೆ ಸಾಯನೆಂಬುದಾದೇಶಮುದರಿನೆಮ್ಮಿಚ್ಚೆಯುಂ ಸಮಸ್ತ ಬಲಂ ಬೆರಸು ಭೀಮಾರ್ಜುನರಂ ಪೇಳ್ವೆದೆಂದು ಧರ್ಮಪುತ್ರನನೊಡಂಬಡಿಸಿ ನುಡಿದು ಮಧುರಾಪುರಮನೆಯ್ದಿ ಬೃಹದ್ರಳ ತನೂಜನಲ್ಲಿಗೆ ಧರ್ಮಯುದ್ಧಮುಂ ಬೇಡಿಯಟ್ಟಿದೊಡೆ' (ಪಂ. ಭಾರತ ೭ನೇ ಆಶ್ವಾಸ)

'ಅಂತು ಧುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರ ಮೆಲ್ಲಂ ಬಂದುದು ಪಾಂಚಾಳ ರಾಜತನೂಜೆಯೊರ್ವಳ್ ಬಂದಳಿಲ್ಲಾಕೆಯಂತನ್ನಿಮೆಂದು ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನರಿದು ಮೇಗಿಲ್ಲದ ಗೊಡ್ಡಾಟವಾಡಲ್ ಒಗೆದು ಕರ್ಣನ ಲೆಂಕಂ ಪ್ರಾತಿಕಾಮಿಯೆಂಬನುಮಂ ತನ್ನ ತಮ್ಮ ದುಶ್ಯಾಶನನುಮಂ ಪೇಳ್ದೊಡವಂದಿರಾಗಳೆ ಬೀಡಿಂಗೆ ವರಿದು ರಜಸ್ವಲೆಯಾಗಿರ್ದೆಂ ಮುಟ್ಟಲಾಗದೆನೆಯುಂ ಪೊತ್ತಂಬದಿಂದೊಳಗಂ ಪೊಕ್ಕು ಪಾಂಚಾಳಿಯುಂ ಕಣ್ಗಿಡೆ ಜಡಿದು ಮುಡಿಯುಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾ ಮಧ್ಯಕ್ಕೆ ತಂದು' (ಪಂ. ಭಾರತ ೭ನೇ ಆಶ್ವಾಸ ೪ನೆಯ ಕಂದದ ನಂತರದ ಗದ್ಯ)

ಪಂಪನ ಗದ್ಯಶೈಲಿಯೂ ಜೇನುಕೊಡವೆ. ಅದೊಂದು ಮಿಂಚಿನ ಗೊಂಚಲು. ಒಂದೇ ವಾಕ್ಯದಲ್ಲಿ ಒಂದು ಆಶ್ವಾಸದ ಅಭಿಪ್ರಾಯಗಳನ್ನೆಲ್ಲ ಹೊಳೆಸುತ್ತಾನೆ. ಗದ್ಯದಲ್ಲಾಗಲೀ ಪದ್ಯದಲ್ಲಾಗಲೀ ಪಂಪನ ಸಮಾನರು ಹುಟ್ಟಲಿಲ್ಲ.

ಪಂಪನ ನಂತರ ನಮಗೆ ಸಿಕ್ಕುವ ಪೂರ್ಣವಾದ ಗ್ರಂಥ ಚಾವುಂಡರಾಯ ಪುರಾಣ. ಚಾವುಂಡರಾಯ ಪುರಾಣದ ಕಥಾವಸ್ತು, ಆದಿಪುರಾಣದ ಮೊದಲ ನೆಯ ಭಾಗವೇ. ಚಾವುಂಡರಾಯ ಪುರಾಣದ ಶೈಲಿಯಲ್ಲಿ ಕಾವ್ಯಭಾಗ ಹೆಚ್ಚಾಗಿಲ್ಲ. ಇದು ಕಾವ್ಯಗದ್ಯ ಮತ್ತು ಶಾಸ್ತ್ರಗದ್ಯಗಳ ಒಂದು ಮಿಲನ. ಇದರ ಮುಖ್ಯ ಸ್ವಾರಸ್ಯ ಇದರಲ್ಲಿ ಅನೇಕ, ಬಳಕೆಯ ಮಾತಿನ ಕನ್ನಡ ಪದಗಳು ಸೇರಿರುವುದೇ ಆಗಿದೆ. ಚಾವುಂಡರಾಯನನ್ನು, ಕನ್ನಡ ಗದ್ಯಶೈಲಿಯಲ್ಲಿ ದೇಸಿಯ ಬಳಕೆಯನ್ನು ಪ್ರಚಾರಕ್ಕೆ ತಂದ ಗದ್ಯಕಾರನೆನ್ನಬಹುದು.

ಚಂಪೂ ಕಾವ್ಯದಲ್ಲಿ ಗದ್ಯವನ್ನು ಪ್ರಭಾವಯುತವಾಗಿ ಬಳಸಿದವರಲ್ಲಿ, ನಾಗವರ್ಮನೂ ಒಬ್ಬ. ನಾಗವರ್ಮನ ಕಾದಂಬರಿಯ ಗದ್ಯಶೈಲಿಯಲ್ಲಿ ಅಲ್ಲಲ್ಲಿ ನಾವೀನ್ಯತೆ ಇದೆ. ಕನ್ನಡದಲ್ಲಿ ಪಂಚತಂತ್ರವನ್ನು ರಚಿಸಿದ ದುರ್ಗಸಿಂಹನ ಗದ್ಯ. ಚಂಪೂ ಗದ್ಯದಿಂದ ಭಿನ್ನವಾಗಿದೆ. ಪಶುಪಕ್ಷಿ ಸಂಬಂಧವಾದ ಸಾಂಕೇತಿಕ ಕಥೆಗಳನ್ನು ಕುರಿತು ಹೇಳಿರುವುದರಿಂದ ಈ ಗದ್ಯ, ಪ್ರೌಢ ಚಂಪುವಿನ ಹೊರೆಯನ್ನು ಕಳೆದುಕೊಂಡು ಹಗುರವಾಗಿದೆ.

ಜನಸಾಮಾನ್ಯರಿಗೆ ತಿಳಿಯುವ ಗದ್ಯವನ್ನು, ಚಂಪೂಗ್ರಂಥದಲ್ಲಿ ಬಳಕೆಗೆ ತಂದವನು ನಯಸೇನ. ಜನಸಾಮಾನ್ಯದಲ್ಲಿ ಮತತತ್ವಗಳನ್ನು ಬಳಕೆಗೆ ತರಲು ಈತನಿಗೆ ಸುಲಭವಾದ ಭಾಷೆ ಬೇಕಾಗಿದ್ದಿತು. ಕನ್ನಡ ಸಂಸ್ಕೃತದ ಅಸಹ್ಯ ಸಂಮಿಳನವನ್ನು ನಯಸೇನ ಒಪ್ಪಲಿಲ್ಲ.

> ಪೊಸ ಕನ್ನಡದಿಂ ವ್ಯಾವ
> ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮುಂ ಚಿಂ
> ತಿಸಿ ಕೂಡಲಾರದಕ್ಕಟ
> ಮಿಸುಕದ ಸಕ್ಕದಮನಿಕ್ಕುವವನುಂಕವಿಯೇ? ಧರ್ಮಾಮೃತ ೧-೪೧

ಸುದ್ದ ಕನ್ನಡದೊಳ್ ಸಕ್ಕದವ ತಂದಿಕ್ಕುವುದೇ ಎಂದು ಹೊರಟವನು ಈತ. ಈತನ ಗದ್ಯದ ಮುಖ್ಯಲಕ್ಷಣ, ಈತನ ಅಚ್ಚಕನ್ನಡ ಸಾದೃಶ್ಯಗಳು, ಪುಂಖಾನು ಪುಂಖವಾಗಿ ಬರುವ ಹೋಲಿಕೆಗಳು. 'ಕೆರೆಯನೊಡೆದು ತೊರೆಯ ತೀವುವ, ಮನೆಯನಳಿದು ಬೇಲಿಯನಿಕ್ಕುವ, ಹಾಸನಳಿದು ಕಂಥೆಯಂ ಪೊಲಿಸುವ, ತುಪ್ಪವನೊಕ್ಕು ಸಗಣಮಂ ಕೊಳ್ವ, ಕಸ್ತೂರಿಯಂ ಬಿಸುಟು ಕೆಸರಂ ಕೊಳ್ವ,

ಬಂಢಾರಮನೀಡಾಡಿ ಕಾಚಂ ಸಂವರಿಸುವ, ಬಟ್ಟೆಯುಂ ಬಟ್ಟು ಕಾಡಂಪುಗುವ ಕೆಯ್ಯಂ ಬಿಟ್ಟು ಪುಲ್ಲಂ ಕೊಳ್ವ, ಪೊನ್ನಂ ಬಿಟ್ಟು ಮಸಿಯ ಕಟ್ಟುವೆಗ್ಗನಂ ಪೋಲ್' (ಧರ್ಮಾಮೃತ ೩–೨೧)

ಕೆಲವು ಕಡೆ ಈ ಉಕ್ತಿಗಳು ಸ್ವಲ್ಪಹೆಚ್ಚಾದರೂ ಅವುಗಳ ಸ್ವಾರಸ್ಯ ಕಡಿಮೆಯಾಗುವುದಿಲ್ಲ. ಈ ಮುಂದಲದು ಒಬ್ಬ ಸ್ತ್ರೀ ನರಕದ ಹಿಂಸೆಗಳನ್ನು ವರ್ಣಿಸುವ ಬಗೆ.

'ಬಾರಿಬಾರಿಗೆ ಗಾಣದೊಳಿಟ್ಟು ಪೀಳಿದುಂ, ನೋಡೆ ನೋಡೆ ಗಾಣದೊಳಿಕ್ಕಿ ತೆಗೆದುಂ, ಸಂದುಸಂದುಗಳೊಳ್ ಸೂಜಿಯುಂ ಪೆಟ್ಟಿಯುಂ, ಒಡಲೊಳುಳಿಗಳಂ ಸೇರಿಸಿಯುಂ, ಮೈಯ್ಯಂ ಕಿರಿಕಿರಿದಾಗಿ ಕತ್ತರಿಸಿ ಬಾಯೊಳುರುಕಿಯುಂ ಬಸಿರ ನಿಬ್ಬಗಿವಮಾಡಿ ಕುದಿದೆಣ್ಣೆಯುಂ ಪೊಯ್ದು, ಪುಣ್ಣೊಳು ಲೋಹರಸಮಂ ಪೊಯ್ದುಂ, ಕಣ್ಣೊಳ್ ಕೆಂಡಮನಿಟ್ಟು, ಮೂಗುಂ ಬಾಯುಂ ಉಸಿರ್ವಿಡದಂತೆ ಗೊಡದೆ ಪಿಡಿದುಂ ಪೆಸೊರ್ಣಂಗಳಿಂತಗಳ್ದಾರಿಸಿಯುಂ ಇಂತನೇಕವಿಧ ದಂಡನೆಗಳಿಂ ದಂಡಿಸಿಯುಂ ಸೈರಿಸಲಾರದೆ ಅರಿಸಿನದಂತೆ ಪಿಣಿವರ್, ಕಾರೆಯಂತೆ ಕೊರಲಂ ಪತ್ತಿ ಕೊಯ್ವರ್, ಗರಗಸದಂತೆ ಮೆಯ್ಯಂ ಕೊರೆವರ್, ಪಣಿಗೆಯಂತೆ ತಲೆಯ ಪತ್ತಿ ತೆಗೆವರ್, ಮೊಲೆಯಂತೆ ಎರ್ದೆಯಂ ಪತ್ತಿ ನೆತ್ತರಂ ಕುಡಿವರ್ ಉಗುರಂತೆ ಬೆರಲಂ ಪತ್ತಿ ಕೀಳ್ವರ್, ಸಿರಿಯಂತೆ ತೊಡೆಯಂ ಪತ್ತಿಯುಡಿವರ್ ಪೊರೆಯಂತೆ ಮೊಣಕಾಲಂ ಪತ್ತಿಮುರಿವರ್, ಸೀರೆಯಂತೆ ನಡುವಂ ಪತ್ತಿನೆಲಕ್ಕಿಕ್ಕುವರ್ ಬಾಸೆಯಂತೆ ಬಸುರಂ ಪತ್ತಿ ಕರುಳನುಗಿವರ್, ಕೂಸಿನಂತೆ ಮೊಲೆಯಂ ಪತ್ತಿತಿಂಬರ್, ತಿಲಕದಂತೆ ನೊಸಲಂ ಪತ್ತಿ ಕಡಿವರ್, ಓಲೆಯಂತೆ ಕಿವಿಯುಂ ಪತ್ತಿಸರಿವರ್, ಕೇಶದಂತೆ ಬೆನ್ನಂ ಪತ್ತಿ ಬಾರನುರ್ಚುವರ್, ಮಲ್ಲರಂತೆ ಬರಿಯುಂ ಪತ್ತಿ ಕಳಲಿಗಟ್ಟುವರ್ ಪೇನಂತೆ ತಲೆಯುಂ ಪತ್ತಿ ಪಲ್ಕಡಿವರ್ ತೋರಣದಂತೆ ತಳನುಂ ಪತ್ತಿ ಕತ್ತರಿಸುವರ್, ಕಂಕಣದಂತೆ ಮುಂಗೈಯುಂ ಪತ್ತಿ ಕೊರೆವರ್, ಕಾಡಿಗೆಯಂತೆ ಕಣ್ಣಂ ಪತ್ತಿ ಬೆರಲೊಳಿರಿವರ್, ಕಂಪಿನಂತೆ ಮೂಗಂ ಪತ್ತಿ ಕೊಯ್ವರ್, ತಂಬುಲದಂತೆ ಪಲ್ಲಂ ಪತ್ತಿ ಕಿವಿವರ್, ಸವಿಯಂತೆ ನಾಲಗೆಯುಂ ಪತ್ತಿ ಮೆಲ್ವರ್, ಕೆರ್ಪಿನಂತೆ ಕಾಲಂ ಪತ್ತಿ ಕಡಿವರ್, ಕುಪ್ಪಸದಂತೆ ಬೆನ್ನಂ ಪತ್ತಿ ಕೆತ್ತುವರ್, ಸಿಪ್ಪಿಗನಂತೆ ಪೊಲಿವರ್, ಕಮ್ಮಾರನಂತೆ ಕಾಸಿ ಬಡಿವರ್, ಮೇದನಂತೆ ಸೀಳ್ವರ್ ಬಡಗಿಯಂತೆ ಕೆತ್ತುವರ್, ಅಗಸನಂತೆ

ಬೇಸಿ ಪೊಯ್ವರ್, ಒಕ್ಕಲಿಗನಂತೆ ಮೆಟ್ಟಿ ಪರಗುವರ್, ಮಲ್ಲರಂತೆ ಪೋರುವರ್, ಲೇಖಕನಂತೆ ಕೇಸುವರ್, ಗಜಮಂಡಿಕ್ಕಿ ಮೆಟ್ಟುವರ್, ಪರ್ದಿನಂತೆ ಕೀಳ್ವರ್, ಕೇಳಿನಂತೆ ನೋಯಿಸುವರ್, ಸಿಡಿಲಂತೆ ಪೊಡೆವರ್' (ಧರ್ಮಾಮೃತ ೩-೭೩)

ನಯಸೇನನ ಗದ್ಯ, ಚಂಪೂ ಗದ್ಯದ ಕ್ಲಿಷ್ಟತೆಯನ್ನು ಕಳೆದುಕೊಂಡು ಉಲ್ಲಾಸವಾಯಿತು. ಜನಜೀವನದ ವ್ಯವಹಾರ ವಚನಗಳು ಅದರಲ್ಲಿ ಪ್ರವೇಶಿಸಿದವು. 'ನಾಣ್ನುಡಿ ದೇಸಿವೆತ್ತಪೊಸಮಾರ್ಗಂ.' ಮತ್ತೊಬ್ಬ ಪ್ರಸಿದ್ಧ ಗದ್ಯಕಾರ ಶೂದ್ರಕವೆಂಬ ಕಾವ್ಯವನ್ನು ಬರೆದಿರುವವನು. ಈ ಕಾವ್ಯ ನಮಗೆ ಸಿಕ್ಕಿಲ್ಲ. ಇದನ್ನು ಬರೆದವನು ಗುಣವರ್ಮನೆಂಬುವನೆಂದು ಪಂಡಿತರ ಊಹೆ. ಈತನ ಕಾವ್ಯದಿಂದ ಉದ್ಧೃತವಾದ ಭಾಗಗಳು ಕಾವ್ಯಸಾರದಲ್ಲಿವೆ.

ಬೆಳಗಪ್ಪ ಜಾವದಯ್ಕಿಲ್
ಕೊಳೆ ಶೀತಕ್ಕಾರಕಳ್ಕಿ ತೊಟ್ಟಿರ್ದಧರಾ
ತಳಮೆಂಬ ಪೆಣ್ಣ ಪೊಸಕಂ
ಚುಳಿಕೆಯ ಸೀಮುರ್ತ್ತಿನಂದಮಾದುವು ಪಸುಗರ್ (ಕಾವ್ಯಸಾರ ೬೯೪)

ಬೆಳಗಿನ ಜಾವದಲ್ಲಿ ಚಳಿಹತ್ತಲು ಶೀತವನ್ನು ತಡೆಯಲಾರದೆ ಭೂವನಿತೆ ತೊಟ್ಟ ಹೊಸ ಕುಪ್ಪುಸದ ಸೀಮ್ಮುತ್ತಿನಂತೆ ಇದ್ದವು ನೆಲದ ಮೇಲಿನ ಹಸಿಗಳು, ಮುಂತಾದ ಸೊಗಸಾದ ವರ್ಣನಾ ಭಾಗಗಳು ಇವನಲ್ಲಿ ದೊರಕುತ್ತವೆ. ಇವನ ಗದ್ಯಶೈಲಿ ತೇಜಸ್ವಿಯಾಗಿ ಓದುಗರನ್ನು ತನ್ನ ಓಜಸ್ಸಿಂದ ಆಕರ್ಷಿಸುತ್ತದೆ. 'ಸಂಗರಾಜನಂ ಸಿದ್ಧನುತಾ ಸಿದ್ಧಕ್ಷೇತ್ರಮಂ ಪುಗುತಂದನದೆಂತಪ್ಪುದೆಂದೊಡೆ—ಇಂದ್ರಜಾಲಿಗನಂತುರಿಯ ನುಗುಳ್ವುಳ್ಕುಗಳಿಂ, ವಾತಪೂರಣಗಳಿಂ ನೊಂದಂತೆ ದೆಸೆದೆಸೆಗೆ ಪೊಂಗುವ ಗೂಗೆಗಳಿಂ, ಬಿದೆಕಾರರ್ದಿಯಂತೆ ಬೇಯುತಿರ್ದ ಪೆಣಂಗಳಿಂ ಜಿಗುಳೆಯಂತೆ ನೆತ್ತರನೆ ಪೀರ್ವ ಡಾಕಿನಿಯರಿಂ, ಭೈರವನಂತೆ ಭಾಂಕಾರಂಗುಡುತಿರ್ಪ ಸಾಧಕರಿಂ, ಗೋದಾಮೆಯಂತೆ ಬಗೆದ ಬಣ್ಣಮಪ್ಪ ರಣಜೆಟ್ಟಿಗರಿಂ, ನಾರಾಯಣನಂತೆ ಬಲಿಯಂ ಬೇಡುವ ಬ್ರಹ್ಮರಾಕ್ಷಸರಿಂ ಬಲದೇವನಂತೆ ಪೆಣನಂ ಪೊತ್ತು ತೊಳಲ್ವ ಕ್ಷೇತ್ರಪಾಲರಿಂ, ಈಶ್ವರನಂತೆ ಪಾವಂ ತೊಟ್ಟಿರ್ದ ಬೇತಾಳರಿಂ, ಮೀನ್ಗಳಂತೆ ಗಾಳದೊಳ್ ತೊಡರ್ದಿರ್ದ ಪಾರದರಿಗರಿಂ, ಮಹಿಷಾಸುರನಂತೆ ಸೂಲದೊಳ್ ನೊಂದು ನರಳ್ವಕಳ್ಳರಿಂ,

ಬೊಂತಿಯಂತೆ ದಕ್ಕಿನೊಳಿರ್ದ ಪಂದಲೆಗಳಿಂ ಬಂದಿಕಾರನಂತೆ ತಿರಪುವಾಡುರ್ಪ ಪಿಡಿವ ಶಾಕಿನಿಯರಿಂ ಮೃಗಯಾಪತಿಯಂತೆ ಕೀಲಾಲಜಲದೊಳೋಲಾಡುವ ಲಲಾಮೆಯರಿಂ (?) ಸೋಂಬನಂ ಮೆಚ್ಚಿ ಬೇರೂರ್ಗೆ ಪೋದ ಸೂಳೆಯಂತು ಯ್ಯಲಾಡುವ ರಣದೇವತೆಯರಿಂದತಿ ಭಯಂಕರಾಕಾರಮಪ್ಪುದದರೊಳಗೆ (ಕಾವ್ಯಸಾರ ೫೨೯)

ಚಂಪೂ ಗದ್ಯಶೈಲಿಯಲ್ಲಿ ತಕ್ಕಮಟ್ಟಿನ ಗದ್ಯಸಿದ್ಧಿಯನ್ನು ಪಡೆದವನು ನಾಗಚಂದ್ರ. ಇವನ ಶೈಲಿಯಲ್ಲಿ ಬಣ್ಣವಿದೆ, ಯೌವನವಿದೆ. ಪ್ರೌಢವಾದ ಸರಣಿಯಿದೆ. ಮುಂದಲದು ರಾಮಚಂದ್ರಚರಿತ ಪುರಾಣದ ಒಂದುಗದ್ಯ; ಸೀತೆಯ ಅಲಂಕಾರ- ‘ಅಂತು ಬಂದು ಚೆಂಬೊನ್ನ ಕನ್ನಿಮಾಡದ ಮೊಗಸಾಲೆಯೊಳಿಕ್ಕಿದ ಮುತ್ತಿನ ಬಿತ್ತಿರಿಗೆಯೊಳ್ ಕುಳ್ಳಿರ್ದುದುಂ, ಮೇಳದಂಗನೆಯರ್ ಮಂಗಳಪಸದನಂಗೊಳಿಸಲವಸರಂ ಬಡೆದು ಚಿತ್ರಚೀನಾಂಬರಮಂ ನಿರಿವಿಡಿದುಡಿಸಿ ಕೆಂದಾವರೆಯ ನಿಳವಿಸಿಲೆಳಸುವಂದಮಾಗೆ ಲಾಕ್ಷಾರಸದಿನಡಿಯೂಡಿಯುಂ, ಚರಣನಖ ಚಂದ್ರಮಾಲೆಗೆ ನಕ್ಷತ್ರಮಾಲೆಯನೋಲಗಿಸುವಂತೆ ಮುಕ್ತಾಫಲನೂಪುರಮುಂ ತುಡಿಸಿಯುಂ, ಪುಳಿನವಲಯಮಂ ಪೊಂದಾವರೆಯ ಬಳ್ಳಿ ಬಳಸಿದಂತೆ ನಿತಂಬವಳಯದೊಳ್ ಮಣಿಮೇಖಲೆಯುಂ ತೊಡರ್ಚಿಯುಂ ಮದನಮದನದ ನೀರದನದೊಳ್ ಕೀರ್ತಿಮುಖಮಂ ಕೀಲಿಸುವಂತೆ ಶತಪತ್ರಭಂಗಮಂ ತುಂಗಸ್ತನಭಾಗದೊಳ್ ಸಂಗಳಿಸಿಯುಂ, ಪೀವರಪಯೋಧರ ಮಂಡಲಕ್ಕೆ ಪರಿವೇಷಮಂ ಪಡೆನಂತೆ ಪಂಚರತ್ನದ ಪಂಚಸರಮಂ ಕೊರಲೊಳಿಕ್ಕಿಯುಂ, ಬಾಹುಲತೆಯ ಬೀಳಲಂತೆ ರತ್ನಕಾಂತಿ ಕವಲ್ವರಿವಿನಮಂಗದಮಂ ನಳಿತೋಳ್ಗಳವಡಿಸಿಯುಂ, ಬಾಸಿಗಮಂ ಭೃಂಗಮಾಲೆ ಬಳಸುವಂತೆ ನಳಿತೋಳೊಳ್ ಪಚ್ಚೆಯ ಪಿಂಡುಗಂಕಣಮನೇರಿಸೆಯುಂ, ನನೆಗಣೆಗೆ ಗತಿಗೆಟ್ಟುವಂತಂಗುಳಿಯೊಳ್ ರತ್ನಮುದ್ರಿಕೆಯಂ ಮುದ್ರಿಸಿಯುಂ, ಸ್ಮರವಶೀಕರಣ ಯಂತ್ರಮಂ ಬರೆವಂತೆ ಕಪೋಲದೊಳ್ ಮಕರಿಕಾಪತ್ರಮಂ ಬರೆದುಂ, ಪೊಸಮಣಿಯ ಪೂಗಣೆಗೆ ಪೊಗರಂ ಪಡೆವಂತೆ ನಗೆಗಣ್ಗಳೊಳಂಜನ ಮನಸ್ಕೆಗೆಯ್ದುಂ ಕರ್ಣಾಂತ ವಿಶ್ರಾಂತ ವಿಲೋಚನದೊಳ್ ಪಡಿಯಿಟ್ಟುನೋಳ್ಪಂತೆ. ಕಿವಿಯೊಳವತಂಸೋತ್ಪಲಮಂ ತೊಡರ್ಚಿಯುಂ”

೪

ಇಲ್ಲಿಂದ ಮುಂದೆ ನಾವು ವಚನಕಾರರ ರಾಜ್ಯವನ್ನು ಪ್ರವೇಶಿಸುತ್ತೇವೆ. ಶಿವಶರಣರು ವಾದವಿವಾದಗಳಿಂದ ಸಾಮಾನ್ಯ ಜನತೆಯ ಮನಸ್ಸನ್ನು ತಿದ್ದಿ ಅವರ ಭಾಷೆಯಲ್ಲಿಯೇ ಅವರಿಗೆ ಬೋಧಿಸಿ ಮತಪ್ರಚಾರ ಮಾಡಬೇಕಾಗಿದ್ದುದರಿಂದ, ಆವರ ವಚನಗಳಲ್ಲಿ ತಿಳಿಗನ್ನಡಕ್ಕೆ ಪ್ರಾಶಸ್ತ್ಯ ಹೆಚ್ಚಾಯಿತು. ಸಾಧಕರ ಅನುಭಾವಿಗಳ, ಆಧ್ಯಾತ್ಮ ಸಾಧಕರ ಭಾವಗೀತೆಗಳೇ ಇವು. ಸ್ವಾಭಾವಿಕವಾಗಿ ಲಾಲಿತ್ಯಮಾರ್ದವವುಳ್ಳವಾಗಿ ಕೆಲವೆಡೆ ಭಕ್ತಿಯ ಅತಿರೇಕದಿಂದ ಸ್ವಲ್ಪ ಪರುಷವಾಗಿಯೂ ಇವೆ. ಈ ಬಗೆಯ ಸಾಹಿತ್ಯ ವಿಶೇಷ ಕನ್ನಡಕ್ಕೇ ಪೃಥಕ್ಕಾದುದು. ಇವುಗಳ ಶೈಲಿಯಲ್ಲಿಯೂ ಬೇರೆ ಬೇರೆ ಬಗೆಗಳಿವೆ. ಹಳಗನ್ನಡ ನಡುಗನ್ನಡ ಸಮನ್ವಯ, ಸಂಸ್ಕೃತದ ಭಾವನೆಗಳನ್ನು ಅಚ್ಚಕನ್ನಡದಲ್ಲಿ ಹೇಳುವ ರೀತಿ; ಧರ್ಮಬೋಧೆಗಾಗಿ ವಚನಗಳು ಹುಟ್ಟಿದರೂ ಇವುಗಳಲ್ಲಿ ಸಾಹಿತ್ಯಭಾಗ ವಿಶೇಷವಾಗಿದೆ. ಸೌಂದರ್ಯದೃಷ್ಟಿ, ಸ್ವಾನುಭವ, ಸಾಧಕನ ಕಾತರ, ಭಕ್ತನ ತೈಲಧಾರಾವಚ್ಛಿನ್ನವಾದ ಭಕ್ತಿ, ಭಕ್ತಿಯಲ್ಲಿ ಅವ್ಯಭಿಚಾರ ಭಾವ ಇವುಗಳೆಲ್ಲಪರಿಂಪ ವಚನಗಳು, ಕನ್ನಡಸಾಹಿತ್ಯ ಕಾವ್ಯಗದ್ಯ ರತ್ನಗಳಾಗಿವೆ. ಇವುಗಳ ಆಕಾರ ಗದ್ಯವಾದರೂ ಇವು ಮೂಲತಃ ಕಾವ್ಯ. ದೇವರ ದಾಸಿಮಯ್ಯ ಅಲ್ಲಮಪ್ರಭು ಬಸವೇಶ್ವರ ಅಕ್ಕಮಹಾದೇವಿ, ಇವರೆಲ್ಲ ಈ ಸಾಹಿತ್ಯದಲ್ಲಿ ಪಳಗಿದವರು.

'ಕರಿಯ ನಿತ್ತೊಡೆ ಒಲ್ಲೆ, ಸಿರಿಯನಿತ್ತೊಡೆ ಒಲ್ಲೆ, ಹಿರಿದಪ್ಪರಾಜ್ಯ ನಿತ್ತಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮ ನಿಮ್ಮನಿತ್ತೆಕಣಾ ರಾಮನಾಥಾ ; ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡ ಶರಣರ ನುಡಿಗಡಣವೇ ಕಡೆಗೀಲು. ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೆ? ಎಳ್ಳು ಇಲ್ಲದೆ ಗಾಣದಲ್ಲಿ ಎಣ್ಣೆ ಉಂಟೆ ? ಬರು ಶಠಗನ ಭಕ್ತಿಸಹಜವೆಂದು ನಂಬಲಿಬೇಡ. ಮಠದೊಳಗಣಬೆಕ್ಕು ಇಲಿಯ ಕಂಡು ಪುಟನೆಗೆದಂತಾಯ್ತು. ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕುಯಿದುಂಬ ಕ್ರೂರಕರ್ಮಿಗಳಿಗೆ ಶಿವಭಕ್ತರನಬಹುದೆ? ಸಾವಿರೆ ಸಂಗ್ರಾಮಕ್ಕೆ ಹೋದವರೆಲ್ಲ ಇರಿಯಬಲ್ಲರೆ ? ನೂರಕ್ಕೊಬ್ಬ, ಸಹಸ್ರಕ್ಕೊಬ್ಬ.

ಹುಣಸೆಯ ಹೂವೆಲ್ಲ ಕಾಯಾಗಬಲ್ಲುದೆ ರಾಮನಾಥ? ಈಶನ ಶರಣರು ವೇಶಿಸು ಹೋದರೆ, ಮೀಸಲೋಗರವ ಹೊರಗಿರಿಸಿದರೆ, ಹಂದಿ ಮೂಸಿನೋಡಿದಂತೆ ಕಾಣಾ ರಾಮನಾಥಾ. ಉಣ್ಣೆ ಕೆಚ್ಚಲ ಹತ್ತಿ ಉಂಬುದೇ ನೊರೆವಾಲ? ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು ಆ ಉಣ್ಣೆಯಿಂದ ಕರಕಷ್ಟ ರಾಮನಾಥಾ. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ. ಮೊಲೆ ಮೂಡಿಬಂದರೆ ಹೆಣ್ಣೆಂಬರು. ಗಡ್ಡಮೀಸೆ ಬಂದರೆ ಗಂಡೆಂಬರು. ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥಾ.' ದೇವರ ದಾಸಿಮಯ್ಯ ಸಂಸ್ಕೃತ ಶ್ಲೋಕಗಳನ್ನು ಹಾಗೆಯೇ ಕನ್ನಡಕ್ಕೆ ಇಳಿಸಿರುವ ಉದಾಹರಣೆಗಳು ಇವೆ.

ಸಂಸಾರದೆಡೆಯಲ್ಲಿ ದುಃಖವಲ್ಲದೆ ಸುಖವಿಲ್ಲ ನೋಡಾ. ಅದೆಂತೆಂದೊಡೆ 'ಭಾರ್ಯಾವಿಯೋಗಸ್ಸ್ವಜನಾಪವಾದಃ ಋಣಸ್ಯಶೇಷಂ ಅಧಮಸ್ಯ ಸೇವಾ | ದಾರಿದ್ರ್ಯಕಾಲೇ ಪ್ರಿಯದರ್ಶನಂ ಚ ವಿನಾಗ್ನಿನಾ ಪಂಚ ದಹಂತಿ ಕಾಯಂ || ಇಂತೆಂದುದಾಗಿ ಈ ಯೈದು ಕಿಚ್ಚುಸಿಕ್ಕಿ ಮಣ್ಣು ಹೋಯಿದು ಕೆಡಿಸಿದೆಯಯ್ಯಾ ರಾಮನಾಥಾ' 'ನಡೆ ನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು; ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು, ತಡೆದುಂಬ ಎಡೆಯಲ್ಲಿ ಒಂದು ಕಿಚ್ಚು, ಕೂಡಿದ ದ್ರವ್ಯದ ಮೋಹದೆಡೆಯಲ್ಲಿ ಒಂದು ಕಿಚ್ಚು, ಇಂತೀ ಐದು ಕಿಚ್ಚುಸಿಕ್ಕಿ ಬಾಯಲ್ಲಿ ಮಣ್ಣು ಹೊಯ್ದು ಕೆಡಿಸಿದೆಯಯ್ಯಾ ಕಾಣಾ ರಾಮನಾಥಾ, ಈ ದಾರಿಯಲ್ಲಿ ಮುಂದೆ ವಚನ ಸಾಹಿತ್ಯ ಅಪಾರವಾಗಿ ಬೆಳೆಯಿತು. 'ಜನ ಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ! ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನಕ, ಮೊಳೆಯ ಮೇಲೆ ಕಲ್ಲಸಿಕ್ಕಿ ಮೊಳೆ ಭಕ್ತನಾಗಬಲ್ಲುದೆ? ಮಾತೆಂಬುದು ಜ್ಯೋತಿರ್ಲಿಂಗ. ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆನೆಂಬರೆ ಸಿಕ್ಕದೆಂಬ ಬಳಲಿಕೆ ನೋಡಾ. ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವಿರಯ್ಯಾ, ಬಯಲು ಬತ್ತಲೆ ಇದ್ದರೆ ಏನ ನುಡಿಸುವಿರಯ್ಯಾ, ಭಕ್ತನು ಭವಿಯಾದಡೆ ಅದೇನನುಪಮಿಸುವೆನಯ್ಯಾ; ಮುಗಿಲ ಬಣ್ಣದ ಪಕ್ಷಿ ಮುಗಿಲ ಕೈಯ್ಯರಗಿಣಿ ಗಗನ ಕೋಲಂಬಿನಲಿ ಸ್ವಪ್ನದ

ಸಿಲವನು ತೆಗೆದೆಚ್ಚನಾರೋ: ಅಂಗೈಯೊಳಗೆ ಅರಳ್ದ ತಲೆಯ ಹಿಡಿದುಕೊಂಡು ಕಂಗಳ ಮುತ್ತು ಪವಣಿಸುವಾಕೆ ಸೀನಾರು ಹೇಳಾ; ಅಂಬರದೊಳಗಾಡುವ ತುಂಬಿಯ ಬಿಂಬದ ಕಂಬಸಿಯೊಳಗಣರತ್ನದ ಬಸುಕೆಯ ಆದ್ಯಂತವೇನಯ್ಯ' (ಅಲ್ಲಮಪ್ರಭು)

ವಚನಕಾರರಲ್ಲಿ ಅಲ್ಲಮಪ್ರಭು ಅತ್ಯಂತ ಶ್ರೇಷ್ಠನಾದವನು. ಇವನ ಮಾತು ಮಿಂಚು; ವಿಶಾಲವಾದ ಭಾವನೆ, ಕಪಟರಾಹಿತ್ಯ: ದೋಷವನ್ನು ಕಂಡೆಡೆ ಕಟುಟೀಕೆ, ಅಲ್ಲಮ ಪ್ರಭುವಿನ ಮಾತೇ ಮುತ್ತುಗಳು. 'ಕರ್ಕಶವಾದ ತರ್ಕ, ಸಹಜವಕ್ರವಾದ ಬೆಡಗು, ಹುಟ್ಟುಗನ್ನಡದ ವಿಡಾಯ, ಧೀರ ವಿಚಾರ, ಆಧ್ಯಾತ್ಮ ಸಾಹಸದ ಹಾಸ್ಯ, ಮಾತಿನ ಸುಳಿವುಗಳಲ್ಲಿ ಜ್ಯೋತಿಯ ಹೊಳಹನ್ನು ಹುಟ್ಟಿಸುವ ಶಿಲ್ಪ, ಸರಸ ಸಜ್ಜನಿಕೆ' ಇವುಗಳಿಂದ ವಚನಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ದೊಡ್ಡ ಸ್ಫೂರ್ತಿ ಕೊಟ್ಟಿತು. 'ಕಾಮನ ಸುಟ್ಟು ಹೋದವನು ಸುಡು ತ್ರಿಪುರಸಂಹಾರದ ಕೀಲನರಿಯಬಲ್ಲರೆ ಯೋಗಿಯಾದಡೇನು ಭೋಗಿಯಾದಡೇನು? ತ್ಯಾಗಿಯಾದಡೇನು ಸಂಸಾರಿಯಾದಡೇನು? ಅಶನವ ತೊರೆದಾತ ವ್ಯಸನವ ಮರೆದಾತ: ನಾನು ಘನ ತಾನು ಘನವೆಂಬ ಹಿರಿಯರುಂಟೆ? ಜಗದೊಳಗೆ ಹಿರಿಯರ ಕಿರಿತನದಿಂದೇನಾಯ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ ಆತನೇ ಶರಣ. ಸಿಜನನರಿದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೇ ಘನಕಂಡ ಮಹಿಮನೆ ಪರವನೊಳಕೊಂಡ ಪರಿಣಾಮಿಯೇ ಬಯಲ ಒದಗಿದ ಭರಿತನೇ; ಆಚಾರವನರಿಯದೆ ವಿಭವವಳಿಯದೆ ಕೋಪವಡಗದೆ ತಾಪಮುರಿಯದೆ ಬರಿದೆ ಭಕ್ತರಾದೆನೆಂದು ಬೆಬ್ಬನೆ ಬೆರೆವವರ ಕೇಡಿಂಗೆ ಮರುಗುವೆ ಕಾಣಾ; ಕಲ್ಲು ದೇವರೆಂದು ಪೂಜಿಸುವವರು ಆಗದು ಕಾಣಿರೋ, ಅಗಡಿಗರಾದಿರೆಲ್ಲಾ ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ; ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ, ಭಕ್ತಿಯೆಂಬುದು ತೋರಿ ಉಂಬ ಲಾಭ, ಗುಹೇಶ್ವರನೆಂಬುದು ಮೀರಿದ ಘನವು.' (ಅಲ್ಲಮಪ್ರಭು)

ಬಸವೇಶ್ವರನು ವಚನಗಳಲ್ಲಿ ಅಗಾಧವಾದ ಸಿದ್ಧಿಯನ್ನು ಪಡೆದನು. 'ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೇ ಬರಲಿ.

ಇದಕಾರಂಜುವರು ; ಮರಣವೇ ಮಹಾನವಮಿ, ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ದಯವಿಲ್ಲದ ಧರ್ಮವಾವುದಯ್ಯ?' ಈ ವಚನಗಳು ತೀವ್ರವಾದ ಭಾವನೆಗಳಿಂದ ಹುಟ್ಟಿದುವಾದುದರಿಂದ ಸಹಜಸ್ಫೂರ್ತಿಯುಳ್ಳವಾಗಿ ಸ್ಪಷ್ಟವಾದ ಶಬ್ದಚಿತ್ರಣಶಕ್ತಿಯುಳ್ಳವುಗಳಾಗಿವೆ. ಬಸವೇಶ್ವರನನ್ನು ಬಿಟ್ಟರೆ ವಚನಸಾಹಿತ್ಯದಲ್ಲಿ ಅಕ್ಕ ಮಹಾದೇವಿಯ ಸ್ಥಾನ ಹಿರಿದು. ಸಂಪ್ರದಾಯವನ್ನು ಮೀರಿ ಆ ಹೆಣ್ಣು ಮಗಳು, ಭಕ್ತಿ ಅನುಭಾವಗಳ ಅಲೆಗಳ ಮೇಲೆ ಹಾರಾಡುತ್ತಾ ಚಮತ್ಕಾರ ರಸಪೂರ್ಣವಾದ ಕವಿತೆ ರಚಿಸಿದಳು. ಅವಳ ವಚನಗಳಲ್ಲಿ ಅವಳ ಉಗ್ರ ಸಾಧನೆ, ಇಂದ್ರಿಯನಿಗ್ರಹ, ಅವಳು ಪಡೆದ ಸಿದ್ಧಿ ಇವು ವ್ಯಕ್ತವಾಗಿವೆ. 'ಅಳಿಸಂಕುಲವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ, ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ, ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯಾ ; ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು. ಉಟ್ಟಸೀರೆಯ ಸೆಳೆದುಕೊಟ್ಟು, ತೊಡಿಗೆಯ ಹರಿದು ಬಿಟ್ಟೆನೋ ನಾನು, ಬಿಡು ಮುಡಿಯ ಎಲೆ ದೇವ, ಹಸಿವಾದಡೆ ಭಿಕ್ಷಾನ್ನಗಳುಂಟು. ತೃಷೆಯಾದೊಡೆ ಕೆರೆಹಳ್ಳ ಭಾವಿಗಳುಂಟು. ಶಯನಕ್ಕೆ ಹಾಳುದೇಗುಲಗಳುಂಟು. ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನುಂಟು. ಆರೂ ಇಲ್ಲದವಳೆಂದು ಆಳಿಗೊಳಬೇಡ ಕಂಡೆಯಾ. ಏನು ಮಾಡಿಡಡೆಯೂ ನಾನು ಅಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು, ಸುರಗಿಯ ಮೇಲೊರಗಿ ನಾನಿಹೆನು ; ಕಿಡಿಕಿಡಿ ಕೆದರಿಪಡೆ ಎನಗೆ ಹಸಿವು ತೃಷೆ ಅಡಗಿತೆಂಬೆನು ; ಮುಗಿಲು

ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು. ಚೆನ್ನಮಲ್ಲಿಕಾರ್ಜುನ, ಶಿರಹರಿದು ಬಿದ್ದಡೆ ಪ್ರಾಣ ನಿನಗರ್ಪಿತವೆಂಬೆನು' (ಮಹದೇವಿಯಕ್ಕನ ವಚನಗಳು ೪೯, ೧೦೬, ೧೦೭) ವಚನಗಳಲ್ಲಿಯ ಸಾಹಿತ್ಯಗುಣ ವ್ಯಕ್ತಿತ್ವದ ಘನತೆಯಿಂದಲೂ ಭಾವನಾ ಪ್ರಾಧಾನ್ಯದಿಂದಲೂ ಉಂಟಾದುದು. ಇವುಗಳನ್ನು ಹಾಡಬಹುದಾದರೂ, ಇವು ಹಾಡುಗಳಾಗಿ ಮೊದಲು ಹುಟ್ಟಿರಲಾರವು. ಈಚೆಗೆ ಕೆಲವರು ವಚನಗಳನ್ನೇ ಹಾಡುಗಳಾಗಿ ಮಾರ್ಪಡಿಸಿಕೊಂಡು ಹಾಡಿರಬೇಕು. ವಚನಗಳನ್ನು ಗದ್ಯಕವನಗಳೆನ್ನಬಹುದು.

ವಚನಗಳಿಂದ, ಕನ್ನಡ ಸಾಹಿತ್ಯದಲ್ಲಿ ಗದ್ಯ ಹೆಚ್ಚು ಪರಿಣಾಮಕಾರಿಯಾಗಿ ಪ್ರಯೋಗವಾದ ಅನುಭವವುಂಟಾಯಿತು. ಆತ್ಮಾನುಭವ, ಹೃದಯ ಮತ್ತು ದೃಷ್ಟಿ ವೈಶಾಲ್ಯ, ಸೃಷ್ಟಿಯ ರಹಸ್ಯದರ್ಶನ, ಭೇದನ, ಇವುಗಳ ನಿರೂಪಣೆಗೆ ಗದ್ಯ ಹದವಾಗಿ ಒದಗುವುದೆಂಬುದನ್ನು ಕವಿಗಳು ಅರಿತರು. ಜನಜೀವನದಲ್ಲಿ ಆಡುವ ಮಾತುಗಳನ್ನು ಗದ್ಯದಲ್ಲಿ ಬಳಸುವುದರಿಂದ, ಗದ್ಯ ಪ್ರಭಾವಯುಕ್ತವಾಗುವುದೆಂಬುದನ್ನೂ ಅವರು ಕಂಡುಕೊಂಡರು.

೫

ಹರಿಹರ, ರಗಳೆಯಲ್ಲಿ ಹೇಗೆ ಔನ್ನತ್ಯವನ್ನು ಪಡೆದನೋ ಹಾಗೆಯೇ ಕನ್ನಡ ಗದ್ಯಕ್ಕೂ ಹೊಸ ಪ್ರಾಣವನ್ನು ಕೊಟ್ಟನು. ಅವನ ಬಸವರಾಜದೇವರ ನಂಬಿಯಣ್ಣನ, ಮಹಾದೇವಿಯಕ್ಕನ ರಗಳೆಗಳಲ್ಲಿ ಕನ್ನಡ ಗದ್ಯ ಒಂದು ಆದರ್ಶ ಮಟ್ಟವನ್ನು ಮುಟ್ಟಿತು. ಗದ್ಯವನ್ನು ಉಪಯೋಗಿಸುವುದರಲ್ಲಿ ಹರಿಹರ ಹಿಂದಲ ಚಂಪೂಕಾರರಿಗಿಂತ ಸ್ವಲ್ಪ ಭಿನ್ನನಾದನು. ಚಂಪೂಕಾರರು ಪದ್ಯಗಳ ಮಧ್ಯದಲ್ಲಿ ಒಂದೊಂದು ಗದ್ಯವನ್ನು ಹಾಕುತ್ತಿದ್ದರು. ಆದರೆ ಹರಿಹರ ಒಂದು ಸ್ಥಳವನ್ನು ಗದ್ಯದಲ್ಲಿಯೂ ಮತ್ತೊಂದು ಸ್ಥಳವನ್ನು ರಗಳೆಯಲ್ಲಿಯೂ ರಚಿಸಿ, ಕಥಾಕಾವ್ಯ ನಿರೂಪಣೆಗೆ ಪದ್ಯದಷ್ಟೇ ಗದ್ಯವೂ ಉಚಿತವಾದುದೆಂಬುದನ್ನು ತೋರಿಸಿದನು. ಹರಿಹರನಲ್ಲಿ ಮತ್ತೊಂದು ವಿಶೇಷವೇನೆಂದರೆ, ಅವನ ಗದ್ಯ ಅಂದಿನ ಜನದ ಬಳಕೆಯ ಗದ್ಯ. ಆದುದರಿಂದ ಹರಿಹರ, ರಗಳೆಗಳನ್ನು ಹಳಗನ್ನಡದ ಶೈಲಿಯಲ್ಲಿ ಬರೆದಿದ್ದರೂ, ಜನರಲ್ಲಿ ಬಳಕೆಯಲ್ಲಿದ್ದ

ಭಾಷೆಯನ್ನೇ ಗದ್ಯದಲ್ಲಿ ಉಪಯೋಗಿಸಿದ್ದಾನೆ. ಹರಿಹರನ ಗದ್ಯ ಕನ್ನಡ ಸಾಹಿತ್ಯದ ಉತ್ಕೃಷ್ಟ ಗದ್ಯ. ಒಂದು ಉದಾಹರಣೆ; ಬಸವಣ್ಣನವರ ಧಾರ್ಮಿಕ ಜೀವನವನ್ನು ಶಿವಶರಣರು ವರ್ಣಿಸಿರುವ ಕ್ರಮ. 'ಎಲೆ ಬಸವ, ನಿನ್ನ ನೇಮವಿದಾರ್ಗುಂಟು. ಗುರುಲಿಂಗದೊಳ್ ಎರಡಿಲ್ಲದಿಪ್ಪೆ. ಶರಣರಂ ಸಂಗನೆಂದೆ ಕಾಣ್ಬೆ. ಬಂದಭಕ್ತರನತ್ಯಾದರಿಪೆ, ಬಪ್ಪ ಭಕ್ತರಂ ಹರುಷದೊಳಿದಿರ್ಗೊಂಬೆ. ಬೇಡಿದುದ ಶರಣರ್ಗೆ ಇಲ್ಲೆನ್ನದೀವೆ. ಬೇಡಲೊಲ್ಲದವರ್ಗೆ ಬಾಗಿಲಾಗಿ ಆರಾಧಿಪೆ. ಜಾಗ್ರತ್ಸ್ವಪ್ನಸುಷುಪ್ತಿಯವಸ್ಥಾತ್ರಯಂಗಳೊಳು ಶರಣಂ ಸಂಗನೆಂದಲ್ಲದೆ ಕಾಣೆ. ನಿಚ್ಚಶಿವರಾತ್ರಿಯನಚ್ಚರಿಯಿಂ ಮಾಳ್ಪೆ, ಜಂಗಮಪ್ರಾಣಿಯಾಗಿಪ್ಪೆ. ಶಿವಲಿಂಗಾರ್ಪಿತವಲ್ಲದುದನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ. ಶಿವಸಮಯವನುದ್ಧರಿಸುವೆ. ಪರಸಮಯವಂ ಸಂಹರಿಸುವೆ. ಲಿಂಗದಲ್ಲಿ ಕಠಿಣಮಂಕೇಳೆ, ಜಂಗಮದಲ್ಲಿ ಜಾತಿಯನರಸೆ. ಪ್ರಸಾದದಲ್ಲಿ ಅಪವಿತ್ರತೆಯನರಿಯೆ........ಪಾಪಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು ಗಣಪರ್ವಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ. ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತು.........'(ಬಸವರಾಜ ದೇವರ ರಗಳೆ ೮-೩೮-೫೮)

ಹರಿಹರನ ಗದ್ಯದ ಮತ್ತೊಂದು ಉದಾಹರಣೆ, ನಂಬಿಯಣ್ಣನ ರಗಳೆ. ಈ ರಗಳೆಯಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚು ಪ್ರಭಾವಯುಕ್ತವಾಗಿದೆ. ಶಿವನು ವೃದ್ಧನಾಗಿ ಕೈಲಾಸದಿಂದ ಮದುವೆಯ ಮಂಟಪಕ್ಕೆ ಬಂದ ಸಂದರ್ಭ. 'ತನ್ನ ನಾರುವರಿಯದೆ ಕಾಣದೆ ಲೆಕ್ಕಿಸದೆ ಸಂಭ್ರಮದೊಳಿರೆ, ಮೆಲ್ಲಮೆಲ್ಲನೆಲ್ಲವ ನೋಡುತಂ ಮನದೊಳ್ ನಗುತಂ ಕೋಲನೂರುತೆ ಕೆಮ್ಮಿ ಕುಮ್ಮುತ್ತೆ, ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃ ಶಿವಾಯ ಎಂಬ ವೃದ್ಧ ಧ್ವನಿ ಪುಟ್ಟೆ ಕೊಡಂಗಳ ಮೇಲೊಡೆ ಬಿಳ್ದು ಕುಳ್ಳಿರ್ದರ್ ಮುಖದೊಳಂ ಕಣ್ಣೊಳಂ ಮಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರ್ಮ ಮಲ್ಲಳಿಗೊಂಡು ಘೊಳ್ಳೆಂದು ಬಿಳ್ದಂ ವೃದ್ಧ ಮಾಹೇಶ್ವರನಂ ಮುತ್ತಿಕೊಂಡೆತ್ತಲನುವಾಗಿ ಮೆಲ್ಲನೆ ನೆಗಪಿ ನಿಂದಿರಿಸಲ್ ಒಂದೆರಡಡಿಯಿಟ್ಟು ದಡದಡಿಸಿ ನೋಡುವ ಜನವೆಲ್ಲಂ ಎಲೆಲೆ ವೃದ್ಧನಾ ಬಿದ್ದನೆಂಬಲ್ಲಿಂ ಮುನ್ನಂ ನಿಲಲಾರದೆ ಹಳಿಲನೆ ಘಳಿಗೆಸಟ್ಟಿಲ ಮೇಲೆ ಜಾಳಿ ಕಳಿಸಿಗೆಯೊಡೆದು ಘಳಿಗೆವಟ್ಟಲು ಮುರಿದು ತಂಡುಲಂ ಚೆಲ್ಲಿ

ಜೋಯಿಸರೆಲ್ಲಂ ಕೆದರಿ ಪೋಗೆ ಬಿದ್ದೇಳಲಾರದೆ ಹಮ್ಮೈಸಿದಂತಿರೆ ಪರಿತಂದು ಕಣ್ಣೊಳಂ ಬಾಯೊಳಂ ನೀರಂ ತಳಿದೆಂತಕ್ಕೆಚ್ಚರಿಸೆ ಎತ್ತುವರ ಕೈಯ್ಯಬಾಯೊಳೆ ಜೀವಂ ಹಿಡಿಯಬಾರದು, ಮುಟ್ಟಬಾರದು, ನೋಡಬಾರದು, ನುಡಿಸಲರಿದು, ಪಿಡಿದು ಬಿಟ್ಟಡೆ ತುಪ್ಪದ ಕೊಡನ ಮೇಲಲ್ಲದೆ ಬೀಳಂ, ಈ ವೃದ್ಧ ಬ್ರಾಹ್ಮಣನನೀಮುಪ್ಪಿನ ಮರುಳನನೀ ಗೌತಮನ ಗೋವನೀ ಬ್ರಹ್ಮೇತಿಕಾರನನಾರ್ ಪೊಗಿಸಿದರಾರ್, ತಂದರ್ ಇದೇನವಶಕುನವಿನ್ನೇನೀಮದುವೆ ಹಸನಾಗದೆನುತೆಲ್ಲರುಂ ಮೆಲ್ಲನೆ ಕಯ್ಯುಮಂ ಕಾಲುಮಂ ಪಿಡಿದೆತ್ತಿಕೊಂಡು ಹೋಗಿ, ತಮ್ಮಾಯುಷ್ಯ ಭೂಷೆಗಳಂ ಪೊರಗಿಡುವಂತೆ ಚಪ್ಪರದ ಪೊರಗೆ ಮೆಲ್ಲನಿಳುಪಿ ಈ ವಿಪ್ರನಂ ಪೊಗಲೀಯದಿರೀ ವೃದ್ಧನಂ ಪೊಗಿಸದಿರೆಂದು ಬಾಗಿಲವನನದುಹುತ್ತೆ ಕದಪನಿಕ್ಕಿ ಒಳಗಂ ಪೊಗುವೈಸಕ್ಕೆ ಅವರಿಂ ಮುನ್ನವೆಯ್ತಂದೊಳಗಂ ಪೊಕ್ಕು ತೋರಣದ ತಳಿರಂ ಪರಿದು ಶಿವದಿಡುತ್ತಿರಲ್ ಅವರ್ ಕಂಡು ಬೆರಗಾಗಿ ಈಗಳಿಂತು ಪೊರಗಿರಿಸಲೀಗಳಿಂತೆ ಬಂದು ಮುಂದಿರ್ದಪನೀ ವೃದ್ಧಂ ಕಿರುಕುಳನಲ್ಲ ಕಾರಣಿಕನಾಗಲೇ ವೇಳ್ಕುಮೆಂದು ನೋಡುತ್ತಿರೆ ಯಷ್ಟಿಯ ಕೋಲಿಂ ಬಿಂಗಾರಿಗಳನಿರಿದೊಡೆವುತ್ತಂ ಜಗಲಿಯಂ ದರಿಗೆಡಹುತಂ ಮಂಗಳವೆಲ್ಲವನ ಮಂಗಳವಂ ಮಾಡುತ್ತಿರಲ್ ಅಲ್ಲಿಯ ಪಿರಿಯರುಂ ಮಾನ್ಯರುಂ ಕಂಡೆಲೆ ಅಪ್ಪರೆ ಇತ್ತ ಬಿಜಯಮಂ ಗೆಯ್ವುದೆನೆ ಕೇಳದಂತೆ ಮತ್ತೆ ಮತ್ತೆ ಶಿವದಿಡುತ್ತೆ ಎನ್ನ ತೊತ್ತಿನ ಮಗನಂ, ಕುಮಾರನೆಂದು ಸತ್ಕುಲಜನೆಂದು ಬಗೆದು ಹೆಣ್ಣಂ ಕೊಟ್ಟು ನಿಮ್ಮ ಕುಲಮುಂ ಕೆಡಿಸಿಕೊಳ್ಳದಿರಿ, ನಾನಪ್ಪಡೆ ಮದುವೆಯುನಾಗಲೀಯೆಂ ನೀವಿದರಾದ್ಯಂತವನೇನೆಂದರಿಯಿರಿ, ಅವಂ ನರಸಿಂಗ ಮೊನೆಯರ್ ಪೆತ್ತಮಗನಲ್ಲಂ ಕೊಂಡುಸಾಕಿದ ದತ್ತಪುತ್ರನವಂ ಶಿವಬ್ರಾಹ್ಮಣಂ ಸೌಂದರ ಪೆಸುವಾಳೆಯೆಲ್ಲಂ ನಂಬಿಯೆಂದು ಎನ್ನ ತೊತ್ತಿನ ಮಗಂ ಅದಕ್ಕೆ ಪ್ರಮಾಣ ಪತ್ರಮುಂಟೆಂದಾಸುರಂ ಮಸಗಲಾ ತಾಯ್ತಂದೆಗಳ್ ಕಂಡು ಕೌತುಕಂಬಟ್ಟು ಎಮಗೀ ಮದುವೆಯುಂತಿರ್ಕೆ ಮುನ್ನವೀ ಬ್ರಾಹ್ಮಣನ ಬ್ರಹ್ಮಹತ್ಯಾದೋಷಂ ತಪ್ಪಿತಿಡೆ ಸಾಲ್ಗುಂ, ಎಲೆ ಅಯ್ಯಾ ಚಿತ್ತೈಸೆಮ್ಮಪಾತಂ ನೀಂತಡೊಳಗಾಗಿ ಮಹಾಪ್ರತಿಷ್ಠೆಗಳಂ ಮಾಣ್ದು ಕಳೆವರಲ್ಲದೆ ಪ್ರತ್ಯಕ್ಷ ಶಿವನಂತಿರ್ದ ನೀವೇ ಬಂದು ತುಪ್ಪದ ಕೊಡನನೊಡೆದು ಕೆಡಹಿ ತೋರಣದ ತಳಿರಂ ಪರಿದು ತಿರಿದು ಘಳಿಗೆವಟ್ಟಲನೊಡೆದು ಕೆಡಹಿ ಮೊರೆಯಿಟ್ಟು ಶಿವದಿಟ್ಟು ವೇದಿಕೆಯಂ ಕೆಡಹಿ

ಕುಲಂ ಪೊಲ್ಲಪೆಂಪ ಬಳಿಕಿನ್ನಾವ ಮೂಗಂ ಮುಂದಿಟ್ಟು ಮದುವೆಯ ಮಾತನಾಡಿದಪೆವು- ಅದುಂತಿರ್ಕೆ ಸೀವಿಲ್ಲಿಂದಂ ಹದುಳ ಹೋಪೊಡೆ ಸಾವಿರ ಮದುವೆಯ ಮಾಡಿದ ಸಂತಸಂ ಅದಲ್ಲದೆ ಸೀವರಸುವ ನಂಬಿಯಣ್ಣಂ ಒಸಗೊಳ್ವುದನೆ ಅವನೊಡನಾಡಿ ಕೊಂಬುದು ಎಮ್ಮಿಂ ಕಾಡಲಾಗದು ನಿಮ್ಮಡಿಗಳು ಬಿಜಯಂಗೆಯ್ವುದು ಸ್ವಾಮಿ ಎನಲ್ — (ನಂಬಿಯಣ್ಣನ ರಗಳೆ ತೀ. ನಂ. ಶ್ರೀ. ಸಂಪಾದಿತ)

ಈ ಮುಂದಲದು ಬಿಜ್ಜಳನ ಒಡ್ಡೋಲಗದ ವರ್ಣನೆ-

ಸುರತರುವಿನಂಕುರದಂತೆ ಪುಣ್ಯದ ಕೊನರಿನಂತೆ ಭಕ್ತಿಯ ಕುಸುಮದಂತೆ ಮುಕ್ತಿಯ ಫಲದಂತೆ ಬಾಲಚಂದ್ರನಂತೆ ಕಳಹಂಸನಂತೆ ಕಾಮಧೇನುವಿನ ವತ್ಸನಂತೆ ಪರುಷದ ಮರಿಯಂತೆ ನಳನಳಿಸಿ ಬೆಳೆಯುತಿರ್ಪ ಮಳೆಯ ರಾಜದೇವಂ ಶೈಶವ ಲೀಲೆಯೊಳ್ ಮುಂದೆ ತನಗೆ ಪ್ರತ್ಯಕ್ಷನಪ್ಪ ಶಿವನೇರಿಬರ್ಪ ನಂದಿಯ ನಿಲವಂತಂ ಬಳಸ್ಕೆ ಪಡಸಣಮಂ ನೋಡುವಂತೆ ದಟ್ಟಡಿ ಇಟ್ಟು ಶಿವಸ್ತುತಿಯುಂ ಶ್ರವಣಮುಂ ಮಾಡುವಂತೆ ನುಡಿದು ದೇಶಂಬೆರಸು ಕೈಲಾಸಕ್ಕೀತೆರದೊಳೆತ್ತಿ ಕೊಂಡೊಯ್ವೆನೆಂಬುದಂ ತೋರುವಂತೆ ಮುಂದಿರ್ದ ಹಾಲ ಹೊನ್ನ ಬಟ್ಟಲ ನೊಯ್ಯನೆತ್ತಿ ನಿಂದಿರುತ್ತಿರ್ಪಂ—(ಬಸವರಾಜ ದೇವರ ರಗಳೆ)

ಹರಿಹರನ ಮತ್ತೊಂದು ಗದ್ಯ—" ಪಲ್ಲವದನುಣ್ಪಿಂ ಕುಸುಮಾವಳಿಯ ಕಂಪಿಂ ಪಣ್ಗಳೆಸೆಯ ಬಣ್ಣಿಂ ಪಕ್ವ ಪಕ್ವ-ಫಳರಸದಿಂಪಿಂ ಕೋಕಿಳ ಧ್ವಾನದಿಂ ಅಳಿಕುಲದಗಾನದಿಂ ಶುಕಸ್ವರತಾನದಿಂ ಫಳರಸದ ಪಾನದಿಂ ರಾಜಹಂಸ ಯಾನದಿಂ ಲತಾಮಂಟಪಸಸ್ಥಾನದಿಂ...... ... ... ಅತಿಪ್ರಸನ್ನತೆಯನೊಳಕೊಂಡಿಪ್ಪುದು."

ಈ ಪದಗುಚ್ಛಗಳಲ್ಲಿ ಏನು ಸಮುತ್ಸಾಹ! ಗದ್ಯ, ಛಂದೋ[illegible] ತಿರುಗಿ ರಗಳೆಯ ಪಾದಗಳಾಗಿ ಪ್ರವಹಿಸುತ್ತಿದೆ.

ಈ ಮುಂದಲದು ಬಿಜ್ಜಳನ ಒಡ್ಡೋಲಗದ ವರ್ಣನೆ:

ಬಿಜ್ಜಳಭೂಪನಿಕ್ಕೆಲದೊಳಿಕ್ಕುವ ಚೀಗುರಿಯ ಬೀಸುವ ಚಾಮರದ ವಿಲಾಸಿನಿಯರ ಕಂಕಣದ ಝಣತ್ಕಾರದ ಸವಿದನಿಗಳ್ಗೆ ಕಿವಿಗೊಡುತ್ತೆ, ಇ[illegible]

ಜೊಳೊತ್ತರದಿಂ ಕುಳ್ಳಿರ್ದ ಛತ್ತೀಸ ಕುಲದ ರಾಜಪುತ್ರರ್ಕಳ ಸಚಿವರ ದಂಡನಾಥರ ಮಂಡಳೀಶ್ವರರ ಮಹಾಸಾಮಂತರ ಬಿರುದ ಮಾಹುತರ ರಾಯರಾವುತರ ಗಜಾರೋಹಕರ ಸಾಮಂತರ ಮನ್ನಣೆಯಾಳ್ಗಳ ದಿಟ್ಟವಾರಿಯ, ಧೀರರ ಪಾಠಕರ ಗಣಿಕೆಯರ ವೀರರ ಹರಿವಾಣದಾಯುಧ ಲೆಂಕರ ಬಿಂಕದಂಕಕಾರರ ಮಾಸಾಳ್ಗಳ ಬಾರಸಂಕಲೆಯ ಕೊಡರ ತೋಟಿಯ ಕಠಾರಾಯಿತರ ಬಾಣಾಯಿತರ ಮಲ್ಲಜಟ್ಟಿಗಳ ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ಮುಗ್ಧೆಯರ ವಿದಗ್ಧೆಯರ ಪ್ರೌಢೆಯರ ಮಧ್ಯನಾಯಕಿಯರ ಗಾಯಕರ ಚಿತ್ರಕರ ನರ್ತಕರ ನರ್ತಕಿಯರ ನೊತ್ತಜೊತ್ತರದ ತಿಂಥಿಣಿಯುನೊತ್ತರಿಸಿ ಇಕ್ಕಿಣಿಸಿದ ಕಿಕ್ಕಿಣಿಕದಾಸ್ಥಾನದೊಳು—ಮಾಳವ ಮಾತಂ ಪಾಗಣಾ, ಗೌಳ ತೆರಪುಗೊಡು, ಲಾಳ ಸೈಯಿಸು, ಗುರ್ಜರ ಬಿನ್ನವಿಸು, ನೇಪಾಳ ಕುಳ್ಳಿರು, ಕಳಿಂಗ ಸರಿದಿರು, ಬಂಗಾಳ ಹೋ ಹೋ—ಎಂಬ ಮುಕುಟವರ್ಧನರಂ ಕಟ್ಟಿಗೆಯರ್ ತ್ರಿ ಪಟ್ಟವಿರಿಸುವ ನೇತ್ರಹಸ್ತರಾಸ್ತ್ರಯಂಗಳ ನಡುವೆ, ದಂಡನಾಥ ಪ್ರನೇತ್ರ ಸನ್ನಿಸ ಬಸವರಾಜಂ ಸಕಲದೇಶಾಧಿಪತಿಗಳ್ ಕಳುಹಿದ ಬಿಳಾಸಿಸಿದಂತೊಡನೆ ಬಂದ ಪಾವುಡಂಗಳ ಕನಕರತ್ನಾಭರಣಜಾಲಮನೊಪ್ಪುಗೊಂಡು ಭಂಡಾರಕ್ಕೆ ತೆಗೆಯಿಸುತ್ತಂ ರಾಜಪುತ್ರರ್ಗೆ ಪಸಾಯಮಂ ಕೊಡಿಸುತ್ತಂ ವೀರಭಟರ್ಗೆ ಜಡಾಯುಮಂ ಮಾಡಿಸುತ್ತಂ ಮುಕುಟವರ್ಧನರಂ ಕಾಣಿಸುತ್ತು ಬಂದ ಚಾರರಂ ಬೀಳ್ಕೊಡಿಸುತ್ತಂ ಸುಖದೊಳಿಪ್ಪಲ್ಲಿ; ಮಧ್ಯಾಹ್ನ ಸಮಯಸಮುದಿತದಿಂದೆ ವಾದ್ಯಧ್ವಾನಂ ನೆಗಳೆ, ಪೆರೋಲಗಮಂ ಪರೆಯಮೇಳ್ವೆಲ್ಲರಂ ಕಳುಪಿ, ಬಿಜ್ಜಳರಾಯನೊಡನಾಪ್ತಜನಸಚಿತಮಂತ್ರಾಲೋಚನೆಯಿಂದಿನಿತುಬೇಗಮಿರ್ದು ಅರಮನೆಯಂ ಪೊರಮಟ್ಟು ತನ್ನ ಮಹಮನೆಗೆ ಬಪ್ಪಲ್ಲಿ; (ಬಸವರಾಜ ದೇವರ ರಗಳೆ)

ಬಸವನು ಭೂಮಿಯಲ್ಲಿ ಮೆರೆಯಬೇಕೆಂದು ಈಶ್ವರನು ಹೇಳಿದಾಗ :

"ಎಲೆ ಮಗನೆ ಬಸವ ಬಸವಣ್ಣ ಬಸವಿದೇವ, ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು—ಎಂಬ ನುಡಿಯೊಡನೆ ಕನಸಿನ ಮಾತು ಮನವನಿಪ್ಪೈಗಂಡು, ನಿದ್ರೆತಿಳಿದು ಕಣ್ದೆರೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡು ಅನುತಾಪವೇರಿ ವಿರಹಂ ಕೋಮ್ಮಿ ಕಣ್ಗೆಟ್ಟಗಲಲಾರದೆ ರಂಗಮಂಟಪದ ಕಂಭಮಂ ಘಳಿಲನೆ ಹಾಯ್ದು—ದೇವ

ದೇವ ಸಂಗ, ಕಂಡೈ. ಕೆಟ್ಟೆಕೆಟ್ಟೆಂ. ತೊಟ್ಟನಿಂತು ಕಣ್ನೋಡದೆ ಹಣ್ಣ ನೋಡದೆ ಹೋಗೆಂಬರೆ? ಗಗನದಿಂದಿಳಿವಂಗಾಧಾರವಾಗುತ್ತೆ ತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ? ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ? ನರಲೋಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದಾಳ್ಗೊಂಡ ಗುರುವೆ ಪರಮಬಂಧುವೆ ಪ್ರಾಣವೆ. ಬೆಳುದಿಂಗಳೇಕೆ ಬಿಸುಪೇಕೆ? ಅಮೃತವೇಕೆ ವಿಷವೇಕೆ? ಬೆಳಗೇಕೆ ತಮವೇಕೆ? ನೀನೇಕೆ ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ ಸಾರ್ದರಂ ಸೈರಿಸೆಂಬರೆ? ನಂಬಿದವರ ಗೋಣಂ ಕೊಯ್ವರೆ? ಶಿಶುವಸಿರಿವರೆ? ಪಶುವಂ ಕೊಲುವರೆ? ಎನ್ನಂ ಬಿಡುವರೆ? ಕರುಣಿ ಕರುಣಿ, ಕರುಣಂ ಲೇಸಾಯ್ತು. ಅರ್ಜಿಸಿತಕ್ಕೆ ಫಲವಾಯ್ತು. ಇನ್ನೇನು ಇನ್ನೇನು?—

ಬಸವನ ಮೇಲೆ ಬಿಜ್ಜಳನಿಗೆ ಹೇಳಿದ ಚಾಡಿ ಹೀಗೆ: "ಎಲೆಎಲೆ ಮರುಳರಸ, ಪುರದೊಳು ಸುಳಿವ ಶಿವಭಕ್ತರ ಸಿರಿಯನೇನಂ ಬಿನ್ನವಿಪೆವು! ನಿನ್ನ ಭಂಡಾರದೊಳು ನೀನಿಕ್ಕಲಮ್ಮದ ಪದಕಂ ಶರಣರ ಪೇರುರದೊಳು, ನೀಂ ಮುಟ್ಟಲಂಜುವ ತಾರಹಾರಂ ಭಕ್ತರ ಕೊರಳ್ಗಳೊಳು, ನೀಂ ಕೈಕೊಳಿಸಲಮ್ಮದ ವಜ್ರದ ಕಂಕಣಂ ಶರಣರ ಕರದೊಳು, ನೀಂ ನೋಡಲಮ್ಮದ ರತ್ನಮುದ್ರಿಕೆಗಳು ಶರಣರ ಕೋಮಲಾಂಗುಲಿಯೊಳು, ನೀಂ ತೊಡಲಮ್ಮದಾರಾಧಿಪ ದಿವ್ಯಾಭರಣಂ ಶರಣರ ಮೈಯೊಳು, ನೀನುಡಲಮ್ಮದೆ ಪೊಡಮಡುವ ನವವಸ್ತ್ರಂ ಶರಣರಂಗದೊಳು, ನೀಂ ಪೂಸಲಮ್ಮದ ಯಕ್ಷಕರ್ದಮಂ ಭಕ್ತರ ಕಕ್ಷವಕ್ಷಂಗಳೊಳು ನೀನೇರಲಮ್ಮದ ದಿವ್ಯ ವಾಹನಂ ಭಕ್ತರ ರಾಘೆಯೊಳು ಕಾಣಬಂದಪವು. ಬಸವಂಗೆ ಮರುಳಾದೆ. ಭಂಡಾರಮುಂ ಸೂರೆವೋದುದು. ರಾಜ್ಯದೆಕ್ಕೆ[?]ರಂ ಭಕ್ತರ್ಗೆ ಬರಿದಾಯಿತ್ತು. ಭಕ್ತರುರವಣೆ ಪಿರಿದಾಯಿತ್ತು, ಭಕ್ತರ ತೇಜಂ ಬಲುಹಾಯಿತ್ತು."

"ಬಿಜ್ಜಳಭೂಪಂ ಮೆಲ್ಲಮೆಲ್ಲನೆ ಮಾತುಮಾತಿಂ ಲೆಕ್ಕದ ಮಾತಂ ತೆಗೆದು, ಕರಣಿಕರಂ ಝಂಕಿಸಿ ಭಂಡಾರದ ಆದಾಯಬೀಯಮುಂ ನೋಡೆ ಬಸವನ ಮೇಲೆ ಪದಿನೆಂಟುಕೋಟಿ ದ್ರವ್ಯಂ ಸ್ಥಿತವಾಗೆ, ಬಿಜ್ಜಳಂ ಮರುಗಿ ದಣ್ಣಾಯಕರ ಮೊಗಮುಂ ನೋಡುತಾಕ್ಷೇಪದಿಂ ಕೈಮುಗಿದು "ನಿಮ್ಮ ನಂಬಿ ಭಂಡಾರಮುಂ

ಕೊಟ್ಟೆಡೆನ್ನ ನಿಂತು ಕೆಡಿಸುವರೆ? ಶಿವಭಕ್ತರ್ಗಿತ್ತು, ರಾಜ್ಯಮಂ ನೀರೊಳದ್ದುವರೆ? ಹಲವು ಮಾತೇನು? ನಿಂದ ಹೊನ್ನಿಂಗೆ ನಿರ್ಣಯಮಂ ಕೊಡುವುದು—ಎಂದು ನಿರೋಧಮಂ ನುಡಿಯೆ ಬಸವಂ ಕೇಳ್ದು

"ನಿಲವಿನ ಪದಿನೆಂಟು ಕೋಟಿಗೆ ಛತ್ತೀಸಕೋಟಿ ಬಾಹತ್ತರ ಕೋಟಿಗಳಿಂ ಮಿಗಿಲೆನಿಸಿ ಇಮ್ಮಡಿ ನೂರ್ಮಡಿ ಸಾಸಿರ್ಮಡಿ ಲಕ್ಷಮಡಿ ಕೋಟಿಮಡಿಯಾಗಿ ಪೆರ್ಚುತ್ತಿರೆ, ಗಣಕರು ಲೆಕ್ಕಿಸಲಾರದೆ ಬೆರಗಾಗೆ ಪರಸಮಯಿಗಳ ಮೊಗಂ ಬೆಳ್ಪೇರೆ ಬಿಜ್ಜಳನ ಮೊಗಂ ಲಜ್ಜೆಯೇರೆ ಶರಣರ ಮೊಗಂಗಳು ಹರುಷವೇರೆ, ಭೂಪನ ಮೊಗಮಂ ನೋಡಿನೋಡಿ ಜಡಿದು ನುಡಿದು—(ಬಸವರಾಜ ದೇವರ ರಗಳೆ)

ಒಂದು ದೃಷ್ಟಿಯಲ್ಲಿ ಕನ್ನಡ ಗದ್ಯಕ್ಕೆ ಹರಿಹರನೇ ಉನ್ನತ ಶಿಖರವೆನ್ನಬಹುದು. ಅಲ್ಲಿಂದ ಮುಂದೆ ಮೈಸೂರು ಚಿಕ್ಕದೇವರಾಯ ಕಾಲದವರೆಗೆ ತಲೆಎತ್ತಿ ಮೆರೆವ ಗದ್ಯಗ್ರಂಥ ಯಾವುದೂ ಇಲ್ಲ. ಚಿಕ್ಕದೇವರಾಜ (ಯ) ಬಿನ್ನಪ ವೇದಾಂತವನ್ನೂ ಸಾಹಿತ್ಯವಾಗಿಸಿದ ಕೃತಿ. ಇದರ ಶೈಲಿ ಸೊಗಸಾಗಿದೆ. ವಚನಗಳು ಬಿಡಿಬಿಡಿ ಮುತ್ತಿನಂತಿವೆ. ನೂತನ ಕಲ್ಪನೆಗಳೂ ಉಚಿತ ವಾಗ್ಧೋರಣೆಯೂ ಹೆಜ್ಜೆಹೆಜ್ಜೆಗೆ ಒಡೆದು ತೋರುತ್ತವೆ. ಆದರೆ ಕನ್ನಡ ಗದ್ಯಗ್ರಂಥಗಳಲ್ಲಿ ಚಿಕ್ಕದೇವರಾಯ ವಂಶಾವಳಿಗೆ (ಸು-೧೭೦೦) ಪ್ರಾಮುಖ್ಯವಾದ ಸ್ಥಾನವುಂಟು. ಅದರ ಗದ್ಯಶಕ್ತಿಯೇ ಅದರ ಕಾವ್ಯಶಕ್ತಿ. ಸಂಸ್ಕೃತ ಮತ್ತು ಹಳಗನ್ನಡ ಸಾರವನ್ನು ಹೀರಿ ಆತ್ಮಪ್ರತ್ಯಯದಿಂದ ನಡೆಯುವ ಧೀರಹುಟ್ಟು ಕನ್ನಡ ಶೈಲಿ ತಿರುಮಲಾರ್ಯನದು. ಈ ಶೈಲಿಯಲ್ಲಿ ಸಮತೂಕಲಾಲಿತ್ಯ ಎರಡೂ ಇವೆ. ಶೈಲಿ ತಿಳಿಯಾಗಿ ನಿರರ್ಗಳವಾಗಿ ಹರಿಯುತ್ತದೆ.

ಉದಾಹರಣೆಗೆ ಹೊರರಾಜರ ವಾರ್ತೆ ತಂದ ದೂತರಿಗೆ ಅರಸ ಹೇಳುವುದು.—ಆ ರಾ ಜ ನೃ ಪ ಂ ಅವರೊಳ್ ದಯಾವಲೋಕನಮಂ ಸುಳಿಸಿ "ಅಪ್ರಿಯಮಾದೊಡಂ ಚುನ್ನವಾದೊಡಂ ಜಿಗುಪ್ಸೆಯಾದೊಡಂ ಇರ್ದುದಿರ್ದಂತೆ ಅರಸಂಗೆ ಒಳಓಲೋಗದೊಳ್ ಅರಿಪುವುದೇ ದೂತರ್ಗೆ ನೀತಿ ನೀಮದರಿಂ ಬೆಚ್ಚನೆ ಬಿತ್ತರಿಪುದು"

"ನಿನ್ನೀ ನುಡಿಗಳೆಮಗೆ ಕಿವಿಗೊಳ ವೇಳ್ಕುಮೆಂದು ಕಂಡುದರೊಳ್

ಕೆಲಕೆಲವಂ ಕೂಡಿ ಕಳಿದು ಕಟ್ಟಂಗೆಯ್ಯದೆ ಇರ್ದುದನಿರ್ದಂತೆ ಪೇಳ್. ಅವರಿನ್ನೆಡೆಯೊಳೆಣಿಸಬಾರದುದನೆಣಿಸಿದೊಡಂ ಮಾಡಬಾರದುದ ಮಾಡಿದೊಡಮೆಸಗಬಾರದುದ ನೆಸಗಿದೊಡ ಮದರ್ಕಂಜದಿರ್

"ಒವೊಮ್ಮೆ ಆ ತಿರುಮಲರಾಯಂ ಒಡ್ಡೋಲಗದೊಳ್ ತನ್ನೆಡಬಲದೊಳ್ ನಿಂದಿರ್ದಖಿಳ ಪ್ರಭುಗಳೊಳ್ ಕಟಾಕ್ಷಾಮೃತಮಂ ಕವಿಸಿ "ನಿಮ್ಮ ನಿಮ್ಮ ನಾಡು ಬೀ[illegible] ಳ ಪಸುಗೆಯ ಪರಿಯೆಂತು." ಎನಲ್ ಮೆಯ್ಯಿಕ್ಕಿ ಕಾರಿಗಹಳ್ಳಿಯುವನಿಂತೆಂದಂ:—"ಜೀಯ [illegible]ಳ್, ಎನ್ನ ಪೊಕಳ್ಗೆ ಕೇರಿಗಳಾರು ದೊರೆಗಳು ಮುಮ್ಮರೊಡವುಟ್ಟಿದರ[illegible] ಕಂ [illegible]ಗೊಂಡು ಒಕ್ಕೋರ್ವರೊಂದೊಂದು ಕೇರಿಯೊಳಂ ಸುಗೆಯ್ಯುತ್ತುಮಿರ್ಪೆವು. ಇಂತಿರ್ಪನ್ನೆಗಂ ಎಲ್ಲೆ ಪೊಳದತ್ತಣಿಂ ಆ ರಾಜನೃಪನೊಳ್ ಪಗೆತನಂ ಬಳೆದು ಎಡೆವಿಡದೆ ಕಾದುವೆಡೆಯೊಳ್ ಎಂದಂದಿಂಗೆ ಎನ್ನೊಡವುಟ್ಟಿದರ್ಮೈವರ್ ಕಡಿವಡೆದು ಮಡಿದರ್. ಆ ಬೇಕಿನ್ನನು[illegible]ಂ ದಳಿವನೇ ನಿಶ್ಚಯಿಸಿ ನಿರ್ಭಯದೊಳವನೆಡೆಗೆ ದೂತನನಟ್ಟಿ "ಇಂದಿನ [illegible] ಗುಳದೊಳಿರಲ್ಪಡೆಯುಂ ಪೋರದೆ ನೋಡುತಿರ್ಕೆ. ಆವಿರ್ವರೆ ಕಾದುವಂ. ಆಗಳಾನೀ ಕತ್ತಿಯುಂ ನಿನ್ನ ನೆತ್ತಿಯುಮೊತ್ತಿ ಕತ್ತರಿಪೆಂ. ಅದು ತಪ್ಪಿದೊಡೆನ್ನ ನಾಡು ಬೀಡುಗಳನೊಪ್ಪಿಸಿ ಕಪ್ಪಡಮುಮುಟ್ಟು ಕಪ್ಪರಮಿಡಿದು ಜೋಗಿಯಾಗಿ ಪೋಪೆಂ ಎಂದು ಬೆಸಸಿ ಕಳುಪಿದುದುಂ ಕೇಳ್ದು ಮುಗುಳ್ದವನಂ "ನೀನೆಂದುದೆ ಮಗೆ ಸಂಮತಂ. ಆನುಂ ಇಂದೆನ್ನಯ ಎಡಗೈಯ ಚಮ್ಮಟಿಗೆಯಿಂದಮೆ ನಿನ್ನ ಮೂಗಂ ಪರಿಗಡಿವೆಂ." ಎಂದು ಬೆಸಸಿ ಕಳುಪಿ ಆಗಳೆ ಪಡೆಯುಮೊಡ ಗೊಂಡು ಬರ್ಪುದುಂ, ಆನುಂ ಎನ್ನ ಸರ್ವಬಲದೊಡನೆ ಇದಿರೇರಿ ಪೋದೆಂ. ಆಗಳಿರಲ್ದಳಮುಂ ಬೆರಗುವಟ್ಟು ನಿಟ್ಟಿಸುತಿರ್ಪಿನಂ ಆವಿರ್ವರುಂ ವಾರುವಂಗಳನೇರಿ ರಾವುತತನದ ಬಿನ್ನಣಮುಂ ಮೆರೆಯಲ್ನಡೆಯಿಪುದುಂ ಕುಣಿಯಿಪುದುಂ ಪಾಯಿಪುದುಂ ಸುತ್ತಿಪ್ಪುದುಂ ತೋಳ್ಗಿಪುದುಂ ದುವ್ವಾಳಿಪ್ಪುದುಂ [illegible]ಪುದು ಮೆಂಬಿವು ಮೊದಲಾದ ಗತಿಭೇದಗಳಿಂದಿನಿಸುಂ ಪೊ[illegible]ಗಳಿಯುತ್ತಿರ್ಪಿನಂ ಆನೊತ್ತರಿಸಿ ಕತ್ತಿಯಿಂ ನೆತ್ತಿಯಿಂ ಪೊಯ್ಯಲೊಡಂ ಅವಂ [illegible]ನ್ನ ಬಲಗೈಯ ಲಿಂಗದಣೆದೊಡನೆಡಗೈಯ ಚಮ್ಮಟಿಗೆಯುಂದೆನ್ನ ಮೊಗಮುಂ ಪೊಡೆಯೆ, ಮೂಗು ಪರಿದು ಪರಿಭವಂ ಬಡೆಮೂರ್ಗೆ ವಂದಾಲೋಚಿಸಿದೆಂ"

ಈ ಶೈಲಿಯ ಮುಖ್ಯಗುಣ ಮನೋಜ್ಞವಾದ ವರ್ಣನೆ ಮತ್ತು ಸಾದೃಶ್ಯ ಮಾಲಿಕೆ. ಮೈಸೂರರಸನ ಮಹಿಮೆಯ ವರ್ಣನೆ ಇದು

“ಆ ಮೈಸೂರರಸನನೊಳತಿಮಾನುಷಶಕ್ತಿಯುಂಟು ಆದರ್ಕೆ ಕಾರಣವೇನೆಂದೊಡೆ: ಈ ಯುಗದೊಳಂ ಬೇಳ್ಪರ್ಗೆ ಬೇಳ್ಪುದನೀವ ಶ್ರೀ ವೆಂಕಟೇಶ್ವರನಿವನ ಮೈಮೆಯನರಿಪಲೆಂದೊರ್ವ ತನಗೆ ಮರೆಗೊಂಡು ತಿರುಪತಿಗೆಳ್ತಂದ ವಿಪ್ರಕುಲವ ಕಣ್ಬರಡಾದೆಂಗೆ ತಾನೊಂದು ಕಣ್ಣನಿತ್ತು ಪೆರತೊಂದಂ ಮೈಸೂರ ರಾಜನೃಪನೀವನೆಂದು ಕಳುಪುವುದುಂ; ಈ ಕೌತುಕಮಂ ನಿಟ್ಟಿಸಲೆಂದು ತಿರುಪತಿಯೊಳ್ನೆರೆದಾ ಜಾತ್ರೆಯ ನೆರವಿಯೆಲ್ಲಮುಮವಳ ಬೞಿವಿಡಿದೂರಮುಂತಣ್ಗೆ ಬರಲೊಡನಾ ವಾರ್ತೆಗೇಳ್ದು ರಾಜನೃಪಂ ಮಿಂದು ಮಡಿಯುಟ್ಟು ತನ್ನ ಮನೆಯೊಳ್ನೆಲಸಿ ಮನೆದೇವರೆನಿಪ ಲಕ್ಷ್ಮೀಕಾಂತಂಗಂ..........ಕೈಮುಗಿದು ಆ ಪಾರ್ವಿತಿಯುಂ ಕರೆದು “ಎಲೆ ತಾಯೆ ಮುಂ ನಿನಗೆ ತಿರುಪತಿಯೊಳ್ನೆಲಸಿರ್ದೊರ್ಬಂದು ಕಣ್ಣನಿತ್ತ ಶ್ರೀ ವೆಂಕಟೇಶ್ವರನೀಗಳೆನ್ನ ದರ್ಪಣದೊಳ್ ನಿಂದು ಪೆರತೊಂದು ಕಣ್ಣನಿತ್ತಂ, ಎನ್ನಂ ಕಣ್ದೆರೆದು ನೋಡು ಎಂಬುದುಂ, ಮುಸುಂಕಿದ ಮುಗಿಲನೊಡೆದು ಮೈದೋರುವ ಪೆರೆಯಂತೆಯುಂ, ಪಂಜುಕಳೆದು ತೊಳಗುವ ನೇಸರಂತೆಯುಂ....ಕಣ್ಣಂ ಕಂಡಾ ನೆರೆದ ನೆರವಿ........

ತಿರುಮಲೆಯಾರ್ಯನ ಗದ್ಯದಲ್ಲಿ ಅಕೃತಕವಾದ ವಿಸ್ತಾರ ವೈಭವವಿದೆ. ವಿವರ ವಿವರದಲ್ಲಿಯೂ ನೂತನವಾದ ಕಣ್ಣಿಂದ ನೋಡುವ ಕಲ್ಪನೆಯ ಚಿರಯೌವನವಿದೆ. ಇದು ಶ್ರೀ ರಂಗನಾಥದೇವರ ವರ್ಣನೆ “ಆವುದುಂ ಪಿಡಿವೆಂ ಆವುದಂ ಬಿಡುವೆನೆಂಬ ತ[illegible]ನ ಒಕ್ಕೈಗಳ್ ಅತಿಶಯ ಮೆಲ್ಪಂ ತೊಡೆಯ ಬಲ್ಪಂ ಉಸಿರ್ವೆಲ್ಪಂ ಪೊರೆ[illegible] ಪೆಂಪಂ ಒಡಲಸೊಂಪಂ ಮೊಗದ ಕಳೆಯಂ ನಗೆಯ [illegible] ನೋಟದಿಂಪಂ ನೊಸಲ ನುಣ್ಪಂ....”

ಚಿಕ್ಕದೇವರಾಯ [illegible] ಸಹಜವಾದ ಗದ್ಯಕಾವ್ಯ. ಇದು ತಿರುಮಲೆಯಾರ್ಯನ ವರ್ಣನಶಕ್ತಿಯನ್ನು ತೋರಿಸುವ ಗದ್ಯಗ್ರಂಥ. ಕಥೆಗಳನ್ನು ಹೇಳುವುದರಲ್ಲಿಯೂ ತಿರುಮಲೆಯಾರ್ಯನದು ಎತ್ತಿದ ಕೈ.

“ಬಸವನಪಟ್ಟಣದ ಲಿಂಗೆಹನುಮಪ್ಪನಾಯಕನಿಕ್ಕೇರಿ ವೀರಭದ್ರನಾಯ[illegible] ದೇವ[illegible]ದಿಂ ಯವನಕುಲದ ವಿಜಯಾಪುರದ ಸುರಿತಾಣ ಮಹಮ್ಮದ

ಪಾದುಶಾಹನೆಡೆಗೆ ನಡೆದವನಡಿವಿಡಿದು ರಣದುಲಖಾನನೆಂಬ ಸೇನಾಪತಿಯೊಡನೆ ನಾಲ್ವತ್ತುಂ ಸಾಸಿರವಾರುವಂಗಳುಮಂ ನಾಲ್ವತ್ತಾನೆಯುಮಂ ಲಕ್ಕಪಾಯಿದರಮುಮನೊಡಗೊಂಡು ಬಂದೊಂದೆ ಸೂಳೋಳಿರ್ಕೇರಿಯನೊಕ್ಕಲಿಕ್ಕಿ ದಕ್ಕುಗೊಳಲೊಡವಾತುರುಕವಡೆವಳಂ ಕೊರ್ಬಿಯುರ್ಬಿ ಕನ್ನಡನಾಡೊಳ್ ತನ್ನ ಪೆರ್ವಡಗಿದಿರಪ್ಪರೊರ್ವರುಮಿಲ್ಲೆಂದು ಮುಂತಣ್ಗೆ ನಡೆದು ಸೀರೆಯದ ಘೊರೆಯುಂ ಸೆರೆಗೊಂಡು ಪಾಯ್ದು ತುರುಗೆರೆ ಯವನಂ ತೊತ್ತಳಂದುಳಿದು ಬೆಂಗಳೂರವನಂ ಭಂಗಂಬಡಿಸಿ ಅವರವರ ದೇಶಕೋಶಗಳಂ ಬಸಂಗೆಯ್ದು ಬೆರೆತು ತರುವಾಯೊಳ್ ಕೆಂಗೆಹನುಮಂ ತಕ್ಕುದಲ್ತೆಂದು ನುಡಿದು ತಡೆದೊಡವೊಡಂಬಡದೆ ಕಡುಪಿನೊಳ್ಮಟ್ಟು ಮೀರೆ ಪಟ್ಟಣಮಂ ಬಳಸಿ ವೇಢೈಸಿ ಕಟ್ಟಳವಿಸಿಂದಿಟ್ಟಡಿಯಂ ಪಿಂದೆಗೆಯದೆ ಚಲಂದೊಟ್ಟು ನಡೆದಿಟ್ಟು ಕೆಡಪಿದ ಪೆಣದೊಟ್ಟಲೊಳಗಳಿ ಪೂಣ್ದು ಪಟ್ಟಪಗಲೆ ಕಳ್ಗೊಲೆಗೆ ಬಗೆಯಿಟ್ಟು ಕಟ್ಟುರದೋಳಟ್ಟಳಿಸಿ ಸುರಿದ ಕೈದುವಳೆಗಳವಳಿಯದೆ ಕೋಂಟೆಯಂ ಮುಟ್ಟೆ ಸಿಟ್ಟೀಣಿಗಳನೇರಿ ತಲೆ ಪರಿದು ಪಡಲ್ವಟ್ಟೊಡಂ ಸಿಟ್ಟೋಟದಿಂಡಟ್ಟಳಿವರೆಗವುಡರ್ದಟ್ಟಿಗಳಸಿಟ್ಟಿಗಳಿಂ ದಿರಿದಿರಿದವನ ತಲೆಗೇರಿದ ಸೊರ್ಕಿನನೊಡಸಿಳಿಯಕೆಡಪಲೊಡಂ ಅವಂ ಕೆಟ್ಟು ಮುರಿದು ಬಾಯ್ಬಿಟ್ಟು ಕೆಂಗೆಹನುಮನ ಬಸಿರೊಳ್ ತಲೆಯಿಟ್ಟು ನುಡಿದಂ; "ಎಲೆ ನಾಯಕ, ನೀನೆಂದ ನುಡಿ ನಿಜವಾದುದು. ಆಂ ವಿಜಯಾಪುರವಂ ಪೊರಮಟ್ಟಂದು ಮೊದಲಿಂದುವರೆಗಂ ಮತ್ತಮೇಂ ಪುಟ್ಟಿದಂದು ಮೊದಲಿಂದುವರೆಗಂ ಈ ಪರಿಯ ಬೀರನಂ ಕಂಡುದಿಲ್ಲ. ಅಕಟಕಟಾ! ಮುನ್ನೀತೆರೆದ ಬಲ್ಲಿದನೆಂದು ಬಗೆಯದೆ ಬಲನೆಲ್ಲಮಂ ಬಲಿಯಿತ್ತೆಂ; ಪೆತ್ತ ಗೆಲ್ಲಮಂ ಪೆರಸಾರ್ಚಿದೆಂ; ಪೊತ್ತ ಜಸಮಂ ಪುಯ್ಯೈಸಿಸಿದೆಂ; ಪತ್ತಿದೇಳ್ಗೆಯುಂ ಬಯಲ್ಗಯ್ದೆಂ; ನಿನ್ನ ನುಡಿಯಂ ನೀಳ್ಕರಿಸಿದೆಂ; ಭಿನ್ನತಂತ್ರದೊಪ್ಪೇದಿವರಿದೆಂ; ಮುಂತಣಿರವಿನೋಳ್ಮೋಸವೋದೆಂ; ಪಿಂತಣೋಜೆಯಂ ಬೀಳ್ಪಡಿಸಿದೆಂ; ಈ ಕಡಲುಡಿಗೆಯ ಪೊಡವಿಯೆಡೆಯೊಳಿಡಿದ ಕೂರ್ದೊರೆಗಳೊಳಿನ್ನೆವರೆಗಂ ಎನ್ನ ಪೆಸರ್ಗೇಳ್ದು ಬಸವಳಿಯದರುಂ ಪಳಯಿಗೆಗಂಡಳವುಗಳಿಯದರುಂ ಪೌಜಂ ಕಂಡು ತೇಜಂಗುಂದದವರುಂ ಕೈದುವೆಳಗಿಂಗೆ ಕಣ್ಗೆಡದವರುಮಿಲ್ಲ. ಅಂತಿರ್ಪ ಕೂರ್ಪನೀಪಟ್ಟಣದೊಳ್ ಪೊಟ್ಟುಗೈಯ್ದೆಂ. ಎನ್ನ ಮುಮ್ಮಣೆಯ ತುಳಿಲಾಳ್ಗಳೀಲಗ್ಗೆಯೊಳೀರಾರು ಸಾಸಿರ್ವರಳಿದರ್. ಉಳಿದರುಮೂರೂರಿಗರಿರುಳೊಳ್ ಪೊರ

ಮುಟ್ಟ ಎಸಗುವಟ್ಟುಳಿಯಿಂ ಕಣ್ಗೆಟ್ಟು ಕಟ್ಟಳಿದು ಇಂದು ನಾಳಿನೊಳಿನ್ನಂ ಬಿಟ್ಟು ಪೋಪರ್; ಅವರೇಗೆಯ್ವರ್. ಕಳ್ವವಾರುಮಂಗಳ್ಗ ಮೀಳ್ವ ಕೈದುಗಳ್ಗಂ ಕೊಯ್ವ ತಲೆಗಳ್ಗಂ ಕೊರೆವ ಮೂಗುಗಳ್ಗಂ ಗಣನೆಯಿಲ್ಲ. ಇಟ್ಟೆಡೆಗೆಯ್ದುದರಿಂ ಮೂಗುಬ್ಬಸವಾದದು. ಬಿಟ್ಟುಪೋಪೊಡಂ ಒಟ್ಟೆಯಿಲ್ಲ. ಕೆಟ್ಟ ಕಜ್ಜದೊಳ್ ಕೈಗೊಟ್ಟು ಕಾಪಿಟ್ಟೆಮ್ಮಂ ಕಡೆವಾಯಿಸವೇಳ್ಕುಂ. ಅದರ್ಕೀ ಪಟ್ಟಣದವನ ಕಡೆಗಡಿವರೆಗಮೆಮ್ಮನಾಡುಗರ್ ಕಾಣದಂತೆ ಅವನ ರಾಯಸಮಂ ತೆಗೆದಿತ್ತೊಡಾಂ ಪದುಳದೊಳ್ ಪೋಪೆಂ." ಎಂದನುವೇಳ್ವುದುಮವನುಮಂತೆಗೆಯ್ದಂ.

ಬಳಿಕ್ಕಾತುರುಕಪಡೆವಳಂ ಕಪ್ಪಿನಿಂದೆಳ್ದ ಕಾಡಾನೆಯಂತೆಯುಂ ಪುಲಿವಾಯ್ದುಳಿದ ಪುಲ್ಲೆಯಂತೆಯುಂ ತಡೆಯೊಡೆದ ಪಾವಿನಂತೆಯುಂ ಅಂಟುಗಳಳಿದ ಪಕ್ಕಿಗಳಂತೆಯುಂ ಬಲೆಯಿಂ ತಪ್ಪಿದ ಮೊಲದಂತೆಯುಂ ಬಾಲಂ ಪರಿದ ಪಿಳ್ಳನಂತೆಯುಂ ಕಟ್ಟುಸಡಿಲ್ದ ಕಳ್ಳನಂತೆಯುಂ ಸಿಂದಲ್ಲಿ ಸಿಲ್ಲದೆ ಪಿಂದಿರುಗಿ ನೋಡದೆ ಓಡಿ ತನ್ನ ಬೀಡಂ ಸಾರ್ದಂ."

ತಿರುಮಲೆಯಾರ್ಯನ ಗದ್ಯ ಸಂಸ್ಕೃತ ಕನ್ನಡಗಳ ಸಮಜೋಡಣೆ. ವಿರಕ್ತರಿಗೆ "ಬಿಜ್ಜೆಯೇ ರಾಜ್ಯಮುಂ, ಬಿನಯಮೆ ಧನಮುಂ ವೈರಾಗ್ಯಮೆ ಭಾಗ್ಯಮುಂ ಸೈರಣೆಯೆ ಬೀರಮುಂ ಸತ್ಯವೇ ನೆರವುಂ ಬಿನ್ನಣಮೆ ಬೆಂಬಲಮುಂ, ವಿವೇಕಮೆ ಕಾಪುಂ ನೇಮುಮೆ ಸೇವುಮುಂ ಒಳ್ಪೆ ಬಲ್ಪುಂ ಸಂತಸಮೆ ಸಾಮ್ರಾಜ್ಯಮುಮಾಗಿರ್ಕುಂ"

ಇದು ಲಕ್ಷ್ಮಿಯ ವರ್ಣನೆ—

ಇವಳ್ಗಡ! ಪಾಲ್ಗಡಲ ನೋಂಪಿಯ ಸಂಪದಮುಂ, ಕಮಲವನದೊಳ್ಗಂಪಿನ ಗುಂಪುಂ, ವನಮಾಲಿಯೆರ್ದೆವನೆಯೆಳ್ತೊಳಪ ಮಂಗಲರತ್ನದೀಪಮುಂ, ಪಳನುಡಿವೆಂಡಿರ ಬೈತಲೆಮಣಿಯುಂ, ಎಲ್ಲಾ ಲೋಗುರುಕ್ಕೆವದ ಪಕ್ಕೆಯುಂ, ಎಮ್ಮ ಭಾಗ್ಯದೇಳ್ಗೆಯುಂ, ಮತ್ತಂ ಶೀಲದ ನೆಲೆವೀಡುಂ, ದಯೆಯ ತಾಯ್ಮನೆಯುಂ, ಚಾಗದಾಗರಮುಂ, ಬಿನ್ನಣದ ಬೆಳೆಗೆಯ್ಯುಂ, ಸೌಲಭ್ಯದ ಶಾಲೆಯುಂ, ಒಳ್ಪಿನೋದುವಳಿಯುಂ, ಒಳ್ನುಡಿಯ ಗುಡಿಯುಂ ಮರುಕದ ಕರುವಾಡಮುಂ, ಪಸದನದ ಪಸರಮುಂ, ಗೆಲ್ಲದ ಗರುಡಿಯುಂ,

ಚದುರ ಚೌಕಿಯುಂ, ಐಸಿರಿಯುರಮನೆಯುಂ, ಸಂತಸದಂತವುರಮುಂ, ಸಕಲ ಸದ್ಗುಣಂಗಳಕಣಿಯುಮಾಗಿರ್ಪುದರಿಂ ಎರೆಯನ ಸಿರಿಯೆರ್ದೆಯಂ ಸೆರೆಗೊಂಡು ದಲ್ಲದೆ ಬಗೆಯುಮಂ ಬಂದಿವಿಡಿದಿರ್ಕುಂ. ಆ ಮಾಧವನಃಮಿವಳ ತವರ್ಮನೆಯಂಮನಂಬುಗೆ ಪಾಲ್ಗಡಲನೊಳ್ಪುವಡಿಸಿರ್ಕುಂ. ಎಡೆವಿಡದಿವಳಂ ನಿಟ್ಟಿಸಿ ದಿಟ್ಟಿಯೊಳ್ಕೊಂಡಿರ್ಪುದರಿಂ ಪದ್ಮಾಕ್ಷನೆನಿಸುಗುಂ. ಇವಳೊಡವುಟ್ಟೆಂದು ಚಂದಿರನಂ ಬಗೆದಂದಿರ್ಕುಂ. ಮಿಕ್ಕುದೇಂ, ಆವಗಂ ಜಗಮನೊಗಯಿಪ ಬಿಟ್ಟಿಗೆಯ್ಮೆ ಇವಳೊಲ್ದು ನಿಟ್ಟಿಪ ದಿಟ್ಟಿಯಿಂ ಸಫಲಮೆಂದೆಣಿಸಿರ್ಕುಂ. ಅರಿಯದಂ ಅರಿವಂ ಆರಂ ಆರ್ಪಂ ನಲ್ಲಂ ಪೊಲ್ಲದಂ ಬಡವಂ ಬಲ್ಲಿದನಾಳರಸನೆಂದು ಕಿರಿದು ಪಿರಿದೆನಿಸಿ ಸೃಜಿಸುವಾಗಳಿವಳ ಕಟಾಕ್ಷತಾರತಮ್ಯವನೀಕ್ಷಿಸುತ್ತೆ ಸೃಜಿಸುವಂ."

ತಿರುಮಲಾರ್ಯ ಒಳ್ಳೆಯ ಶೈಲಿಕಾರ. ಇವನದು ಮಾತಿನ ಗರಡಿ. ಪದಗಳು ಅವನ ಮುಂದೆ ನನ್ನನ್ನು ಉಪಯೋಗಿಸು ನನ್ನನ್ನು ಉಪಯೋಗಿಸು ಎಂದು ಕುಣಿಯುತ್ತಿರುತ್ತವೆ. ಮಾತುಗಳಲ್ಲಿ ಕತ್ತಿವರಸೆ ಅಲ್ಲಲ್ಲಿ ಕಾಣುತ್ತದೆ.

"ಬೆರ್ಚಿ ಬಿಗುರ್ತು ಬಿಂಕಂಗುಂದಿ ಜೀವಸಂಗೊಂಡು ಬೆದರಿ ಬೀದಿವರಿದು ಸರಿಯುತ್ತೆ, ಇರ್ತರದೊಳ್ನಿಂದು ನಿಂದಿಸಿ ನೀಳ್ಕಂಪರಂ ನಿಟ್ಟಿಸದೆ ನಿಟ್ಟೋಟದೊಳ್ನಿಂದಲ್ಲಿ ನಿಲ್ಲದೆ ನಿಜನಿವಾಸಮಂ ಸಾರ್ದು,....ಮೊರಸು ಮೋಹರಂ ಮೊನೆಗಾರತನದ ಮೋಡಿಯೊಳ್ ಮುಂತರಿಯ ದಿರ್ಪಿನಮವರ್ ಮೋಸಂಗೊಂಡು ಮುತ್ತಿ ಮೊಗಗೆಡಿಸಿ ಮೋದಿ ಮೂದಲಿಸಿ ಮೂಗಂ ಕೊಯ್ದು ಮೊರೆಯಿಡಿಸಿಯುರೆಯುಟ್ಟೆ ಕೆಟ್ಟು ಮುರಿದೋಡಿದರ್."

ತಿರುಮಲಾರ್ಯನ ಶೈಲಿ ಹಳಗನ್ನಡ ಗದ್ಯಕ್ಕೆ ಒಂದು ವಿಶಿಷ್ಟವಾದ ಶಕ್ತಿಯನ್ನು ಕೊಟ್ಟಿತು. ಕನ್ನಡ ಕಾವ್ಯ ಶೈಲಿಗಳ ಒಳತಿರುಳನ್ನು ಹೀರಿ ಪುಷ್ಟವಾದ ಗಂಡುಹೆಜ್ಜೆಯಲ್ಲಿ ನಡೆದ ನಾನಾ ವಿಧ ಬೆಡಗು ಭಂಗಿಗಳುಳ್ಳ ಗದ್ಯ ಅದು. ಅಚ್ಚುಕಟ್ಟು, ಓರಣ ಸಮತೂಕ ಲಾಲಿತ್ಯ. "ಅಕಟಾ ಆಮಿವರೊಳ್ಸೆಣಸಿದುದು ಕೂಗಿ ಮಾರಿಯುಂ ಕರೆತಂದವೊಲಾದುದು," "ಚೆಲ್ಲಿದ ನೀರಂ ಬರೆದ ರಂಗವಲ್ಲಿಯ ಗೆರೆಗಳಂ ಸಿರಿವೀಥಿಯ ಸಿಂಗರಮಂ ನಿಟ್ಟಿಸುತಂ ಬರೆ" ಮೊದಲಾದ ಸಹಜವಾಣಿಸ್ಫುರಣದಿಂದ, ನಿರರ್ಗಳವಾಗಿ ಯಾವ ತಡೆಯೂ ಇಲ್ಲದೆ ಗಂಭೀರವಾಗಿ ಹರಿಯುವ ಶೈಲಿ ಅದು.

ಇದು ವೀಣಾವಾದನದ ವರ್ಣನೆ—“ವೀಣಾವಾದ್ಯ ಮನವದ್ಯಮೆಂಬುದಿಂದು ನಿಶ್ಚಿತಮಾದುದು; ಗಾನಂ ಮನೋಹಾರಿಯೆಂಬುದನುಭವಕ್ಕೆ ಬಂದುದು; ರೈವತಕರಾಯಂ ಬ್ರಹ್ಮಸಭೆಯೊಳ್ ಗಾಂಧರ್ವಮನಾಲಿಸುತ್ತೆ ಪೋದ ಪೊೞ್ತೞಿಯದಾದೆನೆಂಬುದುಂ ಯುಕ್ತಮೆನಿಸಿರ್ಪುದು; ಗೋಕುಲದೊಳ್ ಕೃಷ್ಣಂ ಕೊಳಲ್ಗೊಳ್ವಿನಮಾದಸಿಯುಂ ಸವಿದು ಮೆಯ್ಮರೆದು ಪಸುಪುಲಿಗಳಾನೆಸಿಂಗಂಗಳ್ಮೊದಲಾದುವು ತಂತಮ್ಮ ಬಿಗುರ್ಪುಜೇರಂಗಳನುೞಿದೊಂದುವೆರಸಿರ್ಪುವು; ಅಚ್ಚರಸಿಯರು ಮಚ್ಚರಿವಡೆದು ಗೋವಳಗನ್ನೆಯರೊಡನೆಚ್ಚಿಳೊಳಿರ್ಪರ್; ಮರಂಗಳುಂ ಮಾನಿಸರಂತೆ ನವಿರ್ಗಳೆದಿರ್ಪುವೆಂಬಿವುಂ ಕರಬದರ ಸದೃಶಮಾದುವು. ಈಯತಿಶಯಮೇನಿತೆಂದು ಬಣ್ಣಿಪೆವು. ಬಿಜ್ಜೆವನೆಯೊಳ್ ಕುವರಂ ಬೀಣೆಗೊಳ್ವಿನಮುಸಿತುಂ ತಂತಿಗಳೊಳಂಕೊರಲೊಳಮೊಂದೆ ನುಣ್ದನಿ ಪೊಣ್ಮಿತೆಂಬಂತೆ ಕೂಡಿದ ಶ್ರುತಿಯ ಸೊಬಗುಂ, ಕತ್ತುರಿಯ ವೀಣೆಯಂ ಬಿರ್ಚಿದೊಡನುಣ್ಮುವ ತನಿಗಂಪಿನಂತೆ ಗಮ್ಮನೆ ಕವಿವ ನಾದಮುಂ ಗಿಳಿಮೂಗಂ ಪೋಲ್ವ ಬಲಗೈಯುಗುರ್ಗಳಿಂ ತಂತಿಗಳಂಪಿಡಿವ ಮಿಂಟುವ ಸೈಪಿನಿಂದೆಯುಂ ಪೆರಗೈವೆರಲ್ಗಳೊಳಾಹತಪ್ರತ್ಯಾಹತಸ್ಫುರಿತಕಂಪಿತಾದಿ ಗಮಕಂಗಳಂ ಪವಣ್ಗೆಯ್ವ ಚಾತುರ್ಯದಿಂದೆಯುಂ ಸ್ವರಂಗಳ್ ತಕ್ಕತಕ್ಕೆಡೆಯೊಳ್ ಮೆಲ್ಪಂ ಬಲ್ಪಂ ನುಣ್ಪಂ ಬಿಣ್ಪಂ ಪಡೆದು ಒಳ್ಪಡಮಿಯೊಡಲಂತೆಲ್ಲೆಡೆಯೊಳಂ ಚೆಲ್ವುವೆತ್ತು ಮನಂಗೊಳಿಸುವುವು. ಕ್ರಮದೊಳೊಂದಕೊರ್ಂದು ಪೆರ್ಚುಗೆವಡೆದು ಬಳೆವ ತಾನಂಗಳ್ ತತ್ತದುಚಿತಸ್ಥಾನಂಗಳೊಳ್ ಜಿಗಿಪೇಱುವ ತೂಗುವ ತೊನೆವ ನಯಂಬಡೆವ ನಿಡಿದೆನಿಸುವ ಸೊಂಪುಗೊಳ್ವ ಪೆಂಪುವಡೆವ ಜೀವಸ್ವರಂಗಳೊಳ್ ನಿಂದು ನಿಂದು ನೆರೆವೇರುವ (?) ಸೊಗಸು ನಿರವಿಸಲರಿದು. ಮತ್ತಮಾನಾದಂ ಬಿಜ್ಜೆವನೆಯೊಳ್ ಬಂದು ನಲಿದು ನರ್ತಿಸುವ ಸರಸತಿಯ ಕಾಲಂದುಗೆಯ ಕಿರುಗೆಜ್ಜೆಗಳಿನಿದನಿಯುಮವಳ ಮುಂಗೈಯೊಳಿರ್ದ ನುಡಿವರಗಿಳಿಯ ಮುದ್ದುದನಿಯುಂ, ಕನ್ನವುರದ ಚೆನ್ನೈದಿಲಿಂದೊಸರ್ವಸಿರಸಕ್ಕೆಮುಸುರ್ವ ಪೆಣ್ದುಂಬಿಗಳ ನುಣ್ದನಿಯುಮೊಂದುವೆರೆದು ಮುಪ್ಪುರಿಗೊಂಡಂತೆ ಮೋಹರಂಬಡೆದಿರ್ಕುಂ. ಅದೇಂ ವಿಚಿತ್ರಮೋ! ತಂತಿಯನೆಲೆಗೆಯ್ದು ಬೆರಲ್ಗಳಿಂದು ಹೃದಯದಾನಂದದನಾಡಿಗಳೊಳಾಡುವಂತೆ ಮನಮಂ ಸೋಲಿಸಿ ಸೊರಗಿಸಿ ಸೊರ್ಕೇರಿಸಿ ಸೊಗಂಬಡಿಸೆ ಆಮುಮಲುಗದಂಗಮುಮಾಡದೆಮೆಯುಮಾಗಿ

ಚಿತ್ರಿಸಿದಂತಿರ್ದುಂ, ಪೊಣ್ಮುವ ಸವಿರಿಂದೆಯುಂ ಪೊನಲಿಡುವಾಲಿನೀರಿಂದೆಯುಂ ಬಿಗಿವ ಕೊರಲ ಸೆರೆಗಳಿಂದೆಯುಂ ಬಿಡದೆ ಕಿವಿಯೊಳ್ಕಾಪುಗೊಂಡಿರ್ಪ ಮನೋವೃತ್ತಿಯಿಂದೆಯುಂ ಚೇತನರೆನಿಸಿರ್ಪೆವು. ಕಿವಿವೊಡೆಯೊಳ್ ತುಂಬಿದಾನಂದಂ ಎರ್ದೆಗಿಳಿದು ಹೃತ್ಕಮಲಮಂ ವ್ಯಾಪಿಸೆ ಚೈತನ್ಯಂ ತದಾತ್ಮಕವಾಗಿ ಪರಿಣತವಾದುದರಿಂ ಪ್ರಪಂಚಮನಿತುಂ ನಾದಮಯಮಾಗಿ ತೋರ್ಪುದು. ಬೇರಂ ತುದಿಯುಂ ಬಿರಿದುದಂ ಬೆಂಡಾದುದಂ ಕಳೆದಾಯ್ದು ಪೊರೆಯೆತ್ತಿದೊಳ್ಗಬ್ಬಿನ ಸೀಯುಂ, ಪಿರಿದುಂ ಕಾಸಿ ಸಕ್ಕರೆವೆರಸಿದ ಚಿನಿವಾಲ ಸವಿಯುಂ, ಆಗಳಳಿದು ತಂದು ಪಿಳಿದ ಪೊಸ ಜೇನ ಸರಿಯಿಂಪುಂ, ಕಾಲದೊಳ್ ಮೋಹರಿಸಿ ಬಳಿದು ಪದದೊಳ್ಪಣ್ತು ನಿದೆನಿಸಿ ನೆಗಳ್ದ ಮಾವಣ್ಣಿನ ಮಾಧುರ್ಯಮುಂ ಇಡರ ಸಾಸಿರದ ಸಾಸಿರದೊಳೊಂದುಂ ಪಾಲಿಂಗೆ ಬಾರದು. ನಾದಮಾಗಿಯುಂ ಕಿವಿಯೊಂದರೊಳೆ ಸಂದಿರ್ಪುದಲ್ತು; ಸಕಲೇಂದ್ರಿಯಂಗಳನೊಂದೆ ವೇಳೆಯೊಳಾನಂದಸಾಗರದೊಳ್ ಮುಳುಂಗಿಪುದು. ಸುಗ್ಗಿಯೊಳ್ ಪೂತ ಮಲ್ಲಿಗೆಯ ಪೊಸ ಪೂದೊಂಬೆಯೊಳ್ ಪೊದಳ್ದು ಪೊಣ್ಮುವ ತನಿಗಂಪಿನಂತೆಯುಂ, ಆಕಂಪಂ ಕವರ್ದು ಸೊರ್ಕಿ ಸುತ್ತಂ ಪರಿವ ತುಂಬಿಗಳೆರಂಕೆವೊಯ್ಲಿಂ ಮುಂ ಬಾವನ್ನಗಾಡೊಳ್ ಪಾವುಗಳ್ ನುಂಗಿದುದರಿಂ ಬಂದ ಬಡತನಮಂ ಕಳೆದು ಬಳೆದು ಮಾಂದೋಪಿನೊಳ್ ಸುರಿವ ಪೂಜೇನ ಸರಿಯೊಳ್ ನನೆದೊಯ್ಯನೆ ತೀಡುವ ತೆಂಗಾಳಿಯ ಸೊಂಕಿನಂತೆಯುಂ, ಆಸೋಂಕಿನಿಂ ಮುಂ ಬಗೆಯೊಳೊಗೆದ ಮದನಾಗ್ನಿ ದಳ್ಳುರಿಗೊಂಡು ಪೊರಪೊಣ್ಮುವಿನಮುದರ್ಕೆ ತಳಿರ್ದೊಂಬೆಗಳಂ ತಾವರೆದಂಟುಗಳಂ ಪೊತ್ತುಂ ಪನ್ನೀರೊಳ್ ನನೆದುಂ ಮಲರ್ವಾಸಿನೊಳ್ ಪೊರಳ್ದುಂ ತಣ್ಪುಗಾಣದ ಬಿರಯಿಗಳವಿರಹಂ ಕಳಿದೊಡಗೂಡುವಾಗಳ್ ತಂತಮ್ಮ ಮೆಯ್ಪುಸುಪಡಂಗಿ ತಣ್ಪುಗೊಳ್ಳುವರೆಗಂ ತಂತಮ್ಮತೋಳ್ಗಳ್ತಣಿವ ವರೆಗಂ ಮಿಕ್ಕಿದೇಂ ಪೊಳ್ತರೆವರೆಗಮುಳ್ಕಿರಿಂದೆಸಗುವ ತಳ್ಕೆಯೊಳ್ ಮತ್ತೆಮತ್ತೇರುವ ಬಿಗುಪಿನಂತೆಯುಂ, ಸೊಗಮುಂ ಸೂರೆಗುಡುತಿರ್ಪುದು. ಎಂತಪ್ಪ ಕಲ್ಲೆರ್ದೆಯವರಾದೊಡಂ ಈತಾನಮನಾಲಿಸುವಿನಂ ಪಗಲಂ ಕಂಡ ಜಕ್ಕವಕ್ಕಿಯಂತೆಯುಂ, ಜೊನ್ನಮನೀಂಟುವ ಚಕೋರದಂತೆಯುಂ, ಕಾರ್ಗಾಲದ ಸೋಗೆಯಂತೆಯುಂ, ಮುಂಬನಿಯುಂಡ ಚಾದಗೆಯಂತೆಯುಂ, ನಿಧಿಯಂ ಕಂಡ ಬಡವನಂತೆಯುಂ, ವರಮಂ ಪಡೆದ ತವಸಿಯಂತೆಯುಂ, ಸಿದ್ಧಿಯಂ ಪಡೆದ

ಯೋಗಿಯುಂತೆಯುಂ, ಇಷ್ಟದೇವತಾಸಾಕ್ಷಾತ್ಕಾರಮಂ ಪಡೆದುಪಾಸಕನಂತೆಯುಂ, ನಲಿದು ನಲವೇರಿ ಪಿಳ್ಗಿ ಪೆರ್ಕಳಂಗೊಂಡು ಸೊರ್ಕಿ ಸೊರಗುವರ್. ಮೆಲ್ಲೆರ್ದೆಯವರಾಲಿಸಿದೊಡಾಲಿಸುವ ಮುನ್ನಮೆ, ಮನಂ ಕರಗಿ, ಹರವಸಗೊಂಡೆಸಗತಕ್ಕುದಿದು ಮಿಕ್ಕುದಿದೆಂಬ ವಿವೇಕಮನುಳಿದು, ರಸಾವೇಶದಿಂದೀ ತಾನದಸವಿಯಂ ಸೇರೆಯೊಳ್ಪೊಗವೊಗೆದೀಂಟಲು ಮೆಯ್ಗೆಲ್ಲಮುಣ್ಬುಗೊಳಲುಂ ಮುಡಿಗೆ ಸೂಡಲುಂ ಕಿವಿವೊಡೆಯೊಳ್ ತುಂಬಿ ಕೊಳಲುಮೆಳಸಿದಂತೆ ಪಲವುಂ ಕೋಟಲೆಗೊಳ್ವರ್. ಅದವರ ತಪ್ಪಲ್ತು. ಬೆಳ್ಪಮಾಸದ ಪೊಚ್ಚಪೊಸಪೂಗಳಂ ಪವಣ್ಗೊಳಿಸಿ ಕೋದೆತ್ತಿದ ವಕುಳಸರದಂತೆಯುಂ, ಸವಣದೊಳೀಳ್ದ ಪೊಸಮಿಸುನಿಯ ಸಲಿಗೆಯಂತೆಯುಂ, ಎಡವರಿಯದೊಂದೆ ತೆರದೊಳ್ ಸುರಿವ ಪೊಸಜೇನ ಪೊನಲಂತೆಯುಮಾದ್ಯಂತದೊಳೇಕನಾದಮೆನಿಸುವ ತಾನದ ಸವಿಯ ಬಲ್ಪಿನ ತಪ್ಪೆಂದು ತಿಳಿಯವೇಳ್ಪುದು. ಈಗಳೀಮಾನವಲೋಕದೊಳ್ ನೆಗಳ್ತೆವೆತ್ತ ಬೀಣೆಗಾರರುಂ ಮುನ್ನಿರ್ದವರುಮೀತೆರದೊಳ್ ಬಿಗುಪಂ ಒಲವಂ ಕಳೆಯಂ ನಾದಮಂ ಪೊಸವಗೆಯ ತಾನಂಗಳಂ ಸಂದರ್ಭಿಸಿದುದಿಲ್ಲೆಂಬುದು ವಿದಿತಮ್ಮೈಸೆ! ಕಿನ್ನರರುಂ ಗಂಧರ್ವರುಮವರೊಳ್ ಪೊಗಳ್ತೆವೆತ್ತ ಹಾಹಾ ಹೂಹೂಪ್ರಭೃತಿಗಳುಂ ತುಂಬುರುನಾರದರುಂ ಆ ಸರಸ್ವತಿ ತಾನುಂ ಪವಣಿಸಿದುದಿಲ್ಲೆಂಬುದುಂ ನಿಕ್ಕುವಂ: ಮೇಣುಂಟಾದೊಡೆ ನಾಡೊಳ್ ನೆಗಳ್ತೆವಡೆಯದಿರ್ಕುಮೆ? ಅನಾದಿಕಾಲದೊಳಿಲ್ಲದ ಸಾಹಿತ್ಯದ ಶಕ್ತಿವಿಶೇಷಂ ವಾಲ್ಮೀಕಿಯಿಂಸುಣ್ಮಿದಂತೆ ಸಂಗೀತದ ಶಕ್ತಿವಿಶೇಷಮುಮೀಗಳೀರಾಯುಗುವರನಿಂ ಪೊಣ್ಮಿದುದು. ಮುಂ ಸ್ವರಭೇಧಮಂ ಲಯಭೇದಮಂ ರಾಗಭೇದಮನರಿಯದ ಪಸುಂಗಳುಂ ಪೊಮ್ಮರಿಯುಂ ಮೋಸಂಗೊಂಡುದು ಬಿಜ್ಜೆಯ ಬಿನ್ನಣಮಲ್ತೆಂದಾ ಕೃಷ್ಣಂ ಈಗಳೀಪೊಸಜಿರಿಜನೊಳ್ ಬಿಜ್ಜೆವಳರನಿಬರುಮಚ್ಚರಿವಡುವಂತೆ ಆನಂದಲತಾಪ್ರತಾನಂಗಳೆನಿಪ ತಾನಂಗಳಂ ಬಿತ್ತರಿಸಿದಂ; ಅಲ್ಲದೊಡಿವು ಗಾಂಧರ್ವಾಸ್ತ್ರಮಂತ್ರದಂತನಿಬರಂ ಮರವಡಿಸಿ ಮೆಯ್ಮರಿಯಿಸುವ ತೆರನಾವುದು? ಈಜಗನ್ಮೋಹನಮಾದ ತಾನದಿರವಿಂತಿರ್ಕೆ. ಈರಾಯುಗುವರಂ ವೀಣೆಯಂ ಬಾಜಿಸಲ್ ಪೊಣ್ಮ ತಾಣಕಮುಮಾಮೆಯ್ಸಿರಿಯುಮಾವೊಗರಸಮುಮೆನ್ನಯ ನಯನಾನಂದಮಾಗಿರ್ಪುದು."

ಅಂದಿನ ಕಾಲಕ್ಕೆ ಅನುಗುಣವಾಗಿ ಹೊಸಹೊಸ ಚಮತ್ಕಾರ ಉತ್ಪ್ರೇಕ್ಷೆ,

ಹಿಂದಲವರು ಹೇಳಿರುವಂತಲ್ಲದೆ ಬೇರೆ ವಿಧವಾಗಿ ಹೇಳಬೇಕು ಎಂಬ ಹಠದಿಂದ ತಿರುಮಲಾರ್ಯನ ಗದ್ಯ ಕೆಲವೆಡೆ ಶುಷ್ಕವಾಗಿಯೂ ಕೃತ್ರಿಮವಾಗಿಯೂ ತೋರುವುದು ನಿಜ. ಆದರೆ ಇವನ ಶೈಲಿ, ಕನ್ನಡ ಗದ್ಯದಲ್ಲಿ ಪ್ರಾಮುಖ್ಯವಾದ ಮೈಲಿಗಲ್ಲು ಎಂಬುದು ನಿರ್ವಿವಾದ. ಈ ಗ್ರಂಥವನ್ನು ಕುರಿತು ಸಿಂಗರಾರ್ಯರ ಪ್ರಶಂಸೆ. 'ಎಸಿತಂದವಾಗಿ ಮೇಲ್ಪುವಡೆದ ಸಬುದಂಗಳ ಸೇರುವೆಯಿಂ ಸರಳಮುಂ ಕರಮೆಸೆವ ಪುರುಳ ಪವಣಿಗೆಯುಂ ಸರಸಮುಮೆನಿಸಿ ತನಿಸೊದೆಯ ಸೋನೆಯಂತೆ ಇನಿದಂ ಕಿವಿಗಳ್ಗೆ ಕರೆಗುಮೀ ತಿರುಮಲಾರ್ಯರ ಬಾಯ್ದೆರೆಯ ಸರಸತಿಯ ಸೈಪುವಡೆದ ಸಾಹಿತ್ಯಸೌಂದರ್ಯ' ಎಂಬ ನುಡಿ ಅತಿಶಯೋಕ್ತಿಯಲ್ಲ.

ಚಿಕ್ಕದೇವರಾಯ ವಂಶಾವಳಿಯೊಂದಿಗೆ ಹಳಗನ್ನಡದ ರೀತಿಯ ಗದ್ಯ ಕಾವ್ಯ ಕೊನೆಯಾಯಿತೆಂದು ಹೇಳಬಹುದು. ಮುಂದೆ ನಾವು ಗಮನಿಸಬೇಕಾದ ಗದ್ಯಗ್ರಂಥ ಮುದ್ರಾಮಂಜೂಷ, ಇದು ನಿಸ್ಸಂದೇಹವಾಗಿ ಹೊಸಗನ್ನಡದ ಗದ್ಯ. ಆದರೆ ಇದರ ಶೈಲಿಯಲ್ಲಿ ಏಮ್ಮುಖತೆ ಇಲ್ಲ, ಸಂಸ್ಕೃತದ ಬೆರಕೆ ಕೆಲವೆಡೆ ಕರ್ಕಶವಾಗಿ ಕನ್ನಡದೊಂದಿಗೆ ಸೇರಿಕೊಂಡಿದೆ. ಹಳಗನ್ನಡ ಹೊಸಗನ್ನಡ ಎಲ್ಲ ಶೈಲಿಗಳೂ ಇದರಲ್ಲಿವೆ. ಕೆಲವೆಡೆ ಕರ್ಮಣಿಪ್ರಯೋಗ ವಿಕಾರವಾಗಿ ಬಂದಿದೆ. ಆದುದರಿಂದ ಕತೆ ಎಷ್ಟೇ ರಸವತ್ತಾಗಿದ್ದರೂ, ಕೆಂಪುನಾರಾಯಣನ ಶೈಲಿಯಲ್ಲಿ ಸಹಜ ಓಟ, ಓಘ, ತೇಜಸ್ಸುಗಳಿದ್ದರೂ, ಇದರ ಕನ್ನಡವನ್ನು ಅಚ್ಚ ಹೊಸಗನ್ನಡ ಶೈಲಿಯ ಆದರ್ಶ ಉದಾಹರಣೆಯಾಗಿ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಈ ಶೈಲಿ ಹಳಗನ್ನಡ ಹೊಸಗನ್ನಡಗಳ ಅಷ್ಟೇನೂ ಹಿತವಲ್ಲದ ಸಮ್ಮಿಶ್ರಣದ ಫಲ.

೬

ಕೆಂಪು ನಾರಾಯಣನ ಕಾಲಕ್ಕೆ ಗದ್ಯ, ಪೂರ್ಣವಾಗಿ ಹೊಸಗನ್ನಡವಾಯಿತು. ಆದರೂ ಹಳಗನ್ನಡದ ಆಕರ್ಷಣೆ, ಅದರ ಸತ್ವಯುಕ್ತವಾದ ಗರಡಿ ಸಾಧನೆ, ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಮುದ್ದಣನನ್ನು ಬಿಡಲಿಲ್ಲ. ವ್ಯಾಯಾಮ ಶಿಕ್ಷಕನಾದ ಮುದ್ದಣ ಸ್ವಚ್ಛವಾದ ಹಳಗನ್ನಡ ಶೈಲಿಯನ್ನು ಪಳಗಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾನೆಂದು ಹೇಳಬಹುದು. ಮುದ್ದಣನ ಮೊದಲನೆಯ ಗ್ರಂಥ ಅದ್ಭುತ ರಾಮಾಯಣ. ಈ ಗ್ರಂಥ ಓದುವುದಕ್ಕೆ

ಸೊಗಸಾಗಿದೆ. ಆದರೆ ಮುದ್ದಣನ ನಿಜವಾದ ಹಳಗನ್ನಡ ಗದ್ಯವಿರುವುದು ರಾಮಾಶ್ವಮೇಧವಲ್ಲಿ. ಇದರ ಕತೆಗೆ ಪ್ರಾರಂಭದ ಮಳೆಗಾಲ ವರ್ಣನೆಯಿಂದಲೂ, ಮುದ್ದಣ ಮನೋರಮೆಯರ ಆಕರ್ಷಕ ಸಂವಾದದಿಂದಲೂ ಕಳೆ ಬಂದಿರುವುದಂತೂ ಇರಲಿ, ಮುದ್ದಣ ತಾನೇ ಹೇಳಿಕೊಂಡಿರುಂತೆ 'ಕರ್ಮಣಿ ಸರದೊಳ್ ಚೆಂಬವಳಂ ಕೋದಂತಿರೆ ರಸವೊಸರೆ ಲಕ್ಕಣಂ ಮಿಕ್ಕಿರೆ ಎಡೆ ಎಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ' ಎಂಬ ಆದರ್ಶವನ್ನು ಬಹುಮಟ್ಟಿಗೆ ಸಾಧಿಸಿದ್ದಾನೆ. ಕನ್ನಡ ನಾಡಿನ ವೃಕ್ಷಗಳ ವರ್ಣನೆ ಇವನ ಗ್ರಂಥದಲ್ಲಿ ಸುಂದರವಾಗಿ ಬಂದಿದೆ. 'ಆಲದ, ಬೇಲದ ಕ್ಕೈಯು, ಬಿಕ್ಕೆಯ ಕಕ್ಕೆಯು, ಹೊನ್ನೆಯ ಬನ್ನಿಯು ಬೇವಿನ ಮಾವಿನ ಮುತ್ತಿಯು ಮುಳ್ತುಗದ ನೆಲ್ಲಿಯು ಕಂಕೆಲ್ಲಿಯು ಶೀರಿಲ ನೆಳಲಿಂ' ಮುದ್ದಣನ ಶೈಲಿಯಲ್ಲಿ ಪದಪ್ರಯೋಗ ತುಂಬ ಉಚಿತವಾಗಿದೆ. 'ಹಯಮಂ ತಾರೆಂಬ ರಾಘವನಂ ತೋರೆಂಬ ಕೆಲಸಾರೆಂಬ ಸೀನಾರೆಂಬ ಪೋರೆಂಬ ಬಾರೆಂಬ ಸಡಗರದ ನುಡಿ. 'ಸೀತೆಯ ಅಲಂಕಾರ ವರ್ಣನೆ ಮುಂದಲದು 'ನಲ್ಗೆಳದಿಯರ್ ಮಲ್ಲಿಕಾಸ್ಮಿತೆಗೆ ಮಲ್ಲಿಗೆಯು ಚೊಲ್ಲೆಯುಮಂ ಕುಂದಕುಟ್ಮಲರದನೆಗೆ ಕುಂದದ ಬಾಸಿಗಮಂ, ಮಂದಗಮನೆಗೆ ಮಂದಾರದ ಬೈತಲೆ ಬೊಟ್ಟಂ ಕಮಲಮುಖಿಗೆ ವಿಮಲ ಕಮಲದಂದುಗೆಯುಂ, ಚಂಪಕ ಸುನಾಸೆಗೆ ಸಂಪಗೆಯೊಡ್ಯಾಣಮಂ ಶಿರೀಷ ಕೋಮಲಾಂಗಿಗೆ ಸಿರಸದ ಕಿರುಮುಗುಳಿಕ್ಕಸರಮಂ ಜಾತಿನಾಯಕಿಗೆ ಜಾತಿಯ ಪಿಂಡುಗಂಕಣಮಂ, ಸೀಮಂತಿನಿಗೆ ಸೇವಂತಿಗೆಯ ತೋಳಬಂದಿಯಂ ಸಮೆದು ಸಿಂಗರಿಸಲೊಡಂ.' ಲವಕುಶರ ಬಾಲವರ್ಣನೆಯೂ ರಾಮಾಶ್ವಮೇಧದಲ್ಲಿ ಸೊಗಸಾಗಿ ಬಂದಿದೆ. 'ಚಲದಿಂ ಮರುಗುವ, ಮರುಗುತಬ್ಬೆಯ ಸಿರ್ಕೆಲದೊಳಂ ಸೆರಗಂ ಸೆಳೆವ, ಸೆಳೆದೋಡೋಡುವ....ಕರ್ಗೋಡಗನಂ ಗಡ್ಡದೊಳೀಳ್ದು ಮರಿ ಸಿಂಗನ ಬಾಲಕ್ಕೆಗಂಟಿಕ್ಕುವ, ಗಂಟಿಕ್ಕಿನಗುವ, ನಕ್ಕು ಮೊಕ್ಕಳಂ ನಲಿವ,ನಲಿದು ಬಂದು ಮುಸಿಯನಪ್ಪುವ, ಪಿಡಿದಪ್ಪಿ ತೊಡೆಯನೇರುವ ತೊಡೆಯನುಳಿದು ಪೆಗಲನಡರ್ವ ಪೆಗಲನಡರ್ದು ಕಿವಿಯನೂದುವ, ಕಿವಿಯನೂದಿ, ತಲೆಯನಲುಗುವ, ತಲೆಯನಲುಗಿ, ಮುಡಿ ಜಡೆಯಂ ಬಿಡುವ, ಬಿಟ್ಟ ಕೆಂಜೆಡೆಯ ತುದಿಗೆ ಬೆಲ್ಲವತ್ತಮಂ ಪೊಲ್ವ, ಪೊಲ್ದಬ್ಬೆಗೆ ತೋರುವ, ಅಬ್ಬೆಗೆ ತೋರಿ ಕೈಪರೆಗುಟ್ಟುವ ಕೈಪರೆಗುಟ್ಟೆಜೆನ್ನೊಳ್ ಮೈಗರೆವ ಗುಂಡಿಗೆಯಂ ಕಳ್ವ, ಕಳ್ದು ಬೈತಿ

ಡುವ, ಬೈತಿಟ್ಟೋರ್ವನಂ ಕಳ್ದನೆಂದೋರ್ವನಂ ಪೇಳ್ವ, ಪೇಳ್ದೊಡನೆ ತಂದೀವ, ತಂದಿತ್ತಡಿಗೆರಗುವ, ಅಡಿಗೆರಗಿ ಪರೆಕೆಗೊಂಬ, ಪರಕೆಗೊಂಡು ತಾಯೆಡೆ ಬರ್ಪ ಬಂದು ತಮ್ಮ ಲೀಲೆಯಂ ಕೇಳಿಪ' (ಆಶ್ವಾಸ ೧೬) ಹೀಗೆ ಮುದ್ದಣನ ಶೈಲಿ ಯಲ್ಲಿ ಸಮತೂಕವೂ ಗಾನಮಾಧುರ್ಯವೂ ಬಿಗಿಯೂ ಇವೆ. 'ಕೆಲರಂ ಕಡಿದಂ ಕೆಲರಂ ಬಡಿದಂ, ಕೆಲರನುಗಿದಂ, ಕೆಲರಂ ಬಿಗಿದಂ ಕೆಲರಂ ಕುರಿದರಿದರಿದಂ, ಕೆಲರಂ ಬಿಗಿದಂ ಕೆಲರ ನಿಟ್ಟಂ ಕೆಲರಂ ಬಿಟ್ಟಂ ಮೊನೆಯೊಳ್' (ಆಶ್ವಾಸ ೧೬) ಮುದ್ದಣನ ಶೈಲಿ ಹೃದ್ಯವಾದ ಗದ್ಯವಾಗಿದೆ.

೭

ಹೀಗೆ ಕನ್ನಡಗದ್ಯ ೯ನೆಯ ಶತಮಾನದ ದುರ್ವಿನೀತಾದಿಗಳಲ್ಲಿ ಅದೃಶ್ಯ ಸರಸ್ವತಿಯಾಗಿ, ಪಂಪಾದಿಗಳ ಚಂಪೂ ಕಾವ್ಯಗಳಲ್ಲಿ ಪದ್ಯಗಳ ಸಾಟಿಯಾಗಿ ವಡ್ಡಾರಾಧನೆ ಚಾವುಂಡರಾಯ ಪುರಾಣಗಳಲ್ಲಿ ಸ್ವತಂತ್ರರೂಪವಡೆದು ಹರಿಹರ ನಲ್ಲಿ ಮಹಾಭಿಷಿಕ್ತವಾಯಿತೆಂದು ಹೇಳಬಹುದು. ಪದ್ಯದ ಜತೆಯಲ್ಲಿಯೇ ಗ್ರಂಥವವನ್ನು ಕಂಡಿರಬಹುದಾದ ಗದ್ಯ, ಏರು ತಗ್ಗುಗಳಲ್ಲಿ ಹರಿದು ಹರಿಹರ ನಲ್ಲಿ ಮಹಾಪ್ರವಾಹವಾಗಿ ಕನ್ನಡ ಜನದ ಬಾಳು, ದೇಸಿ, ಜನಪದಗಳ ಆಡು ಮಾತು ಇವುಗಳನ್ನೆಲ್ಲ ಕೊಂಡು, ಮಹತ್ ಸತ್ಯ ವೇದಾಂತಗಳನ್ನೂ ನಿತ್ಯ ವ್ಯವಹಾರಗಳನ್ನೂ ಸಾಧಿಸಲು ತಾನು ಶಕ್ತನೆಂಬುದನ್ನು ತೋರಿಸಿಕೊಟ್ಟಿದೆ. ಕನ್ನಡ ಗದ್ಯ ಇದುವರೆಗೆ ಸಾಧಿಸದ ಕೆಲಸ ಯಾವುದೂ ಇಲ್ಲ. ಕನ್ನಡ ಜನ ತೆಯ ಬಾಳನ್ನು ತಿದ್ದಲು ಈ ಗದ್ಯವೇ ನಮಗೆ ಗತಿ. ಹೊಸಗನ್ನಡ ಗದ್ಯಕ್ಕೆ ಇಂದು ಎಂದಿಗಿಂತ ಹೆಚ್ಚಾದ ಜವಾಬ್ದಾರಿಯಿದೆ. ಆಧುನಿಕ ಜಗತ್ತಿನ ಜಟಿಲ ಸಮಸ್ಯೆಗಳಿಗೆ ಕನ್ನಡಿಗರನ್ನು ಸಿದ್ಧಮಾಡುವ ಹೊಣೆ ಕನ್ನಡ ಗದ್ಯದ್ದು. ಈ ಕಾರ್ಯದಲ್ಲಿ ಕನ್ನಡ ಗದ್ಯ ಲೇಖಕರು ಹಿಂದೆ ಸಾಧಿಸಿರುವುದೇ ನಮಗೆ ಕೈದೀವಿಗೆ. ನಮಗೆ ಅಪಾರವಾದ ಶಬ್ದರಾಶಿ, ಭಂಡಾರ ದೊರಕಿದೆ. ಆಧುನಿಕ ವಿಜ್ಞಾನ, ಸಮಾಜಶಾಸ್ತ್ರ, ಮನಃಶಾಸ್ತ್ರ, ಅರ್ಥಶಾಸ್ತ್ರ, ತತ್ವಶಾಸ್ತ್ರ ಎಲ್ಲವನ್ನೂ ಚರ್ಚಿಸಲು ಕನ್ನಡದಲ್ಲಿ ಶಬ್ದ ಸಂಪತ್ತಿಯಿದೆ. ಈವರೆಗೆ ಬೆಳೆದು ಬಂದಿರುವ ಗದ್ಯವನ್ನು ಅಭ್ಯಾಸಿಸಿದರೆ ಅಲ್ಲಿ ದೊರಕುವ ಶಬ್ದ ಸಂಪತ್ತು ಆಶ್ಚರ್ಯವನ್ನುಂಟುಮಾಡು ವುದು. ಇದು ನಮ್ಮ ದೊಡ್ಡ ಆಸ್ತಿ.

ಹೊಸಗನ್ನಡ ಗದ್ಯನಿರ್ಮಾಣದಲ್ಲಿ ಪೂಜನೀಯ ಶ್ರೀಮಾನ್ ಎ.ಆರ್. ಕೃಷ್ಣಶಾಸ್ತ್ರಿಗಳ ಸೇವೆ ಹಿರಿದಾದುದು. ಕನ್ನಡ ಗದ್ಯದ ಶಕ್ತಿಯನ್ನೂ ಆ ಗದ್ಯ ಏನನ್ನು ಸಾಧಿಸಬಹುದೆಂಬುದನ್ನೂ ಈ ಮಹನೀಯರು ತೋರಿಸಿಕೊಟ್ಟಿದ್ದಾರೆ. ಇವರ ಹೆಸರು ಕನ್ನಡ ನಾಡಿನಲ್ಲಿ ಮನೆಮಾತಾಗಿದೆ. ವಚನ ಭಾರತದಿಂದ ಜನತೆಗೆ ಭಾರತದಲ್ಲಿ ಒಂದು ಹೊಸ ಉತ್ಸಾಹ ಉಂಟಾಗಿದೆ. ಆಧುನಿಕ ಕನ್ನಡ ಗದ್ಯದ ಶಕ್ತಿ ಏನು, ಸ್ವಭಾವವೇನು, ಸಾಧನೆಯೇನು ಎಂಬುದಕ್ಕೆ ಇವರ ಶೈಲಿಯೇ ಸ್ಪಷ್ಟವಾದ ಉದಾಹರಣೆ.

"ಸಂಸಾರದಲ್ಲಿ ಒಬ್ಬರು ಸೋತಾಗಲೀ ಇಬ್ಬರೂ ಸೋತಾಗಲೀ ಸ್ನೇಹ ಬೆಳೆಯಬೇಕು. ಅದರಿಂದಲೇ ಚಿಂತೆ ಕಷ್ಟಗಳ ನಿವಾರಣೆ; ಸುಖಸಂಪಾದನೆ. ಆದ್ದರಿಂದ ವ್ಯಕ್ತಿಯ ಶೀಲ, ಅದರಲ್ಲಿಯೂ ತ್ಯಾಗ ಕ್ಷಮೆ ಇವು ಮುಖ್ಯ. ಆದ ರಿಂದ ಸಂಸಾರ ಹಸನಾಗುತ್ತದೆ. ಇವುಗಳಿಗೆ ಮೂಲ ಪ್ರೀತಿ, ಪ್ರೇಮ, ವಾತ್ಸಲ್ಯ ಭಕ್ತಿ, ಗೌರವ, ಇತ್ಯಾದಿ. ಇವೆಲ್ಲ ಮೂಲತಃ ಒಂದೇ. ಸ್ಥಾನಭೇದದಿಂದ ಸ್ವಲ್ಪಸ್ವಲ್ಪ ಬಣ್ಣ ಬದಲಾಗಿ ಒಂದೇ ಸ್ನೇಹಭಾವನೆ ಬೇರೆ ಬೇರೆ ಹೆಸರನ್ನು ತಳೆಯುತ್ತದೆ. ಹೀಗೆ ವ್ಯಕ್ತಿಗಳು ಉತ್ತಮಗೊಂಡರೆ ಸಂಸಾರವು ಉತ್ತಮ ವಾಗುತ್ತದೆ. ಏಕೆಂದರೆ ಹತ್ತು ವ್ಯಕ್ತಿಗಳಿಂದ ಒಂದು ಸಂಸಾರ; ಹತ್ತು ಉತ್ತಮ ವಾದ ಸಂಸಾರಗಳಿಂದ ಒಂದು ಶ್ಲಾಘ್ಯವಾದ ಸಮಾಜ; ಸಮಾಜದಿಂದಲೇ ದೇಶ, ರಾಷ್ಟ್ರ ಎಲ್ಲಾ! ಆದ್ದರಿಂದ ಸಾಧಾರಣ ನೀತಿ, ಸಾಂಸಾರಿಕ ನೀತಿ, ವೈಯಕ್ತಿಕ ಗುಣಶೀಲಗಳು, ಇವು ಅತ್ಯಂತ ಮುಖ್ಯವಾದವು. ವ್ಯಕ್ತಿಸಂಪತ್ತೇ ದೇಶಸಂಪತ್ತು--ಆ ಸಂಪತ್ತನ್ನುವೃದ್ಧಿಪಡಿಸುವುದೇ ರಾಜನ ಪ್ರಥಮ ಧರ್ಮ.' (ವಚನ ಭಾರತ; ಪೀಠಿಕೆ)

'ದೇಹವನ್ನು ಕೊಬ್ಬಿಸಬಾರದು: ಹಾಗಾದರೆ ಗೊಬ್ಬರ ಹೆಚ್ಚಾದ ಪಯಿರಿನಂತಾಗುತ್ತದೆ. ಇಂಥ ಪಯಿರಿನಲ್ಲಿ ಹುರವಾಗಿ ಎಲೆ ಬಿಡುತ್ತದೆ: ಹೂವೂ ಹಣ್ಣೂ ಸೊನ್ನೆ. ಹೀಗೆಂದು ದೇಹವನ್ನು ಒಣಗಿಸಬಾರದು. ಏಕೆಂದರೆ ಒಣಗಿದ ಪಯಿರಿನಲ್ಲಿ ಹಣ್ಣಿರಲಿ, ಎಲೆಯೂ ಹೋಗಿ ಬಿಡುತ್ತದೆ. ದೇಹವು ಲಘುವಾಗಿ ಆರೋಗ್ಯವಾಗಿರುವುದರ ಜತೆಗೆ ಬುದ್ಧಿಯು ಹರಿತವಾಗಿರಬೇಕು. ಚಟುವಟಿಕೆಯುಳ್ಳದ್ದಾಗಿರಬೇಕು. ಬುದ್ಧಿ ಮಂದವಾದರೆ ಅದರ ಹಿಂದಿರುವ

ಆತ್ಮದ ದರ್ಶನವು ಮಂಕಾಗುತ್ತದೆ. ಆದುದರಿಂದ ಸಂತತವಾದ ದೇಹಶ್ರಮ ಬುದ್ಧಿ ಶ್ರಮಗಳು ಆವಶ್ಯಕ. ಅವೇ ತಪಸ್ಸು. ದೇಹ ಶೋಷಣೆ ಅಕರ್ಮ ಅಲಸತೆಗಳು ತಪಸ್ಸಲ್ಲ. ಆಹಾರ ದೋಷದಿಂದ ರಾಜಸ ತಾಮಸಗಳು ಹೆಚ್ಚಾದರೆ ದೇಹ ಭಾರವಾಗಿ ಬುದ್ಧಿ ಮಂಕಾಗುವುದು ನಮ್ಮೆಲ್ಲರ ಅನುಭವಕ್ಕೆ ಬಂದಿರುವ ಸಂಗತಿ. ಆದ್ದರಿಂದ ಆಹಾರ ವಿಹಾರ ನಿದ್ರೆ ಎಚ್ಚರ ಕಾರ್ಯ ವಿಶ್ರಾಂತಿ ಇವು 'ಯುಕ್ತ' ವಾಗಿರಬೇಕು. ಅತಿಗೆ ಹೋಗಬಾರದು. ತಪಸ್ಸು ಯಾವಾಗಲೋ ಒಂದು ಗಳಿಗೆ ಕಣ್ಣುಮುಚ್ಚಿಕೊಂಡು ಕುಳಿತಿರುವುದಲ್ಲ. ಮನೋವಾಕ್ಕಾಯಗಳಿಂದ ಸದಾ ಅನುಷ್ಠಾನ ಮಾಡತಕ್ಕದ್ದು. ಇದೇನು ಕಠಿಣವಾದದ್ದಲ್ಲ; ಘೋರವಾದದ್ದಲ್ಲ; ಸರ್ವ ಸಾಧ್ಯವಾದದ್ದು. ಸಾವಿತ್ರಿ ಮಾಡಿದ ತಪಸ್ಸು ಇದೇಯೆ.' (ವಚನ ಭಾರತ ; ಪೀಠಿಕೆ)

'ಅಹಿಂಸೆಯೆಂಬುದು ಅಪರಂಜಿಯ ಹಾಗೆ. ಶುದ್ಧ ಅಪರಂಜಿ ನಾಣ್ಯವಾಗುವುದಿಲ್ಲ; ವ್ಯವಹಾರಕ್ಕೆ ಸಲ್ಲುವುದಿಲ್ಲ. ಅದಕ್ಕೆ ಸ್ವಲ್ಪವಾದರೂ ಪೆಡಸಾದ ಕೆಚ್ಚನೆಯ ತಾಮ್ರ ಬೆರೆಯಬೇಕು. ಹಾಗೆಯೇ ರಾಜನಲ್ಲಿ ಸ್ವಲ್ಪ ಕಾಠಿಣ್ಯಬೇಕು. ರಾಜದಂಡವೇ ಧರ್ಮಾರ್ಥಗಳನ್ನೂ ಧನ ಧಾನ್ಯಗಳನ್ನೂ ರಕ್ಷಿಸತಕ್ಕದ್ದು. ದಂಡದ ಹೆದರಿಕೆಯಿಂದಲೇ ಜನರು ತೆಪ್ಪಗಿರುತ್ತಾರೆ. ದುಷ್ಟ ನಿಗ್ರಹಕ್ಕೆ ಕ್ರೌರ್ಯವೂ ಬೇಕು, ಹಿಂಸೆಯೂ ಬೇಕು. ಆ ಹಿಂಸೆ ಹಿಂಸೆಯಲ್ಲ. ಧರ್ಮ. ರಾಮರಾಜ್ಯದಲ್ಲಿಯೂ ರಾಕ್ಷಸನ ಸಂಹಾರವಾಗಿಯೇ ಆಯಿತು. ಸ್ವಾರ್ಥ ಸಾಧನೆಗೆ ದೇಶದ ಯುವಕರನ್ನು ಬಲಿಕೊಡುವುದು ಹಿಂಸೆಯೇ ಹೊರತು, ಶಿಷ್ಟಪರಿಪಾಲನೆಗೆ ಹಿಂಸಾ ಕ್ರೌರ್ಯಗಳನ್ನು ಆಚರಿಸುವುದು ಪಾಪವಲ್ಲ. ಆದ್ದರಿಂದ ಹಿಂಸಾಕಾರ್ಯಕ್ಕಿಂತಲೂ ಅದರ ಹಿಂದೆ ಇರುವ ಉದ್ದೇಶವೇ ಪ್ರಧಾನ. ಅದಕ್ಕೆ ಕಾರಣಗಳಾದ ಲೋಭ ಗರ್ವ ಕಾಮ ಕ್ರೋಧಾದಿಗಳು ವರ್ಜ್ಯ. ವೈದ್ಯನು ಶಸ್ತ್ರಚಿಕಿತ್ಸೆಮಾಡಿ ಜೀವ ಉಳಿಸಿದರೆ ಅದು ಹಿಂಸೆಯೆನ್ನಿಸುವುದಿಲ್ಲ; ಪಾಪವಾಗುವುದಿಲ್ಲ. ಆದರೆ ಅದೇ ಆಯುಧದಿಂದ ಘಾತುಕನು ಕೊಲೆಮಾಡಿದರೆ ಅದು ಪಾಪ. ಆದ್ದರಿಂದ ಹಿಂಸೆಯೆಂದು ತೋರುವ ಕಾರ್ಯದಲ್ಲಿ ಯಾರು, ಏಕೆ, ಹೇಗೆ ಎಂಬ ಪ್ರಶ್ನೆಗಳ ಉತ್ತರವೂ ಮುಖ್ಯ.' (ವಚನ ಭಾರತ ಪೀಠ)

'ಇವೆಲ್ಲಕ್ಕಿಂತಲೂ ಶೀಲ ಮುಖ್ಯ. ಶೀಲದಿಂದಲೇ ಧರ್ಮ ಸತ್ಯ ನಡತೆ ಬಲ ಸಂಪತ್ತು ಎಲ್ಲವೂ ಲಭಿಸುವುದು. ಹಿಂದೆ ಪ್ರಹ್ಲಾದನು ಇಂದ್ರನನ್ನು ಗೆದ್ದು ತನ್ನ ಶೀಲದಿಂದ ಮೂರು ಲೋಕಗಳನ್ನು ವಶಪಡಿಸಿಕೊಂಡು ಆಳುತ್ತಿದ್ದನಂತೆ. ಆಗ ಇಂದ್ರನು ಬ್ರಾಹ್ಮಣವೇಷದಿಂದ ಅವನಲ್ಲಿಗೆ ಹೋಗಿ ಶಿಷ್ಯವೃತ್ತಿಯಿಂದ ಅವನನ್ನು ಸಂತೋಷಪಡಿಸಿ ಅವನ ಶೀಲವನ್ನೇ ವರವಾಗಿ ಕೇಳಿ ಪಡೆದನಂತೆ. ಇಂದ್ರನು ಹೋದಕೂಡಲೇ ಅವನ ಹಿಂದೆ ಪ್ರಹ್ಲಾದನ ದೇಹದಿಂದ ಒಂದು ತೇಜಸ್ಸಿನ ಮೂರ್ತಿ ಹೊರಹೊರಟದ್ದನ್ನು ನೋಡಿ ಪ್ರಹ್ಲಾದನು ನೀನು ಯಾರು?' ಎಂದು ಕೇಳಿದನಂತೆ. ಅದಕ್ಕೆ ಅದು 'ನಾನು ಶೀಲ, ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ' ಎಂದಿತಂತೆ. ಆಮೇಲೆ ಹೀಗೆಯೇ ತೇಜೋರೂಪಿನಿಂದ ಧರ್ಮವೂ ಸತ್ಯವೂ ನಡತೆಯು ಬಲವೂ ಸಂಪತ್ತೂ ಒಂದೊಂದಾಗಿ ಹೊರಟು ಹೋದುವಂತೆ. ಆದ್ದರಿಂದ ಶೀಲವೇ ಸಕಲಶ್ರೇಯಃಸ್ಸಿಗೂ ಮೂಲ. ಮನಸ್ಸಿನಿಂದಾಗಲೀ ಮಾತಿನಿಂದಾಗಲೀ ದೇಹದಿಂದಾಗಲೀ ಯಾರಿಗೂ ಕೆಡಕುಮಾಡಬಾರದು. ಆದಷ್ಟು ಉಪಕಾರವನ್ನೂ ದಾನವನ್ನೂ ಮಾಡಬೇಕು. ಅನ್ಯರಿಗೆ ಹಿತವಲ್ಲದ ಅಥವಾ ನಾಚಬೇಕಾದ ಕೆಲಸಮಾಡಬಾರದು. ಹತ್ತು ಜನ ಮೆಚ್ಚುವುದನ್ನು ಮಾಡಬೇಕು. ಇದೇ ಸಂಗ್ರಹವಾಗಿ ಶೀಲದ ಸ್ವರೂಪ. ಶೀಲವಂತರಲ್ಲದವರು ಎಲ್ಲಾದರೂ ಸಿರಿವಂತರಾಗಿದ್ದರೆ ಅದನ್ನು ಅವರು ಹೆಚ್ಚುದಿನ ಅನುಭವಿಸುವುದಿಲ್ಲ, ಬೇಗ ಬುಡಮುಟ್ಟ ನಾಶವಾಗುತ್ತಾರೆ' (ವಚನ ಭಾರತ ಪುಟ ೩೩೭)

"ಆಧುನಿಕ ಸಾಹಿತ್ಯದಲ್ಲಿ ಶಾಸ್ತ್ರಗ್ರಂಥಗಳು ಬಹಳ ಕಡಿಮೆ ಎಂಬುದು ಒಂದು ಲೋಪವಾಗಿ ಎಣಿಸಲ್ಪಟ್ಟಿದೆ. ಇದು ಲೋಪ ನಿಜ. ಆದರೆ ಬರೆಯುವವರಿಲ್ಲವೆಂದಲ್ಲ. ಈಗ ಬೇಕಾದಷ್ಟು ಜನರಿದ್ದಾರೆ. ಆದರೆ ಬರೆದು ಏನು ಮಾಡಬೇಕು. ಆ ಪುಸ್ತಕಗಳನ್ನು ಹೇಗೆ ಉಪಯೋಗಿಸುವುದು? ಇದು ಸಮಸ್ಯೆ. ಮೈಸೂರು ದೇಶದ ಹೈಸ್ಕೂಲು ತರಗತಿಗಳಲ್ಲಿ ಕನ್ನಡದ ಮೂಲಕ ಬೋಧನೆಯಾಗಬೇಕೆಂದು ನಿರ್ಧರಿಸಿದಾಗ ಆರು ತಿಂಗಳೊಳಗೆ ಎಲ್ಲ ಶಾಸ್ತ್ರಗಳ ವಿಚಾರವಾಗಿಯೂ ಪಠ್ಯ ಗ್ರಂಥಗಳು ಆದವು. ಅಚ್ಚಾದವು; ವಿದ್ಯಾರ್ಥಿಗಳ ಕೈಗೆ ಬಂದವು. ನಾಳೆ ಕಾಲೇಜಿಗೂ ಕನ್ನಡವೇ ಬೋಧಕ ಭಾಷೆಯಾಗಬೇಕೆಂದು ನಿರ್ಧಾರವಾಗಲಿ, ಆರು ತಿಂಗಳಲ್ಲದಿದ್ದರೆ ವರುಷದಲ್ಲಿ ಬೇಕಾದ ಪಠ್ಯ ಪುಸ್ತಕ

ಗಳಿಲ್ಲ ಬಂದಾವು. ಕನ್ನಡಿಗರಲ್ಲದವರು 'ಪಠ್ಯಪುಸ್ತಕಗಳಿಲ್ಲವೆ?' ಎಂದು ಆಕ್ಷೇಪಣೆ ಹೂಡುವರೇ ಹೊರತು ಕನ್ನಡಿಗರು ಎಂದಿಗೂ ಹೂಡುವಂತಿಲ್ಲ. ಕೆಲವು ದಿನ ಇಂಗ್ಲಿಷ್ ಗ್ರಂಥಗಳು ಸಹಾಯಕ್ಕಿರಲಿ. ಕನ್ನಡದ ಅಲಂಕಾರ ಛಂದಸ್ಸುಗಳನ್ನು ಪಾಠ ಹೇಳುವಾಗ ಸಂಸ್ಕೃತ ಗ್ರಂಥಗಳನ್ನು ನಾವು ಉಪಯೋಗಿಸಿಕೊಳ್ಳುವುದಿಲ್ಲವೆ? ಪುಸ್ತಕಗಳು ದೇಶಭಾಷೆಯಲ್ಲಿ ಆಗುವುದು ಅಸಾಧ್ಯವಾದುದರಿಂದ, ಅದು ಬೋಧನ ಭಾಷೆಯಾಗುವುದು ಅಸಾಧ್ಯ ಎಂಬ ತರ್ಕ ಪೊಳ್ಳು ....ಕನ್ನಡವು ಸಾರ್ವತ್ರಿಕವಾದರೆ ಜನರಿಗೆ ಕನ್ನಡದಲ್ಲಿ ಯೋಚಿಸುವ ಶಕ್ತಿ ತಾನೇ ಬರುತ್ತದೆ. ಕನ್ನಡದಲ್ಲಿ ಓದಬೇಕೆಂಬ ಬಯಕೆ ಬರುತ್ತದೆ. ಓದುವವರು ಹೆಚ್ಚಾಗುತ್ತಾರೆ. ಓದು ರುಚಿಸುತ್ತದೆ. (ಎ. ಆರ್. ಕೃಷ್ಣಶಾಸ್ತ್ರೀ, ಭಾಷಣಗಳು ಮತ್ತು ಲೇಖನಗಳು)

ಚಲನಚಿತ್ರ ಮತ್ತು ಕನ್ನಡ

"ಆಧುನಿಕ ಜೀವನದಲ್ಲಿ ಚಲನಚಿತ್ರವು ಬಹು ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಅದನ್ನು ನೋಡಬೇಕೆಂದು ಅಪೇಕ್ಷೆ ಪಡದವರಿಲ್ಲ–ಪುಣ್ಯಕಥೆಗಾಗಿ, ಸೌಖ್ಯಕ್ಕಾಗಿ, ಸೌಂದರ್ಯಕ್ಕಾಗಿ ಹೊತ್ತು ಹೋಗದ್ದಕ್ಕಾಗಿ ನಾನಾ ಉದ್ದೇಶದಿಂದ ಜನರು ಅದಕ್ಕೆ ಹೋಗುತ್ತಾರೆ; ಬಡವರು ಭಾಗ್ಯವಂತರು, ಹೆಂಗಸರು ಗಂಡಸರು, ಮಕ್ಕಳು ಮುದುಕರು ಎಲ್ಲರೂ ಹೋಗುತ್ತಾರೆ. ಇದು ಇರುವ ಕಡೆಯಲ್ಲಿ ಜನರಿಗೆ ಪುರಾಣ ಬೇಡ, ಕಾವ್ಯವಾಚನ ಬೇಡ, ನಾಟಕ ಬೇಡ. ಏಕೆಂದರೆ ಸಿನಿಮಾ ಮಂದಿರದಲ್ಲಿ ಸುಖಾಸನಾಸೀನರಾಗಿ, ಸ್ನೇಹ ಪ್ರೇಮ ಪಾನ ಧೂಮ ಮುಂತಾದುವುಗಳೊಡಗೂಡಿ ಎರಡು ಮೂರು ಘಂಟೆಗಳೊಳಗೆ ದೇಶ ವಿದೇಶಗಳ ಪ್ರಸಿದ್ಧ ತಾರೆಯರ ಅಭಿನಯವನ್ನು ನೋಡಬಹುದು, ಅವರ ಗಾನವನ್ನು ಕೇಳಬಹುದು. ಇದರಲ್ಲಿ ಪ್ರಪಂಚವೇ ಸ್ಪರ್ಧಿಸುತ್ತದೆ. ಆದ್ದರಿಂದ ಹುರುಳಿರುವುದಕ್ಕೇ ಬೆಲೆ. ಬೆಲೆಯಿರುವುದು ಎರಡು ಮೂರು ತಿಂಗಳು ನಡೆದರೆ ಹುರುಳಿಲ್ಲದ್ದು ಎರಡು ಮೂರು ದಿನಗಳೂ ನಿಲ್ಲುವುದಿಲ್ಲ. ಇವುಗಳನ್ನು ನೋಡಿ ನೋಡಿ ಜನರಿಗೆ ರಸಿಕತೆ ವಿಮರ್ಶೆ ಬುದ್ಧಿಗಳು ಹೆಚ್ಚಾಗಿವೆ. ಆದರೆ ಅದನ್ನು ನೋಡಲು ಒಳಕ್ಕೆ ಹೋಗಬೇಕಾದರೆ ಟಿಕೀಟು ಕೊಡಬೇಕು; ಅವನ್ನು ಕೊಳ್ಳಬೇಕು; ಸಾಲ ಹೇಳಿದರೆ

ಯಾರೂ ಕೇಳುವುದಿಲ್ಲ; ಎಲ್ಲರನ್ನೂ ಬಿಟ್ಟ ಬಿಡುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಹಣ ಕಕ್ಕಬೇಕಾಗುತ್ತದೆ. ಇದರ ರುಚಿಹತ್ತಿದವರು ಉಪವಾಸವೋ ಸಾಲವೋ ಮಾಡಿ, ಹೋಗಿ ನೋಡುತ್ತಾರೆ. ಇದು ಎಷ್ಟೋ ವೇಳೆ ಜೂಜಿಗಿಂತ ಅನರ್ಥ ಕಾರಕವಾಗಿದೆ. ಮಿತಿಯಲ್ಲಿ ಎಲ್ಲ ಒಳ್ಳೆಯದೇ, ಅತಿಯಿಂದ ಅಮೃತವೂ ವಿಷ. ಇದರ ಅತಿಗೆ, ಚಟಕ್ಕೆ, ನನ್ನ ಆಕ್ಷೇಪಣೆ.

"ಇಲ್ಲಿ ನಮಗೆ ಪ್ರಸಕ್ತವಾದ ಸಂಗತಿಯೇನೆಂದರೆ, ಕನ್ನಡ ಪುಸ್ತಕಗಳನ್ನು ಓದುವವರು ಇದರಿಂದ ಕಡಿಮೆಯಾಗಿದ್ದಾರೆ: ಸಿನಿಮಾ ಕಥೆಯಷ್ಟು, ಚಿತ್ರ ದಷ್ಟು ಹಾಡಿನಷ್ಟು ರಮಣೀಯವಾಗಿ ಪುಸ್ತಕ ಬರೆಯಬಲ್ಲವರಾರು? ಅಂಥ ಒಂದು ಪುಸ್ತಕವಿದೆಯೆಂದು ತಿಳಿದರೂ, ಅದು ಎಂದು ಬೇಕಾದರೆ ಅಂದು ಅಂಗಡಿಯಲ್ಲಿ ಸಿಕ್ಕುತ್ತದೆ; ಆದ್ದರಿಂದ ಎಂದಾದರೂ ಕೊಂಡುಕೊಂಡರೆ ಸರಿ ಕೊಂಡುಕೊಳ್ಳುವುದು ತಾನೇ ಏಕೆ? ಯಾರನ್ನಾದರೂ ಕೇಳಿ ತಂದರೆ ಸರಿ; ಯಾರನ್ನು ತಾನೇ ಏಕೆ ಕೇಳಬೇಕು? ಪುಸ್ತಕ ಭಂಡಾರಗಳಿರುತ್ತವಲ್ಲ! ಆದರೆ ಸಿನಿಮಾ ಚಿತ್ರ ಹೊರಟು ಹೋಗಿಬಿಡುತ್ತದೆ. ಅದು ನಮ್ಮನ್ನು ಕಾಯು ವುದಿಲ್ಲ.

"ಈ ಸಂದರ್ಭದಲ್ಲಿ ಒಂದು ಸಮಾಧಾನ. ನಮ್ಮ ದೇಶದ ಚಿತ್ರಗಳು ಪಾಶ್ಚಾತ್ಯ ದೇಶದವುಗಳಷ್ಟು ಅಶ್ಲೀಲವಲ್ಲ; ಎಷ್ಟೋ ಗಂಭೀರವಾಗಿರುತ್ತವೆ. ಅಶ್ಲೀಲವೆಂದರೆ ಯಾವುದು? ಮರ್ಯಾದೆವಂತರಿಗೆ ನಾಚಿಕೆಯುಂಟುಮಾಡು ವುದೇ ಅಶ್ಲೀಲ. ನಾಚಿಕೆಯಾಗದಂತೆ ಮನಸ್ಸು ಮದಡಾಗಿಬಿಟ್ಟರೇನು ಅಶ್ಲೀ ಲವು ಶ್ಲೀಲವಾಗುವುದಿಲ್ಲ; ವಿಟ ಚರ್ಯೆಯು ಶೃಂಗಾರವಾಗುವುದಿಲ್ಲ. ಸಿನಿಮಾ ಕ್ಕಿಂತಲೂ ಅನ್ಯ ಸಾಹಿತ್ಯಗಳಿಂದ ಭಾಷಾಂತರವಾಗಿ ಬರುವ ಕೆಲವು ಕಥೆಗಳು, ಹೀಗೆ ಅಶ್ಲೀಲಗಳಾಗಿರುತ್ತವೆ. ಮಾನವಂತರು ಇವುಗಳನ್ನು ಓದಲು ನಿಜ ವಾಗಿಯೂ ನಾಚಿಕೊಳ್ಳುತ್ತಾರೆ. ನೈಸರ್ಗಿಕವಾಗಿ ನಡೆಯುತ್ತೇವೆಂದು, ಬೀದಿ ಯಲ್ಲಿ ಮಂಚ ಹಾಕಿದ್ದರಿಂದ ಏನು ಪುಣ್ಯ, ಏನು ಪುರುಷಾರ್ಥ?

ಆಟ ಮತ್ತು ಕನ್ನಡ

"ಈ ಸೌಲಭ್ಯಾಕಾಂಕ್ಷೆ, ಭೋಗ ಪ್ರವೃತ್ತಿ, ವಿನೋದಾಸಕ್ತಿ, ಲಘು ಚಿತ್ತವೃತ್ತಿ ಇವು ದೊಡ್ಡ ದೊಡ್ಡವರಲ್ಲಿಯೂ ವಿದ್ಯಾವಂತರಲ್ಲಿಯೂ ಕಂಡು

ಬರುತ್ತವೆ. ಹಿಂದೆ ಇಷ್ಟು ವಿನೋದ ಸಾಧನಗಳಿರಲಿಲ್ಲ; ಇದ್ದವುಗಳಿಂದ ಇಷ್ಟು ಬಾಧಕವಿರಲಿಲ್ಲ. ಬೇಸರವಾಗಿ, ಏನೂ ತೋರದೆ ಹೋದರೆ, ಒಂದು ಪುಸ್ತಕವನ್ನು ಹಿಡಿದುಕೊಂಡು ಕೂರುವುದು ರೂಢಿಯಾಗಿತ್ತು. ಓದಿನಲ್ಲಿ ಸ್ವಾಭಾವಿಕವಾಗಿ ಹುಟ್ಟುವ ಪ್ರವೃತ್ತಿಯೇ ವಿದ್ಯಾವಂತನ ಮುಖ್ಯ ಲಕ್ಷಣ. ಈಗ ಒಟ್ಟನಲ್ಲಿ ಪಾಠಕ್ಕಿಂತ ಆಟ ಪ್ರಧಾನವಾಗಿದೆ; ಆಟ ಆಡುವವರು ಹತ್ತು ಜನವಾದರೆ, ನೋಡುವವರು ನೂರು ಜನ; ಅದರ ವಿಚಾರ ಪ್ರೊಳ್ಳು ಮಾತನಾಡುತ್ತ ಕಾಲ ಕಳೆಯುವವರು, ಕಾಸು ಕಳೆಯುವವರು, ಸಾವಿರ ಜನ; ತಮ್ಮೂರಿನಲ್ಲಿರಲಿ, ಹೊರ ಊರಿನಲ್ಲಿ ಯಾವುದಾದರೂ ದೊಡ್ಡ ಕ್ರಿಕೆಟ್ ಆಟ ನಡೆದರೆ ಅವರು ನೆರೆ ಹೊರೆಯ ರೇಡಿಯೋಗಳಿಗೆ ಅರ್ಧ ರಾತ್ರಿಯಲ್ಲಿ ಮುತ್ತಿಗೆ ಹಾಕಿಬಿಡುತ್ತಾರೆ. ಬರಿಯ ಕ್ರಿಕೆಟ್ ಟೆನಿಸ್‌ಗಳಿಗಾಗಿಯೇ ಎಷ್ಟು ಸಾವಿರ ರೂಪಾಯಿಗಳು ವೆಚ್ಚವಾಗುತ್ತಿವೆಯೆಂಬುದು ಜನಸಾಮಾನ್ಯಕ್ಕೆ ತಿಳಿಯುವುದಿಲ್ಲ. ಸತ್ವ ಶೌರ್ಯದಾಯಕಗಳಾದ ಧೈರ್ಯ ಕಾರ್ಯಗಳ ಮಾತಿರಲಿ, ಬಯಲಲ್ಲಾದರೂ ಓಡಾಡಿದರೆ ಮೈಗೆ ಒಳ್ಳೆಯದು. ಆದರೆ ಬಯಲಾಟಕ್ಕಿಂತ ಒಳಗೆ ಕುಳಿತು ಇಸ್ಪೀಟು, ಪಿಂಗ್‌ಪಾಂಗ್, ಬೆರಳು ಬಿಲ್ಲೆ ಮುಂತಾದ ಆಟಗಳನ್ನು ಆಡುವವರು ಬಹುಜನ. ಓದಿ ಓದಿ ಮರುಳಾದ ಕೂಚಿಭಟ್ಟ—ಎಂದು ಹಿಂದೆ ಹೇಳುತ್ತಿದ್ದರು; ಈಗ ಅದಕ್ಕೆ ವಿರುದ್ಧವಾದ ಒಂದು ಹೇಳಿಕೆಯನ್ನು ಹುಡುಕಬೇಕಾಗಿದೆ. ಜೀವನದಲ್ಲಿ ಘನತ್ವವೂ ವಿಚಾರಪರತೆಯೂ ಹೆಚ್ಚಬೇಕು. ಇಲ್ಲದಿದ್ದರೆ ಅದು ಬೀಳಾಗುತ್ತದೆ; ಜೀವನ ಹೇಗಿದ್ದರೆ ಸಾಹಿತ್ಯ ಹಾಗೆ ಅಗುತ್ತದೆ; ಆ ಸಾಹಿತ್ಯವನ್ನು ಓದಿದವರೂ ಹಾಗೇ ಆಗುತ್ತಾರೆ. ವಿದ್ಯಾವಂತನಾದವನು ನಿತ್ಯವೂ ಏನಾದರೊಂದು ದೊಡ್ಡ ಗ್ರಂಥವನ್ನು, ಅಲ್ಪ ಸ್ವಲ್ಪವಾದರೂ, ಓದುತ್ತಿರಬೇಕು. ಇಲ್ಲದಿದ್ದರೆ ಬುದ್ಧಿ ಬಲಿಯುವುದು ಹೇಗೆ? ಬೆಳೆಯುವುದು ಹೇಗೆ? ಸಜ್ಜನ ಸಂಗದಂತೆ ಸದ್ಗ್ರಂಥಸಂಗವೂ ಆವಶ್ಯಕ. ಹಿಂದಿನ ಸಂಸ್ಕೃತಿಯಲ್ಲಿ ಪಾರಾಯಣ ಪುರಾಣ ಶ್ರವಣಾದಿಗಳು ಈ ಸ್ಥಾನದಲ್ಲಿದ್ದುವು. ಸಾಧಾರಣವಾಗಿ ನವರಾತ್ರಿಯಲ್ಲಿ ಪ್ರತಿಯೊಬ್ಬರೂ ರಾಮಾಯಣ ಪಾರಾಯಣ ಮಾಡುತ್ತಿದ್ದರು: ನಿತ್ಯವೂ ಭಗವದ್ಗೀತೆ, ವಿಷ್ಣುಸಹಸ್ರನಾಮಾದಿಗಳನ್ನು ಹೇಳುತ್ತಿದ್ದರು; ಸ್ತೋತ್ರಗಳನ್ನೋ ದೇವರ ನಾಮುಗಳನ್ನೋ ಪಠಿಸುತ್ತಿದ್ದರು. ಇವೆಲ್ಲಾ ಈಗ ಲುಪ್ತವಾಗಿವೆ; ಅವುಗಳ ಬದಲಿಗೆ

ಯಾವುದೂ ಬಂದಿಲ್ಲ. ಇದರ ಪ್ರತಿಫಲವನ್ನು ಸಾಹಿತ್ಯದಲ್ಲಿಯೂ ನೋಡು ತ್ತೇವೆ. ಈಗ ಸಣ್ಣ ಕಥೆಗಳು, ಕವಿತೆಗಳು, ಹರಟೆಗಳು ಹೆಚ್ಚಾಗಿದೆ. ಚೆನ್ನಾಗಿರಬೇಕೆಂದರೆ ಇದಾವ ಬರವಣಿಗೆಯೂ ಸುಲಭವಲ್ಲ; ಆದರೆ ಚೆನ್ನಾಗಿ ಬರೆಯಬೇಕೆಂಬ ಇಚ್ಛೆಯಾಗಲಿ, ಅದಕ್ಕೆ ತಕ್ಕ ಶ್ರಮವಾಗಲಿ ಜನಕ್ಕೆ ಬೇಕಾ ದಂತೆ ತೋರುವುದಿಲ್ಲ. ಅವರು ಸುಲಭ ಸಂತೃಪ್ತರು. ಈ ವಿಧವಾದ ಕಾವ್ಯ ಜಾತಿಗಳಿಗೆ ಹೆಚ್ಚು ಓದಬೇಕಾದದ್ದಿಲ್ಲ. ಚಿಂತಿಸಬೇಕಾದದ್ದಿಲ್ಲ; ಅವು ಹೋದದ್ದೇ ದಾರಿ. ಈಗಿನ ಅನೇಕ ಲೇಖಕರಿಗೆ ನಿಯಮ ಪರಿಶ್ರಮಗಳು ಬೇಡ; ಅವು ಕೋಟೆನ ಗುಂಡಿಗಳ ಹಾಗೆ!

ಕನ್ನಡದ ಓದುಬರಹ

"ಪ್ರತಿಭಾಸಂಪನ್ನರಾದ ಕನ್ನಡಿಗರು, ಕನ್ನಡದಲ್ಲಿ ಬರೆಯಬೇಕಾದರೆ ಕಷ್ಟವಲ್ಲ. ಕಷ್ಟವಾಗಿರಬಾರದು. ಆದರೆ ಕೆಲವರು ತಮ್ಮ ವಿಚಾರವಾಗಿ ನೃಪತುಂಗನು ಒಂದು ಸಾವಿರ ವರ್ಷಗಳ ಕೆಳಗೇ ಕೊಟ್ಟ "ಕುರಿತೋದದೆ ಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂಬ ಪ್ರಶಸ್ತಿಯ ಸತ್ಯತೆ ಯನ್ನು ಸ್ಥಾಪಿಸಬೇಕೆಂದು ಹಟತೊಟ್ಟಿರುವಂತೆ ಕಾಣುತ್ತದೆ. ಸದಾ ಓದುತ್ತಿ ರಬೇಕಾದದ್ದೇ ವೃತ್ತಿಯಾಗಿ ಉಳ್ಳವರೂ ಕೂಡ ಓದುವುದು ಕಡಿಮೆಯಾಗಿದೆ; ಪರೀಕ್ಷೆಗೆ ಎಷ್ಟು ಓದಿದ್ದರೋ ಪಾಠ ಹೇಳುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಓದುವುದಾಗಿ ಹೋಗಿದೆ. ನಮ್ಮಲ್ಲಿ ಓದುವುದಕ್ಕೆ ಬೇಕಾದ ಸೌಲಭ್ಯ ಗಳು ಕಡಿಮೆ. ಸೌಲಭ್ಯಗಳು ಇರುವ ಕಡೆ ಅವುಗಳನ್ನು ನಾವು ಉಪಯೋ ಗಿಸಿಕೊಳ್ಳುವುದನ್ನು ಅರಿಯೆವು; ಖಂಡನೀಯವಾದ ರೀತಿಯಲ್ಲಿ ನಿಂದನೀಯ ವಾದ ರೀತಿಯಲ್ಲಿ, ಉಪಯೋಗಿಸಿಕೊಳ್ಳುವೆವು. ಪುಸ್ತಕಗಳೂ ಅವುಗಳ ಕಣ್ಣು ಮೂಗುಗಳೂ ನಮ್ಮ ಕೈಯಲ್ಲಿ ಸುರಕ್ಷಿತವಾಗಿರುತ್ತವೆಂಬ ನಂಬಿಕೆಯಿಲ್ಲ. ದೈವಭಕ್ತಿ, ಧರ್ಮಶ್ರದ್ಧೆ, ಪಾಪಭೀತಿ, ಕರ್ತವ್ಯಪರಾಯಣತೆ ಇವುಗಳಲ್ಲಿ ಉದಾ ಸೀನತೆ ಬಂದು, 'ಶಿಸ್ತು' ಇಲ್ಲದೆ, ಇಂದಿನ ಜೀವನವು ಕೆಲವು ವೇಳೆ ಲಂಗುಲಗಾ ಮಿಲ್ಲದ ಕುದುರೆಯಂತೆ ತೋರುತ್ತದೆ; ಇಂದಿನ ಫ್ರಾನ್ಸು ಹಿಂದಿನ ರೋಮ್ ಇವುಗಳನ್ನು ನೆನಪಿಗೆ ತರುತ್ತದೆ.

ಓದು ಕಡಮೆಯಾಗಿರುವುದಕ್ಕೆ ಮತ್ತೊಂದು ಕಾರಣ ಅದರ ಪ್ರಯೋ

ಜನ ದೃಷ್ಟಿ ಮತ್ತು ಇಂದಿನ ವಿಶೇಷ ಪರಿಸ್ಥಿತಿ. ಕೆಲವರು ಎಷ್ಟು ಓದಿದರೂ ಅಷ್ಟೆ. ಕೆಲಸ ಸಿಕ್ಕುವುದಿಲ್ಲ ಎನ್ನುತ್ತಾರೆ. ಮಿಕ್ಕವರು ಎಷ್ಟು ಓದದಿದ್ದರೂ ಚಿಂತೆಯಿಲ್ಲ ಕೆಲಸ ಸಿಕ್ಕುತ್ತದೆ ಎನ್ನುತ್ತಾರೆ. ಅಂತೂ ಅನಾದರ ಸಾಮಾನ್ಯ ವಾಗುತ್ತದೆ........

ತಾಯ್ನುಡಿಯ ಉಪಾಸನೆ

ಹಿಂದೆ ಮಹಾನುಭಾವರಾದ ಗೌತಮಬುದ್ಧ ಮಹಾವೀರರು ಜನದ ಭಾಷೆಯಲ್ಲಿ ಸಾಹಿತ್ಯ ಹುಟ್ಟುವುದಕ್ಕೆ ತಳಹದಿ ಹಾಕಿದರು; ವಚನಕಾರರೂ ದಾಸಭಕ್ತರೂ ಈ ಸಂಪ್ರದಾಯವನ್ನು ಮುಂದುವರಿಸಿ, ಜನಸಾಹಿತ್ಯವನ್ನು ಬೆಳಸಿದರು, ಕನ್ನಡವನ್ನು ಬೆಳಸಿದರು; ಹಿಂದೆ ಕನ್ನಡ ಸಂಸ್ಕೃತಗಳ ಬಲಾ ಬಲ ವಿಚಾರಗಳಲ್ಲಿ ಮೇಲಾಟ ಹೋರಾಟಗಳು ನಡೆದರೂ, ಕನ್ನಡವು ನನ್ನ ದೆಂಬ ಮಮತೆಯು, ಅಭಿಮಾನವು, ಈಚಿನದು; ಕನ್ನಡಿಗರಿಗೆ ಕನ್ನಡದಿಂದಲೇ ಭುಕ್ತಿ. ಕನ್ನಡದಿಂದಲೇ ಮುಕ್ತಿ....ಎಂಬ ತತ್ವವನ್ನು ನಾವು ಪೂರ್ತಿಯಾಗಿ ಗ್ರಹಿಸಿದ್ದು ಈಚೆಗೆ. ಈಗಲೂ ಈ ವಿಚಾರವಾಗಿ ಸ್ವಲ್ಪ ವೀರೋಪಾಸನೆಯಿಲ್ಲ ದಿದ್ದರೆ ಅದು ಬದುಕದು; ಏಕದೇವೋಪಾಸನೆಯಂತೆ ಏಕಭಾಷೋಪಾಸನೆ ಮಾಡಿದರೆ ತಾನೇ ವರ ಸಿಕ್ಕೀತು? ಕನ್ನಡ ಭಕ್ತನು 'ತೈಲಧಾರೆಯಂತೆ ಕನ್ನಡ ದಲ್ಲಿ ಮನವ ಕೊಡು ಇಂಗ್ಲಿಷ್, ಸಂಸ್ಕೃತಾ!' ಎಂದು ಪ್ರಾರ್ಥಿಸಬೇಕು. ವೀರದೀಕ್ಷೆ ವಹಿಸಬೇಕು. ಕನ್ನಡದ ಭಕ್ತರಾಗಿ ಮಿಕ್ಕಭಾಷೆಗಳಿಗೆ ಪೂಜೆ ಸಲ್ಲಿಸುವುದನ್ನು ವಚನಕಾರರಾಗಿದ್ದರೆ ಬಹು ಕಠಿಣವಾದ ಮಾತಿನಲ್ಲಿ ಖಂಡಿಸು ತ್ತಿದ್ದರು. ಈಗ ಅನೇಕ ಸಂಘ ಸಮಾಜಗಳಲ್ಲಿ ಕನ್ನಡದಲ್ಲಿ ಉಪನ್ಯಾಸಗಳಾ ಗುತ್ತವೆ. ಇವುಗಳಲ್ಲಿ ಎಷ್ಟು ಜನಕ್ಕೆ ಸಿಜವಾದ ಆಸಕ್ತಿ ಇರುತ್ತದೆ ಎಂದು ನನಗೆ ಒಂದೊಂದು ಸಾರಿ ಸಂದೇಹ ಹುಟ್ಟುತ್ತದೆ. ಇವುಗಳಲ್ಲಿ ಉತ್ಸವಕ್ಕಾಗಿ ನಡಸಿದವೆಷ್ಟು, ವರದಿಗಾಗಿ ನಡಸಿದವೆಷ್ಟು ಎಂಬ ಸಂದೇಹ ಹುಟ್ಟುತ್ತದೆ.

ಕನ್ನಡಿಗರಲ್ಲಿ ಕಾವು ಸಾಲದು; ಕಾವಿನಿಂದ ಕಾವ್ಯ, ಕಾವಿನಿಂ[illegible] ಕಾ[illegible]; ಕನ್ನಡದ ಕಣ್ಮಣಿಗಳಂತಿರುವ ದೊಡ್ಡ ದೊಡ್ಡ ನಗರಗಳನ್ನು ನೋಡಿ[illegible]. ಈಗ್ಗೆ ಇಪ್ಪತ್ತೈದು ವರ್ಷಗಳಿಗೂ ಈಗಿಗೂ ಏನು ಅಂತರ! ಕನ್ನಡ [illegible]ಕ್ಕೆ ಬಂತು, ಜನದ ಅಭಿಮಾನ ಹೆಚ್ಚಿತು. ಅದು ಬೋಧನ ಭಾಷೆ[illegible]ಕು

ಎಂದು ಸಂತೋಷಪಡುವಷ್ಟರಲ್ಲಿ, ಕನ್ನಡೇತರರು ಅದಕ್ಕೆ ಅಡ್ಡಿ ಹಾಕಿದರು. ತಮ್ಮ ಭಾಷೆಯೂ ಬೋಧನಭಾಷೆಯಾಗಲಿ! ಎಂದರು. ಅವರು ನಮ್ಮಲ್ಲಿ ಬಂದು ನಿಂತು ಬಲವಾದರು, ಭಾಗ್ಯವಂತರಾದರು. ನಾವು ದೌರ್ಬಲ್ಯವನ್ನೂ ದಾರಿದ್ರ್ಯವನ್ನೂ ವರಿಸಿದರೆ ಅವರೇನು ಮಾಡಿಯಾರು? ಅವರ ಧೈರ್ಯ ಸಾಹಸಗಳಿಗೆ ಪ್ರತಿಫಲವಿಲ್ಲವೇ?

ಕನ್ನಡಿಗರಿಗೆ ಕನ್ನಡ ದೇಶದಲ್ಲಿ ಹಿರಿಯ ಆಸ್ತಿಯಾಗಿ ಉಳಿದಿರುವುದು ಅವರ ಕನ್ನಡ ಭಾಷೆ; ಅದನ್ನು ಉಳಿಸಿಕೊಳ್ಳಿ ಎಂದು ಕನ್ನಡಿಗರಿಗೂ ಉಳಿಸಿಕೊಡಿ ಎಂದು ಇತರರಿಗೂ ಪ್ರಾರ್ಥನೆ ಮಾಡಬೇಕಾಗಿದೆ. ಈಗ ಇರುವ ಅಡ್ಡಿ ಅಡಚಣೆಗಳು ಶಾಶ್ವತವಾಗಿರಲಾರವು. ಆದರೆ ಅವು ಹೋಗುವಾಗ ತಮ್ಮಲ್ಲಿ ಒಳ್ಳೆಯದಿದ್ದರೆ ಅದನ್ನು ಗಂಟುಕಟ್ಟಿಕೊಂಡು ಹೋಗುತ್ತವೆ; ಬಿಟ್ಟು ಹೋದುದನ್ನು ಛತ್ರದವರು ಗುಡಿಸಿ ಸಾರಿಸುವುದೇ ದೊಡ್ಡ ಕೆಲಸವಾಗಿಬಿಡುತ್ತದೆ. ದೇವಸ್ಥಾನದ ಗೋಪುರದ ಮೇಲೆ ಸಾಸಿವೆ ಕಾಳಿಗಿಂತ ಚಿಕ್ಕದಾದ ಒಂದು ಆಲದ ಬೀಜ ಬಿದ್ದು, ಕಣ್ಣಿಗೆ ಕಾಣದಂತೆ ಬೇರೂರಿ ಗಿಡವಾದರೆ, ಅದರಿಂದ ಮುಂದೆ ಶಿಖರವು ಚೂರುಚೂರಾಗಿ, ದೇವಾಲಯವು ಪೇಗುಲವಾಗಬಹುದು. ಹಳೆಯಬೀಡಿನಲ್ಲಿ ಹೀಗಾಗಿದೆ. ಈ ಮಾತುಗಳು ಕನ್ನಡ ಒಂದಕ್ಕೇ ಅನ್ವಯಿಸುವುದಿಲ್ಲ; ಎಲ್ಲ ಮಾತೃಭಾಷೆಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ಎಲ್ಲ ಜನರೂ ಈ ಭಾಷಾ ಭಕ್ತಿಪರಾಯಣತೆಯನ್ನು ಅನುಮೋದಿಸುತ್ತಾರೆಂದು ನಂಬುತ್ತೇನೆ.

ಮಹಿಳೆಯರಿಗೆ ಒಂದು ಮಾತು

ನನ್ನ ಅಕ್ಕತಂಗಿಯರೇ, ನೀವು ಮನಸ್ಸು ಮಾಡಿದರೆ ಕಾವ್ಯ ಸಮ್ಮಿತಿಯಿಂದ ಕೋಮಲವಾಗಿ ಉಪದೇಶ ಮಾಡಬಲ್ಲಿರಿ. ಪ್ರಭು ಸಮ್ಮಿತಿಯಿಂದ ಕಠೋರವಾಗಿ ಕಾರ್ಯಮಾಡಬಲ್ಲಿರಿ. ಕಾರ್ಯಮಾಡಿ ಗೆಲ್ಲಬಲ್ಲಿರಿ. ಕಟ್ಟಬಲ್ಲಿರಿ. ಶಿವಾಜಿಯನ್ನು ಸಾಕಿದವರು ನೀವು, ಪ್ರತಾಪನನ್ನು ಪ್ರೋತ್ಸಾಹಿಸಿದವರು ನೀವು. ಕನ್ನಡವನ್ನು ಓದುವವರು ನೀವು, ಕನ್ನಡದ ಅಭಿಮಾನ ಬೆಳೆದಿರುವುದು ನಿಮ್ಮಿಂದ—ಹಿಂದೆ ಮುಂದಾಗಿರುವುದೂ ನಿಮ್ಮಿಂದಲೇ. ನಾನು ನೋಡಿದ ಮಟ್ಟಿಗೆ ಈ ವಿಚಾರದಲ್ಲಿ ಇರುವ ಅನುಕೂಲದಾಂಪತ್ಯ ಹೆಂಡತಿ

ಯಿಂದಲೇ ಗಂಡನಿಗೆ ಬಂದಿರುತ್ತದೆ: ನೀವು ಕನ್ನಡವನ್ನು ಕಾಪಾಡಿಕೊಂಡು ಬಂದರೆ ಅದು ತಾಯಿನುಡಿಯಾಗಿ ಉಳಿಯುತ್ತದೆ, ಬೆಳೆಯುತ್ತದೆ, ಇಲ್ಲದಿದ್ದರೆ ಬಾಯಿಮಾತಾಗಿ ಅಳಿಯುತ್ತದೆ.

"........ಕಾವ್ಯವಾಚನ ಸಂಗೀತಗಳು ಸಾಹಿತ್ಯಕ್ಕೆ ಅಂಗವಾಗಿ ನಾಟಕದ ನಾಂದಿ ಭರತವಾಕ್ಯಗಳಂತಿದ್ದುವು. ಅವೇ ಕಾವ್ಯ ನಾಟಕಗಳಂತೆ ಪ್ರಧಾನವಾಗಿರಲಿಲ್ಲ. ಈಚೆಗೆ ಇವು, ಜೊತೆಗೆ ನರ್ತನ, ಎಲ್ಲೆಲ್ಲಿಯೂ ಹೆಚ್ಚಾಗುತ್ತಿವೆ. ಸಂಗೀತ ಶಾಲೆಯಲ್ಲಿ, ನಾಟಕ ಮಂದಿರದಲ್ಲಿ, ಸಿನಿಮಾಗಳಲ್ಲಿ ಇವು ಬೇಡವೆನ್ನುವುದಿಲ್ಲ; ಇವುಗಳ ಸ್ಥಾನವೇ ಅವು. ಸಾಹಿತ್ಯ ಮಂದಿರದಲ್ಲಿ, ಸಾಹಿತ್ಯವೇ ಹಸು, ಸಂಗೀತಾದಿಗಳು ಅದರ ಬಾಲ. ಹಸು ಬಾಲವನ್ನು ಅಲ್ಲಾಡಿಸಬೇಕೇ ಹೊರತು, ಬಾಲ ಹಸುವನ್ನು ಅಲ್ಲಾಡಿಸಬಾರದು. ಈಚೆಗೆ ಕಾಲೇಜಿನ ಕೆಲವು ವಿದ್ಯಾರ್ಥಿಸಂಘಗಳಲ್ಲಿ ವರ್ಷಾರಂಭ ಭಾಷಣ, ಉಪನ್ಯಾಸ ಮುಂತಾದ ಕಾರ್ಯ ನಡೆಯುವಾಗಲೂ ಅರ್ಥವಾಗದ ಸಿನಿಮಾ ಹಾಡುಗಳು, ಹುಡುಗಿಯರ ನರ್ತನ ಇವುಗಳನ್ನು ನಡಸುವುದು ರೂಢಿಯಾಗುತ್ತಿದೆ. "ಇದಿಲ್ಲದಿದ್ದರೆ ಜನ ಬರುವುದಿಲ್ಲ. ಇದ್ದರೆ ಹೆಚ್ಚು ಜನ ಬರುತ್ತಾರೆ"ಎಂದು ಕಾರಣ ಕೊಡಬಹುದು; ಸಮರ್ಥನೆ ಮಾಡಬಹುದು. ಆದರೆ, ಸ್ಕೂಲಿಗೆ ಹೋಗದಿರುವ ಹುಡುಗರಿಗೆ ಎಷ್ಟು ದಿನ ಪೆಪ್ಪರುಮೆಂಟು ಆಸೆ ತೋರಿಸಿ ಸ್ಕೂಲಿಗೆ ಕಳುಹಿಸಬಹುದು? ಪೆಪ್ಪರ್‌ಮೆಂಟ್ ಮುಗಿದ ಗಳಿಗೆಗೇ ಮನೆಗೆ ಹಿಂತಿರುಗಿ ಬಂದು ಬಿಟ್ಟರೆ ನಮ್ಮ ಉಪಾಯ ಉದ್ದೇಶಗಳೇನಾದುವು? ಹಾಲು ಬೇಕೆನ್ನುವವರು ಹಸುವನ್ನು ಹಿಡಿಯಬೇಕು, ಬಾಲವನ್ನಲ್ಲ.

"ನರ್ತನವೂ ಅಷ್ಟೆ; ಅದಕ್ಕೆ ಭರತಖಂಡದಲ್ಲಿ ಹಿರಿಯ ಸ್ಥಾನವಿದೆ. ಕಾವ್ಯಕ್ಕಿಂತಲೂ ಹಳೆಯದು ನಾಟ್ಯ; ಅದರ ಪ್ರವರ್ತಕ ಸಾಕ್ಷಾತ್ ಪರಮೇಶ್ವರ; ಆಚಾರ್ಯ ಭರತ ಮುನಿ. ಆದ ಮಾತ್ರದಿಂದ ಅದನ್ನು ಎಲ್ಲೆಲ್ಲಿಯೂ ತರುವುದಕ್ಕಾಗುತ್ತದೆಯೇ? ಅದಕ್ಕೂ ಮಿತಿ ಬೇಡವೇ? ಸಕ್ಕರೆ ಸಿಹಿಯಾಗಿರುತ್ತದೆಯೆಂದು ಅದನ್ನು ಅಡಿಗೆಗೆಲ್ಲಾ ಸೆರೆಸೆರೆಯಲ್ಲಿ ತೆಗೆದು ಹುಯ್ಯಬಹುದೇ? ವಿಲಾಸವೂ ವಿಷ್ಪತ್ತೂ ಸ್ವಲ್ಪ ದೂರ ದೂರದಲ್ಲಿರುವುದು ಒಳ್ಳೆಯದೆಂದು ತೋರುತ್ತದೆ.

"ನಾನು ಕೆಲವು ಕರ್ಣಾಟಕ ಸಂಘಗಳ ವಾರ್ಷಿಕೋತ್ಸವಗಳಿಗೆ ಅಧ್ಯಕ್ಷನಾಗಿ ಹೋಗಿದ್ದಾಗ ಇನ್ನೊಂದು ಅನುಭವವುಂಟಾಗಿದೆ. ಸಾಮಾನ್ಯವಾಗಿ ಅಂಥ ಕಾರ್ಯಕ್ರಮದಲ್ಲಿ ಅಧ್ಯಕ್ಷ ಭಾಷಣಕ್ಕೆ ಮೊದಲು ಸಂಗೀತ, ಭಾಷಣದ ನಂತರ ನಾಟಕ ಇರುತ್ತದೆ. ನಾಟಕ, ಬಿಟ್ಟಿ ನೋಡಬಹುದಾದ ನಾಟಕ– ಅದು ಎಂಥ ನಾಟಕವಾದರೂ ಆಗಿರಲಿ– ಇದೆ ಎಂದುಬಿಟ್ಟರೆ ಆ ಸಮಾರಂಭಕ್ಕೆ ನಾಟಕ ನೋಡಲು ಬರುವ ಜನರೇ ಹೆಚ್ಚು; ಹೆಂಗಸರು ಹುಡುಗರೇ ಹೆಚ್ಚು. ಹೆಂಗಸರೂ ಹೆಣ್ಣು ಹುಡುಗರೂ ಗಂಭೀರವಾಗಿರುತ್ತಾರೆ. ಗಂಡು ಹುಡುಗರು ಗಲಾಟೆಗೆ ಆರಂಭಿಸುತ್ತಾರೆ. ಮೊದಲು ಸಂಗೀತವನ್ನು ಆಗಗೊಡಿಸುವುದಿಲ್ಲ, ಆಮೇಲೆ ಅಧ್ಯಕ್ಷ ಭಾಷಣವನ್ನೂ ಆಗಗೊಡಿಸುವುದಿಲ್ಲ. ಇಂಥ ಸಂದರ್ಭಗಳಲ್ಲಿ ನಾಟಕ ಬೇಡವೆಂದು ನಾನು ಹೇಳುವುದಿಲ್ಲ. ಹಾಕಲೇಬೇಕೆಂದರೆ ಅದನ್ನು ಎರಡನೆಯ ದಿನ ಹಾಕಬಹುದು. ಮೊದಲನೆಯ ದಿನದ ಕಾರ್ಯಕಲಾಪಕ್ಕೆ ಹೆಚ್ಚು ಜನ ಬರುವುದಿಲ್ಲವೆಂದರೆ–ಬಂದಷ್ಟೇ ಸಾಕು, ಅವರಿಂದಲೇ ಉಪನ್ಯಾಸಕ್ಕೆ ಸಾಫಲ್ಯ ಎನ್ನಬೇಕಾಗುತ್ತದೆ. ಸಂಸ್ಕೃತಿ ಗೌರವ, ಸಭಾಮರ್ಯಾದೆ ಇವೆರಡನ್ನೂ ಪಾಲಿಸಿಕೊಂಡು ಬರುವುದು ನಮ್ಮ ಅವಶ್ಯಕರ್ತವ್ಯ." (ಭಾಷಣಗಳು ಮತ್ತು ಲೇಖನಗಳು— ಭಾಗ ೧)

ಇಂತಹ ಭಾಷೆಯಿಂದ ಜಗತ್ತಿನಲ್ಲಿ ಸಾಧಿಸಲಾರದ ಕೆಲಸ ಯಾವುದು?*

---

* ಈ ಲೇಖನದಲ್ಲಿ ಶಕಟರೇಫ, ಱಳ ವನ್ನು ಉಪಯೋಗಿಸಿಲ್ಲ.

ಬೇಂದ್ರೆಯವರ ವ್ಯಕ್ತಿತ್ವ

ಶ್ರೀಮಾನ್ ಬೇಂದ್ರೆಯವರನ್ನು ಕಾಣದವರು ಕರ್ನಾಟಕದಲ್ಲಿ ಯಾರೂ ಇಲ್ಲ. ಅವರ ಕವಿತೆಯನ್ನು ಅರಿಯದ ಕನ್ನಡಿಗರು ಭಾರತದಲ್ಲಿಯಾಗಲಿ ಜಗತ್ತಿನಲ್ಲಿಯಾಗಲಿ ಇಲ್ಲ. ಯುದ್ಧಕ್ಕೆ ಮುಂಚಿತವಾಗಿ ಜರ್ಮನಿಗೆ ಹೋಗಿ ಹಿಂದಿರುಗಿದ ನಮ್ಮ ಮಿತ್ರರೊಬ್ಬರು ಆಗ ಜರ್ಮನಿಯಲ್ಲಿದ್ದ ಕನ್ನಡಿಗರಿಗೆಲ್ಲಾ 'ಬೇಂದ್ರೆಯವರು ಪ್ರಸಿದ್ಧ ಕವಿ' ಎಂಬುದು ಗೊತ್ತಾಗಿದ್ದಿತೆಂದು ಹೇಳುತ್ತಾರೆ. ಹಿಂದೀ ಮರಾಠಿ ಇಂಗ್ಲಿಷು ಬಂಗಾಳಿ ಎಲ್ಲಾ ಭಾಷೆಗಳ ಪತ್ರಿಕೆಗಳೂ ಇವರನ್ನು ಕುರಿತ ವಿಮರ್ಶಾತ್ಮಕ ಪ್ರಶಂಸಾತ್ಮಕ ಲೇಖನಗಳನ್ನು ಪ್ರಕಟಿಸಿವೆ.

ಕರ್ನಾಟಕದ ಹಾದಿಗಳೆಲ್ಲಾ ಶ್ರೀಮಾನ್ ಬೇಂದ್ರೆಯವರ ನಡಿಗೆಯಿಂದ ಸವೆದಿವೆ. ಇವರು ಕನ್ನಡ ನಾಡಿನ ಮೂಲೆ ಮೂಲೆಗಳನ್ನೂ ತಿರುಗಿದ್ದಾರೆ. ಇವರ ತೇಜಃಪುಂಜವಾದ ಮುಖವನ್ನು ಒಂದು ಸಲ ನೋಡಿದರೆ ಸಾಮಾನ್ಯವಾಗಿ ಮರೆಯುವುದು ಸಾಧ್ಯವಿಲ್ಲ. ವಿಶಾಲವಾದ ಹಣೆ; ಎತ್ತರವೂ ಕುಳ್ಳೂ ಅಲ್ಲದ ದೇಹ; ಹಾಸ್ಯದಿಂದಲೂ 'ಚಕಮಕ ಚಂಚಲ' ದಿಂದಲೂ ಜ್ಯೋತಿಯ ಕಿಡಿಯಂತೆ ಹೊಳೆಯುವ ಕಣ್ಣುಗಳು, ತಲೆಯ ಮೇಲೇರಿಸಿದ ಖಾದಿ ಅರಿವೆಯ ಟೋಪಿ; ಮುಖದಲ್ಲಿ ಒಂದು ವಿಧವಾದ ಧೈರ್ಯ ಕೆಚ್ಚು ತ್ಯಾಗ ಅನಾಸಕ್ತಿ; ಈ ಪ್ರಪಂಚವನ್ನು ಮರೆತು ಎಲ್ಲಿಯೋ ವಿಹರಿಸುತ್ತಿರುವಂತಹ ದೂರದ ನೋಟ; ಬೇರೆ ಯಾವುದೋ ಉತ್ತಮವಾದ ಲೋಕಕ್ಕೆ ಸೇರಿದವನು ಒಂದು ಗಳಿಗೆ ಬಂದು ನಮ್ಮಲ್ಲಿ ಮಿಳಿತವಾಗುತ್ತಿದ್ದಾನೇನೋ ಎಂಬ ಗಂಭೀರವಾದ ಯೋಗಿಯ ಮುಖಭಾವ. ಈ ಸೈಜವಾದ ಗುಣಗಳಿಂದ ಬೇಂದ್ರೆಯವರು ಸ್ವಾಭಾವಿಕವಾಗಿ ಎಲ್ಲರ ಗಮನವನ್ನೂ ಎಳೆಯುತ್ತಾರೆ. ಅವರ ಸಾನ್ನಿಧ್ಯದಲ್ಲಿರುವಾಗ ಒಂದು ಅದ್ಭುತವಾದ ಸಾತ್ವಿಕವಾದ ಸ್ವಚ್ಛವಾದ ಶಕ್ತಿಯ ಎದುರಿಗೆ ಇರುವ ಮನೋಭಾವ ನಮಗೆ ಉಂಟಾಗುತ್ತದೆ.

ಬೇಂದ್ರೆಯವರ ಪ್ರಸಿದ್ಧಿ ಅವರು ಹೋಗುವುದಕ್ಕಿಂತ ಮುಂಚೆ, ಎಲ್ಲಾ ಕಡೆಗೂ ಹೋಗುತ್ತದೆಯಾದರೂ ಅವರನ್ನು ಮುಖತಃ ನೋಡಿದ ಕೂಡಲೇ ಅವರ ಪ್ರಸಿದ್ಧಿ ಅವರ ಯೋಗ್ಯತೆಗಿಂತ ಅತ್ಯಂತ ಕಡಿಮೆ ಎಂದು ಗೊತ್ತಾಗು

ತ್ತದೆ. ಅವರ ಕಾವ್ಯಗಳಿಗಿಂತ ಅವರು ಹಿರಿಯರು. ಅವರನ್ನು ನೋಡಿದವರಿಗೆ 'ಎಲ್ಲಿಯೋ ಒಂದು ಸ್ಫೂರ್ತಿಯ ಗಳಿಗೆಯಲ್ಲಿ ಇವರಿಂದ ಕಾವ್ಯ ಹೊರಟು ಬಿಟ್ಟಿದೆ' ಎಂಬ ಭಾವ ಬರುವುದಿಲ್ಲ. "ಇಂತಹ ವ್ಯಕ್ತಿ ಇಂತಹ ಮಾತನ್ನು ಹೇಳುವುದು ಸಹಜವಾದುದೇ. ಈ ವ್ಯಕ್ತಿ ನಡೆಸುತ್ತಿರುವ ಜೀವನ ಇವರ ಕಾವ್ಯಕ್ಕಿಂತ ಹಿರಿಯದು. ಇವರಿಂದ ಇನ್ನೂ ಮಹತ್ತರವಾದ ಕಾವ್ಯಸೃಷ್ಟಿಯಾಗುತ್ತದೆ' ಎಂದು ತೋರುತ್ತದೆ. ಶ್ರೀಮಾನ್ ಬೇಂದ್ರೆಯವರ ಬಾಳಿನಲ್ಲಿ ಕೃತಕತೆ, ಎರಡು ಮುಖ ಇಲ್ಲ. ಇವರು ಹೇಳುತ್ತಿರುವುದೂ ಬಾಳುತ್ತಿರುವುದೂ ಒಂದೇ. ಕವಿಗಳ 'ತಲೆಹರಟೆ' ಯನ್ನೂ ಅವರು 'ಹಾರಗುದುರೆ ಸ್ವಾರರಾಗಿ' ಮೆರೆಯುವುದನ್ನೂ ನೋಡಿದವರಿಗೆ, ಬೇಂದ್ರೆಯವರ ಸರಳತೆ, ಬೇಸಗೆಯ ಮಳೆಯ ಮಾರುತದಂತೆ ಚೈತನ್ಯದಾಯಕವಾಗುತ್ತದೆ. ತಮ್ಮದೇ ಧಾಟಿಯಲ್ಲಿ ಶಬ್ದ ಬ್ರಹ್ಮ ಜಾಲವನ್ನೇ ವಿವರಿಸುತ್ತಾ, ಬಲಗೈಯಿನ ಬೆರಳುಗಳಿಂದ ಪುಸ್ತಕದ ಮೇಲೂ ಬಲಗಾಲಿನಿಂದ ನೆಲದ ಮೇಲೂ ನಿಧಾನವಾಗಿ ತಾಳ ಹಾಕುತ್ತಾ ಏಕನಾದ ಕಿಂದರಿ ಜೋಗಿಯಂತೆ ಕೇಳುವವರನ್ನು ಆನಂದ ಕರುಣೆ ಹಾಸ್ಯ ಕೆಚ್ಚು ನೆಚ್ಚು ಭಯ ತ್ಯಾಗ ಆವೇಶದ ತೊಟ್ಟಿಲುಗಳಲ್ಲಿ ಆಡಿಸುತ್ತಾ ಕೊನೆಯಲ್ಲಿ ಇವೆಲ್ಲಾ ಶಬ್ದದ ಇಂದ್ರಜಾಲವೇ ಎಂದು ತೋರಿಸಿದ ಮಾಟಗಾರ ಬೇಂದ್ರೆಯವರು ಇವರೇಯೆ? ಕವಿಯು ಹಾಗೆ ಕಾಣುವುದೇ ಇಲ್ಲವಲ್ಲ?" ಎಂದು ಮಿತ್ರರಿಗೆ ಸಹ ಆಶ್ಚರ್ಯವಾಗುತ್ತದೆ. ಬೇಂದ್ರೆಯವರು ಮಾಟಗಾರರೆಂಬುದರಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲ. ಅವರು ಸ್ವತಃ ಸಂಗೀತಗಾರರೋ ಅಲ್ಲವೋ ನಾನು ಕಾಣೆ. ಆದರೆ ಅವರ ಹಾಡಿಗೆ ಅವರು ಕೊಡುವ ಮಟ್ಟು, ಕವಿತೆ ಅವರಿಗೆ ಹೇಗೆ ಸಹಜವಾಗಿ ಬಂದಿದೆಯೋ ಹಾಗೆಯೇ ಸಹಜವಾಗಿ ಬಂದಿದೆ. ಅದು ಇಂತಹ ರಾಗ ಎಂದು ಶ್ರೀ ಬೇಂದ್ರೆಯವರು ಸಹ ಯಾರಿಗೂ ಯಾವಾಗಲೂ ಹೇಳಲಿಲ್ಲ. 'ನಾನು ಹೀಗೆ ಹಾಡುತ್ತೇನೆ, ಒಳ್ಳೆಯ ಸಂಗೀತಗಾರರು ಇನ್ನೂ ಒಳ್ಳೆ ಧಾಟಿಯಲ್ಲಿ ಹಾಡಬಹುದು' ಎನ್ನುತ್ತಾರೆ. ಪಿಟೀಲು ಮೇಷ್ಟ್ರುಗಳೂ ಹಾರ್ಮೋನಿಯಂ ಮೇಷ್ಟ್ರುಗಳೂ 'ಹಕ್ಕಿ ಹಾರುತಿದೆ, ತುತ್ತಿನ ಚೀಲ, ಮುನ್ನತ್ತುಮೂರು ಕೋಟಿ, ಬೆಳದಿಂಗಳ ನೋಡ' ಇವುಗಳಿಗೆ ತಮಗೆ ಸರಿ ತೋರಿದ ಮಟ್ಟುಗಳನ್ನು ಹಾಕಿ ಹುಡುಗರಿಂದ ಹಾಡಿಸುವುದನ್ನು ಕೇಳಿದ್ದೇನೆ. ಆದರೆ ಅವು ಆಗ ಸಪ್ಪೆಯಾಗಿಯೇ ಕಂಡಿವೆ. ಸ್ವರ

ಡೊಂದಿಗೆ ವೇದ ಬಂದಂತೆ, ಬೇಂದ್ರೆಯವರ ಕವನ ಅದರ ಮಟ್ಟುಗಳೊಂದಿಗೆ ಅವರಿಗೆ ಸಿದ್ಧಿಸಿದೆ. ಆ ಮಟ್ಟು ಅಲೆ ಅಲೆಯಾಗಿ ಎದ್ದು ಆನಂದವಾಗಿ ಮಂಗಳ ಲೋಕದ ಅಂಗಳಕ್ಕೆ ಏರುವುದು ; ಸುಳಿ ಸುಳಿಯಾಗಿ ವಾಚಕನಲ್ಲಿ ರಸಾನುಭವವನ್ನುಂಟುಮಾಡುವುದು. ಈ ಕಾವ್ಯದ ಪೂರ್ಣ ಅನುಭವಕ್ಕೆ ಈ ಕಾವ್ಯದ ಮಾತು ಮಾತ್ರವೇ ಸಾಲದು. ಇದನ್ನು ಸೃಷ್ಟಿಸಿದ ಸಂಸ್ಕೃತಿಯೂ ಬೇಕು ಎಂದು ಗೋಚರವಾಗುವುದು. ಕೆಲವು ಕವನಗಳಂತೂ ಬೇಂದ್ರೆಯ ವರು ಹಾಡಿದಂತೆ ಹಾಡದಿದ್ದರೆ ಸಿದ್ಧಿಸುವುದೇ ಇಲ್ಲ. ಆದರೆ ಬೇಂದ್ರೆಯವ ರೇನೋ ಅದಕ್ಕೆ ಒಂದು ಮಟ್ಟು ಹಾಕಿಲ್ಲ. 'ಪಾತರಗಿತ್ತಿ ಪಕ್ಕ' ಎಂಬುದು ಇದಕ್ಕೆ ಒಂದು ಉದಾಹರಣೆ. ಒಂದು ಸಾಯಂಕಾಲ ಬೆಂಗಳೂರಿನಲ್ಲಿ ಬೇಂದ್ರೆಯವರನ್ನು ಹಿಡಿದುಕೊಂಡು ಹೋಗಿ ಶ್ರೀಮಾನ್ ಪು. ತಿ. ನರಸಿಂಹಾ ಚಾರ್ಯರ ಜನಸ್ಥಾನದ ಆ ದ್ವೀಪದಲ್ಲಿ ಸೆರೆ ಹಾಕಿದೆವು. ಜತೆಯಲ್ಲಿ ಶ್ರೀಮಾನ್ ನಂ. ಶಿವರಾಮಶಾಸ್ತ್ರಿಗಳೂ ಇದ್ದರು. ಬೇಂದ್ರೆಯವರು ಕೆಲವು ಕವನಗಳನ್ನು ಹಾಡಿದ ಮೇಲೆ ಶ್ರೀ. ಶಾಸ್ತ್ರಿಗಳು "ಪಾತರಗಿತ್ತಿ ಪಕ್ಕ" ಹಾಡಿ ಎಂದರು. ಆ ದಿನ ಬೇಂದ್ರೆಯವರಿಗೆ ಸಹ ಆ ಕಾವ್ಯವನ್ನು ಬರೆದ ದಿನ ಉಂಟಾದ ಸ್ಫೂರ್ತಿ ಮತ್ತೆ ಉಂಟಾಗಿದ್ದಿತೆಂದು ತೋರುತ್ತದೆ. ನಮಗಂತೂ ಆ ಹಾಡನ್ನು ಕೇಳಿ ಮತ್ತವಾದ ದುಂಬಿಗಳಂತೆ ಆಯಿತು. ಬೇಂದ್ರೆಯವರು ಮತ್ತೆ ಹಾಡಿ ದರು; ಮತ್ತೆ ಹಾಡಿದರು; ಮತ್ತೆ ಹಾಡಿದರು; ಅವರು ಹಾಡುತ್ತಲೇ ಇದ್ದರು. ನಾವು ಕೇಳುತ್ತಲೇ ಇದ್ದೆವು. 'ಗಾಳಿ ಕೆನೀಲೇನ ಮಾಡಿದ್ದಾರ ತಾನ; ಮದಗುಣಿಕೆಯ ಮದ್ದು ಹುರುಪಿಗಪ್ಪು ಮೆದ್ದು; ಗುಲಬಾಕ್ಷಿಯ ಹೂವ ಚಪಲಾ ಕೇಳತಾವ; ಅಲ್ಲು ಓಡತಾವ ಗಲ್ಲ ತಿವೀತಾವ' ವಾತಾ ವರಣವೆಲ್ಲಾ ಒಂದು ವಿಧವಾದ ಗುಂ ಗುಂ ಗುಂ ಗುಂಗಿನೊಂದಿಗೆ ಸೇರಿಹೋ ಯಿತು. ಮನೆಯಲ್ಲಿದ್ದ ಹೆಣ್ಣುಮಕ್ಕಳಿಗೆಲ್ಲಾ ಹಾಡು ಬಾಯಿಗೆ ಬಂದು ಹೋಯಿತು. ಈಚೆಗೆ ಅದೇ ಕವನವನ್ನು ಅನೇಕರು ಅನೇಕ ಬಗೆಯಲ್ಲಿ ಹಾಡಿದ್ದಾರೆ. ಆದರೆ ಬೇಂದ್ರೆಯವರ ಧಾಟಿಯೇ ಸರಿ ಎನ್ನುವುದು ಅಂದಿ ನಿಂದ ನನಗೆ ಖಚಿತವಾಗಿ ಹೊಳೆದ ಭಾವ.

ನಾನೃಷಿಃ ಕುರುತೆ ಕಾವ್ಯಂ ಎಂಬುದು ಪೂರ್ವಿಕರ ನುಡಿ. ಹಾಗೆಯೇ ಮಗುವಿನಂತಹ ಸರಳವಾದ ಅಕೃತ್ರಿಮವಾದ ಹೃದಯವಿಲ್ಲದವರಿಂದಲೂ ಕಾವ್ಯ

ಸೃಷ್ಟಿ ಸಾಧ್ಯವಿಲ್ಲವೆಂಬುದು ಗೊತ್ತಾಗುತ್ತದೆ. ಶೋಕ ಶ್ಲೋಕತ್ವ ಮಾಗತಃ (ಶ್ಲೋಕ ಶ್ಲೋಕತ್ವ ಮಾಗತಃ —ರಾಮಾಯಣ) ಎಂಬುದು ಪಶುಪಕ್ಷಿ ಮೃಗಗಳ ದುಃಖದಿಂದ ಹೃದಯ ವಿದೀರ್ಣವಾಗಿ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸುವವರ ವಿಷಯದಲ್ಲಿ ಹೇಳಿದ ಮಾತೇ ಹೊರತು, ಆಟಂ ಬಾಂಬು ಕಂಡುಹಿಡಿದ ನರಮೇಧ ಕರ್ತೃಗಳಿಗೆ ಅನ್ವಯಿಸುವುದಿಲ್ಲ — ಇಂಥವರಿಗೂ ಅನ್ವಯಿಸುವ ಕವಿತೆಯೊಂದನ್ನು ಬೇಂದ್ರೆ ಬರೆದಿದ್ದಾರೆ- ಇರಲಿ; ಬೇಂದ್ರೆಯವರದು ಇಂತಹ ಮಗುವಿನೋಪಾದಿಯಲ್ಲಿಯ ಸರಳತೆ. ಅವರ ಸರಳತೆ ನೋಡಿದರೆ ತಮ್ಮ ಮಹಿಮೆ ಇನರಿಗೆ ತಿಳಿದೇ ಇಲ್ಲವೇನೋ ಎನ್ನಿಸುತ್ತದೆ. ಹಿಂದೆ ತಿಳಿಸಿದ ಪು. ತಿ. ನರಸಿಂಹಾಚಾರ್ಯರ ಜನಸ್ಥಾನದ ಶಿಬಿರದಿಂದ ರಾತ್ರಿ ಹಿಂದಿರುಗುತ್ತಿರುವಾಗ, ಶ್ರೀಮಾನ್ ಸಿಟ್ಟೂರು ಶ್ರೀನಿವಾಸರಾಯರೂ ಬೇಂದ್ರೆಯವರೂ ಹಿಂದೆಂದೂ ಸಿಕ್ಕದಿದ್ದ ಅಸಾಧ್ಯ ಮಳೆಗೆ ಸಿಕ್ಕಿದರು. ಆಗ ಅರ್ಧ ರಾತ್ರಿಯ ಮೇಲಾಗಿದ್ದಿತು. ಹಾಸ್ಯದ ಮಾತುಗಳಲ್ಲಿಯೂ ಮಾತಿನ ಕಟಿಕಿಯಲ್ಲಿಯೂ ಇಬ್ಬರೂ ಒಬ್ಬರನ್ನೊಬ್ಬರು ಮೀರಿಸಿದವರೆ. ಮಳೆ ಪಟಪಟನೆ ಬಾಣದೋಪಾದಿಯಲ್ಲಿ ರಾಚುತ್ತಿದ್ದಿತು. ಹುಡುಗರು ಮಳೆಯಲ್ಲಿ ನೆನೆಯುತ್ತಾ ಹೋಗುವಂತೆ ಇಬ್ಬರೂ ನಿಧಾನವಾಗಿ ವಿನೋದದ ಮಾತುಗಳನ್ನಾಡುತ್ತಾ ನಗುತ್ತಾ ನಗರದ ಮತ್ತೊಂದು ತುದಿಯಲ್ಲಿದ್ದ ಶ್ರೀನಿವಾಸರಾಯರ ಮನೆ ಸೇರಿದರು. ಮಾರನೆಯ ಬೆಳಿಗ್ಗೆ ಬೇಂದ್ರೆಯವರನ್ನು ನಾನು ನೋಡಿದಾಗ ಅವರು ಬಿಗಿಯಾಗಿ ಮೇಲಕ್ಕಾದ ಬನೀನು ಹಾಕಿಕೊಂಡಿದ್ದರು. ಕತ್ತಿನ ಗುಂಡಿ ಹಾಕುವಂತೆಯೇ ಇರಲಿಲ್ಲ. ನಾನು 'ಇದೇನು ಬೇಂದ್ರೆಗಳೇ, ಯಾರದೋ ಅಂಗಿ ಸಿಗಹಾಕಿಕೊಂಡು ಬಿಟ್ಟಿದ್ದೀರಿ, ನಿಮಗೆ ಅರ್ಧ ಮೈಗೆ ಸಹ ಸಾಕಾಗುವದಿಲ್ಲವಲ್ಲ?' ಎಂದೆ. ಬೇಂದ್ರೆಯವರು ಸಿಟ್ಟೂರರ ಕಡೆ ಕೈ ತೋರಿಸಿ 'ನಾನು ಬರೆದುದಕ್ಕೆ ದುಡ್ಡು ಕೊಡುವವರು ಇವರು. ಆದುದರಿಂದ ಇವರ ಮೈ ಬೆಳೆಯುವಂತೆ ಇಲ್ಲ. ಅದು ಅಲ್ಪ ಪ್ರಾಣ. ಆ ಅಲ್ಪ ಪ್ರಾಣದ ಅಂಗಿ ಈ ಮಹಾ ಪ್ರಾಣಕ್ಕೆ ಅರ್ಧ ಅಂಗಿ' ಎಂದರು. [ಗಾಂಧಿಯವರಲ್ಲಿ ಆರೇ ಬಟ್ಟೆಗಳಿವೆ ಎನ್ನುತ್ತಾರೆ. ಬೇಂದ್ರೆಯವರು ಬನೀನು ಒಣಗುವವರೆಗೆ ಬೇರೆಯವರ ಬನೀನನ್ನೇ ಹಾಕಿಕೊಂಡು ಇರುತ್ತಾರೆ.] ಆದರೆ ಈ ಸರಳತೆ ಮೌಢ್ಯದ ಸರಳತೆಯಲ್ಲ. ಒಂದು ದಿನ ಬೇಂದ್ರೆಯವರು ಶ್ರೀಮಾನ್ ಮಾಸ್ತಿಯವರ

ಆರಾಮು ಕುರ್ಚಿಯ ಮೇಲೆಯೇ ಮಲಗಿ ಬೆಳಗಾಯಿತು. 'ಯಾಕೆ ಸ್ವಾಮಿ ಹಾಸಿಗೆ ಹಾಸಿಕೊಳ್ಳಲೇ ಇಲ್ಲವಲ್ಲ' ಎಂದೆ. 'ಆದರಿಂದ ನಿದ್ರೆ ಏನೂ ಕಡಿಮೆಯೇ ಆಗಲಿಲ್ಲ' ಎಂದರು. ಶ್ರೀಮಾನ್ ಮಾಸ್ತಿಯವರು 'ಏಳಿಸಿ ಹಾಸಿಗೆ ಹಾಸಿ ಕೊಡೋಣ ಅಂತ ನೋಡಿದೆ. ಆದರೆ ಗಾಢವಾದ ಇವರ ನಿದ್ರೆ ನೋಡಿ ಏಳಿಸುವುದಕ್ಕೆ ಮನಸ್ಸು ಬರಲಿಲ್ಲ' ಎಂದರು. ಕ್ರಿಪ್ಸ್‌ನ್ನು ನೋಡು ವುದಕ್ಕೆ ಹೋದಾಗ ಗಾಂಧಿಯವರು ಸೋಡಾ ಗಾಡಿಯ ಸೋಡಾ ಪೆಟ್ಟಿಗೆಯ ಮೇಲೆಯೇ ಕುಳಿತುಕೊಂಡು ಹೋದರು. ಅನಾಸಕ್ತರ ಮಾರ್ಗಗಳೆಲ್ಲಾ ಒಂದೇ. ಅಲ್ಪವಾದುದರಲ್ಲಿ ಪೂರ್ತಿ ಸೋಲುತ್ತಾರೆ. ಮುಖ್ಯವಾದುದರಲ್ಲಿ ಒಂದು ರೇಣುವಿನಷ್ಟೂ ಸೋಲುವುದಿಲ್ಲ, ವಜ್ರಕ್ಕಿಂತ ಕಠಿಣವಾದವರಾದರೂ ಹೂವಿಗಿಂತ ಮೃದು. ಈ ಸಮರಸ ಬೇಂದ್ರೆಯವರ ಸಂಸ್ಕೃತಿಯ ಫಲ. ಅವರು ಪೂರ್ಣವಾಗಿ ನಮ್ಮ ಸಂಸ್ಕೃತ, ಸಂಸ್ಕೃತಿಯಲ್ಲಿ ಬೆಳೆದವರು. ಸಂಸ್ಕೃತ ಬಲ್ಲ ವರು ಕನ್ನಡವನ್ನು ಹೇಗೆ ಸೇವಿಸಬಹುದೆಂಬುದಕ್ಕೆ ಅವರ ಬಾಳು ಉದಾ ಹರಣೆ. ಅವರ ಶ್ರದ್ಧೆಯನ್ನೂ ಅನಾಸಕ್ತಿಯನೂ ಸಾತ್ವಿಕತೆಯನ್ನೂ ನೋಡಿ ದರೆ ಇವರು ಯಾವುದಾದರೂ ದೇವತೆಯ ಉಪಾಸಕನೋ, ಕನ್ನಡ ನಾಡಿನ ಕಾರಣ ಪುರುಷ, ಮುಂದೆ ಬರುವುದನ್ನು ಅರಹುವ ಬೇಹುಗಾರ ಈತನೋ ಎಂದು ಭಾಸವಾಗುತ್ತದೆ. ಬಾಳಿನ ಹೋರಾಟವೆಲ್ಲಾ ಈ ಮನಸ್ಸಿನ ಮೇಲೆ, ಮನಸ್ಸನ್ನು ಮೃದುಮಾಡಿ ಆರ್ದ್ರವಮಾಡಿ ಸಾಗಿದೆ. ವಿಧಿ ಕೊಟ್ಟ ಏಟುಗಳಿಂದ ಹೃದಯ ಕಲ್ಲಾಗಿಲ್ಲ. ಅಣ್ಣತಮ್ಮಂದಿರು ಮಾಡಿದ ಮೋಸದಿಂದ ಮನುಷ್ಯತ್ವ ದಲ್ಲಿ ನಂಬಿಕೆ ಕೆಟ್ಟಿಲ್ಲ. ನಮ್ಮವರ ಪರಸ್ಪರ ಕಲಹದಿಂದ, ನಮ್ಮ ನಾಡು ಮಂಗಳದ ನಾಡಾಗುವುದೆಂಬ ನಚ್ಚು ನಂದಿಲ್ಲ. ವಿಶ್ವಾಮಿತ್ರನ ಅಸ್ತ್ರಗಳನ್ನೆಲ್ಲಾ ನುಂಗಿ ನಿಂತ ವಸಿಷ್ಠನ ಬ್ರಹ್ಮದಂಡದಂತೆ, ಕೆಚ್ಚೆದೆಯ ಆಳು ತನ್ನ ಬಾಳಿನ ಗುರಿಯನ್ನು ಮರೆಯದೆ ನಿಂತಿದ್ದಾನೆ. ಹೀಗೆ ತನ್ನ ಬಾಳನ್ನೇ ತಾನು, ಮೂರ ನೆಯ ಮನುಷ್ಯನಂತೆ ನೋಡುವುದರಿಂದಲೇ ಬೇಂದ್ರೆಯವರ ಶುದ್ಧವಾದ ಆತ್ಮ ವನ್ನು ಯಾವ ಕೊಳೆಯೂ ಯಾವ ದುಃಖವೂ ಹೆಚ್ಚುಕಾಲ ಮಲಿನವಾಗಿಡಲು ಶಕ್ತವಾಗುವುದಿಲ್ಲ. ಮೋಡ ಮುಚ್ಚಿದ ಸೂರ್ಯ, ಒಂದು ಗಳಿಗೆಯ ನಂತರ ಹೊರಕ್ಕೆ ಬಂದು ಮತ್ತೆ ಜಗತ್ತಿಗೆ ಆಹ್ಲಾದವನ್ನುಂಟು ಮಾಡುವಂತೆ ಪ್ರತಿ ಯೊಂದು ದುಃಖ ಬೇಸರಿಕೆಯ ಪ್ರಸಂಗದಿಂದಲೂ ಬೇಂದ್ರೆ ಹೆಚ್ಚು ಕಾಂತಿ

ಯುಕ್ತರೇ ಆಗಿ ಹೊರಬಂದು ತಮ್ಮ ಕಾವ್ಯವಾಹಿನಿಯ ಅಮೃತಧಾರೆಯಿಂದ ಈ ಸತ್ತ ಜಗಕ್ಕೆ ಚೈತನ್ಯವನ್ನಿತ್ತಿದ್ದಾರೆ.

ಬೇಂದ್ರೆಯವರ ಜತೆಯಲ್ಲಿರುವುದು ಹಾಸ್ಯದ ಅಲೆಗಳ ಮೇಲೆ ಲಾಸ್ಯವಾಡಿದಂತೆ. ಹಾಸ್ಯಕ್ಕೆ ಒಳಗಾಗದ ಯಾವ ಸನ್ನಿವೇಶವೂ ಇಲ್ಲವೇ ಇಲ್ಲವೆಂಬುದು ರಸಿಕರ ಮತ. ಇದು ಬೇಂದ್ರೆಯವರ ನಿತ್ಯದ ಅನುಭವ. ಒಂದು ಸಲ ಬೇಂದ್ರೆಯವರ ಗೌರವಕ್ಕಾಗಿಯೇ ಒಂದು ನಾಟಕವನ್ನು ಏರ್ಪಡಿಸಿದ್ದಿತು. ಬೇಂದ್ರೆಯವರನ್ನು ಒಳಕ್ಕೆ ಕರೆದುಕೊಂಡು ಹೋಗಲು ನಾಟಕ ಗೃಹದ ಮುಂದೆ 'ದೊಡ್ಡ ಮನುಷ್ಯರು' ನಿಂತಿದ್ದರು. ಬೇಂದ್ರೆಯವರನ್ನು ದಾರಿಯಲ್ಲಿ ಯಾರೋ 'ಐದು ನಿಮಿಷ' ಎಂದು ಮನೆಗೆ ಎಳೆದುಕೊಂಡು ಹೋದರು. ದಾಕ್ಷಿಣ್ಯಪರರೂ ಸರ್ವಜನ ಸುಲಭರೂ ಆದ ಅವರು ನಾಟಕಕ್ಕೆ ಹೊತ್ತಾಯಿತು ಎಂದು ಹೇಳಿದುದಕ್ಕೆ ಕರೆದವರು 'ನಾಟಕ ನಿಮ್ಮ ಗೌರವಕ್ಕೆ, ನೀವು ಹೋದ ಹೊರತು ಪ್ರಾರಂಭವಾಗುವುದಿಲ್ಲ' ಎಂದರು. ಹೆಚ್ಚು ಚರ್ಚೆ ಮಾಡಿದರೆ ಕಾಲವ್ಯಯವಾಗುವುದೆಂದು ಬೇಂದ್ರೆ ಒಳಗೆ ಹೋದರು. ಮಿತ್ರರ ಕೈಯಿಂದ ತಪ್ಪಿಸಿಕೊಂಡು ಬರುವುದು ೧೫-೨೦ ನಿಮಿಷವಾಯಿತು. ಬೇಂದ್ರೆ, ನಾಟಕ ಗೃಹದ ಬಾಗಿಲಿಗೆ ಬರುವ ವೇಳೆಗೆ ಅಲ್ಲಿ ಸ್ವಯಂ ಸೇವಕನ ಹೊರತು ಮತ್ತಾರೂ ಇರಲಿಲ್ಲ. ಸ್ವಯಂಸೇವಕ ತನ್ನ ನಿಯಮಕ್ಕೆ ಅನುಸಾರವಾಗಿ 'ಯಾರು ಸ್ವಾಮಿ, ಎಲ್ಲಿ ಪಾಸು' ಎಂದ. ಅವನಿಗೆ ಬೇಂದ್ರೆಯವರ ಪರಿಚಯವಿರಲಿಲ್ಲ. ಆಗ ಬೇಂದ್ರೆ ಹೀಗೆ ಯೋಚಿಸಿದರು. 'ನಾನು ಯಾರು ಎಂದು ಈತ ಕೇಳುವುದರಿಂದ ಇವನಿಗೆ ನನ್ನ ಪರಿಚಯವಿಲ್ಲ. ನಾನು ಯಾರು ಎಂದು ಕೇಳುವವನಿಗೆ ನನ್ನ ಹೆಸರು ಹೇಳಿ ಏನು ಪ್ರಯೋಜನ? ಹೀಗೆ ಹೇಳುತ್ತೇನೆ ಎಂದು 'ನಾನು ಬೇಂದ್ರೆಯ ಕಡೆಯವ' ಎಂದರು. ಬೇಂದ್ರೆಯ ಕಡೆಯವರಾದ ಮೇಲೆ ಇನ್ನೇನು ಎಂದು ಸ್ವಯಂಸೇವಕ ಅವರನ್ನು ಒಳಗೆ ಬಿಟ್ಟನು. ಈ ಸಂದರ್ಭದಲ್ಲಿ ಮದರಾಸು ಕಾಂಗ್ರೆಸ್‌ನಲ್ಲಿ ನಡೆದ ಒಂದು ಸಂಗತಿ ನನ್ನ ಜ್ಞಾಪಕಕ್ಕೆ ಬಂದಿತು. ಆಗ ನಾವು ಸ್ವಯಂಸೇವಕರು. ನಮ್ಮ ಮಿತ್ರರಾದ ಒಬ್ಬ ಸ್ವಯಂ ಸೇವಕನನ್ನು ಕಾಂಗ್ರೆಸ್ ಮಂಟಪದ ಬಾಗಿಲಿನಲ್ಲಿ ಕಾವಲಿರಿಸಿದ್ದರು. ಬ್ಯಾಡ್ಜ್ ಅಥವ ಪಾಸು ಇಲ್ಲದೆ ಯಾರನ್ನೂ ಒಳಕ್ಕೆ ಬಿಡಕೂಡದೆಂದು ಕಟ್ಟಪ್ಪಣೆಯಾಗಿದ್ದಿತು. ಡಾಕ್ಟರ್ ಅನ್ಸಾರಿ ಕಾಂಗ್ರೆಸ್ ಅಧ್ಯಕ್ಷರು. ಅವರು

ಬ್ಯಾಡ್ಜ್ ಪಾಸ್ ಯಾವುದೂ ಇಲ್ಲದೆ ಬಂದರು. ಸ್ವಯಂ ಸೇವಕನಿಗೆ ಇವರು ಕಾಂಗ್ರೆಸ್ ಅಧ್ಯಕ್ಷ ಅನ್ಸಾರಿ ಎಂಬುದು ತಿಳಿಯಲಿಲ್ಲ. ಒಳಕ್ಕೆ ಬಿಡುವುದಿಲ್ಲ ಎಂದನು. ಎರಡು ಮೂರು ನಿಮಿಷಗಳಲ್ಲಿ ಬಾಗಿಲಿಗೆ ಉಳಿದ ಮುಖಂಡರು ಬರಲು ಸ್ವಯಂಸೇವಕನಿಗೆ ತನ್ನ ತಪ್ಪು ಗೊತ್ತಾಯಿತು. ಅವನು ಗಾಬರಿ ಯಲ್ಲಿ ಡಾಕ್ಟರ್ ಅನ್ಸಾರಿಯವರಿಗೆ 'I pardon you' ಎಂದನು. ಡಾಕ್ಟರ್ ಅನ್ಸಾರಿ ನಗುತ್ತ 'You pardon me; alright thank you' ಎಂದುಕೊಂಡು ಒಳಕ್ಕೆ ಹೊರಟುಹೋದರು. ಸ್ವಯಂಸೇವಕನಿಗೆ ಗಾಬರಿ ಶಾಂತವಾದ ಮೇಲೆ 'Pardon me' ಎಂದು ಹೇಳಬೇಕಾಗಿದ್ದಿ ತೆಂಬುದು ತಿಳಿಯಿತು. ಬೇಂದ್ರೆಯವರನ್ನು 'ನಾನು ಬೇಂದ್ರೆ' ಎಂದು ನೀವು ಹೇಳಿಕೊಳ್ಳದೆ 'ಬೇಂದ್ರೆಯವರ ಕಡೆಯವರು' ಎಂದು ಯಾಕೆ ಹೇಳಿದಿರಿ ಎಂದೆ. ಬೇಂದ್ರೆಯವರು ನಗುತ್ತ 'ಕೆಲವು ಸಮಯಗಳಲ್ಲಿ ನಮಗಿಂತ ನಮ್ಮ ಹೆಸರಿಗೆ ಹೆಚ್ಚು ಮಹಿಮೆ. ನಮ್ಮ ಹೆಸರು ಮಾಡುವ ಕೆಲಸ ನಮ್ಮಿಂದ ಸಾಧ್ಯವಿಲ್ಲ. ಶ್ರೀರಾಮಚಂದ್ರನಿಗೇ ಆ ಅನುಭವವಾಯಿತು' ಎಂದರು. ಅನಂತರ ಬೇಂದ್ರೆ ಈ ಕತೆ ಹೇಳಿದರು. 'ಸಮುದ್ರಕ್ಕೆ ಸೇತುವೆ ಕಟ್ಟುತ್ತಿರುವಾಗ ರಾಮಚಂದ್ರ ನಿಗೆ ಈ ಕಲ್ಲುಗಳು ನೀರಿನ ಮೇಲೆ ತೇಲುವಂತೆ ಇವರು ಮಾಡುವ ಉಪಾಯ ಯಾವುದು' ಎಂದು ಯೋಚನೆ ಬಂದಿತು. ರಾಮ, ಸಮುದ್ರ ತೀರದಲ್ಲಿ ಹೋಗಿ ನೋಡಿದ. ಕಪಿಗಳೆಲ್ಲಾ ಬಂಡೆಗಳನ್ನು ಹೊತ್ತುಕೊಂಡು ಬಂದು ನಳನ ಕೈಯಲ್ಲಿ ಕೊಡುತ್ತಿದ್ದವು. ನಳನು ಅದರ ಮೇಲೆ 'ಶ್ರೀರಾಮ' ಎಂದು ಬೆರಳಲ್ಲಿ ಬರೆದು ಸಮುದ್ರದ ಮೇಲೆ ಇಟ್ಟುಬಿಡುತ್ತಿದ್ದನು. ಅದು ಸುಖವಾಗಿ ತೇಲುತ್ತಿ ದ್ದಿತು. ಇದನ್ನು ನೋಡಿ ಶ್ರೀರಾಮಚಂದ್ರನು 'ಇಷ್ಟೇಯೆ. ನನ್ನ ಹೆಸರು ಬರೆದ ಕಲ್ಲು ಹಾಗೆ ತೇಲುವುದಾದರೆ, ನಾನೇ ಇಟ್ಟ ಕಲ್ಲು ಎಷ್ಟು ತೇಲ ಬಹುದು?' ಎಂದುಕೊಂಡು, ರಾತ್ರಿ ಎಲ್ಲರೂ ಮಲಗಿದ್ದಾಗ ಒಂದು ಕಲ್ಲನ್ನು ತಂದು ಸಮುದ್ರದಲ್ಲಿ ಇಟ್ಟನು. ಕಲ್ಲು ತತ್‌ಕ್ಷಣ ನೀರಿನಲ್ಲಿ ಮುಳುಗಿ ಹೋಯಿತು. ದೂರದಲ್ಲಿ ಹನುಮಂತ ಮುಗುಳು ನಗೆ ನಕ್ಕುದು ರಾಮನಿಗೆ ಗೊತ್ತಾಯಿತು. ಹನುಮಂತನು 'ರಾಮಚಂದ್ರ, ಪ್ರಾಕೃತ ಮನುಷ್ಯರಂತೆ ನಿನಗೂ ಈ ಮಾಯೆ ಬರಬಹುದೆ? ನಿನ್ನ ಹೆಸರು ಹೇಳಿ ಬಿಟ್ಟ ಕಲ್ಲು ಸಮುದ್ರದಲ್ಲಾದರೂ ತೇಲುವುದು. ಆದರೆ ನೀನೇ ಕೈಬಿಟ್ಟ ಮೇಲೆ, ಕಲ್ಲಿಗೆ ಮುಳುಗುವುದರ ಹೊರತು ಬೇರೆ ಗತಿ ಏನು?' ಎಂದನು.

ಹೀಗೆ ಹಾಸ್ಯದ ಚಟಾಕಿಯಾಗಿ ಮಕ್ಕಳಂತೆ ಇದ್ದರೂ, ಖಂಡಿತವಾಗಿ ಮಾತನಾಡಬೇಕಾದಾಗ ಬೇಂದ್ರೆಯವರು ಖಡಾಖಂಡಿತವಾಗಿಯೇ ಮಾತನಾಡುತಾರೆ. ಯಾರ ದಾಕ್ಷಿಣ್ಯಕ್ಕಾಗಿಯೂ ಹೇಳಬೇಕಾದುದನ್ನು ಇವರು ಹೇಳದೆ ಬಿಡುವುದಿಲ್ಲ. ಬೊಂಬಾಯಿನ ಸಮ್ಮೇಳನದ ಸಮಯದಲ್ಲಿ ಶ್ರೀಮಾನ್ ಕೈ. ಎನ್. ಎಸ್. ಸುಬ್ಬರಾಯರು 'ಕವಿಗಳು ಜನರಿಗೆ ತಿಳಿಯುವಂತೆ ಬರೆಯಬೇಕು' ಎಂದಾಗ ಶ್ರೀ ಬೇಂದ್ರೆಯವರು 'ಜನರೂ ವ್ಯಾಸಂಗ ಮಾಡಿ ಕವಿಯ ಆಶಯವನ್ನು ಹಿಡಿಯಬೇಕು. ಜನರಂಜನೆಗಾಗಿ ಕವಿ ತನ್ನ ಮಟ್ಟವನ್ನು ತಗ್ಗಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು. ಶಿವಮೊಗ್ಗ ಸಮ್ಮೇಳನದಲ್ಲಿ ಕೆಲವು ಸದಸ್ಯರು ಸ್ವಲ್ಪ ಮರ್ಯಾದೆ ಮೀರಿ ಕಟುವಾಗಿ ಮತ್ತೊಬ್ಬ ಸದಸ್ಯರನ್ನು ಟೀಕಿಸಿದಾಗ ಬೇಂದ್ರೆಯವರು 'ಬೈಗುಳದ ಜೋರಿನಿಂದಲೇ ನೀವು ಎದುರಾಳಿಯನ್ನು ತಗ್ಗಿಸುವೆವೆಂದು ತಿಳಿದಿದ್ದರೆ ಅದು ತಪ್ಪು. ಆ ಅಸ್ತ್ರವನ್ನು ನಾವೂ ನಿಮ್ಮಷ್ಟೇ ತೀವ್ರವಾಗಿ ಪ್ರಯೋಗಿಸಬಲ್ಲೆವು' ಎಂದಾಗ ಎದುರಾಳಿಗಳಿಗೆ ಆ ಮಾತಿನ ಸತ್ಯ ಹೊಳೆಯಿತು. ತಮ್ಮ ಈ ಖಂಡಿತವಾದ ಸ್ವಭಾವದಿಂದಲೇ ಇವರು ಮೈಸೂರಿನವರಿಗೆ ಅವರ ಗುರಿಯನ್ನು ಜ್ಞಾಪಕ ಕೊಟ್ಟರು.

'ಮೈಸೂರಿನ ಜನ ಎಚ್ಚೆತ್ತು ಎದ್ದರೆ, ನಮ್ಮ ರತ್ನಸಿಂಹಾಸನವು ತನ್ನ ಅನಾದಿ ಧರ್ಮದಿಂದ ಉದ್ಧಾರಕವಾಗಿ ಬಂದರೆ ತುಂಗೆ ಕಾವೇರಿಯೊಳಗಣ ಕನ್ನಡ ನಾಡು ಸಹ ಭೂರಂಗಕ್ಕೆ ಆದರ್ಶವಾದೀತು. ಮೈ ಸೂರಲ್ಲಿ ಶಿವ ಮುಗ್ಗಿ ಅರಳಬೇಕು. ಆತ್ಮ ಜಾಗೃತಿ ಬೇಕು. ಮೈಸೂರಿನಲ್ಲಿ ಏನಿಲ್ಲ? ನಮ್ಮ ಭಾಷೆಯಿದೆ; ನಮ್ಮ ಶ್ರೀಮನ್ಮಹಾರಾಜರಿದ್ದಾರೆ. ನಮ್ಮ ಜನ ಇವೆ. ಗೋಮಟೇಶ್ವರನಿದ್ದಾನೆ. ಬಾಬಾಬುಡಣಗಿರಿಯಿದೆ. ಗೇರುಸೊಪ್ಪೆಯಿದೆ. ಹರಿಹರ ಮೇಲುಕೋಟೆ ಇವೆ. ಚಿತ್ರದುರ್ಗವಿದೆ. ಚಂದ್ರವಳ್ಳಿಯಿದೆ. ಬೇಲೂರ ಚೆನ್ನಕೇಶವನಿದ್ದಾನೆ. ಶ್ರೀರಂಗ ನಂಜುಂಡೇಶ್ವರರಿದ್ದಾರೆ. ಚಾಮುಂಡಿ ಶಾರದಾಂಬೆಯರಿದ್ದಾರೆ. ಶಿಲ್ಪಾಚಾರ್ಯರಿದ್ದಾರೆ. ವಾಸ್ತುಶಿಲ್ಪವಿದೆ. ವೆಂಕಟಪ್ಪನವರಿದ್ದಾರೆ ಶ್ರೀಕಂಠಯ್ಯನವರು ಪುಟ್ಟಪ್ಪನವರು ಗುಂಡಪ್ಪನವರು ಮಾಸ್ತಿಯವರು ಇದ್ದಾರೆ. ಶೇಷಣ್ಣನವರ ವೀಣೆಯಿದೆ. ಬಿಡಾರ ಕೃಷ್ಣಪ್ಪನವರ ಗಾನದ ತಾನವಿದೆ. ಆನೆಯಿದೆ. ಚಂದನವಿದೆ. ಬಂಗಾರವಿದೆ. ಕಬ್ಬು ಇದೆ. ಕಬ್ಬಿಣವಿದೆ. ಕಾಫಿ ಇದೆ. ಕಾವೇರಿ ತುಂಗಭದ್ರೆಯರಿದ್ದಾರೆ. ಮಿಂಚು ಇದೆ. ವಿಶ್ವೇಶ್ವರಯ್ಯನವರು ನಮ್ಮವರೇ ಇದ್ದಾರೆ. ನೃತ್ಯ ನಾಟಕವಿದೆ. ಶಾಸ್ತ್ರಸಂಪತ್ತಿದೆ. ಶ್ರೀ ರಾಮನ್ ಅವರೂ ಇಲ್ಲಿಯೇ ಇದ್ದಾರೆ. ಏನಿಲ್ಲ? ಎಲ್ಲ ಎಲ್ಲ ಇವೆ. ನಮ್ಮ ರತ್ನಸಿಂಹಾಸನವಿದೆ. ಕೆಂಪೇಗೌಡನ ಬೆಳೆದ ಬೆಂಗಳೂರಿದೆ. ಉತ್ಸಾಹದಿಂದ ತುಂಬಿದ ತರುಣ ತರುಣಿಯರಿದ್ದಾರೆ. ವಾನಪ್ರಸ್ಥರ ವಿಪುಲ ಸಮುದಾಯವಿದೆ. ಬೆಂಗಳೂರು ಮಂದು

ಮೈಸೂರು ವಿಶ್ವವಿದ್ಯಾಲಯ ತಾತ ಇನ್‌ಸ್ಟಿಟ್ಯೂಟ—ಮತ್ತೇನೇನೋ ಇದೆ. ಸಣ್ಣ ಬ್ರಹ್ಮಾಂಡವೇ ಇದೆ. ಆದರೆ ತಾನು ಕನ್ನಡ ಪುಣ್ಯಪುರುಷ ಭೂಮಿ. ಕನ್ನಡ ಜನವೆಲ್ಲಾ ತನ್ನದು; ಜಗತ್ತಿನ ರಾಷ್ಟ್ರಗಳಿಗೆ ಸಮಾನಸ್ಕಂಧ ತಾನು ಎಂಬ ಆತ್ಮಜ್ಞಾನವಿಲ್ಲ, ಅರಿವಿನ ಎಚ್ಚರವಿಲ್ಲ. ಎಚ್ಚರದ ಏರಿಕೆಯಿಲ್ಲ. ಏರಿಕೆಯ ಕಾರ್ಯವಿಲ್ಲ. ಅಂತೆಯೇ ಕಾರ್ಯದ ಫಲವಿಲ್ಲ. ಮೈಸೂರು ನಾಡಿಗೆ, ಹಳೆಯ ಮಹಿಷಾಸುರನ ಪಿಶಾಚಿಯೋ ಏನೋ ಕಾಡುತ್ತಿರಬೇಕು. ಶ್ರೀ ಚಾಮುಂಡಿ ಕೊಟ್ಟ ದಿವ್ಯತೆಯ ಅರಿವು ಮೈದುಂಬಿ ಬರುತ್ತಿಲ್ಲ. ತುಂಗೆ ಕಾವೇರಿಗಳ ದಡ ಮೀರಿ ಸೂಸುತ್ತಿಲ್ಲ.'

ಇದು ಬೇಂದ್ರೆಯವರ ಸ್ಪಷ್ಟವಾದ ವಾಣಿ. ಇದನ್ನು ಮೈಸೂರಿನ ಜನತೆಗೆ ಸಂದೇಶವೆಂದೇ ಭಾವಿಸಬಹುದು. ಚಾಮುಂಡಿ ಕೊಟ್ಟ ದಿವ್ಯತೆಯ ಅರಿವು ಮೈದುಂಬಿ ಬರುತ್ತಿಲ್ಲ ಎಂಬುದೇ ಭಾರತಕ್ಕೂ ಇರುವ ಶಾಪ. ಗಂಗೆ ಯಮುನೆಯರು ಕೊಟ್ಟ ದಿವ್ಯತೆ ಭಾರತಕ್ಕೆ ತುಂಬಿ ಬರುತ್ತಿಲ್ಲ. ಭಾರತವು ತನ್ನ ಪೂರ್ಣತೆ ತಳೆದಾಗಲೇ ಭಾರತದಿಂದ ಜಗತ್ತಿಗೆ ಉಪಕಾರವಾಗುವುದೆಂಬುದನ್ನು ಬೇಂದ್ರೆ ತಮ್ಮ ಕಾವ್ಯಗಳಲ್ಲಿ ಎಲ್ಲೆಲ್ಲಿಯೂ ಹೇಳಿದ್ದಾರೆ. ಭಾರತ ಇತರ ರಾಷ್ಟ್ರಗಳೊಂದಿಗೆ ಸಮಾನವಾಗಿ ನಿಂತಿಲ್ಲವಲ್ಲ ಎಂಬುದು ಬೇಂದ್ರೆಯವರ ಮೊದಲನೆಯ ಕೊರಗು. ಅವರ ಕಾಲಪುರುಷ ಹೇಗೆ ಅವರ ಅದ್ಭುತ ಕಲ್ಪನೆಗೆ ಮಾತ್ರ ಸಿಕ್ಕಿ ಸಾಮ್ರಾಜ್ಯದ ತಲೆ ಒಕ್ಕಿ ಮಂಡಲಗಳನ್ನೆಲ್ಲಾ ಮುಕ್ಕಿ ಯುಗ ಯುಗ ಮನ್ವಂತರಗಳನ್ನೆಲ್ಲಾ ಮೀರಿ ಮಂಗಳ ಲೋಕಕೆ ಹಾರಿ ನಿಂತಿದೆಯೋ ಹಾಗೆಯೇ ಅವರ ಭಾರತವೂ ಮೊದಲಗಿತ್ತಿ. ಈ ಭಾಗತದ ಮಹಿಮೆ ಅದ್ಭುತವಾದುದು. ಜಗತ್ತಿನ ಸಂಸ್ಕೃತಿ ಹೋರಾಟಗಳೆಲ್ಲಾ ಇಲ್ಲಿ ಬಂದು ತೆಪ್ಪಗಾಗಿವೆ. ಭಾರತಿಯು ಒಕ್ಕುಡಿತೆ ಅರಿಮುಳುಗು ಎಂದು ಪಾಣಿಪತ್ತುಗಳನ್ನು ಮುಕ್ಕಳಿಸಿದ್ದಾಳೆ. ಕೊಡಲಿ ರಾಮನು ಎರೆದ ಕೆನ್ನೀರ ಜಳಕದಿಂದ ಕೂದಲು ಸಹ ನೆನೆಯಲಿಲ್ಲವೆಂದಿದ್ದಾಳೆ. ಈ ಜಗಜ್ಜನನಿ ತನ್ನ ಪೂರ್ವದ ವೈಭವದಿಂದ ಮೆರೆಯಬೇಕು. ಕನ್ನಡ ನಾಡು ತನ್ನ ಹಿರಿಮೆಯನ್ನು ಸಾಧಿಸಬೇಕು. ಇದೇ ಬೇಂದ್ರೆಯವರ ಸಂದೇಶ.

ಬೇಂದ್ರೆಯವರ ಕಾವ್ಯ ಕನ್ನಡದಲ್ಲಿ ಸಾಧಿಸಿರುವ ಕಾರ್ಯವನ್ನು, ಅಂದರೆ ರಾಜಕೀಯವಾದ ಕ್ರಾಂತಿಯನ್ನು ಜನಜಾಗ್ರತೆಯನ್ನು, ಮತ್ತಾವ ಕವಿಯೂ ಸಾಧಿಸಿಲ್ಲ. ಇವರ ಪದ್ಯಕ್ಕಾಗಿಯೇ ಸರ್ಕಾರ ಇವರನ್ನು ಬಂಧನದಲ್ಲಿಟ್ಟಿತ್ತು.

ಕವಿಯು ಸ್ವೇಚ್ಛೆಯಿಂದ ಹಕ್ಕಿಯಂತೆ ತನಗೆ ತೋರಿದುದನ್ನು ಹಾಡಿದುದಕ್ಕಾಗಿಯೇ ಅವರನ್ನು ಬಂಧನದಲ್ಲಿಟ್ಟ ಉದಾಹರಣೆ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲ. ಅಂದರೆ ಕವಿಗಳ ಮೇಲೆ ಸರಕಾರದ ವಕ್ರದೃಷ್ಟಿ ಬಿದ್ದಿಲವೆಂದಲ್ಲ. ಆದರೆ ಅವರನ್ನು ಸರ್ಕಾರ ಬಂಧಿಸಿದುದು ಅವರು ರಾಜಕೀಯದಲ್ಲಿ ಪ್ರವೇಶಿಸಿ ಮಾಡಿದ ಚಳುವಳಿಗಾಗಿ. ಆದರೆ ಬೇಂದ್ರೆಯವರನ್ನು ಅವರು ರಾಜಕೀಯವಲ್ಲದ ಪದ್ಯಗಳನ್ನು ಬರೆದು ಹಾಡಿಕೊಳ್ಳುತ್ತಿದ್ದುದಕ್ಕಾಗಿಯೇ ಬಂಧಿಸಿದರು. ಅಂದರೆ ರಾಜಕೀಯ ಚಳುವಳಿಗಾರನಲ್ಲದವನು ಬರೆದರೂ, ಅವುಗಳ ಕ್ರಾಂತಿಯ ಸ್ವಭಾವ ಹಾಗೆ ಇದ್ದವು. ಇನ್ನು ಬೇಂದ್ರೆಯವರು ರಾಜಕೀಯ ಆಂದೋಳನಕ್ಕಾಗಿಯೇ ಪ್ರಚಾರ ಸಾಹಿತ್ಯವನ್ನು ಬರೆದಿದ್ದರೆ ಅದರ ಫಲ ಹೇಗೆ ಆಗುತ್ತಿದ್ದಿತೆಂಬುದು ಊಹನೆಯಿಂದ ಮಾತ್ರ ಅರಿಯಬಹುದಾದ ಮಾತು. ಬೇಂದ್ರೆಯವರು ಮಗುವಿನಂತೆ ಕೋಮಲವಾಗಿರುವಂತೆಯೇ ಅವರ ಮಾತುಗಳು ಅವಶ್ಯಕವಾದಾಗ ಗಂಡುಮೆಟ್ಟಾಗುತ್ತವೆ. ವೀರವಾಣಿ ಸಿಡಿಲು ಗುಡುಗು ಬಾಂಬು ಆಗುತ್ತವೆ. ' ಮೂವತ್ತುಮೂರು ಕೋಟಿ ' ನಮ್ಮವರ ಹೃದಯವನ್ನು ಕೆಣಕಿದಂತೆ ಪರರ ಕಣ್ಣನ್ನು ಕೆರಳಿಸಿದವು. ' ತುತ್ತಿನ ಚೀಲ ' ನಮ್ಮ ಎದುರಾಳಿಗಳ ಕಣ್ಣಿಗೆ ಮದ್ದಿನ ಚೀಲವೇ ಆಯಿತು. ನರಬಲಿ ' ಇದುವೆ ಕಾಳಿಯ ಪೂಜೆಯು ಶುದ್ಧ, ಇದಕ್ಕೆ ಹುಂಬರು ಎಂಬರು ಯುದ್ಧ ' ಸರ್ಕಾರವನ್ನೇ ಬೇಂದ್ರೆಯವರ ಮೇಲೆ ಕೆಡವಿತು. ಸರ್ಕಾರ ಇವರ ಕೆಲಸ ಕಿತ್ತುಕೊಂಡಿತು; ಮುಗದ್‌ನಲ್ಲಿ ಇವರನ್ನು ಬಂಧನದಲ್ಲಿರಿಸಿತು. ಅದೇನೂ ಆಶ್ಚರ್ಯವಲ್ಲ. ಸರ್ಕಾರಗಳು ಮತ್ತೇನನ್ನೂ ಮಾಡಲು ಅರಿಯದವು. ಸರ್ಕಾರ ಕವಿಯ ಸ್ವಾತಂತ್ರ್ಯವನ್ನು ಅಪಹರಿಸಿತೇ ಹೊರತು ಕವಿಯ ಕವಿತಾಶಕ್ತಿಯನ್ನು ಅಪಹರಿಸಲಿಲ್ಲ. ಒಂದು ಸಲ ಬ್ರಹ್ಮನಿಗೆ ರಾಜಹಂಸಗಳ ಮೇಲೆ ಸಿಟ್ಟು ಹತ್ತಿತಂತೆ. ರಾಜ ಹಂಸಗಳು ಮಾನಸ ಸರೋವರಕ್ಕೆ ಬರದಂತೆ ಬ್ರಹ್ಮ ಅಪ್ಪಣೆ ಮಾಡಿದ. ಒಂದು ಹಂಸವು ಬ್ರಹ್ಮನಿಗೆ ' ನೀನು ನಮ್ಮನ್ನು ಮಾನಸ ಸರೋವರಕ್ಕೆ ಬರದಂತೆ ತಡೆಯಬಹುದು, ಆದರೆ ಹಾಲನ್ನೂ ನೀರನ್ನೂ ಬೇರೆ ಮಾಡುವ ನಮ್ಮ ಶಕ್ತಿಯನ್ನು ನೀನು ಕಿತ್ತುಕೊಳ್ಳಲಾರೆ ' ಎಂದಿತಂತೆ.

ಬೇಂದ್ರೆಯವರ ಕಾವ್ಯವನ್ನು ಅರಿಯುವುದು ಅವರ ಸ್ವಭಾವವನ್ನು ಅರಿತಂತೆಯೇ. ಇಂತಹ ಪರಿಚಯಾತ್ಮಕವಾದ ಚಿಕ್ಕ ಪ್ರಬಂಧದಲ್ಲಿ ಅವರು

ರಚಿಸಿರುವ ಕವನಗಳ ಹೆಸರನ್ನು ಹೇಳುವುದಕ್ಕೂ ಸ್ಥಳಸಾಲದು. ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು ಒಂದೆಡೆ ಹೇಳಿದಂತೆ 'ಬೇಂದ್ರೆಯವರ ಕಾವ್ಯಗಳನ್ನು ವಿಮರ್ಶಿಸುವ ಕಾಲ ಹೋಯಿತು. ಇನ್ನು ಅವು ವ್ಯಾಖ್ಯಾನಕ್ಕೆ ತಕ್ಕುವು' ಎಂಬುದು ನಿಜ. ಬೇಂದ್ರೆಯವರ ಕವನಗಳ ವ್ಯಾಖ್ಯಾನವನ್ನು ನಾವು ಬರಿಯ ಬುದ್ಧಿಯಿಂದ ಮಾತ್ರ ಮಾಡುವುದಕ್ಕೆ ಹೋದರೆ ಅದರ ಆಳ, ಸ್ವಾರಸ್ಯ, ಸಂದೇಶ ನಮಗೆ ಖಂಡಿತ ದೊರಕುವುದಿಲ್ಲ. ಅವರ ಕವನಗಳನ್ನು ನಮ್ರತೆಯಿಂದಲೇ ಸವಿಯಬೇಕು ಪ್ರೇಮ ಸೌಂದರ್ಯ ತ್ಯಾಗ ಇವುಗಳ ಮಾನದಂಡದಿಂದಲೇ ಅವನ್ನು ಅಳೆಯಬೇಕು. ನನ್ನ ಮನಸ್ಸು ನನ್ನ ಕಾರ್ಯ ನನ್ನ ಶಕ್ತಿ ಎಲ್ಲವೂ ಯಾವಾಗಲೂ ಭಾರತ ಸ್ವಾತಂತ್ರ್ಯ ಸಾಧನೆಗೆ ಆಗಲಿ ಎಂಬುದು ಈ ಕವಿಯ ವ್ರತ. ದೇಶಕ್ಕಾಗಿ 'ಗಂಡುಸಾದರೆ ನಿನ್ನ ಬಲಿಕೊಡುವಿಯೇನು' ಎಂದು ಎದೆ ನಡುಗುವ ಗಂಡು ಪ್ರಶ್ನೆಯನ್ನು ಇವರು ಹಾಕುತ್ತಾರೆ. ನಮ್ಮವರ ದಾರಿದ್ರ್ಯ ದೀನತೆ ಹಸಿವು ಇವರ ಬಗೆಯನ್ನು ಬಹಳ ಕದಡಿದೆ. ಬಡವರ ಹೊಟ್ಟೆಗಿಲ್ಲದವರ ಸಂಕಟ ಇವರ ಕಾವ್ಯವಾಣಿಯನ್ನು ಕೆರಳಿಸಿದೆ. ಧನಿಕರ ಔದ್ಧತ್ಯದಿಂದ ಇವರು ಔಡು ಕಚ್ಚಿದ್ದಾರೆ. 'ದೈವುಳ್ಳವರಿಗೆ ದಯವೇ ಇಲ್ಲ ತಿತ್ತಿರಿ ತುಂಬಿದೆ ಬೊಕ್ಕಸದೊಡಲು ಆದರೆ ಬರಿದೊ ಬರಿದು ತೆರವೊ ತೆರವು ಬಡವರ ಬಗ್ಗರ ತುತ್ತಿನ ಚೀಲ.' ಬಡವರ ಹಸಿವು ಜಗತ್ತನ್ನೇ ಸುಡುತ್ತದೆ. ಈ ಹಸಿವನ್ನು ಆರಿಸದ ದೇವರುಗಳಿಂದ ತಾನೆ ಪ್ರಯೋಜನವೇನು? ಅವತಾರಗಳಿಂದ ತಾನೆ ಪ್ರಯೋಜನವೇನು? ಪ್ರಾಣದೇವರು ನಿಷ್ಪ್ರಾಣನಾಗಿ ಒಂದು ಕಡೆ ವಸುಂಧರೆ ಮತ್ತೊಂದು ಕಡೆ ರತ್ನಾಕರ–ಇವರ ನಡುವೆ ಬಿದ್ದು ನರಳುತ್ತಿದ್ದಾನೆ. ಸಿಡುಕು ದೇವ ಬರುತ್ತಾನೆ, ಮಿಡುಕುವ ದೇವ (ರಾಮ ಸೀತೆಗಾಗಿ ಮಿಡುಕುತ್ತಿದ್ದಾನೆ ಎಂದು ಒಂದು ಸಲ ಬೇಂದ್ರೆ ಹೇಳಿದರು) ಬರುತ್ತಾನೆ. ಯಾರು ಬಂದರೂ, ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೊ ಇನ್ನೂ ಬರಲಿಲ್ಲ.'

ಬೇಂದ್ರೆಯವರ ಕವನಗಳಲ್ಲಿ ಉದ್ದಕ್ಕೂ ಬಡವರ ಮೇಲಿನ ಈ ಕನಿಕರ ಒಡೆದು ಕಾಣುತ್ತದೆ. ಅದು ಅವರ ಸ್ವಭಾವದ ಪ್ರತಿಬಿಂಬ. ಅನ್ನಾವತಾರದಂತಹ ಒಂದು ಪದ್ಯ, ಬಂಗಾಳಾ ಕ್ಷಾಮವನ್ನು ಕುರಿತು ನೂರು ವರದಿಗಳು ಮಾಡದಿರುವ ಕೆಲಸವನ್ನು ಮಾಡಿದೆ. ಪ್ರಗತಿಶೀಲರು ಇದನ್ನು ತಮ್ಮ ರಾಷ್ಟ್ರ

ಗೀತೆಯಾಗಿ ಇಟ್ಟುಕೊಳ್ಳಬಹುದು. ದೇಶದ ದಾರಿದ್ರ್ಯ ಕವಿಯ ಹೃದಯವನ್ನು ಕಲಕಿದಂತೆ ಹೆಣ್ಣಿನ ಕಷ್ಟವೂ ಕವಿಯನ್ನು ಶೋಕದಲ್ಲಿ ಮುಳುಗಿಸಿದೆ. ಬೇಂದ್ರೆಯವರು ಮುಗದ್‌ನಲ್ಲಿ ಬಂಧನದಲ್ಲಿದ್ದಾಗ ನಡೆದ ಒಂದುಸಂಗತಿಯನ್ನು ಕುರಿತು 'ಹೆಣದ ಹಿಂದೆ' ಎಂಬ ಹೆಸರಿನ ಕವನವೊಂದನ್ನು ಬರೆದರು. ಸತ್ತವನ ಹೆಣದ ಹಿಂದೆ ಬಾಲವಿಧವೆ ಹೋಗುತ್ತಿದ್ದಾಳೆ. ತಲೆ ಕೆದರಿಕೊಂಡು ಬಾಯಿ ಬಡಿದುಕೊಳ್ಳುತ್ತಿದ್ದಾಳೆ. ಕವಿಯ ಹೃದಯವನ್ನು ಕೊಡಲಿಯಿಂದ ಸೀಳಿದಂತೆ ಆಗುತ್ತಿದೆ. ಆ ಪುಟ್ಟ ವಿಧವೆಯ ಮದುವೆಯನ್ನು ಕವಿ ಜ್ಞಾಪಿಸಿಕೊಳ್ಳುತ್ತಾನೆ.

'ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗೆದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೊ ಚೆಂದ............'

'ತನ್ನ ದುಃಖ ನುಂಗಿಕೊಂಡು
ಅವಳು ಹಸಿವ ಕಳೆಯಬೇಕು
ತಾನೆ ಅತ್ತು ಹಾಡಿಕೊಂಡು
ತನ್ನ ತಾನೇ ರಮಿಸಬೇಕು
ಅವಳಿಗಾವ ಕೆರೆಯ ದಾರಿ
ಹೆಣ್ಣು ಪಾಡು ನಾಯಿ ಪಾಡು
ಎಂದುದೆಷ್ಟೊ ಸಲವೋ ಏನೊ
ಬೇಡ ಬೇಡ ಹೆಣ್ಣು ಜನ್ಮ
ಬಯ್ದುಕೊಂಡುದೆಷ್ಟು ಸಲವೊ
ಮುಂದೆ ಹೇಗೆ ಮುಂದೆ ಹೇಗೆ
ಒಂದೆ ಒಂದೆ ಮಾತು ಮತ್ತೆ'

ಆದರೆ ಸಮಾಜ ಅವಳ ದುಃಖಕ್ಕೆ ಅವಳನ್ನು ಬಿಟ್ಟೀತೆ ?

'ಹತ್ತು ದಿವಸಕೆ ಹಾಳು ಮುತ್ತೈದೆತನ ಹೋಗಿ
ವೈಧವ್ಯ ಸಂಪತ್ತು ಪಡೆದಳಾಕೆ
ಮನೆಯವರು ವೈದಿಕರು ಊರು ಧರ್ಮದ ತವರು
ಶಾಸ್ತ್ರವಿರೆ ಬೇರೆಯ ವಿಚಾರವೇಕೆ

ತಲೆಭಾರ ಇಳಿದಿತ್ತು ಅಂಗಾರ ಬೆಳೆದಿತ್ತು
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ
ಆದರಯ್ಯೊ ಪಾಪ ಆಕೆಯಿನ್ನೂ ಮಗುವು
ಸಿಂಗಾರವಿರದೆ, ಆ ಮಾತು ಬೇರೆ
ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ
ಹೂ ಬತ್ತಿ ಹೊಸೆಯಲಿಕೆ ಮೈತಳೆದಳೋ'

ಆದರೆ ಈ ಅನ್ಯಾಯವನ್ನು ದೇವರು ಸುಮ್ಮನೆ ಬಿಡುವುದಿಲ್ಲ. ಬರುತ್ತಿರುವ ಕ್ರಾಂತಿ, ಕವಿಯ ಕಣ್ಣಿಗೆ ಕಾಣುತ್ತದೆ. ಅವಳ ದುಃಖ ಜಗತ್ತನ್ನು ನಾಶ ಮಾಡಲು ಸಾಕು. ಆ ದುಃಖ

ತುಳಿದೇ ಬಿಡುವೆ ಬಾಳನೆಲ್ಲ
ಎಂಬ ಸೊಲ್ಲ ಹುಟ್ಟಿಸುವುದು
ಆನಂದ ಸ್ಪಂದದಿಂದ
ಹುಟ್ಟಿ ಬಂದ ಸೃಷ್ಟಿಯಿಂದ
ಇಂಥ ಮಾತು ಹುಟ್ಟಬೇಕೆ

ಕವಿ ಕುರುಡನಲ್ಲ. ತನ್ನವರು ಸ್ತ್ರೀಗೆ ಮಾಡಿದ ಅನ್ಯಾಯ ಆತನಿಗೆ ಗೊತ್ತು. ಆವನು ಹೀಗೆ ಸಮಾಧಾನಪಡಿಸುತ್ತಾನೆ.

ಕಾಳಿಯಂತೆ ಕೇಣಗೊಂಡು
ಶಿವನ ಎದೆಯ ತುಳಿಯಲೆಂದು
ಅಡಿಯನೆತ್ತಬೇಡ ತಾಯಿ
ಬಂದುದೆಲ್ಲದಕ್ಕೆ ನೀನು
ತಲೆಯನೊಡ್ಡದಿರಲು ನಮಗೆ
ನಿಲ್ಲೆ ನೆಲೆಯು ಎಲ್ಲು ಇಲ್ಲ
ನಮ್ಮ ಕಾಲ ಹಾದಿ ನೀನು
ನಿನ್ನ ತುಳಿವೆವೆಂದರೇನು
ನಿನ್ನ ಮೈಯ ಮಣ್ಣು ನಮ್ಮ
ಮನೆಗಳನ್ನು ಕಟ್ಟುತಿಹುದು

ಬೇಂದ್ರೆಯವರ ಸ್ವಭಾವದಲ್ಲಿ ದುಃಖ ಹಾಸ್ಯ ಪ್ರೀತಿ ಮೂರೂ ಸಮನಾಗಿ ಬೆರೆತಿವೆ. ಪ್ರೀತಿಯು ಅವರ ಕಾವ್ಯಗಳಲ್ಲಿ ಬರಿಯ ಕಾಮವಾಗಿ ಉಳಿದಿಲ್ಲ.

ಹೆಣ್ಣು ಗಂಡುಗಳ ಆತ್ಮವನ್ನು ಉದ್ಧಾರಮಾಡುವ ತೇಜಶ್ಶಕ್ತಿ ಅದು. ಕವಿಯು ಸೌಂದರ್ಯ ದೇವಿಗೆ

ಓಂ ನಮೋ ನಲ್ ಎಂದು ಇಂದು ಎಲ್ಲರನಲ್ಲಿ ವಂದಿಸುವೆ ಮುಂದೆ ಬಂದು
ನನ್ನ ಮನ ಕಂಡಿತಾ ನನ್ನಿ ಪ್ರಸನ್ನತೆಯು ನಿನ್ನದೆ ಪ್ರಸಾದವೆಂದು

ನಮಿಸುತ್ತಾನೆ. ಪ್ರಕೃತಿಯು ತಳೆಯುವ ವಿಧವಿಧಗಳಾದ ಬೆಡಗುಗಳೆಲ್ಲಾ ಆತನ ಪ್ರೇಮ ಉಪಾಸನೆಗೇ ಸಹಾಯವಾಗುತ್ತವೆ. ಮುಗಿಲ ಮಾರಿಗೆ ರಾಗ ರತಿಯ ನಂಜು ಏರುತ್ತದೆ; ಬಿದಿಗೆ ಚಂದ್ರನಾ ಚೋಗಚೀ ನಗೆ ಹೂ ಮೆಲ್ಲಗೆ ಮೂಡುತ್ತದೆ; ಮೇಲಕ್ಕೆ ಬೆಳ್ಳಿಯನ್ನು ಕೂಡುತ್ತದೆ.

ಇರುಳ ಹೆರಳಿನ ಅರಳ ಮಲ್ಲಿಗೀ ಜಾಳಿಗಿ ಹಾಂಗಿತ್ತ ಸೂಸ್ಯಾವ ಚಿಕ್ಕಿ ಅತ್ತಿತ್ತ
ಮಳ್ಳ ಗಾಳಿ ಸುಳಿ ಕಳ್ಳ ಕೈಲೆ ಸೆರಗನು ಹಿಡಿದಿತ್ತ ಮತ ಮತ ಜಿರಗಿಲೆ ಜಿಡತಿತ್ತ
ಒಂದ ಮನದ ಗಿಣಿ ಹಿಂದೆ ನೆಳ್ಳಿಗೆ ಬೆನ್ನಿಲೆ ಬರತಿತ್ತ ತನ್ನ ಮೈ ಮರ ಮರತಿತ್ತ

ಈ ಸುಖವಾದ ಸನ್ನಿವೇಶಕ್ಕೆ ಅನುಗುಣವಾಗಿ ನಲ್ಲಸಿಗೆ ನಲ್ಲೆ ಗೋಚರವಾಗುತ್ತಾಳೆ.

ನಾರಿ ನಿನ್ನ ಮಾರೀಮ್ಯಾಗ
ನಗೀನವಿಲು ಆಡತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ
ಕಣ್ಣಿನಾಗ ಬಣ್ಣದ ನೋಟ
ತಕ ತಕ ಕುಣಿದಾಡುತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ವನದಾಡತಿತ್ತ

ಬೇಂದ್ರೆಯವರು ಪ್ರೇಮದ ಮೀಮಾಂಸೆಯನ್ನು ಸಖೀಗೀತದಲ್ಲಿ ಅನುಭವದ ಹಿನ್ನೆಲೆಯಲ್ಲಿ ವರ್ಣಿಸಿದ್ದಾರೆ. ಬೇಂದ್ರೆಯವರ ಹಾಸ್ಯ ಸಹ ಬರಿಯ ಬರಡು ಒಣಗಿದ ಹಾಸ್ಯವಲ್ಲ. ನಾಯಿಮರಿಯಂತಹ ಮಕ್ಕಳಿಗೆ ಬರೆದ ಪದ್ಯದಲ್ಲಿ ಸಹ ಕರುಣೆ ಕಣ್ಣೀರನ್ನು ಮಿಡಿಸುತ್ತದೆ. ಅವರ್ಣನೀಯ ಸೌಂದರ್ಯದ ಹಾಸ್ಯದಲ್ಲಿ ಸಹ ಆ ಸೌಂದರ್ಯ ಸ್ವಾಭಾವಿಕವಲ್ಲ ಎಂಬ ಒಂದು ಕೊರಗಿದೆ.

ತುಟಿಗಳನು ಬಣ್ಣಿಸಲೆ ? ತುಂಬೆಲ್ಲ ತಂಬುಲವು
ಹಲ್ಲುಗಳ ಬಣ್ಣಿಸಲೆ ? ನಿನ್ನವಹುದೋ ?

ಸಾರಣಿಯು ಕಾರಣಿಯು ಗಲ್ಲಗಳ ಬಣ್ಣಿಸಲೆ ?
ಆ ಬಣ್ಣನೆಯು ಏನು ನಿನ್ನದಹುದೊ ?

ಪ್ರೇಮಕ್ಕೆ ತೆಂಗಾಳಿಯಾದ 'ರಸಿಕಾ ಪೇಳೋ' ಎಂಬ ಪದ್ಯದಲ್ಲಿ ಸಹ 'ಪ್ರೇಮ ಯಾವಾಗಲೂ ಪೂರ್ಣವಿಲ್ಲ, ಅದರಲ್ಲಿ ಒಂದು ಕೊರತೆ ಇದ್ದೇ ಇದೆ' ಎಂಬ ಭಾವವಾಗುತ್ತದೆ.

ಕಬ್ಬಿನ ಗಣೆ ಡೊಂಕು ಅದರ ಹಾಲದು ಡೊಂಕೆ ರಸಿಕಾ ಪೇಳೊ
ಹುಬ್ಬಿನ ಗೆರೆ ಡೊಂಕು ಕಣ್ಣಿನೋಟವು ಡೊಂಕೆ ರಸಿಕಾ ಪೇಳೊ
ಬಿಲ್ಲ ಕಂಬಿಯು ಡೊಂಕು ಬಿಟ್ಟ ಬಾಣವು ಡೊಂಕೆ ರಸಿಕಾ ಪೇಳೊ
ಹಲ್ಲ ಸಾಲದು ಡೊಂಕು ಬಿದ್ದ ಕಿರಣವು ಡೊಂಕೆ ರಸಿಕಾ ಪೇಳೊ
ಬಿದಿಗೆ ಚಂದ್ರಮ ಡೊಂಕು ಬೆಳದಿಂಗಳದು ಡೊಂಕೆ ರಸಿಕಾ ಪೇಳೊ
ಬಿದಿಯಿತ್ತ ಕುಲ ಡೊಂಕು ನನ್ನ ಪ್ರೀತಿಯು ಡೊಂಕೆ ರಸಿಕಾ ಪೇಳೊ

ಪ್ರೇಮದ ವ್ಯಾಪಾರದಲ್ಲಿ ಕೊಡುವುದು ಮಾತ್ರವೇ ಹೊರತು ತೆಗೆದು ಕೊಳ್ಳುವುದಿಲ್ಲವೆಂಬುದು ಕವಿಗೆ ಗೊತ್ತು. ಪ್ರೇಮ ವ್ಯವಹಾರವಲ್ಲ; ತ್ಯಾಗ. ಗಳಿಗೆ ಗಳಿಗೆಗೂ ದುಃಖದ ಕಾರ್ಮೋಡಗಳು ಎದ್ದು ಸುಖವನ್ನೂ ಶಾಂತಿಯನ್ನೂ ಹಾಳುಮಾಡುತ್ತವೆ. ಅತೃಪ್ತಿ, ಒಳಕ್ಕೆ ಸೇರಿಕೊಳ್ಳಲು ಬಾಗಿಲಿನಲ್ಲಿಯೇ ಕಾಯುತ್ತಿರುತ್ತದೆ.

ಹಳ್ಳದ ದಂಡ್ಯಾಗ ಮೊದಲೀಗೆ ಕಂಡಾಗ। ಏನೊಂದು ನಗಿ ಇತ್ತ
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ। ಏರಿಕೆ ನಗಿ ಇತ್ತ

ಆ ನಗು ಈಗ ಏನಾಯಿತು ? ಅಂದು ಕಟ್ಟಿದ ಸ್ವರ್ಗ ಈಗ ಎಲ್ಲಿ ? ಮಾತು ಮಾತಿಗೆ ಈ ವಿರಸ ಯಾಕೆ ? ನಾನೊಂದು ನೆನೆದರೆ ನೀನೊಂದು ನೆನೆಯುತಿ ? ನನಗೆ ಯಾಕೆ ಮುನಿಯುತಿ ? ಎಂದು ಕವಿಯು ಚಿಂತಿತನಾಗುತ್ತಾನೆ 'ಕೊನೆಗೆ ಬಾಳೆ ಹೀಗೆ. ಇದರಲ್ಲಿ ಸುಖ ದುಃಖ ಸಮ. ಸುಖವನ್ನು ಕದ್ದಾದರೂ ಅನುಭವಿಸುವುದೇ. ಅಳುವನ್ನು ನುಂಗಿ ನಗಬೇಕು. ನಕ್ಕವನೇ ಗೆದ್ದ. ಅತ್ತವನೇ ಸತ್ತ'

ಹುಸಿ ನಗುತ ಬಂದೇವ ನಸು ನಗುತ ಬಾಳೋಣ
ತುಸು ನಗುತ ತೆರಳೋಣ
ಬಿಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ

ಬಡತನ ಒಡೆತನ ಕಡೆತನಕುಳಿದಾವೇನ
ಎದೆ ಹಿಗ್ಗು ಕಡೆಮುಟ್ಟ
ಬಾಳೀನ ಕಡಲಾಗ ಅದನು ಮುಳುಗಿಸಬೇಡ
ಕಡಗೋಲು ಹಿಡಿಹುಟ್ಟ

ಹೀಗೆ ಪ್ರೇಮದ ನಾವೆಯನ್ನು ಸಾಗಿಸಿ ಬಾಳನ್ನು ಬಾಳಬೇಕು. ಯಾವ್ತದಿಲ್ಲದಿದ್ದರೂ ಆಗುತ್ತದೆ ‘ ನಾನು ಒಡವಿ ಆತ ಒಡವ, ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಏದಕು’ ಹೀಗೆ ಜಗತ್ತಿನ ಸೃಷ್ಟಿಯು ಸಾಗುತ್ತಿದೆ. ಗಂಡು ಯಾವುದೋ ಹೆಣ್ಣು ಯಾವುದೋ; ಪ್ರೇಮು ಒಂದನ್ನೊಂದು ಬೆಸೆಯುತ್ತದೆ.

ಆ ಮುಖಾ ಈ ಮುಖಾ
ಯಾವ ಗಂಡೋ ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ
ಕೂಡಿಸಿತ್ತು ಆಡಿಸಿತ್ತು
ಕೂಡಲದೊಲು ನೋಟವಾ
ಮೂರು ದಿನದ ಆಟವಾ

ಬೇಂದ್ರೆಯವರ ಕಲೆ, ಕಲ್ಪನೆಯು, ಸಚ್ಚಿದಾನಂದ ಬ್ರಹ್ಮದಲ್ಲಿ ಭೃಂಗದ ಬೆನ್ನೇರಿ ಬರುತ್ತಿದ್ದರೂ ಅವರ ಬೇರು ಜನಪದದಲ್ಲಿಯೇ ಇದೆ. ಅವರ ಮಾತಿನಲ್ಲಿ ಕವನದಲ್ಲಿ ಸಂಸ್ಕೃತ ಪದ ಬಹು ವಿರಳ. ಅವರು ಆರಿಸುವ ಮಟ್ಟುಗಳೆಲ್ಲಾ ಜನಪದ ಸಾಹಿತ್ಯದ, ರಾಗಿ ಬೀಸುವ ಹಾಡುಗಳ ಮಟ್ಟುಗಳೇ. ಅವುಗಳನ್ನೆಲ್ಲಾ ಅವರು ಜನಜೀವನದ ಸಂಪರ್ಕದಿಂದಲೇ ಹೊಂದಿದ್ದಾರೆ. ಅದೇ ಬೇಂದ್ರೆಯವರ ಬಲ. ಅವರ ಕವನ ಜನರನ್ನು ಹಾಗೆ ಆಕರ್ಷಿಸುತ್ತಿರುವುದಕ್ಕೂ ಅದೇ ಕಾರಣ. ಒಂದು ಸಲ ಅವರು, ಕುಣಿಯೋಣು ಬಾರ ಕವನವನ್ನು ಹಾಡುವುದನ್ನು ಮೂರು ವರುಷ ನಿಲ್ಲಿಸಿಬಿಟ್ಟರು. ‘ ಕೆಲವು ದಿನ ಹಾಡುವುದಿಲ್ಲ, ಜನ ಮರೆತರೆ ಮರೆಯಲಿ ’ ಎಂಬುದು ಅವರ ಅಭಿಪ್ರಾಯವಾಗಿದ್ದಿತು. ಆದರೆ ಜನ ಒಳ್ಳೆಯದನ್ನು ಎಂದಿಗೂ ಸಾಯಗೊಡುವುದಿಲ್ಲ. ಜನದ ಬಾಯಲ್ಲಿ ಕನ್ನಡ ಇರುವವರೆಗೆ ಬೇಂದ್ರೆ ಹೆಸರು ಇದ್ದೇ ಇರುತ್ತದೆ.

ನನ್ನ ಸ್ನೇಹಿತರೊಬ್ಬರು ‘ಬೇಂದ್ರೆ, ಈ ಐವತ್ತು ವರುಷದಿಂದ ಏನು ಆಸ್ತಿ

ಮಾಡಿದ್ದಾರೆ' ಎಂದು ಕೇಳಿದರು. ಅವರಿಗೆ ನಾನು ತತ್‌ಕ್ಷಣ ಜವಾಬು ಕೊಡಲಿಲ್ಲ. ಬೇಂದ್ರೆಯವರ ಕೆಲಸ ಹೋದಾಗ ಅವರನ್ನು ನಾನು 'ಮುಂದೆ ಎಲ್ಲಿಗೆ ಹೋಗುತ್ತೀರಿ' ಎಂದು ಕೇಳಿದ್ದೆ. ಬೇಂದ್ರೆ "ಧಾರವಾಡಕ್ಕೆ" ಎಂದರು. ಅದೇನು ಎಂದೆ. ಅಲ್ಲೊಂದು ಮನೆ ಇದೆ ಎಂದರು. ತಲೆಯ ಮೇಲೆ ಒಂದು ಸೂರು ಇದ್ದರೆ ಸಾಕೆಂದು, ಅಲ್ಲಿ ಕಾವ್ಯ ಬರೆಯುವವರು, ಆಸ್ತಿ ಮಾಡುವ ಜನವೇ. ಕಾವ್ಯಗಳೇ ಅವರ ಆಸ್ತಿ. ಜನಾನುರಾಗವೇ ಅವರ ಸಂಪತ್ತು. ನನ್ನನ್ನು ಪ್ರಶ್ನೆ ಮಾಡಿದವರಿಗೆ ನಾನು 'ನೀವು ಬೇಂದ್ರೆಯವರನ್ನು ನೋಡಿಲ್ಲ. ನೋಡಿಯಾದ ಮೇಲೆ ನನ್ನನ್ನು ಈ ಪ್ರಶ್ನೆ ಕೇಳಿ' ಎಂದೆ. ಕೆಲವು ತಿಂಗಳುಗಳ ನಂತರ ಅವರು ಬೇಂದ್ರೆಯವರನ್ನು ಬೆಂಗಳೂರಿನಲ್ಲಿ ನೋಡಿದರು. ಈಚೆಗೆ ಮತ್ತೆ ನನಗೆ ಪ್ರಶ್ನೆ ಹಾಕಿಲ್ಲ.

ಕೊನೆಗೆ ಈ ಪದ್ಯವನ್ನೇ ಹೇಳಿ ಬೇಂದ್ರೆಯವರನ್ನು ನಮಿಸುತ್ತೇನೆ.

ನುಡಿದು ಬೇಸತ್ತಾಗ। ದುಡಿದುಡಿದು ಸತ್ತಾಗ
ಜನಕ ಹಿಗ್ಗಿನ ಹಾಡು ನೀಡಾಂವಾ
ನಿನ್ಹಾಂಗ ಆಡಾಕ। ನಿನ್ಹಾಂಗ ಹಾಡಾಕ
ಪಡೆದು ಬಂದವ ಬೇಕೊ ಗುರುದೇವಾ

ಮಕ್ಕಳಾಗ್ಯಾಡೀದಿ। ಹಕ್ಕ್ಯಾಗಿ ಹಾಡೀದಿ
ಚಿಕ್ಕ್ಯಾಗಿ ನೋಡೀದಿ ಗುರುದೇವಾ
ಬಳ್ಳ್ಯಾಗ ಕುಣಿದೀದಿ ಬೆಳಕಿನ್ಯಾಗ ತಣಿದೀದಿ
ಹೂವಾಗಿ ಅರಳೀದಿ ಗುರುದೇವಾ

ಬೆಳೆಯಾಗೀಸಾಡೀದಿ। ಗಾಳ್ಯಾಗ ಬಿಸಾಡೀದಿ
ಮಳಿಯಾಗ ಕೂಸಾಡೀದಿ ಗುರುದೇವಾ
ಬಿಸಿಲ್ಹಣ್ಣು ಉಂಡೀದಿ। ಬೆಳದಿಂಗಳ ಕಂಡೀದಿ
ಚಳಿಮುದ್ದು ಕೊಂಡೀದಿ ಗುರುದೇವಾ

ಮೂಡಲಕ ಮೂಡೀದಿ। ಪಡುವಲಕ ಓಡೀದಿ
ದಿಕ್ಕೆಲ್ಲ ಕೂಡೀದಿ ಗುರುದೇವ
ಹಾಡಿ ಹಿಗ್ಗಾದಿ ನೀ! ಜಗದ ಕಣ್ಣಾದೆ ನೀ
ದುಡಿದು ಸಣ್ಣಾದೆ ನೀಗುರುದೇವಾ

ಭಾರತದ ಶಿಲ್ಪ ಮತ್ತು ಚಿತ್ರಕಲೆ

ಈಗ ಕೆಲವು ದಿನಗಳ ಕೆಳಗೆ ಅಜಂತದ ಗುಹಾಂತರ್ದೇವಾಲಯಗಳನ್ನು ನೋಡುವ ಸುಯೋಗ ನನಗೆ ದೊರಕಿತ್ತು. ಭಾರತದ ಆ ಪ್ರಾಚೀನ ವೈಭವವನ್ನು ನೋಡಿ ಹೆಮ್ಮೆಯೂ, ಇಂದಿನ ನಮ್ಮ ಕಲಾರಹಿತ ಅನುಕರಣಪಟು ಬರಡುಜೀವನದ ಧ್ಯಾನದಿಂದ ಖೇದವೂ, ಉಂಟಾಯಿತು. ಆದರೆ ಆ ಖೇದ ಬಹಳ ಕಾಲ ಉಳಿಯಲಿಲ್ಲ. ಸ್ವತಂತ್ರಭಾರತ, ತಾನು ಹಿಂದೆ ಸಾಧಿಸಿದುದಕ್ಕಿಂತ ಇನ್ನೂ ಹೆಚ್ಚು ವೈಭವವನ್ನೂ ಕಲಾಸಿದ್ಧಿಯನ್ನೂ ಸಾಧಿಸುವ ಮಂಗಳ ಶುಭಸೂಚನೆಯಲ್ಲಿರುವುದರಿಂದ, ಭವಿಷ್ಯದ ಕನಸನ್ನು ಕಂಡು ಆನಂದಗೊಂಡೆ. ಆ ದಿವ್ಯ ದೀರ್ಘದರ್ಶಿತ್ವದಲ್ಲಿ ಭಾರತದ ಚಿತ್ರ ಮತ್ತು ಶಿಲ್ಪಕಲೆಯ ಪರಂಪರೆಯ ಸಿಂಹಾವಲೋಕನ, ನನ್ನ ಮನೋನೇತ್ರದ ಮುಂದೆ ಹಾದು ಹೋಯಿತು. ಭಾರತದ ಕಲೆಯ ಆ ದಿವ್ಯ ನೆಲೆಗಳಿಗೆ ನಿಮ್ಮನ್ನು ನನ್ನೊಂದಿಗೆ ಕರೆದುಕೊಂಡು ಹೋಗುವುದೇ ಇಂದು ನನ್ನ ಉದ್ದೇಶ.

ಭಾರತದಲ್ಲಿ ಶಿಲ್ಪ ಮತ್ತು ಚಿತ್ರಕಲೆಗಳ ಪ್ರಾರಂಭದ ಉಗಮವನ್ನು, ನಾವು, ಸುಮಾರು ಎರಡು ಸಾವಿರ ವರುಷಗಳ ಹಿಂದಿನಿಂದಲೂ ಕಾಣಬಹುದು. ವೇದಗಳನ್ನು ಸೃಷ್ಟಿಸಿದ ಋಷಿಗಳ ಮನೋನೇತ್ರದ ಎದುರಿಗೆ, ಅನೇಕ ಸಹಸ್ರ ನೇತ್ರಗಳ ನಾನಾ ವರ್ಣಗಳ ಅಂತರಿಕ್ಷವೂ, ಪರ್ವತ ವೃಕ್ಷ ನದಿಗಳ ರಮಣೀಯ ಸೌಂದರ್ಯವೂ, ಬೆಳಗು ಬೈಗುಗಳ ನಿತ್ಯ ನೂತನ ಬದಲಾವಣೆಗಳೂ, ಇಂದ್ರನೇ ಮೊದಲಾದ ದೇವತೆಗಳ ದೇದೀಪ್ಯಮಾನ ಸ್ಫುರದ್ರೂಪವೂ, ದೇವಕನ್ನಿಕೆಯರ ಚಪಲ ಮಣಿಮಂಜೀರ ನೂಪುರ ಧ್ವನಿಮಿಶ್ರ ಅಪಾಂಗ ಭಂಗಿಯೂ ತೋರುತಿದ್ದವು. ಆದರೆ ಆ ರೂಪಗಳನ್ನು ಶಿಲ್ಪಗಳಲ್ಲಿಯಾಗಲೀ ಚಿತ್ರಗಳಲ್ಲಿಯಾಗಲೀ ಅವರು ಹಿಡಿದು ಇಡಲಿಲ್ಲ.

ಅಜಂತ ಗುಹಾಂತರ ದೇವಾಲಯ ಭಿತ್ತಿ ಚಿತ್ರಗಳು, ಭಾರತದ ಚಿತ್ರಕಲೆಯ ಪ್ರಥಮ ಸಾಧನೆ ಎನ್ನಬಹುದು. ಅವು ಎರಡು ಸಾವಿರ ವರುಷಗಳ ಹಿಂದಲ ಸಿದ್ಧಿ; ಅಜಂತ ಭಿತ್ತಿಚಿತ್ರಗಳು ಭಾರತದ ಚಿತ್ರಕಲೆಯ ಸ್ವರ್ಣಕೃತಿಗಳು. ಭಾರತ, ತಾನು ಭಾರತವೇ ಆಗಿದ್ದಾಗ ಚಿತ್ರಿಸಿದ, ಭಾರತದ ಆತ್ಮವನ್ನೊಳಗೊಂಡ ಕಲಾಕೃತಿಗಳು ಅವು. ಭಾರತದ ಎಲ್ಲ ಕಲೆಗಳಿಗೂ ಅಜಂತ

ಅಮರಸ್ಫೂರ್ತಿ. ಒಮ್ಮೆಯಾದರೂ ಅಜಂತವನ್ನು ನೋಡದಿದ್ದರೆ, ಭಾರತದ ಕಲೆಯ ಸತ್ಯವಾದ ಆತ್ಮ ನಮಗೆ ಅರಿವಾಗುವುದಿಲ್ಲ. ಅಜಂತದ ಮೊದಲ ನೋಟವೇ ನಮ್ಮನ್ನು ಮೈಮರೆಯುವಂತೆ ಮಾಡುತ್ತದೆ. ಬಾಗಿದ ಹಸಿರು ಬೂದುಬಣ್ಣದ ಬೆಣಚುಕಲ್ಲಿನ ಕಡಿದಾದ ಪ್ರಪಾತ, ಕೆಳಗಡೆ ತಿಳಿಯಾದ ಸರಸ್ಸು, ಮೇಲೆ ನೀಲಾಕಾಶ, ಹೊನ್ನು ಸೂರ್ಯ; ಅಜಂತ ಗುಹಾಂತರ್ದೇವಾಲಯದ ವಾತಾವರಣವೇ ಅನಿರ್ವಚನೀಯ ಶಾಂತಿಮಯ. ಪರ್ವತದ ತುದಿ ಸೇರಲು ಎರಡು ಮಾರ್ಗಗಳಿವೆ. ಮೆಟ್ಟಲುಗಳ ಆಧುನಿಕ ಮಾರ್ಗ ಒಂದು ನೂತ್ತೊಂದು ಎರಡು ಸಾವಿರ ವರುಷಗಳ, ಝರಿಯ ಮೂಲಕ ಹೋಗುವ ಹಿಂದಲ ಮಾರ್ಗ. ಈ ಮಾರ್ಗದಲ್ಲಿ ಹಸಿರು, ಬೂದು, ಬಿಳುಪು, ಹಳದಿ ಕಲ್ಲುಗಳ ರಾಸಿಗಳನ್ನು ತುಳಿದುಕೊಂಡು ಅರ್ಧ ದಾರಿ ಹೋಗಿ ಅಲ್ಲಿಂದ ಎಡಕ್ಕೆ ಅಥವಾ ಬಲಕ್ಕೆ—ಹೇಗೆ ಹೋದರೂ–ಗುಹಾಂತರ್ದೇವಾಲಯಗಳಿಗೇ ಹೋಗುವುದು. ದೂರದಿಂದಲೇ ದೊಡ್ಡ ದೊಡ್ಡ ಕಲ್ಲುಕಂಬಗಳ ಪ್ರವೇಶದ್ವಾರಗಳು ಕಣ್ಣಿಗೆ ಬೀಳುವುವು. ಆ ದ್ವಾರದಲ್ಲಿ ಒಳಗೆ ಪ್ರವೇಶಿಸಿದರೆ ತೀರಿತು! ಮಾಯಾಮುಚ್ಛೇಂದ್ರ! ಯಾವೆಡೆ ನೋಡಿದರೂ ಕಲೆಯ ಸಾಕ್ಷಾತ್ಕಾರ. ಇದ್ದಕ್ಕಿದ್ದಂತೆ ಸ್ವಪ್ನರಾಜ್ಯವನ್ನು ಪ್ರವೇಶಿಸಿದಂತೆ ತೋರುವುದು.

ಅಜಂತ ಗುಹಾಂತರ ದೇವಾಲಯದ ಚಿತ್ರಗಳೆಲ್ಲ ಬುದ್ಧನ ಜಾತಕ ಕತೆಗಳಿಗೆ ಸಂಬಂಧಿಸಿದುವು. ಭಗವಾನ್ ಬುದ್ಧನ ಭಕ್ತರಾದ ಧನಿಕರೂ ರಾಜರೂ ಧರ್ಮಶ್ರದ್ಧೆಯಿಂದಲೂ ಸಾತ್ವಿಕ ತ್ಯಾಗದಿಂದಲೂ, ಜನರಲ್ಲಿ ಸನ್ಮಾರ್ಗಪ್ರೇರಣೆ ಚೇತನಗೊಳ್ಳಲೆಂದು ಬರೆಸಿದ ಚಿತ್ರಗಳು ಅವು. ಆ ಚಿತ್ರಗಳ ಕಲಾಕೌಶಲ ಅದ್ವಿತೀಯವೂ ಅದ್ಭುತವೂ ಆಗಿದೆ. ಆ ಕಲೆಗಾರರು ಅಂದಿನ ಕಾಲದ ಹಕ್ಕಿಗಳು ಪುಷ್ಪಗಳು ನದಿಗಳು ಪರ್ವತಗಳು ಇವುಗಳನ್ನು ಕಣ್ಣಿಗೆ ಕಟ್ಟುವಂತೆ ತಮ್ಮ ಕುಂಚದ ತುದಿಗಳಲ್ಲಿ ಹಿಡಿದು ನಿಲ್ಲಿಸಿದ್ದಾರೆ. ಅಜಂತದ ಕಲಾಕೃತಿಗಳು ತಮ್ಮ ಸಾರ್ವಭೌಮತ್ವವನ್ನು ಇಂದಿನ ವರೆಗೆ ಒಂದೇ ಸಮನಾಗಿ ಉಳಿಸಿಕೊಂಡಿರಲು ಕಾರಣ, ಆ ಕಲಾವಿದರ ನಿರ್ದುಷ್ಟವಾದ ಲೋಕ ವ್ಯವಹಾರ ಜ್ಞಾನವೇ. ಅವರು ಒಂದು ಪೂರ್ಣಚಿತ್ರವನ್ನು ರಚಿಸಲಿ, ಒಂದೇ ಗೆರೆಯನ್ನು ರೂಪಿಸಲಿ. ಅದು ಸಿದ್ಧಹಸ್ತರ ಕಾರ್ಯ. ಅಜಂತದಲ್ಲಿರುವ ಕಲಾಕೃತಿಗಳೆಲ್ಲಾ ಏಕಕಾಲದಲ್ಲಿ ಬರೆದುವಲ್ಲ. ಬುದ್ಧನ ನಿರ್ಯಾಣದ ಪ್ರಾರಂಭದ ಶತಮಾನದ

ಭಿತ್ತಿಚಿತ್ರಗಳಲ್ಲಿ (ಗುಹೆ ೯-೧೦) ಹಜಾರದ ಕಂಬಗಳಲ್ಲಿಯೂ ಗೋಡೆಗಳಲ್ಲಿಯೂ ಇರುವ ಬುದ್ಧ, ಭಿಕ್ಕುವಿನ ಸರಳವಾದ ಉಡುಗೆ ತೊಟ್ಟಿದ್ದಾನೆ. ಮತ್ತೊಂದೆಡೆ ಹಸಿರು ಹೊಳೆಯುವ ಹಿನ್ನೆಲೆಯ ಕಮಲದ ಮೇಲೆ ಪಾದವನ್ನು ಬಿಟ್ಟುಕೊಂಡು ಬುದ್ಧ ಕುಳಿತಿದ್ದಾನೆ. ಬೇರೊಂದೆಡೆ ಬುದ್ಧ ಬರಿಯ ಕಪ್ಪು ಬಿಳುಪು ಗೆರೆ ಮಾತ್ರ.

ಹೀಗೆ ಸರಳತೆಯಿಂದ ಹಿಡಿದು ಕಲೆ, ಮುಂದೆ ಅದ್ಭುತವೂ ರಮ್ಯವೂ ಆಗಿ ಸಾಗುತ್ತದೆ. ಅತ್ಯಂತ ಸೂಕ್ಷ್ಮವಾಗಿ ಬಿಡಿಸಿರುವ ಬುದ್ಧನ ಚಿತ್ರ, ಜತೆಯ ಇತರ ಚಿತ್ರಗಳು: ಕಲೆಗಾರರು ಪ್ರಾಚೀನಭಾರತದ ಬಾಳನ್ನೂ ನಾಗರಿಕತೆಯನ್ನೂ ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಆ ಆಕೃತಿಗಳಲ್ಲಿ ಹೊರತೋರುವ ಬಾಳಿನ ಉತ್ಸಾಹ, ಜೀವನವು ಮಹೋತ್ಸವವೆಂಬ ಭಾವ, ಬಾಳಿನ ವೈಭವ, ನೋಟಕರನ್ನು ಬೆರಗುಮಾಡುತ್ತದೆ. ಆ ಕಲಾವಿದರು ಜಗತ್ತಿನ ವೈಭವವನ್ನೂ, ಬಾಳಿನ ಸೊಗಸನ್ನೂ ಇರುವಿಕೆಯ ಆನಂದವನ್ನೂ ಪೂರ್ಣವಾಗಿ ಚಿತ್ರಿಸಲು ಹೊರಟವರು. ಸುಖ ತಪ್ಪು ಎಂದು ಅವರು ಭಾವಿಸಿದವರಲ್ಲ. ಅವರು ಚಿತ್ರಿಸಿರುವ ಕೈಗಳು (ರೇಖೆಗಳು) ಕೊಂಕು ಗೆರೆಗಳು, ಅವಯವಗಳ ಚಿತ್ತಾಕರ್ಷಕವಿಲಾಸ, ಅಂತರಂಗದ ಪ್ರಸನ್ನತೆಯ ಪ್ರಕಾಶನ, ಎಲ್ಲಕ್ಕಿಂತ ಹೆಚ್ಚಾಗಿ ಆ ಆಕೃತಿಗಳ ನಗೆನೋಟ ಕಣ್ಣಬೆಡಗು—ಕೆಲವೆಡೆ ಬರಿಯ ಕಣ್ಣುಗಳನ್ನೇ ರೂಪಿಸಿಬಿಟ್ಟಿದ್ದಾರೆ. ಆದರೂ ಆ ಕಣ್ಣುಗಳನ್ನು ನೋಡಿದಕೂಡಲೇ ಮೋಹನಾಂಗಿ, ನಯಯವ್ವನದಿಂದ ಜ್ವಲಿಸುತ್ತಾ ನಮ್ಮ ಮುಂದೆ ಹಾಯ್ದಂತೆ ಗೋಚರವಾಗುತ್ತದೆ. ಅಜಂತದ ಚಿತ್ರಗಳು ಹೀಗೆ ಅಂದಿನ ಬಾಳಿನ ಅನುಕ್ಷಣ, ಪ್ರತಿದಿನದ ಬಾಳನ್ನೂ ಪೂರ್ಣವಾಗಿ ಬಾಳಬೇಕೆಂಬ ಧ್ಯೇಯದ ಪ್ರತೀಕ. ಆ ಮೃಗನೇತ್ರೆಯರ ಕೇಶಾಲಂಕಾರಗಳನ್ನೂ ಮುಖಭಾವಗಳನ್ನೂ ನೋಡಿ, ಇಂದಿನ ಪ್ಯಾರಿಸ್ ಮತ್ತು ಹಾಲಿವುಡ್ ಸುವಾಸಿನಿಯರಿಗೆ ಸಹ, ಹೊಟ್ಟೆಕಿಚ್ಚು ಉಂಟಾಗುತ್ತದೆ. ಆದರೆ ಆ ಕಲೆ ಬರಿಯ ಚಿತ್ರಗಾರನ ಊಹನಾಶಕ್ತಿ ಮಾತ್ರವಲ್ಲ. ಅಜಂತದ ದೇವಾಲಯಗಳಲ್ಲಿ ರೂಪಿತವಾಗಿರುವ ಸ್ತ್ರೀಯರು, ಅಂದು ಭಾರತದಲ್ಲಿ ಬಾಳಿದ ಸ್ತ್ರೀಯರು. ಸ್ನೇಹ ಮೃದುತ್ವ ಸೌಂದರ್ಯ ತೇಜಸ್ಸು, ಜತೆಗೆ ಅಲೌಕಿಕವಾದ ಭಾರತೀಯವಾದ ಮತ್ತಾವುದೋ ಅಧ್ಯಾತ್ಮಿಕತೆ ಸಹ, ಆ ಚಿತ್ರಕಲೆಯ ಅಂತರ್ಯದ ಜೀವಾಳವಾಗಿದೆ.

ಆ ಮಾಯಾಲೋಕವನ್ನು ಒಮ್ಮೆ ಪ್ರವೇಶಿಸಿದ ಮೇಲೆ ಯಾವ ಚಿತ್ರ! ಯಾವ ರೂಪುರೇಖಾಭಂಗಿ! ಅವರವರ ಮನೋಭಾವಕ್ಕೆ ಅನುಸಾರವಾಗಿ ಕೃತಿಗಳು ಅವರನ್ನು ಆಕರ್ಷಿಸುತ್ತವೆ. ಅನೇಕರು "ಪೂಜಾ" ಚಿತ್ರದಿಂದ ಆಕರ್ಷಿತರಾಗುತ್ತಾರೆ. ಮತ್ತೊಂದೆಡೆ ಬುದ್ಧನ ಮುಂದೆ, ಆತನಲ್ಲಿ ನೆಟ್ಟದೃಷ್ಟಿಯುಳ್ಳವಳಾಗಿ ಕಣ್ಣುಗಳಿಂದ ಅವನನ್ನೇ ಪಾನಮಾಡುತ್ತಿರುವಂತೆ ತಾಯಿ, ಮತ್ತು ಮಗು. ಆ ತಾಯಿಯ ಮುಖದಲ್ಲಿ ತೋರುವುದು ಬರಿಯ ದೈನ್ಯಭಕ್ತಿಯಲ್ಲ, ನಿಜವಾದ ವಿರಕ್ತಿ. ನಾಗರಾಜನು ಸರ್ವಸಂಗಪರಿತ್ಯಾಗಿಯಾಗಿ ಬುದ್ಧ ಭಿಕ್ಷುವಾಗಲು ನಿರ್ಣಯಿಸಿದ ಚಿತ್ರದಲ್ಲಿ ತೋರುವುದು, ಅನಿರೀಕ್ಷಿತವಾದುದು ನಡೆದೇ ಹೋಯಿತೆಂಬ ಆಶ್ಚರ್ಯವೇ ಹೊರತು ಗಾಬರಿಯಲ್ಲ. ಅರಮನೆಯ ರಾಣಿವಾಸದ ಸುಂದರಿಯರು ಅವನ ಸುತ್ತಾ ಸರಸತೆಯಿಂದಲೇ ಸೇರಿ ಅವನನ್ನು ಬೀಳ್ಕೊಡುವುದು, ಆ ಸ್ತ್ರೀಯರ ಒಂದು ವಿಧವಾದ ವೈರಾಗ್ಯಜನಿತ ಅನಾಸಕ್ತಿಯನ್ನೇ ತೋರಿಸುತ್ತದೆ. ಮರಣೋನ್ಮುಖಳಾಗಿರುವ ಒಬ್ಬಳು ರಾಜಕುಮಾರಿ, ನಿದ್ರಿಸುತ್ತಿರುವ ಗಂಧರ್ವಕನ್ನಿಕೆಯಾಗಿ ತೋರುತ್ತಾಳೆ. ಬುದ್ಧದೇವನಲ್ಲಿ ಏಕಾಗ್ರವಾದ ಭಕ್ತಿಯಿಂದ, ಆಸೆಯಿಂದ, ಸುಖದಿಂದ ಅವನನ್ನೇ ಕುರಿತು ದೃಷ್ಟಿಸುತ್ತಿರುವ ಒಲಪುಗಾರ್ತಿಯರ ನೋಟದಲ್ಲಿ, ಬುದ್ಧದೇವನ ವ್ಯಕ್ತಿತ್ವದಿಂದ ಆಕರ್ಷಿತರಾದ ದಿಟ್ಟ ಹುಡುಗಿಯರ ಆಶಾಭಾವನೆ, ಪ್ರವೃತ್ತಿಮಾರ್ಗ ಸಹ ವ್ಯಕ್ತವಾಗುತ್ತಿದೆ. [ಬುದ್ಧನನ್ನು ಸ್ತ್ರೀಯರು ಪೂಜಿಸುತ್ತಿರುವ ಚಿತ್ರ] ರಾಜದಂಡಕ್ಕೆ ಒಳಗಾಗಿ ಕತ್ತಿಗೆ ಕತ್ತನ್ನು ನೀಡಿ ಮೊಣಕಾಲೂರಿ ಮರಣವನ್ನು ಎದುರು ನೋಡುತ್ತಾ ಕುಳಿತಿರುವ ಹೆಣ್ಣು, ಜಗತ್ತನ್ನು ತೃಣವಾಗಿ ಎಣಿಸುವ ಆತ್ಮಪ್ರತ್ಯಯವುಳ್ಳವಳಾಗಿದ್ದಾಳೆ. ಬುದ್ಧನನ್ನು ಈ ಜಗತ್ತಿನ ಮಾಯಾಜಾಲ "ಮತ್ತಾಂಗನಾಪಾಂಗ ಭಂಗಿಲೋಲ" ರಮ್ಯತೆಗೆ ಆಕರ್ಷಿಸುತ್ತಿರುವ ವಿಲಾಸವತಿಯರ ಹಾವಭಾವ ಭಂಗಿ ನಿಲುವು ಬೆಡಗು ಎಷ್ಟು ವಾಸ್ತವಿಕವಾಗಿದೆ ಎಂದರೆ—ಅಲ್ಲಿ ಬುದ್ಧನ ವಿರಕ್ತಿಯ ಮಹಿಮೆ ಅದ್ಭುತವಾಗಿ ಎದ್ದು ಕಾಣುತ್ತದೆ. ಬುದ್ಧದೇವ, ತಮ್ಮ ಆಕರ್ಷಣೆಗೆ ಒಳಗಾಗಲಿಲ್ಲ ಎಂಬುದರಿಂದ ಅವರಿಗೆ ದುಃಖವಾಗಿಲ್ಲ. ಒಂದೆಡೆ ಭಾರತ ಸಿಂಹಳವನ್ನು ಜಯಿಸಿದ ಚಿತ್ರ; ಮತ್ತೊಂದೆಡೆ ಹಡಗಿನಲ್ಲಿ ಆನೆಗಳನ್ನು ಸಾಗಿಸುತ್ತಿರುವ ಚಿತ್ರ—ಹೀಗೆ ಒಂದಾದ ಮೇಲೆ ಒಂದರಂತೆ ಆ ಕಲಾವೈಭವ ಪ್ರೇಕ್ಷಕನ ಕಣ್ಣ ಮುಂದೆ ಸುಳಿದು ಮನಸ್ಸನ್ನು ರಸಾನುಭವ

ದಿಂದ ಪೂರ್ಣವಾಡಿ ದೇಹವನ್ನು ಆನಂದಾಮೃತರಸಾಬ್ಧಿಯಲ್ಲಿ ಮುಳು ಗಿಸುತ್ತದೆ.

ಅಜಂತದ ಭಿತ್ತಿಚಿತ್ರಗಳೆಲ್ಲ ಏಕಕಾಲದಲ್ಲಿ ಆದುವಲ್ಲ. ಕೆಲವು ಕಲಾವಿದರು ಚಿತ್ರಗಳಲ್ಲಿ ಒಂದೆರಡು ಗೆರೆಗಳನ್ನು ಮಾತ್ರ ಬರೆದು ತೃಪ್ತರಾಗಿದ್ದು ದನ್ನು ಈಚಿನ ಕಲಾವಿದರು ಪೂರ್ಣಗೊಳಿಸಿದ್ದಾರೆ. ಪ್ರತಿಯೊಬ್ಬ ಚಿತ್ರಕಾರನೂ ಬಾಳನ್ನು ಚೆನ್ನಾಗಿ ಅರಿತಿದ್ದವನೇ. ಅಲ್ಲಿ ಒಂದು ಉತ್ತಮ ಒಂದು ಅಧಮ ಎಂಬುದಿಲ್ಲ. ಯಾವ ಒಂದು ಚಿತ್ರವೂ ತನ್ನ ಕೋರೈಸುವ ಅದ್ಭುತ ವರ್ಣದಿಂದ ನಿಮ್ಮನ್ನು ಆಕರ್ಷಿಸುವುದಿಲ್ಲ. ಆದರೆ, ಭಿಕ್ಷುಗಳು ಅನೇಕ ಶತಮಾನಗಳ ಅಡಿಗೆಯ ಹೊಗೆಯಿಂದ ಕಪ್ಪುಕವಿಸಿರುವ ಆ ಕೊಳೆಯನ್ನು ತೊಳೆದು ಹೋಗಲಾಡಿಸಿ; ಅನಂತರ ಕಾಣುವುದು ಕಣ್ಣಿಗೆ ಹಬ್ಬ! ಅದ್ಭುತ ಕಲಾವಿದರ ಕೈಚಳಕ! ಚಿತ್ರಗಳಲ್ಲಿರುವ ರೇಖೆಗಳು, ಹರಿಯುತ್ತಿರುವ ರಕ್ತನಾಳಗಳೋ, ಮುಂದಲ ಗಳಿಗೆಯಲ್ಲಿ ಎದ್ದು ಜೀವಗೊಂಡು ಓಡಾಡುವುವೋ ಎಂಬಂತೆ ತೋರುವುವು. ಅಜಂತದ ಕಲೆ ತಾನೇ ಸಾರ್ವಭೌಮನಾದ ಅದ್ವಿತೀಯ ಕಲೆ. ಯೂರೋಪು ಚೀಣ ಜಪಾನ್ ಕಲೆಗಳಲ್ಲಿ ಅಜಂತ ಇದೆಯೇ, ಅಜಂತದ ಕಲೆಗಳಲ್ಲಿ ಯೂರೋಪು ಚೈನಾ ಜಪಾನ್ ಇದೆಯೇ ಎಂಬುದು ಮುಖ್ಯವಲ್ಲ. ಈ ಹೋಲಿಕೆಯಿಂದ ಅಜಂತದ ಬೆಲೆ ಹೆಚ್ಚುವುದೂ ಇಲ್ಲ; ತಗ್ಗುವುದೂ ಇಲ್ಲ.

ಅಜಂತದ ಕಲೆ ಅಂದಿನಿಂದ ಇಂದಿನ ವರೆಗೆ ಒಂದೇ ಸಮನಾಗಿ, ಭಾರತೀಯರ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿರುವುದಕ್ಕೆ ಕಾರಣ, ಆ ಕಲಾವಿದರು ಜಗತ್ತಿನ ವಾಸ್ತವಿಕತೆಯನ್ನು ಅರಿತು ಅದನ್ನು ಚಿತ್ರಿಸಿದುದೇ. ಬುದ್ಧದೇವನು "ಸ್ತ್ರೀಯರಿಂದ ದೂರವಾಗಿರಿ, ಅವರನ್ನು ನೋಡಲೂ ಬೇಡಿ. ಅವರು ಪಿಶಾಚಿಗಳ ಪ್ರತಿನಿಧಿಗಳು" ಎಂದಿದ್ದನು. ಆತನ ಶಿಷ್ಯರಾದ ಭಿಕ್ಷು ಕಲೆಗಾರರು ಚಿತ್ರಗಳಲ್ಲಿ ಅಸಂಖ್ಯಾತ ಸ್ತ್ರೀಯರನ್ನು—ನರ್ತಕಿಯರನ್ನು, ಗಾಯಕಿಯರನ್ನು, ರಥತೂರ್ಯ ವಾದ್ಯಗಳೊಂದಿಗೆ ಮೆರವಣಿಗೆ ಹೋಗುವವರನ್ನು, ಅಲಂಕರಿಸಿಕೊಳ್ಳುತ್ತಿರುವವರನ್ನು, ದೃಢಾಂಗರಾದ ಪುಷ್ಟರಾದ ಸುಂದರ ಸುಕುಮಾರಿಯರನ್ನು—ಚಿತ್ರಿಸಿದ್ದಾರೆ. ಆ ಭಿಕ್ಷುಗಳಿಗೆ ಸ್ತ್ರೀಯರು ಎಷ್ಟು ಚೆನ್ನಾಗಿ ತಿಳಿದಿದ್ದಿರಬೇಕು! ಈ ಜಗತ್ತಿನ ಚಲಿಸುತ್ತಿರುವ ಬಹುಮುಖದ ವಿರಾಟ್

ಸ್ವರೂಪವನ್ನು, ಜಂಗಮ ದೀಪಮಾಲೆಗಳನ್ನು, ಅವರು ಎಷ್ಟು ಸೂಕ್ಷ್ಮವಾಗಿ ನೋಡಿ, ಅರಿತು, ಎಷ್ಟು ಪ್ರೀತಿಯಿಂದ ಸೃಷ್ಟಿಸಿರಬೇಕು! ಬುದ್ಧದೇವನನ್ನು ಹೇಗೆ ಶಾಂತನನ್ನಾಗಿ ವಿರಕ್ತನನ್ನಾಗಿ ಅನಾಸಕ್ತನನ್ನಾಗಿ ಚಿತ್ರಿಸಿದ್ದಾರೆಯೋ ಅಷ್ಟೇ ಶ್ರದ್ಧೆ ಸತ್ಯದಿಂದ ಅವರು ಜಗತ್ತನ್ನೂ ಚಿತ್ರಿಸಿದ್ದಾರೆ.

ಚಿತ್ರಕಲೆಯು ಅಲ್ಲಿಂದ ಮುಂದೆ ಭಾರತದಲ್ಲಿ ಬೆಳೆಯಲಿಲ್ಲ. ಅಥವಾ ಅಜಂತವೇ ಆ ಮಾರ್ಗದಲ್ಲಿ ನಮ್ಮ ಸಂಪತ್ತು. ಅನೇಕ ಚಿತ್ರಗಳು ನಾಶವಾಗಿರಲೂ ಬಹುದು. ಭಾರತದ ಚಿತ್ರಕಲೆಯ ಪ್ರಥಮ ಸ್ವರ್ಣಯುಗ ಕ್ರಿ. ಶ. ಒಂದನೆಯ ಶತಮಾನದಿಂದ ಏಳನೆಯ ಶತಮಾನದ ವರೆಗೆ, ಮುಖ್ಯವಾಗಿ ಗುಪ್ತರ ಕಾಲದಲ್ಲಿ ಆಗಿಹೋಯಿತು. ಅನಂತರ ಶಿಲ್ಪಕಲೆಗೆ ಪ್ರಾದುರ್ಭಾವವುಂಟಾಯಿತು. ಕ್ರಿ. ಶ. ಏಳನೆಯ ಶತಮಾನದ ಎಲ್ಲೋರ ಗುಹಾಂತರ್ದೇವಾಲಯದ ಶಿಲ್ಪಕೃತಿಗಳು ಇಂದೂ ಭಾರತದ ಭೂಷಣ. ಎಲ್ಲೋರದ ಮಧ್ಯದ ಗುಹಾಂತರ ಕೈಲಾಸ ದೇವಾಲಯ, ಪಾರ್ವತೀ ಪರಮೇಶ್ವರರು, ರಾಮ ಸೀತೆ, ರಾಧಾ ಕೃಷ್ಣ--ಹೀಗೆ ಶಿಲ್ಪಕಲೆಗೆ ಪುರಾಣ ಮತ್ತು ಧಾರ್ಮಿಕ ವಸ್ತುಗಳೇ ಆಧಾರಗಳಾಗಿ, ಆ ಧಾರ್ಮಿಕ ಸ್ಫೂರ್ತಿಯಿಂದಲೇ ಶಿಲ್ಪ ಬೆಳೆಯಿತು. ಎಲ್ಲೆಲ್ಲಿಯೂ ಬೋಧಿಸತ್ವರ ಮೂರ್ತಿಗಳು. ಮಥುರೆಯ ಕಲಾಶಾಲೆಯಲ್ಲಿ ತುಂಬ ಶ್ರೇಷ್ಠವಾದ ಬೋಧಿಸತ್ವನ ವಿಗ್ರಹ ಒಂದು ಇದೆ. ಇದು ಕುಶಾನರ ಕಾಲಕ್ಕೆ ಸೇರಿದುದು. ಏಳನೆಯ ಶತಮಾನದ ನಂತರ ಎಲ್ಲೆಲ್ಲಿಯೂ ವಿಗ್ರಹಗಳೂ ದೇವಸ್ಥಾನಗಳೂ ರಚಿತವಾದುವು. "ಆ ವಿಗ್ರಹಗಳಲ್ಲಿ ಪಾರ್ಥಿವತೆ ತೀರ ಕಡಿಮೆ. ನರಸಿಂಹ, ದಶಗ್ರೀವ. ಚತುರ್ಮುಖಬ್ರಹ್ಮ, ಚತುರ್ಭುಜ ವಿಷ್ಣು, ಶ್ರೀರಾಮನಲ್ಲಿ ನವದೂರ್ವಾದಲ ಶ್ಯಾಮಲತೆ. ಶ್ರೀ ಕೃಷ್ಣನಲ್ಲಿ ನವೀನ ನೀರದ ಕಾಂತಿ. ಎಲ್ಲಕ್ಕೂ ಮೇಲಾಗಿ ಆ ಸುಡುಗಾಡಿನ ಭೋಲಾನಾಥ. ಇವುಗಳಲ್ಲಿ ಜಗತ್ತಿನ ಯಾವ ಕಾಲದ ಯಾವ ಶಿಲ್ಪದಲ್ಲಿಯೂ ಸಿಗದ ಮಹಾಮುಕ್ತಿಯ ಆನಂದೋಚ್ಛ್ವಾಸಗಳಿವೆ." ಭಾರತದ ಶಿಲ್ಪಕಲೆ ಎಂದಿನಿಂದಲೂ ಜಗತ್ತಿನ ಮನ್ನಣೆಯನ್ನು ಪಡೆದಿದೆ. ಎಲ್ಲೋರದಲ್ಲಿ ಒಂದು ನಟರಾಜನ ಭಿನ್ನಮೂರ್ತಿ ಇದೆ. ಭಿನ್ನವಾಗಿದ್ದರೂ ಸಹ ಅದ್ಭುತವಾಗಿ ಸೃಷ್ಟಿಯ ಸಮಸ್ತ ಶಕ್ತಿಯನ್ನೂ ತನ್ನಲ್ಲಿ ಅಡಗಿಸಿಕೊಂಡಷ್ಟು ಭವ್ಯವಾಗಿದೆ. "ತಾಂಡವ ನೃತ್ಯದ ಲಾಸ್ಯದಿಂದ ಶಿಲೆಯೇ ಚಲಿಸುವಂತೆ ತೋರುತ್ತಿದ್ದರೂ ಆ ನಟರಾಜನ ಮುಖ ಬುದ್ಧನ ಮುಖದಂ

ತೆಯೇ ಶಾಂತವಾಗಿ ಗಂಭೀರವಾಗಿ ಮಂಗಳಕರವಾಗಿ ತೋರುತ್ತಿದೆ" ಭಾರತದ ಶಿಲ್ಪಕಲೆಯ ಆಕರ್ಷಣೆ ಹೇಗಿದೆಯೆಂದರೆ, ಒಂದು ತಾಂಡವ ವಿಗ್ರಹವನ್ನು ಬ್ರಿಟಿಷ್ ಪ್ರದರ್ಶನಶಾಲೆಯಲ್ಲಿ ಕೊಂಡುಹೋಗಿ ಇಟ್ಟುಕೊಂಡಿದ್ದಾರೆ. ಆ ವಿಗ್ರಹ "ಶಿವನು ಬ್ರಹ್ಮಾಂಡಗಳನ್ನು ಸೃಷ್ಟಿಸುತ್ತಾ ಲಯಗೊಳಿಸುತ್ತಾ ನರ್ತನ ಮಾಡುತ್ತಿರುವುದು. ಶಿವನ ತಾಳಲಯಬದ್ಧ ಗತಿ ವಿಶಾಲವಾದ ಕಾಲಮಾನ ಗಳನ್ನೂ ಮನ್ವಂತರಗಳನ್ನೂ ಪ್ರದರ್ಶಿಸುತ್ತದೆ. ಅವನ ಗತಿಗಳು ಮಂತ್ರ ಗಳಂತೆ ನಿರ್ದುಷ್ಟವಾಗಿ ಐಂದ್ರಜಾಲಿಕವಾಗಿವೆ" ಎಂಬಂತೆ ತೋರುತ್ತಿದೆ.

ಭಾರತ, ನರ್ತನದಲ್ಲಿ ಬಾಲಿ ಜಾವಾಗಳಿಗೆ ಮೇಲುಪಂಗ್ತಿಯಾದಂತೆ, ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿ ಸುಮಾತ್ರ, ಇಂಡೋಚೀನ, ಇಂಡೋನೇಷಿಯಾ, ಸಯಾಂ, ಜಾವಾ ಇಲ್ಲೆಲ್ಲ ತನ್ನ ಪ್ರಭಾವವನ್ನು ಬೀರಿತು. ಜಾವಾದ ಬೋರ್‌ಬುಡನ್‌ನಲ್ಲಿ ಬುದ್ಧನ ಪೂರ್ಣ ಜೀವನಚರಿತ್ರೆಯನ್ನೇ ಕಲ್ಲಿನಲ್ಲಿ ಕೊರೆ ದಿದ್ದಾರೆ. ಅಲ್ಲಿದ್ದ ಬೋಧಿಸತ್ವನ ವಿಗ್ರಹವೊಂದನ್ನು ಕೋಪನ್‌ಹೇಗನ್‌ಗೆ ತೆಗೆದುಕೊಂಡು ಹೋಗಿದ್ದಾರೆ. ಅದು ಅತ್ಯಂತ ಸುಂದರವಾದ ವಿಗ್ರಹ, ಅದನ್ನು ನೋಡಿದರೆ, ಕನ್ನಡಿಯಲ್ಲಿ ತೋರುವಂತೆ ಬೋಧಿಸತ್ವನ ಆತ್ಮಜ್ಯೋತಿ ವ್ಯಕ್ತವಾಗುವುದೆಂದು ಹ್ಯಾವಲ್ ಹೇಳುತ್ತಾರೆ. ಭಾರತದ ಶಿಲ್ಪ ಹೀಗೆ ದಕ್ಷಿಣ ದೇಶದ ದೇವಾಲಯಗಳಲ್ಲಿಯೂ ಮಹಾಬಲಿಪುರ ಮಧುರೆ ಸೋಮನಾಥಪುರ ಹಳೇಬೀಡು ಬೇಲೂರು ಎಲ್ಲೆಲ್ಲಿಯೂ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದೆ. ದಕ್ಷಿಣ ದೇಶದ ದೇವಾಲಯಗಳೇ ಇದಕ್ಕೆ ಉದಾಹರಣೆ. ಆ ಶಿಲ್ಪ ಹೇಗೆ ಅದ್ಭುತವೋ ಹಾಗೆ ರಮ್ಯವೂ ಹೌದು. ಸಂಸಾರ, ಜೀವನ, ಹೆಣ್ಣು, ಹೆಣ್ಣಿನ ಸೌಂದರ್ಯ, ಬೆಡಗು, ದೇವತೆಗಳ ಚಿತ್ರಗಳು, ದೇವಸ್ಥಾನಗಳ ಅದ್ಭುತಗಳಾದ ಮಹತ್ತಾದ ಶಿಲ್ಪಗಳು, ಸಾವಿರ ಕಂಬದ ಸಭಾಂಗಣಗಳು ಆನೆ, ಕುದುರೆ, ರಾವುತ, ರಾಮಾಯಣ ಭಾರತ ವಿಶ್ವರೂಪದರ್ಶನ; ಯಾವ ದೇವಾಲಯವೂ ಕಲ್ಲಿನ ಅರಮನೆ. ಅದರ ಅದ್ಭುತ, ಗಾಬರಿ ಹುಟ್ಟಿಸುವಂತಹುದು; ಅದ್ಭುತ, ರಾಕ್ಷಸ, ಆದರೆ ಪರಿಣಾಮ ಉಜ್ವಲ.

ಅಜಂತದ ಅನಂತರ ಭಾರತದ ಚಿತ್ರಕಲೆ ಮತ್ತೆ ಹಿಂದಿನ ವೈಭವವನ್ನು ಮುಟ್ಟಲಿಲ್ಲ. ಹಾಗೂ ಹೀಗೂ ಹದಿನೈದನೆಯ ಶತಮಾನದ ವರೆಗೆ ಅಲ್ಲಲ್ಲಿ ರಾಜರ, ಧನಿಕರ ಆಶ್ರಯದಲ್ಲಿ ಚಿತ್ರಕಲೆ ಬೆಳೆಯಿತು. ಮೊಗಲರ ರಾಜ್ಯದಲ್ಲಿ

ಚಿತ್ರಕಲೆಗಳಿಗೆ ಒಂದು ಸ್ಫೂರ್ತಿ ಬಂತು. ಆಗ ಅದಕ್ಕೆ ರಾಜಾಶ್ರಯ ದೊರಕಿತು. ಆ ಕಲಾಕೃತಿಗಳು ಭವ್ಯವಾದುವೆಂದು ಹೇಳಲು ಸಾಧ್ಯವಿಲ್ಲವಾದರೂ ಆಕರ್ಷಣೀಯವೆಂದು ಹೇಳಬಹುದು. ಆ ಚಿತ್ರಗಳೆಲ್ಲ ಸಾಧಾರಣವಾಗಿ, ಅರಮನೆಯ ಮತ್ತು ದರ್ಬಾರಿನ ಪ್ರಮುಖರಿಗೆ ಬೋಧನೆ ಮಾಡುವುದಕ್ಕಾಗಿ ಬರೆದುವು. ರಾಜ ರಾಣಿ, ರಾಜಕುಮಾರರ ಭಾವಚಿತ್ರಗಳು, ದರ್ಬಾರಿನ ದೃಶ್ಯಗಳು ಬೇಟೆ ದೃಶ್ಯಗಳು; ಇವುಗಳಲ್ಲಿ ಉತ್ತಮವಾದ ವರ್ಣವಿನ್ಯಾಸಗಳಿವೆ. ಆದರೆ ಅರಮನೆಗಾಗಿ ಬರೆದ ಆ ಚಿತ್ರಗಳಿಂದ ಸಾಮಾನ್ಯರ ಮೇಲೆ ಯಾವ ಪರಿಣಾಮವೂ ಉಂಟಾಗಲಿಲ್ಲ. ಮೊಗಲರ ಕಲೆಯಿಂದ ರಾಜಪುತ್ರರ ಮತ್ತು ಗುಡ್ಡಗಾಡಿನವರ ಚಿತ್ರಕಲೆ ಹುಟ್ಟಿಕೊಂಡಿತು. ಅದು ಸಾಮಾನ್ಯ ಜನತೆಗೆ ಅನ್ವಯಿಸುವ ಕಲೆಯಲ್ಲವಾದರೂ ಆ ಚಿತ್ರಗಾರರು ಭಾರತದ ಪುರಾಣ ಇತಿಹಾಸಗಳ ಸಂಗತಿಗಳನ್ನೇ ಚಿತ್ರಿಸಿದ್ದಾರೆ. ರಾಧಾಕೃಷ್ಣ, ಗೋಪೀಕೃಷ್ಣ, ಹೆಚ್ಚಾಗಿ ಭಾಗವತದ ಕತೆಯೇ ಈ ಕಲೆಯ ನಿರೂಪಣೆ.

ಭಾರತದಲ್ಲಿ ಆಂಗ್ಲೇಯರ ರಾಜ್ಯಸ್ಥಾಪನೆಯಾದ ಮೇಲೆ, ಭಾರತೀಯವಾದುದೆಲ್ಲ ನಾಶವಾದಂತೆ ಭಾರತದ ಚಿತ್ರಕಲೆಯೂ ನಾಶವಾಯಿತು. ಇಂಗ್ಲಿಷರು ಗ್ರೀಕ್ ಕಲೆಯನ್ನು, ತಾವು ಅರ್ಥಮಾಡಿಕೊಂಡಿದ್ದ ರೀತಿಯಲ್ಲಿ ಭಾರತಕ್ಕೆ ಅನ್ವಯಿಸತೊಡಗಿದರು. ಅದರಿಂದ ಭಾರತಕ್ಕೆ ಒಳ್ಳೆಯದಾಗಲಿಲ್ಲ. ರವಿವರ್ಮರಂತಹ ಬರಿಯ ವರ್ಣನಾವೈಖರಿಗಾರರು ಮಾತ್ರ ಪ್ರಕಾಶಕ್ಕೆ ಬಂದರು. ಭಾರತದ ಚಿತ್ರಕಲಾ ಸಾಮರ್ಥ್ಯ ಮರೆಯಾದಂತೆಯೇ ತೋರಿತು. ಆಗ ಹ್ಯಾವೆಲ್‌ರು ಭಾರತೀಯರನ್ನು ಅವರ ಹಿಂದಿನ ವೈಭವಸ್ಮೃತಿಗೆ ಎಚ್ಚರಿಸಿದರು. ಅದರ ಫಲವಾಗಿ ಹುಟ್ಟಿದುದು ವಂಗ ಚಿತ್ರ ಪಂಥ (Bengal School of Art) ಈ ಸಂಪ್ರದಾಯದವರಲ್ಲಿ ನಂದಾಲಾಲ್ ಬೋಸ್, ಅವನೀಂದ್ರನಾಥ ಟಾಗೂರ್, ಗಂಗೇಂದ್ರನಾಥ ಟಾಗೂರ್, ಮೈಸೂರು ವೆಂಕಟಪ್ಪ ಇವರು ಮುಖ್ಯರಾದವರು. ಇವರು ಅಜಂತದಿಂದ ಸ್ಫೂರ್ತಿಯನ್ನು ಹೊಂದಿದವರಾದರೂ ಅಜಂತದ ಕಲೆಗಾರರ ಜೀವಕಲೆ ಇವರಿಗೆ ಸಿದ್ಧಿಸಲಿಲ್ಲ. ಇವರ ಕಲೆ ಕೆಲವು ಕಾಲ ಫ್ಯಾಶನ್ ಆಗಿದ್ದು ಅದರಲ್ಲಿ ಅಭಿರುಚಿಯುಳ್ಳವರನ್ನು ಮಾತ್ರ ಆಕರ್ಷಿಸಿ ಗುಪ್ತವಾಗಿದೆ.

ವಂಗಪಂಥದ ಚಿತ್ರಗಾರರನ್ನು ಅನುಸರಿಸಿದರೂ, ಮೈಸೂರಿನ ವೆಂಕಟಪ್ಪ

ನವರದು ಅದರಲ್ಲಿಯೂ ಒಂದು ವಿಶೇಷ ನವೀನಕ್ರಮ. ಚಿತ್ರ ಸಂಗೀತ ಶಿಲ್ಪ ಈ ಮೂರು ಕಲೆಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಹೊಂದಿ ಅವುಗಳ ಪರಸ್ಪರ ಸಾಮರಸ್ಯದಿಂದ ಸುಸಂಸ್ಕಾರವನ್ನು ಪಡೆದ ಜೀವ ಶ್ರೀ ವೆಂಕಟಪ್ಪ ನವರದು. ಅವರ ಅರ್ಧನಾರೀಶ್ವರ ಚಿತ್ರ, ಚಿತ್ರಪ್ರಪಂಚದಲ್ಲಿ ತನ್ನದೇ ಆದ ಶೋಭೆಯಿಂದ ಬೆಳಗುತ್ತಿದೆ. ಭಾರತೀಯ ಚಿತ್ರಕಲೆಯ ನಿಜಸ್ವರೂಪವನ್ನು ಅರಿತವರಲ್ಲಿ ಶ್ರೀಮತಿ ಅಮೃತ ಷೇರ್‌ಗಿಲ್ ಎಂಬ ಸಿಖ್ ಮಹಿಳೆ ಒಬ್ಬಳು. ಈಕೆ ಫ್ರಾನ್ಸಿನಲ್ಲಿ ಚಿತ್ರಕಲೆಯನ್ನು ಕಲಿತು, ಅದರಿಂದ ತೃಪ್ತಳಾಗದೆ ಭಾರತದ ಚಿತ್ರಕಲೆ ಜಗತ್ತಿಗೆ ಸಾರುವ ಸಂದೇಶವಿದೆಯೆಂಬ ದೃಢನಂಬಿಕೆಯಿಂದ ಭಾರತ ದಲ್ಲಿ ಬಂದು ಕಾರ್ಯಮಾಡಲಾರಂಭಿಸಿದಳು. ಆದರೆ ಭಾರತದ ಚಿತ್ರಕಲೆಯ ದುರದೃಷ್ಟದಿಂದ ಆಕೆ ತನ್ನ ೨೯ ನೆ ವಯಸ್ಸಿನಲ್ಲಿ ಮೃತಳಾದುದರಿಂದ ಆಕೆಯ ಸ್ಫೂರ್ತಿಯ ಫಲ ನಮಗೆ ದೊರಕಲಿಲ್ಲ.

ಈಚೆಗೆ ಭಾರತದಲ್ಲಿ ಶಿಲ್ಪವೂ ಚಿತ್ರಕಲೆಯೂ ಹೀನದೆಸೆಯಲ್ಲಿವೆ. ಈ ನಾಡಿನ ಚಿತ್ರಗಳು ನೋಡಿದ ಕೂಡಲೇ ಮನಸ್ಸನ್ನು ಆಕರ್ಷಿಸುವುದಾಗಿಲ್ಲ. ಅವುಗಳ ಯೋಗ್ಯತೆಯರಿಯಲು ಅವುಗಳ ಆತ್ಮವನ್ನು ಅರಿಯಬೇಕು. ಭಾರತದ ಕಲೆ, ಸೃಷ್ಟಿಯ ಬರಿಯ ನಕಲು ಆಗಿಲ್ಲ. ಧ್ಯಾನರತಿಯಿಂದ ಮನಸ್ಸನ್ನು ಕೊಟ್ಟು ಮನಸ್ಸನ್ನು ಪಡೆಯುವ ಮಾರ್ಗ ಅದು. ಭಾರತದ ಶಿಲ್ಪ ಮತ್ತು ಚಿತ್ರಗಳು ಕೆಲವು ಕಟ್ಟುಪಾಡುಗಳಿಗೆ ಒಳಗಾಗಿಯೇ ರೂಪಿತವಾಗಿರುತ್ತವೆ. ವಾತ್ಸಾಯನನ ಕಾಮಸೂತ್ರ ಹೀಗೆ ಹೇಳುತ್ತದೆ :

> ರೂಪಭೇದಾಃ ಪ್ರಮಾಣಾನಿ ಭಾವಲಾವಣ್ಯ ಯೋಜನಮ್
> ಸಾದೃಶ್ಯಂ ವರ್ಣಿಕಾ ಭಂಗ ಇತಿ ಚಿತ್ರಂ ಷಡಂಗಕಂ

ರೂಪಭೇದ, ಪ್ರಮಾಣ, ಭಾವ, ಲಾವಣ್ಯ, ಸಾದೃಶ್ಯ, ವರ್ಣನೈಪುಣ್ಯ ಇವು ಆರು ಚಿತ್ರಕಲೆಯ ಷಡಂಗಗಳು. ವರ್ಣನೈಪುಣ್ಯವನ್ನು ಬಿಟ್ಟರೆ ಉಳಿದ ಐದು ಅಂಶಗಳು ಶಿಲ್ಪಕಲೆ ಮತ್ತು ಚಿತ್ರ ಎರಡಕ್ಕೂ ಅನ್ವಯಿಸುವುವು.

ರೂಪ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ರೂಪಭೇದ ವೆಂದರೇನು ? ಸುರೂಪ ಮತ್ತು ಕುರೂಪಗಳನ್ನು ಸ್ಪಷ್ಟಪಡಿಸುವುದೇ ರೂಪ ಭೇದ. ಉದಾಹರಣೆಗೆ ಸ್ತ್ರೀಯನ್ನು ವಿಲಾಸಿನಿ, ವಿರಹಿಣಿ, ಗೃಹಿಣಿ ಈ ಮೂರು ಬಗೆಯಲ್ಲಿಯೂ ಚಿತ್ರಿಸಬಹುದು. ವಿಲಾಸಿನಿಯ ಚಿತ್ರದಲ್ಲಿ ಅದಕ್ಕನು

ಗುಣವಾದ ಅಂದಚಂದ ಹಾವಭಾವಗಳನ್ನು ತೋರಿಸಬಹುದು. ಕುರುಳನ್ನು ಬಾಚಿ ಜಡೆ ಹೆಣೆದು ಸಿಂಗರಿಸುವ ವಿಧದಲ್ಲಿಯೂ ಕಿವಿಯ ಆಭರಣ ಓಲಾಡುವು ದರಲ್ಲಿಯೂ ಒಯ್ಯಾರದಲ್ಲಿಯೂ ಅವಳನ್ನು ಚಿತ್ರಿಸಬಹುದು. ವಿರಹಿಣಿ, ಗೃಹಿಣಿಯರನ್ನೂ ಅವರವರ ಸ್ವಭಾವಗಳಿಗನುಗುಣವಾದ ವಸ್ತ್ರಾಭರಣಗಳಿಂದ ರೂಪಿಸಬಹುದು. ಆದರೆ ಬರಿಯ ಬಾಹ್ಯವೇಷಗಳಿಂದ ಅವರನ್ನು ನಿರ್ಣಯಿ ಸಲು ಸಾಧ್ಯವೆ? ಬಾಹ್ಯವೇಷಗಳನ್ನು ಮೀರಿ ಅವರ ಸ್ವಭಾವವನ್ನು ಯಾವು ದರಿಂದ ನಿರ್ಣಯಿಸುತ್ತೇವೆಯೋ ಅದೇ ರೂಪಭೇದ. ಬರಿಯ ಬಾಹ್ಯವೇಷ ವನ್ನು ಮಾತ್ರ ನೋಡಿದರೆ ಹೇಗೆ ಎಲ್ಲ ಸ್ತ್ರೀಯರೂ ಒಂದೇ ಆಗಿ ತೋರ ತ್ತಾರೆಯೋ ಹಾಗೆಯೇ ಚಿತ್ರಗಳಲ್ಲಿ ಬಾಹ್ಯದ ಜತೆಗೆ ಮತ್ತೇನೂ ಇಲ್ಲದ ಕೃತಿ ನಮಗೆ ತನ್ನ ಒಳ ಅರ್ಥವನ್ನು ತೋರಿಸುವುದಿಲ್ಲ. ಇದನ್ನರಿತೇ ಚಿತ್ರಗಾರರೂ ಶಿಲ್ಪಿಗಳೂ ಮೊದಲು ತಮ್ಮ ಮನೋನೇತ್ರಗಳ ಎದುರಿಗೆ ಕೃತಿಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಮೇಲಿನ ನೋಟಕ್ಕೆ ಚಿತ್ರಗಳೆಲ್ಲ ಒಂದೇ ಸಮನಾಗಿ ತೋರಿದರೂ ಅಂತರಂಗದ ಭಾವಗಳನ್ನು ತೋರಿಸುವ ವಿಧದಿಂದ, ಆ ಕೃತಿಗಳು ಒಂದರಿಂದ ಒಂದು ಸ್ಪಷ್ಟವಾಗಿ ಬೇರೆಯಾಗಿರುತ್ತವೆ. ಇದನ್ನು ಸಾಧಿಸಲು ಚಿತ್ರಗಾರನಿಗೆ ಧ್ಯಾನವೂ ಏಕಾಗ್ರತೆಯೂ ಇರಬೇಕು. ಏಕಾಗ್ರವಾಗಿ ಧ್ಯಾನ ಮಾಡುವುದರಿಂದ ಪ್ರತ್ಯಕ್ಷವಾಗಿ ನೋಡುವುದಕ್ಕಿಂತ ಹೆಚ್ಚಾಗಿ ಮುಖಭಾವ ಕಲಾಕರ್ತೃವಿಗೆ ಸ್ಪಷ್ಟವಾಗುವುದು. "ಯಥಾನಾನ್ಯೇನ ಮಾರ್ಗೇಣ ಪ್ರತ್ಯಕ್ಷೇಣಾಪಿ ವಾ ಖಲು" ಬೇರೆ ಯಾವ ಮಾರ್ಗದಿಂದಲೂ ಅಲ್ಲ. ಪ್ರತ್ಯಕ್ಷವಾಗಿ ಕಣ್ಣುಬಿಟ್ಟು ನೋಡುವುದರಿಂದಲೂ ಅಲ್ಲ.

ಆಕೃತಿ ಸ್ಪಷ್ಟವಾಗಬೇಕಾದರೆ ಪ್ರಮಾಣ ಮುಖ್ಯ. ಅಖಂಡವಾದ ಕಡಲನ್ನೂ ಗಗನಚುಂಬಿ ವೃಕ್ಷಗಳನ್ನೂ ವಿಸ್ತಾರವಾದ ಪರ್ವತಗಳನ್ನೂ, ಅಲೆ ಗಳ ಓಟವನ್ನೂ ಮೇಘಗಳ ಚಲನೆಯನ್ನೂ ಕೆಲವು ಅಂಗುಲ ಪ್ರದೇಶದಲ್ಲಿ ತೋರಿಸುವುದೇ ಪ್ರಮಾಣ ವಿವೇಕ. ಮೂರನೆಯದು ಭಾವ. ಕಲಾಕೃತಿ ಮನ ಸ್ಸನ್ನು ಆಕರ್ಷಿಸುವುದು ಭಾವದಿಂದಲೇ. ಭಾವವಿಲ್ಲದ ಮನಸ್ಸು, ಗಾಳಿ ಚಲಿಸದ ನೀರಿನ ರಾಶಿಯಂತೆ. ಮನಸ್ಸಿನಲ್ಲಿರುವುದನ್ನು ಹೊರಕ್ಕೆ ಪ್ರಕಾಶ ಗೊಳಿಸುವುದು ಭಾವವೊಂದೇ. ವಸಂತಾಗಮನವನ್ನು ಎಳೆಯ ಚಿಗುರೂ, ಮಳೆ ಗಾಲವನ್ನು ಮೋಡಗಳೂ ಸೂಚಿಸುವಂತೆ, ಅಂತರಂಗದ ಭಾವನೆಗಳನ್ನು

ಹೊರಗೆ ಸೂಚಿಸುವುದು ಭಾವನಿರೂಪಣೆ. ಮೇಘಗಳ ಆರ್ದ್ರವರ್ಣದಲ್ಲಿಯೂ ಗಾಳಿಯಿಂದ ಅಲುಗುತ್ತಿರುವ ಮರಗಳ ಆಟದಲ್ಲಿಯೂ ಸಮುದ್ರದ ಅಲೆಗಳ ಆರ್ಭಟದಲ್ಲಿಯೂ ನೀರಿನ ಪ್ರವಾಹದ ಗರ್ಜನೆಯಲ್ಲಿಯೂ, ಅಂಗಗಳ ಇರುವಿಕೆಯಲ್ಲಿಯೂ ಹಕ್ಕಿಗಳ ವಿಲಾಸದಲ್ಲಿಯೂ ತುಟಿಗಳ ಪಿಸುಮಾತಿನಲ್ಲಿಯೂ ಮುತ್ತಿನಂತೆ ಬೀಳುವ ಕಣ್ಣೀರಿನಲ್ಲಿಯೂ ಮುಖವನ್ನು ಸರ್‍ರನೆ ಮರೆಸುವ ಅವಕುಂಠನದಲ್ಲಿಯೂ ಭಾವಗಳ ಪ್ರಕಾಶನ ವ್ಯಕ್ತವಾಗುವುದು. ಭಾವವಿಶೇಷ ವ್ಯಂಜನ ವ್ಯಾಪಾರ. ಇದರ ವ್ಯಂಗ್ಯವೇ ಕಲೆಯ ಜೀವ. ಒಂದೇ ಚಿತ್ರವನ್ನು ಎರಡು ಮನಸ್ಸುಗಳು ಬೇರೆಬೇರೆಯಾಗಿ ಅನುಭವಿಸುತ್ತವೆ. ದುಃಖದಿಂದಿರುವ ಮನಸ್ಸು, ಮಳೆ ಹನಿ, ದೇವತೆಗಳ ಕಣ್ಣೀರೆಂದು ಭಾವಿಸಬಹುದು. ಸುಖದಿಂದಿರುವ ಮನಸ್ಸು, ಮಳೆ ಹನಿ ದೇವಸ್ತ್ರೀಯರ ಸರಸದಲ್ಲಿ ಕೊರಳಿನಿಂದ ಉದುರಿದ ಮಾಲೆಯ ಮುತ್ತು, ಎಂದು ಭಾವಿಸಬಹುದು. ಉತ್ಕೃಷ್ಟ ಕಲೆಗಾರ ಚಿತ್ರದಲ್ಲಿ ವ್ಯಂಗ್ಯವನ್ನೇ ಕಾಣಿಸಿಯಾನು.

ವ್ಯಂಗ್ಯದಿಂದ ಭಾವಕ್ಕೆ ಹೆಚ್ಚು ಸ್ವಾರಸ್ಯ ಬರುವುದು. ಒಬ್ಬ ಭಿಕ್ಷುಕನನ್ನು ಚಿತ್ರಿಸಬೇಕಾದರೆ ಭಿಕ್ಷಾಪಾತ್ರೆ, ಭಿಕ್ಷುಕ, ಪುಡಿಕಾಸು ಇವನ್ನು ಚಿತ್ರಿಸುವುದು ಸಾಧಾರಣ ಕಲೆ. ಆದರೆ ಭಿಕ್ಷುಕನ ಕಣ್ಣಮುಂದೆ ದೊಡ್ಡ ಅವ್ಯಕ್ತ ಶಿಲೆಯ ಮುಹಡಿ ಮನೆಯನ್ನು ಕಟ್ಟುವುದರಿಂದ ದಾರಿದ್ರ್ಯದ ಕರುಣಾಜನಕ ಸ್ಥಿತಿ ಹೃದಯಂಗಮವಾಗುವುದು. ಚಿತ್ರಗಳಲ್ಲಿರಬೇಕಾದ ನಾಲ್ಕನೆಯ ಗುಣ ಲಾವಣ್ಯ: ಐದನೆಯದು ಸಾದೃಶ್ಯ; ಆರನೆಯದು ವರ್ಣರಚನೆ ಅಂದರೆ ವರ್ಣಗಳ ಸಾಮಂಜಸ್ಯ. ಭಾರತದ ಚಿತ್ರಕಲೆ ಅನುಸರಿಸಿದ ಸೂತ್ರ ಇದು. ಅದರಿಂದಲೇ ಆ ಕಲೆ ಲೋಕಪ್ರಿಯವಾಯಿತು.

ಈಚಿನ ಕಲೆಗಾರರು ಈ ಯಾವ ನಿಯಮಗಳನ್ನೂ ಹೆಚ್ಚಾಗಿ ಪಾಲಿಸುತ್ತಿಲ್ಲ. ಇಂದು ಕಲ್ಕತ್ತದಲ್ಲಿ ತುಂಬ ಪ್ರಸಿದ್ಧ ಚಿತ್ರಗಾರರೆಂದರೆ ಜೆಮಿನಿರಾಯ್. ಇವರು ಹೆಚ್ಚಾಗಿ ಜಾನಪದ ಚಿತ್ರಗಾರರು. ಇವರಿಗೆ ಪಾಶ್ಚಾತ್ಯ ಮತ್ತು ಭಾರತೀಯ ಚಿತ್ರಕಲೆಗಳಲ್ಲಿ ತುಂಬ ಪರಿಶ್ರಮವಿದ್ದರೂ, ಇವರು ಜಾನಪದ ಚಿತ್ರಗಳನ್ನು ರೂಪಿಸಲು ಪ್ರಾರಂಭಿಸುವವರೆಗೆ ತಮ್ಮನ್ನು ತಾವು ಕಂಡುಕೊಳ್ಳಲಿಲ್ಲ. ಇವರ ಚಿತ್ರಗಳಲ್ಲಿ ತಾಯಿ ಮತ್ತು ಮಗು ಎಂಬ ಚಿತ್ರಕ್ಕೆ ಅನೇಕ ಸನ್ಮಾನಗಳು ದೊರತಿವೆ. ಮೃಗರಾಜ್ಯ ಎಂಬ ಇವರ ಚಿತ್ರ, ಭಾರತದ ಉತ್ತಮ

ಚಿತ್ರದ ಮಾದರಿ ಎಂದು ಅಮೆರಿಕದ ಪತ್ರಿಕೆಗಳಲ್ಲಿ ಅಚ್ಚಾಗಿದ್ದಿತು. ಜೆಮಿನಿ ರಾಯ್‌ರನ್ನು ಬಿಟ್ಟರೆ ತ್ರಿಲೋಕ ಕೌಲ್ (ಚಿತ್ರ, ಕಾಶ್ಮೀರ್) ಅಸಿಲ್ ರಾಯ್ ಚೌಧುರಿ (ಚಿತ್ರ, ನಾಲ್ವರು ಕನ್ಯೆಯರು) ಬೊಂಬಾಯಿನ ರಸಿಕರವಾಲ್(ಚಿತ್ರ, ಬಾವಿಯ ಬಳಿ ಮಹಿಳೆಯರು) ಬೊಂಬಾಯಿನ ಹೆಬ್ಬಾರ್ (ಚಿತ್ರ, ಹಸಿವು) ಇವರೆಲ್ಲ ಪ್ರಸಿದ್ಧರಾಗಿರುವವರು. ಇವರ ಚಿತ್ರಗಳಲ್ಲಿ ಪೂರ್ವ ಮತ್ತು ಪಶ್ಚಿಮ ಸಂಪ್ರದಾಯಗಳ ಮಿಲನವಿದೆ. ಬೊಂಬಾಯಿನ ಹುಸೇನ್‌ರೂ ಜೇಂದ್ರೆಯ ವರೂ ಬ್ರಷ್ ಕಾರ್ಯದಲ್ಲಿ ಪ್ರಸಿದ್ಧರಾಗಿದ್ದಾರೆ. ಶಿಲ್ಪಕಲೆಯಲ್ಲಿ ಸುಧಿರಂಜನ್ ಕ್ಷಿತಿಜರ್, ಮೈಸೂರು ಸಿದ್ಧಲಿಂಗಸ್ವಾಮಿ ಇವರ ಕೃತಿಗಳು ಹೆಚ್ಚು ಪ್ರಸಿದ್ಧ ವಾಗಿವೆ.

ಸದ್ಯದಲ್ಲಿ ಭಾರತದಲ್ಲಿ ಚಿತ್ರಕಲೆಯಲ್ಲಾಗಲೀ ಶಿಲ್ಪದಲ್ಲಿಯಾಗಲೀ ಪ್ರಾಚೀನ ವೈಭವವನ್ನು ಮುಟ್ಟುವವರು ಇನ್ನೂ ಬೆಳಕಿಗೆ ಬಂದಿಲ್ಲ. ಹಿಂದಿನ ಧಾರ್ಮಿಕ ಸ್ಫೂರ್ತಿ ಸತ್ಪ್ರೇರಣೆಯ ಜಾಗೃತಿಯುಂಟಾಗುವ ಕಾಲವನ್ನು ನಾವು ಕಾಯಬೇಕಾಗಿದೆ. ಸ್ವತಂತ್ರಭಾರತದಲ್ಲಿ ಕಲೆಗಳ ಉಚ್ಛ್ರಾಯವನ್ನು ನಾವು ನಿರೀಕ್ಷಿಸಬಹುದು. "ಯಾವ ಧರ್ಮಶ್ರದ್ಧೆಯಿಂದ ಭಾರತವರ್ಷದ ಶಿಲ್ಪಿಗಳು ತಮ್ಮ ಶ್ರಮವನ್ನು ಶ್ರಮವೆಂದೇ ಬಗೆಯದೆ ಪರ್ವತಗಳನ್ನೇ ಒಡೆದು ತಮ್ಮ ಇಚ್ಛೆಯಂತೆ ಮಠ ಮಂದಿರಗಳನ್ನು ನಿರ್ಮಿಸಿದರೋ, ಪರ್ವತದ ಕೋಡು ಗಲ್ಲುಗಳನ್ನೇ ಸೀಳಿ ಮೂರ್ತಿಗಳನ್ನು ನಿರ್ಮಿಸಿದರೋ, ಪರ್ವತ ಗುಹೆಗಳಲ್ಲಿ ಅಕ್ಷಯಪ್ರದೀಪಗಳಂತೆ ಮಹೋಜ್ವಲ ಚಿತ್ರಶ್ರೇಣಿಗಳನ್ನು ಬೆಳಗಿಸಿದರೋ ಆ ಸ್ಫೂರ್ತಿ ಸ್ವಾತಂತ್ರ್ಯದೊಂದಿಗೆ ಮತ್ತೆ ಬಂದೇ ಬರುವುದು. ಸಾಂಚಿ ಸ್ತೂಪ ಗಳನ್ನೂ ಅಜಂತ ಚಿತ್ರಗಳನ್ನೂ ನಿರ್ಮಿಸಿದ ಆ ಧರ್ಮಶ್ರದ್ಧೆ ಸ್ವರ್ಗದಿಂದ ಧರೆಗಿಳಿದುದೂ ಅಲ್ಲ. ಪಾತಾಳದಿಂದ ಮೇಲಕ್ಕೆದ್ದು ಬಂದುದೂ ಅಲ್ಲ. ಅದು ನಮ್ಮ ರಕ್ತದಲ್ಲಿ ರಕ್ತವಾಗಿ ಸೇರಿಹೋಗಿದೆ. ಮಾತ್ರ ಪಾರತಂತ್ರ್ಯ ಕಾಲದ ಯೂರೋಪಿನ ಭ್ರಷ್ಟ ಶಿಲ್ಪವು, ಮೋಹಕುಹಕದಿಂದ ನಮ್ಮನ್ನು ಭ್ರಮೆಗೊಳಿಸಿ ದಾರಿ ತಪ್ಪಿಸಿದೆ. ಸ್ವರ್ಗಕಾಮನೆಯ ಲಕ್ಷ್ಯವಿದ್ದ ಕಲೆ ಸ್ವರ್ಣಕಾಮನೆಗೆ ಮುಗ್ಧ ವಾಗಿದೆ" ಆದರೆ ಸ್ವಾತಂತ್ರ್ಯದೊಂದಿಗೆ ನಮ್ಮ ಲಕ್ಷ್ಯವೂ ಹಿಂದಿರುಗುತ್ತಿದೆ.

ಸ್ವಾತಂತ್ರ್ಯದೊಂದಿಗೆ ಪ್ರತಿಜೀವಿಯಲ್ಲಿರುವ ಕಲಾಶಕ್ತಿಯೂ ಸ್ಫೂರ್ತಿ ಗೊಳ್ಳುವುದು. ಮುಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಶಿಕ್ಷಣದ ಸಾಮಾನ್ಯ

ಅಂಗವಾಗಿ ಕಲೆಯೂ ಆಗಬೇಕು. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಕಲೆಯೂ ಒಂದು ಮಾರ್ಗವೆಂಬುದು ಅಕ್ಬರನ ಮತ. ಕಲೆ ಬರಿಯ ಸುಖ ಸಾಧನವಾಗ ಬಾರದು. ಧಾರ್ಮಿಕ ಪ್ರವೃತ್ತಿಯನ್ನೂ ಹುಟ್ಟಿಸುವುದಾಗಿರಬೇಕು. ಮೊಗಲರ ಕಲೆ, ಬರಿಯ ಸುಖದಸಾಧನವಾದುದರಿಂದಲೇ ಬೇಗ ಕೊನೆಗೊಂಡಿತೆಂದು ಪ್ರಾಜ್ಞರು ಹೇಳುತ್ತಾರೆ. ನಮ್ಮ ನಿತ್ಯಜೀವನದಲ್ಲಿಯೂ ಕಲೆಯ ಸ್ಥಾನ ಕಲೆಗೆ ದೊರಕ ಬೇಕು. ಪ್ರಾಚೀನ ಭಾರತದಲ್ಲಿ ಕಲೆಗೆ ಆ ಸ್ಥಾನವನ್ನು ಕೊಟ್ಟಿದ್ದರು. ಶಿಕ್ಷಕರು ಶಿಷ್ಯರನ್ನು ಕಲೆಯ ವಾತಾವರಣದಲ್ಲಿ ಬೆಳೆಸುತ್ತಿದ್ದರು. ಪಾಠಶಾಲೆಗಳು, ನದಿ ತೋಪು ಉಪವನಗಳ ಮಧ್ಯೆ ರಮ್ಯವಾದ ಪ್ರದೇಶಗಳಲ್ಲಿರುತ್ತಿದ್ದವು. ಹುಯೆನ್‌ತ್ಸಾಂಗ್ ನಳಂದ ವಿಶ್ವವಿದ್ಯಾಲಯದ ವಾತಾವರಣವನ್ನು ಕುರಿತು ಹೀಗೆ ಹೇಳುತ್ತಾನೆ.

"ಸುತ್ತಲೂ ನೀಲಿ ತಾವರೆಯ ಅರಳಿದ ದಳಗಳುಳ್ಳ ತಿಳಿನೀರಿನ ಕೊಳ ಗಳು, ಪ್ರಕಾಶಿಸುತ್ತಿದ್ದವು. ಅಲ್ಲಲ್ಲಿ ಸುಂದರವಾದ ಕನಕವೃಕ್ಷಗಳು ರಕ್ತವರ್ಣದ ಮನೋಹರವಾದ ಗುಚ್ಛರಾಸಿಗಳನ್ನು ಜೋಲುಬಿಟ್ಟಿದ್ದವು. ಘನಸಿಬಿಡವಾದ ಚೂತವೃಕ್ಷವನವು, ಅವುಗಳ ನಡುವೆ ತನ್ನ ನೆಳಲನ್ನು ಪಸರಿಸಿತ್ತು. ಬೇರೆ ಬೇರೆ ಶಾಲಾಂಗಣಗಳಲ್ಲಿ ಭಿಕ್ಷುಗಳ ಮನೆಗಳು ನಾಲ್ಕು ಅಂತಸ್ತುಗಳುಳ್ಳವಾಗಿ ದ್ದವು. ಕ್ರೀಡಾಮಂಟಪಗಳ ಕಂಬಗಳನ್ನು ನಾನಾವಿಧಗಳಾದ ಪ್ರಾಣಿಗಳ ಚಿತ್ರರೇಖೆಗಳಿಂದ ಅಲಂಕರಿಸಿದ್ದರು. ಮಂಟಪಗಳ ತೊಲೆಗಳು ಕಾಮನಬಿಲ್ಲಿನ ಎಲ್ಲ ಬಣ್ಣಗಳಿಂದಲೂ ಕಣ್ಣು ಕೋರೈಸುತ್ತಿದ್ದವು. ಛಾವಣಿಯ ತೊಲೆಗಳಲ್ಲಿ ಆಕರ್ಷಕವಾಗಿ ಚಿತ್ರಗಳನ್ನು ರೂಪಿಸಿದ್ದರು. ಸ್ತಂಭಗಳನ್ನು ಅತ್ಯಂತ ಸೂಕ್ಷ್ಮ ವಾದ ವೈಭವಯುಕ್ತವಾದ ಕೆತ್ತನೆ ಕೆಲಸದ ವರ್ಣಶಿಲೆ ಮತ್ತು ಮುತ್ತುಗಳಿಂದ ಅಲಂಕರಿಸಿದ್ದರು. ಮಹಡಿಯ ತಾಳ್ವಾರ ಮತ್ತು ಮೆಟ್ಟಲುಗಳನ್ನು ಸುಂದರ ವಾಗಿ ಬಿಡಿಸಿದ್ದರು........"

ಸನ್ಮಾರ್ಗ ಜೀವನವೇ ಉತ್ತಮ ಕಲೆ. ಚಿತ್ರದಲ್ಲಿಯೂ ಶಿಲ್ಪದಲ್ಲಿಯೂ ಅನೇಕ ಜೀವರಾಶಿಗಳನ್ನು ಒಂದೇ ಕಡೆ ತೋರಿಸುವುದು ಭಾರತದ ಕಲೆಯ ಲಕ್ಷಣ. ಮನುಷ್ಯ, ದೇವರು ಜಂತು ಪಶುಪಕ್ಷಿ ಪ್ರಕೃತಿಯೊಂದಿಗೆ ಒಂದಾಗಿ ಬಾಳುವುದೇ ಈ ಆದರ್ಶದ ಗುರಿ. ಅದೇ ಜಗತ್ತಿನ ಅಸ್ತಿತ್ವದ ಸತ್ಯದ ಅದ್ಭುತ ಕಲೆ.

ಸತ್ಯಾನ್ವೇಷಕ ಕಾವ್ಯದಲ್ಲಿಯೂ ಬಾಳಿನಲ್ಲಿಯೂ ಕಲೆಯಲ್ಲಿಯೂ ಅಮೃತತ್ವವನ್ನೇ ಹುಡುಕುತ್ತಾನೆ. ಇಂದ್ರಿಯ ಗೋಚರವಾದುದು ಮಾತ್ರವೇ ಸತ್ಯವಲ್ಲ. ಇಂದ್ರಿಯ ಗೋಚರವಾಗದಿದ್ದರೂ ಹೃದಯದಲ್ಲಿದ್ದುಕೊಂಡು "ನಾನು ಇಲ್ಲಿದ್ದೇನೆ" ಎಂದು ಜ್ಞಾಪಕ ಕೊಡುವ ಅಂತರ್‌ದೃಷ್ಟಿ ಒಂದಿದೆ. ಆ ಜ್ಞಾನಜ್ಯೋತಿಯೇ ಕಲಾಕೃತಿಯನ್ನು, ಬರಿಯ ಕಾಗದ ಅಥವಾ ಕಲ್ಲಿನ ಬೊಂಬೆಯಾಗಿ ಮಾಡದೆ ನಮ್ಮ ಹೃದಯದಲ್ಲಿ ಎಂದೆಂದೂ ನಿಲ್ಲುವ ಶಾಶ್ವತ ಪರಮಸತ್ವ ಕಲಾಕೃತಿಯಾಗಿ ಮಾಡುವುದು. ಕಲೆಯ ಮೂಲಕ ಪರಮಾತ್ಮನ ದರ್ಶನ ಸಹ ಭಾರತೀಯ ಕಲೆಯ ಲಕ್ಷಣ.

ಕವಿ ಲಕ್ಷ್ಮೀಶ

ಕರ್ನಾಟಕ ಕವಿ ಚೂತವನಚೈತ್ರ ಬಿರುದಾಂಕಿತನಾದ ಲಕ್ಷ್ಮೀಶನು ಮಹಾಭಾರತದ ಅಶ್ವಮೇಧ ಪರ್ವವನ್ನು ತನ್ನ ಕಾವ್ಯವಸ್ತುವನ್ನಾಗಿ ಆರಿಸಿ ಕೊಂಡಿದ್ದಾನೆ. ಯುದ್ಧಪ್ರಧಾನವಾದ ಆ ಕಥಾ ವಿವರಣೆಯಲ್ಲಿ ಆಯುಧಗಳ ಕಣಕಣ ಧ್ವನಿಯೂ, ನೆತ್ತರಿನ ಕಡಲೂ, ಹೆಣಗಳ ರಾಸಿಯೂ, ಮೂಳೆಯ ಬೆಟ್ಟಗಳೂ ಅಲ್ಲಲ್ಲಿ ಎದ್ದು ತೋರುತ್ತಿವೆ. ಆದರೆ ಆ ವೀರಾವೇಶದ ಕಾಳಗದ ಕಳನಲ್ಲಿ, ಕರಿಯ ಮೋಡದ ತುದಿಯ ಬೆಳ್ಳಿಯ ಗೆರೆಯಂತೆ ಇತರ ರಸಗಳು ತಲೆಹಾಕಿ, ಯುದ್ಧಭೂಮಿಯ, ಆ ಸ್ಮಶಾನದ, ಭಯಂಕರರೂಪಿಗೆ ಒಂದು ವಿಧವಾದ ಸೌಮ್ಯತೆಯನ್ನು ಕೊಡುತ್ತವೆ. ಕವಿ ಸಮಯದ ಚೌಕಟ್ಟಿಗೆ ಸಿಕ್ಕಿ ಲಕ್ಷ್ಮೀಶನ ಶೈಲಿಯೂ, ವಸ್ತುಪ್ರತಿಪಾದನ ಕ್ರಮವೂ, ಕಥಾ ನಿರೂಪಣೆಯ ಚಮತ್ಕಾರವೂ ಪೂರ್ವದ ಕವಿಗಳ ರೂಢಿಯ ದಾರಿಯನ್ನು ಹೋಲುತ್ತಿದ್ದರೂ, ಮಧ್ಯೆ ಮಧ್ಯೆ ಭಾವನೆಯ ವಿಮಾನದಲ್ಲಿ ಕುಳಿತು ಸ್ವೇಚ್ಛೆಯಾಗಿ ಲಕ್ಷ್ಮೀಶನು, ಮನಬಂದಂತೆ ಸಂಚರಿಸುವ ಅನೇಕ ಚಿಕ್ಕ ಚಿಕ್ಕ ಉಪವನಗಳನ್ನು ನಾವು ನೋಡಬಹುದು. ಆ ಉಪವನಗಳಲ್ಲಿ ಲಕ್ಷ್ಮೀಶನು ತನ್ನ ಸ್ವಾತಂತ್ರ್ಯವನ್ನೂ ಕಲಾಶಕ್ತಿಯನ್ನೂ ತೋರಿಸಿ ಜೈಮಿನಿ ಭಾರತವು ಕೆಲವು ದೃಷ್ಟಿಗಳಲ್ಲಿ ಹೊಸ ಮತ್ತು ಹಳೆಯ ಕವಿತೆಗಳ ಸುಖಕರವಾದ ಮಿಳನವಾಗುವಂತೆ ಮಾಡಿದ್ದಾನೆ.

ಜೈಮಿನಿ ಭಾರತದಲ್ಲಿ ಶೃಂಗಾರ ವೀರ ಕರುಣ ಶಾಂತಿ ರಸಗಳ ಜತೆಯಲ್ಲಿ ಕವಿಯು ಬಹಳ ಯುಕ್ತಿಯಿಂದ ಹಾಸ್ಯವನ್ನೂ ಸೇರಿಸಿದ್ದಾನೆ. ಈ ಚಮತ್ಕಾರದಿಂದ, ಕಾವ್ಯ ಹೆಚ್ಚು ಆಕರ್ಷಕವಾಗಿದೆ. ಕಾವ್ಯದಲ್ಲಿ ಹಾಸ್ಯವನ್ನು ಸೇರಿಸಬೇಕೆಂಬ ಸಂಪ್ರದಾಯಕ್ಕೆ ಒಳಗಾಗಿ ಅವನು ಅಭಾಸವಾದ ನಾಲ್ಕಾರು ಪದ್ಯಗಳನ್ನು ಹೆಣೆದು ಕಾವ್ಯದ ಮೈಯ್ಯೊಳಗೆ ತೂರಿಬಿಟ್ಟಿಲ್ಲ. ಲಕ್ಷ್ಮೀಶನ ಹಾಸ್ಯ ಅಸಂಬದ್ಧವಾದುದಲ್ಲ; ಅಸ್ವಾಭಾವಿಕವಾದುದಲ್ಲ. ಕಾವ್ಯ ವನಿತೆಯು ಬಲಾತ್ಕಾರವಾಗಿ ನಗುವಂತೆ ಅವನು ಅವಳಿಗೆ ಕಚಗಳಿ ಇಕ್ಕುತ್ತಿಲ್ಲ. ಲಕ್ಷ್ಮೀಶನ ಹಾಸ್ಯದಲ್ಲಿ ಔಚಿತ್ಯವಿದೆ; ಗಾಂಭೀರ್ಯವಿದೆ; ಮಿತಿ ಇದೆ; ಬಗೆಯನ್ನು ಉನ್ನತಿಗೆ ಏರಿಸುವ ಕಲೆಯ ಗುರಿಯಿದೆ. ಮತ್ತು ರಸಗಳ ಸಂವಿಧಾನ ದೋಷರಹಿತವಾಗಿದೆ.

ಭೂವ್ಯೋಮ ಪಾತಾಳ ಲೋಕಂಗಳಲ್ಲಿ ಸಂ।
ಭಾವ್ಯರೆಂದೆನಿಸಿಕೊಳ್ವಖಿಳದೇವರ್ಕಳಿಂ।
ಸೇವ್ಯನಾದಜನ ಪಟ್ಟದ ರಾಣಿ ವರದೆ ಕಲ್ಯಾಣಿ ಫಣಿವೇಣಿ ವಾಣಿ ॥
ಕಾವ್ಯಮಿದು ಭುವನದೊಳ್ ಸಕಲ ಜನರಿಂದೆ ಸು।
ಶ್ರಾವ್ಯಮಪ್ಪಂತೆನ್ನ ವದನಾಬ್ಜದಲ್ಲಿ ನೀ।
ನೇ ವ್ಯಾಪಿಸಿರ್ದಮಲಸುಮತಿಯಂ ತಾಯೆನಗೆ ತಾಯೆ ನಗೆಗೂಡಿ ನೋಡಿ ॥

ಈ ಪದ್ಯದಲ್ಲಿ ಲಕ್ಷ್ಮೀಶನು "ನಗೆಗೂಡಿ ನೋಡಿ" ಎಂಬುದಾಗಿ ಶಾರದೆಯನ್ನು ಪ್ರಾರ್ಥಿಸಿದುದು ಕೇವಲ ಆಕಸ್ಮಿಕವಾಗಿ ಅಲ್ಲ. "ಎಲೈ ವಾಣಿಯೇ, ನೀನು ನಗೆಗೂಡಿದ ಭಾವದಿಂದ ನನ್ನಲ್ಲಿ ಸ್ಫೂರ್ತಿಯನ್ನುಂಟು ಮಾಡು. ಆ ಸ್ಫೂರ್ತಿಯಿಂದ ಹೊರಟ ನನ್ನ ಕಲಾಸೃಷ್ಟಿಯನ್ನು ರಸಿಕರೆಲ್ಲ ನಗೆಗೂಡಿ ಓದಲಿ" ಎಂಬುದೇ ಕವಿಗುರುವಿನ ಅಭಿಪ್ರಾಯ.

ಧರ್ಮರಾಜನು ಗೋತ್ರವಧೆಯಿಂದ ನೊಂದು "ಅನಿಲ ಸಂಚಾರ ವೊಂದಿನಿತಿಲ್ಲ ದುರಿವ ಕಡುವೇಸಗೆಯ ಬಿಸಿಲಿಂದೆ ಬಸವಳಿದ ಕೋಮಲ ರಸಾಲದಂತೆ", "ಅನುತಾಪದಿಂದ ತಲೆವಾಗಿ ಮಾತನಾಡದೆ" ಕುಳಿತಿದ್ದುದನ್ನು ಕಂಡು ವೇದವ್ಯಾಸಮುನಿಯು "ನಿನ್ನ ಆನನದಿರವು ನಿನ್ನ ಸಂತಸದೇಳ್ಗೆಗೆ ಖಂಡನಂ ಮಾಳ್ಪುದು, ಮನದಂಡಲೆಯನೊರೆ." ಎಂದನು. ಧರ್ಮರಾಜನು ದುಃಖದಿಂದ "ನಿಜಾಯುಷ್ಯಮುಳ್ಳನ್ನ ಪರ್ಯಂತ ವನವಾಸಮಂ ಮಾಡುವುದೆ ಲೇಸು" ಎಂದನು. ಅದನ್ನು ಕೇಳಿ ಬಾದರಾಯಣನಿಗೆ ಬಹಳ ನಗು ಬಂದಿತು. ಹನ್ನೆರಡು ವರುಷ ವನವಾಸಮಾಡಿ, ಒಂದು ವರ್ಷ ಅಜ್ಞಾತವಾಸಮಾಡಿ, ಬಗೆ ಬಗೆಯ ಕಷ್ಟಗಳನ್ನು ಅನುಭವಿಸಿ, ಯುದ್ಧಮಾಡಿ, ರಾಜ್ಯ ಸಿಕ್ಕೀತೇ ಎಂದು ಕಾದುಕೊಂಡಿದ್ದು, ರಾಜ್ಯ ಸಿಕ್ಕಿದ ಕೂಡಲೇ "ಬೇಡ ಕಾಡಿಗೆ ಹೋಗುತ್ತೇನೆ" ಎಂದರೆ ನಗು ಬರದೇ ಮತ್ತೇನು? ಬಾದರಾಯಣನು "ನಿನ್ನ ಗಾತ್ರಮಂ ವನವಾಸ ಕೈದಿಸುವ ಮತಮಾವ ಸೂತ್ರದೊಳ್ಕಾಣಿಸಿತೋ ಲೇಸು ಲೇಸು ಅರಣ್ಯ ಯಾತ್ರೆಯಂ ನೀಂ ಮಾಡು; ಮಾರುತಿಗೆ ನಾವು ಪಟ್ಟಮಂ ಕಟ್ಟುವೆವು" ಎಂದನು.

ಬಲಾತ್ಕಾರದಿಂದ ಧರ್ಮರಾಯನನ್ನು ಅಶ್ವಮೇಧಯಾಗಕ್ಕೆ ಒಡಂಬಡಿಸಿಯಾಯಿತು. ಆದರೆ ತನ್ನ ಶಕ್ತಿಯಲ್ಲಿ ಅವನಿಗೇ ನಂಬಿಕೆಯಿರಲಿಲ್ಲ.

ಕೃಷ್ಣನನ್ನು ಕೇಳಬೇಕು. ಅವನು ಏನು ಹೇಳುತ್ತಾನೋ ತಿಳಿಯದು. ಕೃಷ್ಣನನ್ನು ಕರೆಸಬೇಕು ಎನ್ನುವಷ್ಟರೊಳಗೆ "ತೊಳಲು ತರಸುವ ಬಳ್ಳಿ ಕಾಲ್ತೊಡಕಿದಂತೆ" ಅರಸುಗಳ ಶಿರೋಮಣಿಯಾದ ಕೃಷ್ಣನು ಅಲ್ಲಿಗೆ ಬಂದನು. ಬಂದವನೇ ಯಜ್ಞದ ಸುದ್ದಿಯನ್ನೇ ಎತ್ತದೆ,

ದಾಯಾದರಿಲ್ಲ ಮಾರ್ಮಲೆವ ಪರಮಂಡಲದ ।
ನಾಯಕರ ಸುಳಿವಿಲ್ಲ ನಿನ್ನಾಳ್ಕೆಗೆಲ್ಲಿಯುಂ ।
ಪಾಯಮುವನಿಯೊಳಿಲ್ಲಮಿನ್ನು ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ ॥
ವಾಯುನಂದನ ಧನಂಜಯರೊಳೆರವಿಲ್ಲ ಮಾ ।
ದ್ರೇಯರೊಳ್ ತಪ್ಪಿಲ್ಲ ಚತುರಂಗಕೆಡರಿಲ್ಲ ।
ರಾಯ ನಿನಗೇನು ಮಾಡುವ ರಾಜಕಾರ್ಯಮೆಂದಂ ಮುರಧ್ವಂಸಿ ನಗುತೆ ॥

ತಣ್ಣಗಾಯ್ತು. "ಕೃಷ್ಣ ಬಂದಾನೆ? ಯಾಗ ಮಾಡುವ ಉಪಾಯ ಹೇಳಿ ಕೊಟ್ಟಾನೇ" ಎಂಬುದಾಗಿ ಕಾಯ್ದುಕೊಂಡಿದ್ದ ಧರ್ಮರಾಜನಿಗೆ ಆ ಮಾತು ಕೇಳಿ ದಿಕ್ಕೇ ತೋಚದೇ ಹೋಯ್ತು. ಅಶ್ವಮೇಧಯಾಗ ಮಾಡುವ ಯೋಚನೆ ಸಹ ನಿನಗೆ ಸಾಧ್ಯವಿಲ್ಲ, ಎಂಬುದಾಗಿ ಕೃಷ್ಣನು ಹೇಳಿದಂತಾಯಿತು. ವೇದವ್ಯಾಸನು ಮಾಡಿದ ಈ ಉಪಾಯವನ್ನು ಕೃಷ್ಣನು ಬಹು ವಿನೋದವಾಗಿ ಹೇಳುತ್ತಾನೆ.

ಮರುಳಹರೆ ಭೂಪಾಲ ಬಾದರಾಯಣನಿಕ್ಕಿ ।
ಮರುಲ ಕಣ್ಣಿಗೆ ಸಿಲುಕುವರೆ ಭೀಮನೆಂಬವಂ ।
ಮರುಳನರಿಯಾ ಹಿಂದಣವರಲ್ಲ ಯೌವನಾಶ್ವ ಪ್ರಮುಖರತಿವೀರರು ॥
ಅರಳಾದ ಮಲ್ಲಿಗೆಯ ಪೊದರೊಳಗೆ ತಿರುಗಿದೊಡೆ ।
ತೆರಳಬಲ್ಲುದೆ ಸಂಪಗೆಯ ಬನಕೆ ಮರಿದುಂಬಿ ।
ತರಳತನದಿಂದೆ ಹಯಮೇಧಕುದ್ಯೋಗಿಪರೆ ಹೇಳೆಂದು ಹರಿ ನುಡಿದನು ॥

ಶಾಕುಂತಲ ನಾಟಕದಲ್ಲಿ, ಶಕುಂತಲೆಯನ್ನು ತಿರಸ್ಕಾರ ಮಾಡಿದ ಪಶ್ಚಾತ್ತಾಪದಿಂದ ನಿರುತ್ಸಾಹಗೊಂಡಿರುವ ದುಷ್ಯಂತನನ್ನು ಹುರಿದುಂಬಿಸಲು ಮಾತಲಿಯು ಮಾಂಡವ್ಯನನ್ನು ಕೆಣಕಿದಂತೆ, ಭೀಮನನ್ನು ಕೆಣಕಿ ಅವನಿಗೆ ರೋಷವನ್ನುಂಟುಮಾಡುವುದು ಆವಶ್ಯಕವಾಗಿತ್ತು. ಆದರೆ ಆ ರೋಷವು ಯೌವನಾಶ್ವನ ಮೇಲೆ ಮಾತ್ರ ತಿರುಗಬೇಕೇ ಹೊರತು ಮತ್ತಾರ ಮೇಲೂ ತಿರುಗುವಂತಿಲ್ಲ. "ಹಿಂದಣವರಲ್ಲ ಯೌವನಾಶ್ವ ಪ್ರಮುಖರತಿವೀರರು; ಅರಳಾದ

ಮಲ್ಲಿಗೆಯ ಪೊದರೊಳಗೆ ತಿರುಗಿದೊಡೆ ತೆರಳಬಲ್ಲುದೆ ಸಂಪಿಗೆಯ ಬನಕೆ ಮರಿ ದುಂಬಿ“ ಎಂದು ಕೃಷ್ಣನು ಹೇಳಿ “ಎಲ್ಲೊ ನಿಶ್ಯಕ್ತರಾದ ದುರ್ಯೋಧನಾದಿ ಗಳನ್ನು ಕೊಂದ ಮಾತ್ರಕ್ಕೆ ಶೂರರನ್ನು ಭೀಮನು ಕೆಣಕಿಯಾನೆ” ಎಂದನು. ಇಲ್ಲಿ ‘ಬಾದರಾಯಣನಿಕ್ಕಿದುರುಲ ಕಣ್ಣಿಗೆ ಸಿಲುಕುವರೆ? ಮರುಳರಹರೆ?’ ಎಂಬ ವಾಕ್ಯಗಳು ಬಹಳ ಸ್ವಾರಸ್ಯವಾಗಿವೆ.

ಕೃಷ್ಣನು ಈ ಮಾತುಗಳನ್ನೆಲ್ಲಾ ವಿನೋದಕ್ಕಾಗಿ ಹೇಳಿದುದರಿಂದಲೇ ಭೀಮನು ಸುಮ್ಮನಿದ್ದನು. ಇಲ್ಲದಿದ್ದರೆ ಗದೆಯನ್ನು ಎತ್ತಿಕೊಂಡು, ಬೇರೊಂದು ಸಂದರ್ಭದಲ್ಲಿ ಮಾಡಿದಂತೆ, ಕೃಷ್ಣನನ್ನು ಹಸ್ತಿನಾಪುರದ ಬೀದಿಗಳಲ್ಲೆಲ್ಲಾ ಓಡಾಡಿಸುತ್ತಿದ್ದನೇನೋ? ಆದರೆ ಕೃಷ್ಣನು ವಿನೋದವನ್ನು ಮುಂದುವರಿಸಿ ದುದರಿಂದ ಭೀಮನೂ ಕೃಷ್ಣನನ್ನು ಹಾಸ್ಯಮಾಡತೊಡಗಿದನು. ಕೃಷ್ಣ ಭೀಮರ ಹುಡುಗಾಟವು ರಸವತ್ತಾಗಿಯೇ ಇದ್ದಿರಬೇಕು. ಕವಿಯ ಮಾತಿ ನಲ್ಲಿಯೇ ಅವರ ಸಂಭಾಷಣೆಯನ್ನು ಕೇಳಿ:

ಕೃಷ್ಣ—“ಮತಿಯುಳ್ಳೊಡಿವನಸುರ ಬಲಿಗೊದವಿಸಿದ ಕೂಳನತಿಮಹೋ ದರಕಡಸಿಕೊಂಬನೆ.”

ತಾನು ಮಹೋದರನೆಂದು ಕೃಷ್ಣನು ಹೇಳಿದುದರಿಂದ ಭೀಮನು ‘ನಿನ್ನ ಹೊಟ್ಟೆ ಚಿಕ್ಕದಲ್ಲ’ ಎಂದನು.

ಭೀಮ—“ಆಹಾ ಮಹಾದೇವ ಚಿತ್ರಮಂ ಕೇಳಿದೆವೆಲಾ, ಹಲವುಂ ಲೋಕಮಂ ಕೊಳ್ಳದೆ ನಿನ್ನುದರ”

ಕೃಷ್ಣ—“ಭೀಮಂ, ನೀತಿಗಳ ಗತಿಯನರಿದೊಡೆ ನಿಶಾಚರಿಯನಾಳ್ವನೇ ರಾಣಿಯೆಂದರಮನೆಯೊಳು”

ಭೀಮ—“ಮಹಾ ನಿಶಾಚರಿಯರಲ್ಲವೆ ನರಕಾಸುರನ ಮನೆಯ ಬಾಲಕಿಯರು.”

ಭೀಮನು ಅಷ್ಟಕ್ಕೇ ಬಿಡಲಿಲ್ಲ. “ಆಗಲಯ್ಯ ಕೃಷ್ಣ. ರಾಕ್ಷಸಿಯ ರನ್ನು ಮದುವೆಯಾದೆ. ಹೋಗಲಿ ಎಂದರೆ ತಿರ್ಯಗ್ ಜಂತುಗಳನ್ನು ಕೂಡ ಬಿಡಲಿಲ್ಲವಲ್ಲ ನೀನು. ಕರಡಿಯ ಮಗಳನಾಳ್ದವ ನೀನು” ಎಂದನು.

ಕೃಷ್ಣ—ಕ್ಷಿತಿಯುಳೊದ್ಭುತ ರೂಪ ನೀ ವೃಕೋದರನಿವನ । ಮತವಿಡಿದು ಹಯಮೇಧಕುದ್ಯೋಗಿಸಿದೊಡೆ ಪೂರಿತಮಹುದೆ?

ಭೀಮ—"ಧರೆಯೊಳದ್ಭುತಾಕಾರರಾರೋ ನಿನ್ನೊಹೆಗಳ ಬಲ್ಲೆ; ನಾನಿತ್ತ ಭಾಷೆಗೆ ತಪ್ಪೆ.

ಕೃಷ್ಣ–ಭಾಷೆಯಂ ಕೊಟ್ಟುತಪ್ಪುವನಲ್ಲ ನೀನು. ಆ ವಿಶೇಷಮಂ ಕಂಡು ಬಲ್ಲೆವು, ಹಿಂದೆ ರಣದೊಳಭಿಲಾಷೆಯಿಂ ಪೈಶಾಚರಂತೆ ಹೇಸದೆ ರಕ್ತಪಾನಮಂ ಮಾಡಿಯೊಡಲ ಪೋಷಿಸಿದ, ಬಂಡತನವಿದು ನಿನ್ನ ಸಾಹಸಕೆ ಭೂಷಣವೆ? ಹೋಗೆಲವೊ ಬಾಣಸಿಗ ಲೋಕದೊಳ್ದೂಷಣಕೆ ಬೆದರೆ.

ಭೀಮ—ಶಿವಶಿವಾ ದೂಷಣಕೆ ಬೆದರಿ ಮಾಡಿದಿರಿ, ಕೈತವಜಾರ ವಿದ್ಯೆಗಳ, ಹೆಣ್ಣಾಗಿ ಬಾಣಸದ ಪವಣರಿದುದಿಲ್ಲಲಾ, ಹೇವರಿಸದಸುರೆಯಸುವೀಂಟಿದವರಾರೋ ಬಳಿಕ, ಅವನಿಪತಿಗಳ ಕೂಡೆ ಗೋವಳಗರ್ಾವ ಮೇಳಂ

ಭೀಮ ಮತ್ತು ಕೃಷ್ಣರ ಈ ಹಾಸ್ಯದ ಹಿಂದೆ ಅವರ ನಿಜವಾದ ಶೌರ್ಯವೂ ಆ ಶೌರ್ಯದ ಪರಸ್ಪರ ಪ್ರಶಂಸೆಯೂ ಇದೆ ಎಂಬುದು ತಿಳಿಯುವುದು. ಲಕ್ಷ್ಮೀಶನಿಗೆ 'ಮಿತಿ' ಯ ಬೆಲೆಯು ಗೊತ್ತಿರುವುದರಿಂದ ಅವನು ಈ ಹಾಸ್ಯವನ್ನು ಇನ್ನೂ ಮುಂದುವರೆಸಿಲ್ಲ. ಮೂಲ ಜೈಮಿನಿ ಭಾರತದಲ್ಲಿ ಈ ವಿಷಯ ಹೇಗಿದೆಯೊ ?

* * *

ಭೀಮನು ಕೃಷ್ಣನನ್ನು ನೋಡುವುದಕ್ಕೆ ದ್ವಾರಕೆಗೆ ಬಂದನು. ಅದು ಕೃಷ್ಣನ ಊಟದ ಸಮಯ. "ಅಸುರಾರಿ, ಕ ನ ಕ ಭಾ ಜ ನ ರತ್ನದೀಪ್ತಿಗಳ ಸಾಲ್ಗಳಿಂದೆಸೆವ ಭೋಜನ ಶಾಲೆಗೈತಂದು ಬಾಂಧವವೆರಸಿ ಕುಳ್ಳಿರ್ದು ದಿವ್ಯಾಸನದೊಳು, ಜನನಿಯರುಣಿಸಸಿಕ್ಕೆ ಸವಿಗೊಳಿಸೆ ಚಮರವ್ಯಂಜನಮಂ ಪಿಡಿದು ರಾಣಿಯರಿಕ್ಕೆಲದೊಳಿರೆ ಸುರಂಜನ ಕಥಾಲಾಪದಿಂ ಷಡ್ರಸಾನ್ನದಾರೋಗಣೆಯೊಳಿರುತಿರ್ದನು" ಮತ್ತು

ಎಸೆವ ಪೊಂಬರಿವಾಣ ಮಿಸುನಿವಟ್ಟಲ್ಗಳೊಳ್ ।
ಮಿಸುವ ಶಾಲ್ಯೋದನಂ ಸೂಪ ಘೃತ ಭಕ್ಷ್ಯ ಪಾ ।
ಯಸ ಪರಡಿ ಮಧು ಶರ್ಕರಾಮಿಷ ಪಳಿದ್ಯ ಸೀಕರಣೆ ಶಾಕ ತನಿವಣ್ಗಳ ॥
ರಸ ರಸಾಯನ ಸಾರ್ಗಳುಪ್ಪುಗಾಯ್ ಬಾಳುಕಂ ।
ಕೃಸರಿ ಕಜ್ಜಡಿ ಪಾಲ್ಮೊಸರ್ಗಳಿವು ಬಗೆಗೊಳಿಸಿ ।
ಪೊಸತೆನಿಸಿರಲ್ ಸವಿದನಚ್ಯುತಂ ದೇವಕಿಯಶೋದೆಯರ್ ತಂದಿಕ್ಕಲು ॥

ಕನ್ನಡ ನಾಡಿನ ಉತ್ಕೃಷ್ಟವಾದ ಭೋಜನ ಯಾರಿಗಾದರೂ ಬಾಯಿ ನೀರು ಕರೆಯುತ್ತೆ. ಅನ್ನ ತುಪ್ಪ ತೊವ್ವೆ ಪಾಯಸ ಪಳಿದ್ಯ ಸೀಕರಣೆ ಸಾರುಗಳು ಉಪ್ಪಿನಕಾಯಿ ಬಾಳಕ ಹಾಲು ಮೊಸರು.

ಆಗ ಸಮೀಪದಲ್ಲಿ ರಸಿಕಳಾದ ಸತ್ಯಭಾಮೆ ಇದ್ದಳು. ಆಗಿಂದಾಗ್ಗೆ ಕೃಷ್ಣನನ್ನು ಹಾಸ್ಯಮಾಡುತ್ತಿದ್ದವಳು; ಕೇಳಬೇಕೆ? ಹೆಂಡತಿಯ ಕೈಲಿ ಹಾಸ್ಯ ಮಾಡಿಸಿಕೊಳ್ಳದ ಗಂಡನಾರು? ಅದರಲ್ಲೂ ಊಟಕ್ಕೆ ಕುಳಿತಾಗ ಹಾಸ್ಯ ಮಾಡಿದರೆ, ಹಿರಿಯರೊಬ್ಬರು ಹೇಳಿದಂತೆ ಒಂದು ಸೌಟು ತುಪ್ಪ ಹೆಚ್ಚಾಗಿಯೇ ಬೀಳುತ್ತದೆ. ಕೃಷ್ಣನ ಊಟದ ಆಡಂಬರವನ್ನು ನೋಡಿ ಸತ್ಯಭಾಮೆ ಈ ರೀತಿ ಹೇಳಿದಳು: ಕದ್ದು ಮನೆಮನೆ ಪೊಕ್ಕು ಬೆಣ್ಣೆ ಪಾಲ್ಗಿನೆಗಳಂ, ಮೆದ್ದು, ಗೋವಳರ ಮೇಳದ ಕಲ್ಲಿಗೂಳ, ಕೈಮುದ್ದೆಯಂ ತೆಗೆದುಂಡು, ತುರುಗಾವ ಪಳ್ಳಿಯಂ ಬಿಟ್ಟು ಬಳಿಕೆರವಿಲ್ಲದೆ, ಹೊದ್ದಿ ಪಾಂಡವರಸೋಲ್ಯೆಸಲಾದುದು ಭಾಗ್ಯ, ಮಿದ್ದಪುವು ರಾಜಭೋಜ್ಯಂಗಳಿವು, ಪಡೆವವರ್ಮುದ್ದುಗೈದಪರೂಟದೆಡೆಗಳೋಳೆ ಚೋದ್ಯಮೆಂದಳ್" ನಗುತೆ

ಆದರೆ ಅತ್ತೆಯಾದ ದೇವಕಿಯು ಸೊಸೆಯ ಈ ಹಾರಾಟವನ್ನು ಕಂಡು ಸುಮ್ಮನಿರುವಳೇ? ಅವಳು ತನ್ನ ಅಬ್ಬರವನ್ನು ತೋರಿಸಿಯೇ ತೋರಿಸಿದಳು.

ಬರಿದೆ ಗಳಹದಿರತ್ತೆ ಮಾವದಿರಿರಲ್ಕೆ ನೀ।
ನರಿಯಲಾ ತನ್ನ ಬಂಧನಮೀತನುದಯಿಸಲ್ ।
ಪರಿದುದೀತನೆ ಜಗದ್ಗುರು ಕಣಾ ಪಾಲಿಸುವನಿಂದ್ರಾದಿ ನಿರ್ಜರರನು ॥
ಕುರುಪಿಡಲ್ಬಹುದೆ ಮಾನವನೆಂದು ಕೃಷ್ಣನಂ ।
ಜರಿಯೆ ನೀನೇಸರವಳೊಡನಾಡಿತನದಿಂದೆ।
ಬೆರೆಯಬೇಡತ್ತಹೋಗೆಂದು ದೇವಕಿ ಸತ್ಯಭಾಮೆಯಂ ಘರ್ಜಿಸಿದಳು ॥

ಹೆಂಡತಿ ಎಂಬ ಒಡನಾಡಿತನದಿಂದ ಬೆರೆಯಬೇಡ (ಹೆಮ್ಮೆಗೊಳ್ಳಬೇಡ) ಎಂದು ದೇವಕಿ ಹೇಳಿದಳು.

ಸತ್ಯಭಾಮೆ ಏನು ಸಾಮಾನ್ಯಳೇ? ವಾದದಲ್ಲಿಯೂ ಚತುರೋಕ್ತಿಯಲ್ಲಿಯೂ ಕೃಷ್ಣನೇ ಅವಳಿಗೆ ಎಷ್ಟೋ ಸಲ ಸೋತಿದ್ದಾನೆ. ದೇವಕಿಯ ಮಾತಿಗೆ ಅವಳು ಪ್ರತ್ಯುತ್ತರ ಕೊಡದೆ ಬಿಡುವವಳೆ? ಬಳಿಯಲ್ಲಿ ಕೃಷ್ಣ ಬೇರೆ ಇದ್ದಾನೆ. ಅವನನ್ನು ಹಾಸ್ಯಮಾಡುವ ಯಾವ ಸಮಯವನ್ನೂ ಭಾಮೆ ಕಳೆದುಕೊಳ್ಳುವವಳಲ್ಲ.

ನಿಮ್ಮ ಬಂಧನವ ಬಿಡಿಸಿದವಂಗೆ ತವೆ ಬಂಧ।
ನಮ್ಮುಗಳವೇಕಾಯ್ತು ದಿವಿಜರಂ ಪೊರೆವವಂ।
ಚಮ್ಮಟಿಗೆವಿಡಿಯಲೇತಕೆ ನರನ ಕುರುಹುಗಾಣಿಸಿದವಂ ಪೇಳವಿಗೊಲ್ಲು॥
ಸುಮ್ಮನೇತಕೆ ಸಿಕ್ಕಿದಂ ಜಗದ್ಗುರುವೆನಲ್।
ನಮ್ಮ ಜಗದೊಳಗಿಹಿರಿ ನೀವು ನಿಮಗೆಯು ಗುರುವೆ।
ನಮ್ಮನಂಜಿಸವೆ ನೀಂ ತಿಳಿಪುವೆಂದಳ್ ದೇವಕಿಗೆ ಮತ್ತೆ ಸತ್ಯಭಾಮೆ॥

ಸತ್ಯಭಾಮೆಯ ಮಾತಿಗೆ ದೇವಕಿಯು ಏನು ಉತ್ತರವನ್ನು ಕೊಟ್ಟಳೆಂಬುದನ್ನು ಕವಿ ಹೇಳಿಲ್ಲ. ಆಗಿನ ಜೀವನ ಎಷ್ಟು ಸರಸವಾಗಿತ್ತು, ಎಷ್ಟು ಪ್ರತಿಭಾ ಮತ್ತು ಶಕ್ತಿಯುಕ್ತವಾಗಿತ್ತು. ಆ ಕಾಲದ ಸಂಸಾರದ ಪುರುಳೇನು? ಆ ಹಾಸ್ಯ! ಆ ದಿನ ಸ್ತ್ರೀಪುರುಷರ ಸಮಾನತೆ! ಇವುಗಳೆಲ್ಲಾ ಆದರ್ಶ ಸಮಾಜದ ಉತ್ತಮಗುಣಗಳಾಗಿವೆ ಎಂಬುದನ್ನು ಕವಿಗುರುವು ಈ ಪದ್ಯಗಳಿಂದಲೂ ಸನ್ನಿವೇಶಗಳಿಂದಲೂ ತೋರಿಸಿದ್ದಾನೆ.

ಭೀಮನು ಬರುತ್ತಿದ್ದುದನ್ನು ಕೃಷ್ಣಪರಮಾತ್ಮ ನೋಡಿದನು. ಸತ್ಯಭಾಮಾದೇವಿ ನುಡಿದ ಮಾತಿನಿಂದ ಅವನ ಮುಖದಲ್ಲಿ ಆಗಲೆ ನಸುನಗೆ ಮಿನುಗುತ್ತಿದ್ದಿತು. ಭೀಮನನ್ನು ನೋಡಿ ಕೃಷ್ಣನಿಗೆ ಹಾಸ್ಯದ ಮನೋಭಾವವು ಇನ್ನೂ ಹೆಚ್ಚಾಯಿತು. ಭೀಮನಲ್ಲಿ ಭಾವಮೈದುನ ತನದ ಸಲಿಗೆ; ಕೃಷ್ಣನು ಸೈರಂಧ್ರಿಗೆ ಸೂಚಿಸಿದನು. ಅವಳು ಭೀಮನನ್ನು ನೋಡಿ "ಆರೋಗಣೆಯ ಸಮಯ ಒಳವುಗುವೊಡೆ ಔಚಿತ್ಯವಲ್ಲ" ಎಂದು ಹೇಳಿ ತಡೆದು ಬಿಟ್ಟಳು. ಭೀಮನನ್ನು ತಡೆಯುವುದೆಂದರೆ ಸಾಮಾನ್ಯವೆ? ಯಾವುದಾದರೂ ರಾಜಕಾರಣದ ದೆಸೆಯಿಂದ ತಡೆದಿದ್ದರೆ, ಭೀಮನಿಗೆ ಅಷ್ಟೊಂದು ಕೋಪ ಬರುತ್ತಿರಲಿಲ್ಲವೇನೋ? ಭೀಮನಿಗೆ ಔಚಿತ್ಯ ಅನೌಚಿತ್ಯಗಳನ್ನು ಹೇಳುವವಳು ಸೈರಂಧ್ರಿಯೆ? ಆರೋಗಣೆಯು ಸಮಯವಾದರೆ ಭೀಮನು ಯಾಕೆ ಒಳಕ್ಕೆ ಹೋಗಬಾರದು? ತಾನೂ ಅದರಲ್ಲಿ ಯಾಕೆ ಭಾಗಿಯಾಗಬಾರದು? ಅಥವ ಒಬ್ಬನಿಗೆ ಆರೋಗಣೆಯ ಸಮಯವಾದರೆ ಉಳಿದವರಾರೂ ಬಂದು ತನ್ನನ್ನು ಎದುರುಗೊಳ್ಳಬಾರದೆ? ಎಂದೂ ಮುಂತಾಗಿ ಯೋಚಿಸಿ, ಭೀಮನು ಬಹಳ ಕೋಪಗೊಂಡು ಒಂದೇ ಉಸುರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಹಾಕಿದನು:

ಆರೋಗಣೆಯು ಸಮಯಮಾರ್ಗೆ
ಭೂತಂ ಪೊಯ್ದುದಾರನೀ ಮನೆಯೊಳ್
ಇಂತೀಗಳೇಕೆ ಮೌನಂ
ಆರುಮಿಲ್ಲವೆ
ಪೊರೆಯೊಳಿಹಳೆ
ದೇವಕಿ ಸತ್ಯಭಾಮೆಗಾವುದ ಮಿಲ್ಲಲಾ
ಆರೆನ್ನನಿಂತು ತಡೆಸಿದರ್
ಆಯ್ತೆ ದುರ್ಭಿಕ್ಷಂ
ಊರೊಳ್ ಬೆಳೆಯದೆ ಧಾನ್ಯಂ
ಕರೆಯದೆ ವೃಷ್ಟಿ
ನಾರಿಯರನಿನಿಬರಂ ಕಟ್ಟಿಕೊಳಲೇಕೆ ಬಿಡಲಿ.

ಭೀಮನು ಕೊನೆಯ ಮಾತನ್ನು ಹೇಳದಿದ್ದರೂ ಪರವಾಯಿರಲಿಲ್ಲ. ಏತಕ್ಕೆಂದರೆ ಅದು ಕೇವಲ ಅಪ್ರಕೃತವಾದುದಾಗಿತ್ತು.

ಆದರೆ ಕೋಪ ಬಂದಾಗ ಅದರಲ್ಲೂ ಭೀಮನಿಗೆ—ಪ್ರಕೃತ ಅಪ್ರಕೃತದ ತುಲನೆಯನ್ನು ಮಾಡುವುದಕ್ಕಾಗುತ್ತದೆಯೆ? ಭೀಮನ ಕೂಗು ಕೃಷ್ಣನಿಗೆ ಕೇಳಿಸಿತು. ಅವನು ರುಕ್ಮಿಣೀ ಸತ್ಯಭಾಮೆಯರ ಮುಖವನ್ನು ನೋಡಿ ನಕ್ಕನು. ಅದು ಭೀಮನಿಗೂ ಕೇಳಿಸಿರಬೇಕು. ಒಳಗೆ ಕೃಷ್ಣನು ಊಟಮಾಡುತ್ತಿದ್ದ ಬಗೆಬಗೆಯ ತಿಂಡಿಯ ವಾಸನೆಯು ಹೊರಕ್ಕೆ ಬರುತ್ತಿದ್ದಿತು. ಭೀಮನನ್ನು ಕೆಣಕಬೇಕೆಂಬುದಾಗಿಯೇ ಕೃಷ್ಣನು ಅವನಿಗೆ ಕೇಳಿಸುವಂತೆ ಗಟ್ಟಿಯಾಗಿ 'ಧರ್‍ರೆಂದು' ತೇಗಿದನು. ಭೀಮನಿಗೆ, ಕೃಷ್ಣನು ತನ್ನ ಕಡೆಗೆ ಕೈಬೆರಳನ್ನು ತೋರಿಸುತ್ತಾ ತನ್ನನ್ನು ಹಾಸ್ಯಮಾಡುತ್ತಾ ತಿನ್ನುತ್ತಿರುವಂತೆ ತೋರಿತು. ಊಟದ ವಿಷಯದಲ್ಲಿ ಮಾತ್ರ ಭೀಮನನ್ನು ಕೆಣಕಬಾರದು. ಅವನು ಕೋಪದಿಂದ ಈ ರೀತಿ ಚೀರಿದನು.

ಬಿಡದೆ ಕಳವಿಂದೆ ಗೋಪರ ಮನೆಗಳಂ ಪೊಕ್ಕು।
ತುಡುತಿಂದವನ ಭೋಜನಕ್ಕೆ ಮೃಷ್ಟಾನ್ನಮಾ।
ದೊಡೆ ಕೆಲಬಲಂಗಳಂ ನೋಡುವನೆ ಗೋವಳಂಗರಸುತನಮಾದ ಬಳಿಕ॥
ಪೊಡವಿಯುಂ ಕಂಡು ನಡೆವನೆ ಮುಳಿದು ಮಾವನಂ।
ಬಡಿವವಂ ನೆಂಟರನರಿವನೆ, ಮೊಲೆಗೊಟ್ಟಳಸು
ಗುಡಿವವಂ ಪುರುಷಾರ್ಥಿಯೊದಪನೆ ನಾವಜ್ಞರೆಂದು ಮಾರುತಿ ನುಡಿದನು॥

ಭೀಮನು ಅಷ್ಟಕ್ಕೇ ಬಿಡಲಿಲ್ಲ. "ದೇವತನವಂ ಬಿಟ್ಟು ನರನಾದವಂಗೆ ಬಳಿಕ ಆವ ಗೌರವವಿಹುದು ಇವಂ ನಾಚುವನೆ ಸಾಕು ನಾವು ಈತನಂ ಕಾಣ್ಬದು ಉಚಿತವಲ್ಲ" ಎಂಬುದಾಗಿ ವಿಭಾಡಿಸಿದನು.

ಅದನ್ನು ಕೇಳಿ "ಶ್ರೀವರನು ನಸುನಗೆಯೊಳು ಆಗತಾನೆ ಅರಿದಂತೆ "ಅನಿಲಜಂ ಆವಾಗ ಬಂದಂ? ಇತ್ತಕರೆ. ತಡೆದಳಾವಳ್, ಏತಕೀ ಕೋಪಂ" ಎಂದನು. ಭೀಮನು ಜಿಗುಪ್ಸೆಯಿಂದ "ದೇವ, ನಿಮ್ಮರ್ಜುನನಸಲುಗೆ ನಮಗುಂಟೆ? ಸಂಭಾವಿಸುವವರಿಲ್ಲೆನ್ನಮನಿಲ್ಲಿ" ಎಂಬುದಾಗಿ ಪೆಚ್ಚು ಮುಖವನ್ನು ಹಾಕಿಕೊಂಡನು. ಭೀಮನಂತಹ ಶೂರನು ಪೆಚ್ಚುಮುಖ ಹಾಕಿಕೊಂಡರೆ ಕೃಷ್ಣನಿಗೆ ಸಹಿಸುತ್ತದೆಯೆ? ಆಗ ಕೃಷ್ಣ ಪರಮಾತ್ಮನು "ನಾವು ತಡೆಸಿಡೆವು ಇತ್ತಬಾ,ಎನುತೆ ಸೆರಗುವಿಡಿದು ಒಡನೆ ಕುಳ್ಳಿರಿಸಿಕೊಂಡು, "ಆ ವಿವಿಧಭೋಜ್ಯದಿಂದಾರೋಗಿಸಿದ ಬಳಿಕ ತೀವಿದ ಸುಗಂಧ ಕರ್ಪೂರ ತಾಂಬೂಲ ಪುಷ್ಪಾವಳಿಗಳಿಂದೆ ಸತ್ಕರಿಸಿದಂ" ಭೀಮನ ಕೋಪವು ಆ ಸತ್ಕಾರದೊಂದಿಗೆ ಮಾಯವಾಯಿತು.

ಭೀಮ ಕೃಷ್ಣರ ವಿನೋದಕ್ಕೆ ಕವಿಯು ನಮ್ಮನ್ನು ಮೊದಲೇ ಸಿದ್ಧಮಾಡಿರುತ್ತಾನೆ. ಇಲ್ಲಿಯೂ ಲಕ್ಷ್ಮೀಶನು ಮೂಲ ಜೈಮಿನಿ ಭಾರತದಲ್ಲಿರುವ ಅನೇಕ ಶ್ಲೋಕಗಳನ್ನು ಬಿಟ್ಟು ಎಷ್ಟುಬೇಕೋ ಅಷ್ಟನ್ನು ಮಾತ್ರ ಆರಿಸಿಕೊಂಡಿದ್ದಾನೆ.

* * *

ಕೃಷ್ಣನು ರುಕ್ಮಿಣಿ ಸತ್ಯಭಾಮೆಯರೊಡಗೂಡಿ ಹಸ್ತಿನಾಪುರವನ್ನು ಸೇರುವನು. "ರುಕ್ಮಿಣಿ ದೇವಿ ಮೊದಲಾದರಂ ದ್ರೌಪದಿ ಸುಭದ್ರೆಯರ್ತಾವಪ್ಪಿ" ಸತ್ಕರಿಸಿದ ಬಳಿಕ ಚದುರೆಯಾದ ಸತ್ಯಭಾಮೆಯು "ಮೂರುಲೋಕದೊಳ್ಕೃಷ್ಣನಂ। ಷೋಡಶಸಹಸ್ರ ನಾರಿಯರ್ಕೈದಲರಿಯರಾತನನೊಲಿಸಿಕೊಂಡೆ ನಿನ್ನ। ಗಾಡಿಗಿದು ಪೊಸತೆ? ಗಂಡರನೈವರಂ ಮರುಳು। ಮಾಡುವ ಮಹಾಪತಿವ್ರತೆ ನಿನ್ನೊಳಾವು ಮಾತಾಡಲಂಜುವೆವು...." ಎಂಬುದಾಗಿ ಹಾಸ್ಯಮಾಡಿದಳು. ಕೃಷ್ಣನು ದ್ರೌಪದಿಯ ಗುಣಗಳಿಗೆ ಸೋತಿರುವನೆಂಬುದು ಕೃಷ್ಣನ ಷೋಡಶಸಹಸ್ರ ನಾರಿಯರಿಗೂ ಗೊತ್ತಿದ್ದಿತು. ಅವರೆಲ್ಲರೂ ದ್ರೌಪದಿಯ ವಿಷಯದಲ್ಲಿ ಇದೇ ಅಭಿಪ್ರಾಯವುಳ್ಳವರಾಗಿದ್ದರು. ಆದರೆ ದ್ರೌಪದಿಯ ಎದುರಿಗೆ ಇದುವರೆಗೆ ಯಾರೂ

ಆ ಮಾತುಗಳನ್ನಾಡಿರಲಿಲ್ಲ. ಈಗ ಸತ್ಯಭಾಮೆ ಹೇಳಿದುದನ್ನು ಕೇಳಿ ದ್ರೌಪದಿಗೆ ಕೋಪವುಂಟಾಯಿತು. ಅವಳೇನು ಕಡಿಮೆಯೇ? ಚಾತುರ್ಯದಲ್ಲಿ ಸತ್ಯಭಾಮೆಯನ್ನು ಮೀರಿಸಿದವಳು. ಅಲ್ಲದೆ "ಗಂಡರಸೈವರ ಮರಳುಮಾಡುವ ಮಹಾ ಪತಿವ್ರತೆ" ಎಂದರೆ ಯಾರಿಗಾದರೂ ಕೋಪ ಬಂದೇ ಬರುತ್ತೆ. ಗಂಡರು ಐವರು ಇರುವಾಗ ಮಹಾಪತಿವ್ರತೆ ಎಂದರೆ ಸದುದ್ದೇಶದಿಂದ ಹೇಳಿದ್ದರೆ ಸರಿ. ಇಲ್ಲವಾದರೆ ಯಾರ ವಿಷಯಲ್ಲಿ ಆ ವಿಶೇಷಣವು ಹೇಳಲ್ಪಟ್ಟಿರುವುದೋ ಅವರಿಗೇನೂ ಅದು ಗೌರವವಲ್ಲ. ದ್ರೌಪದಿಯು ಸತ್ಯಭಾಮೆಯ ಬಾಯನ್ನು ಈ ಮುಂದಲ ಉತ್ತರದಿಂದ ಮುಚ್ಚಿಸಿದಳು ;—"ಕಾರುಣ್ಯನಿಧಿಯ ನಾನೊಲಿಸಿಕೊಳ್ಳದಿರ್ದೊಡೆ ವಿ। ಚಾರಿಸುವರುಂಟೆ ಯೆನ್ನಭಿಮಾನಹಾನಿಯಂ। ಕೌರವನ ಸಭೆಯೊಳುಳಿದವರಿರ್ದೊಡೇನಾಯ್ತು ಕೃಷ್ಣನೇ ಪಾಲಿಸಿದನು."

ಇದು ಸ್ವಸಮರ್ಥನವಾಯಿತು. ಆದರೆ ಸತ್ಯಭಾಮೆಯನ್ನು ಮಾತನಾಡದಂತೆ ಬಾಯಿ ಮುಚ್ಚಿಸಬೇಕಲ್ಲ—"ಪಾರಿಜಾತದ ನೋಂಪಿಗಂದು ನಿಜ ರಮಣನಂ। ನಾರದ ಮುನಿಗೆ ಕೊಟ್ಟ ಬಳಿಕ ಒಡೆಯರುಂಟೆ ನಿನಗೆ, ಈ ರುಕ್ಮಿಣೀ ಧವನನಾಥರ್ಗೆ ನಾಥನೆಂಬುದು ಪುಸಿಯೇ ಪೇಳು" ಎಂದಳು.

ಸತ್ಯಭಾಮೆಯು ಈ ಮಾತಿಗೆ ಏನು ಉತ್ತರವನ್ನು ಹೇಳಿದಳೋ ಅದನ್ನು ಕವಿಯು ಹೇಳಲಿಲ್ಲ.

* * *

ಕೃಷ್ಣನ ಸೈನ್ಯವು ಅನುಸಾಲ್ವನಿಗೆ ಇದಿರಾಗಿ ಕಾದಲು ಬರುವುದು. ಅನುಸಾಲ್ವನು "ಬೆಣ್ಣೆಗಳ್ಳನ ಕೊಬ್ಬಿದ ಉದರದೊಳ್ ಪೊಚ್ಚಪೊಸ ಸುಣ್ಣಮಂ ಪೊಯ್ದು ನೀರೆರೆದಂತೆ ಮಾಡುವೆ, ತುರುಗಾಹಿಯಂ ಗೋವಳೆಯರುಪನಾಯಕನಂ ಪದೆವೆಂ" ಎಂದು ಸನ್ನದ್ಧನಾಗಿ ಬರುವನು. ಆಗ ಪ್ರದ್ಯುಮ್ನನು (ಮನ್ಮಥನು) ಅವನಿಗೆ ಎದುರಾಗಿ ಯುದ್ಧಕ್ಕೆ ಬಂದು ನಿಜಚಾಪವಂ ಜೇಗೈಯ್ಯುವನು. ಅನುಸಾಲ್ವನು ಮನ್ಮಥನನ್ನು ಈರೀತಿ ಪರಿಹಾಸ್ಯಮಾಡುವನು. "ವ್ಯಗ್ರವೇತಕೆ ನಿನಗೆ ನಾವಿಂದ್ರಿಯಂಗಳಂ ನಿಗ್ರಹಿಸಿದವರಲ್ಲ. ವಿರಹವೆಮಗಿಲ್ಲ ಸುರತಗ್ರಾಹ್ಯ ಮೋಹನದ ಪಂಚ ಬಾಣ ಪ್ರಯೋಗಂಗಳೇಕೀಗ ನಿನ್ನ॥ ವಿಗ್ರಹಕೆ ನಮಗಿಕ್ಷುಚಾಪ ವಾರಡಿವೆದೆ ಸ। ಮಗ್ರ ಕುಸುಮಾಸ್ತ್ರಂಗಳಿಲ್ಲ ನೋಡೆನ್ನದೊಂ! ದುಗ್ರಸಾಯಕವ।"

ಯುದ್ಧಕ್ಕೆ ಎದುರಾಗಿ ಬಂದ ಮನ್ಮಥನನ್ನು ಈ ರೀತಿ ಹಾಸ್ಯಮಾಡು ವುದು ಬಹಳ ವಿನೋದವಾಗಿದೆ.

ಯುದ್ಧದಲ್ಲಿ ಕುಸುಮಾಸ್ತ್ರನಾದ ಪ್ರದ್ಯುಮ್ನನು ಸೋತುಹೋದನು. ಮನ್ಮಥನು ಈಶ್ವರನ ಉರಿಗಣ್ಣಿಗೆ ತುತ್ತಾಗಿ ಬೂದಿಯಾಗಿ ಅನಂಗನಾದ ಕಥೆ ಎಲ್ಲರಿಗೂ ಗೊತ್ತೇ ಇವೆ. ಆದರೆ ಅವನು ಅನುಸಾಲ್ವನೊಡನೆ ಯುದ್ಧಮಾಡಿ ಸೋತುದರಿಂದ ಅವನಿಗೆ ಅನಂಗತ್ವವುಂಟಾಯಿತೆಂದು ಕವಿಯು ಚಮತ್ಕಾರ ವಾಗಿ ವರ್ಣಿಸಿದ್ದಾನೆ. ಕೃಷ್ಣನು ಪ್ರದ್ಯುಮ್ನನನ್ನು ಈ ರೀತಿ ಜರೆಯುತ್ತಾನೆ. ದ್ವಾರಕೆಯ ನೆಂತಬಲೆಯರ ಮುಂದೆ ಪುಗುವೆ ಪೋ| ಗಾರಣ್ಯಕೆನಲಲ್ಲಿ ಮುನಿ ಗಳ್ಗೆ ಸೇರೆ ಕೆಟ್ಟಾರೂರ ಸಾರ್ದೊಡಂ ನೀಂ ವಿರಹಿತನು ವಿಷಮನೆಂದೋರ್ವರಂ ಕೂಡರು || ಆರಿನ್ನು ಗತಿ ನಿನಗೆ ಸಂಬಂಧಿ ಬಾಣನಂ| ಹಾನ್ಯೆಸುವೊಡೆ ನಿನ್ನ ಬೇರ್ಗೊಲಿಗೆ ಶಿವನಿಪ್ಪ| ಕಾರಣವನಂಗತ್ವಮೇ ಪ್ರಾಪ್ತಂ."

ಮೇಲಿನ ಪದ್ಯದಿಂದ ಯುದ್ಧದಲ್ಲಿ ಸೋತವನು ಯಾರಿಗೂ ಮುಖವನ್ನು ತೋರಿಸಲಾರನೆಂಬುದನ್ನು ಲಕ್ಷ್ಮೀಶನು ಪ್ರಕಾರಾಂತರದಿಂದ ಹೇಳಿದ್ದಾನೆ.

ಕೃಷ್ಣನೂ ಅನುಸಾಲ್ವನೊಂದಿಗೆ ಯುದ್ಧಮಾಡಿ ಒಂದು ಸಲ ಮೂರ್ಛೆ ಯನ್ನು ಹೊಂದುತ್ತಾನೆ. ಆಗ ಸತ್ಯಭಾಮೆಯು ಅವನ ಅಧಟವನ್ನು ಹಾಸ್ಯ ಮಾಡುತ್ತಾಳೆ. ಇದರಿಂದ ಆಗಿನ ಸ್ತ್ರೀಯರು ಗಂಡನ ಹೇಡಿತನವನ್ನು ಸಹಿಸು ತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸತ್ಯಭಾಮೆಯು ಹೇಳಿದ ಮಾತುಗಳು ಒಂದು ರೀತಿಯಿಂದ ವಿನೋದಕರಗಳಾಗಿಯೂ, ಮತ್ತೊಂದು ರೀತಿಯಿಂದ ಕೃಷ್ಣನ ಸೋಲನ್ನು ಹೀಯಾಳಿಸತಕ್ಕವುಗಳಾಗಿಯೂ ಇವೆ.—

"ದಾನವಂಗಿದಿರಾಗಿ ಪೋಗಿ ರಣದೊಳ್ಮಾಣ|
ದಾನವಂ ಪಡೆದು ಮರಳಿದ ನಿನ್ನಸತ್ವದ ನಿ|
ದಾನವಂ ತಿಳಿದಹಿತರೇಗೆಯ್ಯರಕಟ ನಿಜಶೌರ್ಯದಿಂ ಪ್ರದ್ಯುಮ್ನನ ||
ಮಾನವಂ ಭಂಗಿಸಿದೆ ನಿನ್ನಂ ಜಗದೊಳಾವ|
ಮಾನವಂ ಬಣ್ಣಿಸುವನಿನ್ನು ನಿನ್ನವಟಿಗೆ ಸ|
ಮಾನರಂ ಕಾಣೆನೆಂದಳ್ ಸತ್ಯಭಾಮೆ ನಗುತುರೆ ಜರೆದು ನಿಜಪತಿಯನು ||

ಈ ಮಾತನ್ನು ಕೇಳಿ, "ಕಂದೆರೆದು ವಲ್ಲಭೆಯ ನುಡಿಗೆ ಲಜ್ಜಿಸಿ"

ಕೃಷ್ಣನು ಮರಳಿ ಯುದ್ಧಕ್ಕೆ ಹೊರಟನು. ಅವನನ್ನು ಎದುರುಗೊಂಡ ಅನು ಸಾಲ್ವನು ಈರೀತಿಯಾಗಿ ಪರಮಾತ್ಮನನ್ನು ಸಂಬೋಧಿಸಿದನು.

ಹೆಂಗಸುಂ ಕೊಂದದಟತನದಿಂದೆ ಬಂಡಿಯಂ।
ಭಂಗಿಸಿದ ಬಲ್ಪಿಂದಲೆತ್ತು ಕತ್ತೆಯನಿರಿದ।
ತುಂಗ ವಿಕ್ರಮದಿಂದೆ ಹಕ್ಕಿ ಹಾವಂ ಸದೆದ ಸಾಹಸದೆ ಬೆರತಿರ್ದೊಡೆ।
ಸಂಗರದೊಳಾಳಹನೆ."

ಕೃಷ್ಣನನ್ನು ಯಾರು ಬಯ್ಯಬೇಕಾದರೂ ಹೇಗೋ ಬಯ್ಯುತ್ತಾರೆ. ಆದರೆ ಈ ಕವಿಯ ಪದ ಬಂಧವನ್ನು ನೋಡಿ. "ಬಂಡಿಯ ಭಂಗಿಸಿದ ಬಲ್ಪಿಂದೆ; ಯೆತ್ತು ಕತ್ತೆಯನಿರಿದ ತುಂಗ ವಿಕ್ರಮದಿಂದೆ. ಹಕ್ಕಿ ಹಾವಂ ಸದೆದ ಸಾಹಸ..........." ಈ ಪದ್ಯಗಳು ಓದುಗರನ್ನು ಕಚಕುಳಿ ಆಡಿಸುತ್ತವೆ. ಕೃಷ್ಣನನ್ನು ಎಷ್ಟು ವಿನೋದ ಮಾಡಬೇಕೋ ಅಷ್ಟೂ ಈ ಪದಗಳಲ್ಲಿ ಅಡಕವಾಗಿದೆ.

* * *

ಲಕ್ಷ್ಮೀಶನು ವಿವರಿಸಿರುವ ಶೃಂಗಾರದೊಡಗೂಡಿದ ನಯವಾದ ಹಾಸ್ಯದ ಮತ್ತೊಂದು ಉದಾಹರಣೆ ನೋಡಿ. ಕೃಷ್ಣನು ಹಸ್ತಿನಾಪುರದ ದಾರಿಯಲ್ಲಿ ರುಕ್ಮಿಣೀ ದೇವಿಯೊಡಗೂಡಿ ಒಂದು ಸರಸ್ಸನ್ನು ಕಾಣುವನು. ಕೂಡಲೇ ಸರಸದಿಂದ ಸತಿಯನ್ನು ಕುರಿತು ಈರೀತಿ ಹೇಳುವನು.

ರಾಜಮುಖಿ ನೋಡೀ ಸರೋವರದ ಪದ್ಮಿನಿಗೆ।
ರಾಜಹಂಸ ಕ್ರೀಡೆ ಪುನ್ನಾಗಕೇಳಿ ವಿಭ್ರಾಜಿತ।
ಮಧುಪಗೋಷ್ಠಿ ಸಂದಪುದು ರವಿಗೆ ತಾನರಿಸಿಯಾದಪಳೆಂತೋ।
ಸ್ತ್ರೀ ಜನಕೆ ಸಹಜಮಿದು ಮೇಲೆ ಕರ್ದಮಜಾತೆ।
ಮಾಜುವಳಿದೆಯೊಳಿರ್ದ ಕೃಷ್ಣತೆಯನಿದು ಜಗಕೆ॥
ಸೋಜಿಗವೆ ಚಂಚಲೆಯಲಾಪತಿಯ ನೆಣಿಸುವಳೆ? ಪೇಳು॥

ಎಲೆ ಚಂದ್ರಮುಖಿಯಾದ ರುಕ್ಮಿಣಿಯೇ, ಪದ್ಮಿನೀ ಜಾತಿ ಸ್ತ್ರೀಗೆ ಸಮಾನಳಾದ ಈ ತಾವರೆಗೆ ರಾಜಶ್ರೇಷ್ಠರೊಡನೆ (ರಾಜ ಹಂಸ ಕ್ರೀಡೆ. ಪುರುಷ ಶ್ರೇಷ್ಠರೊಡನೇ ಪುನ್ನಾಗ ಆಟ.) ಮದ್ಯಪಾಯಿಗಳೊಡನೆ (ದುಂಬಿ) ಸಹವಾಸವಿರುತ್ತ ಇವಳು ಹೇಗೆ ತಾನೆ ಸೂರ್ಯನ ಪತ್ನಿಯಾದಾಳು? ಅಲ್ಲದೆ

ಈಕೆ ಕೆಸರಿನಲ್ಲಿ ಹುಟ್ಟಿದವಳು ಇಂಥವಳು ತನ್ನ ಹೃದಯದ ದೋಷವನ್ನು ಮರೆಮಾಡುವುದಿದೆಯೆ? ಚಂಚಲೆಯಾದ ಈಕೆಯು ಪತಿಯನ್ನು ಲಕ್ಷ್ಯಮಾಡದಿರುವುದು ಏನಾಶ್ಚರ್ಯ?

ಸ್ತ್ರೀ ಜಾತಿಯ ಮೇಲೆ ಕೃಷ್ಣನು ಹೊರಿಸಿದ ಅಪವಾದವನ್ನು ಕೇಳಿ ರುಕ್ಮಿಣಿಯು

ದೇವ ನೀ ಪದ್ಮಿನಿಗೆ ಪಳಿವನಾರೋಪಿಸುವು ।
ದಾವ ಸಮ್ಮತಿ ರಾಜಹಂಸ ಪುನ್ನಾಗ ಮಧು ।
ಪಾವಳಿಯನೋವಲಾಗದೆ, ಮಾತೆ ಮಕ್ಕಳೊಡಗೂಡಿರ್ದೊಡೇಂ ಧರೆಯೊಳು ॥
ಜೀವನಂ ನಿಂದೊಡಾದುದು ಪಂಕಮಿಲ್ಲಿ ತಾ ।
ನಾವಿರ್ಭವಿಸಿದೊಡೇಂ ಕೃಷ್ಣಹೃದಯಕೆ ದೋಷ ।
ಮಾವುದಾಣ್ಮಂಗೆ ನಡುನಡುಗಿದೊಡೆ ಚಂಚಲೆಯೆ ನಾವರಿಯೆವಿವನು ॥

ರುಕ್ಮಿಣಿಯ ಮಾತನ್ನು ಕೇಳಿ ಕೃಷ್ಣನು ಮೆಚ್ಚಿ ನಸುನಗುತ ಪ್ರಯಾಣವನ್ನು ಮುಂದೆ ಸಾಗಿಸಿದನು. ಈ ವಿನೋದದ ಮೂಲಕ ಲಕ್ಷ್ಮೀಶನು ಕೃಷ್ಣ ರುಕ್ಮಿಣಿಯರ ಒಂದು ಸರಸಭಾವವನ್ನೂ ಅವರ ಸಂಸಾರ ಜೀವನದ ಒಂದು ಸುಖ ದೃಶ್ಯವನ್ನೂ ತೋರಿಸಿದ್ದಾನೆ.

ಲಕ್ಷ್ಮೀಶನು ಇನ್ನೂ ಅನೇಕ ಕಡೆ ಹಾಸ್ಯವನ್ನೂ ಸ್ವಲ್ಪಸ್ವಲ್ಪ ಪ್ರಯೋಗಿಸಿದ್ದಾನೆ. ಯೌವನಾಶ್ವನ ಕುದುರೆಯನ್ನು ಹೈಡಿಂಬಿ ಎತ್ತಿಕೊಂಡು ಅಂತರಿಕ್ಷಕ್ಕೆ ಹಾರಿದಾಗ ಯೌವನಾಶ್ವನ ಭಟರು ಅವನನ್ನು ಅಟ್ಟಿಸಿಕೊಂಡು ಹೊರಟರು. ಹೈಡಿಂಬಿ ಇದ್ದುದು ಅಂತರಿಕ್ಷದಲ್ಲಿ, ಭಟರು ಅವನನ್ನು ಅಟ್ಟುತ್ತಿದ್ದುದು ನೆಲದಲ್ಲಿ. ಅಂತರಿಕ್ಷದಲ್ಲಿ ಓಡುತ್ತಿರುವವನನ್ನು ನೆಲದಲ್ಲಿ ಓಡುವವನು ಅಟ್ಟಿ ಹಿಡಿಯುವುದಕ್ಕೆ ಆಗುತ್ತದಯೆ? ಆಗುವುದಿಲ್ಲವೆಂದು ಹೇಳುವುದಕ್ಕೆ ಪ್ರತಿಯಾಗಿ "ಜೀವನಮಂ ತೆಗೆದುಕೊಂಡೊಯ್ವ ಕಾಲನಂ ಪೆಣಸಟ್ಟುವಂತಾಯ್ತಲಾ ನಿಮ್ಮ ಸಾಹಸ ಜಾಗು ಜಾಗು" ಎಂದು ಹೈಡಿಂಬಿಯು ಹಾಸ್ಯಮಾಡಿದನು. ಈ ಹೋಲಿಕೆಯು ಬಹಳ ಚನ್ನಾಗಿದೆಯೆಂದು ಯಾರಾದರೂ ಒಪ್ಪಲೇಬೇಕು.

ಮೇಘನಾದನು ಯೌವನಾಶ್ವನ ಭಟರನ್ನು ಕುರಿತು "ನಿಮ್ಮ ರಾಯನ ಪೊರೆಯ ಪರಿವಾರದೊಳ್ನೀವೆ! ದಿಮ್ಮಿದಿರೋ ಮತ್ತೆ ಕೆಲರೊಳರೊ।" ಎಂದು

ಹೇಳುವುದು; ವೃಷಕೇತುವು ಯುದ್ಧಕ್ಕೆ ಎದುರಾದಾಗ ಯೌವನಾಶ್ವನು "ನಮ್ಮಲ್ಲಿ ಸೆಣಸಿದೆ. ನೋಡಿದೊಡೆ ನೀ ಬಾಲಕಂ ನಿನ್ನೊಳೊಲ್ಲೆನಾಹವಕೆ" ಎನಲು ವೃಷಕೇತುವು

ಆರಾದೊಡೇನಶ್ವಮಂ ಬಿಡುವನಲ್ಲ ಮದ।
ವಾರಣಂ ಪಿರಿದಾದೊಡೆಳಸಿಂಗನಂಜಿ ಕೆಲ।
ಸಾರುವುದೆ ನಿನ್ನ ತನುವಿನ ತೋರದಾಯತಕೆ ಕಲಿಗಳೆದೆ ಕಾತರಿಪುದೆ॥
ವೀರನಾದೊಡೆ ಕೈದುಮುಟ್ಟಿಗಳ ಘೋರ ಪ್ರ।
ಹಾರಮಂ ತೋರಿಸೀ ಸ್ಥೂಲಸೂಕ್ಷ್ಮಂಗಳ ವಿಚಾರವೇಕೆ........॥

ಎಂದು ಹೇಳುವುದು--ಇವುಗಳೆಲ್ಲಾ ಲಕ್ಷ್ಮೀಶನ ತಿಳಿಯಾದ ಹಾಸ್ಯಭಾವವನ್ನು ನಮಗೆ ತೋರಿಸಿಕೊಡುತ್ತವೆ.

ಚಂಡಿಯ ಕಥೆಯ ನಿರೂಪಣೆಯಲ್ಲಿಯೂ ಕವಿಗುರುವು ಬಹಳ ಚಮತ್ಕಾರವನ್ನು ತೋರಿಸಿದ್ದಾನೆ. ಆ ಭಾಗದಿಂದ ಒಂದೆರಡು ಪದ್ಯಗಳನ್ನು ಉದಹರಿಸಿ ಈ ಚಿಕ್ಕಲೇಖನವನ್ನು ಮುಗಿಸುತ್ತೇನೆ.

"................ಮುನ್ನ ವಿಪ್ರನುಂಟೋರ್ವನು।
ದ್ದಾಲಕಾಖ್ಯಂ ತಿಳಿದನಖಿಳಶಾಸ್ತ್ರಂಗಳಂ।
ಮೇಲೆ ವೈವಾಹದೊಳ್ ವಧುವಾದಳಾತಂಗೆ ಚಂಡಿಯೆಂಬಾಕೆ ಬಳಿಕ॥
ಕಾಲಕಾಲದ ಜಪಾನುಷ್ಠಾನಪೂಜೆಗಳಿ।
ಗಾಲಸ್ಯಮಂ ಮಾಡದೆನ್ನ ಪರಿಚರ್ಯೆಗನು।
ಕೂಲೆಯಾಗಿರ್ದು ಮನೆವಾಳ್ತೆಯಂ ಸಾಗಿಪುದು ನೀನೆಂದೊಡಿಂತೆಂದಳು" ॥

"ಎಳ್ಳನಿತು ನಿನ್ನ ಮಾತಂ ಕೇಳ್ವಳೆಂದೆಣಿಕೆ।
ಗೊಳ್ಳದಿರ್ ಪರಿಚರ್ಯೆ ಮನೆವಾಳ್ತೆಯೆಂದೆಂಬ।
ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿಪ್ಪೋರೆ॥
ಮುಳ್ಳಿಡಿದ ಮರವೇರಿದಂತಾದುದಿಹಪರಕಿ।
ದೊಳ್ಳಿತಾದಪುದೆ ಬಂದುದು ತಪೋಹಾನಿಯೆಂ।
ದಳ್ಳಿಯೊಳ್ ಕೋಲ್ಗೊಂಡ ತೆರದೊಳುದ್ದಾಲಕಂ ಚಿಂತಿಪಂ ಪ್ರತಿದಿನದೊಳು"॥

* * *

ಉದ್ದಾಲಕಂ ಬಳಿಕ ತನ್ನ ಮಂದಿರದೊಳಿರು ।
ತಿದ್ದ ಸಮಯಕೆ ಪಿತೃಶ್ರಾದ್ಧದಿವಸಂ ಬಂದೊ ।
ಡೆಪ್ದು ಚಂಡಿಯೊಳಿಲಗೆ ನಾಳೆ ಪೈತೃಕಮುದಂ ನಾಡಿಪಲ್ಲವೆ ಮಾಡೆಸು ॥
ಕಪ್ದು ತಹೆನಘಮುಧಾನ್ಯ ವ್ರೀಹಿ ಶಾಕಮುಂ ।
ಪೊಪ್ದಲೀಯೆಂ ಶುದ್ಧವಸ್ತುಗಳ ನೊಂದುಮಂ ।
ತದ್ದಿನಕೆ ಮರುದಿವಸನೊಳ್ ಪೇಳ್ದು ಬಹೆನಪಾತ್ರಂಗೆಂದೊಡಿಂತೆಂದಳು ॥

ನಾಳೆ ಮಾಡಿಸುವೆನಾಂ ಪೈತೃಕವನುತ್ತಮದ ।
ಶಾಲಿಧಾನ್ಯ ವ್ರೀಹಿ ಶಾಕಮಂ ಕೊಂಡು ಬಹೆ ।
ನಾಲಯುವನತಿಶುದ್ಧವಾದ ವಸ್ತುಗಳಿನಲ್ಲವೆ ಕೂಡೆನಳ್ತಿಯಿಂದೆ ॥
ಪೇಳಿಸುವೆನಂದಿನ ದಿನದ ಮೊದಲ ರಾತ್ರಿಯೆ ವಿ ।
ಶಾಲಗುಣಸಂಪನ್ನ ವೇದಪಾರಂಗತ ಸು ।
ಶೀಲರಹ ಸತ್ಪಾತ್ರದವನಿಯಮರರ್ಗೆನಲ್ ಚಂಡಿಗವನಿಂತೆಂದನು ॥

ಆದೊಡೆ ಕುತುಪಕಾಲಮಂ ಬಿಡುವೆನರ್ಚನೆಯೊ ।
ಳಾದರಿಸೆನಾಂ ಬಂದ ವಿಪ್ರರಂ ಪಾಕದ ನ ।
ವ್ಯೋದನ ಸುಪಾಯಸ ಗುಡಾಜ್ಯ ಮಧು ತೈಲ ಮೃದುಭಕ್ಷ್ಯ ಭೋಜ್ಯಾದಿಗಳನು
ಸ್ವಾದುಫಲ ಶರ್ಕರ ವಿನುತ ಶಾಕ ನಿರ್ಮಲ ಪ ।
ಯೋದಧಿಗಳಂ ಸಕುತ್ಸಿತವಾಗಪಂತೆ ಸಂ ।
ಪಾದಿಸಿ ಪಿತೃಶ್ರಾದ್ಧಮಂ ಮಾಡಿ ವಸ್ತ್ರದಕ್ಷಿಣೆಗಳಂ ಕೊಡೆನೆಂದನು

ಎಂದೊಡೆ ಕುತುಪಕಾಲಮಂ ಮೀರಲೀಯೆನಾಂ ।
ಬಂದ ವಿಪ್ರರನಾದರಿಸಿ ಪೂಜೆಗೈಸದಿರೆ ।
ನಿಂದೊಲ್ಲೆನೆಂದೊಕ್ಕಣೆಸಿದಿಸಿತಸೆಲ್ಲಮಂ ಸಂಪಾದಿಸದೆ ಮಾಣೆನು ॥
ತಂದಮುಲವಸ್ತ್ರ ತಾಂಬೂಲ ವರದಕ್ಷಿಣೆಗ ।
ಳಿಂದೆ ಸತ್ಕರಿಸಿ ಕಳುಹಿಸದೆ ಬಿಡೆನೆನುತೆ ನಲ ।
ವಿಂದೊದವಿಸಿದಳಖಿಲಸದ್ದ್ರವ್ಯಮಂ ಬಳಿಕ ಚಂಡಿ ಪಾಕಂಗೈದಳು ॥

ಈ ಕಥೆ ಹೀಗೆ ಮನೋಹರವಾದ ಶೈಲಿಯಲ್ಲಿ ಸಾಗುವುದು. ಜೈಮಿನಿ ಭಾರತ ನವರಸಭರಿತವಾಗಿದೆ. ಅದರಲ್ಲಿ ಅವಶ್ಯಕವಾದಷ್ಟು ತಿಳಿಹಾಸ್ಯ ಚೆಲ್ಲಾಡಿದೆ.

ರಾಷ್ಟ್ರೀಯ ಸಾಹಿತ್ಯ ಮತ್ತು ಕಲೆ

ಒಂದು ರಾಷ್ಟ್ರದ ಜೀವನಕ್ಕೂ ಆ ರಾಷ್ಟ್ರದ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ತಿಳಿಯುವುದು ಇತಿಹಾಸಕಾರನಿಗೆ ಬಹಳ ಮನೋರಂಜಕವೂ ಜ್ಞಾನದಾಯಕವೂ ಆವಶ್ಯಕವೂ ಆದುದು. ಇದೇ ರೀತಿ–ಆದರೆ ಸ್ವಲ್ಪ ಕಡಿಮೆಯಾಗಿ–ಆ ರಾಷ್ಟ್ರದ ಕಲೆಗಳಿಗೂ ಜನ–ಜೀವನಕ್ಕೂ ನಿಕಟವಾದ ಸಂಬಂಧವಿದೆ. ಕೆಲವು ರಾಷ್ಟ್ರಗಳಿಗೆ ಸಾಹಿತ್ಯ ಮತ್ತು ಕಲಾಭಿರುಚಿ ಸ್ವಾಭಾವಿಕವಾಗಿರುತ್ತದೆ. ಆ ದೇಶಗಳು ರಾಷ್ಟ್ರೀಯ ಅಭಿವೃದ್ಧಿಯ ಮಾರ್ಗದಲ್ಲಿ ಹೊರಟ ಕೂಡಲೇ ಅವುಗಳ ಸ್ವಪ್ರಕಾಶ, ಕಾವ್ಯ ಮತ್ತು ಕಲೆಗಳ ಮೂಲಕ ಆಗಬೇಕಾದುದು ಅನಿವಾರ್ಯವಾಗುವುದು. ಆದರೆ ಒಂದೊಂದು ವೇಳೆ, ಅಸಂಸ್ಕೃತ ಜನಾಂಗಗಳೂ ಕೂಡ ದಿವ್ಯ ಸ್ಫೂರ್ತಿಯನ್ನು ಹೊಂದಿ ಇತಿಹಾಸಪ್ರಸಿದ್ಧವಾದ ಚಿಹ್ನೆಗಳನ್ನು ಬಿಟ್ಟು ಹೋಗುವುದುಂಟು. ಭಾವನಾಪ್ರಧಾನರಲ್ಲದ ಸ್ಪಾರ್ಟನ್ನರೂ ಒರಟರಾದ ನಾರ್ಮನ್ ಜನರೂ, ತಮ್ಮ ಸರಳವಾದ ಶಿಲ್ಪಕಲೆಯ ವೈಶಿಷ್ಟ್ಯವನ್ನು ಅಳಿಯದಂತೆ ಬಿಟ್ಟು ಹೋಗಿದ್ದಾರೆ. ಆ ಕಟ್ಟಡಗಳಲ್ಲಿ ಕಾಣುವ ಸರಳ ಗಾಂಭೀರ್ಯ, ಅವುಗಳಿಗಿಂತ ಹೆಚ್ಚು ಸುಂದರವಾದ ಇತರ ಕಟ್ಟಡಗಳಿಗೇ ಇರುವುದಿಲ್ಲ. ಅನಾಗರೀಕ ದೇಶಗಳಲ್ಲೂ ಉನ್ನತ ಧ್ಯೇಯದ ಸ್ಫೂರ್ತಿ ಬಂದಾಗ ಕಾವ್ಯಸೃಷ್ಟಿಯಾಗಿದೆ. ಕೆಲವರು ಕಲ್ಲಿನ ಯುಗವೆಂದು ಕರೆಯುವ ಕಾಲದಲ್ಲಿಯೇ ಪ್ರಪಂಚದ ಅತ್ಯುತ್ಕೃಷ್ಟ ಕಾವ್ಯಗಳು ಜನಿಸಿದವು.

ಕಲೆ, ಗಾನ, ಗೀತೆಗಳು ಬಾಹ್ಯನಿಯಮಗಳಿಂದ ಬಂಧಿತವಾಗದೆ ಒಳಗಿನ ಸ್ಫೂರ್ತಿಯಿಂದ ಹೊರಡುವಾಗ ಅವು ಮಾನವ ಪ್ರಪಂಚಕ್ಕೇ ಆನಂದದ ನೆಲೆಯಾಗುತ್ತವೆ. ರಾಷ್ಟ್ರದಲ್ಲಿ ಪ್ರಗತಿಯ ದಿನದ ಉದಯವಾದಾಗ–ಜನಾಂಗದ ಆಕಾಂಕ್ಷೆಗಳು ಪೂರೈಸುವ ದಿನ ಬಂದಾಗ–ಇವುಗಳು ತಲೆ ಎತ್ತುತ್ತವೆ. ಹೊಸಭಾವನೆಗಳ ಉತ್ಸಾಹ, ಹೊಸ ಜೀವನದ ಹುರುಪು, ಪ್ರಗತಿಯಲ್ಲಿ ಗೆಲುವಾಗಿ ಮಾರ್ಗ ಕ್ರಮಣಮಾಡುವ ಹೆಮ್ಮೆ, ಇವು ಪ್ರಕಾಶವಾಗಿ ಸುಂದರವಾಗಿ ಹೊರಹೊಮ್ಮಿ ರಾಷ್ಟ್ರದ ಸೃಷ್ಟಿ ಶಕ್ತಿಯು ಚುರು

ಕಾಗುತ್ತದೆ. ಕಾವ್ಯವೂ ಕಲೆಯೂ ಬಹಳ ಕಾಲದ ಹಳೆಯ ನಿದ್ರೆಯಿಂದ ಎಚ್ಚೆತ್ತು, ಸುಪ್ತವಾಗಿರುವ ರಾಷ್ಟ್ರದ ಆತ್ಮದ ಚೈತನ್ಯವನ್ನು ಕೊರಕ್ಕೆ ತೋರಿಸುತ್ತವೆ. ಯಾವುದಾದರೂ ಒಂದು ಚಳುವಳಿಯು ರಾಷ್ಟ್ರದ ಕಲೆ, ಸಾಹಿತ್ಯ, ಕಾವ್ಯ ಮತ್ತು ಗಾನದ ಮೇಲೆ ಉಂಟುಮಾಡಿರುವ ಸೂಕ್ಷ್ಮವಾದ ಪರಿಣಾಮವೇ ಆ ಚಳುವಳಿಯ ಯೋಗ್ಯತೆಯನ್ನು ಅಳೆಯುವ ಒರೆಗಲ್ಲು. ಕಾವ್ಯಕ್ಕೂ ಕಲೆಗೂ ಹೊಸ ಚೈತನ್ಯವುಂಟಾಗದಿದ್ದರೆ ಚಳವಳಿಯು ಪ್ರಜೆಗಳ ಹೃದಯವನ್ನು ಮುಟ್ಟಿಲ್ಲವೆಂದು ಅರ್ಥ. ಬಾಹ್ಯತಃ ಮಾತ್ರ ಅದಕ್ಕೆ ಒಳ್ಳೆಯ ಆಡಂಬರವಿರಬಹುದು. ಆದರೆ ಆ ಚಳವಳಿ ಜನಕ್ಕೆ ಚೈತನ್ಯಸ್ವಾತಂತ್ರ್ಯದಾಯಿಯಾಗುವುದಿಲ್ಲ. ಆ ಚಳವಳಿಯು ದೇಶಕ್ಕೆ ಹಿಂದೆಂದೂ ಕಾಣದ ಅಭಿವೃದ್ಧಿಯನ್ನು ಉಂಟುಮಾಡುವಂತೆ ತೋರಬಹುದು. ಕೈಗಾರಿಕೆ ಮತ್ತು ವ್ಯಾಪಾರಗಳಿಂದ ದೇಶದ ಐಶ್ವರ್ಯವೂ ಏರಬಹುದು. ಆದರೆ ಅದೇ ಕಾಲದಲ್ಲಿ ಪ್ರಜೆಗಳ ಆತ್ಮವು ಹರಿದು ಚೂರು ಚೂರಾಗುತ್ತಿರಬಹುದು. ಪ್ರತಿಯೊಂದು ರಾಷ್ಟ್ರದ ಅಂತಃಸತ್ವವನ್ನು ಅದರ ಆತ್ಮದ ಪ್ರಗತಿಯ ಮೇಲಿನಿಂದ ಮಾತ್ರ ತಿಳಿಯಬಹುದು—ಅದರ ಪ್ರಾಪಂಚಿಕ ವೈಭವದಿಂದ ಅಲ್ಲ— ಏಕೆಂದರೆ ಸಾಹಿತ್ಯವೂ ಕಲೆಗಳೂ—ಮಹತ್ವವೂ ಗಂಭೀರವೂ ಆದಾಗ–ತಮ್ಮ ದೇಶದ ಆತ್ಮಕ್ಕೆ ಮಾತ್ರ ಸೇರಿದುವು.

ಇಂಗ್ಲೆಂಡ್ ದೇಶದಲ್ಲಿ ಮತಸಂಬಂಧವಾದ ಪುನರುಜ್ಜೀವನ ನಡೆದು ಸ್ಪೇನಿನೊಂದಿಗೆ ಯುದ್ಧವು ಅತ್ಯುಗ್ರ ಸ್ಥಿತಿಯಲ್ಲಿದ್ದಾಗ ಉಂಟಾದ ಧಾರ್ಮಿಕ ಸ್ಫೂರ್ತಿಯ ವಾತಾವರಣದಲ್ಲಿ, ಪ್ರತಿಯೊಬ್ಬ ಆಂಗ್ಲೇಯನ ಹೃದಯವೂ ಧೈರ್ಯ ಮತ್ತು ಆಶೆಯಿಂದ ತುಡಿಯುತ್ತಿದ್ದಿತು; ಶ್ರೇಷ್ಠವಾದ ಕಾವ್ಯಗಳು ಉತ್ಪತ್ತಿಯಾದವು. ಒಬ್ಬ ಇಂಗ್ಲಿಷ್ ಬರಹಗಾರನು ಆ ಕಾಲದ ಇಂಗ್ಲೆಂಡನ್ನು 'ಹಾಡುವ ಹಕ್ಕಿಗಳ ಗೂಡು' ಎನ್ನುತ್ತಾನೆ. ಸ್ಪೆನ್‌ಸರ್ ಮತ್ತು ಷೇಕ್ಸ್‌ಪಿಯರ್‌ಗಳು ಮಾತ್ರವೇ ಅಲ್ಲ; ಸೆಂಟ್ಸ್‌ಬರಿಯು ತೋರಿಸಿರುವಂತೆ ಅಸಂಖ್ಯಾತರಾದ, ಈಗ ಮರೆತುಹೋಗಿರುವ, ಸಣ್ಣ ಸಣ್ಣ ಕವಿಗಳು ಕಾವ್ಯಸೃಷ್ಟಿಯ ಆನಂದದಾಯಕವಾದ ಸ್ಪರ್ಧೆಯ ವಾತಾವರಣವನ್ನು ಕಲ್ಪಿಸಿ ದೊಡ್ಡ ದೊಡ್ಡ ಕವಿಗಳಿಗೆ ದಾರಿಮಾಡಿಕೊಟ್ಟರು. ಈ ಕಾವ್ಯ ಪುನರುಜ್ಜೀವನ ವಾತಾವರಣವು ಮಹನೀಯನಾದ ಮಿಲ್ಟನ್ ಕವಿಯ ಕಾಲಕ್ಕೆ ಕೊನೆಯಾಯಿತು. ಮಿಲ್ಟನ್‌ನ ದೇಶಪ್ರೇಮ ಅಸಾಧಾರಣವಾಗಿತ್ತು. ದೇಶದ ಕರೆಯು ಬಂದಾಗ ಕವಿಯು

ತನ್ನ ಸರ್ವಸ್ವವನ್ನೂ, ಅತ್ಯಧಿಕವಾದ ತನ್ನ ಬುದ್ಧಿಶಕ್ತಿಯನ್ನೂ, ಇಂಗ್ಲೆಂಡಿನ ಶುಭಕ್ಕೆ ಅರ್ಪಿಸಿದನು. ಕೊನೆಯಲ್ಲಿ ದೇಶಸೇವೆಯ ದೇವರ ಪೀಠದ ಮುಂದೆ ತನ್ನ ಕಣ್ಣನ್ನೇ ಕಾಣಿಕೆಯಾಗಿ ಅರ್ಪಿಸಿದನು. ಕವಿಯ ಜೀವನವೇ ಅವನ ಅತ್ಯುತ್ಕೃಷ್ಟವಾದ ಕಾವ್ಯವೆಂಬುದನ್ನು ಮಿಲ್ಟನ್ ಆಚರಿಸಿ ತೋರಿಸಿದನು.

ಮುಂದೆ ಇಂಗ್ಲಿಷ್ ಕವಿಗಳು ಫ್ರೆಂಚರ ಮೇಲುಪಂಗ್ತಿಯನ್ನು ಅನುಸರಿಸಲು ಪ್ರಾರಂಭಿಸಿದರು. ಕೂಡಲೆ ಕಾವ್ಯದ ಧ್ಯೇಯವು ಕಡಿಮೆಯಾಯಿತು. ಕಾವ್ಯವು ತನ್ನ ಸ್ವಾಭಾವಿಕವಾದ ಉಚ್ಚತೆಯಿಂದ ಕೆಳಗಿಳಿದು, ಆತ್ಮರಹಿತವಾದ, ಪದ್ಧತಿಗನುಸಾರವಾದ, ಪದಜೋಡಣೆಯಾಯಿತು. ಆ ಕಾವ್ಯ, ಪ್ರಕೃತಿ ಸೌಂದರ್ಯದ ಬೀಡು ಆದ ಸ್ವತಂತ್ರವಾದ ಇಂಗ್ಲೆಂಡನ್ನು ಬಿಟ್ಟು ಶೇಕ್ಸ್‌ಪಿಯರ್ ಕವಿಯು ಅಷ್ಟು ಪ್ರೀತಿಸುತ್ತಿದ್ದ ಬಲಿಸ್ಮರಾದ ರೈತರ ಇಂಗ್ಲೆಂಡನ್ನು ಮರೆತು–ಲಂಡನ್ನಿನ ಕ್ಲಬ್ ಮತ್ತು ಹೋಟೆಲುಗಳ ಜೀವನವನ್ನು ಚಿತ್ರಿಸಲಾರಂಭಿಸಿತು. ಆ ಕಾಲದ ಕಾವ್ಯಗಳಲ್ಲಿ ಬಣ್ಣ ಮತ್ತು ಹೊಳಪು ಇದ್ದರೂ ಜೀವ ಮತ್ತು ಆತ್ಮ ಮರೆಯಾಗಿವೆ. ಆ ಕವಿತೆಗಳಲ್ಲಿ ಸ್ಫೂರ್ತಿಯ ಉನ್ನತವಾದ ಧ್ವನಿ ಇಲ್ಲ. ಕಾವ್ಯಗಳ ಹೆಸರೇ ಅವುಗಳ ಯೋಗ್ಯತೆಯಲ್ಲಿ ಉಂಟಾಗಿರುವ ದೊಡ್ಡ ವ್ಯತ್ಯಾಸವನ್ನು ತೋರಿಸುತ್ತದೆ. ಸ್ಪೆನ್‌ಸರ್ ಅವರ 'ಫೇರಿ ಕ್ವೀನ್' ಬದಲು ಡ್ರೈಡನ್ ಕವಿಯ ವಿಡಂಬನಗಳೂ ಪೋಪನ ಉಪನ್ಯಾಸಗಳೂ ಕಾವ್ಯವಿಷಯಗಳಾದುವು.

ಅನಂತರ ಕ್ರಾಂತಿಯ ಯುಗವು ಬಂದಿತು. ರಾಷ್ಟ್ರವು ಸಂಕುಚಿತವಾದ ಕೃತಕವಾದ ಜೀವನದ ಬಾಹ್ಯ ಬಂಧನದಿಂದ ಬಿಡುಗಡೆ ಹೊಂದಿತು. ತುಳಿಸಿಕೊಂಡ ಬಡವರ ಗೋಳು ಪ್ರಪಂಚದ ನಾಲ್ಕು ಮೂಲೆಗಳಿಗೂ ಮುಟ್ಟಿತು. ಪಾಶ್ಚಾತ್ಯ ದೇಶಗಳಲ್ಲಿ ಸ್ವಾತಂತ್ರ್ಯದ ಚೈತನ್ಯದ ಹೊಸ ತೇಜಸ್ಸು ಹುಟ್ಟಿತು. ಶೇಕ್ಸ್‌ಪಿಯರ್ ಕವಿಯ ಮಹತ್ಕಾರ್ಯವನ್ನು ಮುಂದುವರಿಸಲು ಕವಿಗಳ ಗುಂಪು ಒಂದು ಎದ್ದಿತು. ಪಶ್ಚಿಮ ಯೂರೋಪಿನ ಸ್ವಾತಂತ್ರ್ಯದ ಕಲ್ಪನೆಯ ಆನಂದ, ಉತ್ಸಾಹ ಮಹಾತ್ವಾಕಾಂಕ್ಷೆ ಆಶೆ ಹೊಡೆದಾಟ ಇವುಗಳ ಧ್ವನಿಯು ಇಂಗ್ಲೆಂಡಿನ ಸಮುದ್ರ ತೀರವನ್ನು ಮುಟ್ಟಿದಾಗ, ಇಂಗ್ಲೆಂಡಿನ ಮೇಲೆ ಉಂಟಾದ ಪ್ರತಿಕ್ರಿಯೆ ಏನೆಂಬುದನ್ನು ಬರ್ನ್ಸ್, ಸ್ಕಾಟ್, ಶೆಲ್ಲಿ, ಬೈರನ್ಸ್ ಕೀಟ್ಸ್, ವರ್ಡ್ಸ್‌ವರ್ತ್ ಮತ್ತು ಕೊಲೆರಿಜ್‌ಗಳು ತಮ್ಮ ಕಾವ್ಯಗಳಲ್ಲಿ ಪ್ರತಿಬಿಂಬಿಸಿದ್ದಾರೆ.

ಜರ್ಮನಿಯಲ್ಲಿ ಇಂಗ್ಲೆಂಡಿಗಿಂತಲೂ ಮಹತ್ತರವಾದ ಸಾಹಿತ್ಯ ಬದಲಾವಣೆ-ಕ್ರಾಂತಿ-ನಡೆಯಿತು. ರಾಷ್ಟ್ರದ ಐಕ್ಯತೆಗೆ ಮೊದಲ ಪ್ರಯತ್ನಮಾಡಿದವರು ಜರ್ಮನಿಯ ತತ್ವಜ್ಞಾನಿಗಳು ಕವಿಗಳು ಮತ್ತು ವಿದ್ವಾಂಸರು. ಅವರ ಸ್ಫೂರ್ತಿಯೇ ಚಿಕ್ಕ ಚಿಕ್ಕ ೩೦೪ ಪಾಳೆಗಾರರ ಕೈಕೆಳಗೆ ಇದ್ದ ಜರ್ಮನಿಗೆ ಒಗ್ಗಟ್ಟಿನ ಮೊದಲ ಪಾಠವನ್ನು ಕಲಿಸಿತು. ಜರ್ಮನ್ ಜನಾಂಗದ ಪುನರುಜ್ಜೀವನದ ಗುರು ಫಿಚೆ Fichte. ಆದರೆ ಗಯಟೆ ಶಿಲ್ಲರ್ ಮತ್ತು ಕ್ಯಾಂಟ್ ಇವರು ತಮ್ಮ ಕರ್ತವ್ಯ ಭಾಗವನ್ನು ಚೆನ್ನಾಗಿ ಮಾಡಿದರು. ರಾಷ್ಟ್ರದ ಉನ್ನತಿ ಮತ್ತು ಐಕ್ಯಕ್ಕೆ ರಾಷ್ಟ್ರೀಯ ಶಿಕ್ಷಣವೇ ಮೂಲವೆಂದು ಅವರೆಲ್ಲಾ ಒತ್ತಿ ಒತ್ತಿ ಹೇಳಿದರು. ಗಯಟೆಯು "ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ, ತನ್ನ ಮನೋಭಾವಕ್ಕೆ, ಸಮಾಜದಲ್ಲಿ ತನ್ನ ಸ್ಥಾನಕ್ಕೆ ತಕ್ಕಂತೆ ಪ್ರಜೆಗಳ ವಿದ್ಯೆಯನ್ನು ಹೆಚ್ಚಿಸಿ ಜ್ಞಾನವು ಸಾರ್ವಜನಿಕವಾಗುವಂತೆ ಮಾಡಲಿ. ಹೀಗೆ ಮಾಡಿದರೆ ತನ್ನ ವೈಭವದ ಕಾಲವು ಬಂದಾಗ ಜರ್ಮನಿಯು ಮರೆಯದೆ ಇತರ ರಾಷ್ಟ್ರಗಳಂತೆ ಮುಂದುವರಿಯುವುದು" ಎಂದು ಸ್ಪಷ್ಟವಾಗಿ ಹೇಳಿದನು. ಆಗಿನ ಜರ್ಮನಿಯು, ಸರಳ ಜೀವನ ಮತ್ತು ಮಹತ್ತಾದ ಧ್ಯೇಯವುಳ್ಳವರಿಂದ ತುಂಬಿದ್ದಿತು. ಡಾಕ್ಟರ್ ರೊಡಾಲ್ಫ್ ಬ್ರೋಡಾ ಎಂಬುವರು ಆತ್ಮವನ್ನು ಮರೆಯದ ಅಂದಿನ ಜರ್ಮನಿಯನ್ನು ಇಂದಿನ ರಾಜಕೀಯ ಜ್ವರದ ಜರ್ಮನಿಗೆ (೧೯೧೯) ಹೋಲಿಸಿ ಹೀಗೆ ಹೇಳುತ್ತಾರೆ:

"ಇಂದು ಭೌತಿಕ ಶಕ್ತಿಯಲ್ಲಿ ಜರ್ಮನಿಯು ಮುಂದಾಗಿದ್ದರೂ, ವೇದಾಂತಿಗಳಿಂದಲೂ ಜ್ಞಾನಿಗಳಿಂದಲೂ ಕವಿಗಳಿಂದಲೂ ಕೂಡಿದ ಅಂದಿನ ಜರ್ಮನಿಗೆ ಪರರಾಷ್ಟ್ರಗಳಲ್ಲಿ ಇದ್ದ ಗೌರವ ಇಂದು ಇಲ್ಲ. ಒಂದು ಕಾಲದಲ್ಲಿ ಧರ್ಮ ಮತ್ತು ಆತ್ಮಜ್ಞಾನ ಪ್ರಧಾನವಾಗಿದ್ದ ಆದರ್ಶಪ್ರಾಯವಾದ ಜರ್ಮನ್ ಸಂಸ್ಕೃತಿಯು ಇಂದು ಪಶುಶಕ್ತಿಯ ವೈಭವದ ಕಡೆ ಹೋಗುತ್ತಿದೆ. ಯೂರೋಪಿಗೆ ಉಂಟಾಗಿರುವ ಈ ಭಯಂಕರವಾದ ಮುಂದಲ ಅಪಾಯದ ಚಿಹ್ನೆಯು, ಜರ್ಮನರಲ್ಲಿ ಆತ್ಮಜ್ಞಾನ ಮತ್ತು ಧರ್ಮಪ್ರವೃತ್ತಿಯಿಂದ ಮಾತ್ರ ನಿವಾರಣೆಯಾಗಲು ಸಾಧ್ಯ" ಮತ್ತು ಕಲೆಯೂ ಸಾಹಿತ್ಯವೂ ರಾಷ್ಟ್ರಜೀವನಕ್ಕೆ ಹೇಗೆ ಸಹಾಯಮಾಡಿ ಅದನ್ನು ಕಟ್ಟುತ್ತವೆ ಎಂಬುದಕ್ಕೆ ಮೇಲಿನ ವಾಕ್ಯಗಳು ಒಳ್ಳೆಯ ಉದಾಹರಣೆಗಳಾಗಿವೆ.

ಮ್ಯಾಜಿನಿಯು ಇಟಲಿಯ ಏಕೀಕರಣಕ್ಕಾಗಿ ಸಾಹಿತ್ಯದ ಮೂಲಕ ಮಾಡಿದ ದೇಶಸೇವೆಯು ಭಾರತೀಯರಿಗೆಲ್ಲಾ ತಿಳಿದೇ ಇವೆ. ಅಂದಿನ ಇಟಲಿಗೆ ಮ್ಯಾಜಿನಿಯ ಬರಹಗಳು ಎಂತಹ ಸ್ಫೂರ್ತಿಯನ್ನು ಉಂಟುಮಾಡಿದುವೋ, ಇಂದು ನಮಗೂ ಅವುಗಳಿಂದ ಅದೇ ಪುನರ್ಜಾಗ್ರತಿಯುಂಟಾಗುತ್ತಿದೆ. ತುರ್ಕಿ ದೇಶದ ರಕ್ತರಹಿತವಾದ ಕ್ರಾಂತಿಯ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಟರ್ಕಿಷ್ ಪ್ರೊಫೆಸರರೊಬ್ಬರು ತುರ್ಕಿಯ ಕ್ರಾಂತಿಗೆ ಸಾಹಿತ್ಯದಿಂದ ದೊಡ್ಡ ಉಪಕಾರವಾಯಿತೆಂದು ಹೇಳಿದ್ದಾರೆ. "ಇದರಲ್ಲಿ ನಾಮಿಕ್ ಕೆಮಾಲ್‌ಬೆ (Namik Kemal Bey)ಎಂಬುವನ ಕವನಗಳೂ ಕತೆಗಳೂ ಮುಖ್ಯವಾದುವು. ಕೆಮಾಲನ ಕತೆಗಳೆಲ್ಲವೂ ಊಟಮನ್ ಚಕ್ರಾಧಿಪತ್ಯದ ಪ್ರಾರಂಭದ ಇತಿಹಾಸದ ಮೇಲೆ ಅವಲಂಬಿಸಿವೆ. ಅವನು ತನ್ನ ಅಸದೃಶವಾದ ಮತ್ತು ಋಜುವಾದ ಶೈಲಿಯಲ್ಲಿ ಅಂದಿನ ಉಟೋಮನ್‌ರ ವೈಭವಗಳನ್ನು ಹೊಗಳಿದ್ದಾನೆ. ಅವನ ಭಾವಗಳು ಯುವಕರನ್ನು ಹುರಿದುಂಬಿಸುತ್ತವೆ. ರಾಜಕೀಯ ಹೋರಾಟಕ್ಕೆ ತುರ್ಕಿ ದೇಶದ ಯುವಕರನ್ನು ಸಿದ್ಧಗೊಳಿಸುವುದರಲ್ಲಿ ಈ ದೇಶಸೇವಕನಾದ ಕವಿಯಪ್ಟು ಮುಖ್ಯ ಪಾತ್ರವನ್ನು ಮತ್ತಾರೂ ವಹಿಸಲಿಲ್ಲ. ರಾಷ್ಟ್ರಪುನರುಜ್ಜೀವನ ಕಾಲದಲ್ಲಿ ಸಾಹಿತ್ಯಕ್ಕೆ ಇರುವ ಈ ಸ್ಥಾನವನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಸಾಹಿತ್ಯ, ಕಾವ್ಯ, ಮತ್ತು ಮಹಾಕಾವ್ಯಗಳನ್ನು ಬಿಟ್ಟು ನಾವು ಲಲಿತ ಕಲೆಗಳ ಕಡೆ ತಿರುಗಿದರೆ ರಾಷ್ಟ್ರಜೀವನಕ್ಕೂ ಕಲೆಗಳಿಗೂ ಇದೇ ಸಂಬಂಧವಿರುವುದು ಗೊತ್ತಾಗುವುದು. ಇಟಲಿ ದೇಶದ ರಾಜಕೀಯ ಮುಖಂಡರಿಗೂ ಕಲಾವಿದರಿಗೂ ಇದ್ದ ನಿಕಟವಾದ ಬಾಂಧವ್ಯದಿಂದ ಇದು ವ್ಯಕ್ತವಾಗುತ್ತದೆ. ಇಟಲಿಯ ಕಲೆಯ ಪುನರುಜ್ಜೀವನವು ಸೇಂಟ್ ಫ್ರಾನ್ಸಿಸ್ ಆಫ್ ಅಸಿಸಿ (St. Francis of Assisi) ಯ ಕಾಲದಲ್ಲಿ ಉಂಟಾದ ಧಾರ್ಮಿಕ ಮತ್ತು ಆತ್ಮಶಕ್ತಿಯ ಸ್ಫೂರ್ತಿಯಿಂದ ಪ್ರೇರಿತವಾಯಿತು.

"He who in his Catholic wholeness used to
call the very flowers
Sisters, brothers-and the beasts-whose pains
are hardly less than ours"

ಸಮಸ್ತ ಪ್ರಾಣಿಗಳಲ್ಲೂ ಬಾಂಧವ್ಯವುಳ್ಳ ಆತ್ಮದ ಶಕ್ತಿಯ ಪುನರುಜ್ಜೀವನವು ಇಟಲಿಯ ಎಲ್ಲಾ ಪ್ರಾಂತಗಳಲ್ಲೂ ಉಂಟಾಗಿ ಜನರಲ್ಲಿ ಅಡಗಿದ್ದ ಸುಗುಣಗಳೂ ಧರ್ಮಗಳೂ ಹೊರಗೆ ಪ್ರಕಾಶವಾದುವು. ಕವಿ ಡ್ಯಾಂಟೆಯೂ (Dante) ಚಿತ್ರಗಾರನಾದ ಗಿಯಾಟೆಯೂ (Giotto) ಈ ಅಭ್ಯುದಯದ ಉದಯವನ್ನು ಸಾರುವ ಬೆಳಗಿನ ನಕ್ಷತ್ರಗಳಾಗಿ ಹೊಳೆದರು. ಆ ಇಟಲಿಯ ಅಭ್ಯುದಯದ ಸೂರ್ಯೋದಯವು, ಬರಿಯ ಇಟಲಿಯ ಭೌತ ವೈಭವ ಮಾತ್ರವೇ ಆಗಲಿಲ್ಲ; ಅದು ಚೆದುರಿದ ಇಟಲಿಯ ಬೇರೆ ಬೇರೆ ಪ್ರಾಂತಗಳಲ್ಲಿದ್ದು ಹೊಸ ಸ್ಫೂರ್ತಿಯಿಂದ ಹೊಸ ಜೀವವನ್ನು ಆಸ್ವಾದಿಸಿ ಸುಂದರವಾದ ನಗರಗಳನ್ನು ನಿರ್ಮಿಸುತ್ತಿದ್ದ ಕಲಾವಿದರಿಗೆ ಪುನರುಜ್ಜೀವನವಾಯಿತು. ಅಥೆನ್ಸಿನ ವೈಭವ ಕಾಲದಲ್ಲಿ ಪೆರಿಕಲ್ಸ್‌ನ ದಿನಗಳಲ್ಲಿ ಹೊರತು ಯೂರೋಪಿನಲ್ಲಿ ಇಂತಹ ಪುನರುಜ್ಜೀವನವು ಮತ್ತಾವಾಗಲೂ ನಡೆದಿರಲಿಲ್ಲ.

ಅವನತಿಯೂ ಬೇಗನೇ ಬಂದಿತು. ಐಶ್ವರ್ಯ ಅಭಿವೃದ್ಧಿಗಳು ಹೆಚ್ಚಿದಂತೆ ಧರ್ಮವೂ ನೀತಿಯೂ ಕೆಡುತ್ತಾ ಬಂದಿತು. ಫ್ಲಾರೆನ್ಸ್‌ನ ಸವನರೋಲ Savonarola ಹೊರತು ಮತ್ತಾರೂ ಆತ್ಮಶಕ್ತಿಯ ಧೀರರು ಯೂರೋಪಿನಲ್ಲಿ ಬರಲಿಲ್ಲ. ಇಟಲಿಯ ಬೇರೆ ಬೇರೆ ಸಣ್ಣ ಸಣ್ಣ ರಾಜ್ಯಗಳಲ್ಲಿ ಪರಸ್ಪರ ಕಲಹವುಂಟಾಗಿ ಅವು ಶಕ್ತಿಹೀನವಾದುವು. ಕೊನೆಗೆ ಅಣ್ಣತಮ್ಮಂದಿರಾದ ಇಟಲಿ ಜನರ ಜಗಳಗಳನ್ನು ತೀರ್ಮಾನಿಸಲು ಪರದೇಶದವರು ಬಂದರು. ಇಟಲಿಗೆ ದಾಸ್ಯದ ಅಂಧಕಾರವು ಪ್ರಾರಂಭವಾಯಿತು. ಗ್ಯಾರಿಬಾಲ್ಡಿ ಮತ್ತು ಮ್ಯಾಜನಿಯ ಕಾಲದ ವರೆಗೆ ಆ ಕತ್ತಲೆ ಹೋಗಲಿಲ್ಲ. ಇಟಲಿಯ ಜೀವನದಲ್ಲಿ ಪರರಾಷ್ಟ್ರದ ಪ್ರಾಬಲ್ಯ ಹೆಚ್ಚಾದ ಕೂಡಲೆ, ಇಟಲಿಯ ಕವಿಗಳಿಗೂ ಕಲಾವಂತರಿಗೂ ಸ್ಫೂರ್ತಿಯಿಲ್ಲವಾಯಿತು. ಭಗವಂತನ ಸಾನ್ನಿಧ್ಯದ "ತ್ಯಾಗದ ಹಣತೆ" ಯು ನಂದಿಹೋಯಿತು.

ಇದುವರೆಗೆ, ಸಾಹಿತ್ಯ ಮತ್ತೂ ಕಲೆಗಳ ವೈಭವದ ಕಾಲವೇ ರಾಷ್ಟ್ರದ ಅಭ್ಯುದಯ ಕಾಲವೆಂದು ಹೇಳಿದೆವು. ಆ ಮಾತಿಗೆ ಅಪವಾದವಾಗಿ ತೋರುವ ಕೆಲವು ಅಂಶಗಳು ಇಲ್ಲದಿಲ್ಲ. ಇದರಲ್ಲಿ ತೋರುವ ಸಮಸ್ಯೆ ಇದು " ಒಂದು ದೇಶದ ಕಲೆಯ (ಸಾಹಿತ್ಯವಲ್ಲ) ವೈಭವವು ಆ ಜನರ ಅಭ್ಯುದಯದ ಕಾಲದಲ್ಲಿ ಕಾಣುವುದಿಲ್ಲ. ಆದರೆ ಅವರ ಆ ಅಭ್ಯುದಯದ ಅವನ

ತಿಯ ಪ್ರಾರಂಭದಲ್ಲಿ ಕಾಣುತ್ತದೆ. ಉದಾಹರಣೆಗಾಗಿ, ಅಥೆನ್ಸಿನ ಶಿಲ್ಪಕಲೆಯು ಅಭಿವೃದ್ಧಿಗೆ ಬಂದು ಪೂರ್ಣವಾದುದು ಅಥೆನ್ಸಿನ ಅವನತಿಯ ಕಾಲದಲ್ಲಿ. ಅಥೆನ್ಸಿನಲ್ಲಿ ಪೆರಿಕಲ್ಸ್‌ನ ಕಾಲದಲ್ಲಿ ಮಾತ್ರವೇ ಅಲ್ಲದೆ, ಅವನ ನಂತರ ಕ್ರೂರಿಗಳಾದ ರೋಮನ್ ಜನರು ಅಥೆನ್ಸನ್ನು ಜಯಿಸಿದ ನಂತರವೂ ಜಗತ್ಪೂಜ್ಯವಾದ ಕಲಾಕೃತಿಗಳು ಅಲ್ಲಿ ಸೃಷ್ಟಿಯಾಗುತ್ತಿದ್ದುವು. ಇಟಲಿಯಲ್ಲಿಯೂ ಹೀಗೆಯೇ. ದೇಶದ ಅವನತಿಯು ತತ್‌ಕ್ಷಣ ಕವಿತೆಯ ಉಸಿರನ್ನು ಕಟ್ಟಿಸಿದರೂ, ಕಲೆಯು ಸಾಯದೆ ನರಳುತ್ತಾ ಇದ್ದು ಮತ್ತೊಮ್ಮೆ ವೈಭವವನ್ನು ಮೆರೆಸುತ್ತದೆ. ಇಂಗ್ಲೆಂಡಿನಲ್ಲಿ ಹದಿನೈದನೇ ಶತಮಾನದಲ್ಲಿ ಮೂಢನಂಬಿಕೆಯೂ ಧಾರ್ಮಿಕ ಅವನತಿಯೂ ತುಂಬಿದ್ದಾಗ ಗೋಥಿಕ್ (Gothic) ಶಿಲ್ಪಕಲೆಯು ಪೂರ್ಣತೆಯನ್ನು ಪಡೆಯಿತು. ಇಂಗ್ಲೆಂಡಿನ ಕಲಾವೈಭವಕ್ಕೆ ಬಹಳ ಮಟ್ಟಿಗೆ ಕಾರಣವಾಗಿರುವ ಕಿಂಗ್ಸ್ ಕಾಲೇಜ್ ಚಾಪೆಲ್, ನಾರ್‌ಫೋಕ್ ಚರ್ಚುಗಳು ಮತ್ತು ಉಳಿದ ಅನೇಕ ಇಂಗ್ಲಿಷ್ ಚರ್ಚುಗಳು, ಇವುಗಳೆಲ್ಲಾ ಇಂಗ್ಲೆಂಡಿನ ರಾಷ್ಟ್ರೀಯ ಮತ್ತು ನೀತಿ ಜೀವನದ ಅವನತಿ ಕಾಲದಲ್ಲಿ ಸೃಷ್ಟಿಯಾದುವು. ಹಿಂದೂ ದೇಶದ ಕಲೆಯನ್ನು ಪರಿಗಣಿಸುವಾಗಲೂ ಇದೇ "ಪರಸ್ಪರ ವಿರುದ್ಧ" ತೆಯು ನಮ್ಮ ಕಣ್ಣಿಗೆ ಬೀಳುವುದು.

ರಾಷ್ಟ್ರಜೀವನದ ಉನ್ನತಿಯೊಡನೆ ಸಮಸ್ತ ಅಭ್ಯುದಯವೂ ಆಗುವುದೆಂಬ ನಿಯಮಕ್ಕೆ ಅಪವಾದದ ಈ ಮೇಲಿನ ಸಂಗತಿಗಳಿಗೆ ಕಾರಣವೇನು? ರಸ್ಕಿನ್ನನೂ ಈ ಸಮಸ್ಯೆಯನ್ನು ಪೂರ್ಣವಾಗಿ ಬಗೆಹರಿಸಿಲ್ಲ. ಆದುದರಿಂದ ಕಲೆಯನ್ನು ಕುರಿತ ಅವನ ಸಿದ್ಧಾಂತಗಳು ಅಪೂರ್ಣವೂ, ದಾರಿ ತಪ್ಪಿಸುವುವೂ ಆಗಿವೆ. ಸರಿಯಾದ ಮತ್ತು ನಿಜವಾದ ವಿವರಣೆ ಈ ರೀತಿ ಇರಬಹುದೆಂದು ಕಾಣುತ್ತದೆ. ಕಲೆಯೂ ಮೊದಲು ಮೊದಲು ಸಾಹಿತ್ಯ ಅನುಸರಿಸುವ ಮಾರ್ಗವನ್ನೇ ಅನುಸರಿಸುತ್ತದೆ. ರಾಷ್ಟ್ರದ ಪುನರುಜ್ಜೀವನ ಕಾಲದಲ್ಲಿ ಎರಡರ ಸ್ಥಿತಿಯೂ ಒಂದೇ ಸಮನಾಗಿರುತ್ತದೆ. ಭವಿಷ್ಯದ ಕಟ್ಟಡದ ತಳಹದಿ ಎರಡಕ್ಕೂ ಒಟ್ಟಿಗೇ ಉಂಟಾಗುತ್ತದೆ. ಆದರೆ ಸಾಧಾರಣವಾಗಿ ಈ ಸ್ಫೂರ್ತಿಗಳು ಬೆಳೆಯಲು ಸಾಹಿತ್ಯಕ್ಕಿಂತ ಕಲೆಗಳಿಗೆ ಹೆಚ್ಚು ಕಾಲ ಬೇಕಾಗುವುದು. ಒಂದು ಪದ್ಧತಿ, ಒಂದು ಕ್ರಮ ಒಂದು ಸಂಪ್ರದಾಯ ಇವು ಕಲೆಯಲ್ಲಿ ಮೊದಲು ಪ್ರಾರಂಭವಾಗಿ ಪದೇ ಪದೇ

ತಿದ್ದಿಕೊಂಡು ಕೊನೆಗೆ ಕಲಾವೈಭವದ ಉತ್ಕೃಷ್ಟ ಸೃಷ್ಟಿಯು ಆಗಬೇಕಾಗುತ್ತದೆ. ನವಚೈತನ್ಯವುಂಟಾದಾಗ ಪ್ರಾರಂಭದಲ್ಲಿ ಕಲಾಕೃತಿಗಳು ಒರಟು ಒರಟಾಗಿದ್ದರೂ, ಹೊಸ ಜೀವ ಮತ್ತು ತೇಜಸ್ಸುಳ್ಳವುವಾಗಿರುತ್ತವೆ. ಅನಂತರ ಹೊಸ ಭಾವಗಳನ್ನು ಕಲೆಯಲ್ಲಿ ಸೇರಿಸುವ ಕ್ರಮವು ನಿಧಾನವಾಗಿ ಬಹುಕಾಲ ನಡೆಯುತ್ತದೆ. ಈ ಎರಡನೆಯ ಕಾಲದಲ್ಲಿ ಕಲಾಸೃಷ್ಟಿಗಳು ಶಾಸ್ತ್ರೀಯವಾಗಿ ಹೆಚ್ಚು ಪೂರ್ಣವೂ ಶುದ್ಧವೂ ದೋಷರಹಿತವೂ ಸುಂದರವೂ ಆಗುವುದು ನಿಶ್ಚಯ. ಆದರೆ ಅವುಗಳಲ್ಲಿ ಕಳೆದು ಹೋದ ಸ್ವಾತಂತ್ರ್ಯದ ವಸಂತವೂ, ಪ್ರಾರಂಭದ ಕಾವೂ, ಕೆಚ್ಚೂ, ಇರುವುದಿಲ್ಲ. ಅವು ಷೆಲ್ಲಿಯ

A deep autumumnal tone
Sweet though in Sadness

ಕವನದಂತೆ; ಹೂವಿನ ಹೊಳಪನ್ನು ಕಳೆದುಕೊಂಡ ಹಣ್ಣು, ಮಾಗಿದಾಗಲೂ ಬೀಳುವಾಗಲೂ ಸುಂದರವಾಗಿರುವಂತೆ ಇರುತ್ತವೆ.

ನನ್ನ ಅರ್ಥವನ್ನು ಹೆಚ್ಚು ಸ್ಪಷ್ಟಪಡಿಸಲು ಇನ್ನೂ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಈಚಿನ ಗ್ರೀಕ್ ಶಿಲ್ಪಕಲೆಯಲ್ಲಿ ಬಾಹ್ಯ ಸೌಂದರ್ಯವು ಪೂರ್ಣವಾಗಿದ್ದರೂ, ಅವನತಿಯ ಕುರುಹುಗಳು ಅದರಲ್ಲಿ ಕಾಣಬರುತ್ತವೆ. ಪ್ರಾರಂಭದ ಸೃಷ್ಟಿಯಲ್ಲಿ ಇದ್ದ ಗಾಂಭೀರ್ಯ ಮತ್ತು ಶಾಂತಿಯು ಈಚಿನ ಧೀರರ (Gladiators) ವಿಗ್ರಹಗಳಲ್ಲಿ ಇಲ್ಲ. ಆದರೆ ಈಚಿನ ಚಿತ್ರಗಳಲ್ಲಿ ಕಲಾಪರಿಪೂರ್ಣತೆ ಶಾಸ್ತ್ರೀಯ ರಚನಾತಂತ್ರ ಕೌಶಲ್ಯ ಇವೆ. ರಾಫೆಲ್ Rafael ಅಥವಾ ಆಂಡ್ರಿಯ ಡೆಲ್ ಸಾರ್ಟೊ Andrea Del Sorto ಇವರ ಕೃತಿಗಳಲ್ಲಿರುವ 'ಅತಿಪೂರ್ಣತೆ' ಅಥವಾ ಅತ್ಯುತ್ಕೃಷ್ಟತೆಯೇ ಒಂದು ಕಲಾಯುಗದ ಉನ್ನತಿಯ ತುದಿ ಮತ್ತು ಅದರ ಅವನತಿಯ ಪ್ರಾರಂಭ ಎರಡನ್ನೂ ತೋರಿಸುತ್ತದೆ. ಬ್ರೌನಿಂಗ್ ಕವಿಯು, ಚಿತ್ರಕಲಾನಿಪುಣನಾದ ಆಂಡ್ರಿಯನೇ, ಹೀಗೆ ಹೇಳುವಂತೆ ಮಾಡಿದ್ದಾನೆ.

"The days decrease
And Autumn grows: Autumn in everything
Eh! the whole seems to fall into a shape

As if I saw alike my work and self
End all that I was born to be and do
A twilight piece..........
I can do with my pencil what I know
What I see, what at the bottom of my heart
I wish for --If I ever wish so deep
Do easily too—when I say perfectly
I do not boast—all is silver grey
Placid and perfect with my art, the worse
The worse—"

ಕೊನೆ ಸಮೀಪಿಸಿದೆ ಎಂಬುದು ಕಲೆಗಾರನಿಗೇ ಗೊತ್ತಾಗುವುದು.

ಇದರ ಸಾದೃಶ್ಯವನ್ನು ಪ್ರಕೃತಿಯಲ್ಲಿ ನೋಡಬಹುದು. ಸೂರ್ಯನ ಬೆಳಕು ಕಡಿಮೆಯಾಗುತ್ತಾ ಬಂದು, ಮೇಘಗಳು ರಾತ್ರಿಯನ್ನು ಜಗತ್ತಿಗೆ ಪ್ರವೇಶಮಾಡಿಸುವಾಗ, ಸಂಧ್ಯಾಕಾಲದ ಮೃದುವಾದ ಹೊಂಬಣ್ಣದ ಮಧ್ಯೆ ಇದ್ದಕ್ಕಿದ್ದಂತೆ ಸೂರ್ಯೋದಯಕ್ಕೆ ಸಮಾನವಾದ ಕಾಂತಿಯು ಸುಳಿಯುತ್ತದೆ. ಕೆಲವು ವೇಳೆ ಸೂರ್ಯಾಸ್ತದ ಆಕಾಶವು ಸೂರ್ಯೋದಯದ ಆಕಾಶಕ್ಕಿಂತಲೂ ಹೆಚ್ಚು ಪ್ರಕಾಶಮಾನವಾಗಿರುತ್ತದೆ. ಹಾಗೆಯೇ ರಾಷ್ಟ್ರದ ಕಲೆಯಲ್ಲಿ ಅದ್ಭುತವಾದ ಕಾಂತಿಯು, ಕೆಲವು ವೇಳೆ ರಾಷ್ಟ್ರದ ವೈಭವಸೂರ್ಯನ ಅಸ್ತಮಯಕಾಲದಲ್ಲಿ ಮಾತ್ರ ಪ್ರಕಟವಾಗುತ್ತದೆ. ರಾಷ್ಟ್ರದ ವೈಭವವು ಮರೆಯಾಗುತ್ತಿರುವಾಗ, ಅದ್ಭುತವಾದ ಕಲಾಸೃಷ್ಟಿಗಳು ಎದ್ದು ಸಂಜೆಯ ಮುಂಬೆಳಗಿಗೆ ದೀಪ್ತಿಯನ್ನು ಕೊಡಬಹುದು. ಇವುಗಳಿಗೆ ಆವಶ್ಯಕವಾದ ಸ್ಫೂರ್ತಿಯು ಬಹಳ ಹಿಂದೆ, ದೇಶವು ಎಚ್ಚೆತ್ತಾಗ ದೊರಕಿಸುತ್ತದೆ. ಆ ಸ್ಫೂರ್ತಿಯು ಈಗ ಕಲೆಯಲ್ಲಿ ಪೂರ್ಣವಾದದು ನಮಗೆ ಗೋಚರವಾಗುತ್ತದೆ. ಆದರೆ ಅದೇ ಆ ಕಲಾಯುಗದ ಅವನತಿಗೆ ಪ್ರಾರಂಭವೂ ಆಗುತ್ತದೆ.

ಹಿಂದೂದೇಶದ ಕಡೆ ತಿರುಗಿ ಇಲ್ಲಿಯ ಸಾಹಿತ್ಯವೂ ಕಲೆಯೂ ಅನುಸರಿಸಿರುವ ದಾರಿಯನ್ನು ನಾವು ನೋಡಿದರೆ ಇಲ್ಲಿಯೂ ಇತರ ದೇಶಗಳಲ್ಲಿಯಂತೆ

ನಡೆದಿರುವುದು ಕಾಣುತ್ತದೆ. ಅವನತಿಯ ಚಿನ್ಹೆಗಳು ಬೇರೆ ಕಡೆಯಂತೆ ಇಲ್ಲೂ ಆಗಿವೆ. ಒಂದು ಕಾಲದಲ್ಲಿ ಕಾವ್ಯ ಮತ್ತು ಸಾಹಿತ್ಯಗಳೂ, ಮತ್ತೊಂದು ಕಾಲದಲ್ಲಿ ಕಲೆಗಳೂ, ಜನಾಂಗದ ಸ್ಫೂರ್ತಿಯನ್ನೂ ಸ್ವಾತಂತ್ರ್ಯವನ್ನೂ ಆನಂದವನ್ನೂ, ವ್ಯಕ್ತಗೊಳಿಸಿವೆ.

ಪ್ರಾಚೀನ ಕಾಲದಲ್ಲಿ, ಸುಂದರರೂ ತೇಜಸ್ವಿಗಳೂ ಉತ್ಸಾಹಿಗಳೂ ಆಗಿದ್ದ ಆರ್ಯರು, ಹಿಮಾಲಯ ಪರ್ವತವನ್ನು ದಾಟಿಕೊಂಡು ಪಂಜಾಬ್ ದೇಶಕ್ಕೆ ಬಂದಾಗ, ತಮ್ಮ ರಕ್ಷಕರೆಂದು ಅವರು ನಂಬಿದ್ದ ಪ್ರಕಾಶಮಾನರಾದ ದೇವತೆಗಳಿಗೆ ಆನಂದದ ಮತ್ತು ಜಯಲಾಭದ ಹಾಡುಗಳನ್ನು ಹಾಡಿದರು. ಆ ಹಾಡುಗಳಲ್ಲಿ ಶಾಸ್ತ್ರ, ಪುರಾಣ ತತ್ವಗಳು ಸ್ವಲ್ಪವೂ ಇರಲಿಲ್ಲ. ಆದರೆ ಅವುಗಳಲ್ಲಿ ಪ್ರಕೃತಿಯ ಸೌಂದರ್ಯವೂ ಜೀವನದ ಆಸೆ ಉತ್ಸಾಹಗಳೂ ಪೂರ್ಣ ವಾಗಿದ್ದುವು. ಇಂದಿಗೂ ಅವು ನಮ್ಮ ಮನಸ್ಸನ್ನು ಮುಟ್ಟುವುದು ಅವುಗಳಲ್ಲಿ ರುವ ಜೀವಾಳ, ಸರಳತೆ, ಮತ್ತು ಆ ಕವನಗಳಿಗೆ ವಾತಾವರಣದಂತೆ ಅಂಟಿ ಕೊಂಡಿರುವ ಜಗತ್ತಿನ ಅರುಣೋದಯದ ಉಸಿರು, ಇವುಗಳಿಂದ. ಆದರೆ ಬರ ಬರುತ್ತಾ ಆ ಕವನಗಳಲ್ಲಿ ಅಲ್ಲಲ್ಲಿ ಜೀವನದ ಪ್ರಶ್ನೆಗಳ ವಿಚಾರವೂ ಬಂದವು. ಮಾನವ ಜೀವನದ ಕಷ್ಟಸುಖಗಳ ಧ್ವನಿಯೂ ತಲೆಹಾಕ ತೊಡಗಿತು. ಆದರೆ ಒಟ್ಟಿನಲ್ಲಿ ವೇದಗಳಲ್ಲಿರುವುದು ಜೀವನದಲ್ಲಿ ಉತ್ಸಾಹ, ಬದುಕುವುದರಲ್ಲಿ ಆನಂದ, ಪ್ರಕೃತಿಯ ಸೌಂದರ್ಯಾನುಭವದಲ್ಲಿ ಗೆಲುವು ಇವು. ವೇದಗಳನ್ನು ಓದಿದರೆ "ಇದು ಇನ್ನೂ ಈಗ ತಾನೆ ಯೌವನಕ್ಕೆ ಬಂದು ಚೈತನ್ಯವುಳ್ಳವರಾಗಿ ಮಹತ್ವ ಜೀವನವನ್ನು ನಡೆಸಲು ಸಿದ್ಧರಾಗಿರುವ ಜನಾಂಗ ದವರ ಹಾಡು ಎಂದು ನಿಸ್ಸಂದೇಹವಾಗಿ ತೋರುವುದು. ವೇದಗಳು ಭಾವಿ ಹಿಂದೂ ಜನಾಂಗದ ಯೌವನದ ಕವನಗಳು.

ಕೆಲವು ಕಾಲದ ಮೇಲೆ—ಎಷ್ಟು ಕಾಲವೆಂಬುದು ನಮಗೆ ತಿಳಿಯದು—ಇನ್ನೊಂದು ಬಗೆಯ ಕಾವ್ಯವಾಹಿನಿಯು ಪ್ರಾರಂಭವಾಯಿತು. ಆ ಹೊಸ ಯುಗದ ಚಳವಳಿ ಹೇಗೆ ಇದ್ದಿರಬಹುದೆಂಬುದನ್ನು ನಾವು ಊಹಿಸಿ ಮಾತ್ರ ತಿಳಿಯಬಹುದಾಗಿದೆ. ಇತಿಹಾಸವು ಇನ್ನೂ ಅಂಧಕಾರದಲ್ಲಿ ತೊಳಲಾಡು ತ್ತಿದೆ. ಆದರೆ ಹಿಂದೂ ದೇಶದ ಎರಡು ಮಹಾಕಾವ್ಯಗಳಲ್ಲಿ ಎರಡು ಮಹ ತ್ತರಗಳಾದ ರಾಷ್ಟ್ರೀಯ ಸಂಗತಿಗಳು ವಿವರಿತವಾಗಿವೆ, ಎಂದು ಹೇಳಬಹುದು

(೧) ಗಡಿನಾಡಿನ ಮಾರ್ಗವಾಗಿ ಆರ್ಯರು ಎರಡನೆಯ ಸಲ ಹಿಂದೂ ದೇಶಕ್ಕೆ ಬಂದು ಇಲ್ಲಿಯ ನಿವಾಸಿಗಳೊಡನೆ ಕದನವಾಡಿದುದು (೨) ಆರ್ಯರು ಜಯಶೀಲರಾಗಿ ದಕ್ಷಿಣಕ್ಕೆ ನುಗ್ಗಿದುದು; ಕಾವ್ಯಗಳಿಂದ ಉಂಟಾಗುವ ಈ ಅಭಿಪ್ರಾಯಗಳಿಗೆ ಇತಿಹಾಸದ ಆಧಾರ ದೊರೆತಿರುವುದೇ ಅಥವ ಇಲ್ಲವೆ ಎಂಬುದು ಈಗ ಮುಖ್ಯವಲ್ಲ. ಆದರೆ ಆ ಕಾವ್ಯಗಳು ಹಿಂದೂ ದೇಶದ ಇತಿಹಾಸದ ಸುವರ್ಣ ಯುಗದಲ್ಲಿ ಉತ್ತಮವಾದ ಜೀವನವನ್ನು ನಡೆಸುತ್ತಿದ್ದ ಜನರ ಆತ್ಮ ಪ್ರಕಾಶವೆಂದು ಧಾರಾಳವಾಗಿ ಹೇಳಬಹುದು.

ವೇದಗಳಲ್ಲಿರುವಂತೆ ಈ ಮಹಾಕಾವ್ಯಗಳಲ್ಲಿಯೂ ಅವುಗಳಲ್ಲಿರುವ ಶಕ್ತಿ, ಆನಂದ, ಸ್ವಾಭಾವಿಕವಾದ ತೇಜಸ್ಸು, ಕಾವ್ಯದ ಓಟ, ತುಂಬಿ ತುಳುಕುತ್ತಿರುವ ಜೀವನ, ಧೀರರು, ಅವರ ಮಹತ್ತಾದ ಧ್ಯೇಯಗಳು, ಕೆಚ್ಚೆದೆಯ ಸಾಹಸಗಳು, ಬದುಕಿನ ಆನಂದ, ಇವೇ ನಮ್ಮ ಮನಸ್ಸನ್ನು ಆಕರ್ಷಿಸುವುವು. ರಾಮಾಯಣ ಭಾರತಗಳು ಧೀರರ ಯುದ್ಧದ ಹಾಡುಗಳು. ಅಸಾಧ್ಯವಾದುದನ್ನು ಮಾಡಿ ದೊಡ್ಡ ಜೀವನವನ್ನು ನಡೆಸಿ ಹಿಂದೂ ದೇಶದ ಮೇಲೆ ತಮ್ಮ ಭಾವನೆ ಬಾಳುವೆಗಳ ಮುದ್ರೆಯನ್ನು ಒತ್ತಿ ಅಖಿಲ ಭರತವರ್ಷಕ್ಕೆ ಒಂದೇ ಆದ ಸಂಸ್ಕೃತಿಯನ್ನು ಕೊಡಲು ಯೋಗ್ಯತೆಯುಳ್ಳವರಾಗಿದ್ದ ಜನರ ಕಾವ್ಯಗಳು ಅವು. ರಾಮಾಯಣ ಭಾರತಗಳು, ಅವು ಸೃಷ್ಟಿಯಾದ ಈಚೆಗೆ ಪ್ರಪಂಚದಲ್ಲಿ ಮತ್ತಾವ ಕಾವ್ಯಗಳಿಗೂ ಸಾಧ್ಯವಿಲ್ಲದಿದ್ದಷ್ಟು ಜನರಿಗೆ, ಆನಂದವನ್ನುಂಟುಮಾಡಿ, ಧೈರ್ಯೋತ್ಸಾಹಗಳನ್ನು ಕೊಟ್ಟವೆ. ಆ ಕಾವ್ಯಗಳು ಇಲ್ಲದೇ ಹೋಗಿದ್ದರೆ, ಈಚೆಗೆ ಆರ್ಯಸಂಸ್ಕೃತಿಯು ನಿಲ್ಲುತ್ತಲೇ ಇರಲಿಲ್ಲ. ಇಂದೂ ಓದುಬರಹ ಬಾರದ ಕೋಟ್ಯಾವಧಿ ಹಿಂದೂ ಜನರಿಗೆ ರಾಮಾಯಣ ಭಾರತಗಳೇ ವಿದ್ಯಾಶಾಲೆಗಳು. ಅವುಗಳ ಕತೆಗಳು ಅವರಿಗೆ ಬಾಯಿಪಾಠವಾಗಿರುವುದಲ್ಲದೆ ಮತ್ತೆ ಮತ್ತೆ ಆ ಕತೆಗಳನ್ನು ಕೇಳಿ ಅವರು ಆನಂದಪಡುವರು. ಈ ಕಾವ್ಯಗಳೂ ಅವುಗಳಿಂದ ಉಂಟಾಗಿರುವ ಫಲಗಳೂ ಇಲ್ಲದೆ ಇದ್ದಿದ್ದರೆ ಜಗತ್ತು ಎಷ್ಟು ಜಡವಾಗಿರುತ್ತಿದ್ದಿತೆಂಬುದು ಈಗ ತಾನೆ ಪಾಶ್ಚಾತ್ಯ ದೇಶಗಳ ಗಮನಕ್ಕೆ ಬರುತ್ತಿದೆ. ವಿಜ್ಞಾನವೂ ವ್ಯಾಪಾರ ಕೈಗಾರಿಕೆಗಳೂ ತರುಣ ಭಾರತದ ಕಣ್ಣುಕುಕ್ಕುವಂತೆ ಪ್ರಚಾರ ನಡೆಸುತ್ತಿರುವಾಗ, ಭಾರತದ ಜನರ ಹೃದಯವನ್ನು ಮುಟ್ಟಬಲ್ಲ ಈ ಕಾವ್ಯಗಳು ಮಾತ್ರವೇ ಈ ದೇಶದ ಯೋಗ್ಯತೆ

ಯನ್ನು ಹೆಚ್ಚಿಸಿ ನಮ್ಮ ಮುಂದಲ ಶುಭಕ್ಕೆ ಸಹಾಯಮಾಡಲು ಶಕ್ತವಾದು ವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ಹಿಂದೂ ದೇಶದ ಇತರ ಈಚಿನ ಸಾಹಿತ್ಯ ಚಳುವಳಿಗಳನ್ನೂ, ರಾಷ್ಟ್ರ ಜೀವನಕ್ಕೂ ಅವುಗಳಿಗೂ ಇರುವ ಸಂಬಂಧವನ್ನೂ ಗುರುತಿಸುತ್ತಾ ಹೋಗಲು ಇಲ್ಲಿ ಅವಕಾಶವಿಲ್ಲ. ಅದರ ಬದಲು ಹಿಂದೂ ದೇಶದ ಕಲೆಗಳ ಕಡೆ ತಿರುಗಿ ಅವುಗಳ ಕೆಲವು ಬೆಳವಣಿಗೆಗಳನ್ನು ನಿರೀಕ್ಷಿಸಬಹುದು. ಅದರಿಂದಲೂ ನಮಗೆ ಪ್ರಯೋಜನವುಂಟು.

ಗಂಗಾನದಿಯ ಬಯಲಿಗೆ ಬಂದು ನಿಂತ ಆರ್ಯರು ಕೊನೆಗೆ, ತಮ್ಮ ಜೀವ ನದ ಪ್ರಾರಂಭದ ಉತ್ಸಾಹವನ್ನು ಕಳೆದು ಕೊಂಡು ಅಂತರ್ಮುಖಿಗಳಾದರು. ಧರ್ಮ ಮತ್ತು ವೇದಾಂತ ಪ್ರಶ್ನೆಗಳ ಮಧ್ಯೆ ಜೀವನವೇ ಕೃತಕವಾದ ಒಗಟಿ ಯಾಗಿ ತೋರತೊಡಗಿತು. ಕೊನೆಗೆ ಈ ದೇಶದ ಅತ್ಯಂತ ಶ್ರೇಷ್ಠನಾದ ಮಹ ನೀಯ ಗೌತಮನು, ಜನಸಾಮಾನ್ಯರಿಗಾಗಿ ಒಂದು ಧ್ಯೇಯವನ್ನು ಕೊಟ್ಟನು. ಗೌತಮನ ರಾಜ್ಯತ್ಯಾಗವೇ ಒಂದು ಹೊಸ ಧರ್ಮದ ತಳಹದಿಯಾಯಿತು. ಅವನ ದಾರಿಯಿಂದ ಮನುಷ್ಯನು ಜನನ ಮರಣದ ಚಕ್ರದಿಂದ ಬಿಡುಗಡೆಯಾ ಗುವವನಾಗಿದ್ದನು. ಇಂದಿನ ಜಗತ್ತಿಗೆ ಅನ್ವಯಿಸಿಕೊಳ್ಳಲು ಕಷ್ಟವಾಗಿರುವ ಬುದ್ಧನ ತತ್ವಗಳು ಅಂದಿನ ಜನರಿಗೆ ಸರ್ವೌಷಧವಾಗಿ ತೋರಿದವು. ಆತ್ಮ ಜ್ಞಾನ ಮತ್ತು ಧರ್ಮದ ಉತ್ಸಾಹವು ದೇಶವನ್ನೆಲ್ಲಾ ಆವರಿಸಿ ಬಡವರನ್ನೂ ಬಲ್ಲಿದರನ್ನೂ ದೊಡ್ಡವರನ್ನೂ ಚಿಕ್ಕವರನ್ನೂ ಉಚ್ಚಜಾತಿಯವರನ್ನೂ ನೀಚ ಜಾತಿಯವರನ್ನೂ ಸ್ಪರ್ಶಶಿಲೆಯಂತೆ, ಆಶ್ಚರ್ಯಕರವಾದ ಶಕ್ತಿಯಿಂದ ತನ್ನ ಕಡೆಗೆ ಎಳೆಯಿತು. ಬುದ್ಧ ಭಿಕ್ಷುಗಳ ಸಂಘವು ಸ್ಥಾಪಿತವಾಯಿತು. ಮೇಲು ಜಾತಿ ಯವರು ಕೀಳು ಜನರಿಗೆ ಉಪದೇಶಮಾಡುವುದಕ್ಕಾಗಿ, ಸಮಸ್ತವನ್ನೂ ತ್ಯಾಗ ಮಾಡಿ ಬಂದರು. ಎಲ್ಲೆಲ್ಲೂ ಗೃಹಸ್ಥರು ಬುದ್ಧಸನ್ಯಾಸಿಗಳನ್ನು ಸ್ವೀಕರಿಸಿ ಸತ್ಕರಿಸಿ ಅವರ ಧರ್ಮೋಪದೇಶವನ್ನು ಆದರಿಸುತ್ತಿದ್ದರು. ಬುದ್ಧನಿಂದ ಹಿಂದೂದೇಶದ ಆಕಾರವೇ ಬದಲಾಯಿಸಿತು. ಅನಂತರ ಅನೇಕ ಶತಮಾನ ಗಳವರೆಗೆ ಬುದ್ಧಬಿಕ್ಷುಗಳು ಭರತವರ್ಷದಲ್ಲಿ ತಮ್ಮ ಧರ್ಮವನ್ನು ಪ್ರಚಾರ ಮಾಡುತ್ತಿದ್ದರು.

ಬುದ್ಧನ ಕಾಲಕ್ಕೆ ಹಿಂದೆಯಾಗಲೀ ಅಥವಾ ಈಚೆಗೆ ಆಗಲಿ ಭಾರತವು

ಯಾವಾಗಲೂ ಆಗಿನಷ್ಟು ಒಗ್ಗಟ್ಟಾಗಿರಲಿಲ್ಲ. ದೇಶವು ಏಚ್ಚೆತ್ತಿತ್ತು. ಕಲೆಯೂ ಉನ್ನತಿಗೆ ಏರಿತ್ತು. ಬುದ್ಧ ಸನ್ಯಾಸಿಗಳು "ಶಾಂತಿ" ಯನ್ನು ಹೊಂದಿದ ಪವಿತ್ರ ಸ್ಥಳಗಳಲ್ಲಿ ಜನರು ದೊಡ್ಡ ದೊಡ್ಡ ಸ್ಮಾರಕಗಳನ್ನು ಕಟ್ಟಿಸುತ್ತಿದ್ದರು. ಅವರ ಮಹಿಮೆಯನ್ನು ಶಿಲ್ಪಕಲೆಯಲ್ಲಿಯೂ ಕೆತ್ತನೆ ಕೆಲಸದಲ್ಲಿಯೂ ಪ್ರಕಟಿಸುತ್ತಿದ್ದರು. ಆ ಯುಗದ ಸೃಷ್ಟಿಯ ಕೆಲವು ಅವಶೇಷಗಳು ಮಾತ್ರ ನಮಗೆ ಈಗ ದೊರೆಯುತ್ತವೆ. ಅವುಗಳಲ್ಲಿ ಅನೇಕವನ್ನು ಈಚೆಗೆ ಅಗೆದು ಶೋಧಿಸಿದ್ದಾರೆ. ಉಳಿದವುಗಳನ್ನೆಲ್ಲಾ ಶೋಧಿಸಬೇಕಾಗಿದೆ. ಅಸಂಖ್ಯಾತವಾದುವು ದುಷ್ಟರ ಕೈಯಿಂದ ನಷ್ಟವಾಗಿವೆ. ನಮಗೆ ದೊರೆತವುಗಳಿಂದ ಆ ಜನರ ಮಹಿಮೆಯನ್ನು ನಾವು ತಿಳಿಯಬಹುದು. ಹೊಸ ಸಂದೇಶದ ಬೆಳಕಿನಿಂದ ತುಂಬಿರುವ ಅವರ ಉತ್ಸಾಹವನ್ನೂ, ತಮ್ಮ ಗುರುಗಳಿಗೂ ಬೌದ್ಧ ಬಿಕ್ಷುಗಳಿಗೂ ಆದರ್ಶವಾದ ಶಾಶ್ವತವಾದ ಸ್ಮಾರಕಗಳನ್ನು ಮಾಡಿ ಗೌರವಿಸಬೇಕೆಂಬ ಅವರ ಆಸೆಯನ್ನೂ, ನಾವು ಆ ಶಿಲ್ಪಗಳಲ್ಲಿ ನೋಡಬಹುದು. 'ಸಾಂಚಿ ತೋಪ್' ನ ಎದುರಿಗೆ ನಿಂತಿರುವ ಮಹಾದ್ವಾರವು ಅವುಗಳಲ್ಲೆಲ್ಲ ಅತ್ಯಂತ ಪ್ರಸಿದ್ಧವಾದುದು. ಅ ದ ರ ನಿ ರ್ಮಾ ಣ ಕೌ ಶ ಲ ವೂ ಕೆತ್ತನೆಯ ಕೆಲಸವೂ ಅದ್ಭುತವಾದುದು. ಅದರ ಕಲೆಯು ಒರಟು ಒರಟಾಗಿಯೇ ಇದೆ. ಆದರೆ ಅದರಲ್ಲಿ ಜೀವಶಕ್ತಿ ತುಂಬಿ ಹರಿಯುತ್ತಿದೆ. ಅಲಹಾಬಾದಿನ ದಕ್ಷಿಣಕ್ಕೆ ಇರುವ ಬರಹತ್ ತೋಪ್ ಮತ್ತೊಂದು ಉತ್ಕೃಷ್ಟವಾದ ಸ್ಮಾರಕವಾಗಿದೆ. ಇಲ್ಲಿ ಹಿಂದೂ ದೇಶದ ಇತಿಹಾಸದ ಸಂಗತಿಗಳೂ ಜನಜೀವನ ಚಿತ್ರಗಳೂ ಅತ್ಯದ್ಭುತವಾಗಿ ಕೆತ್ತನೆಯಾಗಿವೆ. ಆ ಚಿತ್ರಗಳ ಉದಾಹರಣೆಯನ್ನು ನಾಣ್ಯದ ಮೇಲೂ ಕಾಣಬಹುದು. ಅವುಗಳಲ್ಲಿ ಕಾಣುವ ಭಾರತೀಯನು ಧೀರನೂ ಸುಂದರನೂ ಯೋಗ್ಯತೆಯುಳ್ಳವನೂ ಆಗಿದ್ದಾನೆ. ಸ್ವಲ್ಪ ಒರಟಾದರೂ ಬಹಳ ಸುಂದರವಾಗಿರುವ ಒಂದು ಕೆತ್ತನೆಯಲ್ಲಿ ಬುದ್ಧಬಿಕ್ಷುಗಳಿಗೆ ಜೇತವನವನ್ನು ದಾನವಾಗಿ ಕೊಟ್ಟುದು ಚಿತ್ರಿತವಾಗಿದೆ. ಒಂದು ಕಡೆ ಬಿಕ್ಷುಗಳಿಗೆ ಬೇಕಾದ ಗುಡಿಸಲುಗಳಿವೆ. ಮಧ್ಯೆ ದಾತನಾದ ಅನಾತ ಪಿಂಡಕನು ಕೈಯ್ಯಲ್ಲಿ ದಾನೋದಕವನ್ನು ಹಿಡಿದುಕೊಂಡು ನಿಂತಿದ್ದಾನೆ. ಪ್ರತಿಯೊಂದು ವಿವರಣೆಯೂ ಸ್ಪಷ್ಟವೂ ಸೂಕ್ಷ್ಮವೂ ಸ್ವಜವೂ ಆಗಿದೆ. ಕೃತಕವೂ ಸುಮ್ಮನೆ ಪದ್ಧತಿಗನುಸಾರವಾಗಿ ಔಪಚಾರಿಕವೂ ಆದುದು ಯಾವುದೂ ಇಲ್ಲ.

ಬೌದ್ಧ ಕಲೆಯ ಬೇರೆ ಬೇರೆ ಮುಖಗಳು, ಅನಂತರದ ಅವುಗಳ ಬೆಳವಣಿಗೆ, ಆ ಕಲೆಯ ಬೆಡಗು ಹೇಗೆ ದೇಶದಿಂದ ದೇಶಕ್ಕೆ ಹೋಗಿ ಎಲ್ಲಾ ಕಡೆಯೂ ತನ್ನ ವೈಶಿಷ್ಟ್ಯವನ್ನು ಸ್ಥಾಪಿಸಿ ಸಿಲೋನ್ ಜಪಾನುಗಳಲ್ಲಿ ಮೆರೆಯಿತು. ಜಪಾನರ ಕಲೆಯೂ ಜಪಾನರ ಮೊದಲ ವೈಭವವೂ ಹೇಗೆ ಬೌದ್ಧ ಸಂಪರ್ಕದಿಂದಲೇ ಜೀವಾಳವನ್ನು ಹೀರಿ ಪ್ರಾರಂಭವಾದುವು, ಅವುಗಳನ್ನೆಲ್ಲಾ ಇಲ್ಲಿ ಹೇಳಲು ಅವಕಾಶವಿಲ್ಲ. ಜಪಾನಿಗೆ ಭಾರತದಿಂದ ಎಷ್ಟು ಬೆಳಕು ಉಂಟಾಗಿದೆ ಎಂಬುದು ಇತಿಹಾಸದಿಂದ ಮಾತ್ರವೇ ಅಲ್ಲ, ಕಲೆಗಳ ವ್ಯಾಸಂಗದಿಂದಲೂ ಚೆನ್ನಾಗಿ ಗೊತ್ತಾಗುವುದು. ಜಪಾನು ತನ್ನ ಹೊಸ ಕಲೆಯ ಉತ್ಸಾಹ ಅನುಭವಗಳನ್ನು ಭಾರತಕ್ಕೆ ಹರಿಸಿ ಹಿಂದಲ ಋಣದಿಂದ ಮುಕ್ತವಾಗಬಹುದು. ಬಲ್ಲವರಾರು!

ಭಾರತದ ಕಲೆಯಲ್ಲಿ ಮತ್ತೊಂದು ಭಾಗವಿದೆ. ಇತಿಹಾಸಕಾರರ ಮತ್ತು ಕಲೋಪಾಸಕರ ದೃಷ್ಟಿ ಆ ಕಡೆ ಹೋಗಿರುವುದಿಲ್ಲ. ಅದೇ ಬೌದ್ಧಯುಗದ ನಂತರದ ಹಿಂದೂ ಶಿಲ್ಪಕಲೆ. ವಿನಸೆಂಟ್ ಸ್ಮಿತ್‌ರು ತಮ್ಮ ಹಿಂದೂ ದೇಶದ ಇತಿಹಾಸದ ಒಂದು ಅಧ್ಯಾಯದ ಕೊನೆಯಲ್ಲಿ ಹೀಗೆ ಹೇಳುತ್ತಾರೆ:

"ಹಿಂದೂ ದೇಶವು ೫೨೮ ರಲ್ಲಿ ಮಿಹಿರಗುಲನ ಸೋಲಿನ ನಂತರ, ಘಜನಿ ಮುಹಮ್ಮದನು ೧೧ನೇ ಶತಮಾನದಲ್ಲಿ ಲೂಟಿಗೆ ಪ್ರಾರಂಭಿಸುವವರೆಗೆ, ಸುಮಾರು ೫೦೦ ವರುಷಗಳ ಕಾಲ ಪರರ ಕೈಗೆ ಸಿಕ್ಕದೆ ಸ್ವತಂತ್ರವಾಗಿತ್ತು. ಆಗ ಅದು ಬೇಕಾದಂತೆ ತನ್ನ ಏಳಿಗೆಯನ್ನು ಸಾಧಿಸಿಕೊಳ್ಳಬಹುದಾಗಿದ್ದಿತು. ಆದರೆ ಏನನ್ನೂ ಸಾಧಿಸಲಿಲ್ಲ. ಒಟ್ಟಿನಲ್ಲಿ ಈ ೫೦೦ ವರುಷಗಳ ಇತಿಹಾಸವೂ ರಾಜ್ಯ ಪದ್ಧತಿ, ಸಾಹಿತ್ಯ ಧರ್ಮ ಮತ್ತು ಕಲೆಯ ಗೋಳಿನ ಕತೆ. ದೇವಸ್ಥಾನಗಳು ಮಾತ್ರ ಮೇಲಿನ ವಾಕ್ಯಕ್ಕೆ ಅಪವಾದವಾಗಿವೆ."

ಇಲ್ಲಿಂದ ಮುಂದೆ ವಿನಸೆಂಟ್ ಸ್ಮಿತ್‌ರು, ಹಿಂದೂದೇಶವು ಆ ೫೦೦ ವರುಷಗಳ ಕಾಲ ತನ್ನ ರಾಜ್ಯವನ್ನು ತಾನು ಆಳಿಕೊಳ್ಳಲಾರದುದಾದುದರಿಂದ ಮುಂದೆಯೂ ಅದಕ್ಕೆ ಆ ಯೋಗ್ಯತೆಯಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ. ಅದು ಅವರ ಅಭಿಪ್ರಾಯ! ಒಂದು ಸಾವಿರ ವರುಷ ಸ್ವರಾಜ್ಯವನ್ನು ಅನುಭವಿಸಿದ ಬೌದ್ಧಯುಗದ ಹಿಂದೂದೇಶವೇ, ಇತಿಹಾಸವನ್ನು ಹೀಗೆ ತಪ್ಪು ತಪ್ಪಾಗಿ ಓದುವವರಿಗೆ ಉಪಾಧ್ಯಾಯ. ಆದರೆ ಹಿಂದೂದೇಶದಲ್ಲಿ, ಕ್ರಿ. ಶ.

೫೦೮ರಿಂದ ೧೧ನೇ ಶತಮಾನದವರೆಗೆ ಅವನತಿಯು ಕಾಲವೆಂಬುದು ನಿಶ್ಚಯ. ಆದರೆ ದೇವಾಲಯದ ಶಿಲ್ಪಕಲೆಯು ಮಾತ್ರ ಇದಕ್ಕೆ ಅಪವಾದವಾಗಿದ್ದಿತೆಂದರೆ ಅರ್ಥವೇನು? ಇಂದಿಗೂ, ಜಗತ್ತಿಗೇ ಆಶ್ಚರ್ಯಗಳಾಗಿರುವ ದೇವಾಲಯು ಗಳನ್ನು ಕಟ್ಟಿದ ಜನರು ನಿಜವಾಗಿಯೂ ರಾಷ್ಟ್ರಜೀವನದ ಅವನತಿಯು ಕಾಲ ದವರೆ? ಇಂತಹ ಕಲಾಕೃತಿಗಳು ಉಂಟಾಗಬೇಕಾದರೆ, ಯಾವುವೋ ಉದಾತ್ತಗಳಾದ ಧ್ಯೇಯಗಳೂ ಸ್ಫೂರ್ತಿಗಳೂ ಇದ್ದಿರಬೇಕಲ್ಲವೆ? ಇದಕ್ಕೆ ನನಗೆ ತೋರುವ ಉತ್ತರ ಇದು. ಇಲ್ಲಿ, ಹಿಂದೂದೇಶದಲ್ಲಿಯೂ ಕೂಡ, ಒಂದು ಯುಗದ ರಾಷ್ಟ್ರಜೀವನ ವೈಭವದ ತುದಿಯನ್ನು ಮುಟ್ಟಿ ಇಳಿತರವಾಗಲು ಪ್ರಾರಂಭಿಸಿದಾಗ, ಭಾರತದ ಕಲೆಯು ತನ್ನ ಸ್ವಾಭಾವಿಕವಾದ ಪೂರ್ಣತೆಯನ್ನು ಹೊಂದಿತು. ಮುಸಲ್ಮಾನರು ಹಿಂದೂದೇಶವನ್ನು ಜಯಿಸಿ ಆಕ್ರಮಿಸಿದ ನಂತರವೂ ಬಹುಕಾಲದವರೆಗೆ ಹಿಂದೂ ಕಲೆಯೂ ಪದ್ಧತಿಗಳೂ ಮುಸಲ್ಮಾನ ಕಲೆಯೊಂದಿಗೆ ಸೇರಿಕೊಂಡು ಹೋಗುತ್ತಿರುವುದು ನಮಗೆ ಗೋಚರವಾಗುವುದು. ಈ ಉತ್ತರವು ನಿಜವಾಗುವುದಾದರೆ, ಇಂಗ್ಲೆಂಡ್ ಮತ್ತು ಇಟಲಿ ಗಳಂತೆ ಇಲ್ಲಿಯೂ ರಾಷ್ಟ್ರಜೀವನದ ಅವನತಿಯಲ್ಲಿ ಕಲೆಯು ಪೂರ್ಣತೆಯನ್ನು ಹೊಂದಿತೆಂಬುದಕ್ಕೆ ನಿದರ್ಶನಗಳು ದೊರೆತಂತಾಗುತ್ತವೆ. ಎಲ್ಲಾ ದೇಶ ಗಳಲ್ಲಿಯೂ ಹೀಗೆಯೇ ನಡೆದಿದೆ.

“ಒಂದು ಸಲ ಡಿಲ್ಲಿಯಲ್ಲಿ ಲಾಹೋರಿನ ಜಡ್ಜಿಗಳಾದ ಪಿ.ಸಿ. ಚಟ್ಟಾರ್ಜಿ ಗಳನ್ನು ಸ್ವಾಗತಿಸಲು ಅಲ್ಲಿಯ ಬಂಗಾಳಿಗಳೆಲ್ಲಾ ಸೇರಿದ್ದರು. ಸಭಾ ಭವನ ಕಿಕ್ಕಿರಿದು ತುಂಬಿದ್ದಿತು. ನಾವು ಅಲ್ಲಿ ಅನೇಕ ಗಂಟೆಗಳ ಕಾಲ ಒಂದೇ ಸಮನಾಗಿ ಕೇಳಿದುದು, ಪದ್ಧತಿಪ್ರಕಾರದ ಬಿನ್ನವತ್ತಲೆಗಳೂ ಅವಕ್ಕೆ ಪ್ರತ್ಯುತ್ತರಗಳೂ, ಅಲ್ಲ. ಎಚ್ಚೆತ್ತ ಭಾರತದ ಚಿನ್ಹೆಯಾದ ಬಂಗಾಳದ ಬಗೆ ಬಗೆಯ ರಾಷ್ಟ್ರಗೀತೆಗಳು ಮತ್ತು ಕವಿತೆಗಳು. ಆ ಕವಿಗಳಲ್ಲಿ ಗುಮಾಸ್ತರೂ ಕೂಲಿಗಳೂ ಬಡ ಉಪಾಧ್ಯಾಯರೂ, ನಿರುದ್ಯೋಗಿಗಳೂ ಎಲ್ಲರೂ ಇದ್ದರು. ಅವರೆಲ್ಲಾ, ದೊಡ್ಡ ದೊಡ್ಡ, ವಿಶ್ವವಿದ್ಯಾಲಯದ ಅಧ್ಯಾಪಕರು, ಲಾಯರು, ಡಾಕ್ಟರುಗಳೊಂದಿಗೆ, ದೇಶಪ್ರೇಮದಲ್ಲಿ ಒಂದಾಗಿ ಕೂಡಿದ್ದರು. ಆ ಕವಿತೆ ಗಳ ಮತ್ತು ಗೀತೆಗಳ ಗಾನವು ನನ್ನ ಹೃದಯವನ್ನು ಹೊಕ್ಕಿತು. ಬಂಗಾಳ ವನ್ನು ಬಿಟ್ಟು ಡಿಲ್ಲಿಯಲ್ಲಿ ಸೇರಿದ್ದರೂ, ಅಲ್ಲಿ ತಮ್ಮ ಭಾಷೆಯನ್ನು ಬೆಳೆಸಿಕೊಂಡು

ಕಿವಿಗೆ ಎಲ್ಲಾ ಧ್ವನಿಗಳಿಗಿಂತಲೂ ಬಂಗಾಳಿ ಧ್ವನಿಯೇ ಉತ್ತಮವೂ ಇಂಪೂ ಎಂದು ಹೇಳುತ್ತಿದ್ದ ಅವರ ದೇಶಪ್ರೇಮವನ್ನು ನೋಡಿ ನನಗೆ ಆನಂದವಾಯಿತು. ನಾನು ಆ ಗೀತೆಗಳನ್ನು ಕೇಳುತ್ತಾ ಕುಳಿತಿದ್ದಾಗ, ಆಗ ತಾನೆ ಓದಿದ್ದ ಕಲಕತ್ತಾ ಜೀವನದ ಒಂದು ಇತಿಹಾಸವು ನನ್ನ ಮನಸ್ಸಿಗೆ ಬಂದಿತು. ಆ ಇತಿಹಾಸದಲ್ಲಿ ಬಂಗಾಳಕ್ಕೆ ಇಂಗ್ಲಿಷ್ ಸನ್ನಿಯು ಪ್ರಾಪ್ತವಾದಾಗ ಹೇಗೆ ಯಾರ ಬಾಯಲ್ಲಿ ನೋಡಿದರೂ ಇಂಗ್ಲಿಷ್ ಮಾತೇ ಮಾತಾಗಿ ಜನರು ಹೇಗೆ ಯಾವ ಉದಾಹರಣೆಯನ್ನೂ ಇಂಗ್ಲಿಷಿನಿಂದಲೇ ತೆಗೆದುಕೊಳ್ಳುತ್ತಿದ್ದರೆಂದೂ, ಯೂರೋಪಿನಲ್ಲಿ ಪ್ರಸಿದ್ಧಿ ಸಂಪಾದಿಸುವುದೇ ಹೇಗೆ ಇಂಡಿಯಾದವರ ಗುರಿಯೂ ಆಗಿದ್ದಿತೆಂದೂ ಓದಿದ್ದೆನು. ಈಗ ಎಂತಹ ಬದಲಾವಣೆ! ಇಂಗ್ಲಿಷು ಬರದು ಎಂದಲ್ಲ. ಆದರೆ ಪ್ರೇಮವೆಲ್ಲಾ ದೇಶಕ್ಕೂ ಮತ್ತು ದೇಶಭಾಷೆಗೂ. ಇದರಿಂದ ಬಂಗಾಳದ ಬಣ್ಣವೇ ಬದಲಾಯಿಸಿದೆ. ಇಂಗ್ಲಿಷಿನ ದಾರಿಯನ್ನು ಅನುಸರಿಸಿ ಅದರ ಸ್ಫೂರ್ತಿಯಿಂದ ಇದು ಬೆಳೆದಿದೆ ಎನ್ನುವವರಿಂದ ಈ ಕೆಲಸ ನಡೆದಿಲ್ಲ. ಈ ತೇಜಸ್ಸಿಗೆ ಹೊರಗಿನಿಂದ ಬಂದ ಕೃತಕ ಶಕ್ತಿ ಕಾರಣವಲ್ಲ. ಜನರನ್ನು ಮುಟ್ಟದ ಸಾವಿರಾರು ಜನರ ಯಾವ ಸೃಷ್ಟಿಯಿಂದಲೂ ಇದು ನಡೆಯುವುದಿಲ್ಲ. ಇದು ಈ ದೇಶಕ್ಕೆ ಸ್ವಾಭಾವಿಕವಾದ ಒಂದು ಶಕ್ತಿಯ ಆವಿರ್ಭಾವದಿಂದ ಮಾತ್ರ ಉಂಟಾಗಿದೆ. ಬಂಗಾಳಾ ಒಂದೇ ಅಲ್ಲ. ಹಿಂದೂ ದೇಶದ ಇತರ ಎಲ್ಲಾ ಕಡೆಗಳಲ್ಲೂ ಹೀಗೆಯೇ ಆಗಿರುವುದರಲ್ಲಿ ಸಂದೇಹವಿಲ್ಲ. ಎಲ್ಲಾ ಕಡೆಯೂ ಹೊಸ ಸೃಷ್ಟಿಯ ಹೊಸ ಉತ್ಸಾಹದ ಸ್ಫೂರ್ತಿ ಉಂಟಾಗಿದೆ. ಈ ಸೃಷ್ಟಿಯ ಆನಂದದಲ್ಲಿ ನೋವೂ ಸೇರಿರಬಹುದು. ಆದರೆ ಜೀವನದಲ್ಲಿ ಗಾನವೂ ಜಯದ ಪುಷ್ಪಾಹಾರದ ನೆಚ್ಚೂ ಇರುವುದರಿಂದ ಇಂದಿನ ಯುವಕರು ಈ ನೋವನ್ನು ಆನಂದದಿಂದಲೇ ಅನುಭವಿಸುವರು.”

ವಿದ್ಯಾರ್ಥಿಗಳಿಗೆ ನಾನು ಹೇಳುವುದು ಇಷ್ಟು : ನಿಮಗೆ ಬರೆಯುವ ಶಕ್ತಿ ಇದ್ದರೆ ನಿಮ್ಮ ದೇಶದ ರಾಷ್ಟ್ರಜೀವನವನ್ನು ಕುರಿತು ನಿಮ್ಮ ಭಾಷೆಯಲ್ಲಿ ಬರೆಯಿರಿ. ಸಾಹಿತ್ಯದ ಮೂಲಕ ಹೊಸಭಾವಗಳನ್ನು ಪ್ರಕಟಿಸುವ ಆವಶ್ಯಕತೆ ಹೆಚ್ಚಾಗಿದೆ. ಆದರೆ ಅರ್ಹರಾದ ಲೇಖಕರು ತಕ್ಕಷ್ಟು ಮಂದಿ ಇಲ್ಲ. ನಿಮ್ಮ ರಾಷ್ಟ್ರೀಯ ಸಮಸ್ಯೆಗಳು ನಿಮ್ಮ ದೇಶಕ್ಕೆ ಅನ್ವಯಿಸುವಂತೆ, ಇತರ ದೇಶದವುಗಳೊಂದಿಗೆ ಹೋಲಿಸಿ ಯೋಚನೆ ಮಾಡಿ, ಅವುಗಳನ್ನೆಲ್ಲ ಎಲ್ಲರಿಗೂ

ತಿಳಿಯುವಂತೆ ನಿಮ್ಮ ಭಾಷೆಯಲ್ಲಿ ಬರೆಯಿರಿ. ಸಾಹಿತ್ಯದಿಂದ ರಾಷ್ಟ್ರಜೀವನಕ್ಕೆ ಆಗಬೇಕಾದ ಉಪಯೋಗಗಳನ್ನು ಕಂಡುಹಿಡಿದು ಅವುಗಳನ್ನು ಕಾವ್ಯಗಳಲ್ಲೂ ಲೇಖನಗಳಲ್ಲೂ ಪ್ರಕಟಿಸುವ ಸಮಸ್ಯೆಗಳು ಕಠಿಣವಾಗಿವೆ. ಚೆನ್ನಾಗಿ ಯೋಚನೆ ಮಾಡುವ ಅನೇಕ ಆಲೋಚನಾಪರರಿಂದ ಮಾತ್ರ ಇವುಗಳನ್ನು ಬಗೆಹರಿಸಲು ಸಾಧ್ಯ. ನಿಮ್ಮ ಆಲೋಚನೆಗಳನ್ನು ಕಾವ್ಯ ಮತ್ತು ಕಲೆಗಳ ಸುಂದರರೂಪದಲ್ಲಿ ಪ್ರಕಟಿಸುವ ಶಕ್ತಿಯೂ ಪುಣ್ಯವೂ ನಿಮಗೆ ಉಂಟಾದರೆ ನಮ್ಮ ದೇಶಕ್ಕೆ ನಿಮ್ಮಿಂದ ಲಾಭವು ಇನ್ನೂ ಹೆಚ್ಚುವುದು; ಆದರೆ ಅದು ಎಲ್ಲರಿಗೂ ಲಭ್ಯವಾದ ಶಕ್ತಿಯಲ್ಲ. ಆದರೆ ಪ್ರತಿ ಭಾರತೀಯನೂ ಅವನು ಎಲ್ಲಿದ್ದರೂ ಸರಿಯೆ ಸುಂದರವಾದುದನ್ನೂ ರಾಷ್ಟ್ರೀಯವಾದುದನ್ನೂ ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳಲಿ. ಉದಾಹರಣೆಗೆ ಈ ದೇಶದ ಮನೆಗಳಲ್ಲಿ ಹಿಂದಲ ಕಲೆಯ ಪುನರುಜ್ಜೀವನವಾಗಲೇ ಇಲ್ಲ. ಮನೆ ಅಂದವಾಗುವುದು ಪಾಶ್ಚಾತ್ಯದ ಅನುಕರಣ ಮಾತ್ರದಿಂದಲೇ ಅಲ್ಲ. ಈ ದೇಶದ ಸುಂದರವಾದುದನ್ನು ಅನುಭವಿಸುವ ಶಕ್ತಿಯನ್ನು ಕಳೆದುಕೊಂಡು ಮನೆಗಳು ಕುರೂಪವಾಗಿವೆ. ಈ ದೇಶದ ಕಲಾವಸ್ತುಗಳನ್ನು ಆರಿಸುವುದರಲ್ಲಿ ನಮ್ಮ ಅಭಿರುಚಿ ಕೀಳಾಗಿದೆ. ಇದು ಸಂಸಾರಜೀವನದ ಅವನತಿಯ ಕುರುಹು. ಅನೇಕ ಮನೆಗಳಲ್ಲಿ ಸೌಂದರ್ಯ ಮತ್ತು ಸರಳತೆಯ ಕಡೆಗೆ ಲಕ್ಷ್ಯವಿಡದೆ ಅಲ್ಪವೂ ಅಗ್ಗವೂ ಆದ ಕಲಾಕೃತಿಗಳನ್ನು ತುಂಬಿರುತ್ತಾರೆ. ಅಲ್ಪವೂ ನಿಸ್ಸಾರವೂ ತಿರುಳಿಲ್ಲದುದೂ ಆದ ಅನೇಕ ಆಧುನಿಕ ಪುಸ್ತಕಗಳು ಜನರ ಕಪಾಟುಗಳನ್ನೆಲ್ಲಾ ತುಂಬಿರುತ್ತವೆ. ಅವುಗಳ ಸ್ಥಳದಲ್ಲಿ ಜನರು ಪ್ರಾಚೀನ ಮಹಾಕಾವ್ಯಗಳನ್ನಾದರೂ ಸಂಗ್ರಹಿಸಬಹುದು. ಈ ದೇಶದ ಯುವಕ–ಯುವತಿಯರು ಭಾರತದ ಸ್ವಾಭಾವಿಕವಾದ ಮುಂದಾಳುಗಳು. ಹೊಸ ಜೀವನದ ಭಾರತವನ್ನು ಸಾಗಿಸಿಕೊಂಡು ಹೋಗುವುದು ಅವರಿಗೆ ಸೇರಿದುದು. ಆಧುನಿಕ ಜೀವನದ ವೇಗದಲ್ಲಿ ಕಲೆಯೂ ಸಾಹಿತ್ಯವೂ ತಿರಸ್ಕಾರಕ್ಕೆ ಅರ್ಹವಾಗಬಾರದು. ರಾಷ್ಟ್ರದ ಬೆಳವಣಿಗೆಯಲ್ಲಿ ಇವು ಬಲವಾದ ಶಕ್ತಿಗಳು ಎಂದು ಅರಿತು ಆ ಮೂಲಕ ನಮ್ಮ ದೇಶದ ಯುವಕರು ಮಾತೃಭೂಮಿಯ ಸೇವೆಗೆ ಆರಂಭಮಾಡುವಂತೆ ನಾನು ಅವರನ್ನು ಪ್ರೋತ್ಸಾಹಿಸಿದ್ದೇ ಆದರೆ ನನ್ನ ಈ ಬರಹವು ಸಾರ್ಥಕ.

ಶ್ರೀನಿವಾಸರ ಸಣ್ಣ ಕತೆಗಳು

ಕನ್ನಡ ಸಾಹಿತ್ಯದಲ್ಲಿ ಮೊದಲು ಪ್ರಸಿದ್ಧಿಗೆ ಬಂದ ಸಣ್ಣ ಕತೆಗಳು ಶ್ರೀಮಾನ್ ಶ್ರೀನಿವಾಸರು ಬರೆದವು. ಶ್ರೀನಿವಾಸರು ಕನ್ನಡ ಕತೆಗಳಿಗೆ ಮೂಲಪುರುಷರೇ ಅಲ್ಲವೇ ಎಂಬ ವಾದಕ್ಕೆ ನಾನು ಈಗ ಹೊರಟಿಲ್ಲ. ಒಬ್ಬ ಬರಹಗಾರನು ಒಂದು ಬಗೆಯ ಸಾಹಿತ್ಯಕ್ಕೆ ಮೂಲಪುರುಷನಾಗಲಿ ಅಥವ ಆಗದೆ ಇರಲಿ ಅದು ನಮಗೆ ಮುಖ್ಯವಲ್ಲ. ಆದರೆ ಯಾರು ಆ ಸಾಹಿತ್ಯ ಭಾಗ ವನ್ನು ತಾವು ಅದರ ಮೂಲಪುರುಷರಲ್ಲದಿದ್ದರೂ ಜನರಿಗೆ ಮಾನ್ಯವಾಗುವಂತೆ, ಭಾಷಾ ದೇವಿಗೆ ಭೂಷಣವಾಗುವಂತೆ ಜಗತ್ತಿನ ಇತರ ಸಾಹಿತ್ಯಗಳ ಶ್ರೇಷ್ಠ ಕೃತಿಗಳೊಂದಿಗೆ ಸರಿದೂಗುವಂತೆ ಸೃಷ್ಟಿಸುತ್ತಾರೊ ಅವರೇ ಆ ಸಾಹಿತ್ಯ ಭಾಗಕ್ಕೆ ಮೂಲಪುರುಷರು. ಕಾಳಿದಾಸ ಕವಿಯು ಸಂಸ್ಕೃತ ಸಾಹಿತ್ಯರತ್ನ ವಾಗಿರುವುದಕ್ಕೆ ಕಾರಣ, ಅವನಿಗಿಂತ ಹಿಂದೆ ಸಂಸ್ಕೃತ ಬರೆಯ ಬಲ್ಲ ಬೇರೆ ಕವಿಗಳಿರಲಿಲ್ಲವೆಂದಲ್ಲ. ಸಂಸ್ಕೃತ ಸಾಹಿತ್ಯವು ಜಗತ್ಪೂಜ್ಯವಾದುದು ಅವನ ಕೃತಿಯಿಂದ, ಸೃಷ್ಟಿಯಿಂದ, ಎಂಬ ಕಾರಣದಿಂದ, ಯಾವ ಕವಿಯು ಒಂದು ಬಗೆಯ ಸಾಹಿತ್ಯಕ್ಕೆ (ಸಾಹಿತ್ಯದ ಒಂದು ಭಾಗಕ್ಕೆ) ಶಕ್ತಿಯನ್ನೂ ತೇಜಸನ್ನೂ ನವಿರನ್ನೂ ಆರ್ದ್ರತೆಯನ್ನೂ ವೈಶಾಲ್ಯಭಾವವನ್ನೂ ಉಂಟುಮಾಡಿ ಆ ಸಾಹಿತ್ಯಕ್ಕೆ ಜೀವ ಕಳೆಯನ್ನು ತುಂಬುತ್ತಾನೋ ಅವನೇ ಅದಕ್ಕೆ ಜನಕ. ಈ ಕಾರಣಗಳಿಂದ ಸಣ್ಣ ಕಥೆಗಳ ಬೆಳವಣಿಗೆಯು ಕನ್ನಡ ಸಾಹಿತ್ಯದಲ್ಲಿ ಶ್ರೀಮಾನ್ ಶ್ರೀನಿವಾಸರು ಈಗ ಸುಮಾರು ೧೫ ವರುಷಗಳ ಹಿಂದೆ ಬರೆದು ಪ್ರಕಟಿಸಿದ ಕೆಲವು ಸಣ್ಣಕತೆಗಳು ಎಂಬ ಕಥಾಸಂಗ್ರಹದಿಂದ ಆರಂಭವಾಯಿತೆಂದು ಹೇಳ ಬಹುದು.

ಉತ್ತಮವಾದ ಸಣ್ಣ ಕತೆಗಾರನನ್ನು ಸ್ವಲ್ಪ ಕೆದಕಿ ನೋಡಿದರೆ ಅವನು ಕವಿ ಎಂಬುದು ಗೊತ್ತಾಗುತ್ತದೆ. ನೂರು ಕಾದಂಬರಿಗಳನ್ನು ಬರೆದವನು ಕವಿ ಯಾಗದೆ ಇರಬಹುದು. ಆದರೆ ಲೇಖಕನು ಕವಿಯಾದ ಹೊರತು ಕತೆಗಾರ ನಾಗಲಾರನು. ಶ್ರೀಮಾನ್ ಶ್ರೀನಿವಾಸರು ಇಲ್ಲಿಯವರೆಗೆ ಸುಮಾರು ೪೦ ಕತೆಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಹೊಸಬಗೆಯ ಬೆಳಕನ್ನೂ

ಶಕ್ತಿಯನ್ನೂ ತೇಜಸ್ಸನ್ನೂ ಉಂಟುಮಾಡಿರುವ ಅವರ ಕತೆಗಳನ್ನು ಕುರಿತು ವಿಸ್ತಾರವಾಗಿ ವಿಮರ್ಶಿಸಲು ಇಲ್ಲಿ ನನಗೆ ಅವಕಾಶವಿಲ್ಲ. ಶ್ರೀನಿವಾಸರ ಕತೆಗಳಲ್ಲಿ ಕಾಣುವ ಜೀವನದ ಅನುಭವ, ವೈವಿಧ್ಯ, ರಸಿಕತೆ, ಹಾಸ್ಯ, ಶಾಂತಿ ಯಾವ ಕಥೆಯನ್ನು ಓದಿದರೂ ಒಟ್ಟಿನಲ್ಲಿ ಮನಸ್ಸಿನ ಮೇಲೆ ಆಗುವ ಒಂದು ಬಗೆಯ ಉಚ್ಚ ಆದರ್ಶದ ಮತ್ತು ಮುಂದಲ ಶುಭದ ಸೂಚನೆ ಇವುಗಳನ್ನೆಲ್ಲ ಕುರಿತು ಮಾತನಾಡುವ ಹೊತ್ತನ್ನು ಇಲ್ಲಿ ನನಗೆ ಕೊಟ್ಟಿಲ್ಲ. ಶ್ರೀನಿವಾಸರ ಕತೆಗಳಲ್ಲಿ ದಪ್ಪದಪ್ಪವಾಗಿ ಕಾಣುವ ತಿರುಳೇನು? ಅವರು ಕತೆಗಳನ್ನು ಹೇಳುವ ಬಗೆಯಾವುದು? ಅವರ ಮಾತು ಯಾವ ತರಹ, ಆ ಮಾತುಗಳ ಹಿಂದಲ ಕವಿಯ ಸಂಸ್ಕಾರವೇನು? ಅವರ ಕತೆಗಳು ಕನ್ನಡ ನಾಡಿಗೆ ಮಾದರಿಯಾಗಿ, ಕನ್ನಡ ಬರಹಗಾರರಿಗೆ ಉಸಿರಾಗಿ, ಇಂಗ್ಲೀಷು ಮರಾಠಿ ಮುಂತಾದ ಭಾಷೆಗಳಿಗೆ ತರ್ಜುಮೆಯಾಗಿ ಆ ವಾಚಕರ ಮೆಚ್ಚುಕೆಗೂ ಪಾತ್ರವಾಗಲು ಕಾರಣಗಳಾವುವು ಎಂಬುದನ್ನು ಬಹು ಸಂಕ್ಷೇಪವಾಗಿ ಸೂಚಿಸುತ್ತೇನೆ.

ಶ್ರೀನಿವಾಸರು ಬರೆದಿರುವ ಕತೆಗಳಲ್ಲಿ ಬಹು ಭಾಗದವು ನಮ್ಮ ಜನರಿಗೆ, ನಮ್ಮ ಸಂಸಾರಗಳಿಗೆ ಸಂಬಂಧಪಟ್ಟವು. ಅವರು ಮುಖ್ಯವಾಗಿ ಪ್ರತಿಪಾದಿಸುವ ರಸ ಶೃಂಗಾರ; ಹೇಳುವ ಕ್ರಮ ಮೊದಲಿನಿಂದ ಕೊನೆಯವರೆಗೆ ನೇರವಾಗಿ; ಮಧುರವಾಗಿ ನಯವಾದ ಮಾತು ಮತ್ತು ಸಣ್ಣ ಸಣ್ಣ ವಾಕ್ಯಗಳು; ವಾಕ್ಯಗಳ ಜತೆಯಲ್ಲಿ ಸೇರಿಕೊಂಡು ಇರುವ ಸಾಮ್ಯಗಳು; ಕತೆಗಳನ್ನೆಲ್ಲಾ ಮೇಲಕ್ಕೆ ಕಾಣದಿದ್ದರೂ ಹೂವಿನ ಪರಿಮಳದಂತೆ ಹೊಂದಿಕೊಂಡು ಆವರಿಸಿರುವ ಆದರ್ಶ; ಓದಿದ ಮೇಲೆ ಉಂಟಾಗುವುದು ಮುಂದಲ ಶುಭ ಮುಂದಲ ಒಳ್ಳೆಯದರಲ್ಲಿ ನಂಬಿಕೆ; ಸತ್ಯ ಸೌಂದರ್ಯ ಶಾಂತಿಗಳಿಗೇ ಎಂದೆಂದಿಗೂ ಜಯವೆಂಬ ಸಾತ್ವಿಕಭಾವನೆ, ಕಥಾವಸ್ತುವಿಗೂ, ಶೈಲಿಗೂ ಪಾತ್ರರಚನೆಗೂ, ಹೇಳುವ ಕ್ರಮಕ್ಕೂ ಅನ್ವಯಿಸುವ ಅಲೌಕಿಕವಾದ ಆನಂದ. ಇವು ಶ್ರೀನಿವಾಸರ ಸಣ್ಣ ಕತೆಗಳ ವೈಶಿಷ್ಟ್ಯಗಳು.

ಶ್ರೀನಿವಾಸರು ಒಂದುಸಲ 'Woman is man and woman put together' ಎಂಬುದಾಗಿ ಹೇಳಿದರು. ನಮ್ಮ ಮೇಷ್ಟರು ಎಂಬ ಕತೆಯಲ್ಲಿ ಪ್ರಾಯಶಃ ಮೇಷ್ಟರು ಇಲ್ಲದಿದ್ದರೂ ಕತೆ ನಡೆಯುತ್ತೆ. ಆದರೆ ಇನಸ್ಪೆಕ್ಟರ ಕೈಯಿಂದ ಬಲಿತ ಹುಡುಗಿ ಎನಿಸಿಕೊಂಡ ಮೇಷ್ಟರ ಹೆಂಡತಿ

ಇಲ್ಲದಿದ್ದರೆ ಕತೆ ನಡೆಯುವುದಿಲ್ಲ. ಮೇಷ್ಟರ ಹೆಂಡತಿಯ ವಿಷಯ ತಿಳಿದರೆ ಮೇಷ್ಟರ ವಿಷಯವೂ ತಿಳಿದಂತೆ ಆಗುತ್ತದೆ. ಮೇಷ್ಟರ ಹೆಂಡತಿ ಇಂಥವಳೆಂಬುದರಿಂದ ಅವಳ ಗಂಡ ಎಂಥವನೆಂದು ಧಾರಾಳವಾಗಿ ಊಹಿಸಬಹುದು. ಆದರೆ ಮೇಷ್ಟರ ವಿಷಯದಿಂದ ಮೇಷ್ಟರ ಹೆಂಡತಿಯನ್ನು ಅರಿಯುವುದು ಕಷ್ಟ. ಸ್ತ್ರೀಯ ಪ್ರಾಧಾನ್ಯವನ್ನು ಹೆಚ್ಚಿಸಿ ಆ ಮೂಲಕ ಪುರುಷನ ಪರಿಚಯ ಮಾಡಿಸುವುದು ಶ್ರೀನಿವಾಸರ ಮಾರ್ಗ. ಇದನ್ನು ಅವರ ಇತರ ಕತೆಗಳಲ್ಲೂ ನೋಡಬಹುದು. ಸ್ತ್ರೀಯು ತುಳಿಯಲ್ಪಟ್ಟವಳೆಂಬ ಕಾರಣದಿಂದಲೋ ಏನೋ ಅವರ ಆದರವು ಯಾವಾಗಲೂ ಅವರ ಕಡೆಗೇ ಇದೆ. ಅವಿವೇಕಿಯಾದ, ಧನಿಕರ ಮಗನಾದ, ತಾನೆ ಸುಂದರನೆಂದುಕೊಂಡಿದ್ದ ರಂಗಸ್ವಾಮಿಗೆ ತನ್ನ ಹೆಂಡತಿ ಸೀತೆ ತನಗೆ ಅರ್ಹಳಾಗಿ ಕಾಣಲಿಲ್ಲ. ಸ್ವಾಭಾವಿಕವಾಗಿ ನರಸಿಂಹಮೂರ್ತಿಯ ಹೆಂಡತಿ ಇಂದಿರಾದೇವಿ ತನ್ನ ಹೆಂಡತಿಯೊಂದಿಗೆ ತನ್ನನ್ನು ಕುರಿತು ಆಡಿದ ಮಾತುಗಳಿಗೆ 'ಕಾಮೀ ಸ್ವತಾಂ ಪಶ್ಯತಿ' ಎಂಬಂತೆ ತಪ್ಪು ಅರ್ಥಮಾಡಿಕೊಂಡನು. ಯಾವ ಮನುಷ್ಯನಿಗೂ, ಮತ್ತೊಬ್ಬನ ಸುಂದರಿಯಾದ ಹೆಂಡತಿಯನ್ನು ಕಂಡರೆ 'ಅವನು ಅವಳನ್ನು ಪ್ರೀತಿಸುವುದಿಲ್ಲ. ಅಯ್ಯೋ ನಾನು ಅವಳ ಗಂಡನಾಗಿದ್ದರೆ' ಎಂಬ ಭಾವ ಮೊದಲು ಬರುವುದು ಸ್ವಾಭಾವಿಕ ಅಥವಾ ಅದೊಂದು ಮಂಕು ಎಂದು ಬೇಕಾದರೂ ಹೇಳಬಹುದು. ಆದರೆ ಆ ಮಂಕು ಹರಿದಾಗ ಮಾತ್ರ ಅವನಿಗೆ ಚೆನ್ನಾಗಿ ಬುದ್ಧಿ ಬರುವುದು. ಈ ಕತೆಯಲ್ಲಿ ಶ್ರೀನಿವಾಸರು, ಮನುಷ್ಯ, ಸಣ್ಣ ವಿಷಯಕ್ಕೆ ಅಪಾರ್ಥವನ್ನು ಕಲ್ಪಿಸಿಕೊಂಡು ಹೇಗೆ ಗುಂಡಿ ಬೀಳುತ್ತಾನೆಂಬುದನ್ನು ಚೆನ್ನಾಗಿ ತೋರಿಸಿದ್ದಾರೆ. ಕೊನೆಯಲ್ಲಿ ಗಂಡನ ಸ್ನೇಹಿತನೆಂದು ಮನೆಗೆ ಬಂದವನಿಗಾಗಿ 'ಕಾಫಿ ಮಾಡಲೆ' ಎಂದು ಹೆಂಡತಿ ಕೇಳಿದರೆ ಅವಳಿಗೆ ತನ್ನಲ್ಲಿ ಪ್ರೇಮವಿದೆ ಎಂದು ರಂಗಸ್ವಾಮಿಯು ಭಾವಿಸುವುದೂ, ಇಂದಿರಾದೇವಿಯನ್ನು ಹಿಡಿದುಕೊಳ್ಳುವುದಕ್ಕೆ ಹೋಗಿ ತನ್ನಲ್ಲಿ ತನಗೇ ತಿರಸ್ಕಾರವುಂಟಾಗಿ 'ಸೀತೆಗೆ ಇದುವರೆಗೆ ತಕ್ಕ ಗಂಡನಾಗಿದ್ದೆ. ಇಂದು ಅಯೋಗ್ಯನಾದೆ, ಅವಳಂತಹ ಹುಡುಗಿಗೆ ನನ್ನಂತಹ ಪಾಪಿಯೇ ಯಜಮಾನನು?" ಎಂದು ಅಳುವುದೂ ಹೃದಯಂಗಮವಾಗಿ ವರ್ಣಿತವಾಗಿವೆ. ಈ ಕಥಾ ನಿರೂಪಣದಲ್ಲಿ ಶ್ರೀನಿವಾಸರು ಮನುಷ್ಯ ಸ್ವಭಾವದ ಸೂಕ್ಷ್ಮ ವ್ಯಾಪಾರವನ್ನು ಚೆನ್ನಾಗಿ ವಿವರಿಸಿ ತನ್ನ ಹೆಂಡತಿಯು ತನಗೆ ಅರ್ಹಳಲ್ಲವೆಂದಿ

ದ್ದವನು ಹೇಗೆ ತಾನು ಅವಳಿಗೆ ಅಯೋಗ್ಯನೆಂಬ ಭಾವಕ್ಕೆ ಸಂದನೆಂಬುದನ್ನು ತೋರಿಸಿದ್ದಾರೆ. ಸ್ತ್ರೀಯರಲ್ಲಿ ತಮಗಿರುವ ಈ ಸ್ವಾಭಾವಿಕವಾದ ಗೌರವ ದಿಂದ ಶ್ರೀನಿವಾಸರ ಶೃಂಗಾರ ಯಾವಾಗಲೂ ಹಿತವಾಗಿ ಮಿತವಾಗಿ ಗಂಭೀರ ವಾಗಿದೆ. ಶೃಂಗಾರವು ಹೆಚ್ಚಾದರೆ, ಅದು ಓದಿದನಂತರ ಟೊಳ್ಳಾಗುವುದೆಂ ಬುದು ಶ್ರೀನಿವಾಸರಿಗೆ ಗೊತ್ತು. ಶ್ರೀನಿವಾಸರು ಶೃಂಗಾರ ವರ್ಣನೆಯನ್ನು 'ಇನ್ನಷ್ಟು ಇವರು ವರ್ಣಿಸಬಾರದಾಗಿತ್ತೆ?' ಎಂಬ ಮಟ್ಟದಲ್ಲಿ ಇಟ್ಟಿರುತ್ತಾರೆ. ಶೃಂಗಾರದ ಪ್ರಾಮುಖ್ಯತೆ ಎಷ್ಟೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಇದನ್ನು ಇಂದಿರಾದೇವಿಯ ವರ್ಣನೆ, ಹಳೆಯ ಕತೆಯ ಸುಂದರಿಯ ವರ್ಣನೆ ಇವು ಗಳಲ್ಲಿ ಕಾಣಬಹುದು. "ಸ್ತ್ರೀ ಜನ್ಮ, ಹೀನವೆಂದು ಹೇಳುವೆವಾದರೂ ಸ್ತ್ರೀಯ ಆತ್ಮವು ಪುರುಷನ ಆತ್ಮಕ್ಕಿಂತ ಹೆಚ್ಚು ಸುಸಂಸ್ಕೃತವಾದುದೆಂಬು ದರಲ್ಲಿ ಸಂದೇಹವಿಲ್ಲ. ಉತ್ತಮವಾದುದನ್ನು ಕಂಡು ಉತ್ತಮವಲ್ಲದುದು ಅದರ ಕಡೆ ತಿರುಗುವುದು ಸ್ವಾಭಾವಿಕ; ಸೆಳೆಯುವುದೆಂದರೆ ಇದೇ ಅರ್ಥ. ಅಯ ಸ್ಕಾಂತ ಶಿಲೆಯನ್ನು ಕಂಡ ಕಬ್ಬಿಣವು ಅದರ ಕಡೆ ತಿರುಗುವುದು. ಸ್ತ್ರೀಯು ಆಯಸ್ಕಾಂತದಂತೆ. ಪುರುಷನು ಕಬ್ಬಿಣದಂತೆ. ಕಬ್ಬಿಣವು ದೋಷವುಳ್ಳದು ದಾದರೂ, ದೋಷವಿಲ್ಲದೆ ಬಹು ಶುದ್ಧವಾಗಿದ್ದರೂ, ಅಯಸ್ಕಾಂತದ ಕಡೆ ತಿರು ಗುವುದು. ಪುರುಷನು ಎಷ್ಟು ಶ್ರೇಷ್ಠನಾದರೂ ಸ್ತ್ರೀಯ ಕಡೆ ತಿರುಗುವನು."

ಬೀದಿಯಲ್ಲಿ ಹೋಗುವ ನಾರಿ ಎಂಬ ಕತೆಯಲ್ಲಿ ಶ್ರೀನಿವಾಸರು ಒಂದು ಸತ್ಯವನ್ನು ಪ್ರತಿಪಾದಿಸಿದ್ದಾರೆ. ಜನ ದೇಹದ ದೌರ್ಬಲ್ಯದಿಂದ ವ್ಯಭಿಚಾರಮಾಡು ತ್ತಾರೆ. ಅದರ ಫಲವಾಗಿ ಹುಟ್ಟಿದ ಮಕ್ಕಳನ್ನೂ ಸಹ ತಮ್ಮ ಮಕ್ಕಳೆಂದು ಕೊಳ್ಳುವುದಿಲ್ಲ. ತಮ್ಮ ಪಾಪದ ಫಲವನ್ನು ಮತ್ತೆ ಪಾಪ ಮಾಡಲು ಬಿಡು ತ್ತಾರೆ. 'ಹೋಗುವುದು ವೇಶ್ಯೆಯ ಮನೆಗೆ. ಮನೆಯಲ್ಲಿ ನನ್ನ ಹೆಂಡತಿ ಒಳ್ಳೆಯವಳು ನನ್ನ ಹೆಣ್ಣುಮಕ್ಕಳು ಸತ್ಯವಂತರು ಎಂಬ ಜಂಭ. ಬಾಯಲ್ಲಿ ಜಂಭ, ಮನಸ್ಸಿನಲ್ಲೂ ಜಂಭ. ಬಾಯಜಂಭ ಹಾಗಿರಲಿ. ನಾವು ಬದುಕು ವುದೇ ಬಾಯಜಂಭದಿಂದ. ಆ ಮನಸ್ಸಿನ ಜಂಭವೋ? ಅದೂ ಕೂಡ ನಮ್ಮ ಬದುಕಿಗೆ ಬೇಕಾಗಿದೆಯೇ? ಇಲ್ಲ. ಇದು ಮನುಷ್ಯನ ಅಜ್ಞಾನವೇ ಹೊರತು ಬೇರೆಯಲ್ಲ. ಮನೆಯ ಹೊರಗಡೆ ಇರುವ ಮಗಳು ವೇಶ್ಯೆಯಾದರೂ ಮನೆ ಯಲ್ಲಿರುವ ಮಗಳು ಸತ್ಯವಂತಳು ಎಂಬ ಈ ಜಂಭವೂ ಹುಚ್ಚು ಜಂಭ. ಆದರೆ

ಈ ಯೋಚನೆ ವೇಶ್ಯೆಯವಾಟಿಗೆ ಹೋಗುವವರಿಗೆ ತಿಳಿಯುವುದಿಲ್ಲವೆಲ್ಲಾ ಎಂಬುದೇ ಆ ಕತೆಯಲ್ಲಿ ಪ್ರತಿಪಾದಿಸಿರುವ ಸತ್ಯ. ಇಲ್ಲಿಯೂ ಸ್ತ್ರೀಯರ ವಿಷಯದಲ್ಲಿ ಶ್ರೀನಿವಾಸರ ಗೌರವ ಚೆನ್ನಾಗಿ ಕಾಣುತ್ತದೆ. 'ವೇಶ್ಯೆಯು ಹತ್ತಿರ ಬಂದುದನ್ನು ಕಂಡು ಶ್ರೀನಿವಾಸಯ್ಯನು ದೂರಸರಿದನು. ಸ್ತ್ರೀಯು ಅದನ್ನು ನೋಡಿ ಸ್ವಲ್ಪ ಅಸಮಾಧಾನದಲ್ಲಿ ಎದ್ದು 'ನಾನು ಪತಿತೆ, ತಾವು ನನ್ನನ್ನು ಮುಟ್ಟಲೂ ಬಾರದು' ಎಂದಳು. ಶ್ರೀನಿವಾಸಯ್ಯನು ಹತ್ತಿರ ಬಂದು ಅವಳನ್ನು ಕರೆದುಕೊಂಡು ಹೋಗಿ ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿ ಅವಳು ಪತಿತೆಯಾದುದರಿಂದ ತಾನು ಅವಳನ್ನು ಮುಟ್ಟಕೂಡದೆಂಬ ಭಾವ ತನ್ನಲ್ಲಿ ಇಲ್ಲವೆಂದು ತೋರಿಸುವಂತೆ ಅವಳ ಮುಖಕ್ಕೆ ಒಂದು ಮುತ್ತನ್ನು ಕೊಟ್ಟನು. ಸ್ತ್ರೀಯ ಮುಖವು ಸಂತೋಷದಿಂದ ಕೂಡಿತು.... ನೀನು ನನ್ನ ತಂಗಿ, ನಿನ್ನಲ್ಲಿ ಮರ್ಯಾದೆಯೆ ? ಎಂದು ಹೊರಟನು.' ಇಲ್ಲಿ ಕತೆಗಾರರ ಕೌಶಲದಿಂದ ನಮಗೆ ಶ್ರೀನಿವಾಸಯ್ಯನಲ್ಲಾಗಲಿ ವೇಶ್ಯೆಯಲ್ಲಾಗಲಿ ತಿರಸ್ಕಾರವುಂಟಾಗುವುದಿಲ್ಲ. ಒಂದು ಹೊಸ ತತ್ತ್ವ ಗೋಚರವಾಗುತ್ತದೆ.

ನಮ್ಮ ಜನರ ಸ್ವಭಾವವನ್ನು ವರ್ಣಿಸುವುದರಲ್ಲಿ ಶ್ರೀನಿವಾಸರ ಪ್ರತಿಭೆ ಅಸಾಧಾರಣವಾದುದು. ನಾಯಿಂದ ವೆಂಕಟಶಾಮಿಯು ದೊಂಬರ ಹುಡುಗಿಯ ಸೆರಗನ್ನು ಹಿಡಿದುಕೊಂಡು ತಿರಗತೊಡಗಿದಾಗ ವೆಂಕಟಶಾಮಿ ತಾಯಿಗೆ ಗಾಬರಿಯಾಯಿತು. ಆದರೆ ವೆಂಕಟಶಾಮಿ ತಂದೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅವನು 'ಅಲೆ ಅಲೆ ಯಜಮಾನಗಿತ್ತಿ ಎತ್ತ ಮಾತನಾಡ್ತೀಯ? ಬಿಡತ್ತ. ನೀನೇನು ಮಗನ್ನ ದೊಂಬರಿಗೆ ಹೆತ್ಯಾ ಅವನು ದೊಂಬರ ಹುಡುಗೀನ ಮದುವೆಯಾಗೋಕೆ. ಆ ತೈನೆ ಎಲ್ಲೊ ಒಸಿ ನಕ್ಕಾಳೆ ಇವ ಹಂಗೇ ನಿಂತಾನೆ, ಇದ್ಕ್ಯಾಕ ಇಷ್ಟು ಕೂಗಾಟ. ಎಗಡು ದಿನ ನೋಡುತಾನೆ ಬರುತಾನೆ' ಎಂದನು. ಆದರೆ ಪ್ರೇಮ ಆ ಮುದುಕ ಯೋಚಿಸಿದಷ್ಟು ಸಡಿಲವಾಗಿರಲಿಲ್ಲ. ಪ್ರೇಮಕ್ಕೆ ವೆಂಕಟಶಾಮಿ ನಾಯಿಂದ, ಹುಡುಗಿ ಡೊಂಬರವಳು ಎಂಬ ಜ್ಞಾನವಿರಲಿಲ್ಲ. ಇಲ್ಲಿ ಶ್ರೀನಿವಾಸರು ಪ್ರೇಮದ ಆಳವನ್ನು ಚೆನ್ನಾಗಿ ವರ್ಣಿಸಿದ್ದಾರೆ. ಆ ಪ್ರಣಯದ ದುರಂತ ಹೀಗೆ ಆಯಿತು. 'ಜ್ವರದಲ್ಲಿ ಅವನ ಕನವರಿಕೆಯೆಲ್ಲಾ ಆ ದೊಂಬರ ಹುಡುಗಿಯ ಜತೆಗೇ ಓಡಾಡುತ್ತಿದ್ದಂತೆ ಇತ್ತು. ಮಧ್ಯೆ ಎಚ್ಚರವಾದಾಗ ಅವಳನ್ನು ಕರೆಯಿಸಿ ಎಂದು ಹೇಳಿದನು. ಕೈ

ಹಿಡಿದ ಹೆಂಡತಿಯಾದರೆ ಇಂಥ ಸಂದರ್ಭದಲ್ಲಿ ಕರೆಕಳುಹಿಸುವುದೂ ಅಯ್ಯೋ ಪಾಪ ಎನ್ನುವುದೂ ನ್ಯಾಯವೆಂದು ಕಾಣುತ್ತದೆ. ಹುಡುಗನನ್ನು ತಪ್ಪುದಾರಿಗೆ ಎಳೆದು ಅವನೊಡನೆ ಪೋಲಿತಿರುಗಿದ ದೊಂಬರಹುಡುಗಿಯನ್ನು ಜ್ವರದ ಹಾಸಿಗೆ ಬಳಿಗೆ ಕರೆತಂದು ಕುಳ್ಳಿರಿಸುತಾರೆಯೆ? ಕೊನೆಗೂ ವೆಂಕಟಶಾಮಿ ಅವಳನ್ನು ನೋಡಲಿಲ್ಲ. ತೀರಿಹೋಗುವ ಮೊದಲು ಅವನಿಗೆ ಮನಸ್ಸಿಗೆ ತೋರಿತೆಂದು ಕಾಣುತ್ತದೆ. ಅವನು ಅಪ್ಪನಿಗೆ "ಅಪ್ಪ ಒಂದು ಮಾತು ಕೇಳುತೇನೆ ಮಾಡಿಕೊಡುತೀಯ" ಎಂದ. ತಂದೆ 'ಯಾಕೊ ಏನಾಗ್ತದೆ? ಎಂದ. ಮಗ 'ಏನೂ ಆಗೋಲ್ಲ ನನ್ನ ಆಟ ಮುಗಿಯಿತು. ನನಗೆ ನಮ್ಮ ಹೊಲ್ದ ಪಕ್ಕದ ಹುಲ್ಲು ಇದೆಯಲ್ಲಾ ಅಲ್ಲಿ ಜಾಗ ಮಾಡಬೇಕು' ಎಂದ. ಹತ್ತಿರ ಇದ್ದವರು ಯಾರೋ ' ಏನುಮಾತು? ಬಹಳ ಚೆನ್ನಾಗಿದೆಯೆಂತ ಆಡ್ತಾ ಇದ್ದೀ ಏನೋ?' ಎಂತ ಕೇಳಿದರು. ವೆಂಕಟಶಾಮಿ 'ನಿನ್ನ ಚೆನ್ನ ಗಿನ್ನ ಯಾರಿಗೆ ಬೇಕು. ಹೇಳ್ದೀರ ಇದ್ದರೆ ಎಲ್ಲಾದರೂ ಹೂತು ಬಿಡ್ತಾರೆ' ಎಂದ. ಅವರು "ಹೋಗೋಸಿಗೆ ಎಲ್ಲಿ ಹೂತರೆ ಏನು?" ಎಂದರು. ವೆಂಕಟಶಾಮಿ 'ನಾನು ಶಾನೆ ಮಾತ್ನಾಡಲಾರೆ. ಮಾತು ಕೊಟ್ಟೀಯಪ್ಪಾ?' ಎಂದು ಕೇಳಿದ. ತಂದೆ 'ಆಗಲಿ ಅಣ್ಣ' ಎಂದ. ವೆಂಕಟಶಾಮಿ ಒಂದು ಕ್ಷಣ ಬಿಟ್ಟು ' ಮೂರು ರಾತ್ರಿ ಅಲ್ಲಿ ಮಲಗಿದ್ವಿ' ಅಂದ. ಸುಮಾರು ಅದೇ ಅವನ ಕೊನೆಯ ಮಾತು ಎಂತ ನನಗೆ ಜ್ಞಾಪಕ.'

ಹೀಗೆಯೇ ಜೋಗ್ಯೋರ ಅಂಜಪ್ಪನ ಕೋಳಿಕತೆಯಲ್ಲೂ ಮೊಸರಿನ ಮಂಗಮ್ಮ'ನಲ್ಲೂ ನಮ್ಮ ಸಮಾಜದ ಜೀವನ ಬಹಳ ಸಹಾನುಭೂತಿಯಿಂದ ಚಿತ್ರಿತವಾಗಿದೆ. ಮಂಗಮ್ಮ ಹಳ್ಳಿಯ ಹಳೆಯ ಕಾಲದ ಹೆಂಗಸು. ಆದರೆ ಬಹಳ ಸುಸಂಸ್ಕೃತವಾದ ಮನಸ್ಸು, ಸೊಸೆಗೆ ಅಧಿಕಾರ ಬಿಟ್ಟುಕೊಡುವುದಕ್ಕೆ ಇಷ್ಟವಿಲ್ಲ. ಸೊಸೆಯಲ್ಲಿ ಸಿಟ್ಟಿದ್ದರೂ ಮೊಮ್ಮಕ್ಕಳನ್ನು ಪ್ರೀತಿಸುತ್ತಾಳೆ. ಇಲ್ಲೂ ಗಂಡನ ಮೇಲಿನ ಅಧಿಕಾರಕ್ಕೆ ಅತ್ತೆ ಸೊಸೆಯರಲ್ಲಿ ಕಾದಾಟ. ಇದು ಎಲ್ಲಾ ಸಂಸಾರದಲ್ಲೂ ಎಲ್ಲೆಲ್ಲೂ ನಡೆಯುತ್ತಿದೆ. ಅದರ ಮೂರ್ತ ಸ್ವರೂಪ ಆ ತಾಯ ಮಗ, ಈ ಹೆಂಡತಿಯ ಗಂಡ. ಅವನನ್ನು ಬಿಟ್ಟು ಕೊಡಕೂಡದೆಂದು ತಾಯ ಹುನೋಗತ. ಅವನನ್ನು ಹಿಡಿಯಲೇಬೇಕೆಂದು ಈ ಸೊಸೆಯ ವ್ರತ. ಇದು ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿರುವ ವ್ಯಾಪಾರ. ಇದರ ಸೋಲು ಗೆಲು ಹೀಗೆಯೇ ಎಂದು ಹೇಳುವಂತಿಲ್ಲ, ನೀರೊಳಗಿರುತ್ತ ಮೊಗುವಿನ ಕಾಲು

ಹಿಡಿದಿರುವ ಮೊಸಳೆಯ ಹಾಗೆ ಸೊಸೆ, ಮೇಲೆ ನಿಂತು ಮಗುವಿನ ತೋಳನ್ನು ಹಿಡಿದುಕೊಂಡು ಅದನ್ನು ಉಳಿಸುತ್ತೇನೆ ಎನ್ನುವವಳು ತಾಯಿ. ಮಧ್ಯೆ ಆ ಮಗುವಿನ ಪಾಡು ತಾನೆ ಸ್ವಲ್ಪ ಕಷ್ಟ. ಹಳ್ಳಿಯಲ್ಲಾದರೆ ಮೊಸರು ಮಾರುವ ಮಂಗಮ್ಮನ ಮನೇಲಿ. ಪಟ್ಟಣದಲ್ಲಿ ಮೊಸರು ಕೊಳ್ಳುವ ತಂಗಮ್ಮನ ಮನೇಲಿ ನಡೆಯುತ್ತಾ ಇದೆ ಈ ವ್ಯಾಪಾರ; ಕೊನೆಯ ಅಂಕ ಕಾಣದ ನಾಟಕ'

ನಿಜಗಲ್ಲಿನ ರಾಣಿ ಎಂಬುದರಲ್ಲಿ ನಮ್ಮ ದೇಶದ ಒಂದು ಪಾಳೆಯಪಟ್ಟಿನ ರಾಣಿಯಾದ ಗಿರಿಜವ್ವನ ಆತ್ಮಯಜ್ಞದ ಕತೆ ನಿರೂಪಿತವಾಗಿದೆ. ಚರಿತ್ರೆಗೆ ಸಂಬಂಧಪಟ್ಟ ಕಥೆಗಳನ್ನು ಬರೆಯುವುದು ಕಷ್ಟವಾದರೂ ಶ್ರೀನಿವಾಸರು ಈ ಕೆಲಸವನ್ನು ಬಹಳ ಯಶಸ್ವಿಯಾಗಿ ನೆರವೇರಿಸಿದ್ದಾರೆ. ಈ ಕತೆಯಲ್ಲಿಯ ಅವರ ಶೈಲಿಗೂ ಉಳಿದ ಕತೆಗಳ ಶೈಲಿಗೂ ವ್ಯತ್ಯಾಸವುಂಟು. ಇಲ್ಲಿ ಮಾತುಗಳು ಗುರಿಯನ್ನು ಕುರಿತು ಒಂದೇ ಸಮನೆ ನಾಗಾಲೋಟದಲ್ಲಿ ದೌಡಾಯಿಸುತ್ತದೆ.

'ಮಾರಣೆಯ ದಿನ ಗಿರಿಜವ್ವೆ ಬೆಳಗಾಗ ಎದ್ದು ಸ್ನಾನಮಾಡಿ ದೇವರ ಪೂಜೆಯನ್ನು ಮುಗಿಸಿಕೊಂಡು ಮಗುವನ್ನು ಎತ್ತಿಕೊಂಡು ಲಕುಮವ್ವೆಯ ಬಳಿಗೆ ಬಂದು 'ಇದು ನನ್ನ ಹಣೆಯಲ್ಲಿ ಬರೆದಿತ್ತು. ಇಂದಿನಿಂದ ಈ ಮಗು ನನ್ನದಲ್ಲ. ನಿಮ್ಮದು, ಇದನ್ನು ಕಾಪಾಡುವ ಕೆಲಸ ನಿಮ್ಮದು' ಎಂದು ಹೇಳಿ 'ನನಗೆ ಒಳ್ಳೆಯದಾಗುವಂತೆ ಹರಸಿ' ಎಂದು ಕಣ್ಣೀರು ಸುರಿಸಿದಳು. ಲಕುಮವ್ವೆ 'ನಿನ್ನ ಬುದ್ಧಿಯೆಲ್ಲಾ ಎಲ್ಲಿ ಹೋಯಿತು? ಅವನು ಕೇಳಿದರೆ ಬೇಡವೆನ್ನುವುದಕ್ಕೆ ನಿನಗೆ ತಿಳಿಯಲಿಲ್ಲವೆ? ಈಗಲೂ ಇಷ್ಟವಿಲ್ಲದಿದ್ದರೆ ಬೇಡವೆನ್ನು' ಎಂದಳು. ಗಿರಿಜವ್ವೆ 'ಹೇಳಿ ಆಯಿತು. ಇನ್ನು ಆ ಮಾತು ಬೇಡಿ, ಇನ್ನು ನನ್ನ ದಾರಿ ಬೇರೆ' ಎಂದು ಹೇಳಿ ಅರಮನೆಯಿಂದ ಹೊರಟಳು. ಬಾಗಿಲಲ್ಲಿ ಊರ ಪ್ರದಕ್ಷಿಣಕ್ಕೆ ಬೇಕಾದ ಏರ್ಪಾಡೆಲ್ಲಾ ಆಗಿತ್ತು. ಗಿರಿಜವ್ವೆ ಸುಮಂಗಲಿಯಂತೆ ಅಲಂಕಾರವನ್ನು ಮಾಡಿಕೊಂಡಿದ್ದಳು, ಜನರಿಗೆ ಇದನ್ನು ನೋಡಿ ಅಸಹ್ಯ. ಅವಳು ಕಸ್ತೂರಿಯನ್ನು 'ನೀನು ಈ ಕಡೆಯಿಂದ ಬಾ. ನಾನು ಆ ಕಡೆಯಿಂದ ಬರುತ್ತೇನೆ. ಇಬ್ಬರೂ ಕೊತ್ತಲದ ಬಳಿ ಸೇರೋಣ' ಎಂದಳು. ಅದರಂತೆ ಉತ್ಸವವು ಹೊರಟಿತು.

'ನಿಜಗಲ್ಲಿನ ಕೋಟೆ ಬಹಳ ಅಂದವಾದ ಕೋಟೆ. ಭೀಕರವಾದ ಬಂಡೆಯ ಮೇಲೆ ಶತ್ರುವನ್ನು ಧಿಕ್ಕರಿಸುವ ಗೋಡೆಗಳು. ಒಂದೇ ಕಡೆ

ಬಾಗಿಲು. ಬಾಗಿಲಿಗೆ ಎದುರಾಗಿ ಕೋಟೆಯ ಗೋಡೆಯ ಆ ಕಡೆ ಅರ್ಧದಲ್ಲಿ ಒಂದು ಕೊತ್ತಳ. ಅದರಿಂದ ಊರಿನೊಳಕ್ಕೆ ಇಳಿಯುವುದಕ್ಕೆ ಒಂದು ಸೊಗಸಾದ ಮೆಟ್ಟಲ ಪಂಗ್ತಿ. ನಾಯಕನು ವಿಹಾರಕ್ಕಾಗಿ ಕೆಲವು ವೇಳೆ ಇಲ್ಲಿಗೆ ಬಂದು ನಿಲ್ಲುವುದುಂಟು. ಇಲ್ಲಿಂದ ನೋಡಿದರೆ ಹತ್ತಾರು ಮೈಲಿಯ ದೂರಕ್ಕೂ ಇರುವ ಹಳ್ಳಿ, ಕೊಳ, ತೋಪು, ಎಲ್ಲಾ ಚಿತ್ರಗಳಲ್ಲಿ ಬರೆದಂತೆ ಕಾಣುವುದು. ಆ ಕಡೆ ಬಂಡೆ ಕೋಟೆಯ ಗೋಡೆಯ ಕೆಳಗೆ ಮುಂದಕ್ಕೆ ಚಾಚಿ ಪೀಠದಂತಾಗಿತ್ತು. ಪೀಠದ ಮೇಲೆ ಕೋಟೆಯ ಗೋಡೆ ಏಳಾಳೆತ್ತರ. ಆ ಬಂಡೆಯ ಆಚೆ ಅಗಳು. ಪೀಠವು ವಿಶಾಲವಾಗಿ ಚಪ್ಪಟೆಯಾಗಿ ರಾಜರು ಕುಳ್ಳಿರುವ ಗದ್ದಿಗೆಯಂತೆ ಕಾಣುತ್ತಿದ್ದುದರಿಂದ ಅದಕ್ಕೆ ಜನ ಗದ್ದಿಗೆಯ ಬಂಡೆ ಎಂದು ಹೆಸರಿಟ್ಟಿದ್ದರು. ಹಾಗೆಯೇ ಆ ಕೊತ್ತಳವನ್ನು ಗದ್ದಿಗೇ ಕೊತ್ತಳ ಎನ್ನುವರು.

'ಕಸ್ತೂರಿ ಒಂದು ಕಡೆಯಿಂದಲೂ ತಾನು ಒಂದು ಕಡೆಯಿಂದಲೂ ಕೊತ್ತಳದ ಮೆಟ್ಟಲಿಗೆ ಬರುವುದೆಂದು ಏರ್ಪಾಡುಮಾಡಿ ಗಿರಿಜವ್ವೆ ಒಬ್ಬ ಚೇಟಿಯನ್ನು ಕುರಿತು 'ಇಂದು ನನ್ನ ತಮ್ಮನಿಗೆ ಆರತಿಮಾಡಬೇಕು. ಒಂದು ತಟ್ಟೆಯಲ್ಲಿ ಆರತಿ ತನ್ನಿರಿ' ಎಂದು ಹೇಳಿ ಕೋಟೆಯಗೋಡೆಯ ಮೇಲೆ ಹೊರಟಳು. ಊರಿನಲ್ಲಿ ಜನವೆಲ್ಲ ' ಇಂಥ ವಿಚಿತ್ರ ಉಂಟೆ? ಇವಳ ಸೊಗಸೇನು, ಈ ಆರತಿಯೇನು ' ಎಂದು ವಿಸ್ಮಿತರಾಗಿ ಕೋಟೆಯ ಮೇಲೆ ಎರಡು ಕಡೆಯಿಂದಲೂ ಬರುತ್ತಿರುವ ಮೆರವಣಿಗೆಯ ಗುಂಪನ್ನು ನೋಡುತ್ತಿದ್ದರು. ಒಂದು ಗಳಿಗೆಯ ಹೊತ್ತಿಗೆ ಎರಡು ಗುಂಪೂ ಗದ್ದಿಗೆಯ ಕೊತ್ತಳದ ಹತ್ತಿರ ಬಂದುವು. ಗಿರಿಜವ್ವೆ ಅರ್ಧ ನಿಮಿಷ ಮುಂದಾಗಿ ಬಂದಿದ್ದು, ಕಸ್ತೂರಿ ಬಂದಾಗ್ಗೆ ಚೇಟಿಯ ಕೈಯಿಂದ ಆರತಿಯ ತಟ್ಟೆಯನ್ನು ತೆಗೆದುಕೊಂಡು ಮಾತನಾಡದೆ ಹತ್ತಿರಕ್ಕೆ ಬಂದಳು. ಇಬ್ಬರೂ ಕೊತ್ತಳದ ಮಧ್ಯೆ ನಿಂತಿದ್ದರು. ಇತ್ತ ಒಂದಿಪ್ಪತ್ತು ಜನ, ಅತ್ತ ಒಂದಿಪ್ಪತ್ತು ಜನ. ಸದ್ದುಮಾಡದೆ ನಿಂತಿದ್ದಾರೆ. ಗಿರಿಜವ್ವೆ ಎಂದಿನಂತೆ ಗಂಭೀರಭಾವದಲ್ಲಿ ತಮ್ಮನಿಗೆ ಆರತಿಯನ್ನೆತ್ತಿ ತಟ್ಟೆಯನ್ನು ಚೇಟಿಯ ಕೈಗೆ ಕೊಟ್ಟು ಸ್ವಲ್ಪ ನಗುತ್ತಾ ತಮ್ಮನನ್ನು ಕುರಿತು ಮೃದುವಾದ ನುಡಿಯಿಂದ ' ಕಸ್ತೂರಿ ನಿನ್ನಿಂದ ನನಗೆ ಈ ಪದವಿ ಬಂತು. ನಿನ್ನನ್ನು ನಾನು ಮರೆಯಬಾರದು. ನಿನಗೂ ಗದ್ದಿಗೆಯ ಮೇಲೆ ಆಸೆ' ಎಂದು ಹೇಳಿ ಉತ್ತರ ಕ್ಷಣದಲ್ಲಿ ಕರ್ಕಶವಾದ ಧ್ವನಿಯಿಂದ ' ನನ್ನ ನಿನ್ನಿಂದ, ರಾಮರಾಯನ ಮನೆ

ಕೆಟ್ಟಿತು, ನಮ್ಮನ್ನು ಹೆತ್ತವರಿಗೆ ಅಪಕೀರ್ತಿ ಬಂತು. ಕಸ್ತೂರಿ, ನಾವು ಬದುಕ ಬಾರದು' ಎಂದು ಹೇಳಿ ಅವನನ್ನು ಭದ್ರವಾಗಿ ಅಪ್ಪಿಕೊಂಡು ಕೊತ್ತಳದಿಂದ ಗೋಡೆಯ ಹೊರಕ್ಕೆ ದುಮುಕಿ ಬಿಟ್ಟಳು.

'ಜನರು 'ಹಾ' ಎನ್ನುವ ಮೊದಲು ಅಕ್ಕತಮ್ಮಂದಿರು ಗದ್ದಿಗೆಯ ಬಂಡೆಯನ್ನು ಸೇರಿದ್ದರು. ಆ ಎತ್ತರದಿಂದ ಬಂಡೆಯ ಮೇಲೆ ಬಿದ್ದವರಿಗೆ ಉಳಿವಿಲ್ಲ. ಎರಡು ಕ್ಷಣದಲ್ಲಿ ಅವರಿಬ್ಬರ ದೇಹಗಳೂ ಜೀವವನ್ನಳಿದು ಬಂಡೆಯಿಂದ ನೆಲಕ್ಕೆ ಉರುಳಿದ್ದುವು.

ವೆಂಕಟರಾಯನ ಪಿಶಾಚದಲ್ಲಿ ಶ್ರೀನಿವಾಸರ ಹಾಸ್ಯ ಸ್ವಭಾವವನ್ನು ಚೆನ್ನಾಗಿ ಕಾಣಬಹುದು. ಸಾರಿಪುತ್ರನ ಕೊನೆಯ ದಿನಗಳಂತಹ ಗಂಭೀರ ಭಾವವನ್ನು ವರ್ಣಿಸಿದ ಕವಿ, ಅಷ್ಟೇ ಸರಸವಾಗಿ ವೆಂಕಟರಾಯನ ಜೀವನದ ಒಂದು ವಿನೋದವನ್ನು ವರ್ಣಿಸಿದ್ದಾರೆ. ಅದರಲ್ಲಿ ಅವರು ಕತೆಯಿಲ್ಲದೆ ಕತೆಯನ್ನು ನೆಯ್ದಿದ್ದಾರೆ. ಆ ಕತೆಯನ್ನು ಓದುವುದಕ್ಕೆ ಪ್ರಾರಂಭಿಸಿದರೆ ಕೊನೆಯವರೆಗೆ ನಗದೇ ಇರಲು ಸಾಧ್ಯವೇ ಇಲ್ಲ. 'ಬೆಕ್ಕಿನ ರೂಪದ ಪಿಶಾಚಿಯು ವೆಂಕಟರಾಯನ ನಡುವಿಗೆ ಸರಿಯಾಗಿ ಬಂದಾಗ ಅದರ ಹೊಟ್ಟೆಯಲ್ಲಿ ಆಗುತ್ತಿದ್ದ ಗುಡುಗುಡು ಶಬ್ದವು ವೆಂಕಟರಾಯನಿಗೆ ಕೇಳಿಸುವುದಕ್ಕೆ ಪ್ರಾರಂಭವಾಯಿತು. ಆ ಗುಡುಗುಡು ಶಬ್ದದಿಂದ ವೆಂಕಟರಾಯನಿಗೆ ಒಂದು ಸಹಾಯವಾಯಿತು. ಬೆಕ್ಕು ಎಷ್ಟು ದೂರ ಮುಂದಕ್ಕೆ ಬಂತು ಎಂದು ತಿಳಿಯಲು ಸಹಾಯವಾಯಿತು. ಪಿಶಾಚವು ನಡುವಿನ ಬಳಿ ಕುಳಿತಿದ್ದುದು ಮೆಲ್ಲನೆ ಹೆಜ್ಜೆಯನ್ನಿಡುತ್ತಾ ವೆಂಕಟರಾಯನ ಬೆನ್ನ ನಡುವಿಗೆ ಬಂದಿತು. ಭುಜದ ನೇರಕ್ಕೆ ಬಂದಿತು. ಕುತ್ತಿಗೆಯ ನೇರಕ್ಕೆ ಬಂದಿತು. ತಲೆಯ ಹಿಂದುಗಡೆಗೆ ಬಂದಿತು. ಮುಂದಕ್ಕೆ ಹೆಜ್ಜೆಯನ್ನಿಡುವುದಕ್ಕೆ ಹೋಗಿ ಇಡದೆ ಹಾಗೆ ಇದ್ದಲ್ಲಿಯೇ ನಿಂತಿತು. ವೆಂಕಟರಾಯನಿಗೆ ಬಹಳ ಹೆದರಿಕೆಯಾಯಿತು. ಏನು ಮಹಾ ಹೆದರಿಕೆ ಅವನು ಹೆಂಗಸಾಗಿ ಹುಟ್ಟಬೇಕಾಗಿತ್ತು ಎಂದು ಹೇಳುವವರು ನೀವು ಯಾರಾದರೂ ಇದ್ದರೆ, ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಈಗ ನಾನು ಹೇಳುವುದನ್ನು ರಾತ್ರಿ ೧೦ ಗಂಟೆಯಲ್ಲಿ ನಿಮ್ಮ ಮನೆಯವರೆಲ್ಲಾ ಮಲಗಿದ ಮೇಲೆ ನೀವೆ ಕೂತು ಓದಿ. ನಿಮ್ಮ ಹೆಂಡತಿಯೋ ಮಗುವೋ ಮಲಗಿರುವ ಶಯ್ಯಾಗೃಹದಲ್ಲಿ ಕುಳಿತು ಓದಬೇಡಿ. ಕೂಗಿಕೊಂಡರೆ ಅವಳಿದ್ದಾಳೆ, ಸಹಾಯಕ್ಕೆ ಬರುತ್ತಾಳೆ

ಎಂತ ನಿನುಗೆ ಧೈರ್ಯವಿರುತ್ತದೆ....ಬಲವಾದ ಏಟುಗಳನ್ನು ಗುಡು ಗುಡು ಎನ್ನು ತ್ತಿದ್ದ ಬೆಕ್ಕಿನ ಮೇಲೆ ಗುರಿಯಿಟ್ಟು ಅದು ಆ ಕಡೆ ಈ ಕಡೆ ಕದಲುವುದಕ್ಕಾಗ ದಂತೆ ರಪರಪನೆ ಸುಮ್ಮನೆ ಹತ್ತು ಏಟು ಹಾಕಿಬಿಟ್ಟ. ಬೆಕ್ಕು ಮಾಯವಾ ಯಿತು. ಈ ಏಟಿಗೆ ಬೆಕ್ಕು ಉಳಿಯುವುದೆ? ಬೆಕ್ಕು ಮಾಯವಾಗಿ ತಲೆ ಬಂದಿತು. ತಲೆ ಬಂದದ್ದೇನೋ ನಿಶ್ಚಯ. ಆದರೆ ವೆಂಕಟರಾಯನಿಗೆ ಕಿಟಕಿ ಯಲ್ಲಿ ಕಂಡ ಕರಾಳ ಮುಖದ ಜೋಲು ನಾಲಗೆಯ ಕೋರೆಹಲ್ಲಿನ ತಲೆಯಲ್ಲ. ಕೃಷ್ಣಪ್ಪನವರ ತಲೆ. ಕಾರಣವಿಲ್ಲದೆ ಹೆಂಡತಿಯ ಕೈಯಲ್ಲಿ ಮಾತು ಕೇಳಿದವನ ಮುಖದ ಹಾಗೆ ಇತ್ತು. ಕೃಷ್ಣಪ್ಪನವರು ಮುದುಕರು, ಆದರೂ ಏಟುಗಳು ಹೀಗೆ ಮರೆಗರೆಯುತ್ತಲೂ ಯಾವ ಹುಡುಗನಿಗೂ ಇಲ್ಲದ ಚಟುವಟಿಕೆಯನ್ನು ಪಡೆದು ಸರ್ರನೆ ಎದ್ದರು. ಎದ್ದು ಸ್ವಲ್ಪ ಚೇತರಿಸಿಕೊಂಡು 'ಅಯ್ಯೆ ಅಯ್ಯ ಯಾಕಪ್ಪ ಯಾಕಪ್ಪ?' ಎಂದು ವೆಂಕಟರಾಯನನ್ನು ಕೇಳಿದರು. ಕೃಷ್ಣಪ್ಪ ನವರು ತಲೆ ಮೂಗು ಎಲ್ಲವನ್ನೂ ಮುಟ್ಟಿಕೊಂಡರು. ಏಟು ಪೂರಾ ಬಿದ್ದಿ ದ್ದರೂ ಎಲ್ಲವೂ ಸರಿಯಾಗಿದ್ದವು. ಸಾಯಂಕಾಲ ಸಹಸ್ರನಾಮ ಹೇಳುವುದನ್ನು ಮರೆತೆ. ಇದರಿಂದ ಹೀಗಾಯಿತು ಎಂದುಕೊಂಡು ಪುನಃ ನಿದ್ದೆ ಹೋದರು.'

ಕೊನೆಯದಾಗಿ ನಾನು ಹೇಳಬೇಕಾದ ವಿಷಯ ಶ್ರೀನಿವಾಸರ ಕತೆ ಗಳನ್ನು ಓದಿದನಂತರ, ಒಂದು ಬಗೆಯ ಗಂಭೀರವಾದ ಶಾಂತವಾದ ವಾತಾ ವರಣ ನಮ್ಮನ್ನು ಮುಚ್ಚಿಕೊಳ್ಳುತ್ತದೆ ಎಂಬುದು. ಶ್ರೀನಿವಾಸರು ತಮ್ಮ ಕತೆ ಗಳಲ್ಲಿ ಪುಸ್ತಕ ಪುಸ್ತಕಗಳನ್ನು ಬರೆದರೂ ಮುಗಿಯದಂತಹ ತತ್ವಗಳನ್ನು ಉಪಾಯವಾಗಿ ಹುದುಗಿಸಿದ್ದಾರೆ. ಸಾರಿ ಪುತ್ರನ ಕೊನೆಯ ದಿನಗಳು ಎಂಬು ದರಲ್ಲಿ, ಮೊದಲಿನಿಂದ ಕೊನೆಯವರೆಗೆ ಶಾಂತಿರಸ ತುಂಬಿರುತ್ತದೆ. ಮನುಷ್ಯನು ಬೌದ್ಧನಾದರೇನು, ವೇದಾನುಯಾಯಿಯಾದ ಬ್ರಾಹ್ಮಣನಾದರೇನು? ಅವನು ಜಗತ್ತಿಗೆ ತೋರಿಸಿಕೊಡುವ ಸತ್ಯ ಮುಖ್ಯವಾದುದು. ಎಂಬುದಕ್ಕೆ ಸಾರಿ ಪುತ್ರನ ಜೀವನವೇ ನಿದರ್ಶನ. 'ಹೇಮಕೂಟದಿಂದ ಬಂದ ಮೇಲೆ' ಎಂಬು ದರಲ್ಲೂ ಈ ಬಗೆಯ ಶಾಂತಿಯ ವಾತಾವರಣವನ್ನು ನಾವು ಕಾಣಬಹುದು. ಕವಿಯು ಅರಮನೆಯಿಂದ ಆಶ್ರಮಕ್ಕೆ ಬಂದ ಶಕುಂತಲೆಯು, ಜ್ವರಬಿಟ್ಟ ಮಗು ತಾಯ ಮಡಲಲ್ಲಿ ಮಲಗುವಂತೆ ಮಲಗಿದಳೆಂದು ಹೇಳಿದ್ದಾನೆ. ಚಕ್ರವರ್ತಿನಿ ಯಾದರೂ ಅರಮನೆಗಿಂತ ಶಕುಂತಲೆಗೆ ಕಾಡಿನಲ್ಲೇ ಹೆಚ್ಚು ಸುಖವಿದ್ದಿತೆಂದು

ತೋರಿದ್ದಾನೆ. ಈ ಕತೆಗೆ ಪಾತ್ರಗಳು ಕಾಳಿದಾಸನ ನಾಟಕದಿಂದ ನೇರವಾಗಿ ಬಂದಿವೆ.

'ನಮ್ಮ ನಾಡು ಚೆನ್ನಾಗಬೇಕು, ನಮ್ಮ ಬಾಳು ಬೆಳಗಬೇಕು; ನಮ್ಮ ದೇಶದ ಹಿರಿಯದುದರಲ್ಲಿ, ನಮ್ಮ ನಾಡ ಸಂಸ್ಕೃತಿಯಲ್ಲಿ ನಮಗೆ ಗೌರವ ಬರಬೇಕು. ಇತರರ ಅಂಧಾನುಕರಣದಿಂದ ಪ್ರಯೋಜನವಿಲ್ಲ. ನಮ್ಮ ನಾಗರೀಕತೆ ನಮ್ಮ ತಾಯ ಎದೆ ಹಾಲು, ಎಂಬ ಮಾತನ್ನು ಶ್ರೀನಿವಾಸರು ತಮ್ಮ ಕತೆಗಳಲ್ಲೆಲ್ಲಾ ಹೇಳಿದ್ದಾರೆ. ನಮ್ಮ ರಾಷ್ಟ್ರಕವಿ ಅವರೇ ಎಂದು ನಾವು ಧಾರಾಳವಾಗಿ ಹೇಳಬಹುದು. ಅವರು ಒಂದು ಸಲ 'ನಮ್ಮ ಜನಕ್ಕೆ ಈಗ ಹುಚ್ಚು ಹತ್ತಿದೆ. ತಮ್ಮ ವಸ್ತ್ರಗಳನ್ನು ತಾವು ಧರಿಸಿಕೊಂಡಿಲ್ಲ ಎಂಬುದು ಅವರಿಗೆ ತಿಳಿಯದು. ಅದನ್ನು ತಿಳಿಯುವ ಕಾಲವು ಇನ್ನೇನು ಬರುವುದು' ಎಂದರು. ಇದೇ ರೀತಿಯಾದ ಭಾವವನ್ನು ಶ್ರೀನಿವಾಸರು ತಮ್ಮ ಕತೆಯಲ್ಲಿ 'ಈ ಜನ ಭಾರತಿ ಎನ್ನುತ್ತಾರಲ್ಲ, ಆ ಸುಂದರಿ ಸನ್ನಿಯಿಂದ ಈಗ ಮಲಗಿದ್ದಾಳೆ. ಮಕ್ಕಳು ಹತ್ತಿರ ಕುಳಿತು ಅಮ್ಮಾ ಎಂದು ಅಳುತ್ತಿವೆ. ದೇಹವನ್ನು ನೋಡಿದರೆ ಜೀವ ಇನ್ನು ಈಗಲೋ ಆಗಲೋ ಬರುತ್ತೆ ಎನ್ನುವ ಹಾಗೆ ಕಳೆ ಇದೆ: ಇವರ ನಾಗರೀಕತೆ ಖಿಲವಾಗಿದೆ ಎಂದು ನಮ್ಮ ನಾಗರೀಕತೆಯನ್ನು ನಾವು ಇಲ್ಲಿ ಪ್ರಚಾರಕ್ಕೆ ತರುವುದು ಪರಕಾಯ ಪ್ರವೇಶದಂತೆ' ಎಂದು ಹೇಳಿದ್ದಾರೆ. ಶ್ರೀನಿವಾಸರು ಈ ಮಾತುಗಳನ್ನು, ಕತೆಯಲ್ಲಿ ಆಂಗ್ಲರಮಣಿಯ ಬಾಯಲ್ಲಿ ಹಾಕಿದ್ದರೂ ನಮ್ಮವರಿಗೇ ಅನೇಕರಿಗೆ ಇದರಲ್ಲಿ ನಂಬಿಕೆಯಿಲ್ಲದೆ ನಮ್ಮ ದೇವರಿಗೂ ಹ್ಯಾಟು ಧರಿಸಲು ಅವರು ತವಕಿಸುತ್ತಿರುವುದು ವಿಷಾದಕರವಾದುದು.

ಶ್ರೀನಿವಾಸರ ಸಣ್ಣಕತೆಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿದ್ದೇನೆ. ಆ ನಂದನವನದ ಬಾಗಿಲಿನ ದಾರಿ ತೋರಿಸಲು ಯತ್ನಿಸಿದ್ದೇನೆ. ಇಂತಹ ಕವಿಯು ಎದುರಿಗೇ ಇದ್ದು ತಮ್ಮ ಸಾನ್ನಿಧ್ಯವನ್ನು ನಮಗೆ ನೀಡುತ್ತಿರುವುದು ನಮ್ಮ ಭಾಗ್ಯ. ಕನ್ನಡ ನಾಡಿಗೆ ಅವರ ಸೇವೆ ಬಹುಕಾಲ ಲಭಿಸಲಿ. ಆ ಸೇವೆಗೆ ಅರ್ಹರಾಗುವ ಯೋಗ್ಯತೆ ಕನ್ನಡಿಗರಿಗೆ ಉಂಟಾಗಲಿ.

ನಮ್ಮ ಶಿಕ್ಷಣದ ರೂಪರೇಖೆಗಳು

ಶಿಕ್ಷಣ ಜೀವನದ ಬೆಳಕು. ಧನಿಕರು ಬಡವರು ಎಂಬ ಭೇದವಿಲ್ಲದೆ ಇದು ಎಲ್ಲರಿಗೂ ಆವಶ್ಯಕ. ಬಡವರಿಗಂತೂ ಹೆಚ್ಚು ಆವಶ್ಯಕ. ಪ್ರಜಾಭಿಪ್ರಾಯದ ಮೇಲೆ ಅವಲಂಬಿಸಿರುವ ದೇಶಗಳಿಗೂ ಸರ್ಕಾರಗಳಿಗೂ ಈಗ ಒಂದು ಪ್ರಶ್ನೆ ಎದುರಾಗಿದೆ. ಆ ಪ್ರಶ್ನೆ ನಮ್ಮ ನಾಗರೀಕತೆಗೇ ಒಂದು ಸವಾಲ್ ಇದ್ದಂತೆ ಇದೆ. "ನಮ್ಮ ಕಾಲದ ಎಲ್ಲ ನಾಗರೀಕತೆಯ ಶಿಖರವೂ ಈ ಭಯಂಕರಗಳಾದ ಯುದ್ಧಗಳೇಯೆ?" ಎಂಬುದೇ ಈ ಸವಾಲು. ಈ ಸವಾಲನ್ನು ನಾವು ನಮ್ಮ ಸಮಸ್ತ ಶಕ್ತಿಗಳನ್ನೂ ಉಪಯೋಗಿಸಿ ಎದುರಿಸಬೇಕಾಗಿದೆ. ನಮ್ಮ ಸಾಮಾಜಿಕ ಆರ್ಥಿಕ ರಾಷ್ಟ್ರೀಯ ಸಂಸ್ಥೆಗಳನ್ನೂ ವಿದ್ಯಾಸಂಸ್ಥೆಗಳನ್ನೂ ಈ ಪ್ರಯತ್ನದಲ್ಲಿ ನಾವು ಉಪಯೋಗಿಸಿಕೊಳ್ಳಬೇಕು. ನಮ್ಮ ಸಂಸ್ಥೆಗಳು ನಮ್ಮ ಈ ಧ್ಯೇಯಸಾಧನೆಗಾಗಿ ಕೆಲಸಮಾಡಬೇಕು. ನಮ್ಮ ವಿದ್ಯಾ ಸಂಸ್ಥೆಗಳು ಈ ಭಾವನೆಗಳನ್ನು ಬೆಳೆಸಬೇಕು. ನಮ್ಮ ದೇಶದ ಶಿಕ್ಷಣತಜ್ಞರು ಶ್ರದ್ಧೆಯಿಂದಲೂ ವಿವೇಕದಿಂದಲೂ ಭಾವನೆಗಳಿಂದಲೂ ವರ್ತಿಸಿದರೆ ಮಾತ್ರ ಇದುಸಾಧ್ಯ. ನಮ್ಮ ದೇಶದ ಮಕ್ಕಳ ಎಲ್ಲ ಅಡಗಿರುವ ಶಕ್ತಿಗಳೂ ಪ್ರಕಾಶವಾಗಿ ಉಪಯೋಗವಾಗುವ ಅವಕಾಶವನ್ನು ನಮ್ಮ ವಿದ್ಯೆ ಕಲ್ಪಿಸಬೇಕು.

ಹೀಗೆ ಆಗಬೇಕಾದರೆ ದೇಶದಲ್ಲಿ ಹುಟ್ಟಿದ ಪ್ರತಿ ಮಗುವಿಗೂ ಶಿಕ್ಷಣದ ಅವಕಾಶವಿರಬೇಕು. ಹಿಂದಲ ಯಾವುದೋ ಕಾರಣಕ್ಕಾಗಿ ಇಂದಿನ ಬಾಲಕನಿಗೆ ಶಿಕ್ಷಣ ಕೊಡದ ಸರ್ಕಾರ, ಸರ್ಕಾರವೆಂಬ ಹೆಸರಿಗೆ ಅರ್ಹವಾದುದಲ್ಲ. ನಮ್ಮ ದೇಶ ವಿಶಾಲವಾದ ದೇಶ. ಇಲ್ಲಿಯ ಆವಶ್ಯಕತೆಗಳು ಹೆಚ್ಚಾಗಿವೆ. ನಮ್ಮ ಬಾಳು ನಾನಾರೂಪದಲ್ಲಿ ಪೂರ್ಣವೂ ಉತ್ತಮವೂ ಆಗಬೇಕಾಗಿದೆ. ನಮ್ಮ ಕೈಗಾರಿಕೆಗಳು ಬೆಳೆಯಬೇಕಾಗಿವೆ. ನಮ್ಮ ವ್ಯವಸಾಯ ಉತ್ತಮಗೊಳ್ಳಬೇಕಾಗಿದೆ. ನಮ್ಮ ದೇಶದ ಹಳ್ಳಿಗಳಿಗೆ ರಸ್ತೆಗಳೂ ಮನೆಗಳೂ ವೈದ್ಯಶಾಲೆಗಳೂ ಪುಸ್ತಕ ಭಂಡಾರಗಳೂ ವಿದ್ಯುತ್‌ಶಕ್ತಿಯೂ ಬೇಕಾಗಿದೆ. ನಮಗೆ ಎಷ್ಟು ಜನ ಇಂಜನೀಯರುಗಳಿದ್ದರೂ ಸಾಲದಾಗಿದೆ. ಆದುದರಿಂದ ಸರ್ಕಾರಗಳು ಟೆಕ್ನಿಕಲ್ ಎಜುಕೇಶನ್ ಹೆಚ್ಚಿಸುತ್ತಲೇ ಹೋಗಬೇಕು. ಅರ್ಹರಿಗೆಲ್ಲ ಪ್ರವೇಶದ ಅವಕಾಶ ಒದಗಿಸಬೇಕು. ಪ್ರವೇಶವನ್ನು ಕುಂಠಿತಗೊಳಿಸಬಾರದು.

ನಮಗೆ ಸ್ವಾತಂತ್ರ್ಯ ಬಂದಿತು. ನಮ್ಮ ವಿದ್ಯಾಸಂಸ್ಥೆಗಳು ನಮ್ಮವರ ಕೈಗೆ ಬಂದಿವೆ. ಆದರೆ ಬರಿಯ ಇಷ್ಟರಿಂದ ಏನೂ ಸಾಧ್ಯವಾಗುವುದಿಲ್ಲ. ಪ್ರಾಥಮಿಕ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತದೆ. ಅನಂತರ ಮಾಧ್ಯಮಿಕ ಶಾಲೆಗಳಿಗೆ ಹೆಚ್ಚುತ್ತದೆ. ಅನಂತರ ಪ್ರೌಢಶಾಲೆ ಕಲಾ ಶಾಲೆಗಳಿಗೆ ಹೆಚ್ಚುತ್ತದೆ. ಹೀಗೆ ಸುಮ್ಮನೆ ಮುಕ್ಕಿಕಾಮುಕ್ಕಿ ವಿದ್ಯಾಭ್ಯಾಸದಿಂದ ಪ್ರಯೋಜನವಿಲ್ಲ. ಈಗಿರುವಂತೆ ಇದೇ ವಿದ್ಯೆಯನ್ನು ಹೀಗೆಯೇ ಮುಂದುವರಿಸುವುದಾದರೆ ಹೊಸದಾಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖೆ ಇನ್ನೂ ಶೇ. ೧೩ ಅಥವ ೧೫. ಚೆನ್ನಾಗಿ ಓದುಬರಹ ಬರುವವರ ಸಂಖೆ ಏಳು ಅಥವ ಎಂಟು ಇರಬಹುದು. ಕಾಲೇಜಿಗೆ ನೂರಕ್ಕೆ ಒಬ್ಬರೋ ಇಬ್ಬರೋ ಹೋಗುತ್ತಾರೆ. ಇಷ್ಟಕ್ಕೇ ನಮಗೆ ಸಾಕು ಎನ್ನುವವರು ಜಗತ್ತಿನಲ್ಲಿ ನಡೆಯುವುದನ್ನು ಅರಿಯದವರು. ಇನ್ನು ಹೆಚ್ಚು ಜನಕ್ಕೆ ಕಲಿಸಲು ಸಾಧ್ಯವಿಲ್ಲವೆನ್ನುವ ಸರ್ಕಾರವು, ಶೇ. ೯೮ಮಂದಿಗೆ, ಅವರವರಿಗೆ ಬೇಕಾದ ಶಿಕ್ಷಣವನ್ನೂ ಉದ್ಯೋಗಗಳನ್ನೂ ಕೊಡುತ್ತಿರುವ ಇತರ ದೇಶಗಳನ್ನು ಗಮನಿಸಲಿ.

ದೇಶದ ಆವಶ್ಯಕತೆಯನ್ನರಿತು ವಿದ್ಯೆಯನ್ನು ಕೊಡಬೇಕು. ವಿದ್ಯಾವಂತರು ದೇಶದ ಜೀವನದಲ್ಲಿ ಅಲ್ಲಲ್ಲಿ ಸಮಾವೇಶವಾಗಿ ಸಮಾಜಕ್ಕೆ ಸೇರಿಕೊಂಡುಬಿಡಬೇಕು. ಅವರು ಸಮಾಜಕ್ಕೆ ಹೊರೆಯಾಗುವಂತಹ ಶಿಕ್ಷಣವನ್ನು ಅವರಿಗೆ ಕೊಡಕೂಡದು. ನಮ್ಮ ದೇಶದ ಆವಶ್ಯಕತೆಗಳೇನು ? ಜಗತ್ತಿನ ಆವಶ್ಯಕತೆಗಳೇನು ? ನಮ್ಮ ದೇಶದ ಆವಶ್ಯಕತೆಗಳ ದೃಷ್ಟಿಯಿಂದ ಪ್ರತಿಯೊಬ್ಬ ಬಾಲಕನೂ ಸಮಾಜಕ್ಕೆ ಉಪಯುಕ್ತನಾಗಬೇಕಾದರೆ, ವಿದ್ಯೆ ಹೇಗಿರಬೇಕು? ಮಾಧ್ಯಮಿಕ ಶಾಲೆ, ಸೆಕೆಂಡರಿ ಶಾಲೆ ಇವುಗಳಿಂದಲೇ ಆರಿಸಿದಂತೆ ಬೇರೆಮಾಡಿ ಜೀವನದ ನಾನಾ ರಂಗಗಳಿಗೆ ಅರ್ಹರಾಗುವ ಶಿಕ್ಷಣವನ್ನು ಅವರಿಗೆ ಹೇಗೆ ಕೊಡಬೇಕು ? ಇವೆಲ್ಲವೂ ನಮ್ಮ ದೇಶದ ಶಿಕ್ಷಣ ನಿಪುಣರು ಯೋಚಿಸಬೇಕಾದ ಜವಾಬ್ದಾರಿ. ಸುಮ್ಮನೆ ಶಾಲೆಗಳ ಮತ್ತು ಕಾಲೇಜುಗಳ ಸಂಖ್ಯೆಗಳನ್ನು ಹೆಚ್ಚಿಸುವುದರಿಂದ ನಮ್ಮ ದೇಶದ ಶಿಕ್ಷಣ ಸಮಸ್ಯೆ ಸಮರ್ಪಕವಾಗಿ ಪರಿಹಾರವಾಗುವುದಿಲ್ಲ.

ನಮ್ಮ ಸ್ವಾತಂತ್ರ್ಯ ನಮಗೆ ಉಳಿಯಬೇಕಾದರೆ, ನಮ್ಮ ಜನರಲ್ಲಿ ಹೊಸ

ಭಾವನೆಗಳು ತಲೆದೋರಬೇಕು. ನಮ್ಮ ಶಿಕ್ಷಣದಲ್ಲಿ ಪೂರ್ಣವಾಗಿ ಕ್ರಾಂತಿ ಕಾರಕವಾದ ಬದಲಾವಣೆಯಾದ ಹೊರತು ಇದು ಸಾಧ್ಯವಿಲ್ಲ. ಸ್ವಾತಂತ್ರ್ಯ ಸರ್ವ ಸಮಾನತೆಗಳ ಸಮಾಜವನ್ನು ನಮ್ಮ ದೇಶದಲ್ಲಿ ಸ್ಥಾಪಿಸುವೆವೆಂದು ನಾವು ನಮ್ಮ ರಾಜ್ಯಾಂಗ ಸಭೆಯಲ್ಲಿ ನಿರ್ಣಯಿಸಿದ್ದೇವೆ. ಇಂತಹ ನಿರ್ಣಯು ಕಾರ್ಯಕಾರಿಯಾಗಬೇಕಾದರೆ ದೇಶದ ಪ್ರತಿಯೊಬ್ಬ ಪ್ರಜೆಯ ಹೆಗಲಿನ ಮೇಲೂ ಹೊಣೆ ಬೀಳುತ್ತದೆ. ದೇಶದ ಪ್ರತಿಯೊಬ್ಬ ಬಾಲಕನಿಗೂ—ಅವನು ಯಾವ ಪಂಗಡದವನೇ ಆಗಿರಲಿ–ಸಮಾನವಾದ ಶಿಕ್ಷಣ ಸೌಕರ್ಯವನ್ನು ಒದಗಿಸಬೇಕಾಗಿದೆ. ಆ ಬಾಲಕರೆಲ್ಲಾ ತಮ್ಮಲ್ಲಿ ಅಡಗಿರುವ ಶಕ್ತಿಗಳನ್ನೂ, ವಿವಿಧ ಪ್ರವೃತ್ತಿಗಳನ್ನೂ ಪೂರ್ಣವಾಗಿ ಬೆಳೆಸಲು ಅವಕಾಶ ಕೊಡಬೇಕಾಗಿದೆ. ನಿಜವಾದ ಶಿಕ್ಷಣದ ಗುರಿ ಇದೇಯೆ. ಇದುವರೆಗೆ ನಮ್ಮ ದೇಶದಲ್ಲಿ ನಮ್ಮ ಬಾಲಕರಿಗೆ ಸರಿಯಾದ ಶಿಕ್ಷಣದ ಅವಕಾಶ ದೊರೆಯದೆ ಬಹಳ ಅನ್ಯಾಯವಾಯಿತು. ಇದಕ್ಕೆ ಪರದೇಶದ ಸರ್ಕಾರವೇ ಕಾರಣ. ಮುಂದೆ ನಮ್ಮ ಸರ್ಕಾರಗಳು ಈ ಕೊರತೆಯನ್ನು ತತ್‌ಕ್ಷಣ ಹೋಗಲಾಡಿಸಬೇಕು. ಎಷ್ಟು ಜನಕ್ಕೆ ಎಲ್ಲಿ ಜಾಗ ಕೊಡಬೇಕು, ಎಷ್ಟು ಜನಕ್ಕೆ ಕೊಡಬಾರದು ಎಂಬ ಚರ್ಚೆಯನ್ನು ಬಿಟ್ಟು, ಶಿಕ್ಷಣತಜ್ಞರು ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಬೇಕು. ಶಿಕ್ಷಣದ ಪುನರ್ವ್ಯವಸ್ಥೆಯ ಮೂಲಕ ಸೌಹಾರ್ದ, ಸಹಾನುಭೂತಿ ಸಾಮಾಜಿಕ ಜವಾಬ್ದಾರಿ–ಒಂದೇ ಮಾತಿನಲ್ಲಿ ಹೇಳುವುದಾದರೆ–ನೀತಿ ಜೀವನ ನಮ್ಮ ವಿದ್ಯಾರ್ಥಿಗಳಲ್ಲಿ ಬೆಳೆದರೆ ಮುಂದಲ ಸಮಾಜದ ತಳಹದಿ ಭದ್ರವಾಗುವುದು. ಶಿಕ್ಷಣದ ಗುರಿ, ನೀತಿ ಜೀವನವನ್ನು ಕಲಿಸುವುದೇ ಆಗಿರಬೇಕು. ಅದರಿಂದಲೇ ವ್ಯಕ್ತಿಗೆ ಸಮತೆಯೂ ಅವನ ಜೀವನದಲ್ಲಿ ಸಮರಸವೂ ಉಂಟಾಗುತ್ತದೆ. ಅದೇ ಸಾಮಾಜಿಕ ಜೀವನದ ಕಟ್ಟಡದ ಭದ್ರವಾದ ಅಡಿಗಲ್ಲು.

ಇಂದಿನ ಪ್ರಾಥಮಿಕ, ಮಾಧ್ಯಮಿಕ ಸೆಕೆಂಡರಿ ಶಿಕ್ಷಣಕ್ಕೂ ನಮ್ಮ ಜನ ಜೀವನಕ್ಕೂ ಸಂಬಂಧವೇ ಇಲ್ಲ. ಆ ಶಿಕ್ಷಣವನ್ನು ಜೀವನದ ಆವಶ್ಯಕತೆಗಳ ದೃಷ್ಟಿಯಿಂದ ಬದಲಾಯಿಸಬೇಕು. ಈ ದೃಷ್ಟಿಯಿಂದ ಮೂಲಶಿಕ್ಷಣವನ್ನು ಹೆಚ್ಚುಹೆಚ್ಚಾಗಿ ಆಚರಣೆಗೆ ತರಬೇಕು. ಮೂಲಶಿಕ್ಷಣದಲ್ಲಿ ಬಾಲಕನಿಗೆ ಜೀವನದ ಸಂಪರ್ಕ ಹೆಚ್ಚಾಗುತ್ತದೆ. ಆ ಪ್ರದೇಶದ ಜನರ, ವ್ಯವಸಾಯ

ಕೈಗಾರಿಕೆ ಕಸಬುಗಳಲ್ಲಿ ಅವನೂ ಪಳಗುತ್ತಾನೆ. ನಮ್ಮ ದೇಶದ ಪ್ರಾಥಮಿಕ ಮಾಧ್ಯಮಿಕ ಸೆಕೆಂಡರಿ ಶಾಲೆಗಳಿಗೆಲ್ಲಾ ಈ ಶಿಕ್ಷಣಕ್ರಮವನ್ನು ಇನ್ನು ಮುಂದೆ ತಪ್ಪದೆ ಅನ್ವಯಿಸಬೇಕು. ಹೀಗೆ ಮಾಡುವುದರಿಂದ ಶಾಲೆಯಲ್ಲಿ ಕಲಿತ ಶಿಕ್ಷಣ ಬಾಳ್ವೆಗೂ ಹರಡುವುದು. ಶಾಲೆಯನ್ನು ಬಿಟ್ಟ ಕೂಡಲೆ ವಿದ್ಯಾರ್ಥಿಗೆ ತಾನಾವುದೋ ಹೊಸ ಅಪರಿಚಿತ ಪ್ರಪಂಚಕ್ಕೆ ಬಂದೆನೆಂಬ ಭಯವುಂಟಾಗುವುದಿಲ್ಲ. ಸಮಾಜ ಜೀವನದಲ್ಲಿ ಅವನು ಪಡೆದ ಶಿಕ್ಷಣದಿಂದ ಜನಕ್ಕೆ ಫಲ ದೊರಕುವುದು.

ಇನ್ನು ವಯಸ್ಕರ ಶಿಕ್ಷಣದ ಜಟಿಲವಾದ ಸಮಸ್ಯೆಯ ಪರಿಹಾರಕ್ಕೆ ನಮ್ಮ ಎಲ್ಲ ಬುದ್ಧಿಶಕ್ತಿಯನ್ನೂ ಕಾರ್ಯಶಕ್ತಿಯನ್ನೂ ಪ್ರಯೋಗಿಸಬೇಕು. ವಯಸ್ಕರು ಈವರೆಗೆ ಅಕ್ಷರಸ್ಥರಾಗದುದಕ್ಕೆ ವಿದ್ಯಾವಂತರಾದ ನಮ್ಮ ತಪ್ಪೇ ಕಾರಣ. ಆ ಮಂಕರು ಅಜ್ಞಾನ ದಾರಿದ್ರ್ಯ ಅಂಧಕಾರದಲ್ಲಿರಲು ಬಿಟ್ಟವರು ನಾವೇ. ಅವರ ಬಾಳನ್ನು ನಾವು ವೈಭವಯುಕ್ತವಾಗಿ ಮಾಡಲಿಲ್ಲ. ಆರ್ಥಿಕ ಪುನರುಜ್ಜೀವನವಾದ ಹೊರತು ಹೊಸ ಚೈತನ್ಯ ಸಾಧ್ಯವಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ನನ್ನ ದೃಷ್ಟಿಯಲ್ಲಿ ಆರ್ಥಿಕ ಅಭಿವೃದ್ಧಿಯೂ ಬುದ್ಧಿಯ ಬೆಳವಣಿಗೆಯೂ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಈ ಎರಡು ಮುಖಗಳಲ್ಲಿಯೂ ಏಕಕಾಲದಲ್ಲಿ ಕಾರ್ಯ ಮಾಡದಿದ್ದರೆ ನಮಗೆ ಫಲ ದೊರೆಯುವುದಿಲ್ಲ. ನಮ್ಮ ಕಾಲೇಜುಗಳಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳಿದ್ದಾರೆ. ಅವರ ಸಹಾಯದಿಂದಲೂ ಆಧುನಿಕ ಉಪಕರಣಗಳಾದ ಸಿನಿಮಾ ರೇಡಿಯೊ ನಾಟಕ ಶಾಲೆ ಮುಂತಾದುವುಗಳ ಸಹಾಯದಿಂದಲೂ, ವಯಸ್ಕರ ಶಿಕ್ಷಣದಲ್ಲಿ ಪ್ರಗತಿ ಬೇಗ ದೊರೆಯುವುದರಲ್ಲಿ ಸಂದೇಹವಿಲ್ಲ.

ವಿಜ್ಞಾನದ ಬೆಳವಣಿಗೆ ಇಂದಿನ ಜಗತ್ತಿನ ಅದ್ಭುತ. ನಮಗೆ ಒಪ್ಪಿಕೆಯಾಗಲಿ ಅಥವ ಬಿಡಲಿ, ವಿಜ್ಞಾನದ ಬೆಳವಣಿಗೆಯನ್ನು ತಡೆಯುವುದು ಸಾಧ್ಯವಿಲ್ಲ. ನಮ್ಮ ಆಹಾರ, ವಸ್ತ್ರ, ಮನೆ, ಪ್ರಯಾಣ, ಪರಸ್ಪರ ವಿಚಾರ ವಿನಿಮಯ, ಆರೋಗ್ಯ—ನಮ್ಮ ಜೀವನದ ಎಲ್ಲ ಅಲ್ಪ ವಿಷಯಗಳಲ್ಲಿಯೂ—ವಿಜ್ಞಾನ ಪ್ರವೇಶಿಸಿದೆ. ವಿಜ್ಞಾನವಿಲ್ಲದೆ ನಮ್ಮ ಬಾಳು ಸಾಧ್ಯವಿಲ್ಲ. ನಾವು ವಿಜ್ಞಾನವನ್ನು ಬಿಟ್ಟು ಬಾಳಲಾರೆವು. ಮುವ್ವತ್ತು ವರುಷಗಳ ಹಿಂದೆ ಹಳ್ಳಿಗಳಲ್ಲಿ ತಮ್ಮ ಕಾಳುಗಳನ್ನು ತಾವೇ ಬೀಸಿಕೊಳ್ಳುತ್ತಿದ್ದರು. ಇಂದು ಅಂತಹ ಹಳ್ಳಿಗಳಿಗೂ ಯಂತ್ರ ಪ್ರವೇಶಿಸಿದೆ. ಒಂದಾಣೆ ಎರಡಾಣೆ ಕೊಟ್ಟು

ಬಡವರೂ ಕಾಳುಗಳನ್ನು ಬೀಸಿಸಿಕೊಳ್ಳುತ್ತಾರೆಯೇ ಹೊರತು ತಾವೇ ಬೀಸವು ದಿಲ್ಲ. ಪ್ರಯಾಣ ಸೌಕರ್ಯದ ವಿಚಾರವೂ ಹೀಗೆಯೇ ಆಗಿದೆ. ವಿಜ್ಞಾನದ ಬೆಳವಳಿಗೆ ಮತ್ತು ಯಂತ್ರಗಳಿಗೆ ವಿರೋಧವಾಗಿ ಸಾಧಾರಣವಾಗಿ ಎರಡು ಆಕ್ಷೇಪಣೆಗಳಿವೆ. ಮೊದಲನೆಯದು ಯಂತ್ರಗಳಿಂದ ಮನುಷ್ಯನಿಗೆ ದೇಹಶ್ರಮದ ಆನಂದ ಮರೆಯಾಗಿ ಅವನ ಬಾಳು ನೀರಸವಾಗಿದೆ ಎಂಬುದು. ಎರಡನೆಯದು ವಿಜ್ಞಾನವು ಮನುಷ್ಯನ ಆತ್ಮಸಾಧನೆಗಿಂತ ಭೌತಸಾಧನೆಯನ್ನೇ ಹೆಚ್ಚುಮಾಡಿ ಕೊಂಡಿದೆ ಎಂಬುದು. ಎರಡು ಆಕ್ಷೇಪಣೆಗಳೂ ಅರ್ಧಮಟ್ಟಿಗೆ ನಿಶ್ಚಯ.

ವಿಜ್ಞಾನದ ಅಭ್ಯಾಸದಿಂದ ಪಂಚೇಂದ್ರಿಯಗಳು ಪಟುವಾದವು. ಕಣ್ಣು ಹಿಂದೆಂದೂ ನೋಡದಷ್ಟು ಚುರುಕಾಗಿ ನೋಡಿತು. ಕಿವಿ ಹಿಂದೆಂದೂ ಕೇಳ ದಷ್ಟು ಸೂಕ್ಷ್ಮವಾಗಿ ಕೇಳಿತು. ಕೈ ಹಿಂದೆಂದೂ ಮಾಡದಷ್ಟು ಶಿಸ್ತಿನಿಂದ ಕೆಲಸ ಮಾಡಿತು. ಆದರೆ ಈ ಕೈಚಳಕದೊಂದಿಗೆ ಮಾನವನ ಅನುಭವವೂ ಕಡಿಮೆ ಯಾಯಿತು. ವಿಜ್ಞಾನದ ಉಪಕರಣಗಳಿಗೆ ಭಾವನಾ ಪ್ರಪಂಚದಲ್ಲಿ ಬೆಲೆ ಇಲ್ಲ ವಾಯಿತು. ಕಣ್ಣಿಗೆ ಕಾಣದುದೆಲ್ಲ ಸುಳ್ಳೇ ಎಂದರು. ಬಾಹ್ಯ ಜಗತ್ತೇ ಎಲ್ಲವೂ ಆಯಿತು. ಭಾವನೆಗಳ ಒಳಗಿನ ಅಂತರಂಗದ ಜಗತ್ತು ಇಲ್ಲ ವಾಯಿತು.

ವಿಜ್ಞಾನ ಹೀಗೆ ಬೆಳೆದುದರಿಂದ, ಯಾವುದು ಬಹು ಜನರ ಬಹು ಸುಖವೋ ಅದೇ ಶ್ರೇಯಸ್ಸು ಎಂಬ ಭಾವನೆ ಪ್ರಚಾರವಾಯಿತು. ನೋವಿನಿಂದ ಪಾರಾಗಿ ಸುಖವನ್ನು ಹುಡುಕುವುದೇ ಜೀವನದ ಗುರಿಯಾಯಿತು. ಆವಶ್ಯಕ ವಾದ ಪದಾರ್ಥಗಳ ಸೃಷ್ಟಿಯೇ ಆ ಸುಖದ ಮೂಲವಾಯಿತು. ಆವಶ್ಯಕತೆ ಗಳನ್ನು ಹೆಚ್ಚಿಸುವುದು; ತಯಾರಿಸುವುದು, ವ್ಯಾಪಾರ ಕೇಂದ್ರಗಳನ್ನು ಹಿಡಿಯುವುದು, ಗಿರಾಕಿಗಳನ್ನು ಸೃಷ್ಟಿಸುವುದು ಇವು ಯಂತ್ರಗಳ ಕಾರ್ಯ ಗಳಾದವು. ಹೆಚ್ಚು ಹೆಚ್ಚು ಪದಾರ್ಥಗಳನ್ನು ತಯಾರಿಸುವುದೇ ಸುಖ ಜೀವನ ಎಂದರು. ಒಳ್ಳೆಯ ಜೀವನ ಎಂದರೆ ಪದಾರ್ಥಗಳ ಸಲಕರಣೆಗಳಿರುವ ಜೀವನವೆಂದಾಯಿತು (good life is goods life). ಆದರೆ ಭಾರತೀ ಯರಾದ ನಾವು ಈ ಭೌತವೇದಾಂತವನ್ನು ಯಾವಾಗಲೂ ಒಪ್ಪಲಿಲ್ಲ. ಭಾರತೀಯರಾದ ನಮಗೆ, ಯಂತ್ರವು ಏನನ್ನೂ ಕೇಳುವುದಿಲ್ಲ, ಯಾವ ವ್ಯಾಖ್ಯಾನವನ್ನೂ ಮಾಡುವುದಿಲ್ಲ ಎಂಬುದು ಗೊತ್ತು. ಕೇಳುವುದೂ ವ್ಯಾಖ್ಯಾನ

ದಂತೆ ನಡೆಯುವುದೂ ಮನುಷ್ಯನ ಜೀವ. ದೋಷ ವಿಜ್ಞಾನದಲ್ಲ, ನಾವು ಅದನ್ನು ಸರಿಯಾಗಿ ಉಪಯೋಗಿಸದಿದ್ದರೆ ದೋಷ ನಮ್ಮದು. ನಮ್ಮ ಬಾಳಿನ ಗುರಿಯನ್ನು ನಮ್ಮ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಸೃಷ್ಟಿಯ ಹುರುಳನ್ನು ಹುಡುಕುವುದೂ, ನಮಗೆ ಗೋಚರವಾದ ಸತ್ಯದ ಅನುಸರಣೆಯೂ ಬಾಳಿನ ಗುರಿ. ಭಾರತೀಯರು ಈ ದೃಷ್ಟಿಯಿಂದ ವಿಜ್ಞಾನವನ್ನು ಉಪಯೋಗಿಸಿಕೊಳ್ಳಬೇಕು.

ಭಾರತದಲ್ಲಿ, ಪ್ರಕೃತಿಯ ಗರ್ಭದಲ್ಲಿ ಇನ್ನೂ ಅನೇಕ ಐಶ್ವರ್ಯ ಅಡಗಿದೆ. ಗಣಿಗಳು ಕಾಡುಗಳು ಭೂವ್ಯವಸಾಯ ಇವೆಲ್ಲಾ ನಮ್ಮ ಮೂಲಧನಗಳು. ಪರಿಶೋಧನೆಯಿಂದ ಇವುಗಳನ್ನೆಲ್ಲಾ ಕಂಡುಹಿಡಿಯಬೇಕಾಗಿದೆ. ಆಧುನಿಕ ವಿಜ್ಞಾನ ಮಾರ್ಗದಿಂದ ಅವುಗಳನ್ನೆಲ್ಲಾ ಉಪಯೋಗಿಸಿಕೊಳ್ಳಬೇಕಾಗಿದೆ. ಎಣ್ಣೆ ಬೀಜಗಳು ಲೋಹಗಳು ಹೂವುಗಳು ಗಾಜು ಇವುಗಳಲ್ಲೆಲ್ಲ ಹೊಸ ಹೊಸ ಪ್ರಯೋಗಗಳನ್ನು ನಡಸಬೇಕಾಗಿದೆ. ನೂತನಗಳಾದ ಸಮ್ಮಿಶ್ರ ಲೋಹಗಳು ಪ್ಲಾಸ್ಟಿಕ್, ವಾರ್ನಿಷ್, ರೆಯಾನ್, ಕೃತಕರೇಷ್ಮೆ ಇವುಗಳಲ್ಲಿ ಕೋಟಿಗಟ್ಲೆ ಧನ ಅಡಗಿದೆ. ಕೋಟಿಗಟ್ಲೆ ಜನಕ್ಕೆ ಉದ್ಯೋಗ ಅಡಗಿದೆ. ಬಣ್ಣಗಳಿಗೆ ಬೇಕಾದ ಕಚ್ಚಾಮಾಲೆಲ್ಲಾ ಭಾರತದಲ್ಲಿ ದೊರೆಯುತ್ತದೆ. ಇವುಗಳಿಂದ ಆಧುನಿಕ ಆಯುಧಗಳ ಕಾರ್ಖಾನೆಗಳ ಸ್ಥಾಪನೆಗೂ ಅವಕಾಶವಾಗುವುದು.

ನಮ್ಮ ರಾಷ್ಟ್ರೀಯ ಸರ್ಕಾರ, ಭಾರಿಭಾರಿ ಕೈಗಾರಿಕೆಗಳ ಆವಶ್ಯಕತೆಯನ್ನು ಕುರಿತು ದೀರ್ಘವಾಗಿ ಆಲೋಚಿಸಿದೆ. ಯಾಂತ್ರೀಕರಣದಲ್ಲಿ ವಿವೇಕಯುತವಾದ ಯೋಜನೆಯನ್ನು ಅನುಸರಿಸಬೇಕಾಗಿದೆ. ಈ ಯೋಜನೆಯಲ್ಲಿ ಭಾರಿ ಭಾರಿ ಕೈಗಾರಿಕೆಗಳು, ಮಧ್ಯಮವರ್ಗದ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು ಇವೆಲ್ಲಾ ಸಮಾವೇಶವಾಗಬೇಕಾಗಿದೆ. ಈ ಯೋಜನೆಗಳಲ್ಲಿ ನಮ್ಮ ದೇಶದ ಪರಿಸ್ಥಿತಿಯನ್ನೂ ಅವಶ್ಯಕತೆಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ದೊಡ್ಡ ದೊಡ್ಡ ಹೊಸ ಕೈಗಾರಿಕೆಗಳನ್ನು ಬೆಳೆಸಬೇಕು. ಇರುವುದನ್ನೂ ಬೆಳೆಸಬೇಕು. ಈ ಉದ್ದಿಶ್ಯಗಳಿಗಾಗಿ ಪಂಡಿತ್ ಜವಹರಲಾಲ್ ನೆಹ್ರುರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಯೋಜನಾಸಮಿತಿ ಸ್ಥಾಪಿತವಾಯಿತು. ಆ ಸಮಿತಿಯ ನಿರ್ದೇಶದಂತೆ ಬೇರೆಬೇರೆ ಉಪಸಮಿತಿಗಳು ಭಾರತದ ಕೈಗಾರಿಕೆಗಳ ಪುನರುಜ್ಜೀವನ

ಕ್ಕಾಗಿ ಅವಶ್ಯಕವಾದ ಸಲಹೆಗಳನ್ನೆಲ್ಲಾ ಕೊಟ್ಟವೆ. ಭಾರತ, ಸ್ವತಂತ್ರವಾಗಿದೆ. ಬೇಕಾದ ಕಚ್ಚಾಮಾಲುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ವೃದ್ಧಿಪಡಿಸುತ್ತದೆ. ಮುಖ್ಯಮಂತ್ರಿ ಪಂಡಿತ್ ನೆಹ್ರೂರವರೇ ವಿಜ್ಞಾನ ಮತ್ತು ಕೈಗಾರಿಕೆಗಳ ಪ್ರಯೋಗದ ಕಡತಗಳಿಗೆ ಅಧಿಕಾರಿಗಳಾಗಿದ್ದಾರೆ.

ಆಧುನಿಕ ಪ್ರಪಂಚದಲ್ಲಿ ಭಾರತವು, ವಿಜ್ಞಾನದ ಉಪಯೋಗದಲ್ಲಿಯೂ ಪರಿಶೋಧನೆಯಲ್ಲಿಯೂ ಹಿಂದೆ ಬಿದ್ದಿದೆ. ತನ್ನ ವಿಜ್ಞಾನ ಜ್ಞಾನವನ್ನು ಜನೋಪಕಾರಕ್ಕಾಗಿ ವಿನಿಯೋಗಿಸಲು ಪ್ರತಿಯೊಬ್ಬ ಯುವಕನಿಗೂ ಬೇಕಾದಷ್ಟು ಅವಕಾಶವಿದೆ. ನಮ್ಮ ಜನರ ಬಾಳ್ವೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ನಾವು ಎಷ್ಟುಬೇಗ ಆ ಶಕ್ತಿಗಳನ್ನು ನಮ್ಮ ನಿತ್ಯಜೀವನದಲ್ಲಿ ಪ್ರಯೋಗಿಸುತ್ತೇವೆಯೋ ಅಷ್ಟು ಒಳ್ಳೆಯದು.

ಹಿಂದೆ ನಮ್ಮ ಆಳರಸರು ಶಿಕ್ಷಣವನ್ನು ಮೇಲಿನಿಂದ ಪ್ರಾರಂಭಿಸುತ್ತಿದ್ದರು. ಕೆಲವು ಕಾಲೇಜುಗಳನ್ನೂ ಹೈಸ್ಕೂಲುಗಳನ್ನೂ ಸ್ಥಾಪಿಸುವುದರಿಂದ ಜ್ಞಾನ ಹೇಗೋ ದೇಶದಲ್ಲೆಲ್ಲಾ ಹರಡುವುದೆಂದು ಅವರು ನಂಬಿದ್ದರು. ಆದರೆ ಜ್ಞಾನ ಅಷ್ಟು ಸುಲಭವಾಗಿ ಹರಿಯುವುದಿಲ್ಲ. ನಮ್ಮ ಹಿಂದಲ ಸರ್ಕಾರಗಳ ಈ ನೀತಿಯಿಂದ, ದರಿದ್ರ ಮಧ್ಯಮವರ್ಗದ ಕುರ್ಚಿ ಭೂಷಣರೂ, ಉಪಾಧ್ಯಾಯರೂ, ವಕೀಲರೂ ಮಾತ್ರ ಸೃಷ್ಟಿಯಾದರು. ವಿಜ್ಞಾನ, ಕೈಗಾರಿಕಾ ಶಿಕ್ಷಣ ಇವೆಲ್ಲಾ ಮೂಲೆಗೆ ಬಿದ್ದವು. ರಾಯಲ್ ಇನಿಸ್ಟಿಟ್ಯೂಟ್ ಆಫ್ ಸೈನ್ಸ್ ೧೯೨೦ ರ ನಂತರವೇ ಕಾರ್ಯಮಾಡಲು ಪ್ರಾರಂಭಿಸಿತು. ಈ ಕಾರಣ ದಿಂದಲೇ ಭಾರತದಲ್ಲಿ ಕಾಲೇಜುಗಳಿಗೆ ಹೋಗುವವರ ಸಂಖ್ಯೆ, ಹೈಸ್ಕೂಲಿಗೆ ಹೋಗುವವರ ಸಂಖ್ಯೆಯೊಂದಿಗೆ ಹೋಲಿಸಿದರೆ ಇತರ ದೇಶಗಳಿಗಿಂತ ಬಹಳ ಹೆಚ್ಚಾಗಿದೆ. ಸಾರ್ಜಂಟ್ ವರದಿಗನುಸಾರವಾಗಿ ಭಾರತದಲ್ಲಿ ಮೂರು ಹೈಸ್ಕೂಲು ವಿದ್ಯಾರ್ಥಿಗಳಲ್ಲಿ ಒಬ್ಬನು ವಿಶ್ವವಿದ್ಯಾಲಯಕ್ಕೆ ಸೇರುತ್ತಾನೆ. ಆದರೆ ಇಂಗ್ಲೆಂಡ್ ಜರ್ಮನಿಗಳಲ್ಲಿ ಏಳು ಹೈಸ್ಕೂಲು ವಿದ್ಯಾರ್ಥಿಗಳಿಗೆ ಒಬ್ಬನು ವಿಶ್ವ ವಿದ್ಯಾಲಯಕ್ಕೆ ಸೇರುತ್ತಾನೆ. ಇದರಿಂದ ನಮ್ಮ ವಿದ್ಯೆ ಬಹಳ ಮುಂದುವರೆದಿದೆ ಎಂದು ನಾವು ಹೆಮ್ಮೆಪಡಬೇಕಾದುದಿಲ್ಲ. ಯಾಕೆಂದರೆ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಭಾರತದಲ್ಲಿ ವಿಶ್ವವಿದ್ಯಾಲಯಗಳಿಗೆ ಹೋದವರು ಕಡಿಮೆ. ಇಂಗ್ಲೆಂಡಿನಲ್ಲಿ ಪ್ರತಿ ೮೩೭ ಜನಕ್ಕೆ ಒಬ್ಬರೂ, ಜರ್ಮನಿಯಲ್ಲಿ ಪ್ರತಿ ೬೯೦ ಕ್ಕೆ

ಒಬ್ಬರೂ, ಅಮೆರಿಕದಲ್ಲಿ ಪ್ರತಿ ೨೨೫ಕ್ಕೆ ಒಬ್ಬರೂ, ಭಾರತದಲ್ಲಿ ಪ್ರತಿ ೨೨೦೭ಕ್ಕೆ ಒಬ್ಬರೂ, ವಿಶ್ವವಿದ್ಯಾಲಯಕ್ಕೆ ವ್ಯಾಸಂಗಕ್ಕೆ ಹೋಗುತ್ತಾನೆ.

ಈ ಒಂದೇ ಮುಖವಾದ ಬೆಳವಣಿಗೆಯನ್ನು ನಾವು ಸರಿಪಡಿಸಬೇಕು. ಪ್ರಾಂತ ಸರ್ಕಾರಗಳೆಲ್ಲ ಪ್ರತಿ ಮಗುವಿಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ದೊರೆಯುವ ಏರ್ಪಾಡು ಮಾಡುತ್ತಿವೆ. ಬೊಂಬಾಯಿನಲ್ಲಿ ವಯಸ್ಕರ ಶಿಕ್ಷಣದ ೧೦ ವರುಷದ ಯೋಜನೆಯನ್ನು ಹಾಕಿದ್ದೇವೆ. ಪ್ರಾಥಮಿಕ ವಿದ್ಯಾಭ್ಯಾಸವೂ ವಯಸ್ಕರ ಶಿಕ್ಷಣವೂ ಸರ್ಕಾರಗಳ ಮುಖ್ಯಗುರಿಯಾದರೂ, ಸರ್ಕಾರಗಳು ಯಾವ ಬಗೆಯ ಶಿಕ್ಷಣದ ವಿಷಯದಲ್ಲಿಯೂ ಉದಾಸೀನ ಮಾಡುವಂತೆ ಇಲ್ಲ. ಎಲ್ಲ ರೂಪದ ಅವಿದ್ಯೆಗಳಿಗೂ ಎದುರಾಗಿ ಹೋರಾಡಲೇಬೇಕಾಗಿದೆ. ಬೊಂಬಾಯಿನಲ್ಲಿ ವಿಶ್ವವಿದ್ಯಾಲಯಕ್ಕೆ ಹೋಗದವರಿಗಾಗಿ, ಹೋಗಲಾರದವರಿಗಾಗಿ ವ್ಯವಸಾಯ ವ್ಯಾಪಾರ ಕೈಗಾರಿಕಾ ಶಿಕ್ಷಣಶಾಲೆಗಳನ್ನು ತೆರೆದಿದ್ದೇವೆ. ವಿದ್ಯೆ ಕಲಿತವರು ಹಾಗೆ ಹಾಗೆಯೇ ಸಮಾಜದಲ್ಲಿ ಉಪಯುಕ್ತ ಕೆಲಸಗಾರರಾಗಿ ಸೇರಿಕೊಳ್ಳುತ್ತಾರೆಯೇ ಹೊರತು ನಿರುದ್ಯೋಗಿಗಳಾಗಿ ತಿರುಗುವಂತೆ ಇಲ್ಲ. ಕೂಡಲೇ ಬೊಂಬಾಯಿನಲ್ಲಿ ಇಂಜಿನಿಯರಿಂಗ್; ಮೆಡಿಕಲ್ ಟೆಕ್ನಲಾಜಿಕಲ್ ಯೂನಿವರ್ಸಿಟಿಗಳನ್ನು ಹೆಚ್ಚಿಸುತ್ತೇವೆ.

ಈಗ ನಮ್ಮ ಯುವಕರಿಗೂ ಯುವತಿಯರಿಗೂ ವಿಜ್ಞಾನದ ಬೆಲೆ ಗೊತ್ತಾಗುತ್ತಿದೆ. ಅವರೆಲ್ಲಾ ವಿಜ್ಞಾನ ಶಿಕ್ಷಣಕ್ಕಾಗಿ ನುಗ್ಗುತ್ತಿದ್ದಾರೆ. ನಮ್ಮ ವಿಜ್ಞಾನ ಜ್ಞಾನವನ್ನು ನಿತ್ಯದ ಬಾಳ್ವಿಕೆಗೆ ಹೊಂದಿಸಿಕೊಳ್ಳಬೇಕು. ದಿನಚರಿಯ ಆವಶ್ಯಕತೆಗಳನ್ನು ಸೃಷ್ಟಿಸುವುದಕ್ಕೂ ನಮ್ಮ ಐಶ್ವರ್ಯವನ್ನು ಹೆಚ್ಚಿಸುವುದಕ್ಕೂ ವಿಜ್ಞಾನವನ್ನು ಬೆಳೆಸಬೇಕು. ಇದಕ್ಕೆ ಬರಿಯ ಕಲೆಗಳಾಗಲಿ ಬರಿಯ ವಿಜ್ಞಾನವಾಗಲಿ ಸಾಲದು. ಇದಕ್ಕೆ ವಿಜ್ಞಾನವನ್ನು ಜೀವನಕ್ಕೆ ಅನ್ವಯಿಸುವುದನ್ನು ಕಲಿಸುವ ಸಂಸ್ಥೆಗಳು ಬೇಕು. ವ್ಯವಸಾಯದ ಕಾಲೇಜುಗಳು ಭೂಮಿಯಿಂದ ಹೆಚ್ಚು ಬೆಳೆ ತೆಗೆಯುವುದನ್ನು ಕಲಿಸಬೇಕು. ಇಂಜನೀಯರಿಂಗ್ ಕಾಲೇಜುಗಳು ವ್ಯರ್ಥವಾಗುವ ನದಿಗಳ ನೀರನ್ನು ಫಲವತ್ತಾಗಿ ಮಾಡುವುದನ್ನು ಕಲಿಸಬೇಕು. ಸೇತುವೆ ರಸ್ತೆ ಇವುಗಳ ಸೃಷ್ಟಿಯನ್ನು ಕಲಿಸಬೇಕು. ಹೈಡ್ರೋ ಎಲೆಕ್ಟ್ರಿಕಲ್ ಯೋಜನೆಗಳಿಂದ ದೇಶಶಕ್ತಿಯುತವಾಗಿ, ವಸ್ತ್ರ, ಉಕ್ಕು, ರೈಲುಮಾರ್ಗ, ವಾಹನ ಸೌಕರ್ಯ ಮುಂತಾದ ಸಾವಿರಾರು ಬಾಳಿನ ಅನುಕೂಲಗಳು ಸೃಷ್ಟಿಯಾಗಬೇಕು. ಎಲ್ಲಿಗೂ ವಿದ್ಯೆ ಬೇಕು.

ವಿಜ್ಞಾನವನ್ನು ನಿತ್ಯಜೀವನಕ್ಕೆ ಅನ್ವಯಿಸಿಕೊಂಡ ಹೊರತು ಇದು ಸಾಧ್ಯವಿಲ್ಲ. ಆದರೆ ವಿಜ್ಞಾನ ಇಂದು ದೊಡ್ಡ ಅಪವಾದಕ್ಕೆ ಗುರಿಯಾಗಿದೆ. ಈಚೆಗೆ ಪ್ರಕಟವಾದ ಒಂದು ಗ್ರಂಥದಲ್ಲಿ ಹೀಗೆ ಹೇಳಿದೆ. "ಈಗ ಮನುಷ್ಯ ಜಗತ್ತು ದೊಡ್ಡ ಅಪಾಯದಲ್ಲಿದೆ. ನಮಗೆ ಒಂದು ಸವಾಲು, ಪ್ರಶ್ನೆ ಎದ್ದಿದೆ. ತಾನು ಸೃಷ್ಟಿಸಿದ ನಾಗರೀಕತೆ ಮನುಷ್ಯನನ್ನು ಫ್ರಾಂಕಿನ್‌ಸ್ಟೈನ್‌ನಂತೆ ಆಹುತಿ ತೆಗೆದುಕೊಳ್ಳುವುದೇ, ಎಂಬುದು. ತಾನು ಸೃಷ್ಟಿಸಿದ ಶಕ್ತಿಗಳನ್ನು ಮನುಷ್ಯ ಆಳಬಲ್ಲನೆ? ಈ ನಾನಾ ಬಗೆಯ ಸೂಕ್ಷ್ಮತರಗಳಾದ ಯಂತ್ರಗಳು ಮನುಷ್ಯನ ಸೇವಕರೇ ಅಥವ ಒಡೆಯರೆ? ಯಂತ್ರ ಬೆಳೆದಂತೆ ಮನುಷ್ಯನೂ ಬೆಳೆದಿದ್ದಾನೆಯೆ? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡುವ ಕಾಲ ಸನ್ನಿಹಿತವಾಗಿದೆ. ಯಾಕೆಂದರೆ ವಿಜ್ಞಾನ ಸುಮ್ಮನೆ ಕುಳಿತಿಲ್ಲ. ಅದು ದಿನದಿನಕ್ಕೂ ಮನೋವೇಗದಲ್ಲಿ ಬೆಳೆಯುತ್ತಿದೆ."

ಈ ಮೇಲಿನ ವಾಕ್ಯಗಳನ್ನು ನೋಡಿದಾಗ, ವಿಜ್ಞಾನ ಪ್ರಯೋಗ ಶಾಲೆಗಳಿಂದ ಭಾರತಕ್ಕೆ ನಿಜವಾಗಿ ಒಳ್ಳೆಯದಾಗುವುದೆ? ಅಥವ ಕೇಡಕೆ ಎಂಬ ಭಾವನೆ ನನಗೆ ಬಂದಿತು. ಆದರೆ ಬೇಗ ನನ್ನ ನಿರಾಸೆ ಮಾಯವಾಗಿ ಗೆಲುವೂ ಹೊಸ ಆಸೆಗಳೂ ಹುಟ್ಟಿಕೊಂಡವು. ಮನುಷ್ಯ, ಭೌತವಸ್ತುಗಳ ಸಮೂಹವೂ ಹೌದು. ಮಾನಸಿಕ ಚಟುವಟಿಕೆಗಳ ಪ್ರಾಣಿಯೂ ಹೌದು. ಮರ ಪಶುಗಳಂತೆಯೇ ಅವನು ಭೂಮಿಗೆ ಸೇರಿದವನು. ಆದರೆ ಅವನು ಹಾಗೆಯೇ ಮತ್ತೊಂದು ಪ್ರಪಂಚಕ್ಕೂ ಸೇರಿದವನು. ಅದೇ ಅವನ ಮನಸ್ಸು ಮತ್ತು ಆತ್ಮದ ಪ್ರಪಂಚ. ಅದರ ವ್ಯಾಪ್ತಿ, ದೇಶ ಕಾಲಾತೀತವಾದುದು. ನಮಗೆ ಮೋಕ್ಷವಿರುವುದಾದರೆ ಅದರಿಂದಲೇ. ಈ ಕಾರಣದಿಂದ ನಾವು ವಿಜ್ಞಾನವನ್ನು ನಿಂದಿಸಿ ಪ್ರಯೋಜನವಿಲ್ಲ. ಜಗತ್ತನ್ನು ನಾಶಗೊಳಿಸುವ ಆಯುಧಗಳನ್ನು ಸೃಷ್ಟಿಸಿತೆಂದು ನಾವು ವಿಜ್ಞಾನವನ್ನು ದೂರುವುದಕ್ಕಿಂತ ಅದಕ್ಕೆ ಕಾರಣವೇನೆಂಬುದನ್ನು ಕಂಡು ಹಿಡಿಯಬೇಕು. ವಿಜ್ಞಾನ ಬೆಳೆಯುವುದಕ್ಕೆ ಮುಂಚೆಯೂ ಯುದ್ಧಗಳು ಆಗುತ್ತಲೇ ಇದ್ದವು. ಆಗಿನವರೂ ಜನರನ್ನು ನಾಶಮಾಡುವ ಯಂತ್ರಗಳನ್ನು ಕಂಡುಹಿಡಿಯಲು ತಮ್ಮ ಬುದ್ಧಿಯನ್ನು ಉಪಯೋಗಿಸುತ್ತಲೇ ಇದ್ದರು. ಯಾವ ವ್ಯಾಜ್ಯ ಪರಿಹಾರಕ್ಕೂ ಯುದ್ಧವೇ ಮಾರ್ಗವೆಂದು ಮನುಷ್ಯನ ಮತವಾಗಿತ್ತು. ಆದುದರಿಂದ, ಮನುಷ್ಯ ಪ್ರಪಂಚದ ನಾಶಕ್ಕೆ, ವಿಜ್ಞಾನದ

ಆಯುಧಗಳು ಕಾರಣವೆಂದು ಹೇಳುವುದು ಸರಿಯಲ್ಲ. ಯುದ್ಧ ಯಾವಾಗಲೂ ಮನುಷ್ಯನ ಸ್ವಭಾವವೆಂಬುದು ಜಗತ್ತು ಹುಟ್ಟಿದಂದಿನಿಂದ ಇಂದಿನವರೆಗಿನ ಇತಿಹಾಸದಿಂದ ತಿಳಿಯುತ್ತದೆ. ಆದುದರಿಂದ ಯುದ್ಧಕ್ಕೆ ವಿಜ್ಞಾನವಮಾತ್ರವೇ ಕಾರಣವಲ್ಲ. ವಿಜ್ಞಾನದಿಂದ ವಿನಾಶಕಾರಕವಾದ ಶಕ್ತಿಗಳು ಹುಟ್ಟಿರುವಂತೆ ಜನೋಪಯೋಗಿಗಳಾದ ಶಕ್ತಿಗಳೂ ಜನಿಸಿವೆ. ಉಕ್ಕು ಯುದ್ಧಕ್ಕೆ ಉಪಯೋಗವಾಗುವಂತೆ, ಸಾವಿರಾರು ಸೌಕರ್ಯಗಳಿಗೆ ಉಪಯೋಗವಾಗಿದೆ. ಅಣು ಬಾಂಬು ಸಹ ಹಾಗೆಯೇ. ಸರಿಯಾಗಿ ಉಪಯೋಗಿಸಿದರೆ ಅದರಿಂದ ಜಗತ್ತಿಗೆ ಬಹಳ ಮಂಗಳವಾಗುವುದು.

ವಿಜ್ಞಾನದಿಂದ ಬರಿಯ ಪ್ರಾಪಂಚಿಕ ಸುಖ ದೊರೆಯುತ್ತದೆ. ಆತ್ಮ ಸಾಯುತ್ತದೆ ಎಂಬ ಮಾತಿಗೂ ಅರ್ಥವಿಲ್ಲ. ಪ್ರಾಪಂಚಿಕ ಸುಖವೆಂದರೆ ಜಗತ್ತಿನಲ್ಲಿ ಹಿಂದೆ ಸೃಷ್ಟಿಯಾಗುತ್ತಿದ್ದುದಕ್ಕಿಂತ ಈಗ ಹೆಚ್ಚು ಆಹಾರ ವಸ್ತ್ರ ಜೀವನ ಸೌಕರ್ಯಗಳೆಂದರೆ, ನಾನು ಅದು ಸರಿ ಎನ್ನುತ್ತೇನೆ. ಆದರೆ ವಿಜ್ಞಾನದಿಂದ ದೊರೆತಿರುವ ಸಹಾಯ ಅದು ಮಾತ್ರವೇ ಅಲ್ಲ. ನಮಗೆ ಒಂದು ವೈಜ್ಞಾನಿಕ ದೃಷ್ಟಿ, ಶಾಸ್ತ್ರೀಯ ದೃಷ್ಟಿ ದೊರತಿದೆ. ಜಗತ್ತಿನ ಬುದ್ಧಿವಂತರೆಲ್ಲ ವೈಜ್ಞಾನಿಕ ದೃಷ್ಟಿಯಿಂದ ಯೋಚಿಸುತ್ತಿದ್ದಾರೆ. ಈ ದೃಷ್ಟಿಯನ್ನು ಎಲ್ಲ ವಿಜ್ಞಾನಿಗಳೂ ಪ್ರಾಮಾಣಿಕವಾಗಿ ಬಳಸಿಕೊಂಡರೆ, ವಿಜ್ಞಾನವು ಧರ್ಮ ಅಥವಾ ವೇದಾಂತದಂತೆ ಜನೋಪಕಾರಿಯಾಗುವುದರಲ್ಲಿ ಸಂದೇಹವಿಲ್ಲ. ವಿಜ್ಞಾನಕ್ಕೂ ಲೋಕೋಪಕಾರಕ್ಕೂ ವಿರೋಧವೆಂದು ಭಾವಿಸಬಾರದು. ಉದಾಹರಣೆಗೆ ಇಂದಿನ ಮುಖ್ಯ ಪ್ರಶ್ನೆಯಾದ ಯುದ್ಧವನ್ನೇ ತೆಗೆದುಕೊಳ್ಳಿ. ಹಿಂದೆ, ಎರಡು ದೇಶಗಳ ಭಿನ್ನಾಭಿಪ್ರಾಯ ಪರಿಹಾರಕ್ಕೆ ತಿಳಿದಿದ್ದ ಮಾರ್ಗ ಯುದ್ಧ ಒಂದೇ. ಆದರೆ ಈಗ ವಿಜ್ಞಾನ ಮತ್ತು ವೈಜ್ಞಾನಿಕ ದೃಷ್ಟಿ ಜನರಿಗೆ ಉಂಟಾಗಿರುವುದರಿಂದ, ಭಿನ್ನಾಭಿಪ್ರಾಯ ಪರಿಹಾರಕ್ಕೆ ಯುದ್ಧಕ್ಕಿಂತ ಬೇರೆ ದಾರಿ ಇಲ್ಲವೇ ಎಂದು ವಿವೇಕಿಗಳೆಲ್ಲಾ ಯೋಚಿಸುತ್ತಿದ್ದಾರೆ. ವಿಜ್ಞಾನದಿಂದ ಜಗಧ್ವಂಸಕಶಕ್ತಿ ಮನುಷ್ಯನಿಗೆ ದೊರೆತಿರುವುದು ನಿಜ. ಆದರೆ ಯುದ್ಧದ ಬದಲು ಇತರ ಶಾಂತಿ ಮಾರ್ಗಗಳನ್ನು ಅನುಸರಿಸುವ ಬುದ್ಧಿ ಅವನಿಗೆ ದೊರೆತಿರುವುದೂ ವಿಜ್ಞಾನದಿಂದಲೇ.

ವ್ಯಕ್ತಿಯ ಮಂಗಳವೆಂಬ ಪುಟ್ಟದಿಂದ ಸಮಾಜಮಂಗಳವೆಂಬ ಮೇಲು

ಮಟ್ಟವನ್ನು ವಿಜ್ಞಾನ ಒತ್ತಿ ಹೇಳುತ್ತಿದೆ, ನಮ್ಮ ಧರ್ಮಗಳೆಲ್ಲಾ ಬೋಧಿಸಿರುವುದು ಇವನ್ನೇಯೆ. ಜನರ ಹಿತವೇ ಧರ್ಮಗಳ ಆದರ್ಶ. ಆ ಆದರ್ಶಗಳು ವಿಜ್ಞಾನದಿಂದ ಸಾಧ್ಯವಾಗಿವೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ವಿಜ್ಞಾನವು ಬೆಳೆದಂತೆಲ್ಲ ವ್ಯಕ್ತಿಯು ಸಮಾಜದ ಭಾಗವಾಗಿ ತನ್ನ ಹಿತವನ್ನು ಸಮಾಜದ ಹಿತಕ್ಕೆ ಒಳಪಡಿಸುತ್ತಾನೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಜಗತ್ತಿನ ಶಾಂತಿಯನ್ನು ಕುರಿತು ಯೋಚಿಸುತ್ತಿರುವಂತೆ ಹಿಂದೆ ಯಾವಾಗಲೂ ಯೋಚಿಸಲಿಲ್ಲ. ವಿಜ್ಞಾನದ ಮೇಲೆ ಹೊರಿಸುವ ದೋಷಗಳು ವಿಜ್ಞಾನಕ್ಕೆ ಸೇರಿದುವಲ್ಲ; ಅದನ್ನು ಉಪಯೋಗಿಸುವ ನಮ್ಮ ಬುದ್ಧಿಗೆ ಅವು ಸೇರಿದುವು.

ಭಾರತೀಯರಾದ ನಮ್ಮ ದೃಷ್ಟಿ ಬಹಳ ಆಧ್ಯಾತ್ಮಿಕವೆಂದು ನಮ್ಮನ್ನು ಪಾಶ್ಚಾತ್ಯರು ಹಾಸ್ಯಮಾಡುವುದುಂಟು. ಈ ತಪ್ಪನ್ನು ನಮ್ಮ ವೇದಾಂತದ ತಲೆಗೆ ಕಟ್ಟುತ್ತಾರೆ. ಆದರೆ ಈ ಹಿಂದೂ ವೇದಾಂತ, ಪೂರ್ಣವಾಗಿ ಬೆಳೆದಿರುವ ಜೀವನ ವಿಜ್ಞಾನ. ನಮ್ಮ ಯೋಗಶಾಸ್ತ್ರಗಳನ್ನು ಅಭ್ಯಾಸಮಾಡುವವರಿಗೆ ನಮ್ಮ ಪ್ರಾಚೀನ ಶಾಸ್ತ್ರಾಭ್ಯಾಸಯೋಗ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಖಗೋಳ, ಗಣಿತ, ವೈದ್ಯ, ಪಟ್ಟಣನಿರ್ಮಾಣ ಮುಂತಾದ ಎಲ್ಲ ಶಾಸ್ತ್ರಗಳಲ್ಲಿಯೂ ಪೂರ್ಣ ಪಂಡಿತರೂ ವ್ಯಾಸಂಗಕ್ರಮವೂ ಇದ್ದವು. ಭಾರತೀಯರ ವೇದಾಂತ, ವಿಜ್ಞಾನದ ಬೆಳವಣಿಗೆಯನ್ನು ಎಂದಿಗೂ ತಡೆಯಲಿಲ್ಲ.

ಆಧ್ಯಾತ್ಮ, ಆದಿಭೌತ ಇವು ಬೇರೆ ಬೇರೆ ಎಂದೂ, ಒಂದಕ್ಕೊಂದಕ್ಕೆ ವಿರೋಧವೆಂದೂ ಭಾವಿಸಕೂಡದು. ಇವೆರಡೂ ಒಂದೇ ಜೀವನದ ಎರಡು ಮುಖಗಳು: ಒಂದೇ ಸತ್ಯದ ಎರಡು ಅಂಗಗಳು, ಭೌತಶಾಸ್ತ್ರಗಳು ಪ್ರಕೃತಿಯ ನಾನಾ ವೈವಿಧ್ಯಗಳಲ್ಲಿ ಅಂತರ್ಗತವಾಗಿರುವ ಜೀವನದ ಒಮ್ಮುಖವನ್ನು ಹುಡುಕುತ್ತಿವೆ. ಧರ್ಮ ಅಥವ ಆಧ್ಯಾತ್ಮ ಶಾಸ್ತ್ರವು ವ್ಯಕ್ತಿಯ ಚೇತನದ ಮೂಲಕ ಪರಮಾತ್ಮನನ್ನು, ಪರಸತ್ವವನ್ನು ಹುಡುಕುತ್ತಿದೆ. "ಅದು ತಿಳಿದರೆ ಎಲ್ಲವೂ ತಿಳಿದಂತೆ". ಯೋಗಿಗೂ ವಿಜ್ಞಾನಿಗೂ ಒಂದೇ ವಿಧಗಳಾದ ಶಕ್ತಿ ಇರಬೇಕು. ಸ್ವಾರ್ಥರಹಿತವಾದ ಮನೋಭಾವ, ಸತತಾನ್ವೇಷಣೆ, ನಿಷ್ಕೃರವಾದ ತೆರೆದ ಮನಸ್ಸು. ಈ ಗುಣಗಳಿಲ್ಲದಿದ್ದರೆ ಯೋಗಿಯಾಗಲಿ ವಿಜ್ಞಾನಿ

ಯಾಗಲಿ ತನ್ನ ಗುರಿಯನ್ನು ಮುಟ್ಟಲಾರದು. ಈ ಇಬ್ಬರೂ ಸಾಧಿಸುವ ಸಿದ್ಧಿ ಒಂದೇ ಎಂದು ನನ್ನ ಮತ. ಇಂದು ಜಗತ್ತು ನಾಶದ ಮಾರ್ಗದಲ್ಲಿದೆ. ಸ್ವಾರ್ಥ, ಹಿಂಸೆ ಇವು ಎಲ್ಲೆಲ್ಲೂ ತಾಂಡವವಾಡುತ್ತಿವೆ. ಮಾತಿನ ಶಾಂತಿವಾದ ದಿಂದ ಪ್ರಯೋಜನವಿಲ್ಲ. ವಿಜ್ಞಾನದ ಜತೆಯಲ್ಲಿ ಧ್ವಂಸ ಶಕ್ತಿಗಳೂ ಬೆಳೆಯು ತ್ತಿವೆ. ವಿಜ್ಞಾನವು, ತನ್ನ ಜತೆಯಲ್ಲಿ ನೀತಿ ಬರುತ್ತಿದೆಯೇ ಎಂದು ನೋಡು ತ್ತಿಲ್ಲ. ವಿಜ್ಞಾನ ತನಗೆ ಕಂಡ ಸತ್ಯವನ್ನು ನಮ್ಮ ಮುಂದೆ ತೆರೆಯುತ್ತಿದೆ. "ಅದನ್ನು ಕೆಡಕಿಗಾದರೂ ಉಪಯೋಗಿಸಿ, ಒಳ್ಳೆಯದಕ್ಕಾದರೂ ಉಪಯೋ ಗಿಸಿ ಅದು ನಿಮ್ಮ ಯೋಗ್ಯತೆ" ಎಂದು ಹೇಳುತ್ತಿದೆ.

ವಿಜ್ಞಾನ ಬೆಳೆದಂತೆ ಜನರ ನೀತಿ ಬೆಳೆಯಬೇಕು. ನಮ್ಮ ಶಿಕ್ಷಣ ಸಂಸ್ಥೆಗಳು ಆ ಕಾರ್ಯವನ್ನು ಮಾಡಬೇಕು. ನಮ್ಮ ನೀತಿ ಆದರ್ಶ ಉನ್ನತ ಮಟ್ಟದಲ್ಲಿರುವಂತೆ ಮಾಡುವ ಶಿಕ್ಷಣವನ್ನು ಕೊಡಲು ನಮ್ಮ ಧಾರ್ಮಿಕ ಸಾಮಾಜಿಕ ಶಿಕ್ಷಣ ಸಂಸ್ಥೆಗಳನ್ನು ಉಪಯೋಗಿಸಬೇಕು. ಯಾವ ಬಗೆಯ ಸಂಕುಚಿತ ಭಾವನೆಗಳಿಗೂ ಎಡೆಗೊಡಬಾರದು. ಜನರ ಶಿಕ್ಷಣವನ್ನು ಉತ್ತಮ ಗೊಳಿಸಲು ವಿಜ್ಞಾನವನ್ನು ಉಪಯೋಗಿಸಬೇಕು. ವಿಜ್ಞಾನದಿಂದ ನೀತಿ ಯಾಗಲಿ ಆರೋಗ್ಯವಾಗಲಿ ಮನಶ್ಶಾಂತಿಯಾಗಲಿ ಔದಾರ್ಯವಾಗಲಿ ಉಂಟಾಗುವುದೆಂದು ಯಾರೂ ಹೇಳುವುದಿಲ್ಲ. ಆದರೆ ಅವುಗಳ ಸೃಷ್ಟಿಗೆ ಅದರಿಂದ ಸಹಾಯವಾಗುವುದು. ಈ ದೃಷ್ಟಿಯಿಂದ ನೋಡುವಾಗ, ಅಣು ಬಾಂಬಿನಿಂದ ಮನುಷ್ಯ ತನ್ನ ಮರಣಶಾಸನಕ್ಕೆ ತಾನೇ ರುಜು ಹಾಕಿದಂತೆ ಆಗಿದೆ. ಇದರಿಂದ ಪಾರಾಗುವ ಮಾರ್ಗ ಯಾವುದು? ಆ ಮಾರ್ಗದಲ್ಲಿ ಇನ್ನೂ ಹೆಚ್ಚು ಹೆಚ್ಚು ಶೋಧನೆಗಳಾಗಿಲ್ಲ. ಆದರೂ ವಿಜ್ಞಾನ ಮಾನವ ಜಗತ್ತನ್ನು ಒಂದುಗೂಡಿಸುತ್ತಿದೆ. ರಾಷ್ಟ್ರಗಳಿಗೆ ನೀತಿಪ್ರಚೋದನೆ ಸ್ವಾರ್ಥ ತ್ಯಾಗ, ಪರಸ್ಪರ ನಂಬಿಕೆ, ಎಲ್ಲ ರಾಷ್ಟ್ರಗಳೂ ಸಹಜೀವನದಲ್ಲಿ ಸುಖವಾಗಿರಬಹುದೆಂಬ ಆಸೆಯನ್ನು ವಿಜ್ಞಾನ ಬೋಧಿಸಲು ಪ್ರಯತ್ನಿಸು ತ್ತಿದೆ. ಇದು ಭವ್ಯವಾದ ಕನಸು. ಭವ್ಯವಾದ ಕನಸನ್ನು ಕಂಡಾಗಲೇ ಮನುಷ್ಯನು ತನ್ನ ಪೂರ್ಣತೆಗೆ ಬೆಳೆಯುವನು. ಆಧುನಿಕ ಮನುಷ್ಯನನ್ನು ನೀತಿಯ ಮಾರ್ಗದಲ್ಲಿ ಪುನರುಜ್ಜೀವನಗೊಳಿಸುವುದಕ್ಕಿಂತ ಬೇರೆ ಸುಂದರವಾದ ಮತ್ತು ಧೀರವಾದ ಸಾಹಸವಿಲ್ಲ.

ನಮ್ಮ ಶಿಕ್ಷಣ ಸಂಸ್ಥೆಗಳು ಈ ವಿಶಾಲ ಭಾವನೆಗಳನ್ನು ಪ್ರಚಾರಪಡಿಸುವ ಕೇಂದ್ರಗಳಾಗಬೇಕು. ಅಲ್ಲಿ ನಿಜವಾದ ಶಿಸ್ತು, ಜ್ಞಾನ ತಪಸ್ಸು ವಿದ್ಯಾಪಕ್ಷಪಾತ, ಉದಾರವಾದ ಮನೋಭಾವ ಇವು ಬೆಳೆಯಬೇಕು. ಶಿಕ್ಷಣ ಪಡೆದವರು ಕಷ್ಟಜೀವಿಗಳಾಗಿ ಪ್ರಾಮಾಣಿಕರಾಗಿ ಇತರರ ಹಕ್ಕುಗಳನ್ನು ಪರಿಗಣಿಸುವವರಾಗಿರಬೇಕು. ತಮ್ಮ ಶಕ್ತಿಯನ್ನು ಸತ್ಕಾರ್ಯಗಳಿಗೆ ವಿನಿಯೋಗಿಸುವವರಾಗಿರಬೇಕು. ಮಹತ್ಕಾರ್ಯಗಳಲ್ಲಿ ಭಾಗಿಗಳಾಗುವುದೇ ನಮ್ಮ ಜೀವನದ ಸ್ಫೂರ್ತಿ. ಸುಖವಿಲ್ಲದಿದ್ದರೂ ಸಂಸ್ಕೃತಿ ಇರಲಿ. ವೈಭವವಿಲ್ಲದಿದ್ದರೂ ಸೌಂದರ್ಯವಿರಲಿ. ವ್ಯಕ್ತಿಗೆ ಸರಿಯಾದ ಬೆಲೆ ಇರಲಿ. ನಮ್ಮ ನಡತೆಯಿಂದ ಮಾತ್ರವೇ ನಮಗೆ ಗೌರವ ಅಥವ ಅಗೌರವ. ನಮ್ಮ ಪ್ರತಿಯೊಂದು ಮಾತು ಯೋಜನೆ ಕಾರ್ಯದಿಂದಲೂ ನಮ್ಮ ವ್ಯಕ್ತಿತ್ವ ಬೆಳೆಯುವುದು. ಇತರರು ಏನು ಮಾಡುತ್ತಿದ್ದಾರೆ ಎಂಬ ವಿಮರ್ಶೆಯನ್ನು ಮರೆತು, ನಾವು ಮಾಡುತ್ತಿರುವುದೇನು ಎಂಬುದನ್ನು ಕುರಿತು ಯೋಚಿಸೋಣ. ನಮ್ಮ ಶಿಕ್ಷಣ ಈ ಸತ್ಯವನ್ನು ನಮಗೆ ಹೇಳಿಕೊಟ್ಟರೆ ನಮ್ಮಲ್ಲಿ ನಿಜವಾದ ಸಂಯಮವೂ, ನಮ್ಮ ಸಾರ್ವಜನಿಕ ಜೀವನ ಪರಿಶುದ್ಧವೂ ಆಗುವುದು.

ಜ್ಞಾನವು ಸತ್ಯದಂತೆಯೇ ನಿಷ್ಠುರ. ಜ್ಞಾನಾರ್ಜನೆ ನಿಜವಾದ ತಪಸ್ಸಿನ ಫಲ. ಯಾವ ಕೃತಕಸಾಧನ ತಂತ್ರ ಚಾಕಚಕ್ಯದಿಂದಲೂ ಸುಲಭವಾಗಿ ಜ್ಞಾನಾರ್ಜನೆ ಸಾಧ್ಯವಲ್ಲ. ಜ್ಞಾನ ದೇವಾಲಯದಲ್ಲಿ ಪಕ್ಷತಂತ್ರಗಳಿಗೂ ರಾಜಕೀಯ ತಂತ್ರಗಳಿಗೂ ಜಾತಿ ಪಂಗಡ ತಂತ್ರಗಳಿಗೂ ಸ್ಥಳವಿಲ್ಲ. ವಿದ್ಯಾಸಂಸ್ಥೆಗಳು ಜ್ಞಾನಜ್ಯೋತಿಯನ್ನು ಮಂಕಾಗದಂತೆ ಉರಿಸಬೇಕು. ಹಾಗೆ ಮಾಡದಿದ್ದರೆ ವಿದ್ಯಾಮಂದಿರಗಳೆಂಬ ಹೆಸರಿಗೇ ಅವು ಅನರ್ಹವಾಗುವುವು. ಜ್ಞಾನಾರ್ಜನೆಗೆ ಹತ್ತಿರದ ಕಾಲುದಾರಿ ಇಲ್ಲ. ಜನಾಂಗದ ಮುಂದಲ ನಾಯಕರಾಗುವವರು ನಿಷ್ಠೆಯಿಂದ ಜ್ಞಾನ ಸಂಪಾದನೆ ಮಾಡಬೇಕು. ಪ್ರಜಾಪ್ರಭುತ್ವದ ಈ ಕಾಲದಲ್ಲಿ ಜ್ಞಾನವೇ ಐಶ್ವರ್ಯ. ಜ್ಞಾನವು ಎಲ್ಲಿದ್ದರೂ ಯಾರಲ್ಲಿದ್ದರೂ ಅದು ನಮ್ಮ ದೇಶದ ಐಶ್ವರ್ಯ. ಅದನ್ನು ಪುರಸ್ಕರಿಸಿ ಪ್ರೋತ್ಸಾಹಿಸಿ ದೇಶದ ಕಾರ್ಯಕ್ಕೆ ವಿನಿಯೋಗಿಸಬೇಕು. ನಿಜವಾದ ಜ್ಞಾನವಿಲ್ಲದವರ ಕೈಲಿ ದೇಶದ ಆಳ್ವಿಕೆ ಸಿಕ್ಕಿದರೆ ಪ್ರಜಾಪ್ರಭುತ್ವ ತತ್ವ ಮರೆಯಾಗುವುದು.

“ ನಹಿಜ್ಞಾನೇನ ಸದೃಶಂ ”

ನಿಕಟ ಪರಿಚಯ

"ಬನ್ನಿ, ಬನ್ನಿ, ನೀವು ಮಾಡಿದ ಪಾಪವನ್ನು ನೀವೇ ಅನುಭವಿಸ ಬೇಕು."

ಸುಮಾರು ಹದಿನೈದು ವರುಷಗಳ ಹಿಂದಲ ಮಾತು. ಬೇಸಗೆಯ ನಡು ಹಗಲು. ಮಂಗಳೂರಿನ ಅಸಾಧ್ಯವಾದ ತಲೆ ಒಡಿಯುವ ಬಿಸಿಲು. ತಿಮ್ಮಪ್ಪ ಯ್ಯನವರನ್ನು ಹುಡುಕಿಕೊಂಡು ನಾನು ಅವರ ಮನೆಯ ಬಾಗಿಲಿನಲ್ಲಿ ಹೋಗಿ ನಿಂತೆ. ಬಿಸಿಲಿನ ಝಳದಿಂದ ಉಂಟಾಗಿದ್ದ ಕಣ್ಣು ಕತ್ತಲೆಯಿಂದ, ಮನೆಯ ಮುಂದಲ ಅಂಗಳದಲ್ಲಿಯೇ ಶ್ರೀಮಾನ್ ತಿಮ್ಮಪ್ಪಯ್ಯನವರು ಕುಳಿತಿರುವುದು ನನ್ನ ಕಣ್ಣಿಗೆ ಬೀಳಲಿಲ್ಲ. ನನ್ನ ಕಣ್ಣು ತನ್ನ ನೋಟವನ್ನು ಇನ್ನೂ ಸಿಥಾನ ವಾಗಿ ಹೊಂದಿಕೊಳ್ಳುವುದರಲ್ಲಿತ್ತು. ಶ್ರೀಮಾನ್ ತಿಮ್ಮಪ್ಪಯ್ಯನವರದು ಒಳ್ಳೆಯ ಬಲವಾದ ಗಂಡುದನಿ. ಕಾರಿರುಳಿನಲ್ಲಿ ಮಿಂಚು ಫಳಾರನೆ ಹೊಳೆ ಯುವಂತೆ, ನಿಶ್ಶಬ್ದವಾಗಿದ್ದ ಆ ಬೇಸಿಗೆ ನಡುಹಗಲಿನಲ್ಲಿ ಆ ಧ್ವನಿ ನನ್ನ ಕಿವಿಯ ಮೇಲೆ ಬಿತ್ತು. ಮೈಯ್ಯಲ್ಲಿ ಬೆವರು ಸುರಿಸುತ್ತಾ ಬಳಲಿ ನಿಂದಿರು ವಾಗ, ಗಡಸು ಧ್ವನಿಯೊಂದು 'ನೀವು ಮಾಡಿದ ಪಾಪವನ್ನು ನೀವೇ ಅನು ಭವಿಸಬೇಕು ಬನ್ನಿ" ಎಂದರೆ, ಕೇಳಿದವರಿಗೆ ಏನು ಸಂತೋಷವಾಗಬಹುದು!

ತಮ್ಮ ಮನೆಯ ಹೊರ ಅಂಗಳದಲ್ಲಿ ಶ್ರೀಮಾನ್ ತಿಮ್ಮಪ್ಪಯ್ಯನವರು ಕುಳಿತಿದ್ದರು. ಮಂಗಳೂರಿನ ಕಡೆಯ ಮನೆಗಳನ್ನು ಅನೇಕರು ನೋಡಿದ್ದಾರೆ. ಅಂಗಳದಲ್ಲಿ ಮೂರು ಅಡಿ ಎತ್ತರದ, ಒಳಗಿನ ಗೋಡೆಗಳ ಮಗ್ಗುಲಿಗೆ ಹಾಕಿ ರುವ, ಶುಭ್ರವಾದ ಮರದ ಮತ್ತು ಕಲ್ಲಿನ ಆಸನಗಳು. ಆ ಆಸನದ ಮೇಲೆ ತಿಮ್ಮಪ್ಪಯ್ಯನವರು ಕುಳಿತು ಪದ್ಧತಿಯಂತೆ ಎಲೆ ಅಡಿಕೆ ಜಗಿಯುತ್ತಿದ್ದರು. ಮುಂದೆ ಒಂದು ಹಿತ್ತಾಳೆಯ ಡಬ್ಬಿಯಲ್ಲಿ ಎಲೆ, ಅಡಿಕೆ, ಹೊಗೆಸೊಪ್ಪು ಕತ್ತರಿ, ಒಂದು ತಟ್ಟೆಯಲ್ಲಿ ಸಹ ಹೊಗೆಸೊಪ್ಪು ಇದ್ದುವು. ಸೆಕೆಯ ದೆಸೆಯಿಂದ ತಿಮ್ಮಪ್ಪಯ್ಯನವರು ಸೊಂಟದವರೆಗೆ ಮಾತ್ರ ಪಂಚೆಯುಟ್ಟು, ಸೊಂಟದಿಂದ ಮೇಲಕ್ಕೆ ಮೈಯ್ಯನ್ನು ಗಾಳಿಗೆ ಒಡ್ಡಿದ್ದರು. ನಾನು ಹೋಗಿ ಕುಳಿತುಕೊಂಡ ಕೂಡಲೇ ಎಲೆ ಅಡಿಕೆಯನ್ನು ನನ್ನೆಡೆಗೆ ತಳ್ಳಿದರು. ನಾನು ತತ್‌ಕ್ಷಣ

ತಾಂಬೂಲ ಚರ್ವಣನನ್ನು ಪ್ರಾರಂಭಿಸಲಿಲ್ಲ. ತಿಮ್ಮಪ್ಪಯ್ಯನವರು "ನಿಮಗೆ ಬಾಯಾರಿಕೆಗೆ ತರಿಸಲೋ" ಎಂದು ಹೇಳಿ, ಬೆಲ್ಲವನ್ನೂ ತಣ್ಣೀರನ್ನೂ ತರಿಸಿದರು. ಹೀಗೆ ನನ್ನ ದಾಹಶಾಂತಿಯಾಗಿ ನಾನೂ ಜುಬ್ಬವನ್ನು ಬಿಚ್ಚಿಟ್ಟು ಅವರು ಕೊಟ್ಟ ಬೀಸಣಿಗೆಯಿಂದ ಗಾಳಿ ಹಾಕಿಕೊಳ್ಳುತ್ತಾ ಕುಳಿತುಕೊಂಡೆ.

ನಾನು ಮಾಡಿದ ಪಾಪವೇನೆಂದು ತಿಳಿಯಲು ನಿಮಗೆ ಕುತೂಹಲವಿರಬಹುದು. ಆಗಲಿ. ನಾನು ಆಗ ಮದ್ರಾಸ್ ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆಗೆ ಕಟ್ಟಿದ್ದೆ. ಅದೃಷ್ಟವಶದಿಂದ ಆ ಪರೀಕ್ಷೆಗೆ ಇಟ್ಟಿದ್ದ ಪಠ್ಯಪುಸ್ತಕಗಳ ಪೈಕಿ ನಾನು ಬರೆದ ಪುಸ್ತಕವೂ ಒಂದು ಇತ್ತು. ನನ್ನ ಗ್ರಂಥವನ್ನು ನಾನೇ ಓದಬೇಕಾಗಿ ಬಂದಿತಲ್ಲ ಎಂಬ ಮಾತನ್ನು ತಿಮ್ಮಪ್ಪಯ್ಯನವರು ಆ ರೀತಿ ಹೇಳಿದರು. ನಾನು ಮಂಗಳೂರಿಗೆ ಹೋಗಿದ್ದುದೂ ಆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗಿಯೇ.

ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರದು ಬಹಳ ಸರಳ ಸ್ವಭಾವ. ಮನಸ್ಸು ಮಕ್ಕಳ ಮನಸ್ಸಿನಂತೆ ಮೃದು. ಅವರ ಮುಖದಲ್ಲಿ ಅಕೃತ್ರಿಮತೆಯೂ ಸಾತ್ವಿಕತನವೂ, ಗಾಂಭೀರ್ಯವೂ ಒಡೆದು ಕಾಣುತ್ತಿತ್ತು. ಅವರ ಜ್ಞಾನ ಎರಡು ಬಗೆಯದು. ಒಂದು ಆಳವಾದ ಪಾಂಡಿತ್ಯಪ್ರೌಢ, ಅನೇಕ ಗ್ರಂಥಾನುಭವಜನಿತ ಸಂಸ್ಕೃತ ಜ್ಞಾನ; ಎರಡನೆಯದು ಅಷ್ಟೇ ಆಳವೂ ವಿಶಾಲವೂ ಆದ ಯಕ್ಷಗಾನ, ದೇಸಿ, ನುಡಿಗಬ್ಬ, ಗಾದೆ, ಸರ್ವಜ್ಞ,—ತಾಳಮದ್ದಲೆ, ತುಳುಭಾಷೆ, ದಕ್ಷಿಣ ಕನ್ನಡ ಜಿಲ್ಲೆಯ ಆಚಾರ, ನಡೆ, ನುಡಿ, ಭಾಷೆ ಈ ಎಲ್ಲವುಗಳ ಅನುಭವ ರಸಾಯನ ಜ್ಞಾನ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಸವ್ಯಸಾಚಿಯಂತೆ ಎರಡು ಜ್ಞಾನವನ್ನೂ ಸುಲಭವಾಗಿ ಲೀಲಾಜಾಲವಾಗಿ ಪ್ರಯೋಗಿಸುತ್ತಿದ್ದರು. ಮಮ್ಮಟ, ವಾಮನ, ದಂಡಿ, ಜಗನ್ನಾಥ ಪಂಡಿತ, ಪಂಪ ಜನ್ನ ಹರಿಹರರಿಂದ ವಾಕ್ಯಗಳನ್ನು ಉದ್ಧರಿಸುತ್ತಿದ್ದಂತೆಯೇ, ಪಾರ್ತಿಸುಬ್ಬ, ಲಕ್ಷ್ಮೀನಾರಾಯಣ (ನಂದಳಿಕೆ) ಪಾರ್ವತಿ ಕೊರವಂಜಿ, ಅರ್ಜುನ ಗಜಗೌರಿಗಳಿಂದಲೂ ಉದ್ಧರಿಸುತ್ತಿದ್ದರು. ಒಂದರಿಂದ ಒಂದಕ್ಕೆ ಸುಲಭವಾಗಿ ಹಾರುತ್ತಿದ್ದರು. ನಾಡಪದ ಯಕ್ಷಗಾನಗಳೊಂದಿಗೆ ಪ್ರತಾಪರುದ್ರೀಯ, ಕುವಲಯಾನಂದ ಉದಾಹರಣೆಗಳನ್ನು ಹೋಲಿಸಿ ನೋಡುತ್ತಿದ್ದರು. ಭರತನ ನಾಟ್ಯಶಾಸ್ತ್ರದಿಂದ ಶ್ಲೋಕಗಳನ್ನು ಹೇಳಿ, ಅದಕ್ಕೆ ಪಂಪಭಾರತದಲ್ಲಿ

ಅಪ್ಸರೆಯ ನರ್ತನವನ್ನು ಹೋಲಿಸುತ್ತಿದ್ದರು. ಅವರ ಜ್ಞಾಪಕ ಶಕ್ತಿಯೂ ಬಹಳ ಚೆನ್ನಾಗಿತ್ತು. ಮಾತನಾಡುವಾಗಲೆಲ್ಲ ಹಲ್ವದೊಳಗಿನ ದ್ರಾಕ್ಷಿಯಂತೆ ಪಂಪಭಾರತ, ಕವಿರಾಜಮಾರ್ಗ, ಯಕ್ಷಗಾನಗಳಿಂದ ವಚನಗಳು ಅವರ ಬಾಯಿಂದ ಹೊರಕ್ಕೆ ದುಮುಕುತ್ತಿದ್ದುವು.

ಮುಳಿಯ ತಿಮ್ಮಪ್ಪಯ್ಯನವರದು ಬಹಳ ಸಂಕೋಚದ ಸ್ವಭಾವ. ಚೆನ್ನಾಗಿ ಪಳಗಿದ ಹೊರತು ಅವರು ಇತರರೊಂದಿಗೆ ಉಪಚಾರದ ಮೇರೆಯನ್ನು ಬಿಟ್ಟು ಸರಳವಾಗಿ ಸರಾಗವಾಗಿ ಮಾತನಾಡುತ್ತಿರಲಿಲ್ಲ. ಆದರೆ ಅತ್ಯಂತ ಸರಳ ಸ್ವಭಾವದ ಅವರು ನಾಲ್ಕಾರು ಮಾತುಗಳನ್ನಾಡುವುದರೊಳಗೆ ಒಳ್ಳೆಯ ಆತ್ಮೀಯರೇ ಆಗುತ್ತಿದ್ದರು. ಅನಂತರ ಕೇಳಬೇಕು ಅವರ ಮಾತಿನ ವೈಖರಿಯನ್ನು! ಕೇಳುವವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಬೇಕೆಂಬ ನಾಟಕೀಯತೆ ಅವರಿಗಿರಲಿಲ್ಲ. ಅವರು ಸರಾಗವಾಗಿ ಪ್ರಯತ್ನವೇ ಇಲ್ಲದೆ ನಲ್ಲಿಯಿಂದ ನೀರು ಹರಿಯುವಂತೆ ಮಾತನಾಡುತ್ತಿದ್ದರು. ಮಾತುಗಳನ್ನು ಶುದ್ಧವಾಗಿ ಆಡಬೇಕೆಂಬುದು ಅವರ ನಿಯಮವಾಗಿತ್ತು. ಎಂತಹ ಅವಸರದಲ್ಲಿಯೂ ಅವರು ಅಶುದ್ಧವಾಗಿಯೂ ವ್ಯಾಕರಣನಿಯಮ ರಹಿತವಾಗಿಯೂ ಮಾತನಾಡುತ್ತಿರಲಿಲ್ಲ. ಅಶುದ್ಧವಾಗಿ ಮಾತನಾಡುವವರನ್ನು ಅವರು ಮೃದುವಾಗಿ ಎಚ್ಚರಿಸುತ್ತಿದ್ದರು. ಅವರಿಗೆ, ಏನುಮಾಡಿದರೂ ಅಶುದ್ಧವಾಗಿ ಮಾತಾಡುವುದನ್ನು ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಸಾರ್ವಜನಿಕ ಭಾಷಣಕಾರರು ತಮ್ಮ ಭಾಷಣದಲ್ಲಿ ಮಾಡಿದ ತಪ್ಪುಗಳನ್ನು ಸಹ ಅವರು ಅನಂತರ ಅಪ್ರತ್ಯಕ್ಷವಾಗಿ ತಿದ್ದಿದುದುಂಟು. ಅದರಲ್ಲಿಯೂ ಹಳೆಯ ಕಾವ್ಯಗಳಿಂದಲೂ, ರಾಮಾಶ್ವಮೇಧ ಪಂಪಭಾರತ ಆದಿಪುರಾಣ ಕವಿರಾಜಮಾರ್ಗಗಳಿಂದಲೂ ಕಂದ, ವೃತ್ತಗಳನ್ನು ಉದ್ಧರಿಸುವಾಗ, ಉಪನ್ಯಾಸಕನ ಬಾಯಲ್ಲಿ ತಪ್ಪು ಬಂದರೆ ಅವರು, ಕಿವಿಗೆ ಕಾದ ಸೀಸ ಬಿದ್ದಂತೆ ಹಿಂಸೆಗೊಳ್ಳುತ್ತಿದ್ದರು. ಆದರೆ ಈ ಶುದ್ಧತೆಯ ಆಡಂಬರದಲ್ಲಿ ಅವರು ಯಾರನ್ನೂ ಕಟುವಾಗಿ ಟೀಕಿಸಿದುದಿಲ್ಲ. ಬರಿಯ ಸೂಚನೆ ಕೊಡುತ್ತಿದ್ದರು.

ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರದು ಆಳವಾದ, ಗಂಭೀರವಾದ, ವಿಶಾಲವಾದ ಹಳಗನ್ನಡ ಮತ್ತು ಸಂಸ್ಕೃತ ಪಾಂಡಿತ್ಯ. ಕವಿರಾಜಮಾರ್ಗವನ್ನಾಗಲಿ, ರಾಮಾಶ್ವಮೇಧವನ್ನಾಗಲಿ ಕುರಿತು ಅವರು ಮಾತನಾಡುವಾಗ,

'ಕನ್ನಡವೆಂದರೆ ಹಳಗನ್ನಡವೇಯೆ. ಕಾವ್ಯವೆಂದರೆ ಹಳಗನ್ನಡ ಕಾವ್ಯವೇಯೆ. ಹೊಸಕನ್ನಡ ಕನ್ನಡವೂ ಅಲ್ಲ; ಕಾವ್ಯವೂ ಅಲ್ಲ—ಎಂಬುದು ಇವರ ಭಾವನೆ ಇರಬಹುದು' ಎಂದು ಶ್ರೋತೃಗಳಿಗೆ ತೋರುತ್ತಿದ್ದಿತು. ಆದರೆ ಮಾತು, ವೇಶ, ಹಳೆಯವಾಗಿದ್ದರೂ, ಮುಳಿಯ ತಿಮ್ಮಪ್ಪಯ್ಯನವರ ಮನೋವೃತ್ತಿ ಕ್ರಾಂತಿ ಕಾರಕವಾಗಿತ್ತೆಂಬುದು ಅವರ ನಿಕಟ ಪರಿಚಯವಿದ್ದ ನನ್ನಂತಹವರಿಗೆ ಗೊತ್ತು. ಆಧುನಿಕ ಗದ್ಯಪದ್ಯಗಳಲ್ಲಿ ಸ್ವಾರಸ್ಯವಾದುವನ್ನೆಲ್ಲ ಅವರು ನೋಡಿದ್ದರು. "ಆಧುನಿಕ ಕವಿಗಳಲ್ಲಿ ಇನ್ನೂ ವ್ಯಾಸಂಗ, ಅನುಭವ ಹೆಚ್ಚಬೇಕು. ಹಳೆಯ ಕಾವ್ಯಗರಡಿಯಲ್ಲಿ ಇವರು ಇನ್ನೂ ಪಳಗಬೇಕು. ಆಧುನಿಕ ಕವಿಗಳಿಗೆ ಭಾವನೆಗಳ ವೈಭವವಿದೆ. ಆದರೆ ಶೈಲಿಯಲ್ಲಿ ಮಾತಿನಲ್ಲಿ ಬಿಗಿಯಿಲ್ಲ. ಮಾತು ಬಿಗಿಯಾಗಿಲ್ಲದಿದ್ದರೆ ಒಡಕಲು ದೊನ್ನೆಯಲ್ಲಿ ತುಪ್ಪವಿಟ್ಟಂತೆ. ತಮ್ಮ ತುಪ್ಪ ಕ್ಕಾಗಿಯಾದರೂ ಆಧುನಿಕ ಕವಿಗಳು ಭದ್ರವಾದ ಪಾತ್ರೆಗಳನ್ನೊದಗಿಸಿಕೊಳ್ಳ ಬೇಕು-" ಎನ್ನುತ್ತಿದ್ದರು. ಯಾವುದಾದರೂ ಆಧುನಿಕ ಕವಿತೆ ಅವರಿಗೆ ಹೆಚ್ಚು ಪ್ರಿಯವಾಗಿ ತೋರಿದಾಗ ಅದಕ್ಕೆ ಸಮಾನವಾದ ಭಾವನೆ ಹಳೆಯ ಕಾವ್ಯದಲ್ಲಿ ದೆಯೇ? ಎಂದು ಹುಡುಕುತ್ತಿದ್ದರು. ಹಳೆಯ ಕಾವ್ಯದಲ್ಲಿ ಸಿಕ್ಕಿದರೆ, ಹೊಸ ಕಾವ್ಯದ ಭಾವನಾ ವಿಕಾಸ ಅದಕ್ಕಿಂತ ಉತ್ತಮವೆ? ಕೀಳೆ,? ಉತ್ತಮವಾದರೆ ಯಾಕೆ ಉತ್ತಮ, ಕೀಳಾದರೆ ಯಾಕೆ ಕೀಳು ಎಂದೆಲ್ಲಾ ವಿವರಿಸುತ್ತಿದ್ದರು. ಅವರದು ನಮ್ಮ ಪೂರ್ವಿಕರ ಮಾರ್ಗದ ಶಾಸ್ತ್ರೀಯ ವಿಮರ್ಶಾ ಪದ್ಧತಿ. ಹಳೆಯ ಕಾವ್ಯದಲ್ಲಿಲ್ಲದ ಭಾವನೆಗಳನ್ನು ಹೊಸ ಕವಿತೆಗಳಲ್ಲಿ ಕಂಡಾಗ ಹೊಸ ಕವಿತೆಯನ್ನು ನಿಸ್ಸಂದೇಹವಾಗಿ ಪ್ರಶಂಸಿಸುತ್ತಿದ್ದರು. ಆದರೆ ಅವರು ಯಾವ ಮಾತನ್ನೂ ಆತ್ಮೀಯರೊಂದಿಗೆ ಮಾತ್ರ ಆಡುತ್ತಿದ್ದುದರಿಂದ, ಅವರ ಆಪ್ತ ಮಿತ್ರರಿಗೆ ಮಾತ್ರವೇ ಇಂತಹ ಭಾಗ್ಯ ಉಂಟಾಗುತ್ತಿದ್ದಿತು.

ಶೈಲಿಯಂತೆ ಸ್ವಭಾವ ಎಂದು ಒಂದು ನುಡಿ ಇದೆ. ಆದರೆ ತಿಮ್ಮಪ್ಪ ಯ್ಯನವರ ವಿಷಯದಲ್ಲಿ ಆ ನುಡಿ ಸತ್ಯವಾಗಿರಲಿಲ್ಲ. ಅವರ ಹಳಗನ್ನಡ ಶೈಲಿಯಂತೂ ಕಠಿಣವೇ- ಅವರೇ ಒಂದೆಡೆ, "ನಾನು ಅತಿಶಯವಾದ ವೈದಗ್ಧ್ಯ ವನ್ನೂ ಕಾವ್ಯರಚನಾ ಸಾಮರ್ಥ್ಯವನ್ನೂ ಹೊಂದಿದವನಲ್ಲ. ಆದರೆ ನನ್ನ ಶೈಲಿ ಅದ್ಭುತ ರಾಮಾಯಣ ರಾಮಾಶ್ವಮೇಧಗಳಲ್ಲಿ ವಿಹರಿಸಲಿಚ್ಛಿಸುವವರಿಗೆ ಪ್ರವೇಶ ದ್ವಾರವಾಗಿದೆ" ಎಂದಿದ್ದಾರೆ. ಹಾಗೆಯೇ ಅವರ ಹೊಸಗನ್ನಡ

ಶೈಲಿ ಸಹ ಕೆಲವೆಡೆ, ವ್ಯವಸಾಯದಿಂದ ಮಾತ್ರ ಅನುಭವಿಸಲು ಸಾಧ್ಯ. ಆದರೆ ಅವರ ಸಂಭಾಷಣೆ ನಿಜವಾಗಿ ದ್ರಾಕ್ಷಾಪಾಕ. ಶ್ರುತಿಯನ್ನು ಸರಿಮಾಡಿಕೊಂಡು ವೀಣೆಯನ್ನು ಬಾರಿಸುವಂತೆ ತಿಮ್ಮಪ್ಪಯ್ಯನವರು ಅನುಕೂಲ ವಾತಾವರಣ, ಆಪ್ತಮಿತ್ರರು, ದೊರೆತಾಗ ಮಾತ್ರ ತಂಪಾದ ಮಲಯಮಾರುತದಂತೆ ತಮ್ಮ ನಿರರ್ಗಳವಾದ ಅನುಭವಪೂರಿತವಾದ ವಾಗ್ಝರಿಯನ್ನು ಹೊರಗೆಡಹುತ್ತಿದ್ದರು.

ತಿಮ್ಮಪ್ಪಯ್ಯನವರಲ್ಲಿ ಒಂದು ಆಳವಾದ ಅನಾಸಕ್ತಿ ಇತ್ತು. ಎಲ್ಲ ಲೇಖಕರಿಗೂ ಆಗಿರುವಂತೆ ಅವರಿಗೂ ಲೇಖನ ವ್ಯವಸಾಯದಲ್ಲಿ ಕಟು ಅನುಭವಗಳಾಗಿದ್ದುವು. ಅವರ ಒಂದು ಗ್ರಂಥವನ್ನು ಕುರಿತು ವಿಮರ್ಶಕನೊಬ್ಬನು ವ್ಯಾಸಂಗವನ್ನೇ ಮಾಡದೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದನಂತೆ. ತಿಮ್ಮಪ್ಪಯ್ಯನವರಿಗೆ ಆದರಿಂದ ಅಸಮಾಧಾನವಾಗಿರಲಿಲ್ಲ. ಅವರು, "ನನ್ನ ಮಾತು ಇರಲಿ; ನನಗೆ ತೊಂದರೆ ಇಲ್ಲ. ಆದರೆ ಜನತೆಯ ರುಚಿಯನ್ನು ತಿದ್ದಬೇಕಾದ ವಿಮರ್ಶಕ, ಗ್ರಂಥವನ್ನೇ ಓದದೆ ವಿಮರ್ಶಿಸಿಬಿಡುವುದೆ? ಇದೇನು ವಿಮರ್ಶೆಯೋ ಕಾಡಹರಟೆಯೋ? ಸರಿಯಾದ ವಿಮರ್ಶಕ ಗ್ರಂಥಕರ್ತನಿಗೂ ಮಾರ್ಗದರ್ಶಕನಾಗಿರಬೇಕು. ಆದರೆ ಈಗ ಗ್ರಂಥ ಬರೆಯಲು ತಿಳಿಯದವರೆಲ್ಲ ವಿಮರ್ಶಕರಾಗುತ್ತಿದ್ದಾರೆ. ಕನ್ನಡ ನಾಡಿನ ದುರ್ದೈವ" ಎನ್ನುತ್ತಿದ್ದರು. ವಿಮರ್ಶಕರ ವಿಚಾರದಲ್ಲಿ ಕವಿಗೆ ಅಥವಾ ಲೇಖಕನಿಗೆ ಈ ಭಾವನೆ ಇರಬೇಕೆಂದು ಅವರು ಹೇಳುತ್ತಿದ್ದರು :

ಬೆರಲಂ ಸಿಡಿಯಲಿ ಪೊಗಳಲಿ
ಧರೆಯೊಳ್ ತಂತಮ್ಮ ಪುಟ್ಟುಗುಣಮಂ ದೊಳೆ
ನೆರಡರೊಳಂ ಮುದಮಾಂಪೆಂ
ಇರುಳುಂ ಪಗಲಂ ನರರಿಗೆ ಸುಖಕರಮಲ್ತೆ.

ಇಂತಹ ಅನಾಸಕ್ತಿಯಿದ್ದುದರಿಂದ ಅವರು ಸ್ವಾಭಾವಿಕವಾಗಿ ಮನಸ್ಸನ್ನು ಹೆಚ್ಚು ಕಾವು ವಿಕಾರ ಮತ್ತು ದ್ವಂದ್ವಭಾವಗಳಿಗೆ ಒಳಪಡಿಸದೆ ಹಾಸ್ಯ ಮತ್ತು ವಿನೋದ ಮನೋಭಾವನೆಯುಳ್ಳವರಾಗಿದ್ದರು. ಅವರ ನಿಕಟ ಪರಿಚಯವಿದ್ದ ಹೊರತು ಆ ಹಾಸ್ಯ ತಿಳಿಯುತ್ತಿರಲಿಲ್ಲ. ಹಾಸ್ಯದಲ್ಲಿಯೂ ಲಘು ಮಾತುಗಳಲ್ಲಿಯೂ ಅವರು ಸಾಧಾರಣವಾಗಿ ಯಕ್ಷಗಾನದ ಮಾತುಗಳನ್ನು

ಸಂದರ್ಭಗಳನ್ನೂ ಉಪಯೋಗಿಸುತ್ತಿದ್ದರು. ಒಂದು ಸಲ ನಾನು ಅವರ
ನೋಡಲು ಹೋದಾಗ ನನ್ನ ನಮಸ್ಕಾರವನ್ನು ಸಹ ಹಿಂದಿರುಗಿಸದೆ, ಯಾವ
ಬಂದೆ ಎಂಬ ಯೋಗಕ್ಷೇಮಕ್ಕೂ ಮುಂಚಿತವಾಗಿಯೇ ನನ್ನ ಮುಖ ಕಂ
ಪ್ರಾರಂಭಿಸಿಬಿಟ್ಟರು.

ದಯಮಾಡೋ ವಿಘ್ನರಾಜ ಭಕ್ತನ ಮೇಲೆ ದಯಮಾಡೋ
ದಯಮಾಡೋ ದಣಿದು ಬಂದಾತ । ರಕ್ತ
ಕ್ಷಯವಾಗುತಿದೆ ಮೈಯ ವಾತ । ಕಾಣೆ
ಕೆಯ ನೀವೆ ಪಾರ್ವತೀ ಜಾತ ।
ಭಯವಾಗುತಿದೆ ಮುಂದಿನೆಡೆ ದಾರಿಯೊಳಗೆ ನಿ ।
ನ್ನಯ ಸೇವೆ ಮಾಡಿ ನಾಡಿಗೆ ಪೋಪತೆರನಂತೆ ॥
ತಿರಿದುಂಬ ಪರದೇಶಿ ನಾನು । ಸಿರಿ
ಕರವಿಡಿದಿಹ ದೇವ ನೀನು । ಪಾದ
ದೆರಕಗೊಂಡಿದೆ ಕಾಮಧೇನು ।
ಪರಮ ಭಕುತನಿಂ ಬೇಡಿಕೊಳೆ ಮಾನವೆ
ವರದ ಗಣೇಶ ಮುಂದರುಹಲರಿಯೆ ನೀಶ ॥
ಆಸರುಬ್ಬಸ ವೇರಿತೆನಗೆ । ಶೀತ
ವಾಸವಾಗಿದೆ ಯೊಡಲೊಳಗೆ । ಆರು
ಮಾಸವಾಯಿತೀ ಜಾಡ್ಯದೊಳಗೆ ॥

ಕೊನೆಯ ಚರಣವನ್ನು ಹೇಳುತ್ತಾ ತಿಮ್ಮಪ್ಪಯ್ಯನವರು "ಆರೋ
ಸ್ವಲ್ಪ ಕೆಟ್ಟಿದೆ. ನಿಮ್ಮಿಂದ ನಗುವಿನ ಟಾನಿಕ್ ದೊರೆಯಬಹುದು. ಬನ್ನಿ
ಎಂದರು.

ಅದು ದೀಪಾವಳಿಗೆ ಒಂದೆರಡು ದಿನ ಮುಂಚಿನ ದಿನ. ಸ್ವಾಭಾವಿಕವಾ
ನಮ್ಮ ಮಾತು ಯಕ್ಷಗಾನದ ಕಡೆ ತಿರುಗಿತು. ತಿಮ್ಮಪ್ಪಯ್ಯನವರ ಸಂಭ
ಷಣೆಗಳಲ್ಲಿ ಯಕ್ಷಗಾನದ ಪ್ರಸ್ತಾಪ ಏಳದಿದ್ದ ದಿನವೇ ಇಲ್ಲ. ಇದ್ದಕ್ಕಿದ್ದಂ
ಅವರು 'ಯಕ್ಷರಾತ್ರಿ ಎಂಬ ಮಾತನ್ನು ಕೇಳಿದ್ದೀರಾ?" ಎಂದರು. ನಾ
ಯೋಚಿಸಿ "ಅಮರ ಕೋಶದಲ್ಲಿ, 'ಯಕ್ಷರಾಟ್ ಗುಹ್ಯಕೇಶ್ವರಃ, ಯಕ್ಷ
ಗಂಧರ್ವ ಕಿನ್ನರಾಃ ಎಂದಿದೆ ಎಂದೆ. ತಿಮ್ಮಪ್ಪಯ್ಯನವರು "ಅದಲ್ಲ, ದೀಪ
ವಳಿಗೆ ಯಕ್ಷರಾತ್ರಿ ಎಂದು ಹೆಸರು. ಇದು ಬಲಿಚಕ್ರವರ್ತಿಯ ಗೌರವಕ್ಕಾ

ಮಾಡುವ ಪೂಜೆ. ಅಂದು ಬಲಿಚಕ್ರವರ್ತಿ ತನ್ನ ಧನವನ್ನೆಲ್ಲ ವಾಮನನಾದ ವಿಷ್ಣುವಿಗೆ ದಾನವಾಗಿ ಅರ್ಪಿಸಿ ಪಾತಾಳಕ್ಕೆ ಹೊರಟಿದ್ದಾನೆ. ಬಲಿ ಹಾಗೆ ಕೊಡದೆ ಇದ್ದಿದ್ದರೆ ದೇವತೆಗಳ ಭಂಡಾರ ಬರಿದಾಗಿತ್ತು. ಲಕ್ಷ್ಮಿಯನ್ನೇ ಕೈಹಿಡಿದಿದ್ದರೂ— ಕುಬೇರನ ಭಂಡಾರ ಬರಿದಾಗಿದ್ದುದರಿಂದ ವಿಷ್ಣುವಿಗೂ ದೇವತೆಗಳಿಗೂ ಮನಸ್ಸು ಸಮಾಧಾನವಾಗಿರಲಿಲ್ಲ. ಬಲಿಯನ್ನು ಹೀಗೆ ಉಪಾಯದಿಂದ ಪಾತಾಳಕ್ಕೆ ತಳ್ಳಿದುದರಿಂದ, ಕುಬೇರನು ಅವನಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದನು. ಅದೇ ದೀಪಾವಳಿ. ಬಲಿಯ ಭಂಡಾರಕ್ಕೆ ಹೋಗಬೇಕಾದ ಸಮಸ್ತವೂ ಕುಬೇರನ ಭಂಡಾರಕ್ಕೆ ಹೋದ ದಿನ ಅದು. ಈ ದೃಷ್ಟಿಯಲ್ಲಿ, ದಿವಾಳಿಯಾದನು, ದಿವಾಳಿ ತೆಗೆದನು, ಎಂಬ ಪದದ ಅರ್ಥವನ್ನು ಯೋಚಿಸಿ" ಎಂದರು.

* * *

ಒಂದು ಸಲ ಮಂಗಳೂರಿನಲ್ಲಿ ಸಮುದ್ರದ ಒತ್ತುವರಿಯ ಆಚೆಯ ನೀರನ್ನು ದೋಣಿಯಲ್ಲಿ ದಾಟಿ ಮಧ್ಯದ ಮರಳು ರಾಶಿಯ ಮೇಲೆ ಕೆಲಹೊತ್ತು ಕುಳಿತಿದ್ದು ಬಿರುಗಾಳಿಯ ಆರ್ಭಟವನ್ನೂ ಅಲೆಗಳ ಗರ್ಜನೆಯನ್ನೂ ಕೇಳುತ್ತಿದ್ದೆವು. ದೋಣಿ ಸಿಕ್ಕಿದರೆ ಸಮುದ್ರದೊಳಗೆ ಸ್ವಲ್ಪದೂರ ಹೋಗಬೇಕೆಂದು ನನಗೆ ಆಸೆಯಿತ್ತು. ನನ್ನ ಆಸೆಯನ್ನು ತಿಮ್ಮಪ್ಪಯ್ಯನವರಿಗೆ ಸೂಚಿಸಿದೆ. ಅವರು ಕೂಡಲೇ

ಇಂತಿದರಾಸರೆಗೊಂಡು।
ರಾವಣನಿಹ ಕಂಡಿರೇನ್ನೈ—ಗಾರೀ
ಕಾಂತನೊಬ್ಬನೆ ಬಲ್ಲ
ದಾಂಟಿಸುವಂದವ

ಎಂದು ಹಾಡಿದರು. ತಿಮ್ಮಪ್ಪಯ್ಯನವರು ಆ ಪದ್ಯವನ್ನು ಹೇಳಿ ನಿಲ್ಲಿಸಲು ನಾನು ಉತ್ಸಾಹದಿಂದ "ಹೇಳಿ ಹೇಳಿ. ಮುಂದೆ ಹೇಳಿ" ಎಂದೆ.

ಭೋರೆಂಬ ನಾದ ಬೀ
ಸುವ ಗಾಳಿ ಸೊಂಡಿಲ ಕಂಡಿರೇನ್ನೈ—ಮದ
ವಾರಣವಾಗಿ ಮುಂ
ದಣೆದು ಜಂಜಣಿಪುದ
ಕಳ ಕಳಿಸುವತೆರೆ

ಬುದು ಬುದ ದಂದವ ಕಂಡಿರೇನೈ—ಭಯಂ
ಗಳ ಬೀರುವಂಥ ಜೀ
ವನದ ಛಡಾಳವ
ಕಡಲಿನ ಗುಂಪಿನೊಂ
ದಿಂಪಿನುಮ್ಮಹವನು ಕಂಡಿರೇನ್ಯ—ಮುಗಿಲ್
ವಡಲಿಗೆ ಪರಿಯಂತ
ತುಡುಕುವ ತೆರೆಗಳ—ಕಂಡಿರೇನೈ

ಶ್ರೀ ತಿಮ್ಮಪ್ಪಯ್ಯನವರು ಮೇಲಿನ ಪದ್ಯ ಪಾರ್ತಿ ಸುಬ್ಬನನೆಂದು ಹೇಳಿ ತೋರಿಸುತ್ತಿದ್ದರು. ಯಕ್ಷಗಾನದ ಮಟ್ಟಿಗಂತೂ ಅವರೇ ಒಂದು ವಿಶ್ವಕೋಶ ವಾಗಿದ್ದರು. ಕುಂಬಳೆಮೇಳ, ಧರ್ಮಸ್ಥಳದ ಮೇಳ, ಮೂಲಿಕೆ ಮೇಳ ಮುಂತಾದ ಅನೇಕ ಮೇಳಗಳ ಇತಿಹಾಸವನ್ನು ಅವರು ರಸವತ್ತಾಗಿ ಮನೋ ರಂಜಕವಾಗಿ ವಿವರಿಸುತ್ತಿದ್ದರು. ಕೈಲಾಸವಾಸಿ ಮಂಜನಾಥ ಭಾಗವತರ ಭವ್ಯವಾದ, ಆಕಾರ, ಮೈಕಟ್ಟು ಚಾಚೂ ತಪ್ಪದ ಅವರ ವೇಷಭೂಷಣಗಳು, ದೂರದಿಂದಲೇ ಜನರನ್ನು ಆಕರ್ಷಿಸುತ್ತಿದ್ದ ಅವರ ಸುಮಧುರ ಕಂಠ, ಹರದಾರಿ ದೂರದಲ್ಲಿಯೇ ಹೊಕ್ಕು ಕುಕ್ಕಿ ಕುತೂಹಲವನ್ನೆಬ್ಬಿಸುವ ಅವರ ಹಾಡುಗಳು ನಾದಾನುಸಾರ ಗಮಕದ ಗುಂಗು ಗುಂಗುಮಿಸುವಂತೆ ಹಾಡನ್ನು ಎತ್ತುವ, ಎತ್ತಿ ತೊನೆಯಿಸುವ, ತೊನೆಯಿಸಿ ಕೊನೆಗಾಣಿಸುವ ಹಿಡಿತ, ಹಿಡಿತದ ಗಡಿ ಯಾರದ ಪೆಟ್ಟನಂತೆ ತಾಳಲಯಾನುಸಾರಿಯಾದ ಗಂಟೆಯ ಪೆಟ್ಟು, ಪೆಟ್ಟಿನ ಜಾಗಟೆ ಕೋಲು ಬಲಗೈಯಲ್ಲಿ ನೇತಾಡಲು ಗಂಟೆಯಿಂದೊಡಗೂಡಿದ ಎಡಗೈ ಕೆನ್ನೆಯನ್ನೊಂದಿರಲು ಭಾಮಿನಿಯನ್ನಂದವಾಗಿ ಹಾಡುತ್ತಿದ್ದ ಮಂಜನಾಥ ಭಾಗವತರೆಂದರೆ ನಿಜವಾಗಿ "ಎಕ್ಕಲ ಗಾಣ" ನೇ ಸೈ ಎಂದು ಉತ್ಸಾಹದಿಂದ ಹೇಳುತ್ತಿದ್ದರು.

ಮಂಜುನಾಥ ಭಾಗವತರ ಪ್ರಸ್ತಾಪ ಯಾವಾಗ ಬಂದರೂ ಶ್ರೀವರ್ಾ ತಿಮ್ಮಪ್ಪಯ್ಯನವರು, ಭಾಗವತರು ಹೇಳುತ್ತಿದ್ದ ಆಂಜನೇಯ ಮತ್ತು ತೃಣ ಬಿಂದು ಮುನಿಯ ಸಂವಾದದ ಪದಗಳನ್ನು ಗಮಕಿಸುತ್ತಿದ್ದರು. ತೃಣಬಿಂದು ವಿನ ವಿಚಾರ ರಾಮಾಯಣದಲ್ಲಿ ಇಲ್ಲ. ಆದರೆ ಹಳ್ಳಿಯ ಹಾಡು ಯಕ್ಷಗಾನ ಮುಂತಾದ ಎಲ್ಲ ನಾಡಹಬ್ಬಗಳಲ್ಲಿಯೂ ಒಬ್ಬ ಋಷಿ ಹನುಮಂತನಿಗೆ ಲಂಕೆಯ ದಾರಿಯನ್ನು ತೋರಿಸಿದನೆಂದು ಹೇಳಿದೆ.

ತೃಣಬಿಂದು— ಕುರುಡನ ಕೈಗೆ ಕನ್ನಡಿಯೇಕೆ—ಕಿವುಡಗೆ
ವರ ಸಂಗೀತಗಳ ಮಾತೇಕೆ? ॥
ಎರಡೂ ಕಾಲಿಲ್ಲದ ಹೆಳವಗೆ ಯಾತ್ರೆಯ
ತಿರುಗಾಡುವಾ ಸುದ್ದಿಯಾಕೆ ॥
ಮರಮರ ಚರಿಪವಾನರ ನಿನಗೀಲಂಕಾ
ಪುರವರಸಿನ ವಾರ್ತೆ ಯಾಕೆ ॥
ತಿರಿಮುಂಬಾತನ ಮನ ಪಲ್ಲಕ್ಕಿಯೇರುವ
ತೆರನಾಯ್ತು ಕಟ ನಿನ್ನ ಮನಸು ॥
ಏಳು ಸುತ್ತಿನ ಕೋಟೆ ಕಣಿವೆ ಖಂಖಣಿಸುವ
ಕಾಳರಕ್ಕಸರ ಕಾಲಾಟಾ ॥
ಮೇಲಾಗಿ ಬೊಮ್ಮರಕ್ಕಸ—ಭೂತಗಣಗಳ
ಜಾಲದ ಸುತ್ತ ಸುತ್ತಿಹುದು ॥

ಹನುಮಂತ— ಮುನಿರಾಯ ಕೇಳು ವಾನರನಕ್ಕೆ ನರನಕ್ಕೆ
ತನುವಿದು ತನಗೆ ಶಾಶ್ವತವೆ ॥
ವನಜಜನೂರಿದ ಹಣೆಯಕ್ಕರವಮೀರೆ
ಮುನಿಯಾದಡೇನರ್ಹನಹನೆ ॥
ಸ್ವಾಮಿಕಾರ್ಯಕೆ ಸಂದು ಸತ್ತಡೇನವರಿಂದ
ಕಾಮಿತಂಗಳ ಸಿದ್ಧಿಯಹುದು ॥
ಆ ಮಾತಿಲ್ಲೇತಕೆ ದಶಕಂಠನಿಪ್ಪೊಂದು
ಸೀಮೆಮೋರಿದೊಡೊಂದೆ ಸಾಕು ॥

ಪಾರ್ತಿ ಸುಬ್ಬನ ವಿಷಯ ಬಂದಾಗ ತಿಮ್ಮಪ್ಪಯ್ಯನವರು ನಿರರ್ಗಳವಾಗಿ ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಅವರಿಗೆ ಸುಬ್ಬನಲ್ಲಿ ಒಂದು ಆತ್ಮೀಯವಾದ ಅಭಿಮಾನ. "ಸುಬ್ಬನು, ಹೆಣ್ಣಿಗೆ ನಾಗವೇಣಿ ಎಂದು ಹೇಳಿದ್ದಾನೆ. ಅದರ ಔಚಿತ್ಯ ನೋಡಿ 'ನಾಗದಂತೆ ವೇಣಿಯುಳ್ಳಾಕೆ' ಹಾಗಾದರೆ ನಾಗದ ಯಾವ ಭಾಗದಂತೆ ವೇಣಿಯಿದೆ ಎಂಬುದನ್ನು ಪರಾಂಬರಿಸಿ. ಹಿಂದೆ ಬೆನ್ನಿನಲ್ಲಿ ನೇತಾಡುವ ವೇಣಿ ನಾಗನ ಬಾಲದೊಡೆವೆರೆದ ಇಡೀ ಮೈಯಂತೆ; ಬಾಚಿಗಟ್ಟಿದ ತಲೆ ನಾಗನ ಅಗಲಿಸಿದ ಹೆಡೆಯಂತೆ; ಮುಂದಲೆಯಲ್ಲಿ ರತ್ನ ಖಚಿತವಾಗಿರುವ ಪದಕ ಕವಿಗಳು ಬಣ್ಣಿಸುವ ಮಣಿಯಿಂದೊಪ್ಪುವ ನಾಗನ ಚಂಚುವಿನಂತೆ; ಆಕೆಯ ಮುಖವೇ ನಾಗನು ಕಾಯುತ್ತಿರುವ ನಿಧಿಯಂತೆ." ಎಂದರು.

ನಾಗವೇಣಿ ಎಂಬ ಮಾತನ್ನು ನಾವು ಅನೇಕ ವೇಳೆ ಕೇಳಿದ್ದೇವೆ. ಆದರೆ ಮುಖವು ನಾಗನು ಕಾಯುತ್ತಿರುವ ನಿಧಿ ಎಂಬುದು ಒಂದು ಹೊಸ ಭಾವನೆ ಯೆಂದೇ ನನಗೆ ತೋರುವುದು.

ತಿಮ್ಮಪ್ಪಯ್ಯನವರು ಪಾರ್ತಿ ಸುಬ್ಬನ ಮೇಲೆ ಮಾತು ಪ್ರಾರಂಭಿಸಿದ ರೆಂದರೆ ಗಣಿಯೊಳಗಿನಿಂದ ರತ್ನಗಳು ಒಂದಾದ ಮೇಲೆ ಒಂದು ಹೊರಬರು ವಂತೆ ಸಾಹಿತ್ಯರತ್ನಗಳು ಅವರ ಬಾಯಿಂದ ಹೊರಬೀಳುತ್ತಿದ್ದವು. ಸೀತೆಯ ಸೌಂದರ್ಯದ ಈ ಮುಂದಲ ಪದ ಅವರಿಗೆ ಅತ್ಯಂತ ಪ್ರಿಯವಾಗಿತ್ತು. ಅದನ್ನು ಅವರು ಇತರ ಪದಗಳಂತೆ ಆಗಾಗ ಬಾಯಲ್ಲಿ ಉಚ್ಚರಿಸುತ್ತಿದ್ದರು. ತಿಮ್ಮಪ್ಪ ಯ್ಯನವರು ಯಕ್ಷಗಾನವನ್ನು ಹೇಳುವ ಸೊಗಸೇ ಸೊಗಸು. ಅವರಿಗೆ ಸಂಗೀತ ದಲ್ಲಿ ಪೂರ್ಣ ಪಾಂಡಿತ್ಯವಿಲ್ಲದಿದ್ದರೂ ಅವರು ಹಾಡುವಾಗ ಸರಿಯಾದ ರಾಗವೂ ಮಾತಿಗೆ ಮಾಧುರ್ಯವೂ ಉಂಟಾಗುತ್ತಿದ್ದಿತು.

ತರಬೇಕು ತರುಣಿಯಳಾ—ಕಾಮನ ಮುಂಗೈ
ಯರಗಿಣಿ ಯಂತಿಹಳಾ ‖
ಸ್ಮರನ ಸಿಂಗಾಡಿ ಪುರ್ಬಿನ ನೀರೆ ಜೌವನ
ಶರಿಮುಳಿಪಾನ್ಯೆಯ
ವರಕರಿಗಮನೆಯ ‖
ಪನ್ನಗನಿಭ ವೇಣಿಯ—ಪಂಕಜನೆಸ
ಳ್ಗಣ್ಣ ಕನ್ನಡ ಜಾಣೆಯ ‖
ಚಿನ್ನ ಪುತ್ತಳಿ ಬೊಂಬೆಯಂತೆ ರಾಮನ ಕೈಯ
ಕನ್ನಡಿ ಕದಪಿನ ಕಡುಸುಪ್ರವೀಣೆಯ ‖
ಕಿರುನಗೆ ಮೊಗದೋಜೆಯ—ಲಾವಣ್ಯ ಭಾ
ಸ್ಕರ ಕೋಟಿ ನಿಭತೇಜೆಯ ‖
ವರ ಕುಂಭ ಕುಚೆಯ ಕೇ
ಸರಿ ನಡುವಿನ ತಳಿ
ರೆರಕವಡಿಯ ಗಿಳಿ—ಸೆರೆಗೊಯ್ದ ವಾಣಿಯ ‖

ಎರಡನೆಯ ಪದ್ಯದಲ್ಲಿ ಕನ್ನಡ ಜಾಣೆ ಎಂಬ ಮಾತು ಬಂದಾಗ ತಿಮ್ಮಪ್ಪಯ್ಯನವರು ಆ ಮಾತನ್ನು ಮತ್ತಷ್ಟು ಚಪ್ಪರಿಸಿ ಹಾಡುತ್ತಿದ್ದರು. “ಎಲ ಸುಬ್ಬ ಹಾಗೆ ಬಾ. ನೀನು ಸ್ವತಃ ತುಳವನೇ ಆಗಿದ್ದರೂ ಸೀತೆಯನ್ನು

ಕನ್ನಡ ಜಾಣೆಯನ್ನಾಗಿ ಮಾಡಿದೆಯಲ್ಲವೆ? ಭೇಷ್, ಅದೀಗ ನಿನ್ನ ಕನ್ನಡ ಭಕ್ತಿ" ಎನ್ನುತ್ತಿದ್ದರು. ಈಚೆಗೆ ಕನ್ನಡ ಜಾಣ (ಣೆ) ಎಂಬ ಬಿರುದನ್ನು ಸಾಹಿತ್ಯ ಪರಿಷತ್ತಿನವರು ತಮ್ಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಕೊಡುತ್ತಿದ್ದಾರೆ. ಪಾರ್ತಿ ಸುಬ್ಬನು "ಚಿನ್ನ ಪುತ್ಥಳಿ ಬೊಂಬೆ, ಸ್ಮರನ ಸಿಂಗಾಡಿ, ಪುರ್ಬಿನ ನೀರೆ, ಜೌವನ ಪರಿಮಳಿಪಾ ವೈಯ್ಯ" ಜಾನಕಿಗೆ ಕೊಟ್ಟ ಬಿರುದು ಅದು. ಆ ಬಿರುದಿಗೆ ಈಗ ಒಂದು ಹೊಸ ಪರಿಮಳವುಂಟಾಗಿದೆ. ಹೆಚ್ಚು ಹೆಚ್ಚು ಸಂಖೆಯಲ್ಲಿ ಆ ಬಿರುದನ್ನು ಕನ್ನಡನಾಡಿನ ಸುವಾಸಿನಿಯರು ಹೊಂದುವರೆಂದು ಆಶಿಸುತ್ತೇನೆ.

ಶ್ರೀಮಾನ್ ತಿಮ್ಮಪ್ಪಯ್ಯನವರು ಅಂಗದನು ರಾವಣನಿಗೆ ಹೇಳಿದ ಬುದ್ಧಿವಾದವನ್ನು ಯಾವಾಗಲೂ ಹೇಳದೆ ಪಾರ್ತಿಸುಬ್ಬನನ್ನು ಜ್ಞಾಪಿಸಿಕೊಳ್ಳುತ್ತಿರಲಿಲ್ಲ. ಆ ನುಡಿಗಳಾದರೂ ಬಹಳ ಮನೋಹರವಾಗಿವೆ.

ಏನ್ಮಾ ರಾವಣ—ನೀನ್ಮಾ ಸೀತೆಯ
ಕಾಣದ ಹಾಗೆ ಕದ್ದು—ತರಬಹುದೇನ್ಮಾ ॥
ತಾನಾಗಿ ರಾಮಚಂದ್ರ—ಸೇನೆಯ ಕೂಡಿಕೊಂಡು
ನೀನಿದ್ದ ನಾಡಿಗೆ ಬಂದ ಕಾಣ್ಮಾ ॥
    ನಿನ್ನ ಬಳಿರಾಮ—ನೆನ್ನ ಕಳುಹಿ ಕೊಟ್ಟ
    ನಿನ್ನಾದ್ರು ಸೀತೆಯ—ಬಿಡು ಕೇಳ್ಮಾ ॥
    ತನ್ನಿಂದ ತಪ್ಪಿತೆಂದು—ಹೊನ್ನ ಕಾಣಿಕೆ ಕೊಟ್ಟು
    ಬೆನ್ನನು ಮರೆಹೊಗುತಲಿ ಬಾಳ್ಮಾ ॥
ಯಾತಕೆ ಛಲ ರಘುನಾಥ ಮಾನವನಲ್ಲ
ಆತ ನಾರಾಯಣ—ಸ್ವಾಮಿ ಕಾಣ್ಮಾ ॥
ಸೀತೆ ಲಕುಮಿಸಹ—ಜಾತನೆ ಶೇಷ ನಿಂತು
ಭೂತಳ ಕವತಾರ ವಿದು ಕೇಳ್ಮಾ ॥
    ಮಂಡೋದರಿಯು ಬಹಳ ಮಕ್ಕಳ ಹೆತ್ತಳೆಂದು
    ಕಂಡೋರ ಬಾಯತುತ್ತು ಮಾಡಬೇಡವೇನ್ಮಾ
    ಕೊಂಡೆಯರ ಮಾತ ಕಿವಿಗೊಂಡು ಕುಲವಸಿಕ್ಕಿ
    ದಿಂಡತನದಿ ಕೆಡದಿರು ಕೇಳ್ಮಾ ॥
ಚಂಡಾಲತನದಿ ತಂಡ ತಂಡದ ನಿನ್ನ
ಹೆಂಡಿರೋಲೆಯ ಕಳಚದಿರೇನ್ಮಾ ॥

ರುಂಡ ಮಾಲೆಯು ನಾಂತುಕೊಂಡಂಥ ಶಿವ ಕೊಟ್ಟ
ದ್ದುಂಡುಂಡು ಸುಖದಿಂದಲಿ ಬಾಳ್ಮಾ ॥
ಈರೇಳು ಲೋಕಂಗಳ ಪಾರುಪತ್ಯವೆನ್ನದೆಂದು
ಹಾರಾಡಿ ಕೆಟ್ಟು ಹೋಗಬೇಡ ಕೇಳ್ಮಾ ॥
ಭೂರಿ ಸಂಪತ್ತು ತುಂಬಿ ಸೇರಿಕೊಂಡಿಪ್ಪ ಲಂಕೆ
ಯೂರೆಲ್ಲ ಹಾಳೆಸದಿರೇನ್ಮಾ
ವೇದ ಬಾಯೊಳ ಗುಂಟು ಶಾಸ್ತ್ರ ಬಗೆಯ ನಂಟು
ಕೋದಿಹ ಬಗೆ ಕೈಯೊಳಗೇನ್ಮಾ ॥
ಭೂದೇವಿ ಹೊರದಪರಾಧವ ಹೊತ್ತು ಮರಿ
ಯಾದೆ ಗೆಟ್ಟಡೆ ದೊರೆತನವೇನ್ಮಾ ॥
ಶೂರಪಣಖಿ ಹುಚ್ಚುಮೂಳಿಯ ಮಾತ ಕೇಳಿ
ಶೂರಖರಾದ್ಯರೇನಾದರ್ಮ್ಯಾ ॥
ಸಾರವನರಿತಿಹೆ ಸಕಲವಬಲ್ಲೆನೆಂದು
ಮಾರಿ ಬಾಯೊಳು ಬೀಳದಿರೇನ್ಮಾ

ಇಲ್ಲಿ ಕೊನೆಯ ನ್ಮಾ ಎಂದು ಮುಕ್ತಾಯಗೊಳಿಸಿರುವುದು ಅಂಗದನ ವಾಕ್ ಸರಣಿಗೆ ಅನುಕೂಲವಾಗಿರುವುದಲ್ಲದೆ ಒಂದು ಬಗೆಯ ಗ್ರಾಮ್ಯತೆಯ ಮಾಧುರ್ಯವೂ ಇದೆ.

(೨)

ಇಷ್ಟು ಆಳವಾದ ಪಾಂಡಿತ್ಯವಿದ್ದರೂ ತಿಮ್ಮಪ್ಪಯ್ಯನವರು ಸಾಧಾರಣವಾಗಿ ಸಾರ್ವಜನಿಕ ಉಪನ್ಯಾಸಗಳನ್ನು ಮಾಡಲು ಉತ್ಸುಕರಾಗಿರಲಿಲ್ಲ. ಅವರನ್ನು ಉಪನ್ಯಾಸಕ್ಕೆ ಒಪ್ಪಿಸಬೇಕಾದರೆ ಬಹಳ ಕಷ್ಟವಾಗುತ್ತಿದ್ದಿತು. ಒಂದುಸಲ ಮದರಾಸಿನಲ್ಲಿ ನಾವಿಬ್ಬರೂ ಒಟ್ಟಿಗೆ ಉಪನ್ಯಾಸಮಾಡಲು ಸೇರಿದೆವು. ಅವರು ಪಾರ್ತಿ ಸುಬ್ಬನನ್ನು ಕುರಿತು ಉಪನ್ಯಾಸಮಾಡಬೇಕೆಂಬುದು ನನ್ನ ಇಷ್ಟವಾಗಿತ್ತು. ಆದರೆ ಅವರು ನನ್ನನ್ನು ನೋಡಿ ನಗುತ್ತಾ "ನೀವೂ ಪಾರ್ಟಿಸುಬ್ಬನ ಪಾರ್ಟಿಗೆ ಸೇರಿದವರೋ? ಅವನು ಯಾವ ಪಾರ್ಟಿಗೆ ಸೇರಿದವನೆಂಬುದೇ ಇನ್ನೂ ತೀರ್ಮಾನವಾಗಿಲ್ಲ." ಎಂದರು. ನಾನು "ಅವನು ಯಾವ ಪಾರ್ಟಿಗೆ ಸೇರಿದವನೆಂಬುದು ಇನ್ನೂ ತೀರ್ಮಾನವಾಗದಿದ್ದರೂ ನೀವಂತೂ ಅವನ ಪಾರ್ಟಿಗೆ ಸೇರಿರುವುದು ತೀರ್ಮಾನವಾಗಿದೆಯಲ್ಲ" ಎಂದೆ. ಅವರು "ಆದೂ

ಸರಿ. ಆದರೆ ಸುಬ್ಬನನ್ನು ಎಲ್ಲ ಪಾರ್ಟಿಯುವರೂ ಇನ್ನೂ ಎಳೆದಾಡುತ್ತಿದ್ದಾರೆ." ಎಂದರು. ಈವತ್ತಿನವರೆಗೆ ಪಾರ್ತಿ ಸುಬ್ಬನ ಸ್ಥಳವಾವುದೆಂಬುದು ಇನ್ನೂ ತೀರ್ಮಾನವಾಗಿಲ್ಲ. ಪಾರ್ತಿ ಸುಬ್ಬ ಇನ್ನೂ ಪಾರ್ಟಿಸುಬ್ಬನೇ ಆಗಿದ್ದಾನೆ.

ಅಂದು ತಿಮ್ಮಪ್ಪಯ್ಯನವರು ಪಂಪ ಭಾರತದ ಮೇಲೆ ಉಪನ್ಯಾಸ ಮಾಡಿದರು. ಅವರ ಪಂಪ ವಿದ್ವತ್ತಿಗೆ ನಾಡೋಜಪಂಪ ಸಮಸ್ತಭಾರತ ಸಾರ ಆದಿಪುರಾಣ ಸಂಗ್ರಹಗಳೇ ಸಾಕ್ಷಿ. ಕವಿರಾಜಮಾರ್ಗ ಪಂಪಭಾರತ ಮತ್ತು ಎಲ್ಲ ಹಳಗನ್ನಡ ಗ್ರಂಥಗಳೂ ತಿಮ್ಮಪ್ಪಯ್ಯನವರಿಗೆ ಕರತಲಾಮಲಕ ಗಳಾಗಿದ್ದವು. ಪಂಪ ಭಾರತದಲ್ಲಿ ಪಂಪನ ಶೈಲಿಯಲ್ಲಿಯ ಕಾಂತಿಯನ್ನು ತೋರಿಸಲು ಅವರು ಒಂದು ಉದಾಹರಣೆ ಹೇಳುತ್ತಿದ್ದರು. ಅಂಬೆ ಭೀಷ್ಮ ನಿಂದ ಸಾಲ್ವನೆಡೆಗೈದಿ ತನ್ನನು ವರಿಸೆಂದು ಹೇಳಿದ ಮಾತು ಇದು

ಬಂಡಣಮೊಳೆನ್ನನೋಡಿಸಿ
ಕೊಂಡೊಯ್ದಂ ನಿನ್ನನಾ ಸರಿತ್ಸುತ ನಾನುಂ ||
ಪೆಂಡತಿಯೆನಾದೆ ನದರಿಂ
ಪೆಂಡಿರ್ ಪೆಂಡಿರೊಳದೆಂತು ಕೂಡುವುದಬಲೆ ||

[ಭೀಷ್ಮನು ಯುದ್ಧದಲ್ಲಿ ನನ್ನನ್ನೂ ಜಯಿಸಿ ನಿನ್ನನ್ನೂ ಕೊಂಡು ಹೋದನು. ಆದುದರಿಂದ ನಾನು ಪೆಂಡತಿಯಾದೆ. ಹೆಣ್ಣು ಹೆಣ್ಣನ್ನು ಮದುವೆ ಯಾಗುವುದುಂಟೆ ?]

ಪಂಪ, ಉತ್ತರ ಅಥವ ದಕ್ಷಿಣ ಕನ್ನಡದ ಜಿಲ್ಲೆಯವನೆಂದು ಸಾಧಿಸಲು ತಿಮ್ಮಪ್ಪಯ್ಯನವರು ಪಂಪನ ಒಂದು ವೃತ್ತವನ್ನು ಹೇಳುತ್ತಿದ್ದರು. ಪರಶು ರಾಮರು ಸಮಸ್ತವನ್ನೂ ಕಶ್ಯಪ ಪ್ರಜಾಪತಿಗೆ ದಾನವಿತ್ತು ಹೊರಟಾಗ "ಶ್ರುತಪಾರಗ"ನಾದ ದ್ರೋಣಾಚಾರ್ಯನು ಯಾಚನಕ್ಕೆ ಬಂದನು. ಆಗ ಜಾಮ ದಗ್ನಿ ಬೇಸರಿಕೆಯಿಂದ ಹೀಗೆ ಹೇಳಿದನು.

ಒಡಮೆಯನರ್ಥಿಗಿತ್ತೆನವನೀತಳಮುಂ ಗುರುಗಿತ್ತೆನೀಗಳೊಂ
ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ-
ಲ್ಲೊಡಮೆ ಸಮಂತು ಪೇಳಿದರೊಳಾವುದನೀವುದೊ ಕುಂಭಸಂಭವಾ |

ಎಲ್ಲವನ್ನೂ ಕೊಟ್ಟಾಯಿತು. ಈಗ ಕೈಯಲ್ಲಿ ಒಂದು ಅಡಕೆಯೂ ಇಲ್ಲ ಎಂದರು ಪರಶುರಾಮರು. ತಿಮ್ಮಪ್ಪಯ್ಯನವರ ವಾದ ಸರಣಿ ಹೀಗೆ: "ಕನ್ನಡದ ಇತರ ಪ್ರಾಂತದವನಾಗಿದ್ದರೆ ಕೈಯಲ್ಲೊಂದು ಕಾಸೂ ಇಲ್ಲ ಎನ್ನುತ್ತಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೂ ಅಡಕೆಯ ದೇಶಾವರ ಯಾಚಕ ವೃತ್ತಿ ಇದೆ. ಆದುದರಿಂದ ಪಂಪ ಉತ್ತರ ಕನ್ನಡದಲ್ಲಿ ಹುಟ್ಟಿರಬೇಕು"

ಶ್ರೀಮಾನ್ ತಿಮ್ಮಪ್ಪಯ್ಯನವರ ಧರ್ಮ, ವಿಶಾಲವಾದ ಧರ್ಮ. ಧರ್ಮದ ಸರ್ವಮಾನ್ಯ ತತ್ವಗಳು ಎಲ್ಲ ಧರ್ಮಗಳಿಗೂ ಒಂದೇ ಎಂಬುದು ಅವರ ದೃಢ ನಿಶ್ಚಯವಾಗಿತ್ತು. ಧರ್ಮ ತತ್ವಗಳ ಮೂಲದಲ್ಲಿ, ಒಂದಕ್ಕೊಂದಕ್ಕೆ ವ್ಯತ್ಯಾಸವೇ ಇಲ್ಲವೆಂದು ಅವರು ಹೇಳುತ್ತಿದ್ದರು. ಪಂಪನ ಹೇಳಿದ ಧರ್ಮವೇ ಸರ್ವಧರ್ಮವೆಂದು ಅವರ ಅಭಿಪ್ರಾಯವಾಗಿತ್ತು.

ಭವರಾಶಿನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂ
ಬಿವೆ ಮೆಯ್ಯಾಗಿರೆ ಸಂದ ಧರ್ಮವೆವಲಂ ಪೊತ್ತೆತ್ತುಗುಂ ಮುಕ್ತಿಪ ।
ರ್ಯವಸಾನಂಬರಮಾನುಷಂಗಿಕ ಫಲಂ ಭೂಪೇಂದ್ರ ರಾಜೇಂದ್ರ ರಾ
ಜ್ಯವಿಳಾಸಂ ಪೆರತಲ್ತು ನಂಬು ಖಚರಕ್ಷ್ಮಾಪಾಲ ಚೂಡಾಮಣೀ ॥

[ದಯೆ ದಮ, ದಾನ ತಪ ಶೀಲವೆಂಬ ಪಂಚಾಂಗಗಳಿಂದ ಮೈವಡೆದುದೇ ಧರ್ಮ. ಉಳಿದ ಭೂಪೇಂದ್ರ ದೇವೇಂದ್ರ ರಾಜ್ಯವಿಲಾಸಗಳೆಲ್ಲವೂ ಆನುಷಂಗಿಕ ಫಲಗಳು. ಈ ಧರ್ಮಾಂಗಗಳನ್ನು ಸಾಂಗವಾಗಿ ಆಚರಿಸಿದವರಿಗೆ ಮುಕ್ತಿ ಪರಮ ಫಲವಾಗುವುದು.]

ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಬಾಯಲ್ಲಿ ಉಪನಿಷತ್, ಶ್ರುತಿ, ಸುಭಾಷಿತಗಳಿಂದ ನೀತಿ ಧರ್ಮವಾಕ್ಯಗಳು ಹೊರಡುತ್ತಿದ್ದಂತೆ ಆದಿಪುರಾಣ, ಪಂಪಭಾರತ, ಯಶೋಧರಚರಿತ್ರೆ, ಗಿರಿಜಾಕಲ್ಯಾಣಗಳಿಂದಲೂ ಹೊರಡುತ್ತಿದ್ದುವು. ಅದನ್ನರಿತೇ ಶ್ರೀ ಎಂ. ಶಾಂತರಾಜಶಾಸ್ತ್ರಿಗಳು ತಿಮ್ಮಪ್ಪಯ್ಯನವರನ್ನು ಕುರಿತು "ಜೈನಧರ್ಮವನ್ನು ಕುರಿತ ಗ್ರಂಥಕ್ಕೆ ಶ್ರೀ ತಿಮ್ಮಪ್ಪಯ್ಯನವರು ಸಂಗ್ರಾಹಕರೆಂದ ಮೇಲೆ, ಇದೇ ಉತ್ತಮಶೈಲಿಯ ಗ್ರಂಥದ ಮಹತ್ವಕ್ಕೆ ದ್ಯೋತಕವಾಗಿದೆ. ಕನ್ನಡಿಗರೆಲ್ಲರೂ ಈ ಮಾನನೀಯ ವಿದ್ವದ್ವರ್ಯರಿಗೆ ಚಿರಕೃತಜ್ಞರಾಗಿರಬೇಕೆಂದು ಹೇಳಬೇಕು" ಎಂದಿದ್ದಾರೆ.

ತಿಮ್ಮಪ್ಪಯ್ಯನವರದು ಸರ್ವವಿಷಯಗಳಲ್ಲಿಯೂ ಆಸಕ್ತಿ. ಅವರನ್ನು ವಿಶ್ವಕುತೂಹಲಿ ಎಂದು ಕರೆಯಬಹುದು. ಪಂಪನ ಕಳ್ಳಿನ ವರ್ಣನೆಯನ್ನು ಅವರು ಆಗಾಗ ನನ್ನ ಮುಂದೆ ಹಾಡಿದುದುಂಟು.

"ಮೂರುಸೂರು ಜಾತಿಯ ಕಳ್ಗಳಂ ಪಾಂಪಿಟ್ಟು, ಮಧುಮಂತ್ರದಿಂ ಮಧುದೇವತೆಗಳ ನರ್ಚಿಸಿ, ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯ ಕುಂತಳಿಕೆಯ ಮಾಳ್ಕೆಯ ಸಿಪ್ಪುಗಳೊಳ್ ತೀವಿ, ಮಧುಮಂತ್ರಗಳಿಂ ಮಂತ್ರಿಸಿ ನೆಲದೊಳೆರೆದು ತಲೆಯೊಳ್ ತಳಿದು ಕಳ್ಗಳ್ ಬೊಟ್ಟನಿಟ್ಟುಕೊಂಡು ಕೆಲವರೆಲ್ಲಂ ಬೊಟ್ಟಿಟ್ಟು ಕಿರಿಯರ್ ಪಿರಿಯರರಿದು ಪೊಡವಟ್ಟು ಮೀಸಲ್ಗಳ್ಳ ನೆರೆದು ಪೊನ್ನ ಬೆಳ್ಳಿಯ ಸಿಪ್ಪುಗಳೊಳ್ ಕಿರಿಕಿರಿದ ನೆರೆದು ಕುಡಿ ಬಿದಿರ ಕುಡಿಯು, ಮಾಪಿನ ಮಿಡಿಯ ಮರುದಿನ ಮೆಣಸುಗಡಲೆಯ ಪುಡಿಯೊಳಡಸಿದಪ್ಪವಲ್ಲಣಿಗೆಯ ಚಿಕ್ಕಣಂಗಳಂ ಸವಿಸವಿದು..........ತುಪ್ಪನಾಲಗೆಯೊಳ್ ತೊದಲ್ಪೆರಸು ನುಡಿವ ನುಡಿಗಳುಂ, ಪೊಡರ್ವ ಪಿಡಿಯ ಪುರ್ವುಗಳಂ ಪಿಡಿಯಲರ್ಗಣ್ಗಳೊಳ್ ವಿಕಾರಂ ಬರಸು ನೆಗಳ್ದಭಿನಯಂಗಳುಂ, ಮುಳಿಮುಳಿಪ ಕಣ್ಗಳೊಳ್ ಬೆಳ್ಪನಳಿಯೆ ಸೋಂಕುವ ಕೆಂಪುಗಳಂ ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು ಕಣ್ಗಳ ಬೆಳ್ಪಂ ತಮಗೆ ಮಾರುಗೊಂಡಂತೆ ತನಿಗೆತ್ತು ವೆರಸಿ, ಬತ್ತಿಸೊಗಯಿಸುವ ಬೆಳರ್ವಾಯ್ಗಳೊಳಿಂಪಂ ತಾಳ್ದಿ ಪೊರಮಡುವ, ತಣ್ಣಂಪುಗಳು ಮುವೃತಬಿಂದುಗಳಂತೆ ನೆಗಳ್ದ ಬೆಮರ ಬಿಂದುಗಳು ಮುಲವಲ್ಲದೊಪ್ಪೆ. ಪಲರು ಮೊಳ್ಪೆಂಡಿರೊಂದೆಡೆಯೊಳಿರ್ದರು"

ಹೀಗೆ "ಗೋಷ್ಠಿವಡೆದು ಕುಡಿಪರ್ ಕಾಮಾಂಗಮುಂ ಕಾಂತೆಯರ್"

ಪಂಪನು ಆದಿಪುರಾಣದಲ್ಲಿ ವರ್ಣಿಸಿರುವ ಶೂನ್ಯಗಳ ಸೌಂದರ್ಯ ತಿಮ್ಮಪ್ಪಯ್ಯನವರ ಮನಸ್ಸನ್ನು ಬಹಳ ಹಿಡಿದಿತ್ತು. ಸೌಂದರ್ಯ ಶಾಶ್ವತವಲ್ಲ.

ಸತ್ಯಂ ಮನೋರಮಾ ರಾಮಾಃ ಸತ್ಯಂ ರಮ್ಯಾ ವಿಭೂತಯಃ।
ಕಿಂತು ಮತ್ತಾಂಗನಾಪಾಂಗ ಭಂಗಿಲೋಲಂ ಹಿ ಜೀವಿತಂ॥

[ಸ್ತ್ರೀಯರು ಮನೋಹರರಾಗಿರುವುದು ಸತ್ಯ. ವೈಭವವು ರಮ್ಯವಾಗಿರುವುದೂ ಸತ್ಯ. ಆದರೆ ಜೀವನವೇ, ಮತ್ತಳಾದ ಯುವತಿಯ ಅಪಾಂಗಭಂಗಿಲೋಲತೆಯಂತೆ—ಹುಬ್ಬಿನ ಚಾಂಚಲ್ಯದಂತೆ—ಕ್ಷಣಿಕವೆಲ್ಲ]

ಈ ಶ್ಲೋಕದ ಅರ್ಥ, ಮನಸ್ಸಿಗೆ ಹತ್ತಲು ತಿಮ್ಮಪ್ಪಯ್ಯನವರು ಆದಿಪುರಾಣದ ಮಸಣದ ಸ್ವಯಂವರ ಪ್ರಭೆಯ ವರ್ಣನೆಯನ್ನು ಆಗಾಗ ಹೇಳುತ್ತಿದ್ದರು. ಅದು ಅವರ ಜೀವನದ ಪರಿಪಕ್ವಾನುಭವದ ವೇದಾಂತವೂ ಆಗಿತ್ತು.

ಅಲಕಂ ಮಂದಾರಶೂನ್ಯಂ ಕದಪು ಮಕರಿಕಾ ಪತ್ರಶೂನ್ಯಂ ಲಲಾಟಂ
ತಿಲಕಾಲಂಕಾರಶೂನ್ಯಂ ಘನಕುಚಯುಗಳಂ ಹಾರಶೂನ್ಯಂ ನಿತಂಬಂ
ಕಲಕಾಂಚೀದಾಮಶೂನ್ಯಂ ಚರಣಯುಗಳಮುಂ ನೂಪುರಾರಾವಶೂನ್ಯಂ
ಲಲಿತಾಂಗಂ ಪೋದೊಡಾಯ್ತಾಕೆಗೆ ದಿವಮನಿತುಂ ನಿರ್ಜರಾರಣ್ಯ ಶೂನ್ಯಂ ‖

* * * *

ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರ ಬಾಳು, ಆಳವಾದ ಅರ್ವಾಚೀನ ಪ್ರಾಚೀನ ಸಂಸ್ಕೃತಿಗಳ ಫಲ, ಜೀವನದ ನಾನಾ ಅನುಭವಗಳ ಪರಿಪಕ್ವ ಪರಿಣಾಮ, ಸರ್ವರಲ್ಲಿಯೂ ಮೈತ್ರೀಭಾವ ಇವುಗಳಿಂದ ಪುನೀತ ವಾಗಿತ್ತು. ಸೌರಭವನ್ನು ಹೊತ್ತು ತಿರುಗುವ ಗಾಳಿಯಂತೆ, ಅವರ ಎಲ್ಲಾ ಆಚರಣೆಗಳೂ ಸದುದ್ದೇಶಪೂರಿತವಾಗಿದ್ದುವು. 'ನಾಡೋಜ ಪಂಪ' ನಂತಹ ಗ್ರಂಥವನ್ನು ಬರೆದಿದ್ದರೂ, ಕವಿರಾಜಮಾರ್ಗದ ನುಡಿಗಳನ್ನು ಬಾಯಲ್ಲಿ ಉಚ್ಚರಿಸುತ್ತಿದ್ದರೂ, ವ್ಯಕ್ತಿಗಳ ಸ್ನೇಹವನ್ನು ಉಳಿಸಿಕೊಂಡು ಬೆಳೆಸಿಕೊಳ್ಳು ವುದೇ ಅವರ ಮುಖ್ಯ ಗುರಿಯಾಗಿತ್ತು. ಅವರೊಂದಿಗೆ ಮಾತನಾಡುವವರಿಗೆ ತಾವು ತಮ್ಮ ಒಬ್ಬ ಮುಖ್ಯ ಹಿತೈಷಿಯ ಮುಂದೆ ಇರುವ ಭಾವ ಬರುತ್ತಿತ್ತು. ಅವರ ಮಾತೂ ಹಾಗೆ ಸರಳವೂ, ಸ್ವಾಭಾವಿಕವಾದುದೂ, ಆತ್ಮೀಯವಾ ದುದೂ ಆಗಿತ್ತು. ಅವರೊಂದಿಗೆ ಮಾತನಾಡುವಾಗಲೆಲ್ಲ ನನಗೆ "ಇವರು ಹಿಂದೆ ತಾವು ಪ್ರಾರಂಭಿಸಿದ ಪತ್ರಿಕೆಗೆ "ಕನ್ನಡ ಕೋಗಿಲೆ" ಎಂದು ಹೆಸರಿ ಟ್ಟುದು ಅವರ ಸ್ವಭಾವಕ್ಕನುಗುಣವಾಗಿದೆ ಎಂದು ತೋರುತ್ತಿದ್ದಿತು. ಇಂತಹ ಸನ್ಮಿತ್ರರು ಕಣ್ಮರೆಯಾದುದು ಅವರನ್ನು ಬಲ್ಲಂಥ ನಮ್ಮಂಥವರಿಗೆ ತುಂಬಿ ಕೊಳ್ಳಲಾಗದ ನಷ್ಟ. ಅವರನ್ನು ಜ್ಞಾಪಿಸಿಕೊಂಡಾಗಲೆಲ್ಲ ನನಗೆ ಗಂಗಾ ಸ್ನಾನ ಮಾಡಿದ ಭಾವನೆಯುಂಟಾಗುತ್ತದೆ.

ಕನ್ನಡ ಬೆಳೆಯುತ್ತಿರುವ ಭಾಷೆ. ನಮ್ಮ ಭಾವೀ ಜೀವನದಲ್ಲಿ ಇದರ ಪಾತ್ರ ಬಹಳ ಪ್ರಾಮುಖ್ಯವಾಗುತ್ತದೆ. ಭಾಷೆಯನ್ನು ಸುಧಾರಿಸುವುದೂ, ಇದರಲ್ಲಿ ನಿಷ್ಕೃಷ್ಟವಾದ ಜ್ಞಾನವನ್ನು ಸಂಪಾದಿಸುವುದೂ ಆವಶ್ಯಕ. ಜ್ಞಾನಾ ರ್ಜನೆ ಸತತಾಭ್ಯಾಸದಿಂದ ಮಾತ್ರ ಸಾಧ್ಯವಾಗುವ ತಪಸ್ಸು. ಸ್ಪಷ್ಟವಾದ ಮತ್ತು ನಿಖರವಾದ ಭಾಷಾ ಪಾಂಡಿತ್ಯವಿಲ್ಲದವರಿಂದ ಭಾಷಾ ಸೇವೆ ಸಾಧ್ಯ ವಲ್ಲ. ಅವರು ಸುಮ್ಮನೆ "ಸರಸ್ವತಿಯ ಗೋಣನ್ನು ಮುರಿಯುತ್ತಾರೆ."

ಕಾವ್ಯವನ್ನು, ದೀರ್ಘವಾಗಿ ಆಳವಾಗಿ ವ್ಯಾಸಂಗಮಾಡುವ ಕ್ರಮಕ್ಕೆ ಶ್ರೀಮಾನ್ ತಿಮ್ಮಪ್ಪಯ್ಯನವರ "ಪಂಪನೇ" ಉದಾಹರಣೆ. ಈ ಬಗೆಯ ಆಳವಾದ ಕಾವ್ಯಾಭ್ಯಾಸ, ನಿಖರಜ್ಞಾನವನ್ನು ಸಂಪಾದಿಸುವುದೇ ಕನ್ನಡಿಗರು ತಿಮ್ಮಪ್ಪಯ್ಯನವರಿಗೆ ಅರ್ಪಿಸುವ ಕಾಣಿಕೆ.

ನಾಡು ನಿನ್ನ ಕೊಂಡಾಡುತ್ತಿದೆ ಕುಣಿದಾಡುತ್ತಿದೆ ಹುರುಪೇರುತಿದೆ
ಪ್ರಸಂಗವಶದಿಂದಲಸಂಗವಾದ ಮಾನಸಂಗಳೊಳ್ ಸವಿದುಂಬುತಿದೆ
ಮೂಡುವರೆಸಿತೋ ಮುಳುಗುವರೆಸಿತೋ ನೋಡುವರಾರಾ ಲೆಕ್ಕವನು
ಮೂಡಿ ಕನ್ನಡದೊಳಾಡಿಯಾಡಿಸಿದೆ ಪಾಡಿ ಪಾಡಿಸಿದೆ ಜನಪದವಂ
ಶಿರಃ ಪ್ರಣಾಮಂ ಮುಳಿಯ ನಿನಗೆ ಮುತ್ತಜ್ಜ ಮಂತ್ರವೆದೆಯಾರತಿಗೆ
ಅನಂತರಂಗದಿ ನಿಂದು ಹಾಡು ಮಾನಸಂ ತಣಿಗೆ ಕನ್ನಡನಾಡು."

ಕನ್ನಡಂ ಬಾಳ್ಗೆ.

—

ಕಾವ್ಯವನ್ನು ಕುರಿತು

—★—

ಕಾವ್ಯದ ಗುರಿ

ನಮಗೆ ಆನಂದವನ್ನುಂಟುಮಾಡುವುದೇ ಎಲ್ಲ ಕಲೆಗಳ ಗುರಿಯೂ ಆಗಿದೆ. ಹಾಗೆಯೇ ನಾವು ಕವಿತೆಯಿಂದಲೂ ಆನಂದವನ್ನು ಸ್ವಾಭಾವಿಕವಾಗಿ ನಿರೀಕ್ಷಿಸುತ್ತೇವೆ. ಆದರೆ ಹೊರಗಿನ ಇಂದ್ರಿಯಾನುಭವವಾದ ಆನಂದವೂ, ಅಂತರಂಗದ ಭಾವನಾಜನ್ಯವಾದ ಆನಂದವೂ ಕಾವ್ಯದ ಪ್ರಾಥಮಿಕ ಆವಶ್ಯಕ ಲಕ್ಷಣ. ಆದರೆ ಅತ್ಯಂತ ತೀಕ್ಷ್ಣಬುದ್ಧಿ ಮತ್ತು ಭಾವನೆಗಳನ್ನು ತೃಪ್ತಿಪಡಿಸಬೇಕಾದರೆ ಕಾವ್ಯವು ಅತ್ಯುತ್ಕೃಷ್ಟ ಮಟ್ಟವನ್ನು ಮುಟ್ಟಬೇಕು. ಅದರ ಗಾನಾಮೃತವು, ತಾನು ಹಿಂದೆ ಸಾಧಿಸಿದ ಪೂರ್ಣತೆಯನ್ನೂ ಮೀರಿ ಹೆಚ್ಚು ಪೂರ್ಣತೆಯನ್ನು ಸಾಧಿಸಬೇಕು.

ಕಾವ್ಯದ ಆನಂದವನ್ನು, ಬುದ್ಧಿಯಾಗಲೀ ಭಾವನೆಗಳಾಗಲೀ ಶ್ರೋತ್ರೇಂದ್ರಿಯವಾಗಲೀ ಪೂರ್ಣವಾಗಿ ವಾಸ್ತವವಾಗಿ ಸ್ವೀಕರಿಸಲಾರವು. ಕಾವ್ಯ ಬರಿಯ ಅವುಗಳಿಂದಲೇ ಸೃಷ್ಟಿಯಾಗುವುದೂ ಇಲ್ಲ. ಅವು ಕಾವ್ಯದ ಬರಿಯ ದಾರಿಗಳು, ಮತ್ತು ಉಪಕರಣಗಳು ಮಾತ್ರ. ಕಾವ್ಯದ ನಿಜವಾದ ಸೃಷ್ಟಿಕರ್ತೃ ಮತ್ತು ಶ್ರೋತೃ, ಇಬ್ಬರ ಆತ್ಮವೇ. ಕಾವ್ಯವು ಆತ್ಮದಿಂದ ಹೊರಟು ಆತ್ಮವನ್ನು ಸೇರಿದಾಗ ಅತ್ಯುತ್ಕೃಷ್ಟ ಕವಿತೆಯಾಗುತ್ತದೆ. ಆತ್ಮಾನಂದವನ್ನು ಕೊಡುವವರೆಗೆ, ಕಾವ್ಯ ತನ್ನ ಕರ್ತವ್ಯವನ್ನು ಪೂರ್ಣವಾಗಿ ಮಾಡಿದಂತಾಗುವುದಿಲ್ಲ. ಆತ್ಮಾನಂದ, ಎಲ್ಲದರಲ್ಲಿಯೂ ಆನಂದ ದೃಷ್ಟಿ, ಆನಂದವರ್ಧಕ, ವಿಶ್ವಾತ್ಮ ಸೃಷ್ಟಿಯಲ್ಲಿ ಸ್ವರಮೇಳ ಗಾನಮಾಧುರ್ಯವನ್ನು ತುಂಬಿದ ಆತ್ಮತೇಜಸ್ಸಿನ ಚೈತನ್ಯದಂತೆ, ಕವಿಯ ಕೃತಿ. ಕವಿ ಸೃಷ್ಟಿಕರ್ತ ಬ್ರಹ್ಮನಂತೆ. ಸತ್ಯ, ಜೀವ ಚೈತನ್ಯ, ಸೃಷ್ಟಿಯ ಆದಿಯಿಂದ ಇಂದಿನವರೆಗಿನ ಅದೃಷ್ಟ ಅನುಭವ, ಎಲ್ಲ ಅವನಿಗೆ ಸ್ಫೂರ್ತಿಯ ವೇಳೆಯಲ್ಲಿ ಸ್ಪಷ್ಟ ಗೋಚರ. ಅಂತಹ ಆತ್ಮಾನಂದ ಅವನಿಗೆ ಅನುಭವವಾದಾಗ, ಕವಿಯು ಈ ಜಗತ್ತಿನ ಅಲ್ಪತೆ ಕಷ್ಟ ಕಾರ್ಪಣ್ಯಗಳನ್ನು ಜಯಿಸಿ ಆನಂದವನ್ನೇ ಮೆರೆಸುತ್ತಾನೆ. ಆ ಆನಂದವನ್ನು ಸ್ವೀಕರಿಸುವವರಿಗೂ ಅದನ್ನೇ ಕೊಡುತ್ತಾನೆ. ಅವನ ಸಾಧನ, ಅವನ ಕಾವ್ಯ.

ತಂತ್ರ ಕೌಶಲ

ಕಲೆ ಪರಿಪೂರ್ಣವಾಗಬೇಕಾದರೆ, ನಿರ್ದೋಷವಾದ ತಂತ್ರ ಪ್ರಯೋಗ ಮೊದಲನೆಯ ಹೆಜ್ಜೆ. ಆದರೆ ಇನ್ನೂ ಅನೇಕ ಹೆಜ್ಜೆಗಳಿವೆ. ಗುರಿಗೂ ಸಾಧನೆಗೂ ಮಧ್ಯೆ ಒಂದು ಜಗತ್ತೇ ಎದ್ದು ನಿಲ್ಲುತ್ತದೆ. ಪ್ರಸ್ಥಾರನಾದ ವರ ಕವಿ, ದೋಷಯುಕ್ತವಾದ ತಂತ್ರವುಳ್ಳವನಾದರೂ ದಿವ್ಯದೃಷ್ಟಿಯುಳ್ಳವನಾಗಿ ಅದ್ಭುತ ಕಾವ್ಯವನ್ನು ಸೃಷ್ಟಿಮಾಡುತ್ತಾನೆ. ಇತರ ಕಲೆಗಳಲ್ಲಿರುವುದಕ್ಕಿಂತ ತಂತ್ರಕ್ಕೆ ಕಾವ್ಯದಲ್ಲಿ ಗೌಣಸ್ಥಾನ; ಯಾಕೆಂದರೆ ಕಾವ್ಯದ ಸಾಧನವಾದ ಮಾತು ಹೇಗೆ ಉಪಯೋಗವಾದರೂ ತನ್ನದೇ ಆದ ವಿಶಾಲವಾದ ಸೂಕ್ಷ್ಮವಾದ ಬಗೆ ಬಗೆಯ ಶಕ್ತಿಯುಳ್ಳದುದಾಗಿದೆ. ಈ ಶಕ್ತಿ ಇತರ ಕಲೆಗಳಿಗೆ ಇಲ್ಲ. ಕಾವ್ಯದ ನುಡಿಗೆ ಒಂದು ಆತ್ಮಶಕ್ತಿ ಇದೆ. ಒಂದು ಗಾನವಿದೆ. ಈ ಎರಡೂ–ಧ್ವನಿ ಮತ್ತು ವಸ್ತು ಸೇರಿಯೇ ಕಾವ್ಯದ ನಿಜವಾದ ಬೆಲೆ.

ಕವಿ, ತಂತ್ರದ ಮೇಲೆ ಅಷ್ಟೊಂದು ದೃಷ್ಟಿಯಿಡಬೇಕಾದುದಿಲ್ಲ. ತಂತ್ರ ಅವನಿಗೂ ಇರಬೇಕೆಂಬುದು ನಿಜ. ಆದರೆ ಕಾವ್ಯ ಸೃಷ್ಟಿಯ ಕಾವಿನಲ್ಲಿ ತಂತ್ರ, ಗೌಣ ಸ್ಥಾನವನ್ನು ಹೊಂದುತ್ತದೆ. ಅತ್ಯಂತ ಸ್ಫೂರ್ತಿಯ ದಿವ್ಯದರ್ಶನದಲ್ಲಿ ಕವಿ, ಅದನ್ನು ಮರೆತರೂ ಮರೆಯಬಹುದು. ಯಾಕೆಂದರೆ ಆ ವೇಳೆಗಳಲ್ಲಿ ಅವನ ವಚನಗಾನ ಮಾಧುರ್ಯ, ಸ್ವಾಭಾವಿಕವಾಗಿ ಅವನ ಹೃದಯದಿಂದಲೇ ನಿರ್ದೋಷವಾಗಿಯೇ ಹೊರಡುತ್ತದೆ. ಸೃಷ್ಟಿಕರ್ತೃ. ಜಗತ್ತನ್ನು ಒಂದು ಗಾನ ವಾಕ್‌ನಿಂದ ಸೃಷ್ಟಿಸಿದಂತೆ, ಕವಿಯ ವಾಕ್ಕು ಸ್ವಭಾವದಿಂದಲೇ ಗಾನವಾಗಿ ಹರಿಯುತ್ತದೆ. ಅವನ ಕಾವ್ಯ, ಕಾವ್ಯಗಾನ. ಕವಿಯ ಆ "ಅತಿಮಹತ್" ಕಾವ್ಯವಾಕ್ಯವೇ, ಅವನ ಕೃತಿಯ ಅಮೃತತ್ವ. ಅದೇ ಅಪೌರುಷೇಯ, ದೈವೀ. ಕಾವ್ಯದಲ್ಲಿ ಅದು ಸ್ವಲ್ಪವಿದ್ದರೂ ಕವಿ ಅಮರನಾಗುತ್ತಾನೆ.

ಉಪಯೋಗಿಸುವ ಮಾತಿನ ಅರ್ಥ ಮಾತ್ರವಲ್ಲ. ಆ ಮಾತಿನ ಸಾಮಾನ್ಯ ಸೂಚ್ಯಾರ್ಥ, ವಾಚ್ಯಾರ್ಥ, ಧ್ವನಿ, ಎಲ್ಲವನ್ನೂ ಮೀರಿ ಅಪಾರವಾದ ಅನಂತವಾದ ಅರ್ಥವುಳ್ಳದುದಾಗಿ ಕಾವ್ಯವಾಕ್ಯ ಹೊರಡುವುದು. ಕವಿಯ ವಾಕ್ಕು ಸಾಮಾನ್ಯವಾದ ಮಾತಿನ ಅರ್ಥ ದ್ವಾರದಿಂದ, ನಮ್ಮನ್ನು ಆಧ್ಯಾತ್ಮಕ್ಕೆ ಕರೆದೊಯ್ಯುವುದು.

ಗದ್ಯ ಶೈಲಿ

ಗದ್ಯದ ಶೈಲಿಯಲ್ಲಿ ಮಾತು, ಸಾಮಾನ್ಯ ಅರ್ಥದಲ್ಲಿ ಉಪಯೋಗವಾಗುವುದಕ್ಕಿಂತ ಅಧಿಕಾರ್ಥದಲ್ಲಿ ಉಪಯೋಗವಾಗುತ್ತದೆ. ಸಾಮಾನ್ಯ ಮಾತಿನಲ್ಲಿ ಇರದ ನಾದ ಮಾಧುರ್ಯ, ಶಬ್ದಮೇಳ, ಗದ್ಯಕಾವ್ಯದಲ್ಲಿ ಉಂಟಾಗುತ್ತದೆ. ಗದ್ಯ, ಮಾತುಗಳನ್ನು ಹಿತವಾಗಿ ಹೊಳಪಾಗಿ ಸೇರಿಸಿ ಬುದ್ಧಿಗೆ ಸ್ಪಷ್ಟವಾಗುವಂತೆ ಮಾಡುತ್ತದೆ. ಸಾಮಾನ್ಯ ಮಾತುಗಳಿಗಿಂತ, ಹೆಚ್ಚು ಶುದ್ಧವಾದ ಸೂಕ್ಷ್ಮವಾದ ಬಹುಮುಖವಾದ ತೃಪ್ತಿಯಾದ ಪದಗುಚ್ಛವೇ ಗದ್ಯದ ಲಕ್ಷಣ. ಔಚಿತ್ಯವೇ ಇದರ ಮುಖ್ಯ ಆದರ್ಶ. ಇದರ ಜತೆಗೆ ಮಾತು, ಪ್ರಭಾವಯುಕ್ತವೂ ಫಲಕಾರಿಯೂ ಬುದ್ಧಿಗೆ ಸುಲಭಗ್ರಾಹ್ಯವೂ ಆಗಲು ಗದ್ಯಶೈಲಿ, ಶಬ್ದ ಚಾತುರ್ಯವನ್ನು ಅವಲಂಬಿಸಬಹುದು. ಅಲಂಕಾರವನ್ನೂ ಉಪಯೋಗಿಸಬಹುದು—ಗದ್ಯ, ಗಂಭೀರವಾದ ಕವಿಯ ಅನ್ವೇಷಣೆಯಾದ ದಿವ್ಯದರ್ಶನವನ್ನು ಹುಡುಕುತ್ತಾ ಹೋಗುವುದಿಲ್ಲ. ಗದ್ಯದ ದೃಷ್ಟಿ, ವಾಚಕನ ಬುದ್ಧಿಯಮೇಲೆ. ವಿವೇಕ, ರುಚಿ, ಬುದ್ಧಿ, ಇವುಗಳೇ ಗದ್ಯ ಶೈಲಿಯ ದೇವತೆಗಳು. ಆದರೆ ಕವಿಗೆ ಅವು ಗೌಣ. ದಿವ್ಯದರ್ಶನ, ಸೌಂದರ್ಯಸೃಷ್ಟಿ ಆಧ್ಯಾತ್ಮ ದೃಷ್ಟಿ, ಛಂದಸ್ಸಿನ ಓಟ, ಗಾನ ಮಾಧುರ್ಯ, ಇವು ಕವಿಯ ಉಸಿರು.

ಕವಿಯ ಮಾತು ಮಂತ್ರ

ಕವಿಯ ಸಂದೇಶ, ಮಾತುಗಳ ಆಚೆ ಹೋಗಿ ಅವುಗಳ ನಿಜಜ್ಯೋತಿಯನ್ನು ಹಿಡಿದು, ನಮ್ಮಲ್ಲಿರುವ ಆತ್ಮದ ಗಾನಕ್ಕೂ ಜಗತ್ ಸೃಷ್ಟಿಯ ಕಾರಣವಾದ ಆದಿ ಗಾನಕ್ಕೂ ಸಮರಸವನ್ನು ಕಾಣುತ್ತದೆ. ಆಗ ಅದು ಉಚ್ಚರಿಸುವ ಮಾತು ಮಂತ್ರವಾಗುತ್ತದೆ. ಉಚ್ಚಾರವಾದ ಪ್ರತಿಮಾತಿಗೂ ಎರಡು ಪ್ರಕಾರಗಳಿರುವುದಷ್ಟೆ. ಒಂದು ಬಾಹ್ಯ ಸ್ವರೂಪ. ಮತ್ತೊಂದು ಅಂತರಂಗದ ಅರ್ಥ. ಉದಾಹರಣೆಗೆ, ಒಂದುಮಾತನ್ನು ಹೇಳಿದರೆ ಅದರಲ್ಲಿ ಮಾತಿನ ಅರ್ಥ, ಬುದ್ಧಿ ಸ್ಪಷ್ಟತೆ ಇದೆ. ಆದರೆ ಬುದ್ಧಿಯನ್ನು ಮೀರಿದ ಒಂದು ಭಾವನೆಯೂ ಅಲ್ಲಿರುತ್ತದೆ. ಹಾಗೆಯೇ ಭಾವಗಳಲ್ಲಿ ಸಹೃದಯನು ಹುಡುಕುವುದು ಬರಿಯ ರಸಭಾವ ಮಾತ್ರವಲ್ಲ. ಯಾವ ರಸಭಾವ ಅನುಭವದಿಂದ ಆತ್ಮಕ್ಕೂ ಜಗತ್ತಿಗೂ ಆನಂದಾನುಭವವಾಗುತ್ತದೋ, ಆ ರಸಗಳ ಆತ್ಮವನ್ನು. ಹಾಗೆಯೇ ಕವಿತೆಯಲ್ಲಿಯೂ ಸಹ ಕವಿ ಹುಡುಕುತ್ತಿರುವುದು, ಈ ಮಹತ್ ಸತ್ಯವನ್ನು, ಆನಂದ

ವನ್ನು, ಸೌಂದರ್ಯವಾದ ಸತ್ಯವನ್ನು. ಅದರ ಅನುಭವದಿಂದ ಆತ್ಮ ತನ್ನನ್ನು ತಾನು ಕಂಡುಕೊಳ್ಳುತ್ತದೆ.

ಉತ್ಕೃಷ್ಟ ಕಾವ್ಯದ ಗುಣಗಳು

ಉತ್ಕೃಷ್ಟ ಕಾವ್ಯವಾಗಬೇಕಾದರೆ ಮೂರು ಗುಣಗಳು ಸಮರಸವಾಗಿ ಸೇರಿರಬೇಕು. ಛಂದಸ್ಸಿನ ಪರಿಪೂರ್ಣತೆ, ಮಾತು ಭಾವಗಳ ಪಾರಿಶುದ್ಧತೆ, ಉತ್ಕೃಷ್ಟವಸ್ತು, ಸತ್ಯದ ದಿವ್ಯದರ್ಶನ. ಛಂದಸ್ಸು ಕಾವ್ಯದ ಬಾಹ್ಯಾಕಾರಕ್ಕೆ ಆವಶ್ಯಕ ಎಂಬ ಭಾವನೆ ಪರಂಪರಾಗತವಾಗಿ ಬಂದಿದೆ. ಆದರೆ ಆಧುನಿಕ ಕವಿತೆ ಛಂದಸ್ಸನ್ನು ಹಾರಿಸಿದೆ. ಇದರ ಪ್ರಯೋಗ ಫ್ರಾನ್ಸ್ ಇಟಲಿ ಅಮೆರಿಕ ಎಲ್ಲೆಲ್ಲೂ ನಡೆದಿದೆ. ಎಡ್ವರ್ಡ್ ಕಾರ್ಪೆಂಟರ್ ವಾಲ್ಟ್ ವಿಟಮಿನ್, ಮುಂತಾದವರು ಈ ಮಾರ್ಗದಲ್ಲಿಯೂ ಸಿದ್ಧಿ ಪಡೆದಿದ್ದಾರೆ. ಆದರೆ ಅವರು ಹೆಚ್ಚಾಗಿ ಸಿದ್ಧಿ ಪಡೆದದು, ತಮ್ಮ ಕಾವ್ಯ ಶಕ್ತಿಯಿಂದಲೇ ಹೊರತು ಬರಿಯ ಛಂದಸ್ಸನ್ನು ಬಿಟ್ಟುದರಿಂದ ಮಾತ್ರವಲ್ಲ. ಛಂದಸ್ಸನ್ನು ಬಿಡುವುದು, ಕಾವ್ಯದ ಮಂಗಳ ಭವಿಷ್ಯದ ದೃಷ್ಟಿಯಿಂದ ಸಾಧುವೇ ಅಸಾಧುವೇ ಎಂಬುದರ ಮೇಲೆ ಕಡೆಯ ಮಾತು ಈಗಲೇ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇದುವರೆಗಿನ ಪರಂಪರಾಗತವಾದ ಛಂದೋಬದ್ಧವಾದ ವರಕವಿಗಳ ಕಾವ್ಯಗಳನ್ನು, ಸ್ಫೂರ್ತಿಯಲ್ಲಿಯೂ ಗಾನದಲ್ಲಿಯೂ ಸಂದೇಶದಲ್ಲಿಯೂ ಆತ್ಮಶಕ್ತಿಯಲ್ಲಿಯೂ ಹಿಂದಕ್ಕೆ ಹಾಕುವ ಕಾವ್ಯ, ಛಂದಸ್ಸು ರಹಿತವಾದ ಕವಿತೆಯಲ್ಲಿ ಬರುವವರೆಗೆ, ಪರಂಪರಾಗತವಾದ ಕವಿತೆಯ ಬಾಹ್ಯಾಕಾರದ ಸ್ವರೂಪದ ಸ್ಥಾನ, ಸುಭದ್ರವಾಗಿಯೇ ಇರುತ್ತದೆ. ಎಂಬ ಅಭಿಪ್ರಾಯಕ್ಕೆ ಎಡೆ ಇದೆ.

ಸೃಷ್ಟಿಕರ್ತನು ಛಂದಸ್ಸಿಗೆ ಅನುಗುಣವಾಗಿ ವಾಕ್‌ಗಳನ್ನು ಸೃಷ್ಟಿಸಿ ಆ ಸ್ವರಮೇಳದಿಂದ ಜಗತ್ತುಗಳನ್ನು ಸೃಷ್ಟಿಸಿದನೆಂಬ ವೇದವಾಕ್ಯ ಅರ್ಥವತ್ತಾಗಿದೆ. ಜಗತ್ತಿನ ಮೂಲ ಚಲನಗಳು, ವಿಶ್ವಾತ್ಮನ ಛಂದಕ್ಕೆ ಅನುಗುಣವಾಗಿರುವುದರಿಂದಲೇ ಅವು ಶಾಶ್ವತವಾಗಿವೆ. ಕೆಲವು ಕಾಲದವರೆಗೆ ಛಂದೋಬದ್ಧವಾದ ಸಾಹಿತ್ಯವೆಲ್ಲ ಕಾವ್ಯವೆಂಬ ಭಾವನೆ ಇದ್ದಿತು. ಆದರೆ ಬರಿಯ ಛಂದಸ್ಸು ನಿಜವಾದ ಕವಿತೆಯಲ್ಲ ಎಂಬುದನ್ನು ಈಗ ನಾವು ಅರಿತಿದ್ದೇವೆ. ಅಂತಹುದರಲ್ಲಿ ಕಾವ್ಯದ ನೆರಳು ಇರಬಹುದು. ತಿರುಳು ಇರುವುದಿಲ್ಲ. ಅಂತಹ ಕವಿಗಳು ಸರಳವಾದ ಗಾನದಲ್ಲಿ ತಮ್ಮ ಕಾವ್ಯವನ್ನು ಹಾಡುತ್ತಾರೆ.

ಅದರಿಂದ ಕೇಳುವವನಿಗೆ ಆನಂದವಾಗುತ್ತದೆ ನಿಜ. ಆ ಕಾವ್ಯ ಸುಂದರವಾಗಿಯೂ ಇರುತ್ತದೆ. ಮನುಷ್ಯನ ಕಲಾಭಿರುಚಿಯನ್ನು ಅದು ತೃಪ್ತಿಪಡಿಸುತ್ತದೆ. ಆದರೆ ಆ ಕಾವ್ಯ ಮತ್ತೇನನ್ನೂ ಮಾಡಲಾರದು. ನಾವು ಆ ಗಾನವನ್ನು ಕೇಳಿದೆವು, ಮುಗಿಯಿತು. ಆದರೆ ನಮ್ಮ ಒಳ ಕಿವಿಗೆ ಆಶ್ಚರ್ಯವುಂಟು ಮಾಡುವುದು ಅಲ್ಲಿ ಮತ್ತೇನೂ ಇಲ್ಲ. ನಮ್ಮ ಮನಸ್ಸನ್ನೂ ಹೃದಯವನ್ನೂ ಇದ್ದಕ್ಕಿದ್ದಂತೆ ಅದ್ಭುತಲೋಕಗಳಿಗೆ ಕರೆದೊಯ್ಯುವ ದಿವ್ಯ ಪ್ರತಿಭೆಯ ಹೊಳಪು ಅಲ್ಲಿ ಏನೂ ಇರುವುದಿಲ್ಲ. ಅದರಲ್ಲಿ ಸ್ವಲ್ಪವೂ ಹುಚ್ಚು ಇಲ್ಲ. ಅದು ಮಾನುಷ ಆನಂದ. ಆದರೆ ನಿಜವಾದ ಕಾವ್ಯ ಉಂಟುಮಾಡುವುದು, ದೈವಿಕವಾದ ಆತ್ಮಾನಂದ. ಸಾಮಾನ್ಯ ಕವಿತೆ, ನದಿಯ ನೀರಿನಂತೆ ಸರಾಗವಾಗಿ ಹರಿದು ಹೋಗುತ್ತದೆ. ಅದರ ಜಲನವಲನ ಸಮರಸ, ಅದ್ಭುತವಲ್ಲ. ಕಿವಿಯನ್ನು ಮುಟ್ಟುವ ಕವಿತೆಗಳಿಂದ, ಬುದ್ಧಿಯನ್ನು ಮುಟ್ಟುವ ಕವಿತೆಗಳಲ್ಲಿ ಇದು ಹೆಚ್ಚು. ಅವರ ದೃಷ್ಟಿ, ತಾವು ಹೇಳಬೇಕೆಂದಿರುವ ವಿಷಯದ ಮೇಲೆ. ಅದನ್ನು ಚೆನ್ನಾಗಿ ಹೇಳಲು ಸಾಧ್ಯವಾದರೆ, ತಮ್ಮ ಉದ್ದೇಶ ಸಫಲವಾಯಿತೆಂದು ಅವರು ಭಾವಿಸುತ್ತಾರೆ, ತೃಪ್ತರಾಗುತ್ತಾರೆ.

ಗದ್ಯದ ಶೈಲಿಯಲ್ಲಿ ಮೊತ್ತದ ಪರಿಣಾಮ ಮುಖ್ಯ. ಈ ಮೊತ್ತದ ಪರಿಣಾಮ ಸಾಧನೆಗಾಗಿ ಬೇರೆ ಬೇರೆ ವಾಕ್ಯಭಾಗಗಳು ತಮ್ಮ ತಲೆಯೆತ್ತದೆ ತಾವು ಹಿಮ್ಮೇಳದಲ್ಲಿ ನಿಲ್ಲುತ್ತವೆ. ಕೆಲವು ಮಾತುಗಳು ಇದ್ದರೂ ಇರದಂತೆ ಮೌನವಾಗಿರುತ್ತವೆ. ಇದರಿಂದ ಗದ್ಯ ತನ್ನ ಗುರಿಯಾದ ಸಮರಸತೆಯನ್ನು ಸಾಧಿಸುತ್ತದೆ. ಆದರೆ ಕವಿತೆಯಲ್ಲಿ ಛಂದಸ್ಸು ಯತಿಗಳ ಆರ್ಭಟ ಹೆಚ್ಚು. ಅದರ ಛಂದೋಗತಿ ಸ್ಪಷ್ಟವಾಗಿ, ಬದ್ಧವಾಗಿರಬೇಕು. ಕಾವ್ಯ ತನ್ನ ಅತ್ಯುತ್ಕೃಷ್ಟ ಗುರಿಯನ್ನು ಮುಟ್ಟುವ ಸಂದರ್ಭದಲ್ಲಿ ಮಾತ್ರ, ಪ್ರತಿಯೊಂದು ಮಾತೂ ತನ್ನ ತನ್ನ ಪೂರ್ಣ ವೈಭವದಿಂದ ಮೆರೆದು, ತನ್ನ ಕಾರ್ಯವನ್ನು ಸಾಧಿಸುತ್ತದೆ.

ಗದ್ಯದ ಮುಖ್ಯಗುರಿ ಸ್ಪಷ್ಟತೆ, ಬುದ್ಧಿ ಗ್ರಾಹ್ಯವಾಗುವಂತೆ ವಿಷಯ ನಿರೂಪಣೆ. ಶೈಲಿಯಲ್ಲಿ ತರುವ ತೇಜಸ್ಸು ಋಜುತ್ವ ಓಘ ಸೌಂದರ್ಯ ವೈಭವಗಳು ಇದಕ್ಕಾಗಿ. ಆದರೆ ಕಾವ್ಯದ ಮುಖ್ಯಗುರಿ, ಕವಿಯ ದರ್ಶನ, ವಾಚಕನಿಗೆ ಜೀವಂತವಾಗುವಂತೆ ಮಾಡುವುದು, ಕವಿಗೆ ದೊರಕಿದ ಆತ್ಮಾನುಭವ, ಆತ್ಮದರ್ಶನ ಸಹ, ಸಹೃದಯನಿಗೆ ದೊರಕುವಂತೆ ಮಾಡುವುದು.

ಇತರ ಕಲೆಗಳಾದ ಮೂರ್ತಿ ಶಿಲ್ಪ, ವಾಸ್ತುಶಿಲ್ಪ, ಚಿತ್ರ ಕೆಲಸಗಳಂತೆ ಕಾವ್ಯವೂ ಸಹ, ಸ್ಪಷ್ಟವಾದ ಸಂಕೇತಗಳ ಮೂಲಕ ಮನುಷ್ಯನ ಹೃದಯ ವನ್ನು ಹೊಗುತ್ತದೆ. ಉಳಿದ ಕಲೆಗಳಲ್ಲಿ ಸಂಕೇತಗಳು ದೃಷ್ಟಿಗೋಚರವಾಗಿರುತ್ತದೆ. ಕಾವ್ಯದಲ್ಲಿ ಈ ಸಂಕೇತಗಳು ಮಾತುಗಳ ಮೂಲಕ ಮನಸ್ಸಿಗೆ ಮಾತ್ರಗೋಚರವಾಗುತ್ತವೆ. ಕವಿಯ ಮಾತಿನ ಶಕ್ತಿ ಮುಖ್ಯವಾಗಿ ಸಹೃದಯನಲ್ಲಿ ದಿವ್ಯದರ್ಶನವನ್ನು ಹುಟ್ಟಿಸುವುದು. ಬರಿಯ ಭಾವನೆ ಮತ್ತು ವಿಚಾರ ಶಕ್ತಿಗಳನ್ನು ಮಾತ್ರ ಸ್ಫುರಿಸುವುದಲ್ಲ. ಭಾವನೆಗಳೂ ವಿಚಾರಶಕ್ತಿಯೂ ದರ್ಶನದಲ್ಲಿಯೇ ಸೇರಿಕೊಂಡಿವೆ. ಕಾವ್ಯದಲ್ಲಿ ಮುಖ್ಯವಾಗಿ ಇರಬೇಕಾದುದು ದಿವ್ಯದರ್ಶನಶಕ್ತಿ ಅಥವ ಮುಂಕಾಣ್ಕೆ. ಹೃದಯ ಮತ್ತು ಮನಸ್ಸಿಗೆ ಗೋಚರಿಸುತ್ತಿರುವುದನ್ನು ಕವಿ, ನಮ್ಮ ಒಳಗಣ್ಣಿಗೆ ತೋರಿಸಬೇಕಾಗಿದೆ. ಪ್ರಾಚೀನರು ಹೇಳಿದಂತೆ, ಅವನು ಋಷಿ, ಬರಿಯ ಪದ್ಯ ನಿರ್ಮಾಣಕನಲ್ಲ. ಬರಿಯ ವಿಚಾರ ಶಕ್ತಿ ಪ್ರಚೋದಕನೂ ಅಲ್ಲ. ಬಾಹ್ಯ ವಸ್ತು ಮತ್ತು ಮನಸ್ಸಿನ ಆಚೆ ಹೋಗಿ ಅವನ ದೃಷ್ಟಿ, ಅಪೌರುಷೇಯ ವಾಣಿಯನ್ನು ಹುಡುಕುತ್ತದೆ. ಆ ವಾಣಿಯ ದಿವ್ಯಶಕ್ತಿ ನಮಗೂ ಅಂತರ್‌ಜ್ಞಾನವನ್ನು ಕೊಡುತ್ತದೆ. ಆ ಅಪೌರುಷೇಯ ವಾಣಿಯನ್ನು ಸಿದ್ಧಿ ಮಾಡಿಕೊಳ್ಳುವುದೇ ಕಾವ್ಯದ ಸಮಸ್ತ ಮತ್ತು ಪೂರ್ಣ ಗುರಿಯಾಗಿದೆ.

ಕಾವ್ಯದ ಗುರಿ (ಎಲ್ಲ ಕಲೆಗಳ ಗುರಿಯೂ) ಬರಿಯ ಪ್ರಕೃತಿಯ ಛಾಯಾ ಗ್ರಹಣವಲ್ಲ. ಅಥವಾ ವಸ್ತುಸ್ಥಿತಿಯ ಬರಿಯ ಅನುಕರಣ ಮಾತ್ರವಲ್ಲ. ಅಥವ ವಸ್ತುಸ್ಥಿತಿಯನ್ನು ಸುಮ್ಮನೆ, ಇದ್ದುದಕ್ಕಿಂತ ಉತ್ತಮವಾಗಿ ಹೇಗೆ ಇರಬೇಕೆಂದು ಕವಿಗೆ ತೋರುವುದೋ ಹಾಗೆ, ಚಿತ್ರಿಸುವುದೂ ಅಲ್ಲ. ಆದರೆ ಪ್ರಕೃತಿಯು, ತನ್ನ ನಾನಾ ರೂಪದಲ್ಲಿ ತೋರಿಸುತ್ತಿರುವ ಚಿತ್ರಗಳ ಒಂದು ಹೊಸ ಅರ್ಥದ ನಿರೂಪಣೆ ಮಾಡುವುದೇ ಕವಿಯ ಗುರಿ. ಈ ಅರ್ಥ ಪ್ರಕೃತಿಯಲ್ಲಿ ಯಾವಾಗಲೂ ಅಡಗಿಯೇ ಇರುತ್ತದೆ. ಅರ್ಹನಾದ ಕವಿ ತನ್ನನ್ನು ವಿನಯದಿಂದ ಸಂಧಿಸಿದಾಗ, ಪ್ರಕೃತಿ, ಅದನ್ನು ಅವನಿಗೆ ಪ್ರದರ್ಶಿಸಿಯೇ ಪ್ರದರ್ಶಿಸುತ್ತದೆ.

ಕವಿ, ದಾರ್ಶನಿಕ, ವಿಜ್ಞಾನಿ

ದಿವ್ಯ ದೃಷ್ಟಿ ಕವಿಯ ಲಕ್ಷಣ. ಸೂಕ್ಷ್ಮ ಪರಿಶೀಲನೆಯ ದೃಷ್ಟಿ ವೇದಾಂತಿಯ ಲಕ್ಷಣ. ವಿಭಜನೆಯ ದೃಷ್ಟಿ ವಿಜ್ಞಾನಿಯ ಲಕ್ಷಣ. ನಮ್ಮ

ಪ್ರಾಚೀನರ ಅಭಿಪ್ರಾಯದಂತೆ ಕವಿ ಸತ್ಯದ ಪ್ರದರ್ಶಕ. ಆದರೆ ಆ ಗುರಿಯಿಂದ ನಾವು ಈಚೆಗೆ ಬಹಳ ದೂರ ಬಂದು ಆಯಿತು. ಅವನು ಹಿತವಾಗಿ ಸುಂದರವಾಗಿ ಹೇಳಬೇಕು ಎಂದು ಮಾತ್ರ ನಾವು ಕೇಳುತ್ತಿದ್ದೇವೆ. ಆದರೂ ಎಲ್ಲ ಉತ್ತಮ ಕವಿತೆಯಲ್ಲಿಯೂ, ಈ ಸತ್ಯಾನ್ವೇಷಣೆ ಸತ್ಯಪ್ರದರ್ಶನ ಸ್ವಲ್ಪ ಮಟ್ಟಿಗಾದರೂ ಇರುತ್ತದೆ. ನಮ್ಮ ಒಳಕಣ್ಣಿಗೆ ಹೊಸ ದೃಷ್ಟಿಯನ್ನು ಕೊಡುವುದೇ ಕಾವ್ಯದ ಗುರಿ. ಕಿವಿ ಕೇವಲ ಬಾಹ್ಯದ ಬಾಗಿಲು. ಕವಿಯು ಏನನ್ನು ಕಂಡಿದ್ದಾನೆಯೋ ಅದನ್ನುನಾವು ಕಾಣುವಂತೆ ಮಾಡುವುದು ಅವನ ಗುರಿ. ಆದುದರಿಂದ ಅವನು ನಮ್ಮಲ್ಲಿ ತೆರೆಯುವುದು ನಮ್ಮ ಒಳಗಣ್ಣು. ನಮ್ಮಲ್ಲಿ ಆ ಒಳಗಣ್ಣನ್ನು ಅವನು ತೆರೆಯಬೇಕಾದರೆ, ಅವನ ಕಣ್ಣು ಅತ್ಯಂತ ತೀಕ್ಷ್ಣವಾಗಿಯೂ ಪ್ರಖರವಾಗಿಯೂ ಇರಬೇಕೆಂಬುದರಲ್ಲಿ ಸಂದೇಹವೇ ಇಲ್ಲ.

ಆದುದರಿಂದ ಪ್ರಕೃತಿ ಮತ್ತು ಮಾನವನನ್ನು ಸರಿಯಾಗಿ ಅರ್ಥಮಾಡಿಕೊಂಡು ಅವುಗಳ ಹೊಸ ಸಂದೇಶವನ್ನು ಜನತೆಗೆ ಬೀರುವವರೇ ಉದ್ದಾಮ ಕವಿಗಳು. ತಾವು ಕಂಡ ದಿವ್ಯದರ್ಶನವನ್ನು ಪ್ರತಿಬಿಂಬಿಸುವುದೇ ಅವರ ಕಾರ್ಯ. ದಿವ್ಯದೃಷ್ಟಿಯೇ ಕವಿಯ ನಿಜವಾದ ಲಕ್ಷಣ. ಆದುದರಿಂದಲೇ ಕವಿಗಳು ಒಂದು ದೃಷ್ಟಿಯಲ್ಲಿ, ಸಣ್ಣಸಣ್ಣ ಬ್ರಹ್ಮರುಗಳು.

ಕಾವ್ಯದಲ್ಲಿ ವಿಚಾರಶಕ್ತಿ ಹೆಚ್ಚಾಗಿರಬೇಕೆಂದು ಆಧುನಿಕರು ಹೇಳುತ್ತಾರೆ. ಇದು ಕವಿಗೆ "ಶ್ರೇಷ್ಠ ಗಾಯಕನಾಗಬೇಡ. ಜಗತ್ತಿನ ದ್ರಷ್ಟಾರನಾಗಬೇಡ. ಆದರೆ ಬೋಧಕನಾಗು" ಎಂದು ಹೇಳಿದಂತೆ ಆಗುತ್ತದೆ. ಕವಿ ವೇದಾಂತಿಯಾಗಿರಬೇಕಾದುದಿಲ್ಲ. ಧರ್ಮ ಬೋಧಕನಾಗಿರಬೇಕಾದುದಿಲ್ಲ. ಆ ಭಾವನೆಗಳು ಕವಿಗೆ ಇದ್ದರೂ ಅದರಿಂದಲೇ ಕಾವ್ಯವಾಗುವುದೆಂದು ತಿಳಿದು ಅವನು ಅವನ್ನು ಕಾವ್ಯದಲ್ಲಿ ತರಬೇಕಾದುದಿಲ್ಲ. ಕವಿಯ ದರ್ಶನ, ಅವನ ಧರ್ಮ, ಅವನ ತತ್ವ, ಇವೆಲ್ಲ ಅವನ ಕಾವ್ಯಕ್ಕೆ ವಸ್ತುಗಳಾಗಬಹುದು. ಆದರೆ ಅವು ಎಂದಿಗೂ ಅವನ ಕಾವ್ಯದ ಆತ್ಮವಾಗಲಾರವು. ಕಾವ್ಯದ ಮುಖ್ಯ ಪ್ರೇರಣಶಕ್ತಿ ಅದರ ದಿವ್ಯ ದೃಷ್ಟಿ; ಕಾವ್ಯ ದೃಷ್ಟಿಯೇ ಹೊರತು, ವಿಮರ್ಶಾ ದೃಷ್ಟಿ ವೇದಾಂತ ದೃಷ್ಟಿ ವಿಚಾರ ದೃಷ್ಟಿ, ಅಲ್ಲ. ಈ ಕಾವ್ಯದೃಷ್ಟಿ ಎಂಬುವೇ ಆತ್ಮ ಅಥವ ಒಳದೃಷ್ಟಿ. ಈ ದೃಷ್ಟಿಯೇ ಕಾವ್ಯ ಮಂತ್ರ. ಈ ಮಂತ್ರ

ವೇದಾಂತವಲ್ಲ. ಸ್ವರಮೇಳ, ಕಾವ್ಯಗಾನ, ಕವಿ ಹೃದಯ, ಪ್ರಕೃತಿಯನೂ ಬಾಳನ್ನೂ ದೇವನನ್ನೂ ಸತ್ಯದ ಸತ್ಯವನ್ನು ಕಂಡು, ಪರಮಾತ್ಮನು, ಸೃಷ್ಟಿಯ ಆರಂಭದಲ್ಲಿ ಓಂಕಾರ, ನಾದಬ್ರಹ್ಮವನ್ನು ಉಚ್ಚರಿಸಿದಂತೆ, ಗಾನವಾಹಿನಿ ಯಾಗಿ ಹರಿಯುವುದು. ಕಾವ್ಯದ ಮೂಲಭೂತ ಶಕ್ತಿ ಇರುವುದು ಅಂತರ್ನ್ನ ದೃಷ್ಟಿಯಲ್ಲಿಯೇ. ಈ ತತ್ವವನ್ನು ಒಪ್ಪಿದರೆ ಕವಿ ನಿರ್ದುಷ್ಟನಾಗುತ್ತಾನೆ.

ವಾಸ್ತವಿಕತೆ

ವಾಸ್ತವಿಕತೆಯನ್ನು ಚಿತ್ರಿಸುವುದರಿಂದ ಕಾವ್ಯ ತನ್ನ ಗುರಿಯನ್ನು ಮುಟ್ಟಲಾರದು. ಯಾಕೆಂದರೆ ಕಲೆ ವಿಜ್ಞಾನವಲ್ಲ. ವಾಸ್ತವಿಕತೆಯನ್ನು ಚಿತ್ರಿಸ ಹೊರಟ ಕಲೆ, ಬಾಳಿನಿಂದ ಅಲ್ಲಷ್ಟು ಇಲ್ಲಷ್ಟು ಬಣ್ಣ ಆಕಾರಗಳನ್ನು ತೆಗೆದುಕೊಂಡು, ತನಗೆ ತೋರಿದ ಕಪ್ಪು ಬಿಳುಪುಗಳನ್ನು ಆರಿಸಿ ಸಾತ್ವಿಕ ರಾಜಸ ತಾಮಸಗಳ ಒಂದು ಚಿತ್ರವನ್ನು ಕೊಡುತ್ತದೆ. ಅದು ಶಕ್ತಿಯುತ ವಾಗಿಯೇನೋ ಇರಬಹುದು. ಕವಿಯು, ಸ್ವಯಂ ಬ್ರಹ್ಮ. ಅವನಿಗೆ ನಿಯಮ ವನ್ನು ಇತರರು ವಿಧಿಸಲಾರರು. ಅವನ ದರ್ಶನ ಅವನ ಯೋಗ್ಯತೆಗಳೇ ಅವನ ಕಾವ್ಯದ ನಿಯಮಗಳು. ಒಂದು ಮಾತನ್ನು ಮಾತ್ರ ಹೇಳಬಹುದು. ಅವನು ಬಾಹ್ಯ ಕೃತಕ ಪ್ರಮಾಣಗಳಿಗೆ ಬಲಿಯಾಗದೆ, ತನ್ನ ಅಂತರಂಗದ ಸಜೀವ ಕಾವ್ಯ ಪ್ರಮಾಣ ಮಟ್ಟದಿಂದಲೇ, ಕೃತಿರಚನೆ ಮಾಡಬೇಕು.

ಕಾವ್ಯ, ವಾಕ್ ಮತ್ತು ಛಂದಸ್ಸಿನಲ್ಲಿ ಅತ್ಯುಚ್ಛ ಮಟ್ಟವನ್ನು ಸಾಧಿಸಿ ದರೆ ಮಾತ್ರವೇ ಸಾಲದು. ಅವುಗಳ ಜತೆಯಲ್ಲಿ ದಿವ್ಯದೃಷ್ಟಿ ಪ್ರಚೋದಕ ವಾಗಿರಬೇಕು. ಇದು ಕವಿಯ ದೃಷ್ಟಿಯ ಮೇಲೆ ಮಾತ್ರವೇ ಅವಲಂಬಿಸು ದಿಲ್ಲ. ಅವನ ಕಾಲದ ಜನತೆ ಅವರ ಮನೋಭಾವ ಅವರ ಸಂಕೇತಗಳು ಅವರ ಆತ್ಮಸಾಧನೆಯ ಮಟ್ಟ ಇವುಗಳ ಮೇಲೆಲ್ಲಾ ಅವಲಂಬಿಸಿರುತ್ತದೆ.

ಒಟ್ಟಿನಲ್ಲಿ ಹೀಗೆ ಹೇಳಬಹುದು. ಕವಿಗೆ ತನ್ನ ನಿಯಮವೇ ನಿಯಮ. "ನಿಯತಿ ಕೃತ ನಿಯಮರಹಿತಾಂ ಹ್ಲಾದೈಕ ಮಯೀಂ ಅನನ್ಯ ಪರತಂತ್ರಾಂ" ಅವನ ಕಲೆ ನೀತಿ ಮತ್ತು ಧರ್ಮಪರವಾಗಿರಬೇಕು. ಅವನು ಕಂಡ ದರ್ಶನ ಜಗತ್ತಿನ ಉದ್ಧಾರಕ್ಕಾಗಿರಬೇಕು. ಅದನ್ನು ಪ್ರಕಟಿಸುವ ಅವನ ಸಾಧನ ಆನಂದ ವರ್ದಿಷ್ಣುವಾಗಿರಬೇಕು.

ಇದರ ಹೊರತು ಕವಿಗೆ ಬೇರೆ ನಿಯಮಗಳಿಲ್ಲ.

ಹಳ್ಳಿಗಳ ವೃತ್ತಪತ್ರಿಕೆಗಳು

ಅಮೆರಿಕದ ಹಳ್ಳಿಗಳಲ್ಲಿ ಪ್ರಕಟವಾಗುವಷ್ಟು ವೃತ್ತಪತ್ರಿಕೆಗಳು ಜಗತ್ತಿನಲ್ಲಿ ಮತ್ತೆಲ್ಲಿಯೂ ಪ್ರಕಟವಾಗುತ್ತಿಲ್ಲವೆಂದು ಧಾರಾಳವಾಗಿ ಹೇಳಬಹುದು, ಆ ಪತ್ರಿಕೆಗಳು ಅಕಾರದಲ್ಲಿ ಎಷ್ಟೇ ಸಣ್ಣವಾಗಿದ್ದರೂ ಅವುಗಳ ಪ್ರಭಾವವನ್ನು ಪರಿಗಣಿಸುವವರಿಗೆ, ಅವು ಅಮೆರಿಕದ ಒಂದು ರಾಷ್ಟ್ರೀಯ ಸಂಸ್ಥೆ ಎಂಬುದು ವ್ಯಕ್ತವಾಗದಿರದು.

ಅಮೆರಿಕದ ಹಳ್ಳಿಯ ವೃತ್ತಪತ್ರಿಕೆ ಸಾಧಾರಣವಾಗಿ ಒಬ್ಬನೇ ಮನುಷ್ಯನ ಪಾರುಪತ್ಯ. ಒಬ್ಬ ಮನುಷ್ಯನೇ ಸಂಪಾದಕ, ಪ್ರಕಾಶಕ, ಸುದ್ದಿಗಾರ, ಬಿಲ್‌ಕಲೆಕ್ಟರ್, ಜಾಹಿರಾತು ವ್ಯವಸ್ಥಾಪಕ, ಹಂಚಿಕೆ ವ್ಯವಸ್ಥಾಪಕ ಆಗಿ ಕೆಲಸ ಮಾಡುತ್ತಿರುತ್ತಾನೆ. ಆತ ಸಂಪಾದಕ ಮಾತ್ರವೇ ಅಲ್ಲ; ಅಚ್ಚು ಮಾಡುವವನೂ ಲೆಕ್ಕ ಬರೆಯುವವನೂ ಅವನೇ. ಅವನಿಗೆ ಇಪ್ಪತ್ತುನಾಲ್ಕು ಗಂಟೆಯೂ, ಒಬ್ಬ ಮಾಡುವುದಕ್ಕಿಂತ ಹೆಚ್ಚಾದ ಕೆಲಸವಿದ್ದೇ ಇರುತ್ತದೆ. ಮೊಳೆ ಜೋಡಿಸುವವನೂ ಅವನೇ. ಅವನು ಸತತೋದ್ಯೋಗಿ. ಆದರೆ ಈ ಯಾವ ಕಷ್ಟದಿಂದಲೂ ಅವನ ಉತ್ಸಾಹ ಕುಂದುವಂತಿಲ್ಲ. ವೃತ್ತಪತ್ರಿಕೆಗಳ ಸೃಷ್ಟಿ ಅವನ ಉದ್ಯೋಗ, ಅದೇ ಅವನ ತಪಸ್ಸು. ಅವನ ಊಟ ತಿಂಡಿ ನಿದ್ರೆ ವಿಶ್ರಾಂತಿ ವಿಹಾರ ಎಲ್ಲ ಅದೇ. ಅದೇ ಅವನ ಉಸಿರು.

ಈ ಹಳ್ಳಿಯ ಪತ್ರಿಕೆಗಳು (ಸಾಪ್ತಾಹಿಕಗಳಾಗಿ) ವಾರಕ್ಕೆ ಒಂದರಂತೆ ಹೊರಡುತ್ತವೆ. ರಾಷ್ಟ್ರೀಯ ಮತ್ತು ಪೌರಜೀವನದಲ್ಲಿ ಇವುಗಳ ಸ್ಥಾನ ಮುಖ್ಯವಾದುದು. ಅಮೆರಿಕದಲ್ಲಿ ಸುಮಾರು ಹತ್ತು ಸಾವಿರ ದೈನಿಕ ವೃತ್ತಪತ್ರಗಳಿವೆ. ಅವುಗಳಲ್ಲಿ ಸುಮಾರು ಕಾಲುಭಾಗದವಕ್ಕೆ ಮಾತ್ರ ಐವತ್ತು ಸಾವಿರಕ್ಕಿಂತ ಹೆಚ್ಚು ಚಂದಾದಾರರಿದ್ದಾರೆ. ಇದು ದಿನಪತ್ರಿಕೆಯ ಮಾತು ಆಯಿತು. ಆದರೆ ದಿನಪತ್ರಿಕೆಗಳಲ್ಲದೆ, ಅಮೆರಿಕದಲ್ಲಿ ನಾನಾ ಬಗೆಯ ಸುಮಾರು ೩೨ ಸಾವಿರ ವರ್ತಮಾನ ಪತ್ರಿಕೆಗಳಿವೆ. ಇವುಗಳ ಪೈಕಿ ಸುಮಾರು ಹದಿನೈದು ಸಾವಿರ ವಾರ ಪತ್ರಿಕೆಗಳು ಹಳ್ಳಿಗಳಲ್ಲಿ ಪ್ರಕಟವಾಗುತ್ತಿವೆ. ಈಚೆಗೆ ಈ ಸಂಖ್ಯೆ ಇನ್ನೂ ಹೆಚ್ಚಿದೆ.

ಆರು ಸಾವಿರ ಅಥವಾ ಹತ್ತುಸಾವಿರ ಜನಸಂಖ್ಯೆಯುಳ್ಳ ನಗರಗಳಲ್ಲಿ ಸಾಧಾರಣವಾಗಿ ಎರಡು ವೃತ್ತಪತ್ರಿಕೆಗಳಿರುತ್ತವೆ. ಕೆಲವೆಡೆ ನಾಲ್ಕು ಸಹ ಉಂಟು. ಪರದೇಶೀಯರು ಹೆಚ್ಚಾಗಿರುವೆಡೆಗಳಲ್ಲಿ ಪರಭಾಷೆಯ ಪತ್ರಿಕೆ ಸಹ ಒಂದು ಇರುವುದುಂಟು. ವಾಷಿಂಗ್‌ಟನ್ ಪ್ರಾಂತದಲ್ಲಿ ಅರುವತ್ತು ಜನರುಳ್ಳ ಒಂದು ಹಳ್ಳಿಯಲ್ಲಿ ಒಂದು ಪತ್ರಿಕೆ ಬಹಳ ಚೆನ್ನಾಗಿ ನಡೆಯುತ್ತಿದೆ. 'ವಾರದ ಸಮಾಚಾರ (ದಿ ವೀಕ್ಲಿ ನ್ಯೂಸ್)' ಎಂಬ ಪತ್ರಿಕೆ ವ್ಯೋಮಿಂಗ್ ಎಂಬುದರ ಹತ್ತಿರದ ಒಂದು ಸಣ್ಣ ಹಳ್ಳಿಯಲ್ಲಿ ಅಚ್ಚಾಗುತ್ತಿದೆ. ಈ ಹಳ್ಳಿ ಯಲ್ಲಿರುವುದು ಒಂದು ಪೋಸ್ಟ್ ಆಫೀಸ್ ಮತ್ತು ಒಂದು ಅಂಗಡಿ ಮಾತ್ರ. ಎರಡನ್ನೂ ಒಂದೇ ಕಟ್ಟಡದಲ್ಲಿಟ್ಟಿದ್ದಾರೆ. ರೈಲು ಸ್ಟೇಷನ್ ಆ ಹಳ್ಳಿಯಿಂದ ಇಪ್ಪತ್ತೈದು ಮೈಲಿ ದೂರದಲ್ಲಿದೆ. ಹತ್ತಿರದಲ್ಲಿ ಯಾವುದೂ ಹಳ್ಳಿಗಳಿಲ್ಲ. ಆದರೂ ಆ ಪತ್ರಿಕೆ ಅಲ್ಲಿ ಬಾಳುತ್ತಿದೆ.

ಹಳ್ಳಿಯ ಪತ್ರಿಕೆ ಸಾಧಾರಣವಾಗಿ ಹಳ್ಳಿಯ ಸುದ್ದಿಗಳನ್ನೆಲ್ಲ ಪ್ರಕಟಿಸುತ್ತದೆ. ಇಂತಹ ಸುದ್ದಿಗಳನ್ನು ಪಟ್ಟಣದ ಪತ್ರಿಕೆ ಪ್ರಕಟಿಸುವುದಿಲ್ಲ. ಅದು ಅಂತಹ ಸುದ್ದಿಯನ್ನೆಲ್ಲ ವ್ಯಂಗ್ಯವಾಗಿ ಹಾಸ್ಯಮಾಡುತ್ತದೆ. ಅಥವಾ ತಿರಸ್ಕರಿಸಿಬಿಡುತ್ತದೆ. ಆದರೆ ಹಳ್ಳಿಯ ಪತ್ರಿಕೆ ಹಳ್ಳಿಯ ಪತ್ರಿಕೆಯೇ. ಅದರ ಸಂಪಾದಕ ಹಳ್ಳಿಯ ಸಂಸ್ಕೃತಿಗೆ ನಾಯಕನೇ. ಆ ಸಂಪಾದಕ ತನ್ನ ವಿದ್ಯೆಯಲ್ಲಿ ಒಳ್ಳೆಯ ತಯಾರಿ ತೆಗೆದುಕೊಂಡಿರುತ್ತಾನೆ. ಚೆನ್ನಾಗಿ ಇಂಪಾಗಿ ನಗುವುದನ್ನೂ,ಉತ್ತಮವಾಗಿ ಉಡುಪುಗಳನ್ನು, ಧರಿಸುವುದನ್ನೂ, ಒಳ್ಳೆಯ ಸಂಭಾಷಣಾ ಚಾತುರ್ಯವನ್ನೂ ವಿನೋದವನ್ನೂ ಅವನು ಕಲಿತಿರುತ್ತಾನೆ. ಬೇಸರಿಕೆ ಯಾದಾಗ ಅವನೂ ಪತ್ರಿಕೆಯ ಮೂಲಕ ಬರಿಯಬಹುದು. ಆದರೆ ಆ ಏಟಿನಿಂದ ಹೆಚ್ಚು ಗಾಯವಾಗದಂತೆ ಅವನು ನೋಡಿಕೊಳ್ಳುತ್ತಾನೆ. "ಸಂಪಾದಕನು ತನ್ನ ದೃಷ್ಟಿಗೆ ಬಿದ್ದ ತಪ್ಪುಗಳನ್ನೆಲ್ಲ ಕ್ರೂರವಾಗಿ ಟೀಕಿಸಬಾರದು. ಅವನು ಹಾಗೆ ಮಾಡಿದರೆ ಎಲ್ಲರೂ ಅವನ ಕೈಬಿಡುವರು. ಅವನು ಸ್ನೇಹಿತರಿಲ್ಲದ ಏಕಾಂಗಿಯಾಗುವನು. ಇದರಿಂದ ಅವನ ಕಾಲಿನ ಮೇಲೆ ಅವನೇ ಕಲ್ಲನ್ನು ಎತ್ತಿ ಹಾಕಿಕೊಂಡಂತೆ ಆಗುವುದು." ಬೇರೆ ಮಾತಿನಲ್ಲಿ ಹೇಳಬೇಕಾದರೆ ಸಂಪಾದಕನು ದೋಷಗಳನ್ನು ಉದಾರವಾಗಿ ನೋಡಿ ಮೃದುವಾದ ಭಾಷೆಯಲ್ಲಿ ಮಾತ್ರ ಟೀಕಿಸಬೇಕು.

ಹಳ್ಳಿಯ ಪತ್ರಿಕೆಯ ಸಂಪಾದಕನಿಗೆ ತನ್ನ ಗ್ರಾಮದಲ್ಲಿರುವ ಎಲ್ಲರೂ ಚೆನ್ನಾಗಿ ಗೊತ್ತು. ತನ್ನ ಪತ್ರಿಕೆಯ ಚಂದಾದಾರರಲ್ಲಿ ಬಹುಮಂದಿ ಅವನ ಪರಿಚಿತರು. ಆ ಚಂದಾದಾರರಿಗೆ ವಾರಪತ್ರಿಕೆಯೇ ವಾರದ ಪತ್ರವೂ ಅವರಿಗೆ ಬೇಕಾದ ಸುದ್ದಿಗಳೂ ಸ್ನೇಹಿತರ ಕ್ಷೇಮಸಮಾಚಾರಗಳೂ ಅದರಲ್ಲಿ ಅಡಕವಾಗಿರುತ್ತವೆ. ಹಳ್ಳಿಯ ಪತ್ರಿಕೆಯ ಮೊದಲನೆಯ ಪುಟದ ಮೊದಲ ನೆಯ "ಕಾಲಂ" ನಲ್ಲಿ ಸಾಧಾರಣವಾಗಿ ವ್ಯಕ್ತಿಗಳಿಗೆ ಸಂಬಂಧಪಟ್ಟ ಸುದ್ದಿಗಳೇ (ಪರ್ಸನಲ್ ನ್ಯೂಸ್)ಪ್ರಕಟವಾಗಿರುತ್ತವೆ. ಅವುಗಳ ಮಾದರಿ ಹೀಗೆ:

" ಪಾಲ್, ಈ ವಾರೆ ಡೆಸ್‌ಮೋನೀಸ್ ಸಂತೆಯಲ್ಲಿ ವ್ಯಾಪಾರಮಾಡಿ ಹನು."

"ಮುರಿದ ಕಾಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಸಿಕೊಂಡು, ಡಿಕ್ ಗುಣವಾಗಿ ಹೊರಕ್ಕೆ ಬಂದನು.

"ಶ್ರೀಮತಿ ಜೂಯೆಲ್‌ರವರ ಅಧ್ಯಕ್ಷತೆಯಲ್ಲಿ ಮಹಿಳಾ ಕ್ಲಬ್ ನಾಳೆ ಸೇರುವುದು.

" ಪೆನ್ಸಿಲ್‌ವೇನಿಯದ ಶ್ರೀಮತಿ ಬೀಚ್‌ರವರು ಸಂಸಾರದೊಂದಿಗೆ ಇಲ್ಲಿ ಬಂದು ತಮ್ಮ ಚಿಕ್ಕಮ್ಮ ಶ್ರೀಮತಿ ಟೇಲರ್‌ರವರನ್ನೂ ಶ್ರೀಮತಿ ಬೌರಿಂಗ್ ರವರನ್ನೂ ಸಂದರ್ಶಿಸುತ್ತಿದ್ದಾರೆ.

"ಶ್ರೀಮತಿ ಉಂಗರ್ ಅವರ ಮನೆಯಲ್ಲಿ ಬೆಂಕಿ ಬಿದ್ದುದರಿಂದ ಅಗ್ನಿ ನಾಶಕಪಡೆ ಅಲ್ಲಿಗೆ ನುಗ್ಗಿತು. ಆದರೆ ಉರಿಯಿಂದ ಏನೂ ನಷ್ಟವಾಗಲಿಲ್ಲ.

"ಪೋಸ್ಟ್‌ಮಾಸ್ಟರ್ ಸ್ಮಿತ್‌ರವರು ಡೆಸ್‌ಮೋನೀಸ್‌ನಲ್ಲಿ ನಡೆದ ಪೋಸ್ಟ್ ಸಮ್ಮೇಳನಕ್ಕೆ ದಯಮಾಡಿಸಿದ್ದರು. ಅಲ್ಲಿ ಅವರು ಪೋಸ್ಟ್ ಮಾಸ್ಟರ್ ಜನರಲ್‌ರನ್ನೂ ಪೋಸ್ಟ್ ಆಫೀಸಿನ ಇತರ ಮಹನೀಯರನ್ನೂ ಸಂದರ್ಶಿಸಿದರು.

" ಜೇಮ್ಸ್ ಡರ್ಬಿನ್‌ರವರು ತಮ್ಮ ಜಮೀನಿನ ಹತ್ತಿರ ಒಂದು ದೊಡ್ಡ ಹೊಸ ಹಂದಿಕೊಟ್ಟಿಗೆಯನ್ನು ಕಟ್ಟುತ್ತಿದ್ದಾರೆ."

ಈ ಮೇಲಿನ ಸುದ್ದಿಗಳು ಬರಿಯ ಹರಟೆಗಳಾಗಿ ತೋರಬಹುದು. ಆದರೆ ಹಳ್ಳಿಯ ಸಂಪಾದಕನ ದೃಷ್ಟಿಯಿಂದ ಇವು, ಜಗತ್ತಿನ ಅನೇಕ ದೊಡ್ಡ ಸುದ್ದಿಗಳಷ್ಟೇ ಪ್ರಾಮುಖ್ಯ. ಸಣ್ಣ ಊರುಗಳಲ್ಲಿ ಸ್ಥಳದ ವರ್ತಮಾನಗಳಿಗೆ

ಹೆಚ್ಚು ಪ್ರಾಶಸ್ತ್ಯವೆಂಬುದು ಸಂಪಾದಕನಿಗೆ ಗೊತ್ತು. ಆ ಊರಿನವರು, ಹೊರದ ಸುದ್ದಿಯನ್ನು—ಚೀಣದಲ್ಲಿ ಕ್ರಾಂತಿ, ಮುಂತಾದ ಸುದ್ದಿಗಳನು ಪತ್ರಿಕೆಯಲ್ಲಿ ನೋಡದಿದ್ದರೂ ಸುಮ್ಮನಿದ್ದಾರು; ಆದರೆ ತಮ್ಮ ನಿತ್ಯವ್ಯವಹಾರ, ತಮಗೆ ಶ್ರದ್ಧೆ ಇರುವ ಸಂಗತಿಗಳನ್ನು ಪ್ರಕಟಿಸದಿದ್ದರೆ, ಸಂಪಾದಕನನ್ನು ಪ್ರೋತ್ಸಾಹಿಸುವುದಿಲ್ಲ.

ಹಳ್ಳಿಯ ಪತ್ರಿಕೆಗಳ ಪ್ರಚಾರ ಹಳ್ಳಿಗಳಲ್ಲಿಯೇ ಹೆಚ್ಚಾಗಿರುವುದರಿಂದ ಆ ಸಂಪಾದಕರು ವ್ಯವಸಾಯಕ್ಕೆ ಮುಖ್ಯ ಗಮನವನ್ನು ಕೊಡುತ್ತಾರೆ. ಸಂಪಾದಕನು ಸುಧಾರಿತ ವ್ಯವಸಾಯಕ್ರಮ, ಶ್ರಮವನ್ನು ಕಮ್ಮಿಮಾಡಿಕೊಳ್ಳುವ ಉಪಾಯಗಳು, ಪ್ರಕೃತಿಯನ್ನು ವ್ಯವಸಾಯ ಸಾಧನವಾಗಿ ಉಪಯೋಗಿಸುವ ಬಗೆ, ರೈತರ ಆರೋಗ್ಯ ವ್ಯವಸ್ಥೆ, ದನಕರು ಕೋಳಿಹುಂಜ ಹಂದಿಗಳ ಮೇವು, ದನಗಳ ಕೊಟ್ಟಿಗೆ, ವ್ಯವಸಾಯ ಸಹಕಾರ ಸಂಘ, ರೈತರ ಪುಸ್ತಕ ಭಂಡಾರ, ಹಳ್ಳಿಗಳಿಗೆ ಉತ್ತಮ ರಸ್ತೆಗಳು, ಹಳ್ಳಿ ಪಾಠಶಾಲೆಗಳು. ಹಳ್ಳಿಯವರ ಆರೋಗ್ಯ. ರೈತನ ಜೀವನದ ಮಟ್ಟವನ್ನು ಹೆಚ್ಚಿಸುವ ವಿಷಯ, ವ್ಯವಸಾಯದ ಪದಾರ್ಥಗಳ ಮಾರಾಟ, ಇವನ್ನೆಲ್ಲ ಕುರಿತು ಹೆಚ್ಚಾಗಿ ಬರೆಯುತ್ತಾನೆ.

ಹಳ್ಳಿಯಪತ್ರಿಕೆ, ಹಳ್ಳಿಯ ಮನೋಭಾವದ ಆಧಾರದ ಮೇಲೆ ಪ್ರಕಟವಾಗುತ್ತದೆ. ಅದು ಸ್ಥಳೀಯ ಪ್ರಭಾವವುಳ್ಳದುದು. ಅದು ತನ್ನ ನೆರೆಹೊರೆಯ ಸುದ್ದಿಗಳನ್ನೇ ಹೆಚ್ಚಾಗಿ ಪ್ರಕಟಿಸಿದರೂ ರಾಷ್ಟ್ರ ಮತ್ತು ಅಂತರರಾಷ್ಟ್ರ ಸುದ್ದಿಗಳನ್ನೂ ತಿರಸ್ಕರಿಸುವುದಿಲ್ಲ. ಅವುಗಳನ್ನೂ ಸ್ಥಳೀಯ ಹಿನ್ನೆಲೆಯಿಂದ ಪ್ರಕಟಿಸುತ್ತದೆ. ಮತ್ತು ಅವುಗಳನ್ನು ಸಂಕ್ಷೇಪವಾಗಿಯೇ ಪ್ರಕಟಿಸುತ್ತದೆ.

ಹಣಕಾಸಿನ ಅನುಕೂಲವುಳ್ಳ ಕೆಲವು ಪತ್ರಿಕೆಗಳು, ಒಬ್ಬರು ಅಥವಾ ಇಬ್ಬರು ಸುದ್ಧಿಗಾರರನ್ನು ನೇಮಿಸಿಕೊಂಡಿರುತ್ತಾರೆ. ಪ್ರಕಟನೆಗೆ ಕಳುಹಿಸುವುದಕ್ಕೆ ಮುಂಚೆ ಸಂಪಾದಕನು, ಎಲ್ಲ ಸುದ್ದಿಗಳನ್ನೂ ಬಹಳ ಎಚ್ಚರಿಕೆಯಿಂದ ಪರೀಕ್ಷಿಸುತ್ತಾನೆ. ನಾಲ್ಕು ಅಥವಾ ಐದು ಸಾವಿರ ಜನಸಂಖ್ಯೆಯುಳ್ಳ ಊರುಗಳಲ್ಲಿ, ಸಾಧಾರಣವಾಗಿ ಸುದ್ದಿಗಳು ದೊರೆಯುವ ಸ್ಥಳಗಳು, ರೈಲು ಸ್ಟೇಷನ್, ಪೋಸ್ಟ್ ಆಫೀಸು ಟೆಲಿಫೋನ್ ಕಛೇರಿ, ಸ್ಕೂಲುಗಳು, ಚರ್ಚುಗಳು, ಹೋಟಲುಗಳು, ಸಾಮಾಜಿಕ ಕ್ಲಬ್‌ಗಳು, ಸ್ಥಳೀಯ ಕಾರ್ಖಾನೆಗಳು.

ಪೋಲೀಸ್ ಸ್ಟೇಷನ್, ಶವಸಂಸ್ಕಾರದ ಕಛೇರಿ (ಅಂಡರ್ ಟೇಕರ್), ಪೌರಾಧ್ಯಕ್ಷನ ಕಛೇರಿ, ವಕೀಲರ ಮತ್ತು ವೈದ್ಯರ ಕಛೇರಿ.

ಈ ಹಳ್ಳಿಯ ಪತ್ರಿಕೆಗಳಿಗೆಲ್ಲ, ಆಯಾ ಪ್ರದೇಶಗಳಲ್ಲಿ ಬುದ್ಧಿವಂತರಾದ ಸುದ್ದಿಗಾರರಿದ್ದಾರೆ. ಪತ್ರಿಕೆಗಳವರು ಆ ಸುದ್ದಿಗಾರರಿಗೆ ಅವರು ಬರೆಯುವಷ್ಟು ಜಾಗಕ್ಕೆ ಪ್ರತಿಫಲ ಕೊಡುತ್ತಾರೆ. ಇಂತಹ ಪ್ರತಿಫಲ, ಒಂದ್ ಅಂಗುಲಕ್ಕೆ ನಾಲ್ಕಾಣೆಯಂತೆ ಆಗುತ್ತದೆ. ಇನ್ನು ಕೆಲವು ಸುದ್ದಿಗಾರರು ಬರಿಯ ಕಾಗದ ಕಡ್ಡಿ ಟಪಾಲು ವೆಚ್ಚವನ್ನು ಮಾತ್ರ ತೆಗೆದುಕೊಂಡು ಸುದ್ದಿಗಳನ್ನು ಬರೆಯುತ್ತಾರೆ. ತಮ್ಮ ಪ್ರದೇಶದಲ್ಲಿ ಯಾವ ಮುಖ್ಯ ಸಂಗತಿ ಸಂಭವಿಸಿದರೂ, ಸುದ್ದಿಗಾರರು ಅವನ್ನು ತಮ್ಮ ಪತ್ರಿಕೆಗೆ ಕಳುಹಿಸುತ್ತಾರೆ.

ಬಾತ್ಮೀದಾರರು ಸಾಧಾರಣವಾಗಿ ಯಾವ ಬಗೆಯ ಸುದ್ದಿಗಳನ್ನು ಕಳುಹಿಸಬೇಕೆಂಬುದನ್ನು ಸಂಪಾದಕರು ಆಗಾಗ ಪ್ರಕಟಿಸುತ್ತಾರೆ. 'ಅಡ್ವಕೇಟ್' ಎಂಬ ಹಳ್ಳಿಯ ಪತ್ರಿಕೆ ತನ್ನ ಬಾತ್ಮೀದಾರರಿಗೆ ಹೀಗೆ ತಿಳಿವಳಿಕೆ ಕೊಟ್ಟಿತು:

" ಬೇಕಾಗಿರುವ ಸುದ್ದಿಗಳು,

ಅಭಿವೃದ್ಧಿಗಳು—ಹೊಸ ಮನೆಗಳು, ಕಣಜಗಳು, ಒಳ್ಳೆಯ ಉತ್ತಮವಾದ ಬೇಲಿಗಳು, ವ್ಯವಸಾಯಕ್ಕೆ ವಿದ್ಯುತ್‌ದೀಪ ಮತ್ತು ಪಂಪು ವಗೈರೆ. ಹೊಸದಾಗಿ ಸಾಗಿಗೆ ಬಂದಿರುವ ಇದುವರೆಗೆ ಪಾಳುಬಿದ್ದಿದ್ದ ಭೂಮಿ, ರೈತರ ಕಟ್ಟಡಗಳಲ್ಲಿ ಸುಧಾರಣೆ, ಹೊಸಕಟ್ಟಡ, ರೈತರ ಹೆಸರು, ಯಜಮಾನನ ಹೆಸರು, ಕೆಲಸಗಾರರ ಹೆಸರನ್ನೆಲ್ಲ ತಿಳಿಸಿ.

ದನಕರುಗಳು—ಇಲ್ಲಿಗೆ ಬಂದ ಮತ್ತು ಹೊರಕ್ಕೆ ಹೋದ ರಾಸುಗಳು. ಅವುಗಳ ಬೆಳವಣಿಗೆ ಅವುಗಳಿಗೆ ಕೊಟ್ಟ ಆಹಾರ, ಉತ್ಪತ್ತಿಯಾದ ಬೆಲೆ. ಯಾವುದಾದರೂ ಹೊಸಜಾತಿಯ ರಾಸುಗಳು ಬಂದಿದ್ದರೆ ಅವನ್ನೂ ತಿಳಿಸಿ.

ಸಾರ್ವಜನಿಕ ಸುದ್ದಿಗಳು—ಪಂಚಾಯ್ತಿ, ಶಾಲಾ ಸಮಿತಿ ಇವುಗಳಿಗೆ ಚುನಾವಣೆ, ರಾಜೀನಾಮೆ, ಸಾರ್ವಜನಿಕ ಮತ್ತು ಸರ್ಕಾರಿ ವಾಚನಾಲಯ, ಪುಸ್ತಕಭಂಡಾರ, ಟೆಲಿಫೋನ್ ಸಂಘ ಮುಂತಾದುವುಗಳ ಚುನಾವಣೆಗಳು, ಅಂತಃ ಸಂಸ್ಥೆಗಳ ಸಭೆಗಳ ಸುದ್ದಿಗಳು, ಇವು ವಾಚಕರ ಕೈಗೆ ಪತ್ರಿಕೆ ತಲಪುವುದಕ್ಕೆ ಮುಂಚೆ ಕಛೇರಿಗೆ ಬರಬೇಕು. ಸಭೆಗಳು ಮುಖ್ಯ ವಿಷಯಗಳನ್ನು ಚರ್ಚಿಸಿದರೆ, ಅವುಗಳ ತೀರ್ಮಾನವನ್ನೂ ತಿಳಿಸಬೇಕು.

ಬೆಂಕಿ—ಹುಲ್ಲುಗುಡ್ಡೆ ಅಥವಾ ಮನೆಗೆ ಬೆಂಕಿಬಿದ್ದರೆ, ಮನೆಯ ಯಜಮಾನನ ಹೆಸರು, ಬೆಂಕಿಯ ಕಾರಣ, ಇನ್‌ಷ್ಯೂರೆನ್ಸ್ ಆಗಿತ್ತೆ ಸಾಧಾರಣ ನಷ್ಟದ ಅಂದಾಜು, ಇವುಗಳನ್ನು ತಿಳಿಸಿ.

ಅಪಾಯಗಳು—ನಷ್ಟ ಅಥವಾ ದೇಹಕ್ಕೆ ಅಪಘಾತ—ವಿವರಗಳನ್ನು ತಿಳಿಸಿ.

ತಪ್ಪಿತಗಳು—ದೊಡ್ಡ ತಪ್ಪಿತಗಳನ್ನು ತಿಳಿಸಿ. ಸಣ್ಣ ಸಣ್ಣ ದೌರ್ಜನ್ಯ ಕೃತ್ಯಗಳು ನಡೆದಾಗ ದಸ್ತಗಿರಿ ಆದರೆ ಮಾತ್ರ ಬರೆಯಿರಿ. ನಿಜವನ್ನು ಮಾತ್ರ ತಿಳಿಸಿ. ನಿರಾಧಾರವಾದುವು ಬೇಡ.

ರೋಗಗಳು—ಅಪಾಯಕರವಾಗಿದ್ದರೆ ಅಥವಾ ಸಾಂಕ್ರಾಮಿಕವಾಗಿದ್ದರೆ ಮಾತ್ರ ತಿಳಿಸಿ.

ಸಾವು—ಸತ್ತವರ ಹೆಸರು ಮತ್ತು ಕಾರಣ ಸಾಕು. ವಯಸ್ಸಾದವರ ಮತ್ತು ಮುಖ್ಯಸ್ಥರಾದವರ ವಿಷಯದಲ್ಲಿ ಸಂಕ್ಷೇಪವಾದ ಜೀವನ ಚರಿತ್ರೆಯನ್ನು ಬರೆಯಿರಿ.

ಬಿರುಗಾಳಿ—ಬಿರುಗಾಳಿಯಿಂದ ನಷ್ಟವಾದಾಗ ಬರೆಯಿರಿ. ಸಾಧಾರಣ ಹವ, ದೇಶದಲ್ಲೆಲ್ಲ ಒಂದೇ ಸಮನಾಗಿರುವುದರಿಂದ ಅದು ಬೇಡ.

ಬೆಳೆಗಳು—ಸಂದಿಗ್ಧ ಸಮಯಗಳಲ್ಲಿ ಬೆಳೆಯ ಸ್ಥಿತಿಯನ್ನು ತಿಳಿಸಿ; ಪೈರು ರೇಖೆಯಾದ ಕಾಲದಲ್ಲಿ ಎಕರೆಗೆ ಹೆಚ್ಚು ಬೆಳೆ ಎಷ್ಟು? ಯಾರದು? ವ್ಯವಸಾಯ ಮುಂತಾದುವನ್ನೆಲ್ಲ ತಿಳಿಸಿ.

ದನಗಳ ಮೇವು—ಮಾರಾಟಕ್ಕಾಗಿಯೇ ದನಗಳನ್ನು ಮೇಯಿಸುವವರ ಪಟ್ಟಿ, ಇಟ್ಟಿರುವ ರಾಸುಗಳು—ಕೊಡುತ್ತಿರುವ ಆಹಾರ, ರಾಸಿನ ಜಾತಿ ಇವನ್ನೆಲ್ಲ ವಿವರಿಸಿ.

ಜನನ—ತಂದೆತಾಯಿಗಳ ಹೆಸರು, ಹುಟ್ಟಿದ ತಾರೀಕು, ಹೆಣ್ಣೆ ಗಂಡೆ? ತಿಳಿಸಿ.

ಪಾಠಶಾಲೆ— ಶಾಲೆಯನ್ನು ತೆರೆದ ತಾರೀಕು, ಮುಚ್ಚುವ ತಾರೀಕು, ಉಪಾಧ್ಯಾಯರ ಹೆಸರು, ತಾರೀಕುಗಳನ್ನು ಸಾಧ್ಯವಾದಷ್ಟು ಮುಂಚೆಯೇ ತಿಳಿಸಿ.

ಬುರುಡೆಗಳು—ಸುಳ್ಳು ಬುರುಡೆಗಳನ್ನು ಸಂಪಾದಕರು ಸಹಿಸುವುದಿಲ್ಲ. ಸುದ್ದಿಗಳು ನಿಜವಾಗಿ ಸಾಧಾರವಾಗಿರಬೇಕು. ನಿಜವಾಗಿದ್ದಲ್ಲಿ ಮನೋರಂಜಕವಾದ ಕಾವಿನ ಅದ್ಭುತ ಅಥವಾ ಅತಿಶಯೋಕ್ತಿಗಳನ್ನು ಸ್ವೀಕರಿಸುತ್ತೇವೆ.

ನೆರೆಹೊರೆಯ ಸುದ್ದಿ— ಸುತ್ತಮುತ್ತಲವರು ಇಲ್ಲಿ ಬಂದು, ಇಲ್ಲಿಯವರ ಕಾರ್ರ್ಯದಲ್ಲಿ ಪ್ರಭಾವಶಾಲಿಯಾಗುವಂತೆ ವರ್ತಿಸಿದಾಗ ಬರೆಯಿರಿ.

ಪ್ರತಿಯೊಂದು ಪ್ರಶ್ನೆಗೂ, ಯಾರು? ಎಲ್ಲಿ? ಯಾವಾಗ? ಮತ್ತು ಸಾಧ್ಯವಾದರೆ ಏಕೆ? ಇವುಗಳ ಉತ್ತರ, ಪೂರ್ಣವಾಗಿ ದೊರೆಯಬೇಕು. ಬರಿಯ 'ಜಾನ್ ಸ್ಮಿತ್' ಎಂದು ಹೇಳಿಬಿಟ್ಟರೆ ಸಾಲದು. 'ನ್ಯೂಯಾರ್ಕಿನಲ್ಲಿ ವಾಸಿಸುತ್ತಿರುವ ಈ ಊರಿನ ಪೀಟರ್ ಸ್ಮಿತ್‌ನ ತಮ್ಮ, ಜಾನ್ ಸ್ಮಿತ್' ಎಂದು ಹೇಳಬೇಕಾಗಬಹುದು. ವಾಚಕನ ಮನಸ್ಸಿನಲ್ಲಿ ಏಳುವ ಯಾವ ಸಂಶಯಕ್ಕೂ ಉತ್ತರ ಕೊಡದಿರಬೇಡಿ.

ಟೆಲಿಫೋನ್—ನೀವು ಈ ಆಫೀಸಿಗೆ ಕಾಗದ ಕಳುಹಿಸಿದನಂತರ, ನಿಮ್ಮ ಗಮನಕ್ಕೆ ಯಾವುದಾದರೂ ಮುಖ್ಯ ಸುದ್ದಿ ಬಂದರೆ, ಟೆಲಿಫೋನನ್ನು ಉಪಯೋಗಿಸಿ; ಆಫೀಸಿನವರು ಅದರ ವೆಚ್ಚ ವಹಿಸುತ್ತಾರೆ.

ಸೂಚನೆಗಳು

ನಿಮ್ಮ ಜಾಗವನ್ನು ಸುಮ್ಮನೆ ಬಿಟ್ಟುಹೋಗಿಬಿಡಬೇಡಿ. ನೀವು ಬೇರೆ ಕಡೆ ಹೋಗಬೇಕಾದರೆ, ನಿಮ್ಮ ಜಾಗದಲ್ಲಿ ಮತ್ತಾರನ್ನಾದರೂ ಇಟ್ಟು ಹೋಗಿ. ಇಲ್ಲವಾದರೆ ನಿಮ್ಮ ಗೈರುಹಾಜರಿಯಲ್ಲಿ ಯಾವುದಾದರೂ ಮುಖ್ಯ ವಿಷಯ ನಡೆದು ಅದು ನಿಮ್ಮ ಪತ್ರಿಕೆಗೆ ತಿಳಿಯದೆ ಹೋದೀತು.

ಆಗಾಗ್ಗೆ ಬಂದು ನಮ್ಮನ್ನು ನೋಡಿ. ನಮ್ಮ ಸದ್ದಿಗಾರರೊಂದಿಗೂ ಪ್ರತಿನಿಧಿಗಳೊಂದಿಗೂ ಮಾತುಕತೆಯಾಡಿ ಪರಿಚಯಮಾಡಿಕೊಳ್ಳುವುದು ನಮಗೆ ಯಾವಾಗಲೂ ಸಂತೋಷ. ನಮ್ಮ ಪರಿಚಯ ಹೆಚ್ಚುತ್ತಾ ಹೋಗಲಿ.

ಸುದ್ದಿಗಾರರ ಕಾಗದಗಳಿಂದ ಆ ಪತ್ರಿಕೆ ಆ ಸುತ್ತಮುತ್ತಲಿನ ಜನರ ಕಾರ್ಯಕ್ರಮದ ಕನ್ನಡಿಯಾಗುತ್ತದೆ. ಅಚ್ಚಿನಲ್ಲಿ ಹೆಸರು ಪ್ರಕಟವಾಗುವಷ್ಟು ಒಳ್ಳೆಯ ಹೊಗಳಿಕೆಯ ಮಾರ್ಗ ಬೇರೆ ಯಾವುದೂ ಇಲ್ಲವೆಂಬುದನ್ನು ಚೆನ್ನಾಗಿ ಅರಿತು, ಸುದ್ದಿಗಾರರು ತಮ್ಮ ವರದಿಗಳನ್ನು ಬರೆಯುತ್ತಾರೆ.

ಒಂದಿಲ್ಲ ಒಂದು ರೀತಿಯಿಂದ, ಸಂಪಾದಕನು ತನ್ನ ಚಂದಾದಾರರ ಹೆಸರನ್ನೆಲ್ಲ ವರ್ಷಕ್ಕೆ ಒಂದು ಸಲವಾದರೂ ಪತ್ರಿಕೆಯಲ್ಲಿ ತರುತ್ತಾನೆ. ಹೆಸರುಗಳಿದ್ದಷ್ಟೂ ಉತ್ತಮ ಎಂಬ ಪತ್ರಿಕಾ ನಿಯಮಕ್ಕನುಸಾರವಾಗಿ ಇದು ನಡೆಯುತ್ತದೆ.

ದೊಡ್ಡ ದೊಡ್ಡ ಪಟ್ಟಣಗಳ ಪತ್ರಿಕೆಗಳಲ್ಲಿ ಪ್ರಕಟವಾಗುವ ಅಂತರ ರಾಷ್ಟ್ರೀಯ, ಮಹಾ ಯುದ್ಧ, ಮುಂತಾದ ಪ್ರಶ್ನೆಗಳು, ಹಳ್ಳಿಯ ಜನರಿಗೆ ಅಷ್ಟಾಗಿ ಬೇಕಿಲ್ಲ. ಆದುದರಿಂದ ಹಳ್ಳಿಯ ಪತ್ರಿಕೆಗಳಲ್ಲಿ ರಾಜಕೀಯ ಚರ್ಚೆ ಸಾಮಾಜಿಕ ಹರಟೆ, ಮುಖಂಡರ ಆತ್ಮಹತ್ಯೆ, ದೊಡ್ಡ ದೊಡ್ಡ ದರೋಡೆ, ಲಿಂಚಿಂಗ್ ಕ್ರೌರ್ಯ ಇವುಗಳ ವಿಚಾರ ಕಡಮೆ ಇರುತ್ತದೆ. ನೆಬ್ರಸ್ಕ ಎಂಬಲ್ಲಿಯ 'ಹೋಂ ಸ್ಟಾರ್' ಎಂಬ ಪತ್ರಿಕೆಯ ಸಂಪಾದಕರು ಹೀಗೆ ಹೇಳಿದ್ದಾರೆ: "ನಮ್ಮ ಪತ್ರಿಕೆಯಲ್ಲಿ ದುಷ್ಕಾರ್ಯಗಳ ಪ್ರಕಟನೆಗೆ ಜಾಗವಿಲ್ಲ. ದೊಡ್ಡಕ್ಷರದಲ್ಲಿ ಪ್ರಕಟಿಸುವ ದುಷ್ಕೃತ್ಯಗಳು ನಮ್ಮಲ್ಲಿ ಇಲ್ಲ. ಜಗತ್ತಿನ ಜೀವನದಲ್ಲಿ ಶೇಕಡ ೪ ಆದ ಆ ದುಷ್ಕೃತ್ಯಗಳ ಪ್ರಕಟನೆಯನ್ನು ನಾವು ಇತರ ದೊಡ್ಡ ಪತ್ರಿಕೆಗಳಿಗೆ ಬಿಟ್ಟು, ಉಳಿದ ನಿತ್ಯಜೀವನದ ಶೇಕಡ ೯೬ನ್ನು ಕುರಿತು ಬರೆಯುತ್ತೇವೆ."

ಹಳ್ಳಿಯ ಪತ್ರಿಕೆಯ ಮುಖ್ಯಲಕ್ಷಣ ಅದರ ಸತ್ಯಸಂಧತೆ. ತಾನು ಹೇಳಿದುದು ತಪ್ಪು ಎಂಬುದು ತೋರಿದ ಕೂಡಲೇ ಆ ತಪ್ಪನ್ನು ತಿದ್ದಿಕೊಂಡು ಸರಿಯಾದ ಮಾರ್ಗದಲ್ಲಿ ಹೋಗಲು ಅದಕ್ಕಿರುವ ಉತ್ಸಾಹ. 'ನ್ಯೂಯಾರ್ಕ್ ಸನ್' ಎಂಬ ಪತ್ರಿಕೆ ತನ್ನ ಧ್ಯೇಯವಾಗಿ ಈ ವಾಕ್ಯವನ್ನಿಟ್ಟುಕೊಂಡಿತ್ತು: "ಸನ್‌ನಲ್ಲಿ ಪ್ರಕಟವಾಗಿದ್ದರೆ, ಅದು ಹಾಗೆಯೇ ಸರಿ" ಎಂದು. ಒಂದು ಸಲ ಆ ಪತ್ರಿಕೆ ಒಬ್ಬ ಮನುಷ್ಯನು ಸತ್ತನೆಂದು ಪ್ರಕಟಿಸಿತು. ಮರುದಿವಸ, 'ಸತ್ತಿದ್ದ' ಮನುಷ್ಯನು ಪತ್ರಿಕೆಯ ಕಚೇರಿಗೆ ಬಂದು ಸಂಪಾದಕರಾದ ಡಾನಾರನ್ನು ನೋಡಿ "ನಾನು ಸತ್ತೆನೆಂದು, ಪ್ರಕಟಿಸಿರುವುದನ್ನು ಸರಿಮಾಡಿಸಿ" ಎಂದು ಕೇಳಿದನು. ಸಂಪಾದಕನು ಪತ್ರಿಕೆಯ ಪ್ರತಿಯನ್ನು ತರಿಸಿ ನೋಡಿದನು. ಬಂದವನು ಹೇಳುತ್ತಿದ್ದುದು ಸರಿಯಾಗಿತ್ತು. ಆದರೆ ಅವನು ಗಂಭೀರವಾಗಿ ತನ್ನ ತಲೆಯಲ್ಲಾಡಿಸಿದನು. "ಆ ಹೇಳಿಕೆಯನ್ನು ನಾನು ಬದಲಾಯಿಸಲಾರೆ. ನೀವು ಸತ್ತಿರೆಂದು ಸನ್ ಪತ್ರಿಕೆ ಹೇಳಿದ ಮೇಲೆ ನೀವು ಸತ್ತಿರಿ, ಇಲ್ಲಿಗೆ ಇದು ಮುಗಿಯಿತು" ಎಂದನು. ಬಂದಿದ್ದ ಗೃಹಸ್ಥನು "ಆದರೆ

ನೀವೇ ನೋಡಿ. ನಾನು ಸತ್ತಿಲ್ಲವಲ್ಲ! ಆ ಹೇಳಿಕೆಯನ್ನು ಬದಲಾಯಿಸಿ" ಎಂದನು.

ಸಂಪಾದಕನು ಯೋಚಿಸಿ "ಸನ್ ಪತ್ರಿಕೆ ಹೇಳಿದುದನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ಒಂದು ಕಾರ್ಯ ಮಾಡುತ್ತೇನೆ. ನಾಳೆ ನಿಮ್ಮನ್ನು ಜನನದ ಪಟ್ಟಿಯಲ್ಲಿ ಹಾಕುತ್ತೇನೆ" ಎಂದ.

'ನ್ಯೂಯಾರ್ಕ್ ಸನ್' ನ ಸಂಪಾದಕ, ಹಾಗೆ ಹೇಳಿ ಸುಲಭವಾಗಿ ತಪ್ಪಿಸಿಕೊಂಡುಬಿಡಬಹುದು, ಅಂತಹ ಪ್ರಭಾವಶಾಲಿಗಳಾದ ಸಂಪಾದಕರು ಹಿಂದೆಯೂ ಆಗಲಿಲ್ಲ. ಮುಂದೆಯೂ ಆಗುವಂತೆ ಇಲ್ಲ. ಆದರೆ ಸಾಧಾರಣವಾದ ಅಮೆರಿಕದ ಪತ್ರಿಕಾಕರ್ತರು ಹಾಗೆ ಸುಳ್ಳು ಹೇಳಿ ಬದುಕಲಾರರು. ಅವರು ಒಂದು ತಪ್ಪು ಹೇಳಿದರೆ ತತ್‌ಕ್ಷಣ ಅದನ್ನು ತಿದ್ದಿಕೊಳ್ಳುತ್ತಾರೆ. ಸತ್ಯವನ್ನು ಬಲಿಕೊಟ್ಟಾದರೂ, ಪೂರ್ವಾಪರ ಸಾಮರಸ್ಯವನ್ನು ಅವರು ಉಳಿಸಿಕೊಳ್ಳಲಾರರು. ಪೂರ್ವಾಪರ ವಿರುದ್ಧವಿಲ್ಲದೆ ಸತ್ಯವನ್ನೇ ಎಂದೆಂದಿಗೂ ನುಡಿಯುವ ಸಂಪಾದಕನೇ ಪುಣ್ಯಶಾಲಿ.

"ನನ್ನ ಪತ್ರಿಕೆ, ಮನೆಯ ಪತ್ರಿಕೆ. ಪ್ರತಿಮನೆಗೂ ಹೋಗಲು ಇದು ಅರ್ಹವಾಗಿದೆ" ಎಂಬುದೇ ಹಳ್ಳಿಯ ಸಂಪಾದಕನ ಹೆಮ್ಮೆ. ಪತ್ರಿಕೆಗಳು ಸ್ವಚ್ಛವಾಗಿ ಅವುಗಳ ರುಚಿ ಉಚ್ಚಮಟ್ಟದವಾಗಿರುತ್ತವೆ. ವಾಚಕರಿಗೆ ಆವಶ್ಯಕವಾದ ಮತ್ತು ಆನಂದದಾಯಕವಾದ ಸುದ್ದಿಗಳು ಅದರಲ್ಲಿ ಪ್ರಕಟವಾಗಿರುತ್ತವೆ. ಸಾಧಾರಣವಾಗಿ ಎಂಟು ಪುಟಗಳುಳ್ಳ ಈ ಹಳ್ಳಿ ಪತ್ರಿಕೆಗಳು ನಾನಾಬಗೆಯ ಲೇಖನಗಳಿಂದ ಕೂಡಿರುತ್ತವೆ. ತಮ್ಮ ಮತ್ತು ತಮ್ಮ ಸುತ್ತಮುತ್ತಲವರ ಸುದ್ದಿಗಳು, ಚಿತ್ರಗಳು, ಆಗಾಗ್ಗೆ ವ್ಯಂಗ್ಯ ಚಿತ್ರಗಳು, ಬಾತ್ಮಿದಾರರ ಪತ್ರಗಳು, ಹಾಸ್ಯಚುಟಿಕೆಗಳು, ಸ್ತ್ರೀಯರ ವಿಭಾಗ, ಸಂಗೀತ ವಿಭಾಗ, ಅರ್ಧ ಪುಟದಷ್ಟು ಜಗತ್ತಿನ ವರ್ತಮಾನಗಳು, ರೈತರಿಗೆ ಆವಶ್ಯಕವಾದ ಸಮಾಚಾರಗಳು, ಒಂದೆರಡು ಉಚ್ಚದರ್ಜೆಯ ಕತೆಗಳು; ಹೀಗೆ ಈ ಹಳ್ಳಿಯ ಪತ್ರಿಕೆಗಳಲ್ಲಿ ಎಲ್ಲ ಬಗೆಯ ವಾಚಕರಿಗೂ ಬೇಕಾದ ಸರಕು ಇವೆ.

ಅಮೆರಿಕದ ಪತ್ರಿಕೆಗಳಲ್ಲಿ ಬರುವ ವಿಷಯಗಳಿಗೆಲ್ಲ ವರ್ತಮಾನ ಕಥೆಗಳೆಂದೇ ಹೆಸರು. 'ನ್ಯೂಸ್‌ಸ್ಟೋರೀಸ್'. ಇವುಗಳನ್ನು ರುಜುವಾದ ಶಕ್ತವಾದ ಮೊನೆಯಾದ ಒಳ್ಳೆ ಶುದ್ಧವಾದ ಭಾಷೆಯಲ್ಲಿಯೇ ಬರೆದಿರುತ್ತಾರೆ. ಈ ಭಾಷೆ

ಯಲ್ಲಿ ಅನಾವಶ್ಯಕವಾದ ಅಲಂಕಾರಶ್ಲೇಷೆಗಳಿಲ್ಲ. ಅದರ ಮುಖ್ಯಧ್ವನಿ, ಸತ್ಯವೇ ಆಧಾರವಾದ ಕಟ್ಟೆಯ ಪುರಾಣ ಅಥವಾ ಚಾವಡಿ ಪಂಚಾಯ್ತಿಯ ಬಗೆ. ಈ ಕಟ್ಟೆಯ ಪುರಾಣ ಅಥವಾ ಚಾವಡಿ ಪಂಚಾಯ್ತಿ ಹರಟೆ ಎಂಬುದು ಮತ್ತೊಬ್ಬನ ದೋಷಾರೋಪಣೆ ಅಲ್ಲ. ಪತ್ರಿಕಾಕರ್ತರಾದ ಮಿ. ಫಿಷ್ ಹೀಗೆ ಹೇಳುತ್ತಾರೆ :

"ಈ ಚಾವಡಿಯ ಹರಟೆ ಎಂಬುದು, ನಮಗೆ ತಿಳಿದಿರುವ ಜನರು ಮಾಡುವ ಅಥವಾ ಮಾಡಬಹುದಾದ ಕಾರ್ಯಗಳನ್ನು ಕುರಿತ ಅರ್ಧರಹಸ್ಯ ಹರಟೆ. ನಾವು ಬರೆಯುವ ಅಥವಾ ಓದುವ ವಿಚಾರಗಳಲ್ಲಿರುವ ಹರಟೆಯ ಅಂಶವೇ ಅದರಲ್ಲಿ ನಮ್ಮ ಆಸೆಯನ್ನು ಹೆಚ್ಚಿಸುತ್ತದೆ. ಈ ಚಾವಡಿಯ ಹರಟೆಯಲ್ಲಿರುವುದು ಮನುಷ್ಯತ್ವ. ನಮಗೆಲ್ಲ ಅರ್ಥವಾಗುವುದು ಈ ಮನುಷ್ಯತ್ವವೇ—ಮೇರಿ ರಾಣಿಯು, ಮಳೆಯಿರಲಿ ಬಿಸಿಲಿರಲಿ, ಯಾವಾಗಲೂ ಕೊಡೆ ಹಿಡಿದುಕೊಂಡೇ ತಿರುಗುತ್ತಾಳೆ. ಈಚೆಗೆ ಅವಳು ದಪ್ಪವಾಗುತ್ತಿರುವುದರಿಂದ ಸೊಂಟದ ಹತ್ತಿರ ಉಡುಪನ್ನು ಸಡಿಲಮಾಡಿಕೊಳ್ಳುತ್ತಿದ್ದಾಳೆ. ಜಾನ್ ಡಿ. ರಾಕ್‌ಫೆಲರ್, ಒಬ್ಬ ಬ್ಯಾಪ್ಟಿಸ್ಟ್ ; ಈತ ಕುಲಾವಿಯನ್ನು ಧರಿಸುತ್ತಾನೆ. ಹಾರ್ಡಿಂಜ್‌ನು ಪರಟು ಹಾಕಿಕೊಂಡೇ ಇಸ್ಪೀಟು ಗಾಲ್ಫು ಮುಂತಾದುವನ್ನು ಆಡುತ್ತಾನೆ. ಥಾಮಸ್ ಎ. ಎಡಿಸರು ಬಹಳ ಸಡಿಲವಾದ ಬೂಟ್ಸುಗಳನ್ನು ಧರಿಸುತ್ತಾರೆ; ತಮ್ಮ ಕೈಯಲ್ಲಿ ಮುಟ್ಟದೆಯೇ ಅವರು ಬೂಟ್ಸುಗಳನ್ನು ತೆಗೆದುಹಾಕಬಲ್ಲರು. ಒಟ್ಟಿನಲ್ಲಿ ಎಡಿಸನರ ಮೈಮೇಲೆ ಬಿಗಿಯಾದ ಬಟ್ಟೆಗಳೇ ಇಲ್ಲ—ಈ ಸುದ್ದಿಗಳೆಲ್ಲ ಬಹಳ ಕುತೂಹಲ ಜನಕಗಳಾದುವೇ. ಸ್ಯಾಮುಯೆಲ್ ಪೆಪಿಯವರ ದಿನಚರಿ, ಬರಿಯ ಹರಟೆಯೇ. ಜಗತ್ತಿನಲ್ಲಿ ಅತಿ ಪ್ರಸಿದ್ಧನಾದ ಚರಿತ್ರಕಾರನೆಂದು ಹೆಸರಾದ ಬಾಸ್ವೆಲ್ ಮಾಡಿದ್ದು, ಈ ಹರಟೆಯೇ ಹೊರತು ಬೇರೇನೂ ಅಲ್ಲ. ಒಂದೊಂದು ಸಮಯದಲ್ಲಿ ಆ ಹರಟೆಯಲ್ಲಿ ವಕ್ರಬುದ್ಧಿ ಸಹ ಅಡಕವಾಗಿತ್ತು.

ಹಳ್ಳಿಯ ಪತ್ರಿಕೆಯಲ್ಲಿ ಹರಟೆಯ ಸ್ಥಾನ ಹೆಚ್ಚಾಗಿದ್ದರೂ ಅದು ಸುಳ್ಳನ್ನು ಹೇಳುವುದಿಲ್ಲ. ಮೊದಲೇ ಹೇಳಿದಂತೆ ಸುದ್ದಿಗಳನ್ನು ವಕ್ರವಾಗಿ ತಿರುಗಿಸುವುದಾಗಲಿ, ಮನುಷ್ಯನ ಯೋಗ್ಯತೆಯನ್ನು ಕಡಮೆಮಾಡುವುದಾಗಲಿ, ಕೆಡಿಸುವುದಾಗಲಿ, ನೋವಾಗುವ ಹಾಸ್ಯಮಾಡುವುದಾಗಲಿ ಅದರ ಗುರಿಯಲ್ಲ. ಸಂಪಾದಕನು ಸತ್ಯದ ಮಾರ್ಗದಲ್ಲಿ ನಡೆಯುವುದನ್ನೇ ಗುರಿಯನ್ನಾಗಿ

ಇಟ್ಟುಕೊಂಡಿರುತ್ತಾನೆ. ಅಂದಮಾತ್ರಕ್ಕೆ ಹಳ್ಳಿಯ ಪತ್ರಿಕೆಗಳು ಕೊಡುವ ಸುದ್ದಿಗಳೆಲ್ಲ ನಿಜವೇ ಎಂದು ಹೇಳಲಾಗುವುದಿಲ್ಲ. ಪತ್ರಿಕೆಗಳ ಸುಳ್ಳು, ಸಾರ್ವಜನಿಕ ಸುಳ್ಳು, (ಪಬ್ಲಿಕ್ ಲೈಸ್) ಎಂದು ಅಮೆರಿಕದ ಪತ್ರಿಕೆಗಳವರು ಹೇಳುತ್ತಾರೆ. ಇದಕ್ಕೆ ಮುಖ್ಯಕಾರಣ, ಪತ್ರಿಕೆಗಳವರು ಸುದ್ದಿಗಳಿಗಾಗಿ ಅವು ಗೊತ್ತಿರುವವರಲ್ಲಿ ಹೋಗಿ ಕೇಳುತ್ತಾರೆ. ಅವರು ಏನನ್ನೋ ಹೇಳುತ್ತಾರೆ. ಅನಂತರ ಆ ಸುದ್ದಿ ಸುಳ್ಳು ಅಥವಾ ತಪ್ಪು ಎಂದು ಗೊತ್ತಾದಾಗ, ಅದಕ್ಕೆ ಕಾರಣ, ಅದನ್ನು ಹೇಳಿದವನಿಗೂ ಆ ಸಂಗತಿ ತಿಳಿಯದಿದ್ದುದೇ ಎಂದು ಗೊತ್ತಾಗುತ್ತದೆ. ಇದೇನೂ ಆಶ್ಚರ್ಯವಲ್ಲ. ಹತ್ತು ಜನರ ಮುಂದೆ ಒಂದು ಸುದ್ದಿಯನ್ನು ಹೇಳಿದರೆ, ಆ ಹತ್ತು ಜನರೂ ಅದನ್ನು ಬೇರೆ ಬೇರೆಯಾಗಿ ಇತರರಿಗೆ ಹೇಳುತ್ತಾರೆ.

ಜಾರ್ಜ್ ಫಿಟ್ಜ್ ಎಂಬುವರು "ಸಂಪಾದಕ"ನ ಕರ್ತವ್ಯವನ್ನು ಕುರಿತು ಒಂದು ಸಲ ಹೀಗೆ ಬರೆದರು: "ಜಗತ್ತಿನ ನಾಡಿಯನ್ನು ಹಿಡಿದು ನೋಡುವುದೂ, ವ್ಯಾಪಾರಕ್ಕೆ ಸ್ಟೆತೊಸ್ಕೋಪ್ ಹಿಡಿಯುವುದೂ ಸಂಪಾದಕನ ಕೆಲಸ. ಇತಿಹಾಸದ ಜನನದಲ್ಲಿ ಸಹಾಯಮಾಡುವುದೂ, ಸಾಂಪ್ರತವನ್ನು ಬೋಧಿಸುವುದೂ, ಹಳೆಯದನ್ನು ತೆಗಳುವುದೂ ಹೊಸದನ್ನು ಹೊಗಳುವುದೂ ಸಂಪಾದಕನಿಗೇ ಸೇರಿದ್ದು. ಅವನು ಅಜ್ಞಾನವನ್ನು ಪರಿಹರಿಸುತ್ತಾನೆ. ಯೋಗ್ಯತೆಯನ್ನು ಗೌರವಿಸುತ್ತಾನೆ. ಠಕ್ಕರನ್ನು ಗುರುತಿಸುತ್ತಾನೆ. ಪಾಳೆಯಗಾರರನ್ನು ಮುರಿಯುತ್ತಾನೆ, ಅಧ್ಯಕ್ಷರನ್ನು ಆರಿಸುತ್ತಾನೆ, ಧೀರರಿಗೆ ಕಿರೀಟವಿಕ್ಕುತ್ತಾನೆ, ಸಾಹಸಿಗಳ ಬೆಲೆಯನ್ನು ಹೆಚ್ಚಿಸುತ್ತಾನೆ. ಸಾರ್ವಜನಿಕರಿಗೆ, ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು, ಸಂಪಾದಕನು, ಅಲಾರಮ್ ಗಡಿಯಾರದಂತೆ; ರಾಜಕೀಯ ಪುಡಾರಿಗಳಿಗೆ ಚಟಾಕಿಯಂತೆ, ಎಚ್ಚರಿಕೆಯಿಲ್ಲದೆ ಏನನ್ನೋ ಹೇಳಿ ಅನಂತರ 'ನಾನು ಹಾಗೆ ಹೇಳಲಿಲ್ಲ' ಎನ್ನುವವರಿಗೆ ಸಂಪಾದಕನೇ ಒಂದು ತಡೆ. ಸಂಪಾದಕನು ಸತ್ಯವನ್ನು ಹೆಚ್ಚು ಸತ್ಯವಾಗಿ ಮಾಡುತ್ತಾನೆ. ತಪ್ಪುಗಳನ್ನು ನಾಶಮಾಡುತ್ತಾನೆ. ದೊಡ್ಡ ಅಪಾಯ ದೇಶಕ್ಕೆ ಒದಗಿದಾಗ ಸಾರ್ವಜನಿಕ ಕಣ್ಣೀರನ್ನು ಸುರಿಸುತ್ತಾನೆ. ದೇಶದ ಸಾಮಾನ್ಯ ಮೂರ್ಖತೆಯನ್ನು ಕಂಡು ಸಾರ್ವಜನಿಕ ನಗುವನ್ನು ಹರಿಸುತ್ತಾನೆ.

ಸಂಪಾದಕೀಯಕ್ಕೆ, ಈಗ ಹೆಚ್ಚು ಸ್ಥಳವನ್ನು ಪತ್ರಿಕೆಯಲ್ಲಿ ಕೊಡುವ

ದಿಲ್ಲ. ಆದರೂ ಹಳ್ಳಿಯಲ್ಲಿಯೂ, ಸಂಪಾದಕನು ಉಳಿದವರಿಗಿಂತ ಒಂದು ಕೈ ಮೇಲು. ಅವನದು ಬಹಳ ಕಷ್ಟದ ಕೆಲಸ. ಅರ್ಧಕ್ಕಿಂತ ಹೆಚ್ಚು ಪತ್ರಿಕಾ ಸಂಪಾಕರು ಸಂಪಾಕೀಯವನ್ನು ಬರೆಯುವುದೇ ಇಲ್ಲ. ಬರೆಯುವವರ ಲೇಖನ ಗಳೂ ಉಚ್ಚದರ್ಜೆಯವುಗಳಾಗಿರುವುದಿಲ್ಲ. ಅದೊಂದು ಬುರುಡೆ. ಸಂಪಾದಕರ ಗುರಿ ತಮ್ಮ ವಾತಾವರಣದಲ್ಲಿ, ಜನರ ವ್ಯಾಪಾರ ವ್ಯವಸಾಯ ಉದ್ಯಮ ಶೀಲತೆಗಳನ್ನು ಹೆಚ್ಚಿಸುವುದೇ ಆಗಿದೆ. ಅವರ ಗುರಿ ಪ್ರಾದೇಶಿಕ ಮತ್ತು ಪ್ರಾಂತೀಯ ದೃಷ್ಟಿ. ಕೆಲವು ಸಂಪಾದಕರು ಇದ್ದದ್ದರಲ್ಲಿ ಸ್ವಲ್ಪ ಜ್ಞಾನಿಗಳೂ ತಿಳಿದವರೂ ಆಗಿರುತ್ತಾರೆ. ಉಳಿದವರು "ಹಾಗೂ ಸರಿ ಹೀಗೂ ಸರಿ"; ಪರಮಾತ್ಮ, ಪಿಶಾಚಿ, ಎರಡೂ ನನ್ನ ಸ್ನೇಹಿತರೆ ಎನ್ನುವವರು. ಹಳ್ಳಿಯ ಸಂಪಾದಕನು ಬಡಗಿ ಕಮ್ಮಾರ ಮುಂತಾದ ಕಸಬುದಾರನಾದರೆ, ಅವನು ತನ್ನ ಕಸಬಿನ ವಿಷಯವನ್ನು ಸಾಮಾನ್ಯವಾಗಿ ಚರ್ಚಿಸುವುದೇ ಇಲ್ಲ. ಎಲ್ಲ ರಿಗೂ ಎಲ್ಲ ಪ್ರೋತ್ಸಾಹವೂ ಬೇಕೆಂದು ಮಾತ್ರ ಹೇಳುತ್ತಾನೆ. ರಾಜ ಕೀಯದ ವಿಷಯದಲ್ಲಿಯೂ ಮತದ ವಿಷಯದಲ್ಲಿಯೂ ಅವನ ಅಭಿಪ್ರಾಯ ಬಹಳ ಮಿತವಾಗಿರುತ್ತದೆ. ಈ ಕಾರಣದಿಂದ ಹಳ್ಳಿಯ ಪತ್ರಿಕೆಯ ಸಂಪಾ ದಕನಿಗೆ ಹೆಚ್ಚು ಜಟಿಲವಾದ ಪ್ರಶ್ನೆಗಳಿಲ್ಲ. ಅವನ ಕಾರ್ಯ ಸುಗಮವಾಗಿ ನಡೆಯುತ್ತದೆ. ಒಟ್ಟಿನಲ್ಲಿ ಅವನು ದೂರದೃಷ್ಟಿಯುಳ್ಳ ವಿವೇಕಿ. ಅವನ ವ್ಯಾಪಾರೀ ಬುದ್ಧಿಯೂ ಅದ್ಭುತವಾದುದು. ಅರುವತ್ತು ವರುಷಗಳ ಕೆಳಗೆ ಹಳ್ಳಿಯ ಪತ್ರಿಕೆಗಳನ್ನು ಕೈ ಮುದ್ರಣ ಯಂತ್ರದಲ್ಲಿ ಒಂದು ಸಲಕ್ಕೆ ಒಂದು ಪುಟದಂತೆ ಅಚ್ಚು ಹಾಕುತ್ತಿದ್ದರು. ನೂರಾರು ಪ್ರತಿಗಳನ್ನು ಮಾಡಬೇಕಾ ದರೆ ಕೆಲವು ಗಂಟೆಗಳು ಹಿಡಿಯುತ್ತಿದ್ದುವು. ಇಂದು ನಲವತ್ತು ಪುಟದ ಹತ್ತು ಸಾವಿರ ಪ್ರತಿಗಳನ್ನು ಹಳ್ಳಿಯ ಅಚ್ಚುಕೂಟದವರು ಅರ್ಧಗಂಟೆಯಲ್ಲಿ ಅಚ್ಚು ಹಾಕುತ್ತಾರೆ.

ಅರುವತ್ತು ವರುಷದ ಕೆಳಗೆ, ಅಚ್ಚಿನ ಅಕ್ಷರಗಳನ್ನೆಲ್ಲ ಕೈಯಿಂದಲೇ ಜೋಡಿಸುತ್ತಿದ್ದರು. ಇಂದು ಪತ್ರಿಕೆಯಲ್ಲಿ ಮುಕ್ಕಾಲುಭಾಗಕ್ಕಿಂತ ಹೆಚ್ಚಾಗಿ ಯಂತ್ರವೇ ಮೊಳೆ ಜೋಡಿಸುತ್ತದೆ. ಹಿಂದಲ ಕಾಲದಲ್ಲಿ ಒಬ್ಬ ಕಂಪೋಸಿಟರು ದಿನಕ್ಕೆ ಒಂದೂವರೆ ಕಾಲಂ ಮೊಳೆ ಜೋಡಿಸುತ್ತಿದ್ದನು. ಇಂದು ಯಂತ್ರದಲ್ಲಿ ಹದಿನೈದು ಕಾಲಂ ಜೋಡಿಸದವರು ಇಲ್ಲ. ಕೆಲವು 'ಮಾಟಗಾರರು' ದಿನಕ್ಕೆ ಇಪ್ಪತ್ತು ಕಾಲಂ ಸಹ ಜೋಡಿಸುತ್ತಾರೆ!

ಸಾಧಾರಣವಾದ ಹಳ್ಳಿಯ ಪತ್ರಿಕೆಯ ಕಛೇರಿಯಲ್ಲಿ ಎಲ್ಲಾ ಸಂಪೂರ್ಣವಾದ ಅಚ್ಚುಕೂಟವಿರುತ್ತದೆ. ಕಟಿಂಗ್ ಪ್ರೆಸ್, ಜಾಬ್ ಪ್ರೆಸ್, ನಂಬರಿಂಗ್ ಮೆಶೀನ್, ತೂತು ಹೊಡೆಯುವುದು, ತಂತಿಯಿಂದ ಹೊಲಿಯುವುದು. ಒಂದೆರಡು ಪತ್ರಿಕೆಗಳಿಗೆ ರೇಡಿಯೋ ಟೆಲಿಫೋನ್ ಸಹ ಇವೆ. ವರ್ತಮಾನಗಳನ್ನೂ ಮಾರ್ಕೆಟ್ ದರಗಳನ್ನೂ ಅವು ಕೂಡಲೇ ತಿಳಿಸುತ್ತವೆ. ಆ ಪತ್ರಿಕೆಯ ಸಂಪಾದಕನ ಮೇಜಿನ ಮೇಲೆ ಈ ನುಡಿ ಇದೆ:

ನೆನ್ನೆ ಹಾಳಾಗಲಿ!
ಇಂದೇನು?
(ಟು ಹೆಲ್ ವಿತ್ ಎಸ್ಟರ್‌ಡೆ!
ವಾಟ್ ಈಸ್ ಟು-ಡೆ?)

ಪತ್ರಿಕೆ ಬರಿಯ ಚಂದಾದಾರರಿಂದಲೇ ಜೀವಿಸಲಾರದು. ಏಕೆಂದರೆ ಚಂದಾದಾರರ ಸಂಖ್ಯೆ ಸಾವಿರ ಎರಡುಸಾವಿರಕ್ಕಿಂತ ಸಾಮಾನ್ಯವಾಗಿ ಹೆಚ್ಚಾಗಿರುವುದಿಲ್ಲ. ಪತ್ರಿಕೆ ಜಾಹಿರಾತುಗಳ ಮೇಲೆ ಅವಲಂಬಿಸಿರುತ್ತದೆ. ಜಾಹಿರಾತುಗಳೇ ಪತ್ರಿಕೆಯ ಉಸಿರು. ಆದರೆ ಜಾಹಿರಾತುಗಳನ್ನು ಕೊಡುವವರು ಭರ್ರನೆ ಬಂದು ಒಂದೆರಡು ಸೂಚನೆಗಳನ್ನು ಕೊಟ್ಟು 'ಜಾಹಿರಾತುಗಳನ್ನು ನೀವೇ ಸಿದ್ಧಮಾಡಿ' ಎಂದು ಹೇಳುತ್ತಾರೆ. ಸಂಪಾದಕ ಪೂರ್ಣ ಜಾಹಿರಾತುಗಳನ್ನು ಬರೆಯಬೇಕಾಗುತ್ತದೆ. ಜನಗಳನ್ನು ಆಕರ್ಷಿಸಿ, ವಸ್ತುಗಳನ್ನು ಮಾರುವಂತಹ ಜಾಹಿರಾತುಗಳನ್ನು ಬರೆಯಬೇಕಾದರೆ ಬಹಳ ಬುದ್ಧಿಬೇಕು. ಕೆಲವು ಪತ್ರಿಕಾ ಸಂಪಾದಕರು ಬರೆಯುವ ಜಾಹಿರಾತು ಈ ವಿದ್ಯೆಯ ತುದಿ. ಅದಕ್ಕಿಂತ ಉತ್ತಮವಾಗಿ ಯಾರಿಂದಲೂ ಸಾಧ್ಯವಿಲ್ಲ. ಆ ಜಾಹಿರಾತಿನಿಂದಲೇ ಆ ವಸ್ತುಗಳಿಗೆ ಗಿರಾಕಿ. ಅಂತಹ ಸಂಪಾದಕರಿಗೆ ಯಾವಾಗಲೂ ಜಾಹಿರಾತು ಹೆಚ್ಚು. ಅದೇ ಅವರ ಅಸ್ತ್ರ.

ಅಮೆರಿಕದ ವೃತ್ತಪತ್ರಿಕೆಗಳವರು "ಬರಿಯ ಹಣ ಗೂಡಿಸುವ ವ್ಯಾಪಾರಿಗಳು ಮಾತ್ರ" ಎಂದು ತಿಳಿಯಬಾರದು. ಅಂಥವರು ಇಲ್ಲವೇ ಇಲ್ಲ. ಆದರೆ ಎಲ್ಲರೂ ಹಾಗೆ ಇಲ್ಲ. ಪತ್ರಿಕೆ ತನ್ನ ಕಾಲಿನ ಮೇಲೆ ತಾನು ನಿಲ್ಲಬೇಕೆಂಬುದೇ ಅವರ ಗುರಿ. 'ನ್ಯೂಯಾರ್ಕ್ ಟೈಮ್ಸ್' ಹೀಗೆ ಬರೆಯಿತು. "ಅಮೆರಿಕದ ಪತ್ರಿಕಾ ವ್ಯವಸಾಯ ನಿಯಮ ಇದು—ಸತ್ಯ ಮತ್ತು ಪೂರ್ಣ ಸಮಾಚಾರ

ಪ್ರಕಟನೆ, ಪ್ರಾಮಾಣಿಕವಾದ ಚಳುವಳಿಗಳಿಗೆ ಸಾರ್ವಜನಿಕ ಹಿತಕ್ಕೆ ಪ್ರೋತ್ಸಾಹ, ನಿಷ್ಪಕ್ಷಪಾತ ಸಂಪಾದಕೀಯ—ಈ ಮಾರ್ಗಗಳಿಂದ ಅದು ಶಕ್ತಿಯುತವಾಗಿ ತನ್ನ ಕಾಲಿನ ಮೇಲೆ ತಾನು ನಿಲ್ಲುತ್ತದೆ. ಅಮೆರಿಕದ ಪತ್ರಿಕೆಗಳು, ಬರಿಯ ವ್ಯಾಪಾರಿಗಳೆಂಬುದು ಅದಕ್ಕೆ ಕೊಡುವ ಒಂದು ಪ್ರಶಸ್ತಿಯೇ ಹೊರತು ಕುಂದಲ್ಲ. ಜನತೆಗೆ ಪತ್ರಿಕೆಯ ಪ್ರಯೋಜನ ಮನದಟ್ಟಾಗಿದೆ. ಆದುದರಿಂದ ಅದನ್ನು ಅವರು ಒಪ್ಪಿ ಬೆಳಸುತ್ತಿದ್ದಾರೆ" ಎಂದು ಇದಕ್ಕೆ ಅರ್ಥ

ಹಳ್ಳಿಯ ಪತ್ರಿಕೆಯ ಸಂಪಾದಕನಂತೆಯೆ, ಪಟ್ಟಣದ ಪತ್ರಿಕೆಯ ಸಂಪಾದಕನೂ ಒಳ್ಳೆಯವ್ಯಾಪಾರಿ. ತನ್ನ ವ್ಯಾಪಾರದಲ್ಲಿ ಲಾಭ ಬರುವಂತೆ ನಡೆಯುವುದು ಅವನಿಗೆ ಗೊತ್ತು. ಹಾಗಿಲ್ಲದಿದ್ದರೆ ಅವನು ಉಳಿಯುವುದಿಲ್ಲ. ಇಪ್ಪತ್ತೈದು ವರುಷ ಸಾಹಸಮಾಡಿ, ಹಳ್ಳಿಯ ಪತ್ರಿಕೆಗಳವರು ತಮ್ಮ ಕಾಲಿನ ಮೇಲೆ ತಾವು ನಿಲ್ಲುವುದನ್ನು ಕಲಿತಿದ್ದಾರೆ. ಅದಕ್ಕೆ ಹಿಂದೆ ಪತ್ರಿಕೆಗಳ ಸ್ಥಿತಿ ಕರುಣಾಜನಕವಾಗಿತ್ತು. ಆಗ ಸಂಪಾದಕನಿಗೆ ಅವನ ಪತ್ರಿಕೆಗಾಗಿ, ಜಾಹಿರಾತಿಗಾಗಿ, ಧಾನ್ಯ ತರಕಾರಿ ಹಾಲು ಮೊಟ್ಟೆ ಮಾಂಸಗಳನ್ನು ಹಳ್ಳಿಯವರು ಕೊಟ್ಟು ಅವನ ಜೀವ ಉಳಿಸುತ್ತಿದ್ದರು. ಪತ್ರಿಕೆ ಬದುಕುವುದೇ ಕಷ್ಟವಾಗಿತ್ತು. ಈಗ ಅವೆಲ್ಲ ಬದಲಾಯಿಸಿವೆ. ಹಳ್ಳಿಯ ಸಂಪಾದಕ ಸಹ ವರುಷಕ್ಕೆ ಹತ್ತು ಸಾವಿರ ರೂಪಾಯಿ ಸಂಪಾದಿಸುತ್ತಾನೆ. ಹಳ್ಳಿಯ ಪತ್ರಿಕೆಗೆ ಒಳ್ಳೆಯ ಕಛೇರಿ, ಒಳ್ಳೆಯ ಅಚ್ಚು ಕೂಟ ಕುರ್ಚಿ ಮೇಜು, ಸ್ವಲ್ಪ ಹೆಚ್ಚು ಕಡಮೆ ಲಕ್ಷ ರೂಪಾಯಿ ವೆಚ್ಚದ ಮೂಲ ಧನದ ಆಸ್ತಿ ಇರುತ್ತದೆ.

ಸಂಪಾದಕನಿಗೆ ಯಾವಾಗಲೂ ತನ್ನ ಹಣವೇ ದೇವರಲ್ಲ. ಅಂಥವನು ಎಂದಿಗೂ ಪತ್ರಿಕಾ ಸಂಪಾದಕನಾಗಲಾರ; ಅವನ ಉದ್ಯೋಗವೇ ಅವನ ಆನಂದ. ತನ್ನ ಶಕ್ತಿಯನ್ನು ಜನಸೇವೆಗಾಗಿ ಲೋಕಶಿಕ್ಷಣಕ್ಕಾಗಿ ಪ್ರಜಾರಂಜನೆಗಾಗಿ ವಿನಿಯೋಗಿಸುವ ಅವಕಾಶ ಅವನಿಗೆ ದೊರೆತುದೇ ಅವನಿಗೆ ಪ್ರತಿಫಲ. ಜನತೆಯಲ್ಲಿ ಸುಪ್ತವಾಗಿರುವ ಸ್ಫೂರ್ತಿಯನ್ನು ಪ್ರಬೋಧಗೊಳಿಸುವುದೇ ಅವನ ಆನಂದ.

ಯಾರಿಗೆ ತಾನೇ ಇದಕ್ಕಿಂತ ಹೆಚ್ಚಾದ ಪ್ರತಿಫಲ ಬೇಕು?

'ಡೆಟ್ರಾಯಿಟ್' ನ್ಯೂಸ್ ಎಂಬ ಪತ್ರಿಕೆ ಪ್ರಕಟಿಸಿರುವ ತನ್ನ ಧ್ಯೇಯಗಳು, ಎಲ್ಲ ಪತ್ರಿಕೆಗಳಿಗೂ ಗುರಿಗಳಾಗಿವೆ.

(1) ಸಾರ್ವಜನಿಕಾಭಿಪ್ರಾಯದ ಕನ್ನಡಿ, ಸಾರ್ವಜನಿಕೋದ್ದೇಶಗಳ ಪ್ರಚಾರಕ, ಸಾರ್ವಜನಿಕ ಅತೃಪ್ತಿಯ ಪ್ರತೀಕ.

(2) ಎಲ್ಲರ ಎಲ್ಲಬಗೆಯ ಹಿತಾಸಕ್ತಿಗಳ ಪ್ರತಿಬಿಂಬ, ಎಲ್ಲ ಸತ್ಕಾರ್ಯಗಳ ಮಿತ್ರ, ಎಲ್ಲ ಉದಾರ ಕಾರ್ಯಗಳ ಪ್ರೋತ್ಸಾಹಕ.

(3) ಸುದ್ದಿ ಪ್ರಚಾರಕ, ಅಜ್ಞಾನ ಅಹಂಕಾರಗಳ ನಾಶಕ, ಅಂಧಕಾರವಿರುವೆಡೆಗಳಲ್ಲೆಲ್ಲ ಪ್ರವೇಶಿಸಿ ಅದನ್ನು ಬೆಳಗುವವ.

(4) ಪ್ರಜೆಗಳಲ್ಲಿ ಒಗ್ಗಟ್ಟನ್ನು ಬಾಂಧವ್ಯವನ್ನೂ ಹೆಚ್ಚಿಸಿ ಅವರ ಮಂಗಳಕ್ಕಾಗಿ ಕಾರ್ಯಮಾಡುವವ, ಪೌರರ ಹಕ್ಕಿನ ಸಂರಕ್ಷಕ.

(5) ನೀಚರಿಗೆ ಚಾವಟಿ, ಅಸಮಾನತೆಗಳ ಶತ್ರು, ಅನ್ಯಾಯ ಪಕ್ಷಪಾತಗಳ ನಿರ್ದಾಕ್ಷಣ್ಯವಿರೋಧಿ, ಸತ್ಯದ ಮಿತ್ರ.

(6) ದೀನ ದಳಿತರ ಪ್ರತಿನಿಧಿ, ಮಿತ್ರಹೀನರಮಿತ್ರ. ಸಾರ್ವಜನಿಕ ಮತ್ತು ಖಾಸಗಿ ಅನ್ಯಾಯಗಳ ವಿರೋಧಿ.

(7) ನಡೆದುದನ್ನು ನಿರೂಪಿಸುವವ,ಸುದ್ದಿಗಳನ್ನೂ ಅಭಿಪ್ರಾಯಗಳನ್ನೂ ಆರಿಸುವುದರಲ್ಲಿ ನಿಪುಣ, ಜನರ ಸ್ವಾತಂತ್ರವನ್ನು ಹೆಚ್ಚಿಸುವವ, ಸತ್ಯವನ್ನು ನಿರೂಪಿಸುವವ.

(8) ಹೊಸ ಹೊಸ ಸುದ್ದಿ ಪ್ರಚಾರಕ, ಹಳೆಯದಾದರೂ ದೇಶಕ್ಕೆ ಹಿತವಾದುದನ್ನು ಮತ್ತೆ ಮತ್ತೆ ಜ್ಞಾಪಿಸುವವ, ಭವಿಷ್ಯದ ವಾಣಿ.

(9) ಪ್ರಜೆಗಳ ಹಕ್ಕಿನ ರಕ್ಷಕ, ಬಾಂಧವ್ಯಗಳ ಪೋಷಕ, ಪ್ರಜಾಪ್ರಭುತ್ವ ಸರ್ಕಾರದ ಮುಖ್ಯ ಆಧಾರಸ್ತಂಭ.

(10) ಮನೆಗಳನ್ನೂ ಸಂಸಾರಗಳನ್ನೂ ಕಟ್ಟುವವ (ಒಡೆಯುವವನಲ್ಲ) ಪರಸ್ಪರ ಸ್ನೇಹ ಬಾಂಧವ್ಯಗಳನ್ನು ಬೆಳೆಸುವವ, ಜನಸಾಮಾನ್ಯರ ಕಲೆ ಸಾಹಿತ್ಯ ವಿಜ್ಞಾನಗಳನ್ನು ಬೆಳೆಸುವವ.

——

ಊರ್ವಶಿಯ ಶಾಪ

—★—

ಕನ್ನಡ ಕವಿಗುರು ಕುಮಾರವ್ಯಾಸನ ಭಾರತ, ಒಂದು ರಸ ಸಮುದ್ರ. ಆ ಕವಿಗುರು ಆ ರಸ ಪ್ರವಾಹದ ಮೇಲೆ, ಅಚ್ಚುಕಟ್ಟಾದ ಆರಿಸಿದ ಮಾತಿನ ನಾವೆಯಲ್ಲಿ ನಮ್ಮನ್ನು ಕೂರಿಸಿಕೊಂಡು ಹೋಗಿ, ಆನಂದಲೋಕವನ್ನು ಸುತ್ತಿಸಿಕೊಂಡು ಬರುತ್ತಾನೆ. ಆ ವಾಗ್ಝುರಿಯ ಪ್ರವಾಹಕ್ಕೆ ಸಿಕ್ಕದುದೂ ಹೊರತಾದುದೂ ಯಾವುದೂ ಇಲ್ಲ. ಕುಮಾರ ವ್ಯಾಸನ ಬಾಯಿಗೆ ಸಿಕ್ಕಿದೊಡನೆಯೇ, ಎಂತಹ ನೀರಸವಸ್ತುವಿಗೂ ಒಂದು ಗಾರುಡಿಯೂ ಮನೋಮೋಹಕತೆಯೂ ಉಂಟಾಗುತ್ತದೆ. ಭಾರತದಂತಹ ರಸವತ್ತಾದ ಭಾವ ಪ್ರವಾಹ ವಾಹಿನಿಯಲ್ಲಿ ಆ ಕೈವಾಡ ಹೆಜ್ಜೆಹೆಜ್ಜೆಗೂ ಕಾಣುತ್ತದೆ. ಪ್ರಾರಂಭದ ಸಂಧಿಯಲ್ಲಿ ಕವಿ ಹೇಳಿಕೊಂಡಿರುವ "ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ" ಎಂಬುದೂ "ಅರಸುಗಳಿಗಿದು ವೀರ" ಎಂಬ ಪದ್ಯದ ಭಾವಗಳೂ ಬರಿಯ ಅಹಂಕಾರದ ಮಾತುಗಳಲ್ಲವೆಂಬುದು, ಈ ಕಾವ್ಯ ವೈಭವದ ಪಂಕ್ತಿ ಪಂಕ್ತಿಗೂ ಅನುಭವವಾಗುತ್ತದೆ.

ಕುಮಾರವ್ಯಾಸ ಭಾರತವನ್ನು ಸಾಮಾನ್ಯವಾದ ಹೊರ ದೃಷ್ಟಿಯಿಂದ ನೋಡಿದರೂ ಕೂಡ ಇದು ಅದ್ಭುತ ಕೃತಿ, ಮಹಾಕಾವ್ಯ, ಭೋರ್ಗರೆಯುತ್ತಿರುವ ಭಾವನಾ ಸಮುದ್ರ ಎಂಬುದು ಮುಂದಟ್ಟಾಗುತ್ತದೆ. ಗಗನವನ್ನು ಮುಟ್ಟುವ ಪುಷ್ಪಿತಗಳಾದ ವೃಕ್ಷಗಳ ಕಾವ್ಯಾರಣ್ಯವದು. ಕುಮಾರವ್ಯಾಸನ ಗಂಟಲಿನಿಂದ ಕಾವ್ಯವಾಹಿನಿ ನಿರರ್ಗಳವಾಗಿ ತಟ್ಟು ತಡೆಗಳಿಲ್ಲದೆ ಸಂಕೋಚ ಸಂಕೋಲೆಗಳಿಲ್ಲದೆ ಸ್ವೇಚ್ಛೆಯಿಂದ ತಾನೇ ತಾನಾಗಿ ಪ್ರವಹಿಸುತ್ತದೆ. ಈ ಗೊಂಡಾರಣ್ಯದಲ್ಲಿ ಸಣ್ಣ ಗಿಡಗಳಿಲ್ಲವೆಂದಲ್ಲ. ಆದರೆ ಸಣ್ಣ ಗಿಡಗಳೂ ಸಹ ಆಧುನಿಕ ಕಾಲದ ತೋಟಗಾರನ ಕತ್ತರಿಗೆ ಸಿಕ್ಕಿದ ಕೃತಕ ಗಿಡಗಳಂತಲ್ಲದೆ ಪೂರ್ಣವಾಗಿ ಸ್ವೇಚ್ಛೆಯಿಂದ ಬೆಳೆದವುಗಳಾಗಿರುತ್ತವೆ. ಒಂದೊಂದು ಪ್ರಕರಣವೂ ಸ್ವತಃ ಪರಿಪೂರ್ಣವಾಗಿ ತಾನೇ ಒಂದು ಚಿಕ್ಕ ಖಂಡಕಾವ್ಯವಾಗಿದೆ.

ಪಾಂಡವರು ಶಕುನಿಯ ಕಪಟದ್ಯೂತದ ಬಲೆಗೆ ಸಿಲುಕಿ ವನವಾಸಕ್ಕೆ

ತೆರಳಿದರು. ಇಂದ್ರಕೀಲದಲ್ಲಿ ಅರ್ಜುನನಿಗೆ ಶಿವನಿಂದ ಪಾಶುಪತಾಸ್ತ್ರ ದೊರಕಿತು. ಇಂದ್ರನು ನರನನ್ನು ಸ್ವರ್ಗಕ್ಕೆ ಕರೆಸಲು "ಹತ್ತು ಸಾವಿರ ತುರಗನಿಕರದ ಲಳಿಯ ದಿವ್ಯಾಂಬರದ ಸಿಂಧದ ಸಾಲ ಸತ್ತಿಗೆಗಳ ಪತಾಕೆಗಳ| ಖರ ರುಚಿಯ ಮಾರಾಂಕವೋ ಸುರ | ಗಿರಿಯ ಸೋದರವೊ, ಮೃಗಾಂಕನ | ಮರುದಲೆಯೋ ಮೇಣೆನಲು'' ರಥವನ್ನು ಕಳುಹಿಸಿದನು. ಅರ್ಜುನನು "ಇನ್ನು ನನಗೆ ಮುಂದೆಲ್ಲಾ ಬರಿ ಶುಭಪರಂಪರೆಯೇ" ಎಂದು ಭಾವಿಸಿದನು. ಪರಮೇಶ್ವರನೇ ತನ್ನಲ್ಲಿ ಪ್ರಸನ್ನನಾದ ಮೇಲೆ, ಉಳಿದವರೆಲ್ಲಾ ಒಳ್ಳೆಯವರೇ ಆಗುತ್ತಾರೆಂದು ಆತ ಭಾವಿಸಿದುದರಲ್ಲಿ ಆಶ್ಚರ್ಯವಿಲ್ಲ. ಅರ್ಜುನನು ರಥವನ್ನೇರಿ ಇಂದ್ರಲೋಕವನ್ನು ಸೇರಿದನು. ಸ್ವರ್ಗದಲ್ಲಿದ್ದವರು ಯಾರು ಯಾರೆಂಬು ದನ್ನು ಕವಿ ಹೃದಯಂಗಮವಾಗಿ ವರ್ಣಿಸಿದ್ದಾನೆ. "ಭೂತ ದಯೆಯಲಿ ನಡೆವನೀತ, ನಿರ್ಮಳ ಸತ್ಯಭಾಷಿತ ನೀತ, ತೀರ್ಥವಿಹಾರ ಸದ್ಗುಣಿಯೀತ, ಈತ ನಿರ್ಮತ್ಸರನು, ಈತ ನಸೂಯಾ ತೀತ, ಈತ ವಿಪ್ರಪೂಜಕ, ಈತ ಮಾತಾಪಿತೃ ಭಕ್ತ, ಈತ ಇಂದ್ರಿಯವಿಜಯಿ, ಈತ ವೇದಾಧ್ಯಯನ ಪರ, ಈತ ಯಥಾಲಾಭೈಕ ಸಂತೋಷಿ, ಈತ ಶುಚಿ, ರುಜುವೀತ, ನಿಸ್ಪೃಹನೀತ ನಿರ್ಭಯನೀತ ನಿರ್ಮಳನೀತ ರಾಗದ್ವೇಶರಹಿತನು. ಈತ ಸ್ವಾಮಿಕಾರ್ಯಕೆ ತೆತ್ತನೊಡಲನು, ವರ ರಣಾಗ್ರದೊಳಿತ್ತನೊಡಲನು, ಭೂಮಿ ಕನ್ಯಾಗೋಧ ನಾಳಿಯ ನಿತ್ತವನು, ಸತ್ಪುತ್ರನನು ತಾ ಹೆತ್ತವನು, ಗೋವಿಪ್ರಬಾಧೆಗೆ ಸತ್ತವನು".

ಇಂಥವರನ್ನೆಲ್ಲಾ ಪಾರ್ಥನು ನೋಡಿದನು. ರಾಜಸೂಯಯಾಗ ಮಾಡಿ ಇಂದ್ರನ ಆಸ್ಥಾನದಲ್ಲಿ ಪ್ರತಿಷ್ಠಿತರಾಗಿದ್ದ ನಳ, ಹರಿಶ್ಚಂದ್ರ, ಭರತ, ಪುರು, ಮರುತ್ತನೃಪ, ಹೈಹೇಯ, ದುಂದುಮಾರಕ, ದಿಲೀಪ, ನಹುಷ, ದಶರಥ, ರಾಮ, ಶಂತನು ಇವರೆಲ್ಲಾ ಅಲ್ಲಿ ಮಂಡಿತರಾಗಿದ್ದರು. ಅಲ್ಲದೆ 'ಜಪಯಜ್ಞ ದಾನಾಭ್ಯುದಯ ವೈದಿಕ ಕರ್ಮನಿಷ್ಠರಲ್ಲಾ' ಪಾರ್ಥನ ಕಣ್ಣಿಗೆ ಬಿದ್ದರು. ಇಂದ್ರನು ಬಂದು ಮಗನನ್ನು ಸೆಳೆದು ಬಿಗಿದಪ್ಪಿದನು. ಸಿಂಹಾ ಸನದಲ್ಲಿ ಅರ್ಧವನ್ನು ಕೊಟ್ಟು ಕುಳ್ಳಿರಿಸಿಕೊಂಡನು.

ಈ ಮಂಗಳ ಪರಂಪರೆಗಳಿಂದ ಅರ್ಜುನನಿಗೆ ಬಹಳ ಆನಂದವಾ ಯಿತು. ಇಂದ್ರಲೋಕದಲ್ಲಿ ಯಾವ ಮೂಲೆಯಲ್ಲಿದ್ದರೂ, ಸೊಳ್ಳೆ ತಿಗಣೆಯಾ

ಗಿದ್ದರೂ ಪುಣ್ಯವೇ. ಹೀಗಿರಲು ಇಂದ್ರನು ಅಪ್ಪಿಕೊಂಡು ಅರ್ಧಾಸನದಲ್ಲಿ ಕುಳ್ಳಿರಿಸಿದ ಅರ್ಜುನನ ಮಹಿಮೆಯನ್ನು ಕೇಳಬೇಕೆ? "ನೂರು ಪಶು ಗೆಡಹಿಗೆ ಸುರೇಂದ್ರನು। ಮಾರುವನು ಗದ್ದುಗೆಯ, ಬರಿದೇ। ಸೂರೆ ಗೊಂಡನು ಸುರಪತಿಯ ಸಿಂಹಾಸನದ ಸಿರಿಯ॥ ·ಮೂರು ಯುಗದರಸು ಗಳೊಳೀತಗೆ। ತೋರಲೆಣೆಯಿಲ್ಲೆನಲು ಶಕ್ರನ। ನೂರು ಮಡಿ ತೇಜದಲಿ ತೊಳತೊಳಗಿದನು ಕಲಿ ಪಾರ್ಥ."

ಕುಮಾರವ್ಯಾಸ "ನೂರು ಪಶುಗೆಡಹಿಗೆ। ಸುರೇಂದ್ರನು ಮಾರುವನು ಗದ್ದು ಗೆಯ" ಎಂದು ಹೇಳಿರುವುದರಲ್ಲಿ ಯಜ್ಞಗಳನ್ನು ಕುರಿತು ಸ್ವಲ್ಪವಿಡಂಬನೆ ಅಡಕವಾಗಿರುವಂತೆ ತೋರುತ್ತದೆ. ದೇವಲೋಕದ ಆನಂದ, ದೇವಲೋಕದ ಲಲನೆಯರು, ಆ ಲಲನೆಯರ ತೋಳತೆಕ್ಕೆಯ ಉಯ್ಯಾಲೆಗಾಗಿ ಋಷಿಗಳು ಎಲೆಗಳನ್ನೂ ಗಾಳಿಗಳನ್ನು ಸೇವಿಸಿಕೊಂಡು ದೇಹವನ್ನು ದಂಡಿಸಿ ಘೋರ ತಪಸ್ಸನ್ನು ಮಾಡುತ್ತಾರೆ. ಕುಮಾರವ್ಯಾಸ ದೇವಲೋಕದ ಈ ಸೆಳೆತವನ್ನು ಬಲ್ಲ. ಇಂದ್ರನ ಸಭೆಯಲ್ಲಿ ದೇವ ಸ್ತ್ರೀಯರ ನಾಟ್ಯವೇ ದೇವಲೋಕ ವಾಸದ ತಿರುಳು. ಇಂದ್ರನು ಯಾರನ್ನಾದರೂ ಸಂತೋಷಪಡಿಸಬೇಕಾದರೆ ಆ ನಾಟ್ಯವನ್ನು ಏರ್ಪಡಿಸುವನು. ಸಾಮಾನ್ಯರಿಗೆ ಆ ಗೌರವ ದೊರೆಯು ವುದಿಲ್ಲ. ಆ ನಾಟ್ಯವನ್ನು ನೋಡುವ ಸೌಲಭ್ಯವು ದೇವಲೋಕದಲ್ಲಿಯೂ ಎಲ್ಲರಿಗೂ ದೊರೆಯುವುದಿಲ್ಲ. "ನೂಕು ಬಾಗಿಲ ಚಾಚು, ಬಣಗುದಿವೌಕಸರ ನಿಲಿಸು, ಅಲ್ಪ ಪುಣ್ಯರನು ಬಹಳ ದಾನ ತಪೋದನ ವಿವರ್ಜಿತರನು ಏಕೆ ಹೊಗಿಸಿದೆ? ತೊಲಗಿಸೊ ಮಂದಿಯನು" ಎಂದು ಸೇವಕರು ಅಡ್ಡಾಡುತ್ತಿ ದ್ದರು. ಅಂದಿನ ಉತ್ಸವದಲ್ಲಿ ಅಮರನಿಕರದ ಜನಸಂದಣಿ ಅದ್ಭುತವಾಯ್ತು. ತೆರಹುಗೊಡದ ಜನಸಂದಣಿ ಆಸ್ಥಾನದಲ್ಲಿ ಗಜಬಜಿಸಿತು. "ಲಾವಣ್ಯ ಲಹರಿಯ ಲಲಿತ ವಿಭ್ರಮದ ಸುಳಿಗುರುಳ ನಿಟ್ಟಿಸಳುಗಂಗಳ ಹೊಳೆವ ಕದ ಪಿನ ಸುಣ್ಗೊರಲ ಬಲು ಮೊಲೆಯ ಮೋಹದ ಅಮರ ವಾರನಾರಿಯರು," ಸುರೇಂದ್ರನ ಲಲನೆಯರು ಸೂಕಿದರು. ದೇವಲೋಕವೆಲ್ಲಾ ಪರಿಮಳಪೂರಿತ ವಾಯಿತು. "ಉಗಿದರೋ ಕತ್ತುರಿಯ ತವಲಾಯಿಗಳ ಮುಚ್ಚಳವನೆನೆ," ದೇವ ಸ್ತ್ರೀಯರು ದಿವ್ಯ ಪರಿಮಳ ಸಾರಪೂರವಿಸೆ, ಕವಿದರು. ಮಸೆದ ಖಡ್ಗದ ಹೊಳ ಪಿನ ಕರೆಗಣ್ಣುಗಳ ಕಾಂತಿಯ ಬಲುಗರುವಾಯಿ ಮುಸುಕಿನ ಬಿಗಹುಗಳ

ಬಿರಿದಂಕಕಾರ್ತಿಯರು, ಇಂದ್ರನೋಲಗಕ್ಕೆ ಬಂದರು. ಒಬ್ಬೊಬ್ಬರು ಒಂದೊಂದು ಬೆಡಗಿನಲ್ಲಿ ಒಂದೊಂದು ಭಂಗಿಯಲ್ಲಿ ಠೀವಿಯಲ್ಲಿ ಕಾಣಿಸಿಕೊಂಡರು. "ನೇವುರದ ಸುಣ್ಣದನಿಯ ಕಾಂಚಿಯ ಕೇವಣದ ಕಿಂಕಿಣಿಯ ರಭಸದ ನೇವಣಗಳೊಲಹುಗಳ ಮೌಳಿಯ ಮುರಿದ ಮುಸುಕುಗಳ, ಭಾವದುಬ್ಬಿನ ಚೆಲ್ಲೆಗಂಗಳ ಡಾವರದ ಡೊಳ್ಳಾಸ ಕಾತಿಯರು" ಇಂದ್ರನೋಲಗವನ್ನು ನವಾಯಿಯಲಿ ಹೊಕ್ಕರು.

ಆ ಸಮಾರಂಭಕ್ಕೆ ದೇವಲೋಕದ ಮೂವತ್ತುಮೂರು ಕೋಟಿ ದೇವತೆಗಳೂ ದೇವಸ್ತ್ರೀಯರೂ ಬಂದರು. ವರತಿಲೋತ್ತಮೆ ರಂಭೆ .ಮಧುರಸ್ವರೆ ಘೃತಾಚಿ ಸುಕೇಶಿ ಗೌರೀಶ್ವರಿ ವರೂಥಿನಿ ಪೂರ್ವಚಿತ್ತಿ ಸುಲೇಖೆ, ಚಿತ್ರರಥಿ ಸುರಭಿಗಂಧಿನಿ ಚಾರುಮುಖಿ, ಸೌಂದರಿಯನಿಧಿ ಊರ್ವಶಿ ಸುಲೋಚನೆ ಸುರಸೆ ಎಲ್ಲರೂ ನೆರೆದರು. ಇಂದ್ರನ ಆಸ್ಥಾನವಲ್ಲವೇ: ಆ ದಿವ್ಯವಾದ್ಯ ಸುಗಾನ ನರ್ತನ ವಿಮಳ ತೌರ್ಯತ್ರಿಕದ ಮೇಳವದ, ಆ ನಿತಂಬಿನಿಯರ ಸುರೇಖಾಸ್ಥಾನಕದ :ನಿರುಗೆಯ ಸುಢಾಳದ ಸಮ್ಮೋಹನದ ತೂಕದ ಭಾವಭಂಗಿಗಳ" ಏನೆಂದು ವರ್ಣಿಸುವುದು. ದೇವಸ್ತ್ರೀಯರ ನರ್ತನಪ್ರಾರಂಭವಾಯಿತು. ರಂಭಾದಿಗಳ ಲಾಸ್ಯತಾಂಡವ ಹೊಸ ಹೊಸ ರೀತಿಯಲ್ಲಿ ಪ್ರಕಾಶಿತವಾಯಿತು. "ರಸದ ಸ್ಥಾಪನೆಯ, ಭಾವದ ಬೆಸುಗೆಗಳ, ಹಸ್ತಾಭಿನಯ ದೃಕ್ಪ್ರಸರಣದ ವರ ಸಾತ್ವಿಕಾಂಗಿಕ ಸುಗತಿ ವಿಭ್ರಮದ| ವಿಷಯ ಸಮಕರಣದ ಕಲಾಪದ|| ಕುಸುರಿಗಳ" ದೇಹವಿನ್ಯಾಸ, ದೇವತೆಗಳ ನಾಟ್ಯಕ್ಕೆ ಚಿರಪರಿಚಿತರಾದ ದೇವತೆಗಳನ್ನೇ, ಬೆರಗುಗೊಳಿಸಿತು. ಆಸ್ಥಾನವು ಗಾನನರ್ತನ ಸಮ್ಮೋಹದಲ್ಲಿ ಸೊಕ್ಕಿ ಒಂದು ವಿಧವಾದ ಮತ್ತಿನಿಂದ ತೂಗುತ್ತಿತ್ತು. ನರ್ತನವೂ ಗಾನವೂ ಒಂದರಲ್ಲಿ ಒಂದು ಸೇರಿಕೊಂಡಿತು. ಯಾವುದು ಗಾನ; ಯಾವುದು ನರ್ತನ, ಎಂದು ವಿಂಗಡಿಸುವುದಕ್ಕೇ ಅಸಾಧ್ಯವಾಯಿತು. ಗಾನರಸದಲಿ ಮುಳಗಿತಮರಾ ಸ್ಥಾನ ಎತ್ತಣ ವಾದ್ಯ ನರ್ತನ | ಗಾನನರ್ತನವೆನಲು ಸಮ್ಮೋಹಿಸಿತು ಘನವಾದ್ಯ | ಗಾನವಾದ್ಯ ವಿದೆತ್ತ ನೃತ್ಯರ ಸಾನುಭವ ಭಾರವಿಸಿತನ್ಯೋನ್ಯಾನು ರಂಜಕವಾಯ್ತು ತೌರ್ಯತ್ರಿಕದ ಮೇಳಾಪ"

ಅರ್ಜುನನು ರಾಜನಾದರೂ ಅಂತಹ ಶ್ರೇಷ್ಠ ಗಾನ ನರ್ತನವನ್ನು ನೋಡಿರಲಿಲ್ಲ. ಗಾನ ನರ್ತನದಿಂದ ತುಷ್ಟನಾದರೂ ಅರ್ಜುನನು ಧೈರ್ಯ

ಗೆಡಲಿಲ್ಲ, ಸಂಯಮವನ್ನು, ಕಳೆದುಕೊಳ್ಳಲಿಲ್ಲ. ಆ ಅಮಾನುಷ ನೃತ್ಯವಾದ್ಯ ಸುಗೇಯಃರಸದಲ್ಲಿ ಅವನು ಮುಳುಗಿದ್ದರೂ ಇಂದ್ರಿಯಗಳ ಮೇಲಣ ಹತೋಟಿ ಯನ್ನು ಬಿಡಲಿಲ್ಲ. ಊರ್ವಶಿಯನ್ನು ನೋಡಿದಾಗಲೂ ಅವನು ಧೈರ್ಯ ಶಿಖರ ದಲ್ಲಿಯೇ ಇದ್ದ. ಊರ್ವಶಿಯ ರೂಪು ಅವನ ಕಣ್ಣನ್ನು ಕೊರೈಸಿತು. ಆದರೆ ಆಕೆ ಊರ್ವಶಿ ಎಂಬುದು ಅವನಿಗೆ ತಿಳಿಯದು. "ಈ ಯುವತಿ ತಾನಾವಳೋ ಕುಸು ಮಾಯುಧನ ಖಂಡೆಯವಲಾ ಮಝುಮಾಯೆನುತೂರ್ವಶಿಯ ಎವೆಯಿಕ್ಕದೆ ನಿರೀಕ್ಷಿಸಿದ." ಅನಂತರ ಜಂಭಾರಿಯು ಪರಮ ಪ್ರೀತನಾಗಿ ಊರ್ವಶಿ ಮೇನಕೆ ರಂಭೆ ಗೌರಿ ಮೊದಲಾದ ಪಾತ್ರಗಳಿಗೆಲ್ಲಾ ಪಾರಖಾಣೆ (ಬಹುಮಾನ) ಯನ್ನಿತ್ತನು. ಅಮರ ನಾರಿಯರೂ ಸಮಸ್ತ ಅಮರರೂ ತಮ್ಮ ತಮ್ಮ ಬೀಡಾರಗಳಿಗೆ ನಡೆದರು. ಇಂದ್ರನ ಓಲಗ ಮುಕ್ತಾಯ ವಾಯಿತು. ಆರತಿ ಹರಿವಾಣಗಳೂ ಸೊಡರಸಾಲುಗಳೂ ಸುಳಿದವು. ಇಂದ್ರನು, ಮಗನನ್ನು ನಾನಾ ವಿಧವಾದ ಭೋಜನ ಔತಣಗಳಿಂದ ಸತ್ಕರಿಸಿ, ಮಲಗಿ ವಿಶ್ರಾಂತಿ ಹೊಂದಲು ಬೇರೆ ಮನೆಗೆ ಕಳುಹಿಸಿದನು.

ಇತ್ತ ಚಿತ್ರಸೇನನನ್ನು ಕರೆದು " ಇಷ್ಟು ಮಂದಿ ದೇವಸ್ತ್ರೀಯರಿದ್ದರೂ ಅರ್ಜುನನ ಮನಸ್ಸು ಊರ್ವಶಿಯ ಮೇಲೆ ಹೋಯಿತು. ಎವೆಯಿಕ್ಕದೆ ಆಕೆಯನ್ನೇ ಈಕ್ಷಿಸಿದ. ಆಕೆಯನ್ನು ಅರ್ಜುನನಲ್ಲಿಗೆ ಕಳುಹಿಸು" ಎಂದು ನೇಮಿಸಿದ. ಚಿತ್ರಸೇನನು ಊರ್ವಶಿಯ ಅರಮನೆಗೆ ಬಂದನು. ಆಕೆ ಮತ್ತೆ ಅಲಂಕಾರದಲ್ಲಿ ತೊಡಗಿದ್ದಳು. ದೇವಸ್ತ್ರೀಯರಿಗೆ ಅಲಂಕಾರಮಾಡಿಕೊಳ್ಳುವು ದರ ಹೊರತು ಇನ್ನೇನು ಕೆಲಸ? ಚಿತ್ರಸೇನ ಬಂದುದನ್ನು ಕೇಳಿ ಊರ್ವಶಿ ವಸ್ತ್ರಾಭರಣ ಪರಿಮಳ ಕತ್ತುರಿ ಕರ್ಪೂರ ತವಲಾಯಿಗಳನ್ನು ನೂಕಿದಳು. ಚಿತ್ರಸೇನನು ಊರ್ವಶಿಗೆ ಇಂದ್ರನ ಆಜ್ಞೆಯನ್ನು ಮುಟ್ಟಿಸಿದನು. "ನಮಗೆ ಅರ್ಜುನನು ಮಗನು. ಇಂದು ನೀನು ನನ್ನಸೊಸೆ. ಕುಚಯುಗದ ಕಾಂತಿ ಯಲ್ಲಿ ಅರ್ಜುನನ ಅಂತಸ್ತಿಮಿರವನ್ನು ಕಳೆ. ನೀನು ಕಮಲಮುಖಿ. ಆತನು ಭ್ರಮರ; ನೀನು ಸುರವನದ ಸಿರಿ—ಅರ್ಜುನನು ಮಧು ಸಮಯ"

ಇಂದ್ರನ ಸಂದೇಶವನ್ನು ಕೇಳಿ ಊರ್ವಶಿಗೆ ರೋಮಾಂಚವುಂಟಾಯಿತು. ಯಾವಾಗಲೂ ಆನಂದದಲ್ಲಿಯೇ ಇರುವ ದೇವತೆಗಳಿಗೆ ಆನಂದದ ಅಜೀರ್ಣ ವಾಗಿರುತ್ತದೆ. ಹೃದಯರಹಿತವಾದ ನೀರಸವಾದ ಗಾನನರ್ತನದಲ್ಲಿ ತೊಡಗಿ

ರುವ ದೇವತೆಗಳಿಗೆ, ಭೂಲೋಕದ ಮೇಲೆ ಆಸೆಯುಂಟಾಗುವುದು ಅಪರೂಪ ವಲ್ಲ. ಭೂಲೋಕದವರ ಮೇಲೆ ಆಶೆಯನ್ನು ತೋರಿಸಿ ದೇವತೆಗಳು ಶಾಪಕ್ಕೆ ಒಳಗಾದುದೂ ಉಂಟು. ಇಂದ್ರನಿಗೆ ಕೂಡ ಅಹಲ್ಯೆಯ ಪ್ರೇಮವನ್ನು ಜಯಿ ಸುವುದು ಸಾಧ್ಯವಾಗಲಿಲ್ಲ. ಅಷ್ಟದಿಕ್ಪಾಲಕರೂ ಸಹ ದಮಯಂತಿಗಾಗಿ ಭೂಲೋಕಕ್ಕೆ ಬಂದರೆಂದು ಹೇಳುತ್ತಾರೆ. ಹಿಂದೆ ಊರ್ವಶಿಗೇ ಮನುಷ್ಯನಾದ ಪುರೂರವನ ಅನುಭವವಿತ್ತು. ಚಿತ್ರಸೇನನ ಮಾತನ್ನು ಕೇಳಿ ಊರ್ವಶಿಗೆ "ಝೋಂಪಿಸಿತು ಪುಳಕಾಳಿ, ಭಯವನು ಪಂಟಿಸಿದುದು ಅನುರಾಗದ ಅಭಿ ಮಾನ" ಆದರೆ ಮೇಲೆ ಮೇಲಿನ ಅಭಿಲಾಷೆಯಿಂದ ಧೈರ್ಯಗೊಂಡು ಪರಿ ತೋಷದಲ್ಲಿ ಮುಳುಗಿದ್ದಳು. ಆಗಲಿ ಎಂದು ಶಿರವನ್ನು ನಸುಬಾಗಿದಳು. ಈ ಸಂದರ್ಭದಲ್ಲಿ ಚಿತ್ರಸೇನನು ಒಂದು ಎಚ್ಚರಿಕೆಯ ಮಾತನ್ನು ಹೇಳಿದ ನೆಂದೇ ಹೇಳಬೇಕು. ಇಂದ್ರನು ಊರ್ವಶಿಗೆ ಅಪ್ಪಣೆಮಾಡಿದರೂ, ಅರ್ಜುನನು ತನಗೆ ಬಂದ ವೈಭವವನ್ನು ಆನಂದದಿಂದ ಎದುರುಗೊಳ್ಳುವನೇ ಎಂಬ ಸಂಶಯ ಚಿತ್ರಸೇನನಿಗೆ ಇದ್ದಿರಬೇಕು. ಆತನು " ಅರ್ಜುನನು ಉತ್ತಮ ನಾಯಕನು, ನೀನು ಸುರಲೋಕದಲ್ಲಿ ವಿಖ್ಯಾತ ನಾಯಿಕೆ. ನಾವೆಲ್ಲ ನಿಮ್ಮ ಪರಿವಾರ; ಲಜ್ಜೆ ಏಕೆ? ಒಂದು ಪಕ್ಷ ಸೋತರೂ ಕೂಡ ನಿಮಗೆ ಭಂಗವಿಲ್ಲ. ನಳ ನಹುಷ ಭರತ ಯಯಾತಿ ನೃಪರೊಳಗೆ ಈತನು ಅಗ್ಗಳಿಯನು" ಎಂದನು. ಊರ್ವಶಿಯು "ಇಂದ್ರನ ಮಾತಿಗಿಂತ ನಿನ್ನ ಮಾತು ಮನೋಹರವಾಗಿದೆ" ಎಂದು ಹೇಳಿ ಅವನನ್ನು ಬೀಳ್ಕೊಟ್ಟಳು.

ಅರ್ಜುನನ ಕಣ್ಣಿಗೆ ಹಬ್ಬವನ್ನುಂಟುಮಾಡುವ ಉದ್ದೇಶದಿಂದ ಊರ್ವಶಿಯು ಸರ್ವಾಲಂಕಾರ ಭೂಷಿತಳಾದಳು. ಸಹಸ್ರ ಸಂಖೆಯ ಕೇಳ ಮೇಳದ ಸತಿಯರನ್ನು ಕರೆಸಿದಳು . ಆ ಕಮಲಲೋಚನೆ ಮಜ್ಜನಮಾಡಿ ಅಮಲದುಕೂಲವನುಟ್ಟು ವಿವಿಧ ರತ್ನಾಭರಣ ಶೋಭೆಯಲ್ಲಿ ಎಸೆದಳು. ಸಖಿಯರು ನಾನಾ ವಾಸನೆಗಳ ಕುಸುಮಗಳ ಮೊಗ್ಗುಗಳಲ್ಲಿಯೂ ಅನುಲೇಪ ಗಳಲ್ಲಿಯೂ ಸಿರಿಮುಡಿಯ ಸಿಂಗರಿಸಿದರು. ತಿಗುರು ಗೆಲಿದಳು; ತೆತ್ತಿಗರು ತಿಲಕವನು ಅಲಂಕರಿಸಿದರು, ಹೊಳಹಿನ ಹೊಗರ ಹೊಸ ಜವ್ವನದ ಜೋಡಿಯ ಜಾಡಿಯಿಮ್ಮಡಿಸೆ. ಆಗ ಆಕೆಯ ರೂಪವು ಅದ್ಭುತವಾಯಿತು. ಉಗಿದೊರೆಯ ಕೊರಲಗೋ, ಧಾರೆಯಮಿಗೆ ಹಿಡಿದ ಖಂಡೆಯವೋ,

ಕಾಮನ ಹಗೆಗೆ ಹುಟ್ಟಿದಧೂಮಕೇತವೋ; ಪರಿಮಳದ ಪುತ್ತಳಿಯೋ, ಚಲುವಿನ ಕರುವಿನೆರಕವೊ, ವಿಟರ ಪುಣ್ಯದ ಪರಿಣತೆಯೊ, ಕಾಮುಕರ ಭಾಗ್ಯತರು ಫಲವೋ, ಸ್ಮರನ ವಿಜಯ ಧ್ವಜವೋ, ಮನ್ಮಥ ಪರಮಶಾಸ್ತ್ರದ ಮೂಲ ಮಂತ್ರವೊ, ಸುರಸತಿಯರಧಿದೇವತೆಯೋ; ಲೋಕವಶ್ಯದ ತಿಲಕವೊ, ಜಗದೇಕ ರತ್ನವೊ, ವಿಗಡ ಮುನಿ ಚಿತ್ತಾಕರುಷಣದ ಮಂತ್ರವೊ, ಋಷಿ ತಪಃಫಲವೋ, ಲೋಕ ಸೌಂದರ್ಯೈಕ ಸರ್ಗವೊ, ನಾಕಸುಖಸಾಕಾರವೋ. ರೂಪೈಕ ತಾಣವೋ.

ಊರ್ವಶಿಯು ಜತೆಯಲ್ಲಿ ಅವಳ ಸಹಸ್ರಾರು ಸಖಿಯರು ಅಂಗವಟ್ಟದ ಪರಿಮಳದ ಮುತ್ತಿಗೆಯ ತುಂಬಿಯ ತೆರಳಿಕೆಯ ಕತ್ತಲೆಯ ಕೆದರುವ ಕಣ್ಣ ಬೆಳಗುಗಳ, ಪರಿಪರಿಯ ಹೊಂದೊಡಿಗೆಗಳ, ಪರಿಪರಿಗಳುಡುಗೆಯ, ದೇಶಿ ಮಿಗೆ ಪರಿಪರಿಯ ಮುಡಿಗಳ ಮುಗುದೆಯರು, ಹೆಗಲ ಹಡಪದ ಹಿಡಿದ ಮುಕರಾಳಿಗಳ ಚಿಮ್ಮುವ ಸೀಗುರಿಯ ಹಾವುಗೆಯ ಹೇಮ ನಿಬಂಧ ಕಳಶದ ತಾಳವೃಂತಕದ, ಮುಗುದೆಯರು, ಮನುಮಥನ ಮೊನೆಯಾಳುಗಳು, ಮುಸುಕಿತು ಮಾನಿನಿಯ ದಂಡಿಗೆಯ ಮೈಕಾಂತಿಗಳ ಮೂವಾಳಿ ಲಹರಿಯಲಿ— ಹೀಗೆ ಊರ್ವಶಿ ಹೊರಟುದದನ್ನು ಕಂಡು ದೇವತೆಗಳಿಗೆಲ್ಲಾ ಆಶ್ಚರ್ಯವಾಯಿತು. ಎಂತಹವರಿಗೂ ಊರ್ವಶಿಯ ದರ್ಶನ ದುರ್ಲಭ, ಊರ್ವಶಿ ಇರಲಿ ಊರ್ವಶಿಯ ಸೇವಕಿಯರ ದರ್ಶನವೂ ಸಹ ಸೋಮಯಾಜಿಗಳಿಗೆ ಲಭಿಸದು. "ಧರಣಿಪತಿ ಕೇಳಿವರ ತೊತ್ತಿರಹೊರಗೆಲಸದವದಿರ ಪಸಾಯಿತೆಯರಿಗೆ ಪಡಿಗವ ನೀಡಸಲ್ಲರು ಸೋಮಯಾಜಿಗಳು; ವರುಣಸೂನು ಜಯಂತ ನಳಕೂಬರರು ಸಮಯವನೊಮ್ಮೆ ಕಾಣದೆ ವರುಷ ವೋಲೈಸುವರು ಸೌಧದ ದಾರವಟ್ಟದಲಿ" ಊರ್ವಶಿಯ ತೊತ್ತುಗಳ ಮಹಿಮೆ ಹೀಗಿರಬೇಕಾದರೆ ಇನ್ನು ಊರ್ವಶಿಯ ಮಹಿಮೆ ಹೇಗಿರಬೇಕು. ಆಕೆ ಹುಡುಕಿಕೊಂಡು ಬರುವ ಅರ್ಜುನನ ಪುಣ್ಯವೋ "ತುರಗ ಮೇಧದ ರಾಜಸೂಯದ ವರಮಹಾಕ್ರತುಕಾರರೀಕೆಯ ಚರಣದುಂಗುಟತುದಿಯ ಕಾಂಬರೆ ಪೂತು ಫಲುಗುಣನ, ಪರಮ ಪುಣ್ಯವದೇನು ತಾಸಿದ್ದ ರಮನೆಗೆ ಸತಿ ಬಂದಳೇನಚ್ಚರಿಯೆನುತ ಹೊಗಳಿದರು ಮಾಗಧರಿಂದ್ರನಂದನನ."

ಊರ್ವಶಿಯನ್ನು ವರ್ಣಿಸಿ ಕುಮಾರವ್ಯಾಸ ತಣಿಯ. ಜನಮನದ

ಸಂಕಲಿವನೆಯೋ, ಲೋಚನಮೃಗದ ತಡವೇಟಕಾತಿಯೋ, ಮನುಮಥನ ಸಂಜೀವನೌಷಧಿಯೋ, ಮನಸಿಜನ ಮಾರಾಂಕ ಕಾಮುಕಜನದ ಜೀವಾರ್ಥಕ್ಕೆ ವಿಭು. ಊರ್ವಶಿಯ ಕೆಳದಿಯರ "ಮೆಲುನುಡಿಗೆ ಗಿಣಿಹೊದ್ದಿದವು, ಸರದುಲಿಗೆ ಕೊಗಿಲೆಯೌಕಿದುವು, ಪರಿಮಳದ ಪಸರಕೆ ತೂಳಿದುವು ತುಂಬಿಗಳು ಡೊಂಬಿಯಲಿ; ಹೊಳೆವ ಮುಖಕೆ ಚಕೋರ ಚಯವಿಟ್ಟಳಿಸಿದುವು, ನೇವುರದ ಬೊಬ್ಬೆಗೆ ಸಿಲುಕಿದವು ಹಂಸೆಗಳು. ಆ ಸಖಿಯರ ಮುಂಗುಡಿಯು "ಅಲರ್ದ ಪೊಂದಾವರೆಯ ಹಂತಿಯೊ, ತಳಿತ ಮಾವಿನ ಬನವೊ, ಮಿಗೆ ಕತ್ತಲಿಪ ಬಹಳ ತಮಾಲ ಕಾನನವೊ, ದಿಗಂತದಲಿ ಹೊಳೆವ ವಿದ್ರುಮವನವೊ, ಕುಸುಮೋಜ್ಜ್ವಲಿತ ಕೇತಕಿದಳವೊ, ರಂಭಾವಳಿಯೊ ಕಾಂತಾಜನವೋ" ಎಂಬಂತಿತ್ತು. ಊರ್ವಶಿಯ ಬರವನ್ನು ಕವಿ ಬಹಳ ವಿಚಿತ್ರವಾಗಿ ವರ್ಣಿಸಿದ್ದಾನೆ. ಊರ್ವಶಿ, ಬಳ್ಳಿ ಮಿಂಚಿನ ಮಂದೆಯಲಿ ಮುರಿಮುಗಿಲು ಇಳಿವಂತೆ ಇಳಿದಳು. ಸತಿಯರು ಮುಂದೆ ಪಾಯವಧಾರು ಎಂದು ದಾರಿಬಿಡಿಸಿದರು. ಅವರ ಸಿಂಜಾರವದ ಸೊಗಸಿಂದ ಶಬ್ದ ಬ್ರಹ್ಮ ಸೋತುದು. ಸೋಗೆಗಣ್ಣ ಬಲೆಯರು ಬಾಗಿಲಲಿ ನಿಂದರು. ಆ ಗರುವೆ (ಊರ್ವಶಿ) ಅರ್ಜುನನ ಶಯ್ಯಾಗಾರವನ್ನು ಹೊಕ್ಕಳು. "ಮಹಾಹಿಯ ಭೋಗ ತಲ್ಪದ ಹರಿಯೊಲಿಹ ಶತಯಾಗ ಸುತನನು ಮಣಿಮಯ ಮಂಚವಲಿ ಕಂಡಳು."

ಅರ್ಜುನದೇವ, ಸುಖವಾಗಿ ಅರ್ಧನಿದ್ರೆ ಅರ್ಧಎಚ್ಚರದಲ್ಲಿ ದೇವೇಂದ್ರನ ಆಸ್ಥಾನದ ಗಾನ ನರ್ತನ ರಾಮಣೀಯಕದ ವೈಭವವನ್ನು ನೆನೆಯುತ್ತಾ ಮಲಗಿದ್ದನು. ಊರ್ವಶಿಯು ಒಳಕ್ಕೆ ಬಂದುದರಿಂದ ಒಂದು ಜ್ಯೋತಿ ನೆಲೆ ಬಂದಂತಾಯಿತು. ಆಕೆ ಧರಿಸಿದ್ದ ಭೂಷಾಮಣಿಗಳು ದೀಪಾಂಶುಗಳನ್ನು ಮುಕ್ಕುಳಿಸಿದವು. ಕಡೆಗಣ್ಣುಗಳು ಇಂದೂಪಳದ ಭಿತ್ತಿಯ ಬೆಳಗನ್ನು ಅಣಕಿಸಿದುವು; ದೇಹಕಾಂತಿ ಎಲ್ಲೆಲ್ಲಿಯೂ ಪಸರಿಸುದುದು. ಆಕೆ ಗೆಳತಿಯರ ಕಂಠದಲ್ಲಿ ಕೈ ಗಳನ್ನು ಇಳುಹಿ ನಿಂದಳು. ನಿದ್ರಿಸುತ್ತಿದ್ದ ಅರ್ಜುನದೇವನ ಅಂಗೋಪಾಂಗದಲ್ಲಿ ಕಣ್ಮನವ ಹರಹಿದಳು. ಆಕೆಯ ಮುಖಚಂದ್ರಮನ ತಂಬೆಳಗು, ಸಾರತರ ಪರಿಮಳದ ಪೂರದಲಿ, ತಳತಳಿಸಿ ಎಳೆಯ ಬೆಳದಿಂಗಳಂತೆ ಸುಳಿಯಿತು. ಆ ಕರಣಾವಳಿಯ ಪರಮ ಪ್ರೀತಿರಸದ ಭಾರದಲ್ಲಿ ಪಾರ್ಥನು ಎಚ್ಚೆತ್ತನು. ಈ ಅಘಾಟದ ಪರಿಮಳ ವೆತ್ತಣದೆನುತ ಮೈಮುರಿದು

ಪಾರ್ಥನು ಕಣ್ಣ ತೆರೆದನು. "ಕರಣ ಲಹರಿಯ ದಿವ್ಯ ರತ್ನಾಭರಣ ರುಚಿರ ಪ್ರಭಾಪಂಜರದೊಳಗೆ ಹೊಳೆವ ಮದನಾಲಸೆಯ ಊರ್ವಶಿಯ ಕಂಡನು."

ಊರ್ವಶಿಯನ್ನು ನೋಡಿದಕೂಡಲೇ ಅರ್ಜುನನಿಗೆ ಆನಂದ ಸಂಭ್ರಮ ಗಳುಂಟಾದವು. "ಹಾ ಮಹಾದೇವಿಯರಲ, ಸುತ್ರಾಮನ ಓಲಗದೊಳಗೆ ನರ್ತನ ರಾಮಣೀಯಕತೆಯಲಿ ರಂಜಿಸಿದಳಾ ಮಹಾಸಭೆಯ" ಅಷ್ಟೇ ಅಲ್ಲ, ನಿರಾಮಯದ ಶಶಿವಂಶಜನನಿ ಈ ಮಹಿಳೆ ಅಭಿವಂದನಿಯೆ" ಎಂದು ಅರ್ಜುನ ದೇವನು ಮಣಿಮಯ ಮಂಚದಿಂದ ಇಳಿದನು. "ಏನು ಬಿಜಯಂ ಗೈದಿರಿ ತ್ರಲು ಮಾನನಿಧಿ ಕುಳ್ಳಿರಿ, ಸುರೇಂದ್ರನ ಮಾನಿನಿಯರು ಅಭಿವಂದ ನೀಯರು ನಾವು ಕೃತಾರ್ಥರು. ನಾನು ನಿಮ್ಮ ಮಗನು. ಏನು ಅಪ್ಪಣೆ ಬೆಸೆಸಿ" ಎಂದನು. ಆ ವಿಧವಾದ ವಿಟಧರ್ಮ ಊರ್ವಶಿಗೆ ಅಪರೂಪ ವಾಗಿತ್ತು. ವಿಟನು ಪ್ರೇಯಸಿಗೆ "ಆನು ನಿಮಗೆ ಮಗನು, ಬೆಸಸಿ" ಎಂದು ಹೇಳುವುದಿಲ್ಲ. ಈ ವಿಟಧರ್ಮದ ಅಳವನ್ನರಿಯವುದೇ ಊರ್ವಶಿಗೆ ಕಷ್ಟ ವಾಯಿತು. ಆಕೆ ವಿವಿಧಾನುಭಾವದ ರಸದ ಭಂಗಿಯಲ್ಲಿ ಮಿಡುಮಿಡುಕಿದಳು. ಅರ್ಜುನನ ನುಡಿಗೆ ಬೆರಗಾದಳು, ಮನೋಜನ ಸಡಗರಕೆ ತೆಕ್ಕಿದಳು, ಪಾರ್ಥನ ನಡೆವಳಿಗೆ ಮೆಚ್ಚಿದಳು, ಅಂಗಜಾಸ್ತ್ರಕ್ಕೆ ಬೆಚ್ಚಿದಳು, ಖಾತಿಯಲಿ ಕಡುಗಿದಳು. ಲಜ್ಜೆಯ ಬಿಡೆಯದಲಿ ಭಯಗೊಂಡಳು. ನಾನು ಇಂತಹ, ಕೆಲಸವನ್ನು ಒಪ್ಪಿಕೊಳ್ಳಬಹುದೆ? ಚಿತ್ರಸೇನನು ಯಾಕೆ ಬಂದು ಹೇಳಿದನೋ, ನಾನು ಯಾಕೆ ಒಪ್ಪಿದೆನೋ, ಕಾಮನೆಂಬ ಕಾಕು ಮೂಳಗೆ ಯಾಕೆ ಕೋಳು ಹೋದೆನೊ? ಅಯ್ಯೋ, ಪ್ರೇಯಸಿ ಬಂದಾಗ ಅಪ್ಪಿ ಮುತ್ತಿಡುವುದು ತಿಳಿಯದ "ಲೋಕವರ್ತಕ ವಲ್ಲದಿವನ ವಿಧಿ ಏಕೆ ನಿರ್ಮಿಸಿದನೋ, ನಾನೇಕೆ ನರನೇಕೆ" ಎಂದು ಸುಯ್ಯು ಬ್ರಹ್ಮನನ್ನೇ ಬೈದಳು. ಅರ್ಜುನನ ಸ್ವಭಾವ ಊರ್ವಶಿಗೆ ವಿಚಿತ್ರವಾಗಿ ಕಂಡಿತು. ಇವನು "ವಿಕಳಮತಿಯೋ, ನಪುಂಸ ಕನೋ, ಜಡನೋ, ಶ್ರೋತ್ರಿಯನೋ, ಬಾಧಕನೋ, ಖಳನೋ, ಖೂಳನೋ" ಎಂದು ಯೋಚಿಸಿದಳು. ಅಥವ "ದೇವಲೋಕಕ್ಕೆ ಬಂದ ಮಾನವವಿಚಾರವಿದೋ". ಊರ್ವಶಿಯನ್ನು ಅರ್ಜುನನ ಹಾಗೆ ಇದುವರೆಗೆ ಯಾರೂ ತಿರಸ್ಕರಿಸಿರಲಿಲ್ಲ. ತಪಸ್ಸನ್ನುಮಾಡಿದ ದೇವ ದೈತ್ಯರು ಮಣಿಕಿರೀಟ ಸಹಿತವಾದ ತಲೆಗಳನ್ನು ಆಕೆಯ ಎಡಗಾಲಿನ ಮೇಲಿಟ್ಟು ಪೂಜಿಸುತ್ತಿದ್ದರು.

ಅಂತಹ ನನಗೆ ಇಂತಹ ಅವಮಾನವೆ? ಅಕಟ ಕೆಟ್ಟೆನಲಾ! ಎಂದು ಕೊರಗಿದಳು ನಳಿನಾಕ್ಷಿ. "ಎಲೆವೊ, ಚಿತ್ರಸೇನನು ಇಂದ್ರನ ಮಾತಿನಂತೆ ನನ್ನನ್ನು ಇಲ್ಲಿಗೆ ಅಟ್ಟಿದನು. ಕಾಮಶರಗಳು ನನ್ನಲ್ಲಿ ನೆಟ್ಟಿವೆ. ತಾವಾಗಿಯೇ ಪ್ರೀತಿಸಿ ಬಂದ ಪ್ರೇಯಸಿಯರನ್ನು ಅಲ್ಲಗೆಳೆಯುವುದು ವಿಟಧರ್ಮವೇ? ನಾನಾರೆಂಬುದು ನಿನಗೆ ಗೊತ್ತೆ? ಎಂದು ಊರ್ವಶಿ ಗದ್ದರಿಸಿದಳು.

ದೇವಲೋಕದ ಸ್ತ್ರೀಯರಿಂದ, ಆ ಬಗೆಯ ಮಾತು ಅರ್ಜುನ ದೇವನಿಗೂ ಆಶ್ಚರ್ಯವಾಗಿ ಕಂಡಿತು. ದೇವತೆಗಳೆಂದರೆ ಮನುಷ್ಯರಿಗೆ ಪ್ರೀತಿ ಗೌರವ ಭಯ. ಅವರ ಬಾಯಲ್ಲಿ ಈ ಮಾತೆ? "ಶಿವಶಿವ, ಕಾಮನ ಭವಣಿಯಲಿ ನೀವರಿಯದಿರೆ ನಾವು ಅರಿಯೆವೆ?" ಇಂದ್ರನು ಏನಾದರೂ ಹೇಳಿರಲಿ, ಚಿತ್ರಸೇನ ಏನಾದರೂ ಹೇಳಿರಲಿ, ಅಕರ್ತವ್ಯದಲಿ ನನ್ನ ಮನಸ್ಸು ಹೋದೀತೆ? ನೀವು ನಮ್ಮ ವಂಶೋದ್ಭವಕೆ ಜನನಿಯಲ್ಲವೆ? ನಮ್ಮ ವಂಶದವನಾದ ಪುರೂರವನಿಗೆ ನೀನು ಸತಿಯಾಗಿ, ನಿನಗೆ ಆಯು ಜನಿಸಿಲ್ಲವೆ? ಅನಂತರ ನಹುಷನೇ ಮೊದಲಾದವರ ಪರಂಪರೆಯಲ್ಲಿ ನಾವು ಜನಿಸಿದೆವು. ಅದೂ ಇರಲಿ, ಇಂದ್ರನಾಗಲಿ-ಚಿತ್ರಸೇನನಾಗಲಿ ನನ್ನನ್ನು ವಿಚಾರಿಸಲಿಲ್ಲವಲ್ಲ" ಎಂದನು. ಊರ್ವಶಿಗೆ ಅರ್ಜುನನ ಮಾತು ಅರ್ಥರಹಿತವಾಗಿ ತೋರಿತು. "ಇದೇನು ನಿನ್ನ ವೇದಾಂತ? ಗಣಿಕೆಯರ ಮನೆಯಲ್ಲಿ ಇದಾವ ಪ್ರಣವದರ್ಥ ರತಿಕೇಳೀ ವಿಧಾನದಲಿ; ದೇವಲೋಕದಲ್ಲಿ, ನಿನ್ನ ಬಣಗುಭಾರತ ವಸುಷದ ಓಬಿರಾಯನ ಕಾಲದ ನಿಬಂಧವೆಲ್ಲ ಯಾಕೆ? ದೇವಲೋಕದಲ್ಲಿ ಆ ಬಾಂಧವ್ಯಗಳಿಗೆಲ್ಲ ಬೆಲೆ ಇಲ್ಲ,

ಅಯ್ಯ ನಯ್ಯನ ನಿಮ್ಮವರ ಮು
ತ್ತಯ್ಯ ನಾತನ ಭಾವ ಮೈದುನ
ನಯ್ಯ ನಗ್ರಜ ರನುಜರೆಂಬೀ ಜ್ಞಾತಿ ಬಾಂಧವರ
ಕೈಯುಲರಿಗಳ ಹೊಯ್ದು ಸಿರ ನರ
ಮುಯ್ಯಲಾಡಿದವರ್ಗೆ ಮೇಣ್ಮಖ
ಮಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ

ಪುರುವಿಗೂ ನಾನೇ ಹೆಂಡತಿ. ಅವನ ಮಗ ಆಯುವಿಗೂ ನಾನೇ ಹೆಂಡತಿ, ಅವನ ಮಗ ನಹುಷನಿಗೂ ನಾನೇ ಹೆಂಡತಿ; ಶತ್ರುಗಳನ್ನು ಹೊಡೆದು

ರಣದಲ್ಲಿ ಉಯ್ಯಾಲೆಯಾಡಿದವರಿಗೆಲ್ಲಾ ಯಜ್ಞ ಮಾಡಿದವರಿಗೆಲ್ಲಾ ನಾನೇ ಹೆಂಡತಿ" ಎಂದಳು ಊರ್ವಶಿ. "ಅಯ್ಯ ಅರ್ಜುನ ಆ ಮಾತೆಲ್ಲ ಏಕೆ? ಮಾನಿನಿಯರ ಇಚ್ಛೆಯನ್ನು ಅರಿಯದವನು, ಸುರೇಂದ್ರನಾಗಿರಲಿ, ಚಂದ್ರನಾಗಿರಲಿ ಕುರಿ. ನೀನು ಖೂಳ. ನನ್ನ ಮಾತನ್ನು ಹೇಗೆ ಅರಿಯುವೆ" ಎಂದು ಗದರಿಸಿದಳು. ಅರ್ಜುನನಿಗೆ ಪೀಕಲಾಟಕ್ಕೆ ಬಂತು. ಅವನು ನಡುನಡುಗಿ ಮತ್ತೆ ಕೈಮುಗಿದನು, ಕಾಲಿಗೆ ಬಿದ್ದನು "ಇದು ಮನುಷ್ಯ ಶರೀರ. ಅವ್ಯಭಿಚಾರ, ಮನುಷ್ಯ ಶರೀರದ ಲಕ್ಷಣ. ಈ ದೇಹದ ಅವಸಾನದವರೆಗೆ ಹಾಗೆಯೇ ನಡೆಯಬೇಕು. ಅನಂತರ ದೇವಲೋಕಕ್ಕೆ ಬಂದರೆ ದೇವತೆಗಳ ಮಾರ್ಗದಲ್ಲಿ ನಡೆಯಬಹುದು. ದೇವತಾ ದೇಹದಲ್ಲಿ ಬಲವು ಹೆಚ್ಚು" ಎಂದನು. ಅರ್ಜುನನು ಧರ್ಮದ ಮೇಲೆ ಉಪನ್ಯಾಸ ತೆಗೆದುದನ್ನು ನೋಡಿ ಊರ್ವಶಿಗೆ ಕೋಪ ಬಂತು, ನಗುವೂ ಬಂತು. "ಹೌದು, ಶ್ರುತಿ ಸ್ಮೃತಿಗಳ ಮಾರ್ಗದಲ್ಲಿ ನಿಮ್ಮದೇ ಆದರ್ಶವಲ್ಲವೆ? ಇದು ಮೂರು ಲೋಕಕ್ಕೂ ಗೊತ್ತು. ಒಬ್ಬ ಹೆಣ್ಣಿಗೆ ಐವರು ಗಂಡಂದಿರು ಇದ್ದೀರಿ. ಹರಹರ! ಇಲ್ಲಿ ಬಂದು ನಮ್ಮಲ್ಲಿ ಈ ನಿಸ್ಪೃಹತೆ ತೋರಿಸುತ್ತಿದ್ದೀರಿ" ಎಂದು ಗರ್ಜಿಸಿದಳು. ಪಾಪ, ಹೆಣ್ಣಿಗೆ ಮಾತಿಗೆ ಮಾತು ಕೊಡುವುದು ಅರ್ಜುನನಿಗೂ ಕಷ್ಟವಾಯಿತು "ತಾಯಿಯ ಮಾತಿನಿಂದ ಕಮಲಾಯತಾಕ್ಷಿಯ ಕೂಟ ಐವರಿಗಾಯಿತು. ತಪ್ಪೇನು? ಜನನಿಯ ನುಡಿಯ ಲಂಘ್ಯವಲೆ? ಕಾಯಸುಖಕೆ, ಕಾಮ ಸುಖದ ವಿಡಾಯತತುವಕೆ ಬಿದ್ದು ನರಕಕೆ ಬೀಳುವುದಿಲ್ಲ" ಎಂದನು. ಊರ್ವಶಿಯು "ಹೌದು. ನಿಮ್ಮ ತಾಯಿ ಹೇಳಿದುದರಿಂದ ಅದು ದೋಷವಲ್ಲ. ಅಲ್ಲವೆ? ಹಾಗಾದರೆ ಇಂದ್ರನು ನಿಮ್ಮ ತಂದೆಯಲ್ಲವೆ? ಅವನ ಮಾತಿನಂತೆ ಬಂದೆ. ಅವನ ಮಾತನ್ನು ಉಲ್ಲಂಘಿಸುವೆಯ?" ಎಂದಳು.

ಈ ವಾದದಿಂದ ಊರ್ವಶಿಗೆ ಬೇಸರಿಕೆಯಾಯಿತು. ಅವಳ ಅನುಭವದಲ್ಲಿ ಇಂತಹ ಪ್ರಸಂಗ ಬಂದೇ ಇರಲಿಲ್ಲ. ಮನ್ಮಥನ ಕೈಗೆ ಸಿಲುಕಿದವಳು ದೇವಸ್ತ್ರೀಯಾದರೆ ತಾನೆ ಏನು ? ಅವಳ ದೈನ್ಯವಿಕಾರ ಕರುಣಾಜನಕವಾದುದು. ಊರ್ವಶಿ ಮತ್ತೆ ವಿನಯವಾಂತಳು "ಈ ಕುಸುಮಾಯುಧನ ಕಗ್ಗೊಲೆಯ ಕೆದರುವ ಉಪಾಯವನು ನೀ ಬಲ್ಲೆ. ನಾವು ಹೆಚ್ಚು ಮಾತನಾಡಿದರೆ ದೇವಲೋಕದ ಸ್ತ್ರೀಯರು ಗಳಹೆಯರು ಎನ್ನುವೆ. ಆದರೆ ಮನ್ಮಥನು ಖಳನು.

ಸರಸಿಜದ ಮಧು, ಮಧುಕರನನು
ಕರಿಸಿದೊಡೆ ಚಂದ್ರಿಕೆ ಚಕೋರನ
ವರಿಸಿದರೆ ನಿಧಿಲಕ್ಷ್ಮಿ ಸುಳಿದರೆ ನಯನ ವೀಥಿಯಲಿ
ಗರುವೆಯರು ಮೇಲಿಕ್ಕಿ ಪುರುಷನ
ನರಸಿದರೆ ಜಾರುವರೆ, ಸುಡಲಾ
ಸರಸಿಜವನಾ ಚಂದ್ರಿಕೆಯನಾ ನಿಧಿಯ ನಾವಧುವ

ಕಮಲದಲ್ಲಿರುವ ಮಧು ದುಂಬಿಯನ್ನು ಹುಡುಕಿಕೊಂಡು ಹೋಯಿತೆನ್ನೋಣ. ಚಂದ್ರಿಕೆಯೇ ಚಕೋರನ ಹಿಂದೆ ಹೋಯಿತೆನ್ನೋಣ. ಬಡವನ ಮುಂದೆ ಭಾಗ್ಯಲಕ್ಷ್ಮಿ ತಾನಾಗಿಯೇ ಬಂದಳು ಎನ್ನೋಣ. ಗರುವೆಯರು ಪುರುಷನನ್ನು ಹುಡುಕಿಕೊಂಡು ಬಂದರು ಎನ್ನೋಣ. ಆಗ ಆ ದುಂಬಿಯು ಮಧುವನ್ನೂ, ಚಕೋರನು ಚಂದ್ರಿಕೆಯನ್ನೂ, ಬಡವನು ನಿಧಿಯನ್ನೂ, ಪುರುಷನು ವಧುವನ್ನೂ ಬೇಡ ಎಂದು ಜಾರಿದರೆ, ಆ ಸರಸಿಜವನ್ನೂ ಚಂದ್ರಿಕೆಯನ್ನೂ ಆ ನಿಧಿಯನ್ನೂ ಆ ವಧುವನ್ನೂ ಸುಡಬೇಕಲ್ಲವೆ?

ಕಾಮ ವಿಕಾರದಿಂದ ಊರ್ವಶಿ ಬೆಂಡಾದಳು. ಕಾಮುಕ್ಕೆ ಸಿಲುಕದವನೇ ಧನ್ಯ. ಅರ್ಜುನನಿಗೆ "ನಿಷ್ಕರುಣಿ ನೀನು. ಸೌಭಾಗ್ಯ ಗರ್ವದಲ್ಲಿದ್ದಿಯೆ" ಎಂದಳು. ಕಾಮವಿಕಾರಕ್ಕೆ ಸಿಕ್ಕದುದೇ ಅವನ ಸೌಭಾಗ್ಯವಾಯಿತು. ಊರ್ವಶಿಗೆ ಅದು ದೇವಲೋಕದ ತನ್ನ ಎಲ್ಲಾ ಇಂದ್ರಭೋಗಕ್ಕಿಂತಲೂ ಹೆಚ್ಚಿನ ಭಾಗ್ಯವಾಗಿ ಕಂಡಿತು. ಊರ್ವಶಿಯ ಈ ದೈನ್ಯಾವಸ್ಥೆಯಿಂದ ಅರ್ಜುನನಿಗೂ ಕನಿಕರವುಂಟಾಯಿತು "ಕಾಡಬೇಡಿ. ನಿಮ್ಮೊಡನೆ ಚರ್ಚೆ ಮಾಡಲಾರೆನು. ಧೈರ್ಯ ಗೊಳ್ಳಿ. ಕಾಮನಶರ ನಾಟುವುದಿಲ್ಲ. ಇದರಲ್ಲಿ ನಿಮಗೆ ಅವಮಾನವಿಲ್ಲ. ತಾಯಿ, ಮಕ್ಕಳನ್ನು ನೋಡುವುದಕ್ಕೆ ಬಂದಂತಾಯಿತು. ಬೇರೆ ಏನೂ ಇಲ್ಲ, ಬಲ್ಲವರು ಬಿಜಯಂಗೈಯ್ಯಿರಿ" ಎಂದ.

ಕುಮಾರವ್ಯಾಸನು ಕಾಮವಿಕಾರಕ್ಕೊಳಗಾದ ಊರ್ವಶಿಯ ಸರ್ವಾವಸ್ಥೆಗಳನ್ನೂ ಇಲ್ಲಿ ವರ್ಣಿಸಿದ್ದಾನೆ. ಅರ್ಜುನನ ಮಾತಿನಿಂದ ಊರ್ವಶಿ ಕುಪಿತಳಾದಳು. "ರೋಷ ವೆರಡೆಲೆಯಾಯ್ತು; ಲಜ್ಜೆಯ ಮೀಸಲಳಿದುದು, ಬಲುವಿಧದ ಬಹುವಾಸಿಗಳು ಪಲ್ಲವಿಸಿದವು, ಅನುತಾಪ ತಲ್ಲೈಸಿತು, ಆಸೆ ಪೈಸರವೋಯ್ತು, ಸುಯ್ಲಿನಲಿ ಕಡುರ್ಝಳ ಸೂಸಿದುದು, ಕಂಗಳು ಹೆಕ್ಕಳಿಸಿ

ಕೇಸರಿಯ ಮುಕ್ಕುಳಿಸಿದವು." ಕೋಪದಿಂದ ಮುಖವಿಕಾರವಾಗುತ್ತದೆ "ಮುಖೇಂದು ಸೊಂಪಡಗಿತು, ತನುಲತೆ ಕಂಪಿಸಿದುದಡಿಗಡಿಗೆ, ಮೈ ತನಿ ಗಂಪಿನಲಿ ಘುಮುಘುಮಿಸಿತಮಲಸ್ವೇದಸಲಿಲದಲಿ, ತಂಪಿನಲಿ ಶಿಖಿ, ಮಧುರ ದಲಿ ಕಟು, ನುಣ್ಪಿನಲಿ ಬಿರಿಸು, ಅಮೃತದಲಿ ವಿಷ ಗುಂಪಿನಲಿ ನೆಲೆ ಯಾದಂತೆ ಆಯಿತು. ಧಾರೆಗಂಗಳಲಿ ರೋಷಾಯುಧವ ಮಸೆದಳು; ಉಬ್ಬೇ ಗದ ವಿಕಾರದ ಚಿತ್ತಬುದ್ಧಿ ಮನಂಗಳು ಅಹಂಕಾರದಲ್ಲಿ ಹೂಂಕರಿಸಿದವು.

ಎಲವೊ ಭಂಡರ ಭಾವ ಖೂಳರ
ನಿಳಯ ಖಳರಧಿನಾಥ ವಂಚಕ
ತಿಲಕ ಗಾವಿಲರೊಡೆಯ ಬಂಧುವೆ ದುಷ್ಟನಾಯಕರ
ಎಲೆ ಮರುಳೆ ತಾನಾವಳೆಂಬುದ
ತಿಳಿಯಲಾ ನೀನಾವನೆಂಬುದ
ನಿಳೆಯರಿಯದೇ ಭಂಡ ಫಡ ಹೋಗೆಂದಳಿಂದುಮುಖಿ

"ನಾವು ಒಲಿದು ಬಂದವರು; ನೀನು ಸೊಬಗಿನಲ್ಲಿ ಒಲಿಸಿ ಮರುಗಿಪ ಮಿಂಡನು; ಈ ದೇವೇಂದ್ರ ಲೋಕದಲ್ಲಿ ನಾವು ಅತಿ ಸುಲಭರು; ನೀನೇ ದುರ್ಲಭ. ಎಲವೋ ನಪುಂಸಕ, ನಿನಗೆ ಗಂಡುವೇಷದ ಸುಳಿವೇಕೆ. ಹಿಡಿ ಇಕೋ ಶಾಪ" ಎಂದು ಊರ್ವಶಿ ಕೈ ಎತ್ತಿದಳು. ಊರ್ವಶಿಯ ಆ ಕೋಪದ ಭಂಗಿಯನ್ನು ಕುಮಾರವ್ಯಾಸ ಬಹು ಚೆನ್ನಾಗಿ ಚಿತ್ರಿಸಿದ್ದಾನೆ.

ರಾಹು ತುಡುಕಿದ ಶಶಿಯೊ, ಮೇಣ್ ರಾ
ದ್ರಾಹಿ ಮಸ್ತಕ ಮಾಣಿಕವೋ ಕಡು
ಗಾಹಿ ನಮೃತವೊ ಕುಪಿತ ಸಿಂಹದ ಗುಹೆಯಮೃಗಮದವೋ
ಲೋಹಧಾರೆಯ ಮಧುವೋ ಕಳಿತ ಹ
ಳಾ ಹಳದ ಕಜ್ಜಾಯವೆನಿಸಿತು
ರೂಹು ಸುಮನೋಹರ ಭಯಂಕರವಾಯ್ತು ಸುರಸತಿಯ॥

ಊರ್ವಶಿ ಕೊಟ್ಟ ಶಾಪ ಅರ್ಜುನನ ಅಪರಾಧಕ್ಕೆ ಅನುಗುಣವಾಗಿತ್ತು. ಯಾವ ವಿಷಯದಲ್ಲಿ ಅಪರಾಧಿಗೆ ಅಹಂಕಾರವೋ, ಅಥವ ಅಪರಾಧಿಯ ತಪ್ಪು ಯಾವ ಅಂಗ ಅಥವಾ ಸ್ವಭಾವಕ್ಕೆ ಅನ್ವಯಿಸುದುದೋ ಅದಕ್ಕೆ ಶಿಕ್ಷಿ ಸುವುದು ಜನರ ಪದ್ಧತಿ. ದುರ್ಯೋಧನ ತೊಡೆ ತಟ್ಟಿದುದರಿಂದ ಭೀಮ ಅವನ ತೊಡೆಯನ್ನು ಮುರಿಯುವೆನೆಂದನು, ನಹುಷನು ಸಪ್ತರ್ಷಿಗಳನ್ನು ವೇಗ

ವಾಗಿ ಹೋಗಿ (ಸರ್ಪ ಸರ್ಪ) ಎಂದು ಆತುರಪಡಿಸಿದುದರಿಂದ ಅವರು ಕೋಪಿಸಿಕೊಂಡು ನೀನು ಸರ್ಪವಾಗು ಎಂದು ಶಪಿಸಿದರು. ದಶರಥನು ಋಷಿ ಕುಮಾರನನ್ನು ಕೊಂದುದರಿಂದ ಆ ಕುಮಾರನ ತಂದೆ "ನಿನಗೂ ಮಕ್ಕಳವಿಯೋಗ ಉಂಟಾದಾಗ ಮರಣವಾಗಲಿ" ಎಂದು ಶಪಿಸಿದನು. ಶಕುಂತಲೆ ದುಷ್ಯಂತನನ್ನು ಕುರಿತು ಚಿಂತಿಸುತ್ತಾ, ದುರ್ವಾಸನಿಗೆ ಆತಿಥ್ಯವನ್ನು ಮರೆತುದರಿಂದ "ನೀನು ಯಾರನ್ನು ಕುರಿತು ಚಿಂತಿಸುತ್ತಾ ನನ್ನನ್ನು ಮರೆತಿರುವೆಯೋ ಅವನು ನಿನ್ನನ್ನು ಮರೆಯಲಿ" ಎಂದು ಆತನು ಶಪಿಸಿದನು. ಯಾದವರಲ್ಲಿ ಒಬ್ಬನು ಋಷಿಯ ಮುಂದೆ, ಹೊಟ್ಟೆಗೆ ಬಟ್ಟೆ ಸುತ್ತಿಕೊಂಡು ನಿಂತು "ನಾನು ಗರ್ಭಿಣಿ ಹೆಣ್ಣು. ನನ್ನ ಹೊಟ್ಟೆಯಲ್ಲಿ ಎಂತಹ ಮಗು ಜನಿಸುತ್ತೆ" ಎಂದು ಹಾಸ್ಯವಾಗಿ ಕೇಳಿದಾಗ, ಆ ಋಷಿಯು ಕೋಪದಿಂದ "ನಿನ್ನ ಹೊಟ್ಟೆಯಲ್ಲಿ ಜನಿಸುವ ಒನಕೆಯಿಂದ ಯಾದವಕುಲ ನಾಶವಾಗುತ್ತೆ" ಎಂದು ಶಪಿಸಿದನು. ಇಂದ್ರನು ವ್ಯಭಿಚಾರಿಯಾದುದರಿಂದ ಅವನಪುರುಷತ್ವಕ್ಕೆ ಸಂಚಕಾರವಾಯಿತು. ಹೀಗೆ ಎಲ್ಲಿ ಅಪರಾಧವೋ ಅಲ್ಲಿಗೆ ತಕ್ಕ ದಂಡ. ಅರ್ಜುನನು ನಪುಂಸಕವಾಗಿ ವರ್ತಿಸಿದನೆಂದು ಊರ್ವಶಿಗೆ ತೋರಿದುದರಿಂದ ಆಕೆ ಅವನಿಗೆ ನಪುಂಸಕನಾಗಿರೆಂದೇ ಶಾಪವಿತ್ತಳು.

ನರ ಮೃಗಾಧಮ ನಿಮ್ಮ ಭಾರತ
ವರುಷ ಭೂಮಿಯೊಳೊಂದು ವರುಷಾಂ
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ
ಹರಿಯ ಮರೆಯೊಗು ಹರನ ನೀನನು
ಸರಿಸು ನಿಮ್ಮಯ್ಯಂಗೆ ಹೇಳದು
ನಿರುತ ತಪ್ಪದು ಹೋಗೆನುತ ಮೊಗದಿರುಹಿದಳು ಚಪಲೆ.

ಶಾಪ ಮತ್ತು ವರಗಳಿಗೆ ಕಾಲದ ಪರಿಮಿತಿ ಇಷ್ಟೇ, ಯಾಕೆ? ಎಂದು ಹೇಳುವುದು ಕಷ್ಟ. ಕೈಕೇಯಿ ರಾಮನನ್ನು ಹದಿನಾಲ್ಕು ವರುಷ ಕಾಡಿಗೆ ಅಟ್ಟಿದಳು. ದುರ್ಯೋಧನ, ಪಾಂಡವರಿಗೆ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ನಿಯಮಿಸಿದ. ಇನ್ನೂ ಹೆಚ್ಚು ಅಥವಾ ಕಡಿಮೆ ಯಾಕೆ ಕೇಳಲಿಲ್ಲ? ಊರ್ವಶಿ ಅರ್ಜುನನಿಗೆ ಒಂದೇ ವರುಷದ ಶಾಪವಿತ್ತಳು. ಆಕೆ ಇನ್ನೂ ಕ್ರೂರವಾದ ಶಾಪವನ್ನು ಕೊಡಬಹುದಾಗಿತ್ತು. ಅರ್ಜುನನ ಮೇಲೆ ಆಕೆಗೆ ಕೋಪ ಬಂದರೂ, ಆತನನ್ನು ನೋಡಿದ ಕ್ಷಣವೇ

'ಮೆಚ್ಚಿದಳು' ಎಂದು ಕವಿ ಹೇಳಿದ್ದಾನೆ. ಆಕೆ ಮೆಚ್ಚಿದುದೂ ಅರ್ಜುನನು ತನ್ನನ್ನು ತಾಯಿ ಎಂದು ಸಂಭೋದಿಸಿದುದರಿಂದ. ನೀತಿಯ ಮಾರ್ಗದಲ್ಲಿ ಅನುಸರಿಸುತ್ತಿರುವವನಿಗೆ ಬರುವ ಶಾಪ, ನೀತಿ ಹೀನನಿಗೆ ಬರುವಷ್ಟು ಕ್ರೂರ ವಾಗುವುದಿಲ್ಲ. ಊರ್ವಶಿ ಇಂದ್ರನ ಮಾತಿನಂತೆ ಬಂದಳಾದರೂ ಆಕೆಗೂ ಅರ್ಜುನನಲ್ಲಿ ನಿಜವಾದ ಅನುರಾಗ ಉತ್ಪನ್ನವಾಗಿತ್ತು. ನಿಜವಾದ ಅನುರಾಗ ವಿರುವೆಡೆ, ಅತಿಕ್ರೂರವಾದ ಶಾಪವೀಯುವುದೆ? ಅರ್ಜುನನು ಇಂದ್ರನ ಮಗ ನೆಂಬುದನ್ನೂ, ದೇವಲೋಕಕ್ಕೆ ಬಂದ ಮಾನ್ಯ ಅತಿಥಿ ಎಂಬುದನ್ನೂ, ದೇವತೆ ಗಳ ಶತ್ರುವನ್ನು ಸಹ ನಾಶಮಾಡಿದ ಧೀರನೆಂಬುದನ್ನೂ ಊರ್ವಶಿ ಮರೆಯಲಿಲ್ಲ. ಆದರೆ ಆಕೆ ಹೆಣ್ಣು. ಅವಮಾನದಿಂದ ಕುದಿಯುತ್ತಿದ್ದಳು. "ವಿಕಟ ತಪಸಿನ ದೇವದೈತ್ಯರ ಮುಕುಟವಾಂತುದು ವಾಮ ಪಾದವು ಅಕಟ ಕೆಟ್ಟಸಲಾ" ಎಂದು ರೋಷಗೊಂಡಳು. ಅವಮಾನಿತಳಾದುದರಿಂದ ಇನ್ನೇನೂ ಮಾಡಲು ತೋರದೆ ಯಾವ ಅರ್ಜನನ ಗುಣಕ್ಕಾಗಿ ಆತನನ್ನು ಸನ್ಮಾನಿಸಬೇಕಾಗಿತ್ತೊ ಆ ಗುಣಕ್ಕಾಯೇ ಶಪಿಸಿದಳು. ಶಪಿಸಿದ ನಂತರ "ಮೊಗದಿರುಹಿದಳು ಚಪಲೆ" ಎಂದು ಕವಿ ಹೇಳಿದ್ದಾನೆ. ಊರ್ವಶಿ ಚಪಲ ಬುದ್ಧಿಯಿಂದ ಶಪಿಸಿದಳು.

ಅರ್ಜುನನು ಸದ್ಯಃ ಊರ್ವಶಿ ಹೊರಟುಹೋದರೆ ಸಾಕೆಂದು ಮೌನ ವಾಗಿದ್ದನು. ಅರ್ಜುನನು ಸ್ತ್ರೀಯರ ದ್ವೇಷಿಯಲ್ಲ. ಸುಭದ್ರೆಯನ್ನು ಕಳ್ಳ ವೇಷದಿಂದ ಹಾರಿಸಿಕೊಂಡು ಹೋದಾಗಿನ ಅವನ ಚಾತುರ್ಯವೇ ಅದಕ್ಕೆ ಸಾಕ್ಷಿ. ಆದರೆ ಅದು ಭಾರತ ದೇಶದವರ ಬಾಳ್ವೆಯಾಯಿತು. ಮನುಷ್ಯ ಶರೀರದಲ್ಲಿ ಬಂದು ದೇವಸ್ತ್ರೀಯೊಡನೆ ವಿಹರಿಸುವುದು ಆ ಶರೀರಧರ್ಮಕ್ಕೆ ವಿರೋಧವಾದುದು. ಆ ಸೌಂದರ್ಯರಾಶಿಯನ್ನು ಎದುರಿಸುವುದು ಹೇಡಿಗೆ ಸಾಧ್ಯವಿಲ್ಲ. ಸಂಧಿಯ ಪ್ರಾರಂಭದಲ್ಲಿಯೇ ಕುಮಾರವ್ಯಾಸನು "ಹರವೈರಿಯ ನುಗೆಲಿದನು ಧೈರ್ಯದಿಂದೂರ್ವಶಿಯ ಶಾಪದಲಿ" ಎಂದು ಸೂಚಿಸಿದ್ದಾನೆ. ಎದುರಿಗೆ ಕಾಣುವ ಶತ್ರುವನ್ನು ಜಯಿಸಲು ನೂರುಮಡಿ ಧೈರ್ಯಬೇಕು. ಕಾಮ ಕ್ರೋಧಾದಿಗಳು ಆ ಶತ್ರುಗಳು. ಆ ನಿತ್ಯಶತ್ರುಗಳನ್ನು ಜಯಿಸಿದು ದರಿಂದಲೇ ಶತ್ರುಘ್ನನಿಗೆ, 'ಶತ್ರುಘ್ನೋ ನಿತ್ಯ ಶತ್ರುಘ್ನಃ' ಎಂಬ ವಿಶೇಷಣ ಬಂದಿತ್ತು. ಊರ್ವಶಿಯ ಆ ಅದ್ಭುತವಾದ, ಕಣ್ಣುಕೋರೈಸುವ ಸೌಂದರ್ಯಕ್ಕೆ

ಅರ್ಜುನನು ಪೂರ್ಣವಾಗಿ ಸೋತು, ಅನಂತರ ಪುರೂರವನಂತೆ ನಾನಾ ವಿರಹ ಅವಸ್ಥೆಗಳನ್ನು ಅನುಭವಿಸಿ, ತನ್ನ ಜ್ವಾಲೆಯಲ್ಲಿ ತಾನು ಭಸ್ಮನಾಗ ಬೇಕಾಗಿತ್ತು. ಅರ್ಜುನನು, ಇಂದ್ರಿಯ ನಿಗ್ರಹಿಯಾಗದೆ ಸಾಮಾನ್ಯಮನುಷ್ಯ ನಾಗಿದ್ದಲ್ಲಿ, ಅದೇ ಅವನ ಅವಸ್ಥೆಯಾಗುತ್ತಿತ್ತು. ಅವನ ಧೈರ್ಯವೇ ಅವನನ್ನು ಕಾದಿತು. ಆ ಧೈರ್ಯವನ್ನೇ, ಪ್ರೇಮ ಕಾಮ ವಿಕಾರದಿಂದ ಉನ್ಮಾದಾವಸ್ಥೆಯಲ್ಲಿದ್ದ ಊರ್ವಶಿಗೆ ಅವನು ಬೋಧಿಸಿದನು "ಮನಕೆ ಧೈರ್ಯದ ಜೋಡತೊಟ್ಟು ಇದಿರಾಗಿಸಿಲೆ ಸನೆಯಂಬು ನಾಟಿವುವೆ?" ಎಂದು ಸೂಚಿಸಿದನು. ಅರ್ಜುನನು ಭಾರತ ವರ್ಷದವರ ನೀತಿಯನ್ನು ಬಹಳ ಹೇಳಿಕೊಂಡುದರಿಂದ ಕುಪಿತಳಾದ ಊರ್ವಶಿಯು "ನಿಮ್ಮ ಭಾರತ ವರುಷ ದಲ್ಲಿಯೇ ಒಂದು ವರುಷ ಅನುಭವಿಸು" ಎಂದು ಶಪಿಸಿದಳು.

ಹೀಗೆ ಶಪಿಸಿ ಬಿರುಗಾಳಿಯಂತೆ ಊರ್ವಶಿ ಹೇಗೆ ಬಂದಿದ್ದಳೋ ಹಾಗೆ ಯೇ ಅರ್ಜುನದೇವನ ಕಣ್ಣಿಂದ ಮರೆಯಾದಳು. ಅರ್ಜುನನು ಮೂಕನಾ ದನು.; ಮೂಗಿನ ಮೇಲೆ ಬೆರಳಿಟ್ಟುಕೊಂಡನು. ಮತ್ತೆ ಮತ್ತೆ ಧೈರ್ಯ ವನ್ನು ಅವಲಂಬಿಸಿದನು. ಇದು ವಿಧಿಯಘಟನೆ, ದೇವಲೋಕದ ಸ್ತ್ರೀಯರು ಎಲ್ಲಿ? ಭಾರತದ ಮನುಷ್ಯರಾದ ನಾವೆಲ್ಲಿ? ಎಲ್ಲಿಗೆಲ್ಲಿಗೆ ಸಂಬಂಧ; ನಾನು ಇಂದ್ರನಿಗೆ ಹೇಳಿದೆನೆ? ಕವಲಾನನೆಯಾದ ಊರ್ವಶಿಯನ್ನು ಕರೆಸಿದೆನೆ? ನಾನು ಮಾಡಿದುದು ಅಪರಾಧವೆ? ಒಂದು ವರುಷ ನಪುಂಸಕನಾಗಿರಲು ಸಾಧ್ಯವೆ? ಇಲ್ಲ ಇಲ್ಲ. ದೇಹಾಂತರವನ್ನು ಅಂಗೀಕರಿಸುವೆನು. ನನ್ನನ್ನು ಸುಡಲಿ, ಎಲೆ ದೇವರ, ಕೃತಾಪರಾಧ ಸ್ಥಳಕ್ಕೆ ದಂಡಪ್ರಾಪ್ತಿ ನ್ಯಾಯ. ಆದರೆ ವಿಲಸಿತದ ವೇದಾರ್ಥದಲಿ, ಮನ್ವಾದಿ ಮಾರ್ಗದಲಿ ಚಲಿಸದಾಚರಿಸಿದೊಡೆ, ಧರ್ಮ ಸ್ಥಳದಲಿ ಏನು ನಿಮಿತ್ತ ದಂಡ? ಗಳಿತ ಪೌರುಷನಾಗಿ ಬದುಕುವು ದಿಲ್ಲ'ವೆಂದು ಕೊರಗಿದನು. "ತಪವನ್ನು ಆಚರಿಸಿದೆ ಪಾಶುಪತ ದೊರಕಿತು. ಧರ್ಮವೇ ತಪಸ್ಸು ಎಂದು ನಡೆದೆ, ಷಂಡತನವಾಯ್ತು. ಎರಡೂ ತಪಸ್ಸು ಗಳೇ ; ಫಲ ವಿಪರೀತ."

ಒಳ್ಳೆಯ ಕಾರ್ಯಕ್ಕೆ ಕೆಟ್ಟ ಫಲವುಂಟಾಗುವುದು ಸತ್ಪುರುಷರ ಅನುಭವ. ಸತ್ಯಕ್ಕೆ ಚೆತ್ರಲೆ ಎಂಬ ನಾಣ್ಣುಡಿಗೂ ಇದೇ ಅರ್ಥ. ದ್ರೌಪದಿಯನ್ನು ಜ್ಞಾಪಿ ಸಿಕೊಂಡಾಗ ಅರ್ಜುನನಿಗೆ ಸಹಿಸಲಾರದ ದುಃಖ ಬಂತು. ಪಾಶುಪತವನ್ನು

ಸಂಪಾದಿಸಿಕೊಂಡು ದೇವೇಂದ್ರನಿಂದಲೂ ಮಾನಿತನಾಗಿ ಹಿಂದಿರುಗುವ ಗಂಡನನ್ನು ಆಕೆ ನಿರೀಕ್ಷಿಸುತ್ತಿದ್ದಾಳೆ. ಆದರೆ ಈಗ?

ಶಿವನ ಶರವೆನಗಾಯ್ತು ರಿಪು ಕೌ
ರವರ ರಕುತದ ರಾಟಳವನೆ
ತ್ತುವೆನು ಕಟ್ಟಾ ಮುಡಿಯನೆಂಬೆನು ದುರುಪದೀ ಸತಿಗೆ
ಇವಳು ಭಂಗಿಸಿ ಬೂತುಗೆಡಹಿದ
ಹವಣನಾರಿಗೆ ಹೇಳುವೆನು ವರ
ಯುವತಿಗೀ ನುಡಿ ಒಸಗೆಯೇ ಹಾಯೆನುತ ಬಿಸುಸುಯ್ದ

ಊರ್ವಶಿ, ತನ್ನನ್ನು ಭಂಗಿಸಿದಳು, ಬೂತುಗೆಡಹಿದಳು ಎಂದೇ ಅರ್ಜುನನು ಹೇಳುತ್ತಾನೆ. ಆಕೆ ತನ್ನನ್ನು ಕಾಮಿಸಿ ಬಂದ ವಿರಹಿ ಎಂಬ ಶೃಂಗಾರ ಭಾವ ಆತನಿಗೆ ಇಲ್ಲವೇ ಇಲ್ಲ. ನನಗೂ ಅವಳಿಗೂ ಉಂಟಾಗಿದ್ದ ಹೋರಾಟದಲ್ಲಿ ನಾನು ಸೋತೆ ಎಂಬುದೇ ಅವನ ತೀರ್ಪು. ವಿಷಯ, ಇಂದ್ರನಿಗೆ ತಿಳಿದಾಗ ಅವನಿಗೆ ಅಸಮಾಧಾನವಾಗಲಿಲ್ಲ. ಮಗನ ದೃಢ ಸಂಕಲ್ಪವನ್ನು ಅವನು ಮೆಚ್ಚಿದನು. "ತಂದೆಗೆ ದುಗುಡವೇಕೆ, ಎನ್ನಾನೆಗೆತ್ತಣ ಜೆಗಡು, ಎತ್ತಣ ದೆಸೆಯ ದುಮ್ಮಾನ" ಎಂದು ಮುದ್ದಾಡಿದನು. ಅರ್ಜುನನು ಲಜ್ಜೆಯಿಂದ ಮಾತನಾಡಲಿಲ್ಲ. ಇಂದ್ರನು "ಬಿಡು ಮನೋಗ್ಲಾನಿಯನು, ಸತಿ ಕೆಡೆ ನುಡಿದುದೆಲ್ಲವ ಎನಗಾಗಿ ಸೈರಿಸು, ಮಡದಿಯರಲೇನುಂಟು ಗುಣ ಎನ್ನಾಣೆ." ಊರ್ವಶಿಯ ಶಾಪವಲ್ಲಿ ನಿನಗೆ ವೃಥಾ ಮನೋವ್ಯಥೆ. ತತ್ಕ್ರೋಧ ನಿನಗುಪಕಾರವಾಯ್ತು. ಈ ಶಿಖಂಡಿತನ ಅಜ್ಞಾತದಲಿ ವರುಷವ ಕಳೆವೊಡೆ ಸಾಧನವೆ ಆಯ್ತು" ಎಂದು ಸಮಾಧಾನ ಪಡಿಸಿದನು.

ಈ ಸಂಧಿಯಂತಹ ಸಂಧಿಯಲ್ಲಿ ಕುಮಾರವ್ಯಾಸನ ಪೂರ್ಣಶಕ್ತಿ ಪ್ರಕಟವಾಗುತ್ತದೆ. ಮಾತುಗಳ ಜೋಡಣೆ, ಭಾವನೆಗಳ ರಸಪ್ರವಾಹ, ಕಣ್ಣಿಗೆ ಕಟ್ಟಿದ ಚಿತ್ರ ಎಲ್ಲಾ ಮೆಚ್ಚುಗೆಯಾಗುತ್ತದೆ. ನಮಗೆ ಊರ್ವಶಿಯಲ್ಲಿಯೂ ತಿರಸ್ಕಾರವುಂಟಾಗುವುದಿಲ್ಲ. ಊರ್ವಶಿ ಎಂದರೆ ಇಂದ್ರ ಭೋಗ, ಇಂದ್ರ ವೈಭವ ಸೌಂದರ್ಯ ಸಾರ. ಮನುಷ್ಯನ ದೃಷ್ಟಿಯಲ್ಲಿ ಅದಕ್ಕಿಂತ ಹೆಚ್ಚಾದ ಭೋಗವಿಲ್ಲ. ದೇವತೆಗಳ ದೃಷ್ಟಿಯಲ್ಲಿಯೂ ಅದು ಸಾಮಾನ್ಯವಲ್ಲ. ಊರ್ವಶಿಯ ದಾಸಿಯರ ದಾಸಿಯರಿಗೆ, ಪರಿಚಾರಕರಾಗುವ ಭಾಗ್ಯಕ್ಕಾಗಿ

"ವರುಣಸೂನು ಜಯಂತನಳಕೂಬರರು ವರುಷ ಓಲೈಸುವರು ದಾರವಟ್ಟ ದಲಿ" ಅರ್ಜುನನ ರೂಪದ ಬಡ ಹುಲುಮಾನಿಸನೊಬ್ಬನು ಆಕೆಯನ್ನು ಜಯಿಸಿದನು. ಅರ್ಜುನನ ಸಂಯಮ ಆಕೆಯ ಸೌಂದರ್ಯಕ್ಕಿಂತ ಹೆಚ್ಚು ಸುಂದರವಾಯಿತು. ಇಂದ್ರನನ್ನೂ ಸ್ವಾಧೀನದಲ್ಲಿಟ್ಟುಕೊಂಡಿದ್ದ ಊರ್ವಶಿ ಅರ್ಜುನನ ಸಂಯಮವನ್ನು ನೋಡಿ "ನಿನಗೆ ಸೌಭಾಗ್ಯ ಗರ್ವ" ಎಂದಳು. ಜಗತ್ತಿನ ಸಮಸ್ತ ಭೋಗಗಳನ್ನೂ ಸಂಪಾದಿಸುವುದು ದೊಡ್ಡ ಶಕ್ತಿ, ಆ ಭೋಗಗಳನ್ನು ತಿರಸ್ಕರಿಸುವುದು ಅದಕ್ಕೂ ದೊಡ್ಡ ಶಕ್ತಿ. ಅರ್ಜುನನ ಈ ಶಕ್ತಿಯನ್ನು ಊರ್ವಶಿಯೂ ಇಂದ್ರನೂ ಕಂಡುಕೊಂಡರು. ಮನುಷ್ಯನು ದೇವತೆಗಳಿಗಿಂತ ದೊಡ್ಡವನಾದನು.

ಕುಮಾರವ್ಯಾಸನ ರಸ ಪ್ರವಾಹವನ್ನು ಅವನ ಕಾವ್ಯದಲ್ಲಿಯೇ ನೋಡಬೇಕು. ಈ ಲೇಖನವನ್ನು ಓದಿ ಕುಮಾರವ್ಯಾಸನ ಸಾರ ತಮಗೆ ತಿಳಯಿತೆಂದು ಯಾರೂ ಭಾವಿಸಬಾರದು. ಕುಮಾರವ್ಯಾಸ ಭಾರತ ನಮ್ಮ ನಿತ್ಯದ ಪಾರಾಯಣದ ಗ್ರಂಥವಾಗಬೇಕು. ಅದರ ಕಡೆಗೆ ವಾಚಕರ ದೃಷ್ಟಿ ಯನ್ನು ಎಳೆಯುವುದೇ ಈ ಸಣ್ಣ ಪ್ರಯತ್ನದ ಉದ್ದೇಶ. ಈ ಲೇಖನದ ಉದ್ದಕ್ಕೂ ಕುಮಾರವಾಸನ ವಾಕ್ಯಗಳನ್ನೇ ವಿಪುಲವಾಗಿ ಬಳಸಲಾಗಿದೆ.

ಹೊಸಕನ್ನಡ ಸಣ್ಣ ಕತೆಗಳು*

ಸಣ್ಣ ಕತೆಯೆಂಬ ಸಾಹಿತ್ಯ ವಿಶೇಷ, ಕನ್ನಡಕ್ಕೆ ಹೊಸದು. ಈ ಸಾಹಿತ್ಯ ಕನ್ನಡಕ್ಕೆ ಮಾತ್ರವೇ ಹೊಸದೆಂದಲ್ಲ. ಇದರ ಉಗಮಸ್ಥಾನವಾದ ಅಮೇರಿಕ ದೇಶದಲ್ಲಿ ಸಹ ಈ ಸಾಹಿತ್ಯ, ಪ್ರಚಾರಕ್ಕೆಬಂದು ಸುಮಾರು ೮೦-೯೦ ವರುಷ ಗಳಿಗಿಂತ ಹೆಚ್ಚಾಗಿಲ್ಲ. ಕತೆ ಹೇಳುವುದು ಹಿಂದೆ ನಮ್ಮಲ್ಲಿಯಾಗಲಿ ಪಾಶ್ಚಾತ್ಯ ದೇಶಗಳಲ್ಲಿಯಾಗಲಿ ಪ್ರಚಾರದಲ್ಲಿರಲಿಲ್ಲವೆಂದಲ್ಲ. ಆದರೆ ಯಾವುದನ್ನು ನಾವು ಇಂದು ಕಲೆಯ ಮುದ್ರೆಯನ್ನೊಳಗೊಂಡ ಸಣ್ಣ ಕತೆ (short story) ಎನ್ನು ತ್ತೇವೆಯೋ ಅದು ಸಣ್ಣಕತೆಯ ರೂಪದಲ್ಲಿ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ದೊರೆಯುತ್ತಿಲ್ಲ. ಸಣ್ಣ ಕತೆಗೆ ಕೆಲವು ಲಕ್ಷಣಗಳಿರಬೇಕೆಂದು ನಾವು ಹೇಳುತ್ತೇವೆ. "ಊರ್ವಶೀ ಪುರೂರವರ ಸಂವಾದ" ಪಂಚ ತಂತ್ರ, ಹಿತೋಪದೇಶ, ಬೃಹತ್ಕಥಾಮಂಜರಿ, ಕಥಾಸರಿತ್ಸಾಗರ, ದಶಕುಮಾರ ಚರಿತ್ರೆ ಇವು ಆ ದೃಷ್ಟಿಯಿಂದ ಸಣ್ಣ ಕತೆಗಳಲ್ಲ; ಬರಿಯ ಕತೆಗಳು. ಹತ್ತೊಂ ಬತ್ತನೆಯ ಶತಮಾನದಲ್ಲಿ ಸಣ್ಣಕತೆ ಮೊದಲು ಅಮೇರಿಕದಲ್ಲಿ ಪ್ರಚಾರಕ್ಕೆ ಬಂದಿತು. ಅಲ್ಲಿ, ಯಾವುದೂ ಬೇಗ ಬೇಗ ಬೆಳೆಯುವಂತೆ ಈ ಕಲೆಯೂ ಬೆಳೆಯಿತು, ಪ್ರಪಂಚದಲ್ಲೆಲ್ಲ ಪ್ರಸಾರಗೊಂಡಿತು. ಫ್ರಾನ್ಸು, ಇಂಗ್ಲೆಂಡ್, ರಷ್ಯ, ಜರ್ಮನಿ, ನಾರ್ವೆಗಳಲ್ಲಿ ಸಣ್ಣ ಕತೆಗಳು ಅಸಂಖ್ಯಾತವಾಗಿ ಜನ ಜೀವನವನ್ನು ಚಿತ್ರಿಸ ತೊಡಗಿವವು. ಆಧುನಿಕ ತ್ವರಿತ ಜೀವನ ವೇಗ, ಜನರ ವಿದ್ಯೆಯ ಮಟ್ಟ ಏರಿಸುದು, ಅಚ್ಚಿನ ಸೌಕರ್ಯ, ನಾಗರಿಕತೆ ಬೆಳೆದಂತೆ ಹೆಚ್ಚು ಹೆಚ್ಚು ತೊಡಕಾಗುತ್ತಿರುವ ಜೀವನ ಸಮಸ್ಯೆಗಳು, ಇವೆಲ್ಲಾ ಈ ಸಾಹಿತ್ಯ ಪ್ರಕಾರವನ್ನು ಪೋಶಿಸಿದವು.

ಭಾರತದಲ್ಲಿ ಬಂಗಾಳಾ ಪ್ರಾಂತ ಮೊದಲು ಸಣ್ಣ ಕತೆಗಳಲ್ಲಿ ಪ್ರಯೋಗ ನಡೆಸಿತು. ಆ ಪ್ರಯೋಗದಲ್ಲಿ, ಮೊದಲು ಕೀರ್ತಿಪಡೆದವರು ವಿಶ್ವಕವಿ ಠಾಗೂ ರರು. ಅವರ ಕೈಗೆ ಸಿಕ್ಕಿದ ಮೇಲೆ, ಆ ಸಾಹಿತ್ಯ ವಿಶೇಷ, ರಂಜಿಸಿದುದ ರಲ್ಲಿ ಆಶ್ಚರ್ಯವಿಲ್ಲ. ಟಾಗೂರರು ಮುನ್ನೂರಕ್ಕಿಂತ ಹೆಚ್ಚು ಸಣ್ಣ ಕತೆಗಳನ್ನು

* ಇದನ್ನು ಮೊದಲು ಪ್ರಕಟಿಸಿ ಇಪ್ಪತ್ತೈದು ವರುಷಗಳ ಮೇಲೆ ಆಗಿದೆ..

ಬರೆದಿದ್ದಾರೆ. ಅವುಗಳಲ್ಲಿ ಸ್ವಲ್ಪ ಭಾಗ ಇಂಗ್ಲಿಷಿಗೆ ಅನುವಾದಿತವಾಗಿ ಜಗತ್ತಿನ ಮನ್ನಣೆಯನ್ನು ಪಡೆದಿದೆ. ಟಾಗೂರರ ಪ್ರಭಾವ ಅಖಿಲ ಭಾರತದಲ್ಲಿಯೂ ವಿಶೇಷ. ಕರ್ಣಾಟಕವು ಬಹು ಬೇಗ ಸಣ್ಣ ಕತೆಯ ಪ್ರಭಾವವನ್ನು ಕಂಡುಕೊಂಡಿತು. ಧೀರರಾದ ಸಾಹಸಿಗಳು ಮುಂದೆ ಬಂದು ಈ ಸಾಹಿತ್ಯದ ಮೂಲಕ ಜನರ ಹೃದಯದ ತಂತಿಗಳನ್ನು ಮಿಡಿಯತೊಡಗಿದರು.

"ಕನ್ನಡ ಸಾಹಿತ್ಯದಲ್ಲಿ ಮೊದಲು ಕಲಾಪ್ರಸಿದ್ಧಿಗೆ ಬಂದ 'ಸಣ್ಣ ಕತೆ'ಗಳು ಶ್ರೀನಿವಾಸರು ಬರೆದವು. ಕೀ. ಶೇ.ರುಗಳಾದ ಶ್ರೀಮಾನ್ ಪಂಜೆಯವರೂ, ಶ್ರೀ ಎಂ. ಎನ್. ಕಾಮತ್‌ರೂ, ಕೆರೂರು ವಾಸುದೇವಾಚಾರ್ಯರೂ ಸಣ್ಣ ಕತೆಗಳ ಹುಟ್ಟು, ಬೆಳವಣಿಗೆಗಳ ಸಂಬಂಧದಲ್ಲಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವ್ಯವಸಾಯ ಮಾಡಿದವರು.

ಸಣ್ಣ ಕತೆಯ ಸ್ವರೂಪವೇನು? ಎಂಬುದನ್ನು ಕುರಿತು ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಸಣ್ಣಕತೆ ಒಂದು ರಸಬಿಂದು ಅಥವ ರಸದಗಟ್ಟಿ. ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯವೇಗ ಜೂಜಿನ ಕುದುರೆಯ ನಾಗಾಲೋಟ, ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತಿಸ್ವಲ್ಪ! ತೋರಿಸುವ ಸತ್ಯ ಅದ್ಭುತ. ಓದುವುದಕ್ಕೆ ಸ್ವಲ್ಪವೇ ಕಾಲ ಹಿಡಿದರೂ ಅದು ತೆರೆಯುವ ರಸಭಂಡಾರವನ್ನು ಅನೇಕ ಗಂಟೆಗಳ ಕಾಲ ಸವಿಯಬಹುದು. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ. ಸ್ವಲ್ಪದರಲ್ಲಿ ಬಹಳವನ್ನು ಹೇಳುವ, ಚಾತುರ್ಯ ಅದು. ಸಣ್ಣಕತೆಯಲ್ಲಿ ಭಾವದ ಹಿರಿಮೆ ಇರಬೇಕು. ಭಾವನಿರೂಪಣೆ ಸುಂದರವಾಗಿರಬೇಕು. ವಸ್ತುವಿಗಿಂತ ವಸ್ತುವಿನ ವರ್ಣನೆಗೆ ಹೆಚ್ಚು ಪ್ರಾಧಾನ್ಯ. ಮೊದಲಿನಿಂದ ಕೊನೆಯವರೆಗೆ ಪ್ರತಿಯೊಂದು ಮಾತೂ, ಪರಿಣಾಮರಮಣೀಯತೆಗೆ ಸಹಾಯಕವಾಗಬೇಕು. ಎಲ್ಲೋ ಒಂದು ಕಡೆ ಒಂದು ಹೊಳಪು ಬಂದ ಮಾತ್ರಕ್ಕೆ ಉತ್ತಮ ಸಣ್ಣ ಕತೆಯಾಗುವುದಿಲ್ಲ. ಯಾವು ದೂ ಮಿತಿಯನ್ನು ಮೀರಬಾರದು. ಆವಶ್ಯಕವಲ್ಲದ ಪದ ಒಂದೂ ಅಲ್ಲಿರಬಾರದು. ಲೇಖಕನು ಕಡ್ಡಾಯವಾಗಿ ಈ ಫಲವನ್ನು ಸಾಧಿಸಬೇಕು. ಸ್ಫೂರ್ತಿಯಿಲ್ಲದೆ ಬೆಳಕು ಹೊಳೆಯುವುದಿಲ್ಲವಾದರೂ ಬರಿಯ ಸ್ಫೂರ್ತಿಯ ಮೇಲೆಯೇ ಅವಲಂಭಿಸಿದರೆ ಸಾಧ್ಯವಿಲ್ಲ. ಪ್ರತಿಯೊಂದು ಮಾತನ್ನೂ ತೂಗಿ ಚೂಪು

ಮಾಡಿ ಬಳಸಬೇಕು. ಆದರೆ ಸ್ವಾಭಾವಿಕತೆಗೆ ಭಂಗ ಬರಬಾರದು. ಕೃತಕತೆಯ ನೆಳಲು ದೂರದಿಂದ ಬಿದ್ದರೂ ಕೆಟ್ಟಿತು ಕತೆಯ ಹದ.

ಸಾಧಾರಣವಾಗಿ ಕತೆ ಬರೆಯಲು ಹೊರಡುವವರಿಗೆಲ್ಲಾ ಈ ಸೂತ್ರಗಳು ಗೊತ್ತು. ಆದರೆ ತಮ್ಮ ಸಣ್ಣ ಕತೆಗಳನ್ನು ಸಣ್ಣ ರತ್ನವಾಗಿ ವಾಚಕನ ಕೈಗೆ ಕೊಡುವ ಪುಣ್ಯ, ಧನ್ಯರಿಗೆ ಮಾತ್ರ ಲಭಿಸುತ್ತದೆ. ಕತೆಗಾರರ ಎಲ್ಲಾ ಕತೆಗಳೂ ಒಂದೇ ಸಮನಾಗಿ ಶ್ರೇಷ್ಠವಾಗಿರುವುವೆಂದು ಹೇಳಲು ಸಾಧ್ಯವಿಲ್ಲ. ಕಾವ್ಯದೇವಿಯ ಸಾಕ್ಷಾತ್ಕಾರವಾದಾಗ ಲೇಖಕ ಆ ಒಂದು ಗಳಿಗೆಯಲ್ಲಿ ತಾನು ಕಂಡ ದಿವ್ಯಸತ್ಯವನ್ನು ಶಬ್ದಗಳ ಮೂಲಕ ಹಿಡಿದು ವಾಚಕನಿಗೆ ಅರ್ಪಿಸುತ್ತಾನೆ. ಅನಂತರವೂ ಅವನು ಏನೇನೋ ಬರೆಯುತ್ತಲೇ ಇರುತ್ತಾನೆ, ಹುಚ್ಚನಂತೆ ತೊಳಲುತ್ತಲೇ ಇರುತ್ತಾನೆ. ಆದರೆ ಮತ್ತೆ ಆ ದಿವ್ಯದರ್ಶನ ಅವನಿಗೆ ದೊರೆಯುವವರೆಗೆ ಅವನು ಬರೆಯುವುದೆಲ್ಲಾ ಬರಿಯ ಬೆನ್ನು ಹಿಟೀಲು. ಮೊದಲು ಕೊಟ್ಟ ಉತ್ತಮ ಕೃತಿಯಿಂದ ಅವನ ತಲೆ ತಿರುಗದೆ ಇದ್ದರೆ, ಅವನ ಹೃದಯ ನಮ್ರವಾಗಿ ಶುದ್ಧವಾಗಿದ್ದರೆ ಮತ್ತೆ ಅದೇ ದಿವ್ಯದರ್ಶನ ಅವನ ಕೈಯಿಂದ ಮತ್ತೊಂದು ಕೃತಿರತ್ನವನ್ನು ಸೃಷ್ಟಿಸಬಲ್ಲದು.

ಸಾಧಾರಣವಾಗಿ ಮೇಲು ನೋಟಕ್ಕೆ ನೋಡಿದರೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಣ್ಣ ಕತೆಗಳಿಗೆ ಕೊರತೆ ಇಲ್ಲವೆಂಬಂತೆ ಕಾಣುತ್ತದೆ. ಯಾವ ಪತ್ರಿಕೆಯನ್ನು ನೋಡಿದರೂ ಒಂದು ಕತೆ ಇದ್ದೇ ಇರುತ್ತದೆ. ಪತ್ರಿಕೆಗಳೂ ಅನೇಕವಾಗಿವೆ. ಆದರೆ ಸಾಧಾರಣವಾಗಿ ಕತೆಗಳಲ್ಲಿ ವಿಷಯ ಪುಷ್ಟತೆ ಇರುವುದಿಲ್ಲ. ಹಾಗೂ ತೆಗೆದುಕೊಂಡರೂ, ತಮಿಳು ತೆಲುಗುಗಳಲ್ಲಿ ಬರುತ್ತಿರುವಷ್ಟು ಸಂಖ್ಯೆಯ ಕತೆಗಳು ಸಹಾ ನಮ್ಮಲ್ಲಿ ಬರುತ್ತಿಲ್ಲ. ಒಂದೊಂದು ಕತೆಗಳನ್ನು ಬರೆದು ತೆಪ್ಪಗಾಗಿರುವ ಕತೆಗಾರರನ್ನು ನೋಡಿ "ಇವರು ಯಾಕೆ ಸುಮ್ಮನೆ ಕುಳಿತಿದ್ದಾರೆ. ಇನ್ನೂ ಕೆಲವು ಅಂತಹ ಕತೆಗಳನ್ನು ಯಾಕೆ ಬರೆಯಬಾರದು" ಎಂದು ನಮಗೆ ಕೋಪವೇ ಉಂಟಾಗುವುದು. ನಮ್ಮ ಸಾಹಿತ್ಯದಲ್ಲಿ ಕತೆಗಳು ಎಷ್ಟು ಬೇಕೋ ಅಷ್ಟು ಬೆಳೆದಿಲ್ಲ. ಹಿಂದಿಯಲ್ಲಿ ಪ್ರೇಮಚಂದರಂಥವರು ೨೦೦ ಕತೆ ಬರೆದಿದ್ದಾರೆ. ಮರಾಠಿಯಲ್ಲಿ ಸಹ ಖಾಂಡೇಕರ್ ಮುಂತಾದವರು ನೂರಕ್ಕೆ ಕಡಿಮೆ ಇಲ್ಲದೆ

ಬರೆದಿದ್ದಾರೆ. ತಮಿಳಿನಲ್ಲಿ ಶ್ರೀ ಕು. ಪ. ರಾಜಗೋಪಾಲನ್, ಕಲ್ಕಿ. ಕೊನಷ್ಟೈಲ, ಪುದುಮೈಪಿತನ್ ಮುಂತಾದವರು ೫೦-೬೦ ಕತೆಗಳನ್ನು ಬರೆದಿದ್ದಾರೆ. ಆದರೆ ಕನ್ನಡದಲ್ಲಿ ಶ್ರೀನಿವಾಸರೊಬ್ಬರೇ ಸುಮಾರು ೩೫ ಕತೆಗಳನ್ನು ಬರೆದಿರುವವರು.

ಬರಿಯ ಕತೆಗಳ ಸಂಖ್ಯೆ ಹೆಚ್ಚಾಗುವುದರಿಂದ ಮಾತ್ರ ಉತ್ತಮ ಕತೆಗಳು ಹೆಚ್ಚುವುದಿಲ್ಲವೆಂದು ಮೊದಲೇ ಹೇಳಿರುವುದರಿಂದ ಈ ಪರಿಸ್ಥಿತಿ ಹೆಚ್ಚು ವಿಷಾದಕ್ಕೆ ಕಾರಣವಲ್ಲ. ಆದರೆ ಈವರೆಗೆ ನಮ್ಮಲ್ಲಿ ಬೆಳೆದಿರುವ ಅನೇಕ ಸಣ್ಣ ಕತೆಗಳು ಶ್ರೇಷ್ಠ ವರ್ಗಕ್ಕೆ ಸೇರಿದುವಾದರೂ, ನಮ್ಮ ಬಾಳಿನ ಅನೇಕ ಸಮಸ್ಯೆಗಳನ್ನು ಅವು ಮುಟ್ಟಿಯೇ ಇಲ್ಲ. ನಮ್ಮ ದಾರಿದ್ರ್ಯ, ರೈತನ ಅಜ್ಞಾನ, ಅವನ ಮೇಲೆ ದಬ್ಬಾಳಿಕೆ, ಕೂಲಿಗಾರರ ಸಮಸ್ಯೆ, ಭಂಡವಾಳದ ಬಡಾಯಿ, ಅವಿಭಕ್ತ ಕುಟುಂಬದ ನಾನಾ ಬಗೆಯ ಕಷ್ಟಗಳು, ಸ್ತ್ರೀಯರ ಸಮಸ್ಯೆಗಳು ಇವುಗಳನ್ನೆಲ್ಲಾ ಪರಿಣಾಮಕಾರಿಯಾಗುವಂತೆ ಚಿತ್ರಿಸುವ ಸಣ್ಣ ಕತೆಗಾರರು, ನಮ್ಮಲ್ಲಿ ಇನ್ನೂ ಬರಬೇಕಾಗಿದೆ. ನಮ್ಮ ಬಾಳನ್ನೂ ಜೀವನವನ್ನೂ ನೋಡಿ, ಇದರಿಂದಲೇ ಕಲಿತು, ಇದರಿಂದಲೇ ಸ್ಫೂರ್ತಿ ಹೊಂದಿ ಇದರ ಏಳಿಗೆಗಾಗಿಯೇ ಇನ್ನು ಸಾಹಿತ್ಯ ನಿರ್ಮಾಣವಾಗಬೇಕು.

ಈ ಸಂದರ್ಭದಲ್ಲಿ ಉತ್ತಮ ಕನ್ನಡ ಕತೆಗಾರರ ಹೆಸರನ್ನು ನಾನು ಹೇಳುವುದಿಲ್ಲ. ಅದು ಪ್ರಬುದ್ಧ ಕರ್ನಾಟಕದ ವಾಚಕರಿಗೆ ಗೊತ್ತೇ ಇರುತ್ತದೆ. ಮತ್ತು ಯಾವ ವಿಮರ್ಶಕನೂ ಎಲ್ಲ ಲೇಖಕರ ಹೆಸರನ್ನೂ ಹೇಳುವುದೂ ಸಾಧ್ಯವಿಲ್ಲ. ಆದರೆ ಸಣ್ಣ ಕತೆಯ ಲೇಖಕರಾಗಿ ಭಾಷಾ ಸೇವೆ ಮಾಡಬೇಕೆಂದಿರುವ ಯುವಕ ಉತ್ಸಾಹಿಗಳ ಹೆಗ್ಗುರುತುಗಳಿಗಾಗಿ ಕೆಲವು ಎಚ್ಚರಿಕೆಗಳನ್ನು ಕೊಡಲು ಬಯಸುತ್ತೇನೆ.

ಕತೆಗಾರ, ತನ್ನ ಸುತ್ತಲ ಪ್ರಪಂಚವನ್ನು ನೋಡಿ ಅಲ್ಲಿ ಕಣ್ಣಿಗೆ ಬೀಳುವುದನ್ನು ತನ್ನ ಕಥಾವಸ್ತುವನ್ನಾಗಿ ಆರಿಸಿಕೊಳ್ಳಬೇಕು.

ಇತರ ಸಾಹಿತ್ಯಗಳಿಂದ ಉತ್ತಮವಾದ ಕೃತಿಗಳನ್ನು ತೆಗೆದು, ಅನುವಾದವಾಗಿಯೋ ರೂಪಾಂತರಿಸಿಯೋ ನಮ್ಮ ಸಾಹಿತ್ಯಕ್ಕೆ ಕೊಡುವುದು ತಪ್ಪಲ್ಲ: ಉದಾ; ಟೇಂಗ್ಸೇ ಗೋವಿಂದರಾಯರ ಗಂಗೆಯ ಗುತ್ತಿಗೆ,

ಬಿ. ಎಸ್. ವೆಂಕಟರಾಮರ ಡೊಂಕುಬಾಲ, ಅ. ನ. ಕೃಷ್ಣರಾಯರ ರಾತ್ರಿ ೧೧೧/೨ ಗಂಟೆ, ಶ್ರೀಮಾನ್ ರಾಜರತ್ನಂ ಅವರು ಬೆಳದಿಂಗಳಲ್ಲಿ ಪ್ರಕಟಿಸಿರುವ ಮೃಗಾಲಯದ ನಿರಂಜನನೆಂಬುವನ ಕತೆ.

ಸಣ್ಣ ಕತೆಗಳ ವಸ್ತು ಯಾವುದೇ ಇರಬಹುದಾದರೂ, ಸಮಸ್ಯೆಗಳು ಜೀವನವನ್ನು ಮುಟ್ಟಿದವುಗಳಾಗಿರಬೇಕು. ಮೇಲು ಮೇಲಿನ ಶೃಂಗಾರ ವಾಗಲಿ ಕಾಲೇಜು ಹುಡುಗ ಹುಡುಗಿಯರ ಸರಸ ಜೀವನವಾಗಲಿ ಮಾತ್ರವೇ ಚಿತ್ರಿತವಾದರೆ, ಲೇಖಕನಿಗೆ ಸಾರ್ಥಕ್ಯ ಉಂಟಾಗುವುದಿಲ್ಲ.

ಶೈಲಿಗೆ ಯಾವ ನಿರ್ಬಂಧವೂ ಇಲ್ಲ. ಆದರೆ ಶೈಲಿ ಮತ್ತು ವರ್ಣನಾ ಕ್ರಮವನ್ನು ಕುರಿತು ಒಂದು ಎಚ್ಚರಿಕೆ ಕೊಡಬೇಕು.

ಧಾರವಾಡ ಮೈಸೂರು ಮಂಗಳೂರು ಶೈಲಿಗಳಲ್ಲಿ ಸ್ವಲ್ಪ ಸ್ವಲ್ಪ ಭಿನ್ನತೆಯಿರುವುದರಿಂದ ಒಂದೊಂದು ವೇಳೆ ಆಭಾಸವುಂಟಾಗುತ್ತದೆ. ತಾವು ಉಪಯೋಗಿಸುವ ಭಾಷೆ ಎಲ್ಲಾ ಕಡೆಯವರಿಗೂ ಸಾಧಾರಣವಾಗಿ ತಿಳಿಯು ವಂತೆ ಲೇಖಕರು ಎಚ್ಚರಿಕೆಯಿಂದಲೇ ಇರುತ್ತಾರೆ. ಆದರೆ ಎಂಥವರಿಂದಲೂ ಒಂದೊಂದು ತಪ್ಪು ಸಂಭವಿಸುತ್ತದೆ. ಮೈಸೂರು ಪ್ರಾಂತದವರು ಉಚ್ಚರಿ ಸಲಾಗದ ಒಂದು ಪದ ಧಾರವಾಡದ ಕಡೆ ಅಶ್ಲೀಲವಲ್ಲವಾದರೆ, ಅವರ ದೃಷ್ಟಿ ಯಲ್ಲಿ ಮೈಸೂರವರದು ಯಾವುದೋ ಒಂದು ಶಬ್ದ 'ದುಷ್ಟ'.

ಈಗ ಕನ್ನಡದಲ್ಲಿ ಬಂದಿರುವ ಸಣ್ಣ ಕತೆಗಳಲ್ಲಿ ಅತ್ಯುತ್ತಮವಾದುವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ, ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಿಮೆ ಅಲ್ಲ. ಈ ಕತೆಗಳಲ್ಲಿ ನಮ್ಮ ಜನರ ಬಾಳ್ವೆಯನ್ನು ವ್ಯಕ್ತಿತ್ವ ದೃಷ್ಟಿಯಿಂದ ಚಿತ್ರಿಸಿರುವ ಕತೆಗಳು ಉದಾ. ರಂಗಪ್ಪನ ಮದುವೆ, ದೀಪಾವಳಿ, ಪ್ರೇಮ, ನಮ್ಮ ಮೇಷ್ಟ್ರು ; ನಮ್ಮ ಜನರ ಬಾಳುವೆಯನ್ನು ಸಮೂಹದೃಷ್ಟಿಯಿಂದ ವರ್ಣಿಸಿರುವವುಗಳು ಉದಾ. ಮೊಸರಿನ ಮಂಗಮ್ಮ, ಮೇಲೂರು ಲಕ್ಷ್ಮಮ್ಮ, ಉಗ್ರಪ್ಪನ ಯುಗಾದಿ, ನಾನು ಕೊಂದ ಹುಡುಗಿ; ಪ್ರೇಮದ ವಿಧವಿಧವಾದ ಸೂಕ್ಷ್ಮರೇಖೆ ಗಳನ್ನು ಕೌಶಲ್ಯದಿಂದ ಚಿತ್ರಿಸಿರುವ ಆನಂದರ ಕತೆಗಳು; ಇತಿಹಾಸದ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಬರೆದಿರುವ ನಿಜಗಲ್ಲಿನ ರಾಣಿ ಮತ್ತು ಆಲಂಗಿರಿ; ಪಾತ್ರ ರಚನೆಯನ್ನೇ ಪ್ರಧಾನವಾಗಿಟ್ಟುಕೊಂಡಿರುವ

ಮೋಚಿ ; ಆವರಣಪ್ರಧಾನವಾದ ಇಂದಿರೆಯೋ ಅಲ್ಲವೋ, ವೈಣಿಕ; ಊಹನಾಶಕ್ತಿಪ್ರಧಾನವಾದ ಹೇಮಕೂಟದ ಆಶ್ರಮದಿಂದ ಬಂದ ಮೇಲೆ; ಆಚಾರ್ಯರ ಪತ್ನಿ; ಗಯಟೆ ಕವಿಯ "ಅಂತ್ಯದಿನಗಳು" ; ಒಂದೇ ಪಾತ್ರ ಕಥೆ ಹೇಳುವ "ಮುಟ್ಟದ್ದೆಲ್ಲ ಚಿನ್ನ". ಹಾಸ್ಯಪ್ರಧಾನವಾದ, ನನ್ನ ಭಾವ, ಕರ್ಣ ಪಿಶಾಚ; ಜೀವನದಲ್ಲಿ ಪ್ರಕಟವಾದ ಕರ್ಣಪಿಶಾಚ ಅನೇಕ ವಾಚಕರ ದೃಷ್ಟಿ ಯನ್ನು ಎಳೆದಂತೆ ಕಾಣುವುದಿಲ್ಲ. ಇದನ್ನು ಓದದವರು ರಸಕವಳದಿಂದ ವಂಚಿತರಾಗಿದ್ದಾರೆಂದು ಮಾತ್ರ ಹೇಳಬಲ್ಲೆ. ಬೇಂದ್ರೆ, ಶ್ರೀ ಕೆ. ವಿ. ಪುಟ್ಟಪ್ಪ ಮುಗಳಿ, ಕಾರಂತ್, ಗೋಪಾಲಕೃಷ್ಣರಾಯ, ಅ. ನ. ಕೃಷ್ಣರಾಯ, ಸಿ. ಕೆ. ವೆಂಕಟರಾಮಯ್ಯ, ಶ್ರೀ ಕಲ್ಲೂರ, ರಾಜರತ್ನಂ, ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್, ಹ. ಪಿ. ಜೋಷಿ, ಕ್ಷೀರಸಾಗರ, ಕಲ್ಯಾಣಮ್ಮ ಇವರು ಸಣ್ಣ ಕತೆಗಳಲ್ಲಿ ವಿಧವಿಧಗಳಾದ ಪ್ರಯೋಗಗಳನ್ನು ನಡೆಸಿದ್ದಾರೆ. ಸೌ॥ ಶಾಮಲೆ ಬಿ. ಟಿ. ಜಿ. ಕೃಷ್ಣ, ಕುಮಾರಿ ಪದ್ಮಾವತಿ, ಲೀಲಾಕಾರಂತ್ ಇವರ ಸಣ್ಣ ಕತೆಗಳು—ಹೀಗೇ ಈ ಪಟ್ಟಿ ಬಲವಾಗಿಯೇ ಇದೆ. ಸಂಖ್ಯೆಯಲ್ಲಿಯಾಗಲಿ ವಿವಿಧತೆಯಲ್ಲಿಯಾಗಲಿ ಯಾವ ಸಾಹಿತ್ಯಕ್ಕೂ ಬೀಳುವಂತೆ ಇಲ್ಲ.

ಕನ್ನಡ ಭಾಷೆಯಲ್ಲಿ ಪ್ರಕಟವಾಗಿರುವ ಈ ಸಣ್ಣಕತೆಗಳು ಭಾರತದ ಇತರ ಭಾಷೆಗಳ ಶ್ರೇಷ್ಠ ಕೃತಿಗಳಿಗೆ ಮಾದರಿಗಳಾಗಿವೆ. ಶ್ರೀನಿ ವಾಸರ ಕೃತಿಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿ ಇಂಗ್ಲಿಷ್ ಬಲ್ಲವರ ಮನ್ನಣೆಯನ್ನು ಹೊಂದುತ್ತಿವೆ. *ಇವರ ಎರಡು ಕತೆಗಳನ್ನು (ವೇಣುಗಾನಂ, ಮಂಗಮ್ಮ) ಈ ಹಿಂದೆಯೇ ಮದರಾಸಿನ ಮಾಜಿ ಮಂತ್ರಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮಿಳಿಗೆ ಭಾಷಾಂತರಿಸಿದ್ದರು. ತಮಿಳುನಾಡಿನ ಶ್ರೇಷ್ಠ ವಿಮರ್ಶನಕಾರರೊಬ್ಬರು ಭಾರತಮಣಿ ಮಾಸಪತ್ರಿಕೆಯಲ್ಲಿ ಶ್ರೀನಿವಾಸರ ಕತೆಗಳನ್ನು ಕುರಿತು ಹೀಗೆ ಹೇಳಿದರು ; " ತಮಿಳುಭಾಷೆಯ ಪ್ರಬಲರಾದ ಬರಹಗಾರರು, ಮನೋಹರವಾದ ವರ್ಣನೆ ಸಂವಿಧಾನ ಗಳೊಡನೆ ಕತೆ ಬರೆಯುವುದರಲ್ಲಿ ಗಟ್ಟಿಗರು. ಆದರೆ ಅವರೂ ಸಹ

---

*ಬೇಂದ್ರೆ, ಪುಟ್ಟಪ್ಪ ಇವರ ಕೃತಿಗಳ ವಿಷಯದಲ್ಲಿ ಬಂಗಾಳಿ ಪತ್ರಿಕೆಯಲ್ಲಿ ಪ್ರಶಂಸೆಯ ವಿಮರ್ಶೆಗಳು ಬಂದವು, ಪು. ತಿ. ನರಸಿಂಹಾಚಾರ್ಯರ ಕನ್ನಡ ಪದ್ಯ ಗಳು ತ್ರಿವೇಣಿಯಲ್ಲಿ ಇಂಗ್ಲೀಷಿನಲ್ಲಿ ಅನುವಾದಿತವಾದವು. ವಿಶಾಲಭಾರತಿ ಎಂಬ ಹಿಂದಿ ಪತ್ರಿಕೆಯಲ್ಲಿ ‘ ಹಳ್ಳಿಯ ಚಿತ್ರಗಳು ’ ಅನುವಾದ ಹೊಂದಿತು.

ಮಾಸ್ತಿ ವೆಂಕಟೇಶಯ್ಯಂಗಾರ್ಯರ ಕಲೆಯನ್ನು ಮೆಚ್ಚಿ ಅವರ ಕತೆಗಳನ್ನು ಓದುವುದರಿಂದ, ತಮ್ಮ ಕಲೆಯನ್ನು ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಸೌಂದರ್ಯ ಶಿಖರಕ್ಕೆ ಮುಟ್ಟಿಸಲು ಅವರಿಗೆ ಸಹಾಯವಾಗುವುದು"

ಶ್ರೀನಿವಾಸರು ಹೇಗೆ ಕನ್ನಡ ಕತೆಗೆ ಸೀಮಾ ಪುರುಷರೆಂದೆವೋ ಹಾಗೆಯೇ ಕನ್ನಡ ಸಣ್ಣಕತೆಗಳ ಪ್ರಭಾವ ಯೋಗ್ಯತೆ ಹೆಚ್ಚಾಗಿ ಹೊರಗಿನ ಪ್ರಪಂಚಕ್ಕೆ ತಿಳಿದಿರುವುದೂ ಶ್ರೀನಿವಾಸರ ಕೃತಿಗಳಿಂದಲೇ. "ವೆಂಕಟೇಶ ಐಯಂಗಾರ್ಯರ ಕಲೆ, ಕಲೆಯ ಅಭಾವ, ಅಂದರೆ ಸ್ವಾಭಾವಿಕ. ಇದೇ ಅದರ ಮೂಲಗುಣ. ವಿಷಯಗಳನ್ನು ಸಂಗ್ರಹಿಸಿದ ಸುದ್ದಿಗಾರರಂತೆ ಅವರು ಸರಳವಾಗಿ ಒಳ್ಳೆಯ ಕಲೆಯ ಪರಿಣಾಮವನ್ನುಂಟುಮಾಡುತ್ತಾರೆ. ಪರಿಸ್ಥಿತಿಯ ಸೂಕ್ಷ್ಮಜ್ಞಾನ, ಮನೋಹರತೆ, ಸೌಂದರ್ಯ ಇವೆಲ್ಲಾ ಅವರ ಸ್ವತ್ತು. ಅವರು ಸಂಗತಿಗಳನ್ನು ಎಚ್ಚರಿಕೆಯಿಂದ ಆರಿಸಿಕೊಳ್ಳುತ್ತಾರೆ. ಪೂರ್ವ ಪರಿಣಾಮ ಸರಿಯಾಗಿ ಫಲಕಾರಿಯಾಗಲೆಂದು ಕೆಲವು ಸಾಮಾನ್ಯ ಸಂಗತಿಗಳನ್ನೂ ಆರಿಸಿಕೊಳ್ಳುತ್ತಾರೆ. ಸಂಸಾರದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಮಾತುಗಳೇ ಅವರ ಶೈಲಿ.

"ಮಾಸ್ತಿಯವರ ಕಲೆ, ಅವರ ಉಪಮಾನವನ್ನೇ ಹೇಳಬೇಕಾದರೆ ತಾಯಿಯ ಎದೆಯಲ್ಲಿ ಮುಖವನ್ನು ಅವಚಿಕೊಂಡು ಹಾಲನ್ನು ಹುಡುಕುವ ಮಗುವಿನಂತೆ. ಅದಕ್ಕೆ ಹಾಲು ಮಾತ್ರವಲ್ಲ. ಪ್ರೇಮವೂ ದೊರೆಯುತ್ತದೆ. ಹೇಳುವ ಕ್ರಮ ಸಾದಾ, ತೀರ ಸಾದಾ. ಆದರೆ ಅದರ ಪರಿಣಾಮ ಸುಂದರವಾದ ಅನೇಕ ಸೂಚನೆಗಳು. ಈ ಗುಣಗಳೆಲ್ಲ ಸೇರಿರುವುದರಿಂದಲೇ ನಿಜವಾದ ಸಾಹಿತ್ಯವಾಗುತ್ತದೆ. ಸುಬ್ಬಣ್ಣನ ಪಾತ್ರರಚನೆಯಲ್ಲಿ ಪರಿಪೂರ್ಣತೆಯನ್ನು ಕತೆಗಾರ ಸಾಧಿಸಿದ್ದಾನೆ. ಗಾನ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟುಮಾಡಬಲ್ಲದೋ ಆ ದೃಷ್ಟಿಯಿಂದಲೇ ಈ ಪಾತ್ರದ ರಚನೆಯಾಗಿದೆ. ಸಂಗೀತವೇ ಸರ್ವಸ್ವವಾದ ಸಂಗೀತಗಾರನ ನೈಜಚಿತ್ರ, ಪರಿಪೂರ್ಣವಾದ ಕಲಾದೃಷ್ಟಿಯಿಂದ ಚಿತ್ರಿತವಾಗಿ ಕತೆಯನ್ನು ಬಹಳ ಮೇಲುಮಟ್ಟದ ಕತೆಯನ್ನಾಗಿ ಮಾಡಿದೆ. ಈ ಕತೆಯ ಆದರ್ಶವೂ ಉಜ್ಜ್ವಲವಾಗಿದೆ.

"ಮಾಸ್ತಿಯವರು ಪ್ರಕೃತಿಯನ್ನೂ ಬಾಳನ್ನೂ, ಅದರ ವಿವಿಧತೆಯಲ್ಲಿ

ಚಿತ್ರ ವಿಚಿತ್ರದಲ್ಲಿ ನೋಡುತ್ತಾರೆ. ತಮ್ಮ ಕಲೆಗೂ ತಮಗೂ ನಡುವೆ ಇತರ ಸಂಭಾಷಣೆಗಳನ್ನು ಸಹ ಅವರು ಬರಗೊಡುವುದಿಲ್ಲ. ಹೇಳಬೇಕಾದುದ ನ್ನೆಲ್ಲಾ ತಾವೆ ಹೇಳುತ್ತಾ ತಮ್ಮ ನೇರವಾದ ಸಂಬಂಧವನ್ನು ವಿಷಯ ದೊಂದಿಗೆ ಇಟ್ಟುಕೊಂಡಿರುತ್ತಾರೆ. ಸುಬ್ಬಣ್ಣನಿಗೆ ಸಂಗೀತ ಹೇಗೆ ಸ್ವಾಭಾವಿಕ ವಾಗಿ ಒಲಿಯಿತೋ ಹಾಗೆಯೇ ಮಾಸ್ತಿಗೆ ಈ ಕಲೆ, ಪ್ರಕೃತಿ ತನ್ನ ನಿಸರ್ಗರೂಪದಲ್ಲಿ ಕೊಟ್ಟ ವರ. ಬಂಡೆಗಳ ಮೇಲೂ ಗುಡ್ಡಗಳ ಮೇಲೂ ತನ್ನ ಪಾಡಿಗೆ ತಾನು ಉರುಳುತ್ತಾ ಮಂಜುಳವಾಗಿ ತೊರೆ ಗಾನಮಾಡು ವಂತೆ ಮಾಸ್ತಿಯವರ ಕಲೆ ನಡೆಯುತ್ತದೆ. ಸೌಂದರ್ಯವನ್ನು ನೋಡುವ ಕಣ್ಣುಳ್ಳವರಿಗೆ ಅದರ ಆನಂದ.

"ತಾಯಿಯ ಮೊಲೆಯ ಹಾಲನ್ನು ಎಳೆಯಬೇಕಾದರೂ ಮಗುವಿನ ಕೃತ್ರಿಮವಾದ ಬಾಯಿನ ಸಂಪರ್ಕಬೇಕು. ಹಾಗೆಯೇ ಮಾಸ್ತಿಯವರ ಕಲೆಯನ್ನೂ ಪ್ರತಿಭೆಯನ್ನೂ ಅರಿಯಬೇಕಾದರೆ ಆ ಕಲೆಯನ್ನು ನಾವು ಇದೇ ದೃಷ್ಟಿಯಿಂದ ಹೊಗಬೇಕು."

ಕನ್ನಡ ಕತೆಗಾರರೆಲ್ಲ ಶ್ರೀನಿವಾಸರನ್ನು, ಸಣ್ಣ ಕತೆಗಳ ಆಚಾರ್ಯ ರಾಗಿ ಪರಿಗಣಿಸುತ್ತಿರುವುದರಿಂದಲೂ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸುತ್ತಿರುವುದರಿಂದಲೂ, ಉಳಿದ ಕಥೆಗಳನ್ನು ಕುರಿತು ಹೆಚ್ಚಾಗಿ ಹೇಳುವುದಿಲ್ಲ. ಆದರೆ ಸಣ್ಣ ಕತೆಗಳ ಭವಿಷ್ಯವೇನು? ಮುಂದೆ ಅವು ಬೆಳೆಯಬೇಕಾದ ದಾರಿಯಾವುದು? ಅವು ಆಕ್ರಮಿಸುವ ಕ್ಷೇತ್ರಗಳಾವುವು? ದಿನದಿನವೂ ಬೆಳೆಯುತ್ತಿರುವ ಇತರ ಸಾಹಿತ್ಯದ ಕೃತಿಗಳೊಂದಿಗೆ ಸಮವಾಗಿ ನಿಲ್ಲಬೇಕಾದರೆ ನಮ್ಮ ಸಾಧನೆ ಏನಾಗಬೇಕು? ನಮ್ಮ ಇಂದಿನ ಆತುರ ಜೀವನದಲ್ಲಿ ಈ ಸಾಹಿತ್ಯ ಎಷ್ಟಮಟ್ಟಿಗೆ ನಮ್ಮ ಬಾಳಿನ ಭಾಗವಾಗ ಬಹುದು, ಇವುಗಳನ್ನು ಪ್ರತಿಯೊಬ್ಬ ಸಾಹಿತಿಯೂ ಯೋಚಿಸಬೇಕು.

ಯುವಕ ಸಾಹಿತಿಗಳು ಮುಖ್ಯವಾಗಿ ನಮ್ಮ ದೇಶದ ಜನರ ಬಾಳಿನಿಂದ ಸ್ಫೂರ್ತಿಯನ್ನು ಹೊಂದಬೇಕು. ನಮ್ಮ ಜನರ ಜೀವನದಲ್ಲಿ ಅವರ ಸಾಹಿತ್ಯ ಬೇರು ಬಿಡಬೇಕು. ಸಮತೆಯ ದೃಷ್ಟಿಯಿಲ್ಲದೆ ಯಾವ ಪರಸಂಸ್ಕೃತಿ ಯನ್ನೂ ಬಲಾತ್ಕಾರವಾಗಿ ನಮ್ಮ ಜನರ ಮೇಲೆ ಹೇರಲು ಪ್ರಯತ್ನಿಸ ಬಾರದು. ಸಂಸ್ಕೃತಗೊಡ್ಡು, ಹೇಗೆ ಒಂದು ವಿಧವಾದ ಪಿತ್ಥವೋ

ಇಂಗ್ಲಿಷ್ ಗೊಡ್ಡು ಹೇಗೆ ಒಂದು ವಿಧವಾದ ಪಿತ್ಥವೋ, ರಷ್ಯ ಗೊಡ್ಡೂ ಹಾಗೆಯೇ ಒಂದು ವಿಧವಾದ ಪಿತ್ಥ. ಭಾರತದ ಸಾಹಿತ್ಯ ಸಾಮ್ರಾಜ್ಯದಲ್ಲಿ ಇಂಗ್ಲೆಂಡನ್ನು ಸ್ಥಾಪಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ರಷ್ಯವನ್ನು ಸ್ಥಾಪಿಸುವುದೂ ಸಾಧ್ಯವಿಲ್ಲ. ಭಾರತೀಯರು ಭಾರತವನ್ನು ಭಾರತೀಯರಂತೆ ಮಾತ್ರ ಪ್ರೀತಿಸಬಲ್ಲರು. ರಷ್ಯನರಂತೆ ಪ್ರೀತಿಸಲು ಸಾಧ್ಯವಿಲ್ಲ. ಜಗತ್ತಿನಲ್ಲಿರುವ ಎಲ್ಲ ಸಾಹಿತ್ಯವು ನಮಗೆ ಬೇಕು. ಆದರೆ ಎಲ್ಲವೂ ಅದರದರ ಸ್ಥಾನದಲ್ಲಿರಬೇಕು. ಹಾಗಲ್ಲದೆ ನಾವು, ಸಾಹಿತಿಗಳು, ಬಲಾತ್ಕಾರವಾಗಿ ಜನರ ಮೇಲೆ ಅವುಗಳನ್ನು ಹೇರಲು ಪ್ರಯತ್ನಿಸಿದರೆ ಜನ ಆ ಸಾಹಿತ್ಯವನ್ನು ನಾಶಮಾಡಿಬಿಡುವುದು.

ಮುಂದಲ ದಿನಗಳಲ್ಲಿ ಜಗತ್ತಿನ ಸ್ಥಿತಿಗತಿಗಳನ್ನೂ ಪ್ರಜಾಸ್ವಾತಂತ್ರ್ಯ, ಕೂಲಿ ಭಂಡವಾಳ ಸಮಸ್ಯೆಗಳನ್ನೂ ಕುರಿತ ಸಣ್ಣಕತೆಗಳು ಹೇರಳವಾಗಿ ಹುಟ್ಟುವುವು. ಅವು ನಮ್ಮ ಜನರ ರಕ್ತಗತವಾಗಬೇಕಾದರೆ, ನಮ್ಮ ದೇಶದ ಪರಿಸ್ಥಿತಿಗೆ ಅವು ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಕತೆಗಾರರು ಚೆನ್ನಾಗಿ ಯೋಚಿಸಬೇಕು. ಹಾಗಾಗದಿದ್ದರೆ ಕತೆ ಪುಸ್ತಕದಲ್ಲಿ ಉಳಿಯುವುದು. ಜನ ತಮ್ಮ ಪಾಡಿಗೆ ತಾವು ಇರುವರು. ನಮ್ಮ ಜನರ ಬಾಳಿನಿಂದ ಪ್ರಚೋದಿತವಾದ ಸ್ವತಂತ್ರ ಕೃತಿಗಳೇ ನಮ್ಮ ದೇಶದ ನಿಜವಾದ ಸಾಹಿತ್ಯ. ಮಹಾತ್ಮಾ ಗಾಂಧಿಯವರು ಹೇಳಿರುವಂತೆ ಬರಿಯ ಭಾಷಾಂತರಕಾರರ ಗುಂಪು ಇದ್ದ ಮಾತ್ರಕ್ಕೇ ಯಾವ ನಾಡೂ ಧೀರರ ನಾಡು ಆಗುವುದಿಲ್ಲ. ಭಾಷಾಂತರಕಾರರು ಮಾತ್ರವೇ ಅಲ್ಲ. ಅಂಥರಾಗಿ ಒಂದು ದೇಶದ ಸಾಹಿತ್ಯದಂತೆ ಕ್ರಾಂತಿಸಾಹಿತ್ಯ, ಕೂಲಿಸಾಹಿತ್ಯ, ಖೂನಿಸಾಹಿತ್ಯ, ಲಿಂಗಸಾಹಿತ್ಯ ಇವುಗಳನ್ನು ತಾವೂ ಸೃಷ್ಟಿಸುತ್ತೇವೆಂದು ಹೊರಡುವ ಅನುಕರಣ ಪಟುಗಳ ಸೈನ್ಯದಿಂದಲೂ ನಾಡು ಧೀರರ ನಾಡಾಗುವುದಿಲ್ಲ. ನಮ್ಮ ಜನರಿಗೆ ಅರ್ಪಿಸುವ ಸಾಹಿತ್ಯ ನಮ್ಮ ಜನರ ಬಾಳಿಂದ ಹುಟ್ಟಿದುದಾಗಬೇಕು. ನಮ್ಮ ಜನರ ಬಾಳನ್ನು ತಿದ್ದುವುದಾಗಿರಬೇಕು. ನಮ್ಮ ಜನರ ಬಾಳನ್ನು ಬೆಳಗುವುದಾಗಿರಬೇಕು.

ಪರದೇಶದಲ್ಲಿ ಅಸಂಖ್ಯಾತವಾಗಿ ಬೆಳೆಯುತ್ತಿರುವ ಸಾಹಿತ್ಯಗಳನ್ನು ನೋಡಿ ನಮಗೆ ದೈನ್ಯವುಂಟಾಗುತ್ತದೆ. ನಾವು ಅಂತಹ ರಸಋಷಿಗಳನ್ನು

ಸೃಷ್ಟಿಸುವುದು ಯಾವಾಗ ಎಂದು ಕೊರಗುತ್ತೇವೆ. ಹಿಂದೆ ನಮ್ಮಲ್ಲಿ ವಾಲ್ಮೀಕಿ, ವ್ಯಾಸ, ಕಾಳಿದಾಸರು ಹುಟ್ಟಿ, ಭಾರತದ ಹೆಸರು ಜಗದ್ವಿಖ್ಯಾತ ವಾಗುವಂತೆ ಮಾಡಿದರು. ಇಂದಿಗೂ ಭಾರತೀಯರಾದ ನಮಗೆ ಉಳಿದಿರುವ ಸಾಹಿತ್ಯ ಆ ಋಷಿಗಳ ಕೃತಿಗಳೇ ಹೊರತು ಬೇರೆ ಇಲ್ಲ. ಸಾಹಿತ್ಯದ ಸೃಷ್ಟಿ ಒಂದು ತಪಸ್ಸು. ಒಂದು ಸಾಧನೆ. ಅದು ಹಟದಿಂದಾಗಲಿ ಕರುಬಿ ನಿಂದಾಗಲಿ ಕರಗತವಾಗುವುದಿಲ್ಲ. ಅದು ಸುಲಭವಾಗಿ ಇತರ ಸಾಹಿತ್ಯಗಳ ಅನುಕರಣ ಉಪಾಯದಿಂದಲೂ ಸಾಧ್ಯವಾಗುವುದಿಲ್ಲ. ಕಾವ್ಯದೇವಿಯ ಮುಂದೆ ಅನೇಕಕಾಲ ನಮ್ರತೆಯಿಂದ ಮಂಡಿಯೂರಿ ಮೂಗು ಉಜ್ಜಬೇಕು. ಪುಸ್ತಕ ಜ್ಞಾನದೊಂದಿಗೆ ಜೀವನವನ್ನೂ ನೋಡಿದ ಜ್ಞಾನವನ್ನು ಸಂಪಾ ದಿಸಬೇಕು. ಜ್ಞಾನಾರ್ಜನೆಯ ದೀಕ್ಷೆಯನ್ನು ಹೊಂದಬೇಕು. ಹೀಗೆ ತಪಸ್ಸು ಮಾಡಿದಾಗ ಎಲ್ಲೋ ಒಂದುಸಲ ಕಾವ್ಯದೇವಿ ಪ್ರತ್ಯಕ್ಷವಾದಾಗ ಒಂದೇ ಒಂದು ಸಣ್ಣ ಕತೆಯನ್ನೋ ಭಾವಗೀತೆಯನ್ನೋ ಬರೆದರೂ ಸಾಕು. ಅದು ನಿಮ್ಮ ಜೀವದ ಜೀವ, ನಿಮ್ಮ ರಕ್ತದ ರಕ್ತ, ನಿಮ್ಮ ಉಸಿರಿನ ಉಸಿರು, ನಿಮ್ಮ ಸ್ವಂತದ ಸ್ವಂತ. ಅಲ್ಲಿಂದ ಮುಂದೆ, ಹಿಂದೆ, ನಿಮ್ಮ ಕೃತಿ ಏನೂ ಇಲ್ಲದಿದ್ದರೂ ಚಿಂತೆಯಿಲ್ಲ. ಹಾಗಲ್ಲದೆ, ಅರ್ಧ ಅಗಿದ ಆಹಾರವನ್ನು ತಿಂದು ಅಜೀರ್ಣಗೊಳ್ಳುವಂತೆ ಸಿಕ್ಕಿಸಿಕ್ಕಿದ್ದನ್ನು ಬರೆದು ಸುಮ್ಮನೆ ನೂರಾರು ಪುಟಗಳನ್ನು ತುಂಬುವುದರಿಂದಲೂ ಪ್ರಯೋಜನವಿಲ್ಲ. ಇಂದಿನ ಯುವಕರೂ ಹೊಸ ಬರಹಗಾರರೂ ಮುಖ್ಯವಾಗಿ ಈ ಸೂಚನೆ ಗಮನಿಸಬೇಕು. ಅಸಂಖ್ಯಾತವಾಗಿ ಹೊರಡುತ್ತಿರುವ ಪತ್ರಿಕೆಗಳಲ್ಲಿ ವಾರ ವಾರವೂ ತಿಂಗಳುತಿಂಗಳೂ ಕತೆಗಳು ಪ್ರಕಟವಾಗುತ್ತಿರುವುದಷ್ಟೆ. ಈ ಕತೆ ಗಳಲ್ಲಿ ಓಹೆನ್ರಿ, ಮೋಪಾಸಾ,ಜೆಕಬ್ಸ್ ಓನೀಲ್ ಗಾಲ್ಸ್‌ವರ್ದಿ ಮುಂತಾದವರ ಕತೆಗಳೆಲ್ಲಾ ಬಗೆಬಗೆಯ ವೇಷಗಳನ್ನು ಹಾಕಿಕೊಂಡು ಬೇರೆ ಬೇರೆ ಬರಹಗಾರರ ಹೆಸರಿನಲ್ಲಿ ಬರುತ್ತಿವೆ. ನಮ್ಮ ಎಲ್ಲ ಸಂಪಾದಕರಿಗೆ ಈ ಕೃತಿಚೌರ್ಯ ತಿಳಿಯುವುದು ಸಾಧ್ಯವಿಲ್ಲ. ಅನೇಕ ವೇಳೆ, ಹೊಸದಾಗಿ ಸಾಹಿತಿ ಗಳಾಗುತ್ತಿರುವವರೂ, ಹಳೆಯ ಹೆಸರಾದ ನುರಿತ ಸಾಹಿತಿಗಳೂ ಗಮನಿಸ ಬೇಕಾದ ಅಂಶ ಮತ್ತೊಂದಿದೆ. ಆಧುನಿಕ ಜ್ಞಾನಾರ್ಜನೆಯ ಸೌಕರ್ಯದಿಂದ ಜನರಲ್ಲಿ ತಿಳುವಿನ ಮಟ್ಟ ದಿನದಿನಕ್ಕೂ ಹೆಚ್ಚುತ್ತಿದೆ. ಅವರು ಕತೆಗಾರನಲ್ಲಿ

ಹೆಜ್ಜೆಹೆಜ್ಜೆಗೂ ಉತ್ತಮತೆಯನ್ನು ನಿರೀಕ್ಷಿಸುತ್ತಾರೆ. ಆಧುನಿಕ ನಾಗರಿಕತೆಯ ಸೌಕರ್ಯಗಳಿಂದ, ಒಬ್ಬನ ಕೃತಿಯನ್ನು ಮತ್ತೊಬ್ಬನ ಕೃತಿಯೊಂದಿಗೆ ಹೋಲಿಸಲು ಅನುಕೂಲಗಳಿವೆ. ನಿನ್ನೆಯ ಸಂಗೀತಗಾರನೊಂದಿಗೆ ಇವತ್ತಿನ ಸಂಗೀತಗಾರ, ನಿನ್ನೆಯ ನಟನೊಂದಿಗೆ ಇಂದಿನ ನಟ, ನಿನ್ನೆಯ ಕತೆಗಾರನೊಂದಿಗೆ ಇಂದಿನ ಕತೆಗಾರ, ಈ ಸ್ಪರ್ಧೆಯಲ್ಲಿ ನಾವು ಜಗತ್ತನ್ನೇ ಎದುರಿಸಬೇಕು. ಜನ ಒಳ್ಳೆಯದನ್ನು ಸ್ವಾಭಾವಿಕವಾಗಿ ಸಾಯಗೊಡುವುದಿಲ್ಲ. ಎತ್ತಿಹಿಡಿಯುತ್ತದೆ. ಆದರೆ ಕೆಟ್ಟದ್ದನ್ನು ಜನ ಹೆಚ್ಚುಕಾಲ ಅಪ್ಪುವುದಿಲ್ಲ. ನಮ್ಮದು ಎಂಬ ಮಾತ್ರದಿಂದಲೂ ಜನ ಕೆಟ್ಟದ್ದನ್ನು ಪ್ರೋತ್ಸಾಹಿಸುವುದಿಲ್ಲ. ಕನ್ನಡ ಚಲನ ಚಿತ್ರ, ನಾಟಕ ಸಂಗೀತ ನಡೆಯುತ್ತಿದ್ದರೂ, ಅವು ಸರಿಯಾದ ಮಟ್ಟಕ್ಕೆ ಬರದಿದ್ದರೆ ಜನ ತಮಿಳು, ತೆಲುಗು, ಹಿಂದಿ ಇಂಗ್ಲಿಷ್ ಚಿತ್ರಗಳಿಗೆ ಹೋಗುವಂತೆ; ಕನ್ನಡಲೇಖಕರೂ ಕಾದಂಬರಿಕಾರರೂ ಸಣ್ಣಕತೆಗಾರರೂ ಕವಿಗಳೂ ತಪಸ್ಸುಮಾಡಿ ಜನತಾಜನಾರ್ದನಿಗೆ ಅರ್ಹವಾದ ಕೃತಿಗಳನ್ನು ಒಪ್ಪಿಸಿ ಜನತೆಯನ್ನು ಒಲಿಸಿಕೊಳ್ಳಬೇಕು. ಕೃತಿ, ಸರಿಯಾದ ಮಟ್ಟಕ್ಕೆ ಬರದಿದ್ದರೆ ಇಂಗ್ಲಿಷ್‌ಬಲ್ಲವನು ಇಂಗ್ಲಿಷ್ ಸಾಹಿತ್ಯಕ್ಕೆ ಹೋಗುತ್ತಾನೆ. ತಮಿಳು ಬಲ್ಲವರು ತಮಿಳಿಗೆ; ಹಿಂದಿ ಬಲ್ಲವರು ಹಿಂದಿಗೆ; ಉರ್ದುದವರು ಉರ್ದುಗೆ, ತೆಲುಗರು ತೆಲುಗಿಗೆ; ಮರಾಠಿ ಬಲ್ಲವರು ಮರಾಠಿಗೆ. ಈ ದುರದೃಷ್ಟದ ಕನ್ನಡ ನಾಡಿನಲ್ಲಿ ಕನ್ನಡಿಗರನ್ನು ಎಳೆಯಲು ಇಷ್ಟು ಭಾಷೆಗಳೂ ಸಂಚುಮಾಡುತ್ತಿವೆ.

ಜನ ನಮ್ಮ ಬಂಜೆತನವನ್ನು ಕಂಡು, ಬಿಟ್ಟು, ಬೇರೆ ಕಡೆಗೆ ತಿರುಗಿಬಿಡುವುದಕ್ಕೆ ಅವಕಾಶಕೊಡದೆ ಪ್ರತಿಯೊಬ್ಬ ಕತೆಗಾರನೂ ತನ್ನದಾದ ಅತ್ಯುತ್ತಮ ಕೃತಿಯನ್ನೇ ಜನತೆಗೆ ನೀಡುತ್ತಾ ಹೋಗಬೇಕು.

‘ಮಸಿ ಕುಡಿಕೆಯನು ಬಿಸುಡು, ಲೇಖನಿಯನೆಸೆಯುತ್ತ,
ಪ್ರಖರ ಧೀ ಲೇಖನಿಯಿನೆದೆಯ ತೋಡು;
ಬಿಸಿ ರಕ್ತ ಕುದಿದು ಬರೆ ಅದನದ್ದಿ ನೀನು ಬರೆ
ಮೂಡುವುದು ನಿನ್ನದೇ ಹೊಸತು ಹಾಡು.’

—

ಗ ಯ ಟೆ

ಜರ್ಮನ್ ಸಾಹಿತ್ಯದ ವೈಭವದ ಬಹುಭಾಗಕ್ಕೆ ಮೂಲಪುರುಷರು ಜರ್ಮನಿಯ ಮಿನ್ನೆಸಿಂಗರ್ಸ್ ಮತ್ತು ಮಾಸ್ಟರ್ ಸಿಂಗರ್ಸ್ (Minnes-ingers and Master singers) ಕವಿ ಗಾಯಕರು. ರೈನ್ ನದಿಯ ತೀರದ ಗುಡ್ಡಗಳು, ಅರಮನೆಗಳು, ಅರಣ್ಯಗಳು ಆ ಕವಿಗಾಯಕರ ಕಾವ್ಯ ಸುಧೆಯನ್ನು ಇಂದಿಗೂ ವರ್ಷಿಸುತ್ತಿವೆ. ಆ ರಸ ಋಷಿಗಳು ಜರ್ಮನಿಯನ್ನು ರಸಿಕರ ನಾಡಾಗಿ ಮಾಡಿದರು.

ಮಿನ್ನೆಸಿಂಗರ್ಸ್ ಕವಿಗಾಯಕರು ಪ್ರೇಮದ ವಿಷಯವನ್ನು ಪಾಡುತ್ತಿದ್ದರು; ಅರಮನೆಗಳು, ಶೂರಧೀರರು, ರಾಜರಾಣಿಯರು, ಸಾಹಸಿಗಳ ಕತೆಗಳು, ಯಾತ್ರೆಗಳು, ಸುಂದರಿಯರು ಇವರನ್ನು ಕುರಿತು ಹಾಡುತ್ತಿದ್ದರು. ಹದಿಮೂರನೆಯ ಶತಮಾನದಲ್ಲಿ ಇವರ ಪ್ರಭಾವ ವಿಶೇಷವಾಗಿತ್ತು. ಇವರು ಪ್ರಾಚೀನ ಜರ್ಮನ್ ಜನರ ಕಥೆ ಪುರಾಣಗಳಿಂದ ಬಗೆಬಗೆಯ ಬೇರೆಬೇರೆಯಾದ ಸಂಗತಿಗಳನ್ನು ಆರಿಸಿಕೊಂಡು ಹಾಡಿ ಅವುಗಳನ್ನೆಲ್ಲಾ ಒಟ್ಟಾಗಿ ಶೂರಗೀತೆಗಳನ್ನಾಗಿ ಹೆಣೆಯುತ್ತಿದ್ದರು. (Haroic Ballad) ಅನಂತರ ಕಿಂಗ್ ಆರ್ಥರ್ ಮುಂತಾದ ಧೀರರ ಕಥೆಗಳು ಬಂದುವು. ಕೊನೆಗೆ ಕ್ರಿಸ್ತಮತದ ಪುರಾಣಸಂಗತಿಗಳಿಗೆ ಅವರ ಗಾನದಲ್ಲಿ ಹೆಚ್ಚಾದ ಪ್ರಾಮುಖ್ಯತೆಯುಂಟಾಯಿತು. ಆದರೆ ಜರ್ಮನ್ ಮಹಾಸಾಹಿತ್ಯದ ಉದಯವು ಮತ್ತೆ ಕತ್ತಲೆಯಲ್ಲಿಯೇ ಅಡಗಿಹೋಯಿತು.

ಹದಿನೈದನೆಯ ಶತಮಾನದಲ್ಲಿ ಆ ಸಾಹಿತ್ಯಕ್ಕೆ ಮತ್ತೆ ಜೀವ ಬಂದಿತು. ಮಾಸ್ಟರ್ ಸಿಂಗರ್ಸ್ ಗಾಯಕರು ಅದಕ್ಕೆ ಹೊಸ ಬೆಳಕನ್ನು ಕೊಟ್ಟರು. ಅವರು ನಮ್ಮ ದಾಸರುಗಳಂತೆ ದೇಶದ ಮೇಲೆಲ್ಲಾ ಗಾನದ ಸಂಸ್ಥೆಗಳನ್ನೂ ಕೂಟಗಳನ್ನೂ ಗುಂಪುಗಳನ್ನೂ ಸ್ಥಾಪಿಸಿದರು. ಬಡಗಿಗಳು ಕಮ್ಮಾರರು ನೆಯ್ಗೆಯವರು ಚಿಪ್ಪಿಗರು ಮುಂತಾದ ದುಡಿಮೆಯ ಆಳುಗಳೆಲ್ಲಾ ಆ ಗುಂಪುಗಳ ಸದಸ್ಯರಾಗಿದ್ದರು. ಪ್ರಾಸದೊಂದಿಗೆ ಮಾತನಾಡುವುದೂ ಪದ್ಯವನ್ನು ಕಟ್ಟುವುದೂ ಬೆಂಕಿಯಂತೆ ಹರಡಿತು. ವೈದ್ಯರು ರೋಗಿಗಳಿಗೆ ಪದ್ಯದಲ್ಲಿಯೇ

ಔಷಧಿ ಪಥ್ಯಗಳನ್ನು ಬರೆದು ಕೊಡುತ್ತಿದ್ದರು. ಪಟ್ಟಣಗಳ ಇತಿಹಾಸ ಗಳನ್ನೆಲ್ಲಾ ಚರಿತ್ರೆಕಾರರು ಪದ್ಯಗಳಲ್ಲಿಯೇ ಬರೆದರು. ಈ ಮಾಸ್ಟರ್ ಸಿಂಗರ್ಸ್ಸರಲ್ಲಿ ಅತ್ಯಂತ ಪ್ರಮುಖನಾಗಿದ್ದವನು ಹಾನ್ಸ್ (Hans Schas) ಎಂಬ ಚಮ್ಮಾರನು. ವಾಗನರ್‌ನ ಗೀತನಾಟಕದಲ್ಲಿ ಇವನದೇ ಅತ್ಯಂತ ಪ್ರಮುಖವಾದ ಮತ್ತು ಮುಖ್ಯವಾದ ಪಾತ್ರವಾಯಿತು.

ಜರ್ಮನ್ ಸಾಹಿತ್ಯದಲ್ಲಿ ಮಹಾಕಾವ್ಯಗಳ ಯುಗವು ೧೮ನೇ ಶತ ಮಾನದ ವರೆಗೆ ಪ್ರಾರಂಭವಾಗಲಿಲ್ಲವೆಂದೇ ಹೇಳಬಹುದು. ಈ ಹೊಸ ಯುಗಕ್ಕೆ ಕವಿಗಳೇ ಮುಂದಾಳುಗಳಾದರು. ಇವರಲ್ಲಿ ಮೊದಲನೆಯವನೇ ಕ್ಲೊಪ್‌ಸ್ಟಾಕ್ (klopstock) ಎಂಬ ಕವಿ. ಕ್ರಿಸ್ತನನ್ನು ಕುರಿತು ಇವನ ನೀಳ್ಗಾವ್ಯವು ಜರ್ಮನ್ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧವಾಗಿದೆ. ಆ ನೀಳ್ಗಾವ್ಯದ ಗಾನಮಾಧುರ್ಯವು ಅದ್ಭುತವಾಗಿದೆ. ಅವನ ಅನಂತರ ಜರ್ಮನಿಯ ಪ್ರಚಂಡಮೇಧಾವಿಯೂ ಜಗತ್ಪ್ರಸಿದ್ಧಕವಿಗುರುವೂ ಆದ ಗಯಟೆ ಬಂದನು. ಜತೆಯಲ್ಲಿ ಶಿಲ್ಲರ್ ಕವಿಯ ಪ್ರವೇಶವೂ ಆಯಿತು, ಶಿಲ್ಲರ್‌ನ ಪ್ರಸಿದ್ಧಿಯು ಮುಖ್ಯವಾಗಿ ಅವನ 'ಕಳ್ಳರು' ಎಂಬ ದುಃಖ ನಾಟಕದ ಮೇಲೆ ಅವಲಂಬಿಸಿದೆ. ಆ ನಾಟಕದಲ್ಲಿ ಕಳವು ಸ್ವಾತಂತ್ರ್ಯ ಮುಂತಾದುವುಗಳ ಮೇಲೆ, ಕ್ರಾಂತಿಕಾರಕಗಳಾದ ಅಭಿಪ್ರಾಯಗಳಿವೆ. ಮುಂದೆ ಶಿಲ್ಲರ್ ಕವಿಯೇ ಸ್ವಿಟ್‌ಜರ್ಲೆಂಡ್ ದೇಶದ ರಾಷ್ಟ್ರೀಯ ಮಹಾ ಪುರುಷನಾದ ವಿಲಿಯಂಟೆಲ್‌ನನ್ನು ಕುರಿತು ಬರೆದ ನಾಟಕದಲ್ಲಿ ಈ ಕ್ರಾಂತಿಕಾರಕಗಳಾದ ಅಭಿಪ್ರಾಯಗಳನ್ನು ಬಹಳ ಹೃದಯಂಗಮವಾಗಿ, 'ಕಳ್ಳರು' ಎಂಬುದರಲ್ಲಿ ಬಂದಿರುವುದಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾನೆ.

ಷೇಕ್ಸ್‌ಪಿಯರ್ ಕವಿಯು ಇಂಗ್ಲಿಷರಿಗೆ ಹೇಗೋ, ಗಯಟೆಯು ಜರ್ಮನ್‌ರಿಗೆ ಹಾಗೆ. ಆದರೆ ಇಂಗ್ಲಿಷಿನವರು ಯಾವಾಗಲೂ ಹೊಸ ಅಭಿಪ್ರಾಯಗಳನ್ನೂ ಹೊಸ ಜನರನ್ನೂ ಬೇಗ ಒಪ್ಪುವವರಲ್ಲ. ಗಯಟೆಯ ಮಹಿಮೆಯನ್ನು ಅವರಿಗೆ ತಿಳಿಸಲು ಥಾಮಸ್‌ಕಾರ್ಲೈಲ್ ಬೇಕಾಯಿತು. ಕಾರ್ಲೈಲ್ ಇಲ್ಲದಿದ್ದಿದ್ದರೆ, ಗಯಟೆಯ ಮಹಿಮೆ ಇಂಗ್ಲಿಷರಿಗೆ ಎಂದಿಗೂ ತಿಳಿಯುತ್ತಿರಲಿಲ್ಲ. ಗಯಟೆ, ಕಾರ್‌ಲೈಲ್‌ನ ಅದ್ಭುತ ಶೋಧನೆ; ಕಾರ್

ಲೈಲ್ ಸ್ವರ್ಗಸ್ಥನಾಗುವವರೆಗೆ ಗಯಟೆಯನ್ನು ಕುರಿತು ಹೊಸ ಹೊಸ ಸಂಗತಿಗಳನ್ನು ಹೇಳುತ್ತಲೇ ಇದ್ದನು. ಆದುದರಿಂದಲೇ ಕಾರ್‌ಲೈಲ್‌ನು ಗಯಟೆಯನ್ನು ಕುರಿತು ಹೀಗೆ ಹೇಳಿದ್ದಾನೆ "ಗಯಟೆಯನ್ನು ನೋಡಿಪರೆ ನಮಗೆ ಒಂದು ವಿಷಯ ಪತ್ತೆಯಾಗುತ್ತದೆ, ತತ್ವಶಾಸ್ತ್ರ ಯಾವುದನ್ನು ಮನುಷ್ಯ ಎಂದು ಹೇಳುತ್ತದೋ ಅದರ ನಿಜವಾದ ಪೂರ್ಣವಾದ ಅರ್ಥದಲ್ಲಿ ನಮ್ಮ ಕಾಲದ ಮನುಷ್ಯ ಗಯಟೆಯೆ. ಅವನು ಋಷಿಯೂ ಅಲ್ಲ, ಘಾತುಕನೂ ಅಲ್ಲ; ಉದಾರಿಯೂ ಅಲ್ಲ, ತಿರುಕನೂ ಅಲ್ಲ; ಪಾಷಂಡಿಯೂ ಅಲ್ಲ; ಭಕ್ತನೂ ಅಲ್ಲ; ಆದರೆ ಇವುಗಳೆಲ್ಲಾ ಪೂರ್ಣವಾಗಿ ಶುದ್ಧವಾಗಿ ಸೇರಿಕೊಂಡಿರುವ ಪ್ರಾಣಿ ಮನುಷ್ಯ— "A clear and universal Man"

ಗಯಟೆಯು ಧನಿಕರ ಮತ್ತು, ಬಡವರ ಸಮರಸದ ಫಲವಾಗಿದ್ದನು. ಅವನ ತಂದೆ ಮತ್ತು ಅಜ್ಜ ಊರಿನಿಂದ ಊರಿಗೆ ಜನರಿಗೆ ಬಟ್ಟೆಗಳನ್ನು ಹೊಲಿದುಕೊಡುತ್ತಾ ತಿರುಗುತ್ತಿದ್ದ ಚಿಪ್ಪಿಗರಾಗಿದ್ದರು. ಆದರೆ ಅವನ ತಾಯಿಯ ಕಡೆ, ಗಯಟೆಯ ಅಜ್ಜನು, ಅರಮನೆಯಲ್ಲಿ ಮುಖ್ಯ ಅಧಿಕಾರಿಯಾಗಿ ತನ್ನ ನಗರದ ನ್ಯಾಯಾಧಿಪತಿಯಾಗಿದ್ದನು. ಗಯಟೆಯ ಜತೆಯಲ್ಲಿ ಜನಿಸಿದ್ದ ಇತರ ಮಕ್ಕಳು ಯಾರೂ ಉಳಿಯಲಿಲ್ಲ. ಗಯಟೆಯ ತಾಯಿಗೆ ಒಳ್ಳೆಯ ಮುಂದಾಲೋಚನೆಯಿದ್ದಿತು. ಅವಳು ಗಯಟೆಯನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದಳು. ಗಯಟೆಯ ತಂದೆ. ಮಗನ ವಿದ್ಯಾಭ್ಯಾಸವನ್ನು ಬಹು ಶ್ರದ್ಧೆಯಿಂದ ಮಾಡಿಸಿದನು. ವಕೀಲನಾಗಿದ್ದ ಅವನ ವ್ಯವಹಾರ ಜ್ಞಾನವು ಅದ್ಭುತವಾಗಿದ್ದಿತು. ಈ ಪ್ರಭಾವಗಳಲ್ಲಿ ಗಯಟೆಯ ಬಾಲ್ಯವು ಬಹಳ ಚೆನ್ನಾಗಿ ಬೆಳೆಯಿತು. ಅವನ ನಡತೆಯೂ ಸ್ವಭಾವವೂ ವಿಕಾಸ ಹೊಂದಿದವು. ಅವನು ಗಣಿತ, ಸಂಗೀತ, ಇತರ ಭಾಷೆಗಳು (ಪ್ರಾಚೀನ ಮತ್ತು ಅರ್ವಾಚೀನ) ನ್ಯಾಯಶಾಸ್ತ್ರ, ಸಾಹಿತ್ಯ, ಕಲೆ ಇವುಗಳನ್ನೆಲ್ಲಾ ಅಭ್ಯಾಸ ಮಾಡಿದನು. ಗಯಟೆಯು ಅನೇಕ ಕೈಕಸಬುಗಳನ್ನು ಕೂಡ ಕಲಿತನು. ಕುಕ್ಕೆಗಳನ್ನು ಮಾಡುವುದು ಅವನಿಗ ಬರುತ್ತಿದ್ದಿತು. ಈ ಎಲ್ಲಾ ಅನುಭವಗಳಿಂದ ಅವನ ಜ್ಞಾನವು ಅದ್ಭುತವಾಯಿತು. ಅವನ ಕಾವ್ಯಗಳಲ್ಲಿ ಅವನ ಈ ಅದ್ಭುತವಾದ ಜ್ಞಾನ ಮತ್ತು ವಿಶಾಲ ಪಾಂಡಿತ್ಯ ಎಲ್ಲೆಲ್ಲೂ ಕಾಣುತ್ತಿದೆ.

ಗಯುಟೆ ಜನಿಸಿದುದು ೧೭೪೯ರಲ್ಲಿ (೨೮-೮-೧೭೪೯). ಅವನು ಬಹುಕಾಲ ಬದುಕಿದ್ದುದರಿಂದ ಅನೇಕ ಮುಖ್ಯ ಸಂಗತಿಗಳು ಅವನಿಗೆ ಅನುಭವವಾದುವು. ಫೆಡರಿಕ್ ದಿ ಗ್ರೇಟ್ ಚಕ್ರವರ್ತಿಯು, ಆಸ್ಟ್ರಿಯಾ ರಶಿಯಾ ಮತ್ತು ಫ್ರಾನ್ಸುಗಳ ಮೇಲೆ ಹೂಡಿದ ಏಳು ವರ್ಷದ ಯುದ್ಧದ ಕಾಲಕ್ಕೆ ಗಯುಟೆಯು ಆಗಲೇ ತನ್ನ ವ್ಯಾಸಂಗಗಳಿಗೆ ಮೊದಲಿಟ್ಟಿದ್ದನು. ವಾಟರ್‌ಲು ಕದನದ ವೇಳೆಗೆ ಗಯುಟೆಯು ಆಗಲೇ ತನ್ನ ಆತ್ಮಕಥೆಯನ್ನು ಬರೆಯಲು ಪ್ರಾರಂಭಿಸಿದ್ದನು. ಇಗ್ಲೆಂಡಿನಲ್ಲಿ ಜನರು ಕ್ರಾಂತಿ ಎದ್ದು ಘಟನಾಬದ್ಧವಾದ ಸರ್ಕಾರವನ್ನು ಸ್ಥಾಪಿಸಿದಾಗ, ಗಯುಟೆಯು ಪ್ರಾಣಿ ಶಾಸ್ತ್ರದಲ್ಲಿ ಉತ್ಸಾಹವುಳ್ಳವನಾಗಿ ಅದರ ವ್ಯಾಸಂಗದಲ್ಲಿ ತೊಡಗಿದ್ದನು.

ಅವನು ತನ್ನ ಯೌವನ ಕಾಲದಲ್ಲಿ ಫ್ರಾಂಕ್‌ಫರ್ಟ್ ನಗರದಲ್ಲಿ ಇರುತ್ತಿದ್ದನು. ಅಲ್ಲಿ ವರುಷಕ್ಕೆ ಒಂದು ಸಲ ಭಾರಿ ಜಾತ್ರೆ ನೆರೆಯುತ್ತಿದ್ದಿತು. 'ಪ್ರಪಂಚದ' ಎಲ್ಲಾ ಕಡೆಯಿಂದಲೂ ವ್ಯಾಪಾರಿಗಳು ಅಲ್ಲಿಗೆ ಬಂದು ತಮ್ಮ ಉತ್ಕೃಷ್ಟ ವಸ್ತುಗಳನ್ನು ಪ್ರದರ್ಶಿಸುತ್ತಿದ್ದರು. ಫ್ರಾಂಕ್ ಫರ್ಟ್‌ನಗರ ಹಳೆ ಕಾಲದ, ಹಳೆ ಪದ್ಧತಿಗಳ, ಹಳೆ ವೈಭವಗಳ ನಗರವಾಗಿತ್ತು. ಆ ಊರು ಗಯುಟೆಯ ಉತ್ಸಾಹವನ್ನೂ ಕುತೂಹಲವನ್ನೂ ಕಾವ್ಯಶಕ್ತಿಯನ್ನೂ ವಿಕಾಸಗೊಳಿಸಿತು. ಬಾಲ್ಯದಿಂದಲೂ ಕಥೆಗಳನ್ನು ಹೇಳುವುದರಲ್ಲಿ ಗಯುಟೆಯ ಶ್ರದ್ಧೆ ವಿಶೇಷವಾಗಿದ್ದಿತು. ಅವನು ಅನೇಕ ಗಂಟೆಗಳಕಾಲ ಒಂದೇ ಸಮನಾಗಿ ಹೇಳುತ್ತಿದ್ದ ಅದ್ಭುತರಮ್ಯ ಕಥೆಗಳನ್ನು (Fairy Tales) ಕೇಳಿ ಅವನ ಬಾಲ್ಯದಲ್ಲಿ, ಸ್ನೇಹಿತರು ಬೆರಗಾಗುತ್ತಿದ್ದರು. ಅವನ ವದನದಲ್ಲಿ ಕಾವ್ಯವಾಣಿ ಪೂರ್ಣವಾದ ತೇಜಸ್ಸಿನಿಂದ ನಲಿದಾಡತೊಡಗಿದಳು. ಫ್ರಾಂಕ್ ಫರ್ಟ್‌ನಲ್ಲಿದ್ದ ನಾಟಕಶಾಲೆ ಅವನನ್ನು ಎಳೆಯಿತು. ಸುಖ, ದುಃಖದ ನಾಟಕಗಳನ್ನು ಬರೆದನು. ಆದರೆ ಆ ವಿಷಯವನ್ನು ಗುಟ್ಟಾಗಿ ಇಟ್ಟದ್ದನು.

ಗಯುಟೆಯ ತಂದೆಗೆ ಮಗನನ್ನು ವಕೀಲನನ್ನಾಗಿ ಮಾಡಬೇಕೆಂದು ಇಷ್ಟವಿತ್ತು. ಆದರೆ ನ್ಯಾಯಶಾಸ್ತ್ರಕ್ಕೆ ನಷ್ಟವಾದದು, ಸಾಹಿತ್ಯಕ್ಕೆ ಲಾಭವಾಯಿತು. ಲಿಪ್‌ಜಿಗ್ (Leipzig) ವಿಶ್ವವಿದ್ಯಾಲಯದಲ್ಲಿ ಅವನು ಮಾಡಿದ ನ್ಯಾಯಶಾಸ್ತ್ರ ವ್ಯಾಸಂಗ, ಪ್ರೇಮ ಗೀತಗಳನ್ನು ಬರದುದು, ಕೆಲವು

ವೇಳೆಪ್ರೀತಿಸಿಪುದೂ—ಆಯಿತು. ಅವನ ಲೇಖನಿ ನಾಟಕಕ್ಕೂ ತಿರುಗಿತು. ಆ ವೇಳೆಗೆ ಅವನಿಗೆ ಖಾಯಿಲೆ ಆಯಿತು. ಆದರೂ ಗಯಟೆಯು ವ್ಯಾಸಂಗವನ್ನು ಬಿಡಲಿಲ್ಲ. ನ್ಯಾಯಶಾಸ್ತ್ರದಲ್ಲಿ ತೇರ್ಗಡೆಹೊಂದಿದನು. ಆದರೆ ನ್ಯಾಯವಾದಿಯಾಗಿ ಹೋಗಲೇ ಇಲ್ಲ. ತನ್ನ ಜೀವನವನ್ನು ಕಾವ್ಯಕ್ಕೂ ನಾಟಕಕ್ಕೂ ಧಾರೆ ಎರೆದನು.

ಆ ವೇಳೆಗೆ ಗಯಟೆಯ ಜೀವನದಲ್ಲಿ ದೊಡ್ಡ ಬದಲಾವಣೆಯಾಯಿತು. ಅವನು ತುಂಬ ದೇಶಸಂಚಾರಮಾಡಿ ತನ್ನಅನುಭವವನ್ನು ಹೆಚ್ಚಿಸಿಕೊಂಡನು. ಇಟಲಿ ದೇಶವೂ ಅದರ ಕಟ್ಟಡಕಲೆಯೂ ಅವನಿಗೆ ಮಹದಾನಂದವನ್ನು ಉಂಟುಮಾಡಿ, ಅವನ ಮನಸ್ಸಿಗೆ ದೊಡ್ಡ ಸಂಸ್ಕಾರವನ್ನೇ ಕೊಟ್ಟವು. ಗಯಟೆಯು ಸ್ವಿಟ್‌ಜರ್‌ಲೆಂಡ್‌ನಲ್ಲಿದ್ದಾಗ ವಿಮಾರ್ ಡ್ಯೂಕ್ ಅವನಿಗೆ Weimar) ಪರಿಚಯವಾಯಿತು. ವಿಮಾರ್‌ನಗರಕ್ಕೆ ಗಯಟೆಯನ್ನು "ಎತ್ತಿ ಕೊಂಡು" ಹೊಗುವವರೆಗೆ, ಡ್ಯೂಕ್‌ಗೆ ಸಮಾಧಾನವಾಗಲಿಲ್ಲ. ವಿಮಾರ್ ಬಹಳ ಸುಂದರವಾದ ನಗರವಾಗಿತ್ತು. ಗಯಟೆ ತನ್ನ ಉಳಿದ ಕಾಲವನ್ನೆಲ್ಲಾ ವಿಮಾರನಲ್ಲಿಯೇ ಕಳೆದನು.

ಈ ಹೊಸ ಅದ್ವಿತೀಯವಾದ ಸ್ನೇಹ ಪ್ರಾರಂಭನಾದಾಗ, ಗಯಟೆಯ ವಯಸ್ಸು ೨೭ ಮಾತ್ರ ಆಗಿದ್ದಿತು. ಅವನ ಜೀವನ ಒಂದು ಹೊಸ ಚಟು ವಟಿಕೆಗೆ ಪ್ರವೇಶ ಮಾಡಿತು. ಗ್ರಾಂಡ್ ಡ್ಯೂಕನು, ಗಯಟೆಯನ್ನು ಪ್ರಿವಿ ಕೌನ್ಸಿಲ್ ಸಭೆಗೆ ಸದಸ್ಯನನ್ನಾಗಿ ಮಾಡಿದನು. ಕವಿ, ತತ್‌ಕ್ಷಣ ಸಾರ್ವ ಜನಿಕ ಜೀವನದಲ್ಲಿ ಧುಮುಕಿದನು. ಅವನು ರಸ್ತೆಗಳನ್ನೂ ಕಟ್ಟೆಗಳನ್ನೂ ಸರಿಮಾಡಿಸುವ ಪೌರ ಸಂಸ್ಕಾರಕನಾದನು. ಗಣಿಗಳ ಮೇಲುವಿಚಾರಣೆ ನೋಡಿಕೊಳ್ಳತೊಡಗಿದನು. ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದರಲ್ಲಿ ವಿಶ್ವವಿದ್ಯಾಲಯದಲ್ಲಿಯೂ ಸೈನ್ಯದಲ್ಲಿಯೂ ತನ್ನ ಕೈವಾಡವನ್ನು ತೋರಿಸಿ ದನು. ನಾಟಕಶಾಲೆಗೆ ಹೊಸ ಜೀವವನ್ನೇಕೊಟ್ಟನು. ಅವನ ಪ್ರಾಪಂಚಿಕ ಅನುಭವವು ವಿಶಾಲವೂ ಸಂಪದ್ಯುಕ್ತವೂ ಆಯಿತು. ವಾಸ್ತವ ಪ್ರಪಂಚ ದೊಡನೆ ತಿಕ್ಕಾಟದಿಂದ, ಅವನ ಕಾವ್ಯಕ್ಕೆ ಹೊಸ ಬೆಳಕು ಬರುವಂತಾಯಿತು. ಜೀವನದ ಸಮಸ್ಯೆಗಳು ಅವನಿಗೆ ಸ್ಪಷ್ಟವಾಗಿ ಕಾಣತೊಡಗಿದುವು. ಸಾರ್ವ ಜನಿಕಜೀವನದಲ್ಲಿ ಅಷ್ಟುಪ್ರಮುಖನಾಗಿದ್ದರೂ, ಗಯಟೆಯು ತನ್ನ ವ್ಯಾಸಂಗ

ವನ್ನು ಬಿಡಲಿಲ್ಲ. ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೌತಶಾಸ್ತ್ರ ಇವುಗಳಲ್ಲೆಲ್ಲಾ ಅವನು ಪ್ರಾವೀಣ್ಯವನ್ನು ಸಂಪಾದಿಸಿದನು. ಡಾರ್ವಿನ್‌ನ ವಿಕಾಸವಾದದ ವಿಷಯ ಗಯಟೆಗೆ ಮೊದಲೆ ತಿಳಿದಿದ್ದಿತು. ಅವನು ಅಷ್ಟು ದೊಡ್ಡ ಕವಿಯಾಗದೆ ಇದ್ದಿದ್ದರೆ ದೊಡ್ಡ ವಿಜ್ಞಾನಿಯಾಗಿರುತ್ತಿದ್ದನೆಂದು ಅನೇಕರು ಹೇಳಿದ್ದಾರೆ.

ಗಯಟೆಯ ಮುಖ್ಯಜೀವನವನ್ನು ತಿದ್ದಿದ ಮತ್ತೊಂದು ವಿಷಯ, ಸ್ತ್ರೀಯರಲ್ಲಿ ಅವನಿಗೆ ಇದ್ದ ಪ್ರೇಮ. ಸರ್ ಫಿಲಿಪ್ ಗಿಬ್ಸ್ ಎಂಬುವವನು ಇದನ್ನು ಕುರಿತು "ಪತಂಗಕ್ಕೆ ಬೆಂಕಿಗೆ ಬಿದ್ದು ರೆಕ್ಕೆ ಸುಟ್ಟುಕೊಳ್ಳದೆ ಇರುವುದು ಹೇಗೆ ಸಾಧ್ಯವಿಲ್ಲವೊ ಹಾಗೆಯೇ, ಗಯಟೆಗೆ ಸ್ತ್ರೀಯರನ್ನು ಪ್ರೀತಿಸದೆ ಇರಲು ಸಾಧ್ಯವಿರಲಿಲ್ಲ" ಎಂದಿದ್ದಾನೆ. ಸ್ತ್ರೀಯರನ್ನು ಅತಿಯಾಗಿ ಪ್ರೀತಿಸುವುದು; ಅನಂತರ ಬಿಡುವುದು. ಮತ್ತೆ ಇನ್ನೊಬ್ಬ ರಂಭೆಯ ಪರಿಚಯವಾದರೆ ಅವಳನ್ನು ಪ್ರೀತಿಸುವುದು. ಇದು ಕವಿಯ ಸ್ವಭಾವವಾಗಿದ್ದಂತೆ ಕಾಣುತ್ತದೆ. ಈ ಸ್ವಭಾವ ಪ್ರಕಟಣೆಯಲ್ಲಿ ಬರ್ನ್ಸ್, ಬೈರನ್, ಶೆಲ್ಲಿ ಇವರೂ ಕಡಮೆ ಇಲ್ಲ. ಯಾವ ಕವಿಯೂ ಈ ವಿಕಾರಕ್ಕೆ ಒಳಗಾದವನೇ. ಕವಿಯ ಕೋಮಲ ಸ್ವಭಾವ ಸ್ತ್ರೀಯರ ಸೌಂದರ್ಯಕ್ಕೆ ಸುಮ್ಮನೆ ಮರುಳಾಗುತ್ತದೆ. ಅಂದರೆ ಗಯಟೆಯು ಅನೀತಿಯ ಮನುಷ್ಯನಾಗಿದ್ದನೆಂದಲ್ಲ. ಅದರ ಅರ್ಥ ಇಷ್ಟೆ. ಸ್ತ್ರೀಯರ ಸಹವಾಸದಿಂದ ಯಾವ ಸುಖ, ಸ್ಫೂರ್ತಿಗಳು ಉಂಟಾಗುವುವೊ, ಆ ಸ್ಫೂರ್ತಿ ಇಲ್ಲದಿದ್ದರೆ ಗಯಟೆಯ ಸ್ವಭಾವ ವಿಕಾಸವಾಗುತ್ತಿರಲಿಲ್ಲ. ಅವನಿಗೆ ಸ್ತ್ರೀಯರ ನಾಜೂಕೂ, ಚಟುವಟಿಕೆಯೂ ಹಾವಭಾವ ಲಾಸ್ಯ ವಿಲಾಸಗಳೂ ತನ್ನ ಉಸಿರಿನಷ್ಟೆ ಅವಶ್ಯವಾಗಿದ್ದವು. ಅವನೂ ನಿರ್ದೋಷಿಯಾಗಿರಲಿಲ್ಲ. ಆದರೆ ದೋಷಗಳು ಇದ್ದರೂ ಅವನ ನೀತಿ ಬಲವೂ, ಬುದ್ಧಿ ಬಲವೂ, ಆ ದೋಷಗಳನ್ನು ಅಲ್ಪವಾಗುವಂತೆ ಮಾಡುತ್ತಿದ್ದವು. ತಾನು ತಪ್ಪು ಮಾಡದೆ, ಪಾಪ ಮಾಡದೆ, ಪಾತಾಳಕ್ಕೆ ಬೀಳದೆ, ಬಿದ್ದು ಏಳದೆ, ದುಃಖಿಸದೆ ದುಃಖದಿಂದ ಹಾಗೆಯೇ ಸಾತ್ವಿಕದಾರಿಗೆ ತಿರುಗದೆ ಇರುವ ಮನುಷ್ಯ—ಅವನು ಕವಿಯಾಗಲಿ ಬಿಡಲಿ—ಜಗತ್ತಿಗೆ ಏನನ್ನು ತಾನೆ ಕಲಿಸಬಲ್ಲ? ಗಯಟೆಯ ಜೀವನವನ್ನು ನೋಡಿದರೆ, ಈ ಅನುಭವವಿಲ್ಲದೆ ಏನನ್ನೂ ಕಲಿಸಲಾರನೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಗಯಟೆಯ ಜ್ಞಾನದ ಸಾರವಾದ ಫಾಸ್ಟ್ ಎಂಬುದನ್ನು ನೋಡಿದರೂ ಈ ಭಾವನೆ ಬರುತ್ತದೆ. ನೂರು ಸಂಪುಟಗಳಲ್ಲಿ ಪ್ರಕಟನಾ

ಗಿರುವ ಗಯಟೆಯ ಎಲ್ಲಾ ಕೃತಿಗಳನ್ನು ನೋಡಿದರೂ ಇದೇ ಭಾವ ಉಂಟಾಗುತ್ತದೆ.

ಫಾಸ್ಟ್ ಕತೆಯು ಯೌವನದಿಂದ ಮುಪ್ಪಿನವರೆಗೆ ಗಯಟೆಯನ್ನು ಹಿಡಿದಿದ್ದಿತು. ಅವನು ಕತೆ ಹೇಳುವ ಕ್ರಮ ಜರ್ಮನಿಗೆ ಸ್ವಾಭಾವಿಕವಾದರೂ ಅದರ ಪರಿಣಾಮ ಮನುಷ್ಯಪ್ರಪಂಚಮಾತ್ರಕ್ಕೆಲ್ಲಾ ಒಂದೇ ಆದುದು. ಗಯಟೆಯು ತನ್ನ ಇಪ್ಪತ್ತಮೂರನೆಯ ವಯಸ್ಸಿನಲ್ಲಿ ಅದನ್ನು ಪ್ರಾರಂಭಿಸಿ ತನ್ನ ಎಂಭತ್ತು ಮೂರನೆಯ ವಯಸ್ಸಿಗೆ ಮುಗಿಸಿದನು. ಅದರ ಕತೆ ಮನುಷ್ಯನ ಸ್ವಭಾವದ ಮೇಲೆ ಕಟ್ಟಿದುದು. ಆ ಸ್ವಭಾವದಲ್ಲಿರುವ ಒಳ್ಳೆಯದು-ಕೆಟ್ಟದ್ದು ಈ ಎರಡನ್ನೂ ಕುರಿತದ್ದು. ಫಾಸ್ಟ್ ಹೀಗೆನ್ನುತ್ತಾನೆ;"ನನ್ನ ಎದೆಯಲ್ಲಿ ಎರಡು ಆತ್ಮಗಳು ಕಾದಾಡುತ್ತಿವೆ. ಎರಡರ ಆಸೆಯೂ ಸ್ವತಂತ್ರವಾಗಬೇಕೆನ್ನುವುದೇ." ಫಾಸ್ಟ್ ನಾಟಕದಲ್ಲಿ ಈ ಎರಡು ಆತ್ಮಗಳಿಗೆ-ಮನುಷ್ಯ ಸ್ವಭಾವದ ಸುರ-ಅಸುರಗಳಿಗೆ, ಮನುಷ್ಯ ಮತ್ತು ರಾಕ್ಷಸರಿಗೆ-ಫಾಸ್ಟ್ ಮತ್ತು ಮೆಫಿಸ್ಟೊಫೆಲೆಸ್‌ಗಳನ್ನು ಪಾತ್ರಗಳನ್ನು ಪ್ರತೀಕಮಾಡಿದೆ. ಫಾಸ್ಟ್ ತನ್ನ ಆಸುರೀ ಸ್ವಭಾವಕ್ಕೆ ಬಂಧಿತನಾಗುತ್ತಾನೆ. ಅದರ ಕೈಯಿಂದ ತಪ್ಪಿಸಿಕೊಳ್ಳಬೇಕೆಂದು ಅವನು ಎಷ್ಟು ಪ್ರಯತ್ನಪಟ್ಟರೂ ಅದು ವ್ಯರ್ಥವೇ ಆಗುತ್ತದೆ. ಕೊನೆಯಲ್ಲಿ ಜಯವಾಗುತ್ತದೆ. ಮರಣವು ಎರಡಕ್ಕೂ ಇರುವ ಅಂತರವನ್ನು ಪೂರ್ಣ ಮಾಡುತ್ತದೆ. ಆದರೆ ಮೆಸಿಸ್ಟೊಫೆಲೆಸ್ ಬರಬರುತ್ತಾ ಪಾಪಿಯೇ ಆಗುತ್ತಾನೆ. ಅವನೇ ಸೇಟನ್‌ನ ರೂಪ. ನಾಯಕಿಯಾದ ಮಾರ್ಗರೆಟ್ ಸಾತ್ವಿಕ ಶಿರೋಮಣಿ. ಅವಳಿಗೆ, ಮಾಫಿಫೆಲೆಸ್‌ನ ಘಾತುಕತನವೂ ಕ್ರೌರ್ಯವೂ ಮೊದಲೇ ಗೊತ್ತಾಗಿಬಿಡುತ್ತದೆ. ಮೋಕ್ಷವು ಮಾತಿನಲ್ಲಿ ಇಲ್ಲ, ಅನುಭವದಲ್ಲಿ, ಎಂಬುದು ಫಾಸ್ಟ್‌ಗೆ ಗೊತ್ತಿದೆ. ಅವನು ವಿಲಾಸಪಡುತ್ತಾನೆ. ಇಂದ್ರಿಯವ್ಯಾಪಾರ, ಪ್ರೇಮದಲ್ಲಿ ಮುಳುಗುತ್ತಾನೆ. ಆದರೆ ಯಾವುದರಿಂದಲೂ ಅವನಿಗೆ ತೃಪ್ತಿಯಾಗುವುದಿಲ್ಲ. ತನ್ನ ಜನರಿಗೆ ಅಲ್ಪವಾದ ಸೇವೆಗಳನ್ನು ಸಲ್ಲಿಸುವುದರಲ್ಲಿ ಕೊನೆಗೆ ಅವನಿಗೆ ಸಮಾಧಾನವಾಗುತ್ತದೆ. ಅಂದರೆ ನಮ್ಮ ಧ್ಯೇಯಸಾಧನೆಯೆಲ್ಲಾ, ಪರೋಪಕಾರಕ್ಕಾಗಿ ಈ ದೇಹ ಎಂಬ ನೀತಿಗೆ ಕೊನೆಗೆ ನಿಲ್ಲುತ್ತದೆ.

ಕಾವ್ಯದ ಪ್ರಾರಂಭದಲ್ಲಿ ಫಾಸ್ಟ್ ಸೆಂಟ್‌ಜಾನ್‌ನ ಕಾವ್ಯಗಳನ್ನು

ಅನುವಾದ ಮಾಡುತ್ತಿರುವುದು ನಮಗೆ ಕಾಣುತ್ತದೆ "ಪ್ರಾರಂಭದಲ್ಲಿ ನುಡಿ ಇತ್ತು" ಆದರೆ ಅವನಿಗೆ ಸಮಾಧಾನವಾಗುವುದಿಲ್ಲ. "ಪ್ರಾರಂಭದಲ್ಲಿ ಏನಿತ್ತು?" "ಕ್ರಿಯೆಕಾರ್ಯವಿತ್ತು" ಈ ನಾಟಕದ ಪೂರ್ತ ಅದೇ; ಕಾರ್ಯ, ಕಾರ್ಯ. ಇದು ತಿಳಿದ ಕೂಡಲೆ ನಮ್ಮ ಜೀವನ ಪ್ರಾರಂಭವಾಗುತ್ತದೆ, "ಜೀವಿಸಬೇಕಾದರೆ ಕಾರ್ಯ ಮಾಡು"

ಸೇಟನ್ ಮಾಡುವುದೂ ಕಾರ್ಯ; ದೇವರಿಗೆ ಸೇಟನ್ ಇಲ್ಲದಿದ್ದರೆ ಆಗು ವುದಿಲ್ಲವೆಂದು ಗಯಟೆ ಹೇಳುತ್ತಾನೆ, ಫಾಸ್ಟ್‌ನ ಮನಸ್ಸನ್ನು ಕೆಡಿಸಲು ಅವಕಾಶಕೊಡಬೇಕೆಂದು ಸೇಟನ್ ದೇವರನ್ನು ಕೇಳಿಕೊಳ್ಳುತ್ತದೆ. ದೇವರು ಒಪ್ಪುತ್ತಾನೆ. ದೇವರಿಗೆ ಗೊತ್ತು, ಕೊನೆಯಲ್ಲಿ ಫಾಸ್ಟ್‌ಗೆ ಇದರಿಂದ ಒಳ್ಳೆಯದಾಗುವುದೆಂದು.

> "ಬಹು ಬೇಗ ಮನುಷ್ಯನ ಪ್ರಯತ್ನಗಳು ನಿಲ್ಲುತ್ತವೆ. ಅವನು ತೆಪ್ಪಗಾಗಿ ಬಿಡುತ್ತಾನೆ. ಏನು ಬೇಕಾದರೂ ಹೋಗಲಿ. ಸರ್ವಸ್ವವೂ ನಾಶವಾಗಲಿ. ಎಲ್ಲವನ್ನೂ ಬಲಿಕೊಡುತ್ತೇನೆ. ಆದರೆ ಶಾಂತಿ ಕೊಡಿ ಎಂದು ಬೇಡುತ್ತಾನೆ.
> ಆದುದರಿಂದ ಅವನ ಬೆನ್ನ ಹಿಂದೆ ಒಬ್ಬನನ್ನು ಬಿಡುತ್ತೇನೆ. ಸೇಟ್‌ನಂತವನನ್ನು ಬಿಡುತ್ತೇನೆ. ಅವನು ಮನುಷ್ಯನನ್ನು ತಿವಿದು ತಿವಿದು ಸೃಷ್ಟಿಗೂ ಸಾಹಸಕ್ಕೂ ಪ್ರೇರಿಸುತ್ತಾನೆ.

ಇದನ್ನೇ, ಗಯಟೆಯು ತನ್ನ ಸಂಭಾಷಣೆಯಲ್ಲಿ ಒಂದು ಸಲ ಹೀಗೆ ಹೇಳಿ ದನು : " ಪ್ರಕೃತಿಯು ದೊಡ್ಡ ಗಾನದ ಯಂತ್ರ. ದೇವರು ಅದನ್ನು ನುಡಿಸಿ ಗಾನವನ್ನು ಹೊರಡಿಸುತ್ತಾನೆ. ಆದರೆ ಸೇಟನ್, ಯಂತ್ರಕ್ಕೆ ಬೇಕಾದ ಧ್ವನಿ ಶಬ್ದವನ್ನು ಹೊರಡಿಸುತ್ತಾನೆ. ಆದುದರಿಂದ ಸೇಟನ್‌ನ ಸ್ಥಿತಿ ವಿಚಿತ್ರ. "ಅದರ ಉದ್ದೇಶ ಆಸುರೀ. ಆದರೆ ಫಲ ಯಾವಾಗಲೂ ಸಾತ್ವಿಕ.

ತನ್ನ ಮರಣಾನಂತರ ಪ್ರಕಟಿಸಬೇಕೆಂದು ಫಾಸ್ಟ್ ಹಸ್ತಪ್ರತಿಯನ್ನು ಮೊಹರು ಮಾಡಿ ಇಟ್ಟ ಗಯಟೆಯು ಆ ಮೊಹರನ್ನು ಮತ್ತೆ ಬಿಚ್ಚಿ ಈ ಮಾತುಗಳನ್ನು ಸೇರಿಸಿದನು " ನಾವು ಜೀವಿಸುತ್ತಿರುವ, ಈ ನಶ್ವರವಾದ ಮತ್ತು ಬದಲಾಯಿಸುತ್ತಿರುವ ಜಗತ್ತು, ಇನ್ನೊಂದು ಉತ್ತಮ ಜಗತ್ತಿನ ಗುರುತು. ಆ ಉತ್ತಮ ಜಗತ್ತಿನಲ್ಲಿ ನಾವು ಇಲ್ಲಿ ಸಾಧಿಸಲು ವ್ಯರ್ಥವಾಗಿ ಸಾಹಸಪಡುತ್ತಿರುವುದೆಲ್ಲಾ, ಸಿದ್ಧವಾಗಿ ಸ್ಥಾಪಿತವಾಗಿದೆ. ನಮ್ಮನ್ನು

ಹಿಂದಕ್ಕೂ ಮುಂದಕ್ಕೂ ಎಳೆಯುತ್ತಿರುವುದು, ಎಲ್ಲಾ ಪ್ರೇಮಕ್ಕೂ ವಸ್ತು ವಾದ ಆ ಜಗತ್ತು."

ತನ್ನ ಜನಾಂಗವನ್ನು ಮೀರಿ ಹೊರದೇಶದವರಲ್ಲೂ ವಿಶ್ವಾಸವನ್ನು ತೋರಿಸಿದನೆಂದು ಗಯಟೆಯ ಮೇಲೆ ಆಕ್ಷೇಪಣೆ ಬಂದಿದ್ದಿತು. ಮನುಷ್ಯ ಪ್ರಪಂಚವೆಲ್ಲ ಒಂದು ಎಂದು ಅದನ್ನು ಪ್ರೀತಿಸುವವರಿಗೆಲ್ಲಾ ಇದು ಸಂಭವಿಸ ತಕ್ಕುದೇ. ಫ್ರೆಂಚ್ ಸಾಹಿತ್ಯವನ್ನು ಅವನು ಬಹಳ ಪ್ರೀತಿಸುತ್ತಿದ್ದ. ಫ್ರಾನ್ಸಿನ ಕ್ರಾಂತಿಯಿಂದ ಸಂಸ್ಕೃತಿಯೂ ನಾಗರಿಕತೆಯೂ ಹಾಳಾಗುವು ದೆಂದೂ ಅವನು ಹೆದರಿದನು. ಆದರೆ ನೆಪೊಲಿಯನ್ ನಡೆಸಿದ ಯುದ್ಧಗಳ ಕಾಲದಲ್ಲಿ, ಫ್ರೆಂಚ್ ಸಾಹಿತ್ಯದಲ್ಲಿದ್ದ ಗಯಟೆಯ ಅಭಿಮಾನದಿಂದ ಅವನು ಜರ್ಮನ್‌ರ ಹಿತೈಷಿಯೇ ಅಲ್ಲವೆಂದು ಅವನ ದೇಶದವರು ಅನುಮಾನಿಸಿದ್ದರು. ಆದರೆ ಗಯಟೆಯ ದೇಶಾಭಿಮಾನ ಮೇಲುಮಟ್ಟದ್ದಾಗಿತ್ತು. ಅವನು "ಎಲ್ಲಿ ಜನರ ಸಂಸ್ಕೃತಿ ಕೆಳಮಟ್ಟದಲ್ಲಿದೆಯೋ ಅಲ್ಲಿ ಅವರ ದೇಶಾಭಿಮಾನವೂ ಅತಿ ಸಂಕುಚಿತವಾಗಿರುತ್ತದೆ. ಆದರೆ ಅವರ ನಾಗರಿಕತೆಯೂ ಸಂಸ್ಕೃತಿಯೂ ಬೆಳೆದಂತೆ ಅವರ ಮನಸ್ಸೂ ವಿಶಾಲವಾಗುತ್ತದೆ. ಇತರರ ಕಷ್ಟಗಳೂ ತಮ್ಮ ದೆಂಬ ಭಾವ ಬರುತ್ತದೆ." ಎಂದು ಹೇಳಿದ್ದಾನೆ.

ಗಯಟೆಯ ಜೀವನದಲ್ಲಿ ನಡೆದ ಮತ್ತೊಂದು ಮುಖ್ಯ ಸಂಗತಿ ಅವನು ನೆಪೊಲಿಯನ್‌ನನ್ನು ಕಂಡುದು. ನೆಪೊಲಿಯನ್ ಮೇಧಾವಿಯೆಂದು ಗಯಟೆ ಒಪ್ಪದೆ ಇರಲಿಲ್ಲ. ಎರ್‌ಫರ್ಟ್ ಎಂಬಲ್ಲಿ ಏರ್ಪಾಡಾಗಿದ್ದ ಸಭೆಯಲ್ಲಿ ಗಯಟೆ ನೆಪೊಲಿಯನನನ್ನು ಭೇಟಿಮಾಡಿದನು. ನೆಪೋಲಿಯನನು ಗಯಟೆಯನ್ನು ಆಪಾದ ಮಸ್ತಕವೂ ನೋಡಿ "Voila un homme ನೀನೀಗ ನಿಜವಾ ಗಿಯೂ ಮನುಷ್ಯ" ಎಂದನು. ಬಹಳ ಹೊತ್ತು ಗಯಟೆಯೊಂದಿಗೆ ಮಾತ ನಾಡಿದ ನಂತರ ನೆಪೋಲಿಯನ್‌ನು ತನ್ನ ಇಬ್ಬರು ಸೇನಾಪತಿಗಳಕಡೆ ತಿರುಗಿ "ಇವನೀಗ ಮನುಷ್ಯ" ಎಂದನು. ಅನಂತರ ನೆಪೋಲಿಯನ್‌ನು "ನೀನು ಪ್ಯಾರಿಸ್ಸಿಗೆ ಬಾ. ಅಲ್ಲಿ ನೋಡುವುದು ಬೇಕಾದಷ್ಟಿದೆ. ನಿನ್ನ ಕಾವ್ಯಕ್ಕೆ ಅನೇಕ ವಸ್ತುಗಳು ದೊರೆಯುತ್ತವೆ" ಎಂದು ಆಸೆ ತೋರಿಸಿ ಗಯಟೆಯನ್ನು ಪ್ಯಾರಿಸ್ಸಿಗೆ ಆಹ್ವಾನಿಸಿದನು.

ಗಯಟೆಯಲ್ಲಿ ಮನುಷ್ಯತ್ವ ಮತ್ತು ದೇವತ್ವ ಸಮನಾಗಿ ಬೆರೆತಿದ್ದವು. ದೌರ್ಬಲ್ಯದಲ್ಲಿ ಮನುಷ್ಯನಂತಿದ್ದನು. ಬುದ್ಧಿ, ಮನಸ್ಸು, ಆಲೋಚನೆಯ ಮಟ್ಟ ಇವುಗಳಲ್ಲಿ ಎಲ್ಲರನ್ನೂ ಮೀರಿ ದೇವರಂತೆ ಇದ್ದನು. "ಅವನ ಕಣ್ಣುಗಳು ದೇವರ ಕಣ್ಣುಗಳಂತೆ ಶಾಂತವಾಗಿದ್ದವು. ಅವನ ತಲೆ ನೆರೆತು ಬಿಳುಪಾಗಿದ್ದರೂ ಅವನ ಕೆಚ್ಚು ಕಡಿಮೆಯಾಗಿರಲಿಲ್ಲ. ಅವನು ಯಾವಾಗಲೂ ಹೆಮ್ಮೆಯಿಂದ ತಲೆ ಎತ್ತಿಕೊಂಡೇ ನಡೆಯುತ್ತಿದ್ದನು. ಮಾತನಾಡುತ್ತಿರುವಾಗ ಅವನು ಮಹತ್ತರವಾಗುತ್ತಿದ್ದನು. ಅವನು ಕೈಯನ್ನು ನೀಡಿದಾಗ, ಅಂತರಿಕ್ಷದಲ್ಲಿರುವ ನಕ್ಷತ್ರಗಳಿಗೆ ಯಾವದಿಕ್ಕಿಗೆ ಹೋಗಬೇಕೆಂದು ಬೆರಳುಗಳಲ್ಲಿ ಗತಿಯನ್ನು ಸೂಚಿಸುವಂತೆ ತೋರುತ್ತಿದ್ದಿತು."

ಗಯಟೆಯ ಮನಸ್ಸು ಬೆಳೆಯುವುದು ನಿಲ್ಲಲೇ ಇಲ್ಲ. ಫಾಸ್ಟ್‌ನಲ್ಲಿ ಅವನೇ ಹೇಳಿರುವಂತೆ.

"ಯಾರು ಪ್ರತಿದಿನವೂ ಹೊಸದಾಗಿ ಸ್ವಾತಂತ್ರ್ಯವನ್ನೂ ಜೀವನವನ್ನೂ ಸಂಪಾದಿಸುತ್ತಾರೋ ಅವರು ಮಾತ್ರ ಅದಕ್ಕೆ ಅರ್ಹರು"

ಎಂಬಂತೆಯೇ ಅವನ ಜೀವನ ನಡೆಯಿತು. ಸಾಹಿತ್ಯ ಪ್ರಪಂಚದಲ್ಲಿ, ಜಗತ್ತಿನ ಅತಿ ಶ್ರೇಷ್ಠರಲ್ಲಿ ಒಬ್ಬನಾದ ಗಯಟೆಯು, ತನ್ನ ಕಾವ್ಯಗಳಲ್ಲೂ ನಾಟಕಗಳಲ್ಲೂ ಸಂಭಾಷಣೆಗಳಲ್ಲೂ, ಮನುಷ್ಯ ಪ್ರಪಂಚಕ್ಕೆ ಬೇಕಾದುದನ್ನೆಲ್ಲಾ ಹೇಳಿದ್ದಾನೆ. ಸಾಹಿತ್ಯ, ರಾಜಕಾರಣ ನೀತಿ, ಕಲೆ, ಜೀವನ ಇವುಗಳನ್ನು ಕುರಿತ ರತ್ನಾಗಾರವೇ ಆಗಿದೆ ಅವನ ಕಾವ್ಯ ಸಾಮ್ರಾಜ್ಯ.

ಸಾಯುವವರೆಗೆ ತನ್ನ ಬುದ್ಧಿಯನ್ನು ಬೆಳೆಸಿಕೊಳ್ಳುವುದೇ ಅವನ ಗುರಿಯಾಗಿದ್ದಿತು. ಪ್ರತಿವ್ಯಕ್ತಿಯೂ ದೇವರು ತನಗೆ ಕೊಟ್ಟ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಅವನು ಹೇಳುತ್ತಿದ್ದನು. "ಅದೇ ನೀತಿಗೆಲ್ಲಾ ತಳಹದಿ. ಪ್ರಕೃತಿಯಂತೆ ಮನುಷ್ಯನ ಜೀವ ಬಿಡುವಿಲ್ಲದೆ ಬೆಳೆಯುತ್ತಿರುತ್ತದೆ. ನಮ್ಮ ಬೆಳವಣಿಗೆ ನಿಂತರೆ ನಮ್ಮ ಜೀವವೂ ನಿಂತತೆ" ಆದುದರಿಂದ ಗಯಟೆಯು ಸಂಸ್ಕೃತಿಯ ಗುರುವಾದನು. ಇಂಗ್ಲೆಂಡಿನಲ್ಲಿ ಮ್ಯಾಥ್ಯೂ ಆರ್ನಾಲ್ಡ್ ಮತ್ತು ಥಾಮಸ್ ಕಾರ್ಲೈಲ್‌ರು ಅವನ ಶಿಷ್ಯರಾದರು.

ಎಲ್ಲರ ಸ್ವಭಾವದಲ್ಲೂ ಸತ್ಯವೆಂಬುದು ಇದ್ದೇ ಇದೆ. ಆದರೆ ಮನುಷ್ಯನಿಗೆ ಸಂಯಮ ಇರಬೇಕು. ಅಂದರೆ ಮನುಷ್ಯ, ತನ್ನ ಕೀಳು ಸ್ವಭಾವವನ್ನು ಮೇಲು

ಸ್ವಭಾವಕ್ಕೆ ಅಧೀನಮಾಡಬೇಕು. ತನ್ನನು ತಾನು ಜಯಿಸುವ ಕದನವೇ ಈ ಜೀವನ. ಇಲ್ಲಿ ಯಾವಾಗಲೂ ಹೊರಗಿನದಕ್ಕೂ ಒಳಗಿನದಕ್ಕೂ ಹೋರಾಟ. ಆದುದರಿಂದ ಕಲಿಯಬೇಕಾದುದನ್ನು ದುಡುಮೆಯಿಂದ ಕಲಿಯಿರಿ. ಬರಿಯ ಯೋಚನೆಯಿಂದಲೇ ಅಲ್ಲ. ಜೀವಿಸುವುದಕ್ಕೆ ಸಾಧಕವಾಗುವಂತೆ ಆಲೋಚಿಸಿ. ಅನಂತರ ಕೆಲಸಮಾಡಿ; ನೀನು ಹೆಚ್ಚುಹೆಚ್ಚಾಗಿ ಮನುಷ್ಯನಾದಷ್ಟೂ ಹೆಚ್ಚು ದೇವರಂತೆ ಆಗುವೆ." ಎಂಬುದೇ ಅವನ ತತ್ವ. ಅವನ ಗೀತೆ. ಮೇಸನ್ ಲಾಡ್ಜ್ ಎಂಬುದರಿಂದ ಈ ಮಾತುಗಳನ್ನು ತೆಗೆದುಕೊಂಡಿದೆ.

"ಅನೇಕ ಜಗತ್ತುಗಳಿಂದಲೂ ಅನೇಕ ಶತಮಾನಗಳಿಂದಲೂ ಅನೇಕ ಋಷಿಗಳಿಂದಲೂ ಮಾತು, ಧ್ವನಿ ಕೇಳುತ್ತಿದೆ."

"ಏನೆಂದು? 'ಚೆನ್ನಾಗಿ ಯೋಚಿಸಿ ಆರಿಸಿಕೊ. ನಿನಗೆ ಕೊಡುವದು ಸ್ವಲ್ಪ. ಆದರೂ ಅನಂತ'

"ಇಲ್ಲಿ, ಬ್ರಹ್ಮಾಂಡದ ನಿಶ್ಶಬ್ದತೆಯಲ್ಲಿ, ನಿನ್ನನ್ನು ನಿರೀಕ್ಷಿಸುತ್ತಿರುವ ಕಣ್ಣುಗಳು ಇವೆ."

"ಇಲ್ಲಿ ಪೂರ್ಣತೆಯಿದೆ."

"ಧೀರನಾಗು, ದುಡಿ, ನಿರಾಶನಾಗಬೇಡ"

"ನಿನಗೆ ಬಹುಮಾನವಿದೆ"

ಜರ್ಮನ್ ಸಾಹಿತ್ಯದ ಆಚಾರ್ಯನೂ, ಅಖಿಲ ಮಾನವರಲ್ಲೂ ಪ್ರೀತಿಯಿಡಬೇಕೆಂದು ಪ್ರಚಾರ ಮಾಡಿದವನೂ ಆದ ಗಯಟೆಯು, ೧೮೩೨ನೇ ಮಾರ್ಚಿ ೨೨ರಲ್ಲಿ ತನ್ನ ಎಂಭತ್ತು ಮೂರನೆ ವಯಸ್ಸಿನಲ್ಲಿ ಭಗವಂತನ ಪಾದಾರವಿಂದವನ್ನು ಸೇರಿದನು. ಅವನ ದೇಹವನ್ನು ರಾಜಮರ್ಯಾದೆಗಳೊಡನೆ ಎತ್ತಿಕೊಂಡು ಹೋಗಿ, ಅವನ ಧೊರೆಯಾದ ಕಾರ್ಲ್ ಆಗೆಸ್ಟ್, ಮತ್ತು ಶಿಲ್ಲರ್ ಮಗ್ಗುಲಲ್ಲಿ ಸಮಾಧಿ ಮಾಡಿದರು. ಅವನು ಸಾಯುವುದಕ್ಕೆ ಮುಂಚೆ, ಕುರ್ಚಿಯ ಮೇಲೆ ಕುಳಿತಿದ್ದಾಗ "Mehr licht! Mehr licht" ಇನ್ನೂ ಬೆಳಕು ಇನ್ನೂ ಬೆಳಕು" ಎಂದನು. ಅದೇ ಅವನ ಕಡೆಯ ಮಾತಾಯಿತು. ಆ ಬೆಳಕು ಜಗತ್ತಿಗೆ ಇನ್ನೂ ಹೆಚ್ಚಾಗಿ ಬಂದರೆ ಜಗತ್ತು ಏನಾಗಬಹುದು? ಫಾಸ್ಟ್ ಹೀಗೆ ಹೇಳುತ್ತಾನೆ.

"ಜಗತ್ತಿನ ಮಹನೀಯನಾದ ಪುತ್ರನೇ
ಈ ಪ್ರಪಂಚವನ್ನು ಮತ್ತೆ ಕಟ್ಟು.

ಇನ್ನೂ ಹೆಚ್ಚು ಬೆಲೆಯಾದುದನ್ನಾಗಿ
ಮತ್ತೆ ಕಟ್ಟು
ಅಂತರಿಕ್ಷವನ್ನು ಮುಟ್ಟುವಂತೆ ಮತ್ತೆ ಕಟ್ಟು
ಅಲ್ಲಿ ಮೇಲೆ ನಿನ್ನ ಹೃದಯದಲ್ಲಿ ಎತ್ತರದಲ್ಲಿ ಕಟ್ಟು
ಈ ಜೀವವನ್ನು ಮತ್ತೆ ಸ್ವೀಕರಿಸು
ಈ ಜೂಜನ್ನು ಮತ್ತೆ ಓಡು
ಮೇಲಾಗಿ ಚೆನ್ನಾಗಿ ಓಡು
ಹಿಂದೆ ಹೊರಟುದಕ್ಕಿಂತ
ಹೆಚ್ಚು ಇಂಪಾದ ಮನೋಹರವಾದ ಗಾನ ಹೊರಡಲಿ"

ಸಂಸ್ಕೃತದ ಕೆಲವು ಸರಸೋಕ್ತಿಗಳು

ಸಂಸ್ಕೃತ ಸಾಹಿತಜ್ಞರ ಅಭಿಪ್ರಾಯದಂತೆ, ಮಾತುಗಳಲ್ಲಿ ವಕ್ರೋಕ್ತಿ ವ್ಯಾಜೋಕ್ತಿ ಚತುರತೆ ಇರಬೇಕು. ಇರುವಂತೆ ಅರ್ಥವಾದರೆ ವಾಚ್ಯ; ಒಂದು ಶಬ್ದಕ್ಕೆ ಲಕ್ಷಣದಿಂದ ಅರ್ಥಮಾಡಿದರೆ ಲಕ್ಷ್ಯಾರ್ಥ; ಒಂದು ವಾಕ್ಯಕ್ಕೆ ಬೇರೊಂದು ಅರ್ಥವಾಗುವಂತಿದ್ದರೆ ಅದು ವ್ಯಂಗ್ಯ ಮತ್ತು ಧ್ವನಿ. ವ್ಯಾಜ್ಯಸ್ತುತಿ ವ್ಯಾಜನಿಂದೆಗಳು ಸಹ ಮಾತಿನ ಚಮತ್ಕಾರಗಳು. ಸಂಸ್ಕೃತ ಅಲಂಕಾರಶಾಸ್ತ್ರ, ಇವುಗಳ ವಿಷಯಗಳನ್ನೆಲ್ಲ ಒಳಗೊಂಡಿದೆ. ಆನಂದವರ್ಧನ ಮಮ್ಮಟ ಜಗನ್ನಾಥ ಪಂಡಿತ ಅಪ್ಪಯ್ಯದೀಕ್ಷಿತ ಮುಂತಾದ ಮೇಧಾವಿಗಳು ಈ ವಿಷಯದಲ್ಲಿ ಗ್ರಂಥಗಳನ್ನು ರಚಿಸಿರುವರು. ಉದ್ದಾಮ ಕವಿಗಳಿಗೆ ಗೌರವ ಕಡಿಮೆಯಾಗಿ ಕವಿಗಳಲ್ಲದವರು ಅವರ ಸ್ಥಾನವನ್ನು ಆಕ್ರಮಿಸಿ ದುದು ರಾಜತರಂಗಿಣಿಯಲ್ಲಿ ವರ್ಣಿತವಾಗಿದೆ. "ಸುಕವಿಗಳನ್ನು ಕೇಳುವ ವರೇ ಇಲ್ಲ. ಭಲ್ಲಟಾದಿ ಕವಿಗಳು ಹೀನವೃತ್ತಿಗೆ ಇಳಿದರು. ಈ ರಾಜನ ಆಸ್ಥಾನದಲ್ಲಿ ಕವಿಗಳಿಗೆ ಬದಲಾಗಿ ಜಟ್ಟಿಯಾದ ಲವಟನು ದಿನಕ್ಕೆ ಎರಡು ಸಾವಿರ ದೀನಾರಗಳನ್ನು ಸಂಪಾದಿಸುತ್ತಿದ್ದಾನೆ" ಅಲಂಕಾರಾದಿ ಚಮತ್ಕಾರ ಗಳನ್ನು ಅರಿಯದ ಕವಿಗಳು "ಎದುರಾಳಿಯ ಮಾತುಗಳನ್ನೂ ಕೇಳುವು ದಿಲ್ಲ. ಬಾಹುವನ್ನು ಎತ್ತಿ, ಗಟ್ಟಿಯಾಗಿ ಕೂಗಿಯೇ ಶತ್ರುಗಳನ್ನು ಜಯಿಸು ತ್ತಾರೆಂದು" ನೀಲಕಂಠ ದೀಕ್ಷಿತರು ಹೇಳಿದ್ದಾರೆ.

ಸಂಸ್ಕೃತ ಸಾಹಿತ್ಯದ ಚಮತ್ಕಾರ ಶ್ಲೋಕಗಳು ಯಾವ ಕಾಲದಲ್ಲಿಯೂ ರಸಿಕರ ಮನವನ್ನು ಒಲಿಸುತ್ತವೆ.

ಪ್ರಶ್ನೆ—"ಅಯ್ಯಾ ಈ ನಗರದಲ್ಲಿ ದೊಡ್ಡವರು ಯಾರು?

ಉತ್ತರ—"ತಾಳ ವೃಕ್ಷಗಳ ಸಮೂಹವೇ ಇದೆ.

ಪ್ರಶ್ನೆ—"ಕೊಡುವವರು (ದಾತೃ) ಯಾರಾದರೂ ಇದ್ದಾರೆಯೆ?

ಉತ್ತರ—"ಆಹಾ ಅದಕ್ಕೇನು? ಅಗಸ ಬೆಳಿಗ್ಗೆ ಬಟ್ಟೆಗಳನ್ನು ತೆಗೆದು ಕೊಂಡು ಹೋಗಿ ರಾತ್ರಿಗೆ ತಂದು ಕೊಡುತ್ತಾನೆ.

ಪ್ರಶ್ನೆ—"ವಿದ್ವಾಂಸರು ಯಾರಾದರೂ ಇದ್ದಾರೆಯೆ?

ಉತ್ತರ—"ಪರರ ಧನವನ್ನು ವಂಚಿಸುವುದರಲ್ಲಿ ಎಲ್ಲರೂ ವಿದ್ವಾಂಸರೇ

ಪ್ರಶ್ನೆ—"ಹಾಗಾದರೆ ಈ ಗ್ರಾಮದಲ್ಲಿ ಹೇಗಪ್ಪ ವಾಸಿಸುತ್ತೀ?

ಉತ್ತರ—ವಿಷಕ್ರಿಮಿ ನ್ಯಾಯದಿಂದ. ”

ವಿಷ್ಣು ಶಿವರೂ ಸಹ, ಸಂಸಾರವನ್ನು ತ್ಯಜಿಸಿ ತಿರುಗುತ್ತಿದ್ದಾರಂತೆ. ಅದಕ್ಕೆ ಕಾರಣವನ್ನು ಕವಿ ಹೀಗೆ ಹೇಳುತ್ತಾನೆ. ವಿಷ್ಣು ಹೀಗೆ ಯೋಚಿಸಿದ "ನನ್ನ ಒಬ್ಬಳು ಹೆಂಡತಿ (ಪ್ರಕೃತಿ) ಜಡ. ಮತ್ತೊಬ್ಬಳು (ಲಕ್ಷ್ಮೀ) ಚಂಚಲೆ; ಮಗ (ಮನ್ಮಥ) ಮೂರು ಲೋಕದಲ್ಲಿಯೂ ದುಷ್ಟನೆಂದು ಹೆಸರು ಕೆಡಿಸಿ ಕೊಂಡಿದ್ದಾನೆ. ಹಾಸಿಗೆ ಹಾವು ; ವಾಹನ ಹಕ್ಕಿ, ವಾಸ ಸಮುದ್ರ. ಇದನ್ನೆಲ್ಲ ಯೋಚಿಸಿ ಯೋಚಿಸಿ ವಿಷ್ಣುವು ಮರವಾಗಿಬಿಟ್ಟನು.

ಈಶ್ವರನು ಸಹ ವಿಷ್ಣುವಿನ ಮೇಲುಪಂಗ್ತಿಯನ್ನು ಅನುಸರಿಸದಿರಲಿಲ್ಲ. " ವಿಘ್ನೇಶ್ವರನ ವಾಹನವಾದ ಮೂಷಿಕವನ್ನು ಶಿವನ ಆಭರಣವಾದ ಸರ್ಪ ದ್ವೇಷಿಸುತ್ತಿದೆ. ಆ ಸರ್ಪವನ್ನು ಸುಬ್ರಹ್ಮಣ್ಯನ ವಾಹನವಾದ ನವಿಲೂ, ಗಜಾನನನನ್ನು ಪಾರ್ವತಿಯ ವಾಹನವಾದ ಸಿಂಹವೂ ದ್ವೇಷಿಸುತ್ತದೆ. ಗಂಗೆ ಪಾರ್ವತಿಯರಲ್ಲಿ ಪರಸ್ಪರ ಅಸೂಯೆ ; ತಲೆಯ ಮೇಲಿರುವ ಚಂದ್ರನಿಗೂ ಹಣೆಯಲ್ಲಿರುವ ಅಗ್ನಿಗೂ ಪರಸ್ಪರ ಅಸೂಯೆ ಈ ಕುಟುಂಬ ಕಲಹವನ್ನು ನೋಡಿ ಈಶ್ವರ, ನಿರ್ವಿಣ್ಣನಾಗಿ ವಿಷವನ್ನು ಸೇವಿಸಿಬಿಟ್ಟನು.

ಕವಿಯೊಬ್ಬ ರಾಜನಲ್ಲಿ ಬಂದನು. ರಾಜ ಅವನನ್ನು ನೀನು ಎಲ್ಲಿಂದ ಬಂದೆ ಮುಂತಾಗಿ ವಿಚಾರಿಸಿದನು. ಕವಿಯು ಹೀಗೆ ಹೇಳುತ್ತಾನೆ. "ಶಿವನ ಅರ್ಧ ದೇಹವನ್ನು ವಿಷ್ಣು ಅಪಹರಿಸಿದನು. (ಹಾಗೆ ಒಂದು ಕಥೆಯಿದೆ) ಇನ್ನರ್ಧವನ್ನು ಪಾರ್ವತಿ ಅಪಹರಿಸಿದಳು. ಹೀಗೆ ಜಗತ್ತಿನಲ್ಲಿ ಈಶ್ವರನ ಅಭಾವವುಂಟಾಯಿತು. ತಲೆಯ ಮೇಲಿದ್ದ ಗಂಗೆ ಸಾಗರಕ್ಕೆ ಹೋದಳು. ಚಂದ್ರಕಲೆ ಆಕಾಶಕ್ಕೆ ಹೋಯಿತು. ಹಾವು ನಾಗಲೋಕಕ್ಕೆ ಹೋಯಿತು. ಶಿವನ ಸರ್ವಜ್ಞತೆ ಪ್ರಭುತ್ವ ನಿನ್ನಲ್ಲಿ ಬಂದು ಸೇರಿತು. ನನಗೆ ಬಂದಿತು ಭಿಕ್ಷಾಪಾತ್ರೆ" ಇನ್ನೊಂದು ಕಡೆ, ಲಕ್ಷ್ಮೀ ಪಾರ್ವತಿಯರ ಒಂದು ಸಂಭಾಷಣೆ ಯನ್ನು ಕವಿ ಹೀಗೆ ಚಮತ್ಕಾರವಾಗಿ ವರ್ಣಿಸಿದ್ದಾನೆ.

(ಲಕ್ಷ್ಮೀ) ಇಂದು ಶಿವ ಎಲ್ಲಿ ಭಿಕ್ಷಕ್ಕೆ ಹೋಗಿದ್ದಾನೆ.

(ಪಾರ್ವತಿ) ಬಲಿಯ ಯಜ್ಞಕ್ಕೆ ಹೋಗಿರಬಹುದು.

(ಲಕ್ಷ್ಮೀ) ಭದ್ರೇ, ಇಂದು ಕುಣಿತ (ತಾಂಡವ ನೃತ್ಯ) ಎಲ್ಲಿ ?

(ಪಾರ್ವತಿ) ಬೃಂದಾವನದಲ್ಲಿರಬೇಕೆಂದು ಭಾವಿಸುತ್ತೇನೆ.

(ಲಕ್ಷ್ಮಿ) ಆ ಮೃಗಶಿಶು (ಗಣಪತಿ) ಎಲ್ಲಿ

(ಪಾರ್ವತಿ) ವರಾಹದ ಜತೆ ಹೋಗಿರಬಹುದು (ವಿಷ್ಣುವಿನ ಅವತಾರ)

(ಲಕ್ಷ್ಮಿ) ನಿಮ್ಮ ಆ ಮುದಿ ಎತ್ತು ಎಲ್ಲಿ?

(ಪಾರ್ವತಿ) ಆ ಗೋಪನನ್ನು ಕೇಳಬೇಕು (ಕೃಷ್ಣ)

ಒಬ್ಬ ಬಡಕವಿಯ ವಸ್ತ್ರ ಹರಿದಿತ್ತು. ಯಾರೋ ಹಾಸ್ಯಮಾಡಿದರೆಂದು ಕಾಣುತ್ತದೆ. ಆಗ ಆತ ಹೀಗೆ ಹೇಳಿದ.

ಅನೇಕಗುಣ ಸಂಪನ್ನಾಂ ಸಹಸ್ರಾಕ್ಷಂ ಪುರಾತನಂ
ಆದ್ಯಂತರಹಿತಂ ವಂದೇ ಮದ್ವಸ್ತ್ರಂ ಸದೃಶಂ ವಿಭು

ಹೇ ಪರಮಾತ್ಮ, ಅನೇಕ ಗುಣ (ನೂಲಿನ ಎಳೆ) ಸಂಪನ್ನವಾದ ಸಹಸ್ರಾಕ್ಷವಾದ (ಸಾವಿರಾರು ತೂತು) ಪುರಾತನವಾದ (ಹಳೆಯದು) ಆದ್ಯಂತರಹಿತವಾದ (ವಸ್ತ್ರದ ಮೊದಲು ಕೊನೆ ಕಂಬಿ ಎಲ್ಲ ಹರಿದು ನಾಶವಾಗಿದೆ) ನನ್ನ ವಸ್ತ್ರಕ್ಕೆ ನೀನು ಸಮಾನನಾಗಿದ್ದೀಯೆ.

ಸುಭಾಷಿತಗಳು, ಸರಸೋಕ್ತಿಗಳು, ಚಾಟು ಶ್ಲೋಕಗಳು ಸಂಸ್ಕೃತದ ಸಾಹಿತ್ಯ ಭಂಡಾರದ ಬಿಡಿ ರತ್ನಗಳು. ಎಷ್ಟೋ ವೇಳೆ ಕರ್ತನಾರೆಂದು ಗೊತ್ತಾಗದಿದ್ದರೂ ನಾಲ್ಕೇ ಪಂಕ್ತಿಗಳಲ್ಲಿ ಅವನು ವ್ಯಕ್ತಗೊಳಿಸಿದ ರಸಿಕತೆಗೆ ನಾವು ಮನಸೋಲುತ್ತೇವೆ.

ಪ್ರಿಯೆ ಹೀಗೆ ಬರೆಯುತ್ತಾಳೆ, "ನಾಥಾ ಒಂದು ವಿಜ್ಞಾಪನೆ. ನೀವಿರುವ ಸ್ಥಳಕ್ಕೇ ನಾನೂ ಬಂದು ಕೆಲವು ಕಾಲ ವಿದ್ದರೆ ಸುಖವಾಗುತ್ತದೆ. ಈಗ ಈ ದೇಶ ವಾಸಕ್ಕೆ ಯೋಗ್ಯವಾಗಿಲ್ಲ. ಇಲ್ಲಿ ಚಂದ್ರ ಕಿರಣವು ಸಹ ಸುಡುತ್ತಿದೆ."

ವಿಜ್ಞಪ್ತಿರೇಷಾ ಮಮ ಜೀವಬಂಧೋ
ತತ್ರೈವ ನೇಯಾ ದಿವಸಾಃ ಕಿಯಂತಃ ।
ಸಂಪ್ರತ್ಯಯೋಗ್ಯಸ್ಥಿತಿರೇಷ ದೇಶಃ
ಕರಾ ಹಿಮಾಂಶೋರಪಿ ತಾಪಯಂತಿ ॥

ಹೀಗೆ ಸ್ತ್ರೀಯು ತನ ವಿನಯಕ್ಕೆ ಭಂಗ ಬರದಂತೆ ತನ್ನ ವಿರಹವನ್ನು ಚತುರತೆಯಿಂದ ಪ್ರಿಯನಿಗೆ ತಿಳಿಸುತ್ತಾಳೆ.

ಪ್ರಿಯನು ಅದಕ್ಕೆ ಪ್ರತಿಯಾಗಿ ಬರೆಯುತ್ತಾನೆ. "ಹೇ ಪ್ರಿಯೆ, ನೀನು ಹಾಗೆ ಶಂಕಿಸಬೇಡ. ನಿನ್ನನ್ನು ದಹಿಸುತ್ತಿರುವುದು ಚಂದ್ರ

ಕಿರಣವಲ್ಲ. ನಿನ್ನ ವಿರಹದಿಂದ ನನ್ನ ಹೃದಯ ಯಾವಾಗಲೂ ದಹಿಸುತ್ತಿರುವುದು. ನನ್ನ ಹೃದಯದಲ್ಲಿ ನೀನು ಇರುವುದರಿಂದ ನಿನ್ನನ್ನು ಅದು ಸುಡುತ್ತಿರುವುದು.''

ನೈತತ್ ಪ್ರಿಯೇ ಚೇತಸಿ ಶಂಕನೀಯಂ
ಕರಾ ಹಿಮಾಂಶೋರಪಿ ತಾಪಯಂತಿ ।
ವಿಯೋಗತಪ್ತಂ ಹೃದಯಂ ಮದೀಯಂ
ತತ್ರ ಸ್ಥಿತಾ ತ್ವಂ ಪರಿತಾಪಿತಾಸಿ ॥

"ನಾನು ಯಾವಾಗಲೂ ನಿನ್ನ ಜ್ಞಾಪಕದಲ್ಲಿದ್ದೇನೆ. ನಿನಗಿಂತ ಹೆಚ್ಚಾಗಿಯೇ ನಾನು ಅನುಭವಿಸುತ್ತಿದ್ದೇನೆ'' ಎಂದು ಅವನ ತಾತ್ಪರ್ಯ.

ಪುರುಷನ ಇಂತಹ ಶಾಶ್ವತ ಪ್ರೇಮ ಸಂಪಾದನೆಗಾಗಿ ತಮ್ಮ ಕೆಲವು ಬೆರಳುಗಳನ್ನೇ ಕೊಡಲು ಸಹ ಅನೇಕ ಸ್ತ್ರೀಯರು ಸಿದ್ಧರಾಗಿರಬಹುದು. ಅದಿಲ್ಲದಿದ್ದರೂ ಇಂತಹ ಒಂದು ಪ್ರೇಮಪತ್ರಕ್ಕಾಗಿಯಾದರೂ ಆಕೆ ಪ್ರಿಯನನ್ನು ಸ್ವಲ್ಪಕಾಲ ಬಿಟ್ಟಿರಲು ಸಮ್ಮತಿಸಿಯಾಳು.

ಆದರೆ ಇಂತಹ ಪ್ರತ್ಯುತ್ತರ ಬರಬೇಕಾದರೆ. ಮೊದಲು ಮೇಲಿನಂಥ ಪತ್ರವನ್ನು ಬರೆಯುವ ಮನೋಭಾವ ಅವಳಿಗೆ ಇರಬೇಕಷ್ಟೆ. ಅದಿಲ್ಲದಿದ್ದರೆ ಪ್ರತ್ಯುತ್ತರದ ಆಸೆಯಿಂದ ಮಾತ್ರವೇ ಫಲವಿಲ್ಲ. ಒಂದು ಪಕ್ಷ, ಪ್ರಿಯೆಗೆ ಬರೆಯುವುದಕ್ಕೆ ತಿಳಿಯದೆ ಇರಬಹುದು. ಹಿಂದಿನ ಕಾಲದ ಸ್ತ್ರೀಯರಲ್ಲಿ ಅನೇಕರಿಗೆ ಬರೆಯುವುದು ತಿಳಿದಿರಲಿಲ್ಲ. ಆದರೂ ಅಭಿಪ್ರಾಯಗಳನ್ನು ಗಮಕದ ಮೂಲಕ ವ್ಯಕ್ತಪಡಿಸುವುದು ಅವರಿಗೆ ತಿಳಿದಿದ್ದಿತು. ಒಬ್ಬ ಸ್ತ್ರೀ, ತನ್ನ ದೂತಿಯೊಡನೆ ಹೀಗೆ ಪ್ರಲಾಪಿಸುತ್ತಾಳೆ. "ದೂರದಲ್ಲಿರುವ ಪ್ರಿಯನನ್ನು ಸ್ವಪ್ನದಲ್ಲಿ ಕಾಣುವವಳೂ ಭಾಗ್ಯಶಾಲಿ. ನನಗೆ ಆ ಭಾಗ್ಯವೂ ಇಲ್ಲ. ಪ್ರಿಯನು ನನ್ನನ್ನು ಬಿಟ್ಟುಹೋಗುವಾಗ ಹಾಳು ನಿದ್ರೆಯನ್ನೂ ಜತೆಯಲ್ಲಿ ತೆಗೆದುಕೊಂಡು ಹೋಗಿದ್ದಾನೆ."

ಸ್ವಪ್ನೇ ಪಶ್ಯಂತಿ ಯಾ ನಾಥಂ
ಧನ್ಯಾಸ್ತಾಃ ಸಖಿ ಯೋಷಿತಃ
ಅಸ್ಮಾಕಂ ತು ಗತೇ ನಾಥೇ
ಗತಾ ನಿದ್ರಾ ಹಿ ವೈರಿಣೀ ॥

ಈ ವಿವಿಧ ಗಮಕ ಸಂಭಾಷಣೆ, ಭಕ್ತಿರಸದೊಂದಿಗಿರುವುದನ್ನು

ಕಂಡಾಗ ನಮ್ಮ ಆನಂದ ಇನ್ನೂ ಹೆಚ್ಚುತ್ತದೆ. "ಹೇ ಕೃಷ್ಣ, ಬೆಣ್ಣೆಯನ್ನು ಕದ್ದು ಬಿಟ್ಟೆ, ಎಲ್ಲಿ ಬಚ್ಚಿಟ್ಟು ಕೊಳ್ಳಲಿ, ಎಂದು ಆಲೋಚಿಸುತ್ತಿರಿವೆಯಲ್ಲವೇ? ನನ್ನ ಮನಸ್ಸಿನಲ್ಲಿ ಬಚ್ಚಿಟ್ಟುಕೊ. ಅದಕ್ಕಿಂತ ನಿನಗೆಲ್ಲಿ ಅಂಧಕಾರ ಪ್ರದೇಶ ಸಿಕ್ಕೀತು?

ಕ್ಷೀರಸಾರಮುಪಹೃತ್ಯ ಶಂಕಯಾ
ಸ್ವೀಕೃತಂ ಯದಿ ಪಲಾಯನಂ ತ್ವಯಾ ।
ಮಾನಸೇ ಮಮ ನಿತಾಂತತಾಮಸೇ
ನಂದನಂದನ ಕಥಂ ನ ಲೀಯಸೇ ॥

ಭಕ್ತಿಯ ನಯ ಇಲ್ಲಿ ಬಹು ರಸವತ್ತಾಗಿ ಹೊರಬಿದ್ದಿದೆ.

ಮತ್ತೊಬ್ಬ ಭಕ್ತರು ಒಬ್ಬಳು ಗೋಪಸ್ತ್ರೀಯ ಬಾಯಲ್ಲಿ ಹೀಗೆ ಹೇಳಿಸಿದ್ದಾರೆ. "ಎಲೆ ಕೃಷ್ಣ, ನನ್ನ ಕೈಗಳಿಂದ ನೀನು ತಪ್ಪಿಸಿ ಕೊಂಡು ಹೋದುದರಲ್ಲಿ ಆಶ್ಚರ್ಯವೇನು? ಆದರೆ ಎಲ್ಲಿ ನೋಡೋಣ, ನನ್ನ ಹೃದಯದಿಂದ ಹೊರಕ್ಕೆ ಹೊರಡು, ಆಗ ನಿಜವಾಗಿ ನಿನ್ನ ಪೌರುಷವನ್ನು ಒಪ್ಪುತ್ತೇನೆ."

ಹಸ್ತಮಾಕ್ಷಿಪ್ಯ ಯಾತೋಽಸಿ
ಬಲಾತ್ ಕೃಷ್ಣ ಕಿಮದ್ಭುತಂ ।
ಹೃದಯಾದ್ಯದಿ ನಿರ್ಯಾಸಿ
ಪೌರುಷಂ ಗಣಯಾಮಿ ತೇ ॥

ಆ ಗೋಪಿಯ ಸ್ಥಾನದಲ್ಲಿ ನಾವು ಒಂದು ಗಳಿಗೆ ಇರುವಂತೆ ಭಾವಿಸಿಕೊಂಡರೆ. ಆಕೆಯ ಪ್ರೇಮ, ಶೋಕ, ಭಕ್ತಿ ಈ ತ್ರಿಪ್ರವಾಹದಲ್ಲಿ ನಾವು ತೇಲಿಹೋಗುವೆವು. ಇದು ಬರಿಯ ಮಾತಿನ ಚಾತುರ್ಯವಲ್ಲ. ಹೃದಯದ ಅನುಭವವನ್ನೂ ಆ ಮನೋಭಾವಗಳನ್ನೂ ಮನೋಹರವಾಗಿ ಹೊರಗೆಡಹುವ ರಸಿಕತೆ. ಶ್ರೀರಾಮಚಂದ್ರನ ಹೃದಯಗೀತ ಬರಿಯ ವಾಕ್‌ಚಾತುರ್ಯವಲ್ಲ. ಸೀತೆಯನ್ನು ಕುರಿತು ರಾಮ ಹೀಗೆ ಪ್ರಲಾಪಿಸುತ್ತಾನೆ: "ಹಿಂದೆ ನಾನು ಕತ್ತಿಗೆ ಹಾರವನ್ನೇ ಧರಿಸುತ್ತಿರಲಿಲ್ಲ. ನನಗೂ ಸೀತೆಗೂ ನಡುವೆ ಎಷ್ಟು ಪರ್ವತ, ಎಷ್ಟು ನದಿ ಎಷ್ಟು ಕಾಡುಗಳು, ಅಯ್ಯೋ!"

ಹಾರೋ ನಾರೋಪಿತಃ ಕಂಠೇ
ಮಯಾ ವಿಶ್ಲೇಷಭೀರುಣಾ ।
ಇದಾನೀಮಂತರೇ ಜಾತಾಃ
ಪರ್ವತಾಃ ಸರಿತೋ ದ್ರುಮಾಃ ॥

ವಾಕ್ ಚಾತುರ್ಯದಲ್ಲಿಯೂ, ಪ್ರೌಢತೆಯನ್ನು ಪ್ರಕಟಿಸಿದ ಕವಿಗಳಿಗೆ ನಮ್ಮಲ್ಲಿ ಕಡಿಮೆ ಇಲ್ಲ. ಅನೇಕರದು ಅದ್ಭುತ ಚಮತ್ಕಾರ. ಒಬ್ಬ ಭಿಕ್ಷುಕ ಒಂದು ಶಂಖವನ್ನು ಭೊಂ ಭೊಂ ಎಂದು ಊದುತ್ತಾನೆ. ಅದನ್ನು ಸಾವಿರಾರು ಮಂದಿ ನೋಡುತ್ತಾರೆ. ಅವರಲ್ಲಿ ಒಬ್ಬನಿಗೆ ಮಾತ್ರ ಅದನ್ನು ಕಂಡು ಚತುರೋಕ್ತಿ ಹೊಳೆಯುತ್ತದೆ. "ಈ ಶಂಖವನ್ನು ನೋಡಿ, ಇದು ಜನಿಸಿದುದು ಸಮುದ್ರದಲ್ಲಿ. ಸಮುದ್ರ ಎಲ್ಲ ಐಶ್ವರ್ಯಗಳಿಗೂ ಆಕರ–ರತ್ನಾಕರ. ಆದುದರಿಂದ ಮಹಾಲಕ್ಷ್ಮಿ ಇದರ ಸ್ವಂತ ಸಹೋದರಿ; ಆದರೆ ಇದರ ಕಾರ್ಯ. ಯಾಚಕಕ್ಕಾಗಿ ರೋದನ. ಎಲ್ಲಾ ವಿಧಿ!"

> ಪಿತಾ ರತ್ನಾಕರೋ ಯಸ್ಯ ಲಕ್ಷ್ಮೀರ್ಯಸ್ಯ ಸಹೋದರೀ ।
> ಶಂಖೋ ರೋದಿತಿ ಭಿಕ್ಷಾರ್ಥೀ ಫಲಂ ಭಾಗ್ಯಾನುಸಾರತಃ ॥

ಮತ್ತೊಬ್ಬ ಕವಿಯು "ಇದೇನು ಅತಿಶಯ. ಶಂಖ ಪಡುವ ಕಷ್ಟವೇ ನಿಮಗೆ ದೊಡ್ಡದಾಗಿ ಕಾಣುತ್ತದೆಯಲ್ಲವೆ? ದೇವಾಸುರರು ಸಮುದ್ರವನ್ನು ಕಡೆದಾಗ ಅಲ್ಲಿ ಈಶ್ವರನೂ ಇದ್ದ. ವಿಷ್ಣುವೂ ಇದ್ದ. ಒಬ್ಬರಿಗೆ ಲಕ್ಷ್ಮಿ ಸಿಕ್ಕಿದಳು. ಮತ್ತೊಬ್ಬರಿಗೆ ವಿಷ. ವಿಧಿಯೇ ಬಲವತ್ತರವಾದುದು.

> ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ ।
> ಸಮುದ್ರಮಂಥನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಮ್ ॥

ಅವರ ಮಿತ್ರರು ಹೀಗೆಂದರು. "ವಿಧಿಯನ್ನು ಯಾಕೆ ದೂಷಿಸಬೇಕು? ನೆಕ್‌ಟೈ, ಕ್ರಾಪು. ನಾಬೂಸು ಇವು ತನಗೆ ಇಲ್ಲದಿದ್ದರೂ ವಿಷ್ಣು ಅಲಂಕಾರ ಪ್ರಿಯ. ವಿಷ್ಣು ಬುದ್ಧಿಶಾಲಿ. 'ಯೋಗ್ಯತೆಗೆ ಉಡುಪು ಪ್ರಧಾನ. ನೀವೇ ಸ್ವಲ್ಪ ಯೋಚಿಸಿ ನೋಡಿ. ಸಮುದ್ರರಾಜ ನೋಡಿದ. ಪೀತಾಂಬರವನ್ನು ಧರಿಸಿ ವಿಷ್ಣು ನಿಂತಿದ್ದ. ಆತನಿಗೆ ಲಕ್ಷ್ಮಿಯನ್ನು ಕೊಟ್ಟ. ಮಗ್ಗುಲಲ್ಲಿ ಕರಿಯ ಚರ್ಮ ಧರಿಸಿ ನಿಂತಿದ್ದವನಿಗೆ ವಿಷ ಕೊಟ್ಟ. ತಪ್ಪು ಯಾರದು ಎಂಬುದನ್ನು ನಾವೇ ತಿಳಿದುಕೊಳ್ಳಬಹುದು."

> ಕಿಂ ವಾಸಸಾ ತತ್ರ ವಿಚಾರಣೀಯಂ
> ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ ।
> ಪೀತಾಂಬರಂ ವೀಕ್ಷ್ಯ ದದೌ ಸ್ವಕನ್ಯಾಂ
> ಚರ್ಮಾಂಬರಂ ವೀಕ್ಷ್ಯ ವಿಷಂ ಸಮುದ್ರಃ ॥

ಇದನ್ನು ಕೇಳಿದ ಮತ್ತೊಬ್ಬ ಕವಿಗೆ ಈ ಶಿವದೂಷಣೆ ಒಪ್ಪಿಗೆಯಾಗಲಿಲ್ಲ. ಅವರು ಸ್ತ್ರೀಯಿಂದ ದುಃಖ ಅನುಭವಿಸಿದವರಿದ್ದರಬೇಕು. "ವಿಷ್ಣು.

ಲಕ್ಷ್ಮೀ, ಎಂದು ಸುಲಭವಾಗಿ ಹೇಳಿಬಿಡುತ್ತೀರಿ. ನಿಜವಾಗಿ ವಿಷ ಯಾವುದು ನಿಮಗೆ ಗೊತ್ತೆ? ಫಲವನ್ನು ನೋಡಿ ತಾನೇ ಗುಣವನ್ನು ಗ್ರಹಿಸಬೇಕು. ವಿಷವನ್ನು ಕುಡಿದ ಶಿವ ಕಣ್ಣು ಬಿಟ್ಟುಕೊಂಡು ಎಚ್ಚರವಾಗಿಯೇ ಇದ್ದಾನೆ. ಲಕ್ಷ್ಮೀ ಸ್ಪರ್ಶ ಹೊಂದಿದ ವಿಷ್ಣು, ಯಾವಾಗಲೂ ಕ್ಷೀರಸಮುದ್ರದಲ್ಲಿ ಗೊರಕೆ ಹೊಡೆಯುತ್ತಿದ್ದಾನೆ. ಆದುದರಿಂದ ವಾಸ್ತವಾಗಿ ಸ್ತ್ರೀಯೇ ನಂಜು."

ಹಾಲಾಹಲೋ ನೈವ ವಿಷಂ, ವಿಷಂ ರಮಾ
ಜನಾಃ ಪರಂ ವ್ಯತ್ಯಯಮತ್ರಮನ್ವತೆ ।
ನಿಪೀಯ ಜಾಗರ್ತಿ ಸುಖೇನ ತಂ ಶಿವಃ
ಸ್ಪೃಶನ್ನಿಮಾಂ ಮುಹ್ಯತಿ ನಿದ್ರಯಾ ಹರಿಃ ॥

ಈ ಸ್ತ್ರೀ ದ್ವೇಷಿಯ ಅಭಿಪ್ರಾಯವನ್ನು ಯಾರು ತಾನೇ ಒಪ್ಪುತ್ತಾರೆ? ಕಾಳಿದಾಸನೇ ಒಪ್ಪಲಿಲ್ಲ. ಪ್ರಾಜ್ಞನಾದ ಕಾಳಿದಾಸ, ಸೃಷ್ಟಿಯ ಅರ್ಧ ಭಾಗವನ್ನು ಒಂದೇಸಲಕ್ಕೆ ವಿಷವೆಂದು ಒಪ್ಪಿಯಾನೆ? ಕಾಳಿದಾಸ, ಶಿವಭಕ್ತನಲ್ಲವೆ? ವಾಕ್, ಅರ್ಥದಂತೆ ಶಿವ ಪಾರ್ವತಿಯರು ಸೇರಿಲ್ಲವೇ? ಕಾಳಿದಾಸ ಕಾಳಿಯ ದಾಸನೇ ಅಲ್ಲವೇ? "ಸಾರವಿಲ್ಲದಿರುವ ಸಂಸಾರದಲ್ಲಿ ಸಾರವಾದುದು ಸ್ತ್ರೀ ಒಂದೇ. ಇದನ್ನು ತಿಳಿದು ತಾನೆ ಈಶ್ವರ, ತನ್ನ ದೇಹದಲ್ಲಿ ಅರ್ಧವನ್ನು ಪಾರ್ವತಿಗೆ ಕೊಟ್ಟು ಅರ್ಧನಾರೀಶ್ವರನಾದನು.

ಅಸಾರಭೂತೇ ಸಂಸಾರೇ ಸಾರಭೂತಾ ನಿತಂಬಿನೀ ।
ಇತಿ ಸಂಚಿಂತ್ಯ ವೈ ಶಂಭು – ರರ್ಧಾಂಗೇ ಪಾರ್ವತೀಂ ದಧೌ ॥

ಅದನ್ನು ಕೇಳಿದ ಕವಿ ಭೇಷ್ ಎಂದರು. "ಕಾಳಿದಾಸ ಹೇಳಿದುದರಲ್ಲಿ ತಪ್ಪುಉಂಟೇ? ಆದರೆ ಅದರಲ್ಲಿ ಒಂದು ವಿನೋದ ನೋಡಿ. ಶೂರರಾದ ಎಷ್ಟೋ ಬಿಲ್ಲಾಳುಗಳು ಇದ್ದಾರೆ. ಬಾಣಬಿಟ್ಟು ಯಾವುದನ್ನೂ ಕತ್ತರಿಸಿಬಿಡುತ್ತಾರೆ. ಆದರೆ ಒಂದು ಬಾಣ ಬಿಟ್ಟು ಎರಡನ್ನು ಒಂದು ಮಾಡುವ ಶಕ್ತಿ ಇರುವುದು ಮನ್ಮಥನೊಬ್ಬನಿಗೆ ಮಾತ್ರ"

ಏಕಂ ವಸ್ತು ದ್ವಿಧಾ ಕರ್ತುಂ ಬಹವಃ ಸಂತಿ ಧನ್ವಿನಃ ।
ಧನ್ವೀ ಸ ಮಾರ ಏವೈಕೋ ದ್ವಯೋರೈಕ್ಯಂ ಕರೋತಿ ಯಃ ॥

ಒಂದೊಂದು ವೇಳೆ ಈ ಕಟಕಿ, ತೀಕ್ಷ್ಣರೂಪವನ್ನು ತಳೆಯುವುದುಂಟು. ನಾಲ್ಕು ಅಕ್ಷರವನ್ನು ಕಲಿತು ಪಂಡಿತನಾದವನು, ನಿಜವಾದ ಪಂಡಿತರೊಡನೆ ವಾದ ಹೂಡುವುದುಂಟು.

ಗುರೋರ್ಗಿರಃ ಪಂಚದಿನಾನ್ ಅಧೀತ್ಯ
ವೇದಾಂತ ಶಾಸ್ತ್ರಾಣಿ ದಿನ ತ್ರಯಂಚ
ಅಮೀ ಸಮಾಘ್ರಾಯ ಚ ತರ್ಕ ವಾದಾನ್
ಸಮಾಗತಃ ಕುಕ್ಕುಟ ಮಿಶ್ರಪಾದಃ

[ಆಹಾ! ಇವರು ಬಹಳ ವಿದ್ವಾಂಸರು. ಗುರುವಿನ ಬಳಿ ಐದು ದಿನಗಳು ಅಧ್ಯಯನ ಮಾಡಿದ್ದಾರೆ. ಮೂರು ದಿನಗಳು ವೇದಾಂತಶಾಸ್ತ್ರವನ್ನು ಓದಿದ್ದಾರೆ. ತರ್ಕವಾದವನ್ನು ಸ್ವಲ್ಪ ವಾಸನೆ ನೋಡಿರಬಹುದು. ಇಂತಹ ಮಿಶ್ರಪಾದರು ನಮ್ಮನ್ನು ಕೆಣಕಲು ಬರುತ್ತಿದ್ದಾರೆ.]

ಸಂಸ್ಕೃತ ಸಾಹಿತ್ಯದಲ್ಲಿ ಈ ಬಗೆಯ ಸರಸೋಕ್ತಿಗಳಿಗೆ ಲೆಕ್ಕವುಂಟೆ ?

ಥಾಮಸ್ ಹಾರ್ಡಿ

ಥಾಮಸ್ ಹಾರ್ಡಿಯನ್ನು ಅನೇಕರು ಸಾಹಿತ್ಯದ ಗೂಬೆ ಎಂದು ಕರೆದಿದ್ದಾರೆ. ಅವನದು ಗೋಳು, ದುಃಖ ನಿರುತ್ಸಾಹ ನಿರ್ಜೀವ ಇವುಗಳ ಪ್ರತಿಪಾದನೆ, ಎಂದು ವಿಮರ್ಶಕರು ಹೇಳಿದ್ದಾರೆ. ಅವನು ಸ್ವರ್ಗಸ್ಥನಾದಾಗ "ವಿಕ್ಟೋರಿಯಾ ತಲೆಮಾರಿನ ಕಡೆಯ ಮಹಸೀಯ" ಎಂದು ಪತ್ರಿಕೆಗಳು ಕರೆದವು. ವಿಕ್ಟೋರಿಯಾ ರಾಣಿ ಸಿಂಹಾಸನವನ್ನು ಏರಿದ ಮೂರು ವರ್ಷಗಳನಂತರ ಅವನು ಜನಿಸಿದನು. ಡೆಸ್ಪರೇಟ್ ರೆಮಿಡೀಸ್ (Desperate Remedies) ಎಂಬ ಮೊದಲನೆ ಗ್ರಂಥವನ್ನೂ, ಅನಂತರ ೧೮೭೨ ನೇ ಇಸವಿಯಲ್ಲಿ ಅಂಡರ್ ದಿ ಗ್ರೀನ್‌ವುಡ್ ಟ್ರೀ ಎಂಬ ಗ್ರಂಥವನ್ನೂ ಅವನು ತನ್ನ ಹೆಸರಿಲ್ಲದೆ ಪ್ರಕಟಿಸಿದನು. ಆದರೆ ಅವನ ಹೆಸರಿನಲ್ಲಿ ಅವನು ಪ್ರಕಟಿಸಿದ ಮೊದಲನೆ ಗ್ರಂಥ ಒಂದು ಜೊತೆ ನೀಲಿ ಕಣ್ಣುಗಳು (A pair of Blue eyes) ಎಂಬುದು (೧೮೭೩). ಯಾವಕಾರಣದಿಂದಲೋ ನನಗೆ ಹಾರ್ಡಿಯ ಹೆಸರು ಮೊದಲು ಗೊತ್ತಾದುದು ಆ ಪುಸ್ತಕವನ್ನು ಓದಿದಾಗ. ಹಾರ್ಡಿಯು ಅದರಲ್ಲಿ ತನ್ನ ಪೂರ್ಣವಾದ ಶಕ್ತಿಗಳನ್ನು ಚೆನ್ನಾಗಿ ಪ್ರಕಾಶಪಡಿಸಿದ್ದಾನೆ. ಒಂದು ಜೊತೆ ನೀಲಿಯ ಕಣ್ಣುಗಳು ಪ್ರಕಟವಾದ ಅನಂತರ ೨೫ ವರುಷ ಹಾರ್ಡಿ ಒಂದೇ ಸಮನಾಗಿ ಕಥೆ ಕಾದಂಬರಿ ಕವಿತೆಗಳನ್ನು ಸೃಷ್ಟಿಸಿದನು. ರಿಟರ್ನ್ ಆಫ್ ದಿ ನೇಟಿವ್ (Return of the Native 1878) ದಿ ಮೇಯರ್ ಆಫ್ ಕ್ಯಾಸ್ಟರ್ ಬ್ರಿಡ್ಜ್ (೧೮೮೬), ಟೆಸ್ ಆಫ್ ದಿ ಡಿ ಆರ್‌ಬರ್‌ವಿಲ್ಲೆ Tess of the D' urbervilles (೧೮೯೧) ಜೂಡ್ ದಿ ಅಬ್ಸ್ಕ್ಯೂರ್ (೧೮೯೬). ಅವನ ಕವನಗಳು ವೆಸೆಕ್ಸ್‌ಪದ್ಯಗಳು ಮತ್ತು ಇತರ ಕವನಗಳು (೧೮೯೮) ಹಿಂದಿನ ಮತ್ತು ಇಂದಿನ ಕವನಗಳು, (೧೯೦೨) ಮುಂತಾದುವುಗಳಿಂದ ಪ್ರಾರಂಭವಾದುವು. ಈ ಕವನಗಳನ್ನು ಹಾರ್ಡಿ ೧೮೭೧ರಲ್ಲಿ ಬರೆದರೂ, ಅವು ೩೦ ವರುಷಗಳ ಕಾಲ ಪ್ರಕಟವಾಗಿರಲಿಲ್ಲ. ೧೯೦೪-೧೯೦೮ ರಲ್ಲಿ ಬರೆದ ಡೈನಾಸ್ಟ್ಸ್ (Dynasts) ೧೯೧೪ ರಲ್ಲಿ ಬರೆದ ಸಟೀರ್ಸ್ ಆಫ್ ಸರ್‌ಕಂಸ್ಟನ್‌ಸಸ್ (Satires of circumstances) ಲೇಟ್

ಲಿರಿಕ್ಸ್ ಮತ್ತು ಅರ್ಲಿಯರ್ (Late lyrics and earlier) ಇವುಗಳಿಂದ ಹಾರ್ಡಿ ಆಧುನಿಕ ಕವಿಯಾಗಿ ಪ್ರಸಿದ್ಧನಾದನು. ಆದರೆ ಕಥೆ ಕಾದಂಬರಿಕಾರನಾಗಿ ಅವನು ಪೂರ್ಣವಾಗಿ ವಿಕ್ಟೋರಿಯಾ ತಲೆ ಮಾರಿಗೆ ಸೇರಿದವನು.

ಆದರೆ ಸಾಹಿತ್ಯದಲ್ಲಿ ತಲೆಮಾರಿನ ಲೆಕ್ಕ ಪ್ರಯೋಜನಕಾರಿಯಾದು ದಲ್ಲ. ೧೮೭೦-೮೦ರ ಜನ ೧೮೫೦ರ ಜನರನ್ನು ಮಧ್ಯಕಾಲದ ವಿಕ್ಟೋರಿಯ ತಲೆಮಾರಿನವರು (Mid-Victorians) ಎಂದು ಹಾಸ್ಯ ಮಾಡುತ್ತಿದ್ದಿತು. ಅದು ಸಾಹಿತ್ಯ ವಿಜ್ಞಾನ ವೇದಾಂತ ರಾಜಕೀಯ ಶಾಸ್ತ್ರ ಮುಂತಾದುವುಗಳ ಬೆಳವಣಿಗೆಯ ಕಾಲವಾಗಿದ್ದಿತು. ೧೮೩೦ರ ವರೆಗೆ ಯುದ್ಧಗಳು ನಡೆದು ಆಮೇಲೆ ಬಂದ ಸಮಾಧಾನದ ಕಾಲದಲ್ಲಿ ಜನರು ಶಾಂತಿಯನ್ನು ಹುಡುಕುತ್ತಿದ್ದರು. ಆದರೆ ಅವರಿಗೆ ಶಾಂತಿ ಎಲ್ಲೂ ದೊರೆತಿರಲಿಲ್ಲ. ಆ ಪ್ರಸಿದ್ಧರಾದ ವಿಜ್ಞಾನಿಗಳು ಒಂದಾದ ಮೇಲೆ ಒಂದರಂತೆ ಹೊಸ ಹೊಸ ತತ್ವಗಳನ್ನು ಕಂಡುಹಿಡಿಯುತ್ತಾ ಜನರು ತಮ್ಮ ಜೀವನವನ್ನೂ ವ್ಯವಹಾರವನ್ನೂ ಅದಕ್ಕೆ ಹೊಂದಿಸಿಕೊಳ್ಳುವುದಕ್ಕಿಂತ ಮುಂಚೆ, ಇನ್ನೊಂದು ಹೊಸ ವಿಚಾರಕ್ಕೆ ಅವರನ್ನು ತಳ್ಳುತ್ತಿದ್ದರು. ಈ ವಿಜ್ಞಾನಿಗಳನ್ನು ಕಂಡರೆ ಜನರಿಗೆ ಬಹಳ ಗೌರವವಿದ್ದಿತು. ಆದರೆ ತಮಗೆ ಬೇಕಾದ ಶಾಂತಿಗೆ ಅವರು ಸಾಹಿತ್ಯದಕಡೆ ತಿರುಗುತ್ತಿದ್ದರು. ಆಗಿನ ಜನರ ಮನೋಭಾವವನ್ನು ಕುರಿತು ೧೮೫೫ನೇ ಇಸವಿಯ ನ್ಯಾಷನಲ್ ರೆವ್ಯು ಹೀಗೆ ಹೇಳಿತು: "ಅವರಿಗೆ ಬೇಕಾಗಿದ್ದುದು, ತಮ್ಮ ನಿತ್ಯ ಜೀವನದ ತಾಪತ್ರಯದಿಂದ ತಮ್ಮ ಮನಸ್ಸನ್ನು ಸುಖ ಶಾಂತಿಗೆ ತಿರುಗಿಸುವ ಸಾಹಿತ್ಯ. ಜೀವನದ ಕಷ್ಟಗಳು ಸಮೀಪಕ್ಕೆ ಬರದಂತೆ ಸುಖಗಳನ್ನೇ ಪ್ರಕಟಿಸುವ ಸಾಹಿತ್ಯ." ಕಲೆಗಾರನು ಜೀವನದಲ್ಲಿ ಉತ್ತಮವಾದುದನ್ನೇ ಚಿತ್ರಿಸಬೇಕೆಂದು ಅವರು ಬಯಸುತ್ತಿದ್ದರು. "ಸಾಹಿತ್ಯ ಜೀವನದಲ್ಲಿಯ ಅಭಾವವನ್ನು ತೋರಿಸಬಾರದು. ಆದರೆ ಜೀವನದ ಪ್ರತಿಬಿಂಬವೂ ಆಗಿರಬಾರದು" ಎಂಬುದು ಆಗಿನ ಜನರ ಮನೋಭಾವನೆಯಾಗಿದ್ದಿತು. ಸುಖವಾದ ವಿವಾಹಗಳು, ವಿವಾಹ ಸುಖಗಳು, ಗ್ರಾಮಜೀವನದ ಆನಂದಗಳು, ಪ್ರಕೃತಿಯ ಸುಖಾನುಭವಗಳು, ಇವುಗಳ

ಚಿತ್ರ ಮಾತ್ರ ಅವರಿಗೆ ಬೇಕಾಗಿದ್ದಿತು. ಆಗಿನ ಕಾದಂಬರಿಕಾರರು ಅವರಿಗೆ ಬೇಕಾದುದನ್ನೇ ಒದಗಿಸುತ್ತಿದ್ದರು.—"ನೀತಿಯ ಜಯ. ಕೊನೆಯಲ್ಲಿ ಸುಖವಾದ ವಿವಾಹ." ಡಿಕನ್ಸ್‌ನಂತಹ ಕಾದಂಬರಿಕಾರ ತನ್ನ ನಾಯಕ ನಾಯಕಿಯರಾದ ಪಿಪ್ ಮತ್ತು ಎಸ್ಟೆಲ್ಲ ಇಬ್ಬರನ್ನೂ ಮದುವೆ ಮಾಡಿಸದೆ ಬಿಟ್ಟರೂ ಅವರು ಕೇಳದೆ "ಕಥೆ ಶುಭದಲ್ಲಿ ಕೊನೆಯಾಗಬೇಕು. ಕೊನೆಯ ಅಧ್ಯಾಯ ಎಲ್ಲಿ?" ಎಂದು ಕೇಳತೊಡಗಿದರು. 1870ರ ವರೆಗೆ ಹೀಗೆ ಇದ್ದಿತು. ಅನಂತರ ಅಲ್ಲೊಂದು ಇಲ್ಲೊಂದು ವಿರೋಧದ ಧ್ವನಿ ಕೇಳತೊಡಗಿತು. ಜೀವನದಲ್ಲಿಯ ಸಂಗತಿಗಳು ಅಸುಖವಾದುವುಗಳೇ ಆದರೂ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಜೀವನದ ಕಷ್ಟ, ತಾಪತ್ರಯಗಳನ್ನು ಉದಾಸೀನ ದೃಷ್ಟಿಯಿಂದ ನೋಡಿದ ಮಾತ್ರಕ್ಕೆ, ಕಷ್ಟಪರಿಹಾರವಾಗಲಿಲ್ಲವೆಂಬುದು ಜನರಿಗೆ ತಿಳಿಯತೊಡಗಿತು. ಕಷ್ಟಕ್ಕೆ ಸಿಕ್ಕಿದವನು ಅನುಭವಿಸುತ್ತಿರುವ ನೋವಿಗೆ ಅವನು ಜವಾಬ್ದಾರನಲ್ಲ. ಅದು ಯಾವಾಗಲೂ ಅವನ ಪಾಪದ ಫಲವೆಂದೇ ಹೇಳುವುದಕ್ಕಾಗುವುದಿಲ್ಲ. ನಿರಪರಾಧಿಯಾದವನು ಯಾಕೆ ಕಷ್ಟವನ್ನು ಅನುಭವಿಸಬೇಕು? ಎಂದು ಜನರು ಪ್ರಶ್ನೆ ಹಾಕಿಕೊಳ್ಳತೊಡಗಿದರು. ನೀತಿವಂತ ಅಥವ ಅನೀತಿವಂತ ಇವು ಮನುಷ್ಯನ ಹುಟ್ಟುಗುಣಗಳಲ್ಲ. ಮನುಷ್ಯನ ಕೆಲಸಗಳಿಗೆಲ್ಲಾ ಅವನ ಪರಿಸ್ಥಿತಿಯೇ ಕಾರಣ. ಮನುಷ್ಯನಿಗೆ ಇರುವ ಸ್ವಾತಂತ್ರ್ಯ ಬಹು ಕಡಿಮೆ. ಅವನು ಪರಿಸ್ಥಿತಿಯ ಗುಲಾಮ. ಇವುಗಳೊಂದನ್ನೂ ಗಣನೆಗೆ ತೆಗೆದುಕೊಳ್ಳದ ಸಾಹಿತ್ಯದಿಂದ ಜನರಿಗೆ ಸಮಾಧಾನವಾಗಲಿಲ್ಲ. ಅವರು "ಜೀವನದ ನೋವಿಗೆ ಪರಿಹಾರವನ್ನು ಸತ್ಯವಾಗಿ ಪ್ರತಿಬಿಂಬಿಸುವ ಸಾಹಿತ್ಯವಾದರೂ ಬೇಕು"ಎಂದು ಬಯಸತೊಡಗಿದರು.

ಈ ಬಯಕೆಯ ಫಲವಾಗಿ ಥಾಮಸ್ ಹಾರ್ಡಿಯ ಗ್ರಂಥಗಳು ಸಾಹಿತ್ಯ ಜಗತ್ತಿನಲ್ಲಿ ಕಾಲಿಡತೊಡಗಿದವು. ಹಾರ್ಡಿಯು ತನ್ನ ೨೨ ನೆಯ ವಯಸ್ಸಿನಿಂದ ೨೭ನೆಯ ವಯಸ್ಸಿನವರೆಗೆ ಶಿಲ್ಪಿ ಕೆಲಸವನ್ನು ಮಾಡುತ್ತಿದ್ದನು. ಕೆಲವು ವರುಷಗಳು ಲಂಡನ್ ನಗರದಲ್ಲಿ ಈ ಕಸಬಿನಲ್ಲಿರುತ್ತಾ ಮಧ್ಯೆ ಮಧ್ಯೆ ಸಾಹಿತ್ಯಕ್ಕೂ ಕೈ ಹಾಕುತ್ತಿರುವಾಗ ತನಗೆ ಸಾಹಿತ್ಯದಲ್ಲಿರುವ ಸ್ಥಾನವು ಅವನಿಗೆ, ಗೊತ್ತಾಗಿ ಅವನು ತನ್ನ ಜನ್ಮಸ್ಥಳವಾದ ವೆಸೆಕ್ಸ್‌ಗೆ ಹಿಂದಿರುಗಿ ನೆಲೆಸಿ

ದನು. ಸಾಹಿತ್ಯರಾಧಕನೊಬ್ಬನು ಒಂದುಸಲ ವೆಸೆಕ್ಸ್‌ಗೆ ಹೋಗಿ ಅಲ್ಲಿಯ ಒಂದು ಹೋಟಲಿನಲ್ಲಿ ಇಳಿದುಕೊಂಡು, ಸ್ಥಳನ ರೈತನೊಬ್ಬನನ್ನು "ಇಲ್ಲಿಗೆ ಥಾಮಸ್ ಹಾರ್ಡಿ ಆಗಾಗ್ಗೆ ಬರುತ್ತಾನೆಯೆ?" ಎಂದು ಕೇಳಿದನು. ? ರೈತನಿಗೆ ಒಂದು ಗಳಿಗೆ ವರೆಗೆ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಿಲ್ಲ. ಅನಂತರ ಅವನು "ಓ. ನೀವು ಹೇಳುವುದು ಬಿಲ್ ಹಾರ್ಡಿ, ಹಂದಿಗಳ ವ್ಯಾಪಾರಿ ಅಲ್ಲವೆ? ಅವನು ಇಲ್ಲಿಗೆ ಪ್ರತಿ ಸಂಜೆಯೂ ಬರುತ್ತಾನೆ" ಎಂದನು. ಪ್ರಾಯಶಃ ಅವನಿಗೆ ಬಿಲ್ ಹಾರ್ಡಿಯೇ ಥಾಮಸ್ ಹಾರ್ಡಿ ಎಂದು ತಿಳಿದಿದ್ದಿರಲಾರದು. ಆ ರೈತನೇ ಹಾರ್ಡಿಯ ಕಾದಂಬರಿಯ ಗೇಬ್ರಿಯಲ್ ಓಕ್ ಆಗಿದ್ದರೂ ಆಗಿರಬಹುದು. ಹಾರ್ಡಿಗೆ ತಾನು ಎಲ್ಲಿದ್ದರೆ ಉತ್ತಮವಾದ ಗ್ರಂಥಗಳನ್ನು ಸೃಷ್ಟಿಸಬಹುದೆಂದು ಚೆನ್ನಾಗಿ ಗೊತ್ತಿದ್ದಿತು, ತನ್ನ ಗ್ರಂಥಗಳ ಪಾತ್ರಗಳ ಮೂಲಸ್ಥಾನವಾದ ವೆಸಕ್ಸ್‌ನ ಶುದ್ಧ ಪ್ರವಾಹವನ್ನು ಪಾನಮಾಡುವುದನ್ನು ಬಿಟ್ಟು ಅವನು ತನ್ನ ಸ್ಫೂರ್ತಿಯನ್ನು ಲಂಡನ್ ಮುಂತಾದ ನಗರದ ಮಡ್ಡಿ ನೀರಿನಿಂದ ಕಲುಷಿತ ಮಾಡಿಕೊಳ್ಳಲಿಲ್ಲ. ಅವನಿಗೆ ಶಾಂತಿ, ಮತ್ತು ಯಾರ ಕಣ್ಣಿಗೂ ಬೀಳದೆ ಯಾವುದೋ ಒಂದು ಮೂಲೆಯಲ್ಲಿ ವಾಸಿಸುವುದೇ ಇಷ್ಟವಾಗಿದ್ದಿತು. ಹೀಗೆ ಯಾರಕಣ್ಣಿಗೂ ಬೀಳದೆ ಅಪ್ರಸಿದ್ಧನಾಗಿರಬೇಕಾದರೆ ತನ್ನ ಹಳ್ಳಿಯ ಜನರೊಡನೆ ತಾನು ವಾಸಮಾಡಬೇಕೆಂಬುದು ಅವನಿಗೆ ತಿಳಿದಿದ್ದಿತು. ತನ್ನ ಗ್ರಾಮವಾದ, ತನ್ನ ತಾಯಿ ೯೦ ವರುಷ ವಯಸ್ಸಾಗಿದ್ದಾಗ ಸ್ವರ್ಗಸ್ಥಳಾದ, ಅಪ್ಪರ್ ಬಾಕ್ ಹಾಂಟನ್‌ನಲ್ಲಿ ಒಂದು ಮನೆಯನ್ನು ತೆಗೆದುಕೊಂಡು ಅದರಲ್ಲಿ ಅವನು ವಾಸಿಸುತ್ತಿದ್ದನು. ಹಿಂದೆ ಇದೇ ಮನೆಯಿಂದ ಲಂಡನ್‌ಗೆ ಆಫೀಸಿಗೆ ಹೋಗಿ, ಅರ್ಧ ರಾತ್ರಿ ವೇಳೆಗೆ ಹಿಂದಿರುಗಿ, ಅಲ್ಲಿ ಕಾವ್ಯಗಳನ್ನು ವ್ಯಾಸಂಗಮಾಡುವುದರಲ್ಲಿ ರಾತ್ರಿಯನ್ನೆಲ್ಲಾ ಕಳೆಯುತ್ತಿದ್ದನು ಹಸಿರು ಮರದ ಕೆಳಗೆ (Under the Greenwood Tree) ಎಂಬ ಗೆಲುವಾದ ಕಾದಂಬರಿಯಿಂದ ಪ್ರಾರಂಭವಾದ ಹಾರ್ಡಿಯ ಯೌವನ, ಜೂಡ್ ದಿ ಅಬ್‌ಸ್ಕ್ಯೂರ್‌ದಂತಹ ಪೂರ್ಣ ದುಃಖದ ಕಾದಂಬರಿಯಲ್ಲಿ ಮುಪ್ಪನ್ನು ಕಂಡಿತು. ಮಧ್ಯೆ "ಡೈನಾಸ್ಟ್" ನಂತಹ ಅದ್ಭುತವಾದ ನಾಟಕವೂ, ಮನುಷ್ಯಪ್ರಯತ್ನದ ವಿಫಲತೆಯೂ, ಮನುಷ್ಯನ

ದೌರ್ಬಲ್ಯವೂ ಮನುಷ್ಯನ ಸಾಹಸವನ್ನು ಕಂಡು, ಕಣ್ಣಿಗೆ ಕಾಣದ ಶಕ್ತಿಗಳು ವಿಕಟವಾಗಿ ಹಾಸ್ಯವಾಗಿ ನಗುವುದೂ, ಮೆರವಣಿಗೆಯಾಡುವು. ಹಾರ್ಡಿ ಮನುಷ್ಯನ ದೌರ್ಬಲ್ಯವನ್ನು ಪೂರ್ಣವಾಗಿ ಚಿತ್ರಲೆಯಾಗಿ ತೋರಿಸಿದ್ದಾನೆ. "ಮನುಷ್ಯ ಸಾಹಸಿ; ತನ್ನ ಇಷ್ಟವನ್ನು ಅನೇಕ ಸಲ ಸಾಧಿಸುತ್ತಾನೆ. ಅವನ ಮಾತೇ, ಅಧಿಕಾರದ ವಾಣಿ ಅನೇಕ ಸಲ ಆಗುತ್ತದೆ. ಆದರೇನು? ಅವನ ಹಣೆಬರಹ ಮೊದಲೇ ಬರೆದಿಟ್ಟದ್ದೆ. ಸುಖ ಎಂಬುದು, ಮನುಷ್ಯನು ಒಳ್ಳೆಯವನಾದುದರಿಂದ ಮಾತ್ರಕ್ಕೇ ಅವನಿಗೆ ಉಂಟಾಗುವುದಿಲ್ಲ. ಅವನು ಕೆಟ್ಟವನಾದುದರಿಂದಲೇ ಅವನಿಗೆ ಕಷ್ಟ ಬರುವುದಿಲ್ಲ. ಮನುಷ್ಯನ ಕಷ್ಟ ಸುಖಗಳೆಲ್ಲಾ ಅವನ ಪರಿಸ್ಥಿತಿಯನ್ನೇ ಅವಲಂಬಿಸಿವೆ. ಆನುವಂಶೀಯ ಸ್ವಭಾವಗಳು, ಬೆಳವಣಿಗೆಯ ಕ್ರಮ, ಸಾಮಾಜಿಕ ಪರಿಸ್ಥಿತಿ ಇವುಗಳೆಲ್ಲಾ ಮನುಷ್ಯನ ಯೋಗ್ಯತೆಯನ್ನು ನಿರ್ಣಯಿಸುತ್ತವೆ. ಆದರೆ ಮನುಷ್ಯನ ಅದೃಷ್ಟ, ಅದೃಷ್ಟದ ಮೇಲೆಯೇ ಅವಲಂಬಿಸಿದೆ. ಅತ್ಯಲ್ಪವಾದ ಸಂಗತಿಗಳೂ ಮಹತ್ತಾದ ಫಲಗಳುಳ್ಳವುಗಳಾಗುತ್ತವೆ," ಇದು ಹಾರ್ಡಿಯ ಕಾದಂಬರಿಗಳ ಹಿನ್ನಲೆ.

ಜೂಡ್ ದಿ ಅಬಸ್ಕ್ಯೂರ್‌ದ ಮುನ್ನುಡಿಯಲ್ಲಿ ಹಾರ್ಡಿ ಹೇಳುವ ಮಾತುಗಳಿಂದ ಅವನ ಅಭಿಪ್ರಾಯ ಹೆಚ್ಚು ಸ್ಪಷ್ಟವಾಗುತ್ತದೆ. : "ಈ ಮನುಷ್ಯ, ಒಂದೊಂದು ಕೆಲಸ ಮಾಡುವುದು, ಒಂದೊಂದು ರೀತಿ ನಡೆಯುವುದು, ಆಕಸ್ಮಿಕವಾಗಿ ಅಲ್ಲ. ಅವನ ಸ್ವಂತ ಇಚ್ಛಾಶಕ್ತಿಗಿಂತ ಹೆಚ್ಚು ಬಲಶಾಲಿಗಳಾದ ಸತ್ವವುಳ್ಳ ಶಕ್ತಿಗಳು ಇವನ ವ್ಯಕ್ತಿತ್ವವನ್ನು ಪೂರ್ಣವಾಗಿ–ಇವನ ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ತಿದ್ದಿವೆ." ಈ ಶಕ್ತಿಗಳ ಕೈಯ್ಯಲ್ಲಿ ಯಾವ ಸಾಹಸಿಯೂ, ಯಾವ ನೆಪೋಲಿಯನ್ನೂ ಅಲ್ಪನೇ. ಈ ಭಾವನಾರಹಿತವಾದ, ಪ್ರೇಮದ್ವೇಷರಹಿತವಾದ ಶಕ್ತಿಯ ಉದ್ದೇಶ, ಯಾವ ಮನುಷ್ಯ ಪ್ರಾಣಿಗೂ ತಿಳಿಯುವುದಿಲ್ಲ. ಈ ಶಕ್ತಿಗಳ ಪೈಕಿ ಪ್ರಕೃತಿಯೂ ಮುಖ್ಯವಾದುದು. ಹಾರ್ಡಿಯ ಕಾದಂಬರಿಗಳಲ್ಲಿ ಪ್ರಕೃತಿಯ ಸ್ಥಾನ, ಮನುಷ್ಯನ ಸ್ಥಾನಕ್ಕಿಂತ ಹೆಚ್ಚು ಪ್ರಾಮುಖ್ಯವಾದುದು. ರಿಟರ್ನ್ ಆಫ್ ದಿ ನೇಟಿವ್, ಟೆಸ್ ಮುಂತಾದುವುಗಳಲ್ಲಿ ಪ್ರಕೃತಿಯೇ ಸರ್ವಾಧಿಕಾರಿ. ರಿಟರ್ನ್ ಆಫ್ ದಿ ನೇಟಿವ್‌ನಲ್ಲಿ ಸಮಸ್ತ ಕೆಲಸಗಳೂ

ಈಗಡನ್ ಹೀತ್‌ನ ಗಿಡ, ಗೆಡ್ಡೆ, ಕುರುಚಲು, ಕಾಡು, ಜೋರೆ ಇವುಗಳ ಸುತ್ತ ನೇಯಿಸಿಕೊಂಡಿವೆ. ಆ ಮೊದಲನೆಯ ಅಧ್ಯಾಯವನ್ನು ನೋಡಿದರೆ ಕತೆ ಹೀಗೆ ಹೀಗೆಯೇ ಮುಂದೆ ಹೋಗುವುದೆಂದು ಊಹಿಸಬಹುದಾಗಿದೆ.

ಈಗಡನ್ ಹೀತ್ ಮೈದಾನದ ಮೇಲೆ ರಾತ್ರಿಯ ನೆರಳುಗಳು ಬಂದಂತೆ ಕಾದಂಬರಿಕಾರನ ಮನೋಭಾವಗಳ ಮೇಲೂ ರಾತ್ರಿಯ ಅಂಧಕಾರ ಕವಿಯುತ್ತಿದೆ. ಆ ಮರಳು ಕಾಡಿನಲ್ಲಿ ಒಂದೇ ಒಂದು ತೊಟ್ಟು ನೀರು ಇಲ್ಲ. ಆ ಬಿಸಿಲಿನಲ್ಲಿ ಒಂದು ಅಂಗೈ ಅಗಲ ನೆಳಲೂ ಇಲ್ಲ. ಆ ನಿರುತ್ಸಾಹದಲ್ಲಿ ಆಶೆಯ ಕಿರಣ ಯಾವುದೂ ಇಲ್ಲ. ಕೊನೆಗೆ ದುಃಖವೇ ಸರ್ವಾಧಿಕಾರಿ. ಸ್ವಲ್ಪ, ಜೀವನದ ಹೋರಾಟ, ಎಲ್ಲೋ ಸ್ವಲ್ಪ ನಗು; ಕೂಡಲೇ ಜೀವನವನ್ನು ಸುಖವಾಗಿ ಮಾಡುವ ಆ ಮಿಂಕುಗಳೂ ಹರಿದುಹೋಗುತ್ತವೆ. ಆಮೇಲೆ ಪೂರ್ಣ ಅಂಧಕಾರ. ಆ ಅಂಧಕಾರದಿಂದ ಈಚೆಗೆ ದಾರಿ ಇಲ್ಲ. ಸಾಹಿತ್ಯದ ಎಲ್ಲಾ ಸಿಂಹಗಳೂ ಈ ಅಂಧಕಾರದಲ್ಲಿ ಮುಳುಗಿದ್ದು ಈಚೆಗೆ ಬಂದಿದ್ದಾರೆ. ಆದರೆ ಹಾರ್ಡಿ ಈಚೆಗೆ ಬರುವುದೇ ಇಲ್ಲ. ಅವನು ಹೋಗ ಹೋಗುತ್ತಾ ಮಡುವಿಗೇ ಹೋಗುತ್ತಾನೆ. ಸೆರೆಮನೆಯ ಗೋಡೆಗಳು ಅವನ ಸುತ್ತ ಕವಿಯುತ್ತವೆ. ಆದರಿಂದ ಈಚೆಗೆ ಬರಲು ದಾರಿಯೇ ಇಲ್ಲ. ಹಸಿರು ಮರದ ಕೆಳಗೆ (Under the green wood tree) ಆ ಹಳ್ಳಿಯ ಗೌಡರ ಕ್ರಿಸ್‌ಮಸ್ ಹಬ್ಬದ ಗೆಲುವಾದ ಹಾಡುಗಳೊಂದಿಗೆ ಪ್ರಾರಂಭವಾದ ಮಾರ್ಗಕ್ರಮಣವು, ಜೂಡ್‌ನ ಆಶಾರಹಿತವಾದ ಪೂರ್ಣ ದುಃಖದಲ್ಲಿ ಕೊನೆಯಾಗುತ್ತದೆ.

ಹಾರ್ಡಿಯ ಈ ಪ್ರಪಂಚದ ನಾಯಕರು, ಇತರ ರುದ್ರ ಅಥವ ದುಂಖಾಂತ ನಾಟಕಗಳ ನಾಯಕರಂತೆ, ಧೀರೋದಾತ್ತರಾದ ಮಹನೀಯರಲ್ಲ. ಇವರಿಗೆ ನಾಯಕ ನಾಯಿಕೆ ಎಂಬ ಮಾತು ಅನ್ವಯಿಸುವುದೇ ಇಲ್ಲ. ಅವನ ಯಾವ ಕಾದಂಬರಿಯಲ್ಲಿಯೂ ದೌಷ್ಟ್ಯವನ್ನೇ ಕಸುಬಾಗಿ ಇಟ್ಟುಕೊಂಡ ನೀಚ, ಇಲ್ಲ. ಇದಕ್ಕೆ ಮುಖ್ಯಕಾರಣ ಜೀವನವನ್ನು ಅದು ಇರುವಂತೆ ಸಾಹಿತ್ಯದಲ್ಲಿ ಚಿತ್ರಿಸಬೇಕೆಂದು ಹಾರ್ಡಿ ಪ್ರಯತ್ನಿಸಿರುವುದೇ ಆಗಿದೆ. ಅವನ ಯಾವ ಪಾತ್ರಗಳಿಗೂ, ಆ ಪರಿಸ್ಥಿತಿಯನ್ನು ಬಿಟ್ಟು ಬೇರೆ ಪರಿಸ್ಥಿತಿಯಲ್ಲಿ ಸ್ಥಳವಿಲ್ಲ. ಜೂಡ್, ಹೆಂಚರ್ಡ್, ಯುಸ್ಟೇಸಿಯಾ, ಇವರೆಲ್ಲಾ

ಪರಿಸ್ಥಿತಿಯ ಗುಲಾಮರು. ಅವನ ರೈತರು, ಹಳ್ಳಿಗಾಡಿನವರು, ಅವರ ಮೂಢಭಕ್ತಿಯ ಆಚಾರವ್ಯವಹಾರಗಳು, ಅವರ ಗ್ರಾಮ್ಯ ಭಾಷೆ ಇವುಗಳೆಲ್ಲಾ ಮನುಷ್ಯ, ತನ್ನ ಪರಿಸ್ಥಿತಿಯನ್ನು ಮೀರಿ ಹೋಗಲಾರನೆಂಬುದನ್ನು ತೋರಿಸುತ್ತವೆ. ಹಾಗೆ ಯಾರಾದರೂ ದಂಗೆಕೋರನಾದರೆ, ಸಮಾಜವು ಅವನ ಮೇಲೆ ತನ್ನ ಸೇಡನ್ನು ತೀರಿಸಿ ಕೊಳ್ಳದೆ ಬಿಡುವುದಿಲ್ಲ. ಆದರೆ ಈ ಯಾವ ಪಾತ್ರಗಳಲ್ಲೂ ನಾಯಕನ ಧೀರತ್ವವಿಲ್ಲ. ನೈಟ್, ಏಂಜಲ್ ಕ್ಲೇರ್, ಕ್ಲಿಂ, ಗೇಬ್ರಿಯಲ್ ಓಕ್, ಟೆಸ್ ಇವರೆಲ್ಲಾ ನಿತ್ಯ ಜೀವನದ ಸಾಮಾನ್ಯ ವ್ಯಕ್ತಿಗಳು. ಇಲ್ಲಿ ಒಂದು ಸಾಧಾರಣವಾದ ಸಣ್ಣ ಸಂಗತಿಯ ಮೇಲೆ ಕಥೆಯ ಬೆಳವಣಿಗೆಯೆಲ್ಲಾ ಅವಲಂಬಿಸುತ್ತದೆ. ಒಂದು ಜೊತೆ ನೀಲಿಕಣ್ಣುಗಳು ಎಂಬುದರಲ್ಲಿ (A pair of blue eyes) ಎಲ್‌ಫ್ರಿಡ್ ತಾನು ಹಿಂತಿರುಗುತ್ತಿರುವಾಗ ಒಬ್ಬಳೇ, ತನ್ನ ಶತ್ರುವಾದ ಜೆತ್‌ವೆ ಎಂಬುವಳನ್ನು ನೋಡಿದುದು; ನೈಟ್ ಎಂಬುವನು, ಸತಿಸ್ವಾನ್‌ಕೋರ್ಟ್‌ಳ ಬಂಧುವಾಗಿ, ಎಲ್‌ಫ್ರಿಡಳ ಪುಸ್ತಕವನ್ನು ವಿಮರ್ಶೆಮಾಡಿದುದು, ಇವೆಲ್ಲಾ ಆಕಸ್ಮಿಕಗಳೇ. ಇಲ್ಲಿ ಇತರ ರುದ್ರ ನಾಟಕಗಳಲ್ಲಿರುವಂತೆ ನಾಯಕ, ಸಮಾಜದೊಂದಿಗೂ ತನ್ನವರೊಂದಿಗೂ ಧೈರ್ಯದಿಂದ ಕಾದುವುದಿಲ್ಲ. ಮುಖ್ಯಪಾತ್ರ, ಪರಿಸ್ಥಿತಿಯ ಆಳು ಆದರೆ ಶೇಕ್ಸ್‌ಪಿಯರ್ ಗ್ರೀಕ್ ನಾಟಕಗಳಲ್ಲಿ ಅವನು ರಾಜನಾಗಿದ್ದರೆ. ಇಲ್ಲಿ ಹಾರ್ಡಿಯ ಕಾದಂಬರಿಗಳಲ್ಲಿ, ಅವನು ಸಾಮಾನ್ಯ ವ್ಯಕ್ತಿ. ಸರ್ವ ಶಕ್ತಿಯುತವಾದ ಪ್ರಕೃತಿಯ ಸ್ವಾಧೀನದಲ್ಲಿ ಮನುಷ್ಯ ಪರಾಧೀನನಾಗುತ್ತಾನೆ. ಎಲ್ಲಾ ಆನಂದಗಳೂ ಹಾಸ್ಯಾಸ್ಪದವಾಗಿ ಕಾಣುತ್ತವೆ. ಟೆಸ್ ಸತ್ತಾಗ ಹಾರ್ಡಿ "ನ್ಯಾಯ ತೀರ್ಮಾನವಾಯಿತು. ಅಮರರ ಅಧ್ಯಕ್ಷ ಅವಳೊಂದಿಗೆ ತನ್ನ ವಿನೋದವನ್ನು ಮುಗಿಸಿದನು" ಎಂದು ಹೇಳುತ್ತಾನೆ. ಮನುಷ್ಯ, ಅದ್ಭುತವಾದ ಬೇರೆ ಒಂದು ಶಕ್ತಿಯ ಕೈಯಲ್ಲಿ ಸಿಕ್ಕಿಕೊಂಡಿದ್ದಾನೆ. ಅಲ್ಲಿ ನ್ಯಾಯ ಅನ್ಯಾಯ ಯಾವುದೂ ಇಲ್ಲ. ಅದರ ಕೈಯಿಂದ ತಪ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ತಪ್ಪಿಸಿಕೊಂಡರೂ ನಮಗೆ ಕಾಣುವುದು ಗಾಢಾಂಧಃಕಾರ ಮಾತ್ರ. ಹಾರ್ಡಿಚಿತ್ರಿಸುವ ಪ್ರಕೃತಿಯೂ ಇದಕ್ಕೆ ಸಹಾಯ ಮಾಡುತ್ತದೆ. ಆ ಪ್ರಕೃತಿಯ ಆಳವಾದ ಪರ್ವತದ ಕಪ್ಪಾದ ತಪ್ಪಲಲ್ಲಿ. ಆ ಬೆಳಕು ಇನ್ನೂ ಎಚ್ಚರಗೊಂಡು ಚಿಗರಿಲ್ಲ. ರಾತ್ರಿಯ ಅಂಧಕಾರ ಎಲ್ಲೆಲ್ಲಿಯೂ

ಹರಡಿದೆ. ಮುಂಬೆಳಕು ಮಬ್ಬುಮಬ್ಬಾಗಿದೆ. ಕರಿಯ ಆಕಾಶದಲ್ಲಿ ರಾಶಿ ರಾಶಿಯಾಗಿ ನಕ್ಷತ್ರಗಳು ಮಿನುಗುತ್ತಿವೆ; ರಾತ್ರಿಯ ತಂಗಾಳಿ ಭರ್ರನೆ ಬೀಸುತ್ತಿದೆ. ಅದು ರಾತ್ರಿಯ ಉಸಿರು. ಮುಟ್ಟಿದುದನ್ನೆಲ್ಲಾ ತಣ್ಣಗೆ ಮಾಡುವುದು ಅದರ ಸ್ವಭಾವ. ಈ ಪ್ರಕೃತಿಯಲ್ಲಿ ಪಾತ್ರಗಳು, ಮೊದಲೇ ನಿಶ್ಕರ್ಷೆಯಾಗಿರುವಂತೆ ತಮ್ಮ ತಮ್ಮ ಅದೃಷ್ಟವನ್ನು ಕುರಿತು ಚಲಿಸುತ್ತವೆ. ಈ ವರ್ಣನೆಯಲ್ಲೆಲ್ಲಾ ಹಾರ್ಡಿ, ಮೆರಿಡಿತ್‌ಗೆ ಪ್ರತಿಯಾದವನು. ಮೆರಿಡಿತ್ ನದು ಪ್ರಾತಃಕಾಲದ ಹಕ್ಕಿಗಳು ಚಿಲಿಪಿಲಿ ಗುಟ್ಟುವ ಧ್ವನಿ. ಹಾರ್ಡಿಯದು ಮನುಷ್ಯನ ದುಃಖವನ್ನು ಕಂಡು ಕೊರಗುವ ಧ್ವನಿ. ಹಾರ್ಡಿ, ಪ್ರಕೃತಿ ಯನ್ನು ಗೂಬೆಯ ಧ್ವನಿಯಲ್ಲಿ ಮಾತ್ರ ಕಾಣುತ್ತಾನೆ.

ಅವನ ಪಾತ್ರಗಳು ನಿತ್ಯಜೀವನದವೇ ಆದರೂ,ಮರೆಯುವಂತಹವುಗಳಲ್ಲ. ಟ್ರ್ಯಾಂಟರ್ ಡ್ಯೂ ಇ ನರ್ತನವನ್ನು ಕಂಡು ಹ್ಯಾಟು ತೆಗೆದುದು, ಗೇಬ್ರಿಯಲ್ ಓಕ್ ಕುರಿಮಂದೆಯ ನಡುವೆ ನಿಂತು ಆಕಾಶದ ನಕ್ಷತ್ರಗಳನ್ನು ನೋಡಿ ಹೊತ್ತನ್ನು ತಿಳಿಯುವುದು. ಕಾಡಿನ ನಿಶ್ಯಬ್ದ ಶಾಂತಿಯಲ್ಲಿ ವಿಂಟರ್‌ಬರ್ನ್, ಮತ್ತು ಮೇರಿ, ಗಿಡಗಳನ್ನು ನೆಡುವುದು. ಪಶುಶಕ್ತಿಯಿಂದಲೇ ನಮ್ಮ ವಿಶ್ವಾಸ ವನ್ನು ಎಳೆಯುವ ಹೆಂಚರ್ಡ್, ದುಃಖದಲ್ಲೂ ನಮ್ಮ ಹೃದಯವನ್ನು ಮುಟ್ಟುವ ಅವನ ಸ್ವಭಾವ; ಈ ಪಾತ್ರಗಳ ಜತೆಯಲ್ಲಿ ಹಾರ್ಡಿ ಪ್ರಯಾಣ ಮಾಡು ತ್ತಾನೆ. ಇಲ್ಲಿ ಪ್ರಕೃತಿ ಮನುಷ್ಯನ ಸ್ವಭಾವಕ್ಕೆ ಬರಿಯ ಹಿನ್ನೆಲೆಯಲ್ಲ. ಅದು ಅತ್ಯಂತ ಮುಖ್ಯವಾದ ಪಾತ್ರ. ಆ ಪ್ರಕೃತಿಯ ಮಹಾ ಸಮುದ್ರ ದಲ್ಲಿ ಸಣ್ಣ ಮರದ ತುಂಡು ತೇಲುವಂತೆ ಮನುಷ್ಯ ಈ ಕಡೆಗೂ ಆ ಕಡೆಗೂ ತೇಲುತ್ತಾನೆ. ನಾವು ಪ್ರೀತಿಸುವುದು ಹಾರ್ಡಿ ಚಿತ್ರಿಸಿರುವ ಅರೆ ಹುಚ್ಚು ಹೆಣ್ಣುಗಳನಲ್ಲ. ಅವು ತಿರಸ್ಕರಣೀಯ. ಆದರೆ ಅನೇಕ ಶತಮಾನಗಳಿಂದ. ಬದಲಾವಣೆಯನ್ನು ಹೊಂದದೆ ಒಂದೇ ಸಮನಾಗಿ ನಡೆದುಕೊಂಡು ಬರು ತ್ತಿರುವ ಗೆಬ್ರಿಯಲ್ ಓಕ್ ನಂತಹ ಸತ್ಯವಂತನೂ ಸತ್ವವಂತನೂ ಆದ ರೈತ, ತನ್ನನ್ನು ತಾನು ಮರೆತು ಇತರರಿಗೆ ಪ್ರಾಣವನ್ನು ಕೊಡಲು ಸಿದ್ಧ ನಾದ ಗೈಲ್ಸ್ ವಿಂಟರ್‌ಬೋರ್ನ್, ತನ್ನ ಪ್ರೇಮವನ್ನು ಗುಟ್ಟಿನಲ್ಲೇ ಬೆಳೆಸು ತ್ತಿರುವ ಮೇರಿ ಸೌತ್. ತನ್ನ ಪ್ರಿಯನು ಸತ್ತಾಗ ಅವಳು ಹೀಗೆ ಪ್ರಲಾ ಪಿಸುತ್ತಾಳೆ “ ಈಗ ನನ್ನ ಪ್ರಿಯ, ನನ್ನ ಸ್ವಂತ ಪ್ರಿಯ. ನೀನು ನನ್ನವನೆ.

ಯಾಕೆಂದರೆ ಆ ಇನ್ನೊಬ್ಬಳಿಗಾಗಿ ನೀನು ಸತ್ತರೂ ಅವಳು ನಿನ್ನನ್ನು ಮರೆತಿದ್ದಾಳೆ. ಆದರೆ ನಾನೋ? ಎಚ್ಚರವಾದಾಗಲೆಲ್ಲಾ ನಿನ್ನನ್ನೇ ಕುರಿತು ಯೋಚಿಸುತ್ತೇನೆ. ನಿದ್ರೆಮಾಡುವಾಗಲೂ ನಿನ್ನನ್ನೇ ಕುರಿತು ಯೋಚಿಸುತ್ತೇನೆ. ಎಳೆಯ ಗಿಡಗಳನ್ನು ನೆಡುವಾಗಲೆಲ್ಲಾ ನಿನ್ನ ಹಾಗೆ ಯಾರೂ ನೆಡುವುದಿಲ್ಲವೆಂದು ಯೋಚಿಸುತ್ತೇನೆ........ನಿನ್ನ ಹೆಸರನ್ನು ನಾನು ಎಂದಿಗಾದರೂ ಮರೆತರೆ, ನನಗೆ ಸ್ಥಳ ಸಿಗಬೇಡ........ಆದರೆ ಪ್ರೇಮವೇ, ನಿನ್ನನ್ನು ನಾನು ಎಂದಿಗೂ ಮರೆಯಲಾರೆ. ಯಾಕೆಂದರೆ ನೀನು ಒಳ್ಳೆಯವನಾಗಿದ್ದೆ. ಒಳ್ಳೆಯ ಕೆಲಸಗಳನ್ನೇ ಮಾಡಿದೆ." ಪಾತ್ರಗಳು, ಅಲ್ಪರೇ ಆದರೂ ಅವರ ಸ್ವಭಾವದ ಸತ್ವವನ್ನೂ ಸೌಂದರ್ಯವನ್ನೂ ಕಂಡುಕೊಂಡು ಅವನ್ನು ಜಗತ್ತಿನ ರಂಗದ ಮೇಲೆ ಆಡಿಸುವ ಈ ಶಕ್ತಿಯಿಂದಲೇ, ಹಾರ್ಡಿಯ ವೆಸೆಕ್ಸ್ ಕಾದಂಬರಿಗಳು ಉಳಿದ ಎಲ್ಲಾ ಕಾದಂಬರಿಗಳನ್ನು ಮೀರಿಸಿವೆ.

ಇಂಗ್ಲಿಷ್ ಕಾದಂಬರಿಕಾರರಲ್ಲಿ ಹಾರ್ಡಿ ಒಬ್ಬನದೇ ಒಂದು ಜಾತಿ. ಅವನ ಕೃತಿಯಲ್ಲಿ ಮೊದಲಿನಿಂದ ಕಡೆಯವರೆಗೆ ಒಂದು ಸಮತೆಯಿದೆ. ಹಸಿರು ಮರದ ಕೆಳಗೆ (Undcr the greenwood) ಎಂಬ ಅತ್ಯಂತ ಮನೋಹರವಾದ ಗೆಲುವಿನ ಕಥೆಯ ಕೊನೆಯಲ್ಲಿಯೂ, ಗುಟ್ಟು ಎಂಬ ಕತ್ತಲೆ ಇದ್ದೇ ಇರುತ್ತದೆ. ಇದು ಜೂಡ್‌ನಲ್ಲಿ ತುದಿಗೆ ಏರಿ ಡೈನಾಸ್ಟ್‌ನಲ್ಲಿ ದುಃಖವೇ ಪೂರ್ಣವಾಗುತ್ತದೆ. ಹಾರ್ಡಿಯ ಈ ನಾಟಕಗಳ ವಸ್ತುಗಳಾದರೂ, ಬಹಳ ಸ್ವಲ್ಪ. ಕೆಲವು ರೈತರು, ಸಾಧಾರಣವಾದ ಕೆಲವು ಅನುಭವಗಳು; ಮನುಷ್ಯನ ಇಚ್ಛಾಶಕ್ತಿ ಅವುಗಳನ್ನೆಲ್ಲಾ ಎದುರಿಸುತ್ತಿರುವ ಅದೃಷ್ಟ ಶಕ್ತಿ. "ಅದೃಷ್ಟ, ಬ್ರಹ್ಮಾಂಡದಲ್ಲಿ ತಿರುಗುತ್ತಾ ಮನುಷ್ಯರೆಂಬ ಬೆರಳುಗಳಿಂದ, ಕಾಲವನ್ನು ಲೆಕ್ಕಮಾಡುತ್ತದೆ." ಇಂತಹ ಅದೃಷ್ಟಕ್ಕೆದುರಾಗಿ ಕಾದಿ ಸೋಲುವ ಮನುಷ್ಯ, ನಮ್ಮ ಪ್ರಶಂಸೆಗೆ ಪಾತ್ರನಾಗುತ್ತಾನೆ. ಕುರುಡು ಪರಿಸ್ಥಿತಿಯ ಬಲೆಯಲ್ಲಿ ಬಿದ್ದು, ಅವರೆಲ್ಲಾ ತಾವು ತಪ್ಪಿತಸ್ಥರಲ್ಲದಿದ್ದರೂ ಕಷ್ಟವನ್ನು ಮಾತ್ರ ಅನುಭವಿಸುತ್ತಾರೆ. ಈ ಕಥಾವಸ್ತು, ವಿಧಿಯ ನಿಯಮದಂತೆ ಮೊದಲಿನಿಂದ ಕೊನೆವರೆಗೆ ಸರಸರನೆ ಹೋಗುತ್ತದೆ. ಕೊನೆಯು ಅದ್ಭುತವಾಗುತ್ತದೆ. ಅಲ್ಪವಾದ ಮನುಷ್ಯಪ್ರಾಣಿಯನ್ನು ಅದೃಷ್ಟದ ಮೂಲಕ್ಕೆ ಏರಿಸುವುದೇ ಈ ಕೊನೆ. ದುಃಖದಿಂದ ಸತ್ತರೂ, ಮನುಷ್ಯ

ಕೊನೆಗೂ ಜಯಿಸುತ್ತಾನೆಂಬು ಹಾರ್ಡಿ ನಂಬುತ್ತಾನೆ. ಆದರೆ ಎಂದೆಂದಿಗೂ ಆಶಾವಾದಿಗಳೇ ಆದವರನ್ನು ಕಂಡರೆ ಅವನಿಗೆ ತಿರಸ್ಕಾರ. ಅದು ಹೆಣದ ಮುಖದ ನಗೆಯಂತೆ.

ಆದರೆ ಅವನ ಕವಿತೆಗಳಲ್ಲಿ ಜಗತ್ಕಲ್ಯಾಣದ ಒಂದು ದೃಷ್ಟಿ ಒಡೆದು ಕಾಣುತ್ತದೆ. ಕಳೆದ ಮಹಾ ಯುದ್ಧವು ಪ್ರಾರಂಭವಾದಾಗ, ನಡೆದ ನರಮೇಧದಿಂದ ಅವನು ನೊಂದನು; ಹೀಗೆ ಹಾಡಿದನು.

" ಯುದ್ಧಕ್ಕೆ ಹೊರಡುವ ಸೈನಿಕರನ್ನು ಬೀಳ್ಕೊಡುವ ವಾದ್ಯಧ್ವನಿ, ನಿಧಾನ ವಾಗಿ ಮೆತ್ತಗಾಗುತ್ತಿದೆ. ಸಮುದ್ರದ ಎದೆಯನ್ನು ಸೀಳಿಕೊಂಡು, ಯೋಧ ರಿಂದ ತುಂಬಿದ ಹಡಗು ನೀಲಿಯ ಜಲದ ಮೇಲೆ ಹೋಗುತ್ತಿದೆ. ಹಡಗಿನ ಹೊಗೆ ಕೊಳವೆಗಳು ಒಂದೊಂದಾಗಿ ಮರೆಯಾಗುತ್ತಿವೆ. ಪ್ರತಿ ಹೃದಯ ದಲ್ಲಿಯೂ ಅಗಲಿಕೆಯ ದುಃಖ ತೀವ್ರವಾಗುತ್ತಿದೆ. ಭಾರವಾದ ಹೃದಯ ದಿಂದ ಸಾಗುತ್ತಿರುವ ಯೋಧರು ತಮ್ಮ ಆಲೋಚನೆಗಳನ್ನು ಈ ರೀತಿ ಹೇಳುತ್ತಿರುವಂತೆ ಕಾಣುತ್ತದೆ "ಜಗತ್ತನ್ನು ಆಳುತ್ತಿರುವ ರಾಕ್ಷಸರೇ, ದೇವತೆ ಗಳೇ, ದೈತ್ಯರೇ, ವಿವೇಕಹೀನವಾದ ನಿಮ್ಮ ಕ್ರೋಧ, ಜನರ ಪ್ರಾಣಗಳನ್ನು ಆಟದ ಪಗಡೆಕಾಯಿನಂತೆ ಇಟ್ಟು ಆ ಪ್ರಾಣಗಳ ಮೇಲೆ ಇನ್ನೂ ಎಷ್ಟು ದಿವಸ ವ್ಯಾಪಾರ ಮಾಡಬೇಕು? ಪ್ರತಿ ರಾಷ್ಟ್ರದಲ್ಲಿಯೂ ವಿಜೃಂಭಿಸಬೇಕಾದ ನಮ್ಮ ಕನಸಿನ ಧರ್ಮಪೂರಿತ ರಾಜಕೀಯ ಎಂದು ಉದಯವಾಗುವುದು? ಎಂದು, ದೇಶಭಕ್ತಿ ದೇವತ್ವಕ್ಕೆ ಏರಿ, ತನ್ನ ರಾಷ್ಟ್ರದ ಸಂಕೋಲೆಯನ್ನು ಕಳಚಿಕೊಂಡು, ಸಮಸ್ತ ಭೂಮಂಡಲವನ್ನೂ ಸಾಗರಗಳನ್ನೂ ತನ್ನಲ್ಲಿ ಒಳ ಗೊಳ್ಳುವುದು?

ಕೊನೆಯ ಎರಡು ಸಾಲುಗಳಲ್ಲಿ ಹಾರ್ಡಿಯು ಯುದ್ಧವೆನ್ನುವ ಪೈಶಾಚಿ ಕ ನರಮೇಧಕ್ಕೆ, ದೇವತ್ವಕ್ಕೆ ಏರಿದ ದೇಶ ಭಕ್ತಿಯೇ ಔಷದಿ ಎಂದು ಹೇಳಿದ್ದಾನೆ. ಡೈನಾಸ್ಟ್‌ನ ಕೊನೆಯಲ್ಲಿಯೂ ಹಾರ್ಡಿ ಆಶಾವಾದಿಯಾಗಿ ನಾಟಕವನ್ನು ಮುಗಿಸಿದ್ದಾನೆ.

ಹಾರ್ಡಿಯ ಶಕ್ತಿ ಇರುವುದು ನೆಲ್ಸನ್, ನೆಪೋಲಿಯನ್ ಸೀಜರ್ ಮುಂತಾದ ವೀರಾದಿ ವೀರರ ಪಾತ್ರಗಳನ್ನು ಚಿತ್ರಿಸುವುದರಲ್ಲಿ ಅಲ್ಲ. ಆದರೆ ಆ ಐತಿಹಾಸಿ ವ್ಯಕ್ತಿಗಳ ಕಾರ್ಯಗಳು ಹೇಗೆ ಸಾಮಾನ್ಯ ಮನುಷ್ಯರ, ಸಾಧಾ

ರಣ ಸಿಪಾಯಿಯ, ವ್ಯಾಪಾರಿಯ, ವ್ಯವಸಾಯಗಾರನ, ಬಾಳಿನ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ ಎಂಬುದನ್ನು ಚಿತ್ರಿಸುವುದರಲ್ಲಿ. ಯುದ್ಧವನ್ನು ಕುರಿತ ಅವನ ಕವನಗಳಲ್ಲಿಯೂ ಇದನ್ನೇ ನಾವು ನೋಡಬಹುದು. ಹಾರ್ಡಿ, ಸ್ಫೂರ್ತಿಯನ್ನು ಹೊಂದುವುದು ರಾಷ್ಟ್ರಗಳ ಆಗುಹೋಗುಗಳಿಂದಲ್ಲ. ಸಾಧಾರಣ ವ್ಯಕ್ತಿಯ ಅದೃಷ್ಟದಿಂದ; ರಾಷ್ಟ್ರಗಳನ್ನು ಕುರಿತ ತನ್ನ ಗೀತೆಯಲ್ಲಿ ಹಾರ್ಡಿ. ರಾಷ್ಟ್ರಗಳ ವಿಷಯವನ್ನು ಹೇಳುವುದೇ ಇಲ್ಲ.

"ರೈತ, ಮೌನವಾಗಿ ನೇಗಿಲಿನಿಂದ ಉಳುತ್ತಿದ್ದಾನೆ. ಮುದಿಕುದುರೆ ಮಣ್ಣಿನ ಹೆಂಟೆಗಳನ್ನು ಎಡವುತ್ತಾ ಮುಗ್ಗರಿಸುತ್ತಾ ಹೋಗುತ್ತಿದೆ. ಕುದುರೆಗೂ ತೂಕಡಿಕೆ, ಮನುಷ್ಯನಿಗೂ ತೂಕಡಿಕೆ. ಗೊಬ್ಬರಕ್ಕಾಗಿ ಹತ್ತಿಸಿರುವ ಹುಲ್ಲು ಸೊಪ್ಪು ಗುತ್ತಿಗಳಿಂದ ಉರಿಯಲ್ಲ, ಹೊಗೆಯೇಳುತ್ತಿದೆ. ರಾಜಮನೆತನಗಳು ಉರುಳಿದರೂ, ಇದು ಎಂದೆಂದಿಗೂ ನಡೆಯುತ್ತಲೇ ಇರುತ್ತದೆ. ದೂರದಲ್ಲಿ ರೈತರ ಹೆಣ್ಣು ಮಗಳು ಹೊರೆ ಹೊತ್ತುಕೊಂಡು ತನ್ನ ಪಾಡಿಗೆ ತಾನು ಪಿಸುಮಾತನಾಡುತ್ತಾ ಬರುತ್ತಿದ್ದಾಳೆ. ಯುದ್ಧಗಳ ಕಥೆಗಳನ್ನು ಜನ ಮರೆತೇ ಬಿಡುತ್ತಾರೆ. ಆದರೆ ಈ ಸಾಮಾನ್ಯರ ಕಥೆ ಎಂದೂ ಸಾಯುವುದೇ ಇಲ್ಲ."

ಹಾರ್ಡಿಯನ್ನು, ಪ್ರಕೃತಿ ನಿಯಮಕ್ಕನುಸಾರವಾಗಿ ಬರೆಯುವ ಕಾದಂಬರಿಗಾರನೆನ್ನಬಹುದು; ಆತನ ಕಾದಂಬರಿಗಳು ಒಂದು ದೃಷ್ಟಿಯಲ್ಲಿ ಪ್ರಾದೇಶಿಕ ವ್ಯಾಪ್ತಿಯುಳ್ಳವು ಮಾತ್ರ ಎಂದೂ ಹೇಳಬಹುದು. ಆದರೆ ಅವನ ನಾಟಕಗಳು ಮಾತ್ರ, ಪ್ರದೇಶ ಜನಾಂಗ ಇವುಗಳ ಎಲ್ಲೆಯನ್ನು ಮೀರಿ ಸಾರ್ವತ್ರಿಕ ವ್ಯಾಪ್ತಿಯುಳ್ಳವುಗಳಾಗಿವೆ.

ಹಾರ್ಡಿ ನಮ್ಮೆದುರಿಗೆ ತನ್ನ ಕಾಲದ ವೆಸೆಕ್ಸ್‌ನ್ನು ಚಿತ್ರಿಸಿದ್ದಾನೆ. ಜನ, ಭಾಷೆ ಉಡುಗೆ ತೊಡುಗೆ ದುಡಿಮೆ ವಿಶ್ರಾಂತಿ ಇವೆಲ್ಲ ವೆಸೆಕ್ಸ್‌ಗೆ ಸಂಬಂಧಿಸಿದುದು. ಆದರೆ ಆ ಜನತೆಯ ಅದೃಷ್ಟ ಪ್ರಾದೇಶಿಕವಾದುದಲ್ಲ. ಅವರ ದುಃಖ ಕತೆಗಳು ಜಗತ್ತಿನ ಯಾವುದೇ ಭಾಗದ ಜನತೆಯಲ್ಲಿ ವ್ಯಕ್ತವಾಗಬಹುದಾದ ಪ್ರೀತಿ ದ್ವೇಷ ದುಃಖ ಇವುಗಳ ಸುತ್ತ ನೆಯ್ದುಕೊಂಡಿವೆ. ಅವರನ್ನು ತನ್ನ ದೃಢ ಮುಷ್ಟಿಯಲ್ಲಿ ಆಳುತ್ತಿರುವ ವಿಧಿ ಡಾರ್ಸೆಟ್ ಅಥವ ಇಂಗ್ಲಿಷ್ ಜನರಲ್ಲ. ವಿಶಾಲವಾದ ಅದ್ಭುತವಾದ ಬ್ರಹ್ಮಾಂಡದಲ್ಲಿ, ಅಣು

ವಿಗಿಂತಲೂ ತೃಣವಾಗಿ ತಮ್ಮನ್ನು ಆಡಿಸುತ್ತಿರುವ ಸರ್ವಸಮರ್ಥವಾದ ಒಂದು ಬೃಹತ್ ವಿಧಿಶಕ್ತಿ.

ಹಾರ್ಡಿ, ಸಾಹಿತ್ಯ ದೃಷ್ಟಿಯಿಂದ ಅತ್ಯಂತ ಪ್ರಾಮಾಣಿಕ. ಅಂದರೆ ತನಗೆ ನ್ಯಾಯವೆಂದು ತೋರಿದುದನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾನೆ, ಎಂದು. ನೋವು ಮತ್ತು ದುಃಖಗಳನ್ನು ಹಾರ್ಡಿ, ಮುಖಕ್ಕೆ ಮುಖಕೊಟ್ಟು ನಿಸ್ಸಂಕೋಚವಾಗಿ ನಿರ್ಭಯದಿಂದ ನೋಡಿದ್ದಾನೆ. ಆದರೆ ಆತನ ಕೃತಿಗಳನ್ನು ಓದಿದರೆ, ನಮಗೆ ಶಾಶ್ವತವಾದ ಒಂದು ಸೌಂದರ್ಯಾನುಭವವುಂಟಾಗುತ್ತದೆ. ಇವರ ಕಾರಣವೇನು? ಮಾತುಗಳು ನಿಜವಾಗಿ ಸಾಹಿತ್ಯದ ಕಾರ್ಯವನ್ನು ಎಸೆಗಬೇಕಾದರೆ ಆ ಮಾತುಗಳು ಜನತೆಯ ಮನಸ್ಸನ್ನು ಪ್ರತಿಬಿಂಬಿಸಬೇಕೆಂಬುದು ಹಾರ್ಡಿಗೆ ಗೊತ್ತಿದ್ದಿತು. ಬರಿಯ ಲೇಖಕನ ಮನಸ್ಸನ್ನ ಮಾತ್ರವೇ ಅಲ್ಲ. ಕಲೆ, ಬಾಳನ್ನು ಇಂದಿನ ತಾತ್ಕಾಲಿಕ ಚಟುವಟಿಕೆಯಾಗಿಯೂ ಪ್ರದರ್ಶಿಸಬೇಕು. ಆದರೆ ಬಾಳು ಸರ್ವಕಾಲಿಕ, ಸರ್ವವ್ಯಾಪಿ, ಇದರ ಆದಿ ಅಂತ್ಯವಿಲ್ಲದ ಮೆರವಣಿಗೆಗೂ, ತಾತ್ಕಾಲಿಕ ಬಾಳಿಗೂ, ಸಾಹಿತ್ಯವು, ಸಂಬಂಧ ಸಮರಸವನ್ನೂ ಕಲ್ಪಿಸಬೇಕು. ಕಲೆಗಾರನ ಸಮಸ್ಯೆ ಇದು. ಆತ ಏಕಕಾಲದಲ್ಲಿ, ವ್ಯಕ್ತಿ ವೈಲಕ್ಷಣ್ಯವುಳ್ಳವನಾಗಿರಬೇಕು ಮತ್ತು ಉಚ್ಚಸಂಪ್ರದಾಯಗಳನ್ನೂ ಬಿಡಬಾರದು. ಆತ ತನ್ನ ಕಾಲಕ್ಕೆ ಸೇರಿದವನೂ ಆಗಿರಬೇಕು. ಆದರೆ ಯಾವ ಕಾಲಕ್ಕೂ ಸೇರಿದವನಾಗಿರಬಾರದು ಅಥವ ಎಲ್ಲ ಕಾಲಕ್ಕೂ ಸೇರಿದವನಾಗಿರಬೇಕು. ಆತ, ತಾನು ಏನನ್ನು ನೋಡುತ್ತಾನೆಯೋ ಅದಕ್ಕೆ ಪ್ರಾಮಾಣಿಕನಾಗಿರಬೇಕು. ಆದರೂ ಎಲ್ಲರಿಗೂ ಕಣ್ಣಿಗೆ ಕಾಣುವ ವಿಷಯದ ಸ್ಥೂಲರೂಪವನ್ನು ಮಾತ್ರವೇ ಅವನು ಚಿತ್ರಿಸಿದರೆ ಸಾಲದು; ಶಾಶ್ವತವಾದ ಪ್ರಾತಿನಿಧಿಕವಾದ ಅಂತರಂಗದ ಸತ್ವವನ್ನು ಅವನು ಚಿತ್ರಿಸಬೇಕು. ಅವನ ಭಾಷೆ, ಜನತೆ ಮಾತನಾಡುವ ಭಾಷೆಯೂ ಆಗಿರಬೇಕು. ಸಾವಿರಾರು ವರುಷಗಳಿಂದ ಬರೆಯುತ್ತಿರುವ ಮತ್ತು ಮಾತನಾಡುತ್ತಿರುವ ಭಾಷೆಯೂ ಆಗಬೇಕು; ಅವನು ಹೇಳುವುದನ್ನು ಸ್ಪಷ್ಟವಾಗಿ ಹೇಳಬೇಕು ಮತ್ತು ಸುಂದರವಾಗಿ ಹೇಳಬೇಕು.

ಹಾರ್ಡಿ, ಪ್ರಕೃತಿಯಲ್ಲಿ ಹೆಚ್ಚಾಗಿ ಬಡಪಾಯಿಗಳ ಕಷ್ಟವನ್ನೇ ಕಾಣುತ್ತಾನೆ. ಸಂತೋಷ, ತನಗೆ ಮುಂದೆ ಏನಾಗುತ್ತದೊ ಎಂದು

ನಡುಗುತ್ತದೆ. ಹಾರ್ಡಿ, ಅನುಭವಿಸುವ ಸಂತೋಷ ಗತಕಾಲಕ್ಕೆ ಸೇರಿದುದು. ಅದು ಬರಿಯ ನೆನಪು ಮಾತ್ರ, ಅಥವ ಅದು ನೋವು ಸಹ ಆಗಬಹುದು. ರಹಸ್ಯವಾಗಿ ಒಬ್ಬ ಪುರುಷನನ್ನು ಪ್ರೀತಿಸಿದ ಹೆಣ್ಣು, ಆತನ ಶವದಹಿಂದೆ ಹೋಗುತ್ತಿದ್ದಾಳೆ. "ಅವರು ಅವನನ್ನು ಸ್ಮಶಾನಕ್ಕೆ ಎತ್ತಿಕೊಂಡು ಹೊರಟರು. ಮೆರವಣಿಗೆನಿಧಾನವಾಗಿ ಹೋಗುತ್ತಿದೆ. ನಾನು ಅಪರಿಚಿತಳಂತೆ ದೂರದಲ್ಲಿ ಅನುಸರಿಸುತ್ತಿದ್ದೇನೆ. ಅವರೆಲ್ಲ ಅವನ ಬಂಧುಗಳು. ನಾನು ಅವನ ಪ್ರೇಯಸಿ. ನನ್ನ ವಸ್ತ್ರಗಳನ್ನು ನಾನು ಬದಲಾಯಿಸಿಲ್ಲ, ಅವರೆಲ್ಲ ದುಃಖ ಸೂಚಕವಸ್ತ್ರ ಗಳನ್ನು ಧರಿಸಿದ್ದಾರೆ. ಆದರೆ ಅವರ ಕಣ್ಣುಗಳಲ್ಲಿ ಸ್ವಲ್ಪವೂ ದುಃಖವಿಲ್ಲ. ನನ್ನ ದುಃಖ, ನನ್ನನ್ನು ಬೆಂಕಿಯಂತೆ ಆಹುತಿಗೊಳ್ಳುತ್ತಿದೆ"

ಲಿಸ್ಬಿ ಬ್ರೌನ್ ಕವನದಲ್ಲಿಯೂ ಹೀಗೆಯೇ. ತಾನು ಪ್ರೀತಿಸಿದ ಹೆಣ್ಣು ಪ್ರಿಯನಿಗೆ ಸಿಕ್ಕುವುದಿಲ್ಲ ಆತ ಹೀಗೆ ಏಕಾಂತದಲ್ಲಿ ಕೊರಗುತ್ತಾನೆ.

"ಲಿಸ್ಬಿ ಬ್ರೌನ್, ನೀನು ನನ್ನಿಂದ ತಪ್ಪಿಸಿಕೊಳ್ಳಲು ನಾನೇ ಅವ ಕಾಶ ಕೊಟ್ಟೆ. ಬೇಡವೆಂದು ಸಂಜ್ಞೆಕೂಡ ಮಾಡಲಿಲ್ಲ. ನಿನ್ನ ತುಟಿಯನ್ನು ಒಂದು ಸಲವೂ ನನ್ನ ತುಟಿಯಿಂದ ಮುಟ್ಟಲಿಲ್ಲ. ಹೀಗೆ ನಿನ್ನನ್ನು ಕಳೆದು ಕೊಂಡೆ. ಮುಂದೆ ಯಾವಾಗಲಾದರೂ ಜನ ನಿನ್ನೆದುರಿಗೆ ನನ್ನ ವಿಚಾರ ಮಾತನಾಡಿದರೆ "ಆತ ಯಾರು?" ಎಂದು ನೀನು ಕೇಳುವೆ. ಹೌದು ಲಿಸ್ಬಿ ಬ್ರೌನ್."

ಕೆಲವರಿಗೆ ಬಾಳು ಬರಿ ಸುಖವಾಗಿಯೇ ತೋರಬಹುದು. ಆದರೆ ಹಾರ್ಡಿಗೆ ಬಾಳು ಬೇರೊಂದು ಬಟ್ಟಲನ್ನು ಕೊಟ್ಟಿತು. ಆದರೆ ಆತ ನಿರುತ್ಸಾಹಿಯಾಗಲಿಲ್ಲ. ಆ ಬಟ್ಟಲಿನಿಂದಲೇ ಮತ್ತೊಂದು ಬಗೆಯ ಸುಖ ವನ್ನು ಸೃಷ್ಟಿಸಿಕೊಂಡನು.

"ಸೌಂದರ್ಯದೃಷ್ಟಿಯೇ ಗುರಿಯಾಗಿ ಉಳ್ಳ ಜಗತ್ಸೃಷ್ಟಿಯು ಮನಸ್ಸಿಗೆ. ನನ್ನ ಆನಂದಕ್ಕಿಂತ ಬೇರೆ ಗುರಿ ಇರಬಹುದು. ಅಂದ ಮಾತ್ರಕ್ಕೆ ನಾನು ಈ ಭೂಮಿಯಲ್ಲಿ ಕಡಿಮೆ ಸುಖವನ್ನು ಅನುಭವಿಸುವುದಿಲ್ಲ. ಆ ಸುಖ ಸೌಂದರ್ಯದ ಸ್ವರ್ಗದಲ್ಲಿ ನನಗೆ ಸ್ಥಳವಿಲ್ಲದಿದ್ದರೂ, ನಾನು ಆನಂದದಿಂದ ಅದರ ಕಡೆಗೆ ನನ್ನ ಕಣ್ಣನ್ನು ತಿರುಗಿಸುತ್ತೇನೆ."

ನಮ್ಮ ಹಿಂದೂ ಸಂಸಾರಗಳಿಗೆ, ರಿಟರ್ನ್ ಆಫ್ ದಿ ನೇಟಿವ್ ಎಂಬ ಕಾದಂಬರಿ ಸ್ವಲ್ಪ ಹೆಚ್ಚು ಕಡಿಮೆ ಸರಿ ಹೋಗುತ್ತದೆ. ಮಗನ ಮೇಲಿನ ಅಧಿಕಾರಕ್ಕ ತಾಯಿಯೂ, ಗಂಡನ ಮೇಲಿನ ಅಧಿಕಾರಕ್ಕೆ ಹೆಂಡತಿಯೂ ಕಾದಾಡುವುದು ಇಲ್ಲಿ ಕಾಣುತ್ತದೆ. ಅತ್ತೆ ಸೊಸೆಯರ ಸಮಸ್ಯೆಯನ್ನು ಹಾರ್ಡಿ ಈ ಕಾದಂಬರಿಯಲ್ಲಿ ಬಹಳ ಚೆನ್ನಾಗಿ ವಿವರಿಸಿದ್ದಾನೆ. ಈ ಕಾರಣದಿಂದಲೆ ಇರಬಹುದು. ಆ ಕಾದಂಬರಿ ನಮ್ಮ ಮನಸ್ಸನ್ನು ಚೆನ್ನಾಗಿ ಹಿಡಿಯುತ್ತದೆ.

ಹಾರ್ಡಿಯನ್ನು ನೋಡಿದರೆ ಅವನು ನಿರಾಶಾವಾದಿಯಾಗಿ ಕಾಣು ತ್ತಿರಲಿಲ್ಲ. ಸಾಯುವವರೆಗೆ ಅವನು ಒಳ್ಳೆಯ ಗಟ್ಟಿಮುಟ್ಟಾದ ಆಳಾಗಿ ನಿಕ್ಕರ್‌ಗಳನ್ನು ಧರಿಸಿಕೊಂಡು ಬೈಸಿಕಲ್‌ಗಳ ಮೇಲೆ ಓಡಾಡುತ್ತಿದ್ದನು. ಅವನನ್ನು ನೋಡಿದವರಿಗೆ ಕಾದಂಬರಿಗಳ ಗಾರುಡಿಗ ಇವನೇ ಎಂದು ಗೊತ್ತಾಗುತ್ತಿರಲಿಲ್ಲ. ವೆಸೆಕ್ಸ್‌ನ ಗಿಡ, ಗಾಳಿ, ಗುಡ್ಡ, ಸಣ್ಣಕಾಡು, ನದಿ ಅಂತರಿಕ್ಷದ ಸಹಸ್ರಾರು ನಕ್ಷತ್ರಗಳು ಪ್ರತಿಯೊಂದು ಹೆಜ್ಜೆಯ ನೆಲದಲ್ಲೂ ಅವನು ನಮ್ಮನ್ನು ಎದುರುಗೊಳ್ಳುತ್ತಾನೆ. ಸದ್ದು ಮಾಡದೆ ನಮ್ಮ ಜತೆ ಯಲ್ಲಿ ತಿರುಗುತ್ತಾನೆ. ಅಲ್ಲಿಯ ಸಮಸ್ತ ಪದಾರ್ಥಗಳೂ ಅವನ ಧ್ವನಿಯಲ್ಲಿ ಮಾತನಾಡುವಂತೆ ತೋರುತ್ತವೆ. ವೆಸೆಕ್ಸ್‌ನ ಎಲ್ಲಾ ಚರಾಚರ ವಸ್ತು ಗಳಿಗೂ ಹಾರ್ಡಿ ಗೊತ್ತು. ಆ ಜಗತ್ತು ಅವನ ಕನಸುಗಳ ವಿದ್ಯುತ್ ಶಾವಿನಿಂದ ಚೈತನ್ಯವನ್ನು ಪಡೆದಿದೆ.

ಕೊನೆಯಲ್ಲಿ ಹಾರ್ಡಿ ತನ್ನ ಕವನದಲ್ಲಿ ಹೇಳಿದ ಅವನ ಮಾತೇ ಅವನ ಚರಮಶ್ಲೋಕವಾಗಬಹುದು.

"ನಾನು ಬಾಳಿಗೆ ಎಂದೂ ಲಕ್ಷ್ಯಮಾಡಲಿಲ್ಲ. ಬಾಳು ನನ್ನನ್ನು ಲಕ್ಷಿಸಿತು. ಆದುದರಿಂದ ನಾನು ನಿಷ್ಠನಾಗಬೇಕಾಯಿತು. ಈಗ ಬಾಳು "ಸಾಕು ನಿಲ್ಲಿಸು ನೀನು ತಕ್ಕಷ್ಟು ದುಡಿದೆ. ಕಷ್ಟಪಟ್ಟೆ, ದುಃಖಪಟ್ಟೆ. ಮನಸ್ಸಿಲ್ಲದಿದ್ದರೂ ಮಾಡ ಬೇಕಾದುದನ್ನೆಲ್ಲ ಮಾಡಿದೆ. ಈಗ ನಿನ್ನನ್ನು ವಜಾಮಾಡುತ್ತೇನೆ. ನೀನು ನನ್ನಿಂದ ಸಾಧ್ಯವಿಲ್ಲದ ಪ್ರತಿಫಲವೇನನ್ನೂ ಕೇಳಲಿಲ್ಲ. ನಿನ್ನಿಂದ ಏನನ್ನು ಹೊಂದಲು ಸಾಧ್ಯವಿರಲಿಲ್ಲವೋ ಅದನ್ನು ನೀನು ನನ್ನಲ್ಲಿ (ಬಾಳಿನಲ್ಲಿ) ಹುಡುಕಲಿಲ್ಲ ಎನ್ನುತ್ತದೆ. ನನಗೆ ಅದೂ ಒಪ್ಪಿಗೆ".

——

ಸರ್ವಾಂತರ್ಯಾಮಿ

—★—

ಒಂದು ಪರಾತ್ಪರ ಪರಮವಸ್ತುವೇ ಸಮಸ್ತಕ್ಕೂ ಆಧಾರ, ಎಂಬುದನ್ನು ಭಾರತದ ಎಲ್ಲ ವೇದಾಂತಗಳೂ ಒಪ್ಪುತ್ತವೆ. ಹೀಗಿರುವಲ್ಲಿ ಶೈವ ವೈಷ್ಣವ ಪ್ರಬಂಧಗಳಲ್ಲಿ ಶಿವನನ್ನು ಕಡಿಮೆ ಮಾಡಿಯೂ, ವಿಷ್ಣುವನ್ನು ಹೆಚ್ಚಿಸಿಯೂ. ಅಥವ ವಿಷ್ಣುವನ್ನು ಕಡಿಮೆಮಾಡಿ ಶಿವನನ್ನು ಹೆಚ್ಚಿಸಿಯೂ ಇರುವುದನ್ನು ಕಂಡು, ಇಬ್ಬರಲ್ಲಿಯೂ ಸಮರಸ ಭಾವನೆಯುಳ್ಳ ಅನೇಕರಿಗೆ ಆಶ್ಚರ್ಯವೂ ಜಿಗುಪ್ಸೆಯೂ ಉಂಟಾಗುವುದು. ಆಳ್ವಾರ್, ನಾಯನ್‌ಮಾರುಗಳ ಎಲ್ಲೆ ಮೀರಿದ ಭಕ್ತಿಗೂ ಅಪಾರಜ್ಞಾನಕ್ಕೂ ಶಿವ ವಿಷ್ಣು ಮೇಲು ಕೀಳೆಂಬ ಮಾತುಗಳು ಬಹಳ ಅಸಹನೆಯ ಮಾತುಗಳಾಗಿ ತೋರಬಹುದು. ದೇವರಲ್ಲಿಯೂ ಸಮಯ ಸಂಪ್ರದಾಯದಲ್ಲಿಯೂ ಅಶ್ರದ್ಧೆ ಸಂದೇಹವುಳ್ಳ ನಾವು, ಆಳ್ವಾರ್ ನಾಯನ್‌ಮಾರುಗಳ ಆಶಯಗಳನ್ನೂ ಮನೋನಿಲೆಯನ್ನೂ ಉಚ್ಚಧ್ಯೇಯಗಳನ್ನೂ ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಠಿಣ.

ಶಿವನಿಗಿಂತ ಮೇಲು ವಿಷ್ಣು ಅಥವ ವಿಷ್ಣುವಿಗೆ ಯಜಮಾನ ಶಿವ, ಎಂಬುದಾಗಿ ಭಕ್ತರು ಹೇಳುವುದನ್ನು ಸ್ವಲ್ಪ ಪರಿಶೋಧಿಸಿ ನೋಡಬೇಕಾಗಿದೆ. ‘‘ ದೇವ ದೇವನ್ ಮೆಯ್ ಶೇವಕನ್, ತೆನ್ ಪೆರುಂದುರೆನಾಯಕನ್, ಮೂವರಾಲುಂ ಅರಿವೊಣಾಮುದಲಾಯ ಆನಂದಮೂರ್ತಿಯಾನ ಮಾಲ್ ಅಯನ್, ವಾನವರ್ ಕೋನುಂ ವಂದು ವಣಂಗ ಅವರ್ಕ್ಕರುಳ್ ಶೈದ ಈಶನ್ ” [ವಿಷ್ಣು ಬ್ರಹ್ಮ ಇಂದ್ರ ಎಲ್ಲರೂ ಬಂದು ನಮಸ್ಕರಿಸಲು ಅವರಿಗೆ ಕೃಪೆತೋರಿದ ದೇವ ದೇವ ಸತ್ಯಮೂರ್ತಿ ಪರಮೇಶ್ವರ] ಎಂಬುದಾಗಿ ಮಾಣಿಕವಾಚಕರ್ ಶಿವನನ್ನು ಸ್ತುತಿಸಿದ್ದಾರೆ.

‘‘ ಇನಿ ಯರಿಂದೇನ್ ಈಶರ್ಕ್ಕಂ ನಾಲ್ಮುಗರ್ಕ್ಕಂ ದೈವಂ, ಇನಿ ಅರಿಂದೇನ್ ಎಂ ಪೆರುಮಾನ್ ಉನ್ನೈ, ಇನಿ ಅರಿಂದೇನ್ ಕಾರಣನ್ ನೀ ಕಟ್ರವೈನೀ, ಕಲ್ಪವೈನೀ, ನಕ್ಕಿರಿಶೈನಾರಣನ್ ನೀ ನಳ್ಕರಿಂದೇನ್ ನಾನ್ ”

[ಇನ್ನು ತಿಳಿದೆ. ಈಶ್ವರನಿಗೂ ಬ್ರಹ್ಮನಿಗೂ ಒಡೆಯ ನೀನೆಂದು; ಇನ್ನು

ಅರಿತೆ ನನ್ನ ದೇವರೇ ನಿನ್ನ; ನೀನೆ ಕಾರಣ, ನೀನೆ ವಿದ್ಯೆಗಳು, ನೀನೆ ಕಲ್ಪವೃಕ್ಷ, ನೀನೆ ಇನಿಗಾನ]

ಎಂದು ವಿಷ್ಣುವನ್ನು ಕುರಿತು ಒಂದೆಡೆ ತಿರುಮಳಿಶೈ ಆಳ್ವಾರ್ ಹೇಳುತ್ತಾರೆ. ಶಿವನೆಂಬುದು ಸುಳ್ಳು ಅಥವ ವಿಷ್ಣು ಎಂಬುದು ಸುಳ್ಳುಕತೆ ಎಂದು ಶಿವಭಕ್ತನಾಗಲೀ ವಿಷ್ಣುಭಕ್ತನಾಗಲೀ ಹೇಳುವುದು ಸಾಧ್ಯವಿಲ್ಲ. ಹೇಳಿದರೆ ಅನರ್ಥವಾಗುತ್ತದೆ. ಕ್ರಿಸ್ತರಾಗಲೀ ಮುಸಲ್ಮಾನರಾಗಲೀ ಹಾಗೆ ಹೇಳಬಹುದು. ಆದರೆ ವೈದಿಕ ಸಂಪ್ರದಾಯಗಳಿಗೆ ಸೇರಿದವರಾರೂ ಹೀಗೆ ತಮ್ಮ ಭಕ್ತರ ಎದುರಿಗೆಯೇ ಹೇಳಿ ಸಹ ಮೂಲಸಿದ್ಧಾಂತಗಳನ್ನು ಕೆಣಕಿ ಜಯಹೊಂದುವುದು ಸಾಧ್ಯವಿಲ್ಲ.

"ಸರಿ, ಹಾಗೆ ಬೇಡ, ಶಿವ ವಿಷ್ಣು ಎರಡೂ ಒಂದೇ" ಎಂದುಕೊಂಡು ಹೋಗಬಹುದಲ್ಲ ಎಂದು ಕೇಳಬಹುದು. ಒಬ್ಬರಿಗಿಂತ ಮತ್ತೊಬ್ಬರು ಮೇಲು ಅಥವ ಕೀಳು ಎಂಬ ದ್ವೇಷದ ಮಾತುಗಳನ್ನು ಯಾಕೆ ಆಡಬೇಕು? ಎಂದು ಕೇಳಬಹುದು.

ಒಬ್ಬರಿಗೆ ಮೇಲೆ ಇನ್ನೊಬ್ಬರು ಎಂದು ಹೇಳದೇ ಎರಡೂ ಸಮ ಎಂದು ಹೇಳಿದರೆ, ಜಗತ್ತಿಗೆ ಒಬ್ಬನೇ ಈಶ್ವರ ಎಂಬ ತತ್ವ ಮಾಯವಾಗಿ ಎರಡು ಅಥವಾ ಮೂರು ಸಮಾನ ಈಶ್ವರರಾಗುವುದಿಲ್ಲವೆ ? ಹಾಗೆ ಹೇಳುವುದು ಶುದ್ಧ ತಪ್ಪು. ಆದುದರಿಂದ ಒಂದೇ ಈಶ, ಒಂದೇ ಜಗತ್ಕಾರಣ ಎಂದುಕೊಂಡ ಯಾವ ಸಂಪ್ರದಾಯದಲ್ಲಿಯೂ ಪ್ರಧಾನ ದೈವವನ್ನು ಪರಮಾತ್ಮ ಎಂದು ಕೊಳ್ಳುವುದು ಅನಿವಾರ್ಯ. ವೈದಿಕ ಸಂಪ್ರದಾಯಗಳಲ್ಲಿ ಬೇರೆ ದಾರಿ ಇಲ್ಲ.

ಹಾಗಿಲ್ಲದಿದ್ದ ಪಕ್ಷದಲ್ಲಿ ಪರಮ ಸಾಧುಗಳೂ ಮಹಾಜ್ಞಾನಿಗಳೂ ಆದ ನಾಯನ್‌ಮಾರ್‌ಗಳೂ, ಆಳ್ವಾರ್‌ಗಳೂ ಹಾಗೆ ಹಾಡುತ್ತಲೇ ಇರಲಿಲ್ಲ. ನಾವೂ ಪೂರ್ಣ ಭಕ್ತರಾದರೆ ಮಾತ್ರ, ಭಕ್ತಿಯ ಸ್ವಭಾವದಿಂದಲೇ ಉಂಟಾದ ಈ ಭಾವನೆಯನ್ನು ಅರಿಯಲು ಸಾಧ್ಯವಾಗುವುದು. ನಿರಾಕಾರವಾದ ಶುದ್ಧ ಬ್ರಹ್ಮವನ್ನು ಧ್ಯಾನಿಸಿ ಬಿಡಬಹುದಲ್ಲ ಎಂದು ಹೇಳಬಹುದು. ಹೇಳುವುದು ಬೇರೆ, ಮಾಡಿ ಮುಗಿಸುವುದು ಬೇರೆ. ಋಷಿಗಳಿಗೆ ಸಹ, ಯಾವುದಾದರೂ

ಒಂದು ಮೂರ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಾಸಿಸಿದರೆ ಮಾತ್ರ ಸಾಧ್ಯವೆಂಬುದು ಹಿರಿಯರು ಅನುಭವದಿಂದ ಕಂಡ ಸತ್ಯ. ಯಾವ ಆಕೃತಿಯಲ್ಲಿ ಭಕ್ತ ಉಪಾಸಿಸುವ ಪ್ರಯತ್ನ ಮಾಡುತ್ತಾನೋ, ಆ ಆಕೃತಿಯನ್ನೇ ಈಶ್ವರನೆಂದು ಭಾವಿಸಿ ಮನಸ್ಸನ್ನು ಅದರಲ್ಲಿ ಪೂರ್ಣವಾಗಿ ಲಯಿಸಬೇಕು. ಸಮಸ್ತವನ್ನೂ ಆ ಮೂರ್ತಿಗೆ ಅಡಿಯಾಳಾಗಿ ಮಾಡಬೇಕು. ಎಂತಹ ಉನ್ನತ ಪವಿತ್ರ ವಸ್ತುಗಳನ್ನೂ ಅದಕ್ಕೆ ಅಧೀನಪಡಿಸಿ ಧ್ಯಾನಿಸಬೇಕು. ಇದನ್ನು ಅರಿತರೆ ಆಳ್ವಾರ್ ನಾಯನ್ಮಾರ್‌ಗಳು ಹಾಡಿದ ಶೈವ ವೈಷ್ಣವ ತಿರುಳು ಅರ್ಥವಾಗುವುದು.

ನಮ್ಮ ಭಕ್ತಿಯೂ ಜ್ಞಾನವೂ ವೈರಾಗ್ಯವೂ ಅನೇಕ ವೇಳೆ ವಾಚಾ ಕೈಂಕರ್ಯಗಳೇ. ವಾಚಾ ಕೈಂಕರ್ಯಕ್ಕೆ ತಡೆಯೂ ಇಲ್ಲ. ಬಾಯಲ್ಲಿ ಬೇಕಾದ್ದು ಮಾಡಬಹುದು. ರಾಜಕೀಯದಲ್ಲಿ ಸರ್ವಕಕ್ಷಿ (All Party) ಪಕ್ಷದಂತೆ ಧಾರಾಳ ಮನಸ್ಸಿನಿಂದ "ಎಲ್ಲ ಸಮ; ಎಲ್ಲ ದೈವವೂ ಒಂದೇ" ಎಂದು ಶೈವ ವೈಷ್ಣವ ಸಮತೆಯನ್ನು ಒಪ್ಪಬಹುದು. ಆದರೆ ಮನಸ್ಸನ್ನು ಪೂರ್ಣವಾಗಿ ಆವರಿಸಿಕೊಂಡ ಭಕ್ತಿಪ್ರವಾಹದ ಅಲೆ ಅಲೆಗಳನ್ನು ಎಬ್ಬಿಸುವ ಪರಾಭಕ್ತಿಯ ಉಪಾಸನೆಯಲ್ಲಿ ಇದು ಸಾಧ್ಯವಿಲ್ಲ.

> ತಿರುವೆಂಗಡತ್ತಿಲುಳ್ಳ ತಿರುಮಾಲಿನ್ ಮೂರ್ತ್ತಿಯೇ ಎನ್‌ದೈವಂ, ಎನಕ್ಕು ಪಾಲ್ಕಡಲಿಲ್ ಪಳ್ಳಿಕೊಂಡಿರುಕ್ಕುಂ ತಿರುಮಾಲುಂ ವೇಂಡಾಂ, ವೈಕುಂತ ತ್ತಿಲುಳ್ಳ ಪೆರುಮಾಳಂ ವೇಂಡಾಂ, ವೇರು ಎಂದ ದಿವ್ಯ ದೇಶಮುಂ ವೇಂಡಾಂ

[ತಿರುಪತಿಯಲ್ಲಿ ಇರುವ ದೇವರ ಮೂರ್ತಿಯೇ ನನ್ನದೈವ; ನನಗೆ ಕ್ಷೀರ ಸಮುದ್ರದಲ್ಲಿ ಮಲಗಿರುವ ದೇವನೂ ಬೇಡ, ವೈಕುಂಠದಲ್ಲಿ ಇರುವ ದೇವನೂ ಬೇಡ, ಮತ್ತಾವ ದಿವ್ಯಕ್ಷೇತ್ರದಲ್ಲಿರುವ ದೇವನೂ ಬೇಡ ಎಂದು ಆಳ್ವಾರ್‌ಗಳು ಹಾಡಿರುವುದನ್ನು ಕೇಳುತ್ತೇವೆ.

ಹಾಗಾದರೆ ತಿರುಪತಿಯಲ್ಲಿ ದಯಮಾಡಿಸಿರುವ ಅರ್ಚಾವತಾರ ವಿಲಾಸವೇ ಪರಮವಸ್ತುವೆಂದು ಅವರು ಹಠ ಹಿಡಿದರೆಂದು ಭಾವಿಸೋಣವೆ? ಜಗತ್ತಿನಲ್ಲಿ ಒಬ್ಬನೇ ಈಶ, ಒಂದೇ ಪರವಸ್ತು. ಊಹನೆಗೂ ಜ್ಞಾನಕ್ಕೂ ಮೀರಿದ ಆ ಪರವಸ್ತುವನ್ನು ಧ್ಯಾನಿಸಬೇಕಾದರೆ ಏಕಾಗ್ರತೆ ಬೇಕು. ಬುದ್ಧಿ

ಚಾತುರ್ಯದಿಂದ ನಿಮಿಷಕ್ಕೆ ಒಂದು ಮೂರ್ತಿಯಾಗಿ ಬದಲಾಯಿಸಿಕೊಂಡು ಧ್ಯಾನಿಸಿದರೆ ಸಾಧ್ಯವೇ? ಅಂತಹ ಧ್ಯಾನ ಬರಿಯ ವೇಷವಾಗಿ ಫಲರಹಿತ ವಾಗಿ ಕಾರ್ಯ ವ್ಯರ್ಥವಾಗುವುದು.

ಮನಸ್ಸಿನಲ್ಲಿ ಹೀಗೆ ಒಂದು ಆಕೃತಿಯನ್ನು ನಿರ್ಮಿಸಿ ನಿಲ್ಲಿಸಿಕೊಳ್ಳಲು ಹಲವು ಸಾಧನಗಳಿವೆ. ಪುರಾಣ, ಕತೆ, ಸ್ತೋತ್ರ, ಮೂರ್ತಿ ಇವು ಅದಕ್ಕೆ ಸಾಧನಗಳು. ಭಾರತದಲ್ಲಿ ಒಂದೇ ವೇದಾಂತದಲ್ಲಿ ನಂಬಿಕೆಯುಳ್ಳ ಅನೇಕ ಸಮಯ ಸಂಪ್ರದಾಯಗಳು ನಮ್ಮಲ್ಲಿ ಬಹುಕಾಲದಿಂದ ಹರಡಿಕೊಂಡು ಬಂದಿರುವುದರಿಂದ, ಉಪಾಸಕರ ಏಕಾಗ್ರಧ್ಯಾನಕ್ಕೆ ತಡೆಯಾಗದಂತೆ ಭೇದ ಗಳನ್ನು ಕಡಿಮೆಮಾಡುವ ದಾರಿಯನ್ನು ಭಕ್ತರು ಹುಡುಕುತ್ತ ಅನುಸರಿಸುತ್ತ ಇದ್ದಾರೆ. ನನ್ನ ದೇವರೇ ದೊಡ್ಡವನು ಎಂಬುದೇ ಈ ಉಪಾಸನೆಯ ಮಾರ್ಗ. ಪರಮವಸ್ತು ಒಂದೇ ಎಂದು ಒಪ್ಪುವ ಯಾವ ಭಕ್ತನಿಗೂ ಈ ಮಾತಿನಿಂದ ದ್ವೇಷವಾಗಲೀ ಇತರರಮೇಲೆ ಜಿಗುಪ್ಸೆ ತಿರಸ್ಕಾರವಾಗಲೀ ಉಂಟಾಗಲು ಕಾರಣವಿಲ್ಲ.

ಎನ್ರು ಕಡಲ್ ಕಡೈಂದ ತೆವ್ವುಲಗಂ ನೀರೇಟ್ರುದು
ಒನ್ರುಂ ಅದನೈಯುಣರೇನ್ ನಾನ್ – ಅನ್ರು
ತಡೈತ್ತಡೈತ್ತು ಕಣೆಪಡುತ್ತವಾಳ್, ಇದು ನೀ
ಪಡೈತ್ತಿಡಂದುಂಡು ಮಿಳಂದಯಾರ್

[ಪುರಾಣದ ಕತೆಗಳು ಒಂದೂ ನನಗೆ ತಿಳಿಯದು. ಆದರೆ ಅದರಿಂದ ಕುಂದೇನು? ನನ್ನ ಅಲ್ಪಜ್ಞಾನವನ್ನೇ ನಂಬಿ ಬುದ್ಧಿಯನ್ನು ಮದಡು ಮಾಡಿಕೊಂಡು ಕಾರ್ಯವನ್ನು ಶೋಧಿಸಿ ಮಥನಮಾಡಿ ಸಂಶಯಗಳಿಗೊಳ ಗಾಗಿ ನಾನು ತಿಳಿಯಬೇಕಾದುದೇನಿದೇ? ನೀನು ಈ ಜಗತ್ತುಗಳ ಅಂತರ್ಯಾಮಿ ಎಂಬುದೊಂದೇ ನನಗೆ ಸಾಕು ಎನ್ನುತ್ತಾರೆ ಪೊಯ್ ಕೈ ಆಳ್ವಾರ್]

ಅರನ್ ನಾರಣ ನಾಮಮ್ ಆನ್ ವಿಡೈ ಪುಳ್ ಊರ್ತಿ
ಉರೈ ನೂಲ್ ಮರೈ ಉರೈಯುಂ ಕೋಯಿಲ್ ವರೈನೀರ್
ಕರಮ ಮಳಿಪ್ಪಳಿಪ್ಪ ಕೈದು ವೇಲ್ ನೇಮಿ
ಉರುವ ಮೆನಿ ಕಾರ್ಮೇನಿ ಒನ್ರು.

[ಅರನ್ (ಈಶ್ವರ) ನಾರಣನ್ ಎಂದು ನಾಮಗಳು ಎರಡು. ವೃಷಭ. ಗರುಡ ಎಂಬುದಾಗಿ ವಾಹನಗಳು ಎರಡು. ಒಬ್ಬರ ಮಹಾತ್ಮೆಯನ್ನು ವಿವರಿಸುವುದು ಆಗಮ (ನೂಲ್)ಮತ್ತೊಬ್ಬರ ಮಹಾತ್ಮೆ ವಿವರಿಸುವುದು ವೇದ(ಮರೈ). ವಾಸಸ್ಥಳ ಒಬ್ಬರಿಗೆ ಕೈಲಾಸ (ವರೈ). ಮತ್ತೊಬ್ಬರಿಗೆ ಕ್ಷೀರಸಮುದ್ರ (ನೀರ್). ಕರ್ತವ್ಯಗಳು ಒಬ್ಬರಿಗೆ ನಾಶ; ಮತ್ತೊಬ್ಬರಿಗೆ ರಕ್ಷಣೆ. ಆಯುಧಗಳು ವೇಲ್ ಮತ್ತು ಚಕ್ರ (ನೇಮಿ). ಮೂರ್ತಿಗಳ ವರ್ಣ ಒಂದು ಉರಿವ ಬೆಂಕಿ, ಮತ್ತೊಂದು ಮೇಘ ಶ್ಯಾಮ. ಆದರೆ ದೇಹ ಇಬ್ಬರಿಗೂ ಒಂದೇ. ವಾಸಸ್ಥಳ ಕಾರ್ಯ ಆಯುಧ ವರ್ಣ ಹೆಸರು ಇವೆಲ್ಲಾ ಬೇರೆ ಬೇರೆಯಾದರೂ ಒಂದೇ ಪರವಸ್ತು ಈ ಎರಡು ಆಕೃತಿಗಳಾಗಿ ನಿಂತಿದೆ. ಒಂದು ಶರೀರಿ ಮತ್ತೊಂದು ಶರೀರ. ಒಂದು ದೇಹ ಮತ್ತೊಂದು ಪ್ರಾಣ.]

ಅವರವರ್ ತಾಂತಾಂ ಅರಿಂದವಾರೇತ್ತಿ
ಇವರಿವರ್ ಎಂ ಪೆರುಮಾನ್ ಎನ್ರು ಶುವರ್ ಮಿಶೈ
ಚಾರ್ತಿಯುಂ ವೈತ್ತುಂ ತೊಳುವರ್, ಉಲಕಳಂದ
ಮೂರ್ತಿಯುರುವೇ ಮುದಲ್

[ತಾವು ತಾವು ಅರಿತಂತೆ ಭಕ್ತರು ಪೂಜಿಸುವರು; ಅನೇಕ ಮೂರ್ತಿ ಆಕೃತಿಗಳನ್ನು ಬರೆದು ಶಿಲ್ಪಕೃತಿ ಮಾಡಿಯೂ ಹೊಗಳುವರು. ಆದರೆ ಎಲ್ಲ ಮಾರ್ಗ ಹಾಡುಗಳೂ ಹೋಗಿ ಸೇರುವುದು ಒಬ್ಬನನ್ನೇ.]

ನರಕ ಮರುಳ್ ಪುರಿಂದು ನಾನ್ಮುಗರ್ಕ್ಕು ಪೂ ಮೇಲ್
ಪಗರ ಮರೈ ಪಯಂದ ಪಣ್– ಪನ್ ಪೆಯರಿನೆಯೆ
ಪುಂದಿಯಾಲ್ ಚಿಂದಿಯಾ ತೋತಿಯುರು ವೆಣ್ಣುಂ
ಅಂದಿ ಯಾ ಲಾಂ ಪಯ ನಂ ಕೇನ್

[ಸರ್ವೇಶ್ವರನನ್ನು ಹೃದಯದಿಂದ ಧ್ಯಾನಿಸದೆ ಸುಮ್ಮನೆ ನಾಮಗಳನ್ನು ಹೇಳಿ ಜಪಮಾಲೆಯ ಹಗ್ಗಗಳನ್ನು ಎಣಿಸುವುದರಲ್ಲಿಯೂ ಸಂಧ್ಯಾವಂದನೆ ಮೊದಲಾದ ಕಾರ್ಯಗಳನ್ನು ಮಾಡುವುದರಿಂದ ಏನು ಪ್ರಯೋಜನ ?]

ತಮರು ಕಂಡ ತೆವ್ವುರವ ಮುವ್ವುರುವಂ ತಾನೇ
ತಮರು ಕಂಡ ತೆಪ್ಪೇರ್ ಮತ್ತಪ್ಪೇರ್ – ತಮರು ಕಂಡ
ಎವ್ವಣ್ಣಂ ಚಿಂದಿತಿ ನ್ಮೈಯಾ ತಿರುಪ್ಪರೇ
ಅವ್ವಣ್ಣ ಮಾಳಿಯಾ ನಾಂ

[ಅವರವರಿಗೆ ಪ್ರಿಯವಾದ ಆಕೃತಿಯನ್ನೂ ಹೆಸರನ್ನೂ ಬಣ್ಣವನ್ನೂ ಇಟ್ಟುಕೊಳ್ಳಲಿ. ಭಗವಂತ ಅವರವರು ನೆನೆದಂತೆಯೇ ತನ್ನನ್ನು ಮಾಡಿಕೊಂಡು ಕೃಪೆ ಮಾಡುತ್ತಾನೆ, ಎನ್ನುತ್ತಾರೆ ಆಳ್ವಾರ್.]

“ಭಕ್ತರ್‌ಗಳ್ ಏದೇನುಂ ಓರ್ ಅಚೇತನವಸ್ತುವೈ ವೈತ್ತುಕೊಂಡು ಇದೈ ಉನಕ್ಕು ತಿರುಮೇನಿಯಾಹ ಕೊಳ್ಳ ವೇಣುಂ ಎನ್ರಾಲ್. ಅದೈ ಎಂಪೆರುಮಾನ್ ತಿರುಮೇನಿಯಾಹ ಕೊಳ್ಳುಮ್.”

[ಭಕ್ತರು ಯಾವುದಾದರೂ ಒಂದು ಅಚೇತನವಸ್ತುವನ್ನು ಇಟ್ಟುಕೊಂಡು ಇದನ್ನು ನಿನ್ನ ಪವಿತ್ರ ಶರೀರವಾಗಿ ಕೊಳ್ಳಬೇಕು. ಪರಮಾತ್ಮ ಎಂದರೆ ಅದನ್ನೇ ನನ್ನಪ್ಪ ಪರಮಾತ್ಮನು ತನ್ನ ಪವಿತ್ರ ದೇಹವಾಗಿ ಕೊಳ್ಳುವನು] ಎಂದು ಪೆರಿಯವಾಚ್ಚಾನ್ ಪಿಳ್ಳೈ ಹೇಳುತ್ತಾರೆ.

ಶ್ರೀ ರಾಮಾನುಜಾಚಾರ್ಯರ ಜೀವಿತದಲ್ಲಿ ನಡೆದ ಒಂದು ಸೊಗಸಾದ ವೃತ್ತಾಂತವಿದೆ. ರಾಮಾನುಜರು ಒಂದು ದಿನ ಶ್ರೀರಂಗದಲ್ಲಿ ಅಕ್ಷಯಪಾತ್ರೆ ಹಿಡಿದುಕೊಂಡು ಭಿಕ್ಷೆಗೆ ಹೋಗುತ್ತಿದ್ದರು. ಬೀದಿಯಲ್ಲಿ ಆಟವಾಡುತ್ತಿದ್ದ ಹಲವು ಬಾಲಕರು ಕಾಲಿನಲ್ಲಿ ನೆಲದಮೇಲೆ ಗುರುತುಮಾಡಿ “ಇದು ನಿಮ್ಮ ಎಂಪೆರುಮಾನ್ ಪವಿತ್ರ ಶರೀರ” ಎಂದು ತೋರಿಸಿದರು. ಕೂಡಲೇ ಒಡೆಯರು ತಮ್ಮ ಭಿಕ್ಷಾಪಾತ್ರೆಯನ್ನು ಕೆಳಗಿಟ್ಟು ಆ ಆಕೃತಿಗೆ ದಂಡವತ್ ಪ್ರಮಾಣ ಮಾಡಿದರು. ಆ ಬಾಲಕರು ಇನ್ನೂ ಬರೆಯುತ್ತಾ ದೊಡ್ಡ ಮಂಟಪ ದೇವರು ಲಕ್ಷ್ಮೀದೇವಿ ಇವನ್ನೆಲ್ಲ ಮಾಡಿ ನೆಲದಮೇಲೆ ಬಟ್ಟೆ ಹಾಸಿ ದೇವರಿಗೆ ನಿವೇದನೆ ಮಾಡಿ ಅನ್ನವನ್ನು ರಾಶಿಹಾಕುವಂತೆ ಹಾಕಿ ಎಂಪೆರುಮಾಳರ ಪ್ರಸಾದ ಎಂದು ಬೀದಿಯ ಮರಳನ್ನೇ ಎತ್ತಿಕೊಟ್ಟರು. ಒಡೆಯರು ಅದನ್ನು ತಮ್ಮ ಪಾತ್ರೆಯಲ್ಲಿ ಏರಿಸಿಕೊಂಡರು. ಮಕ್ಕಳು ಕಾಲಿನಲ್ಲಿ ಕೆರೆದ ಆಕೃತಿಯೇ ರಾಮಾನುಜರಿಗೆ ದೇವರು ಆಯಿತು. ಅವರು ಎತ್ತಿಕೊಟ್ಟ ಮರಳೇ ಪವಿತ್ರ ಪ್ರಸಾದವಾಯಿತು.

ಪೊನ್ ತಿಗಳು ಮೇನಿ ಪುರಿಶಡೈಯುಂ ಪುಣ್ಣಿಯನುಂ
ನಿನ್ರುಲಗಂ ತಾಯ ನೆಡು ಮಾಲಂ—ಎನ್ರುಂ
ಇರುವ ರಂಗತ್ತಾಲ್ ತಿರಿವರೇನುಂ, ಒರುವನ್
ಒರುವನಂಗ ತೆನ್ರು ಮುಳನ್

[ಸ್ಪೃಹಣೀಯವಾದ ಸುವರ್ಣ ವರ್ಣವುಳ್ಳವನಾಗಿ ಜಟಾಧಾರಿಯಾಗಿ ಪುಣ್ಯಮೂರ್ತಿಯಾದ ಶಿವನೂ, ವಿಷ್ಣುವೂ ತಮ್ಮ ತಮ್ಮ ಆಕೃತಿಗಳಲ್ಲಿ ನಿಂತು ಲೀಲಾ ವಿನೋದಗಳನ್ನೂ ನಡಸಿದರೂ, ಒಬ್ಬನ ದೇಹದಲ್ಲಿ ಮತ್ತೊಬ್ಬನು ಎಂದೆಂದೂ ಇರುತ್ತಾನೆ. ಅವರು ಪರಸ್ಪರ ಶರೀರ ಶರೀರ ಗಳಾಗಿದ್ದಾರೆ.]

ತಾಳ ಜಡೆಯುಂ ನೀಣ್ಮುಡಿಯುಂ ಒಣ್ಮಳುವುಂ ಚಕ್ರಮುಂ
ಚೂಳರವುಂ ವೊನ್ನಾಣುಂ ತೋನ್ರುಮಾಲ್—ಚೂಳುಂ
ತಿರಂಡುರವಿ ಪಾಯುಂ ತಿರುಮಲೈ ಮೇಲೆಂದೈಕ್ಕುಂ
ಇರಂಡುರುವು ವೊನ್ರಾಯಿ ಶೇಂರ್ದು

[ಜಡೆ ಮಳು (ಈಶ್ವರನ ಆಯುಧ) ಅರವು (ಹಾವು) ಇವುಗಳುಳ್ಳ ಹರ ರೂಪವೂ ಕಿರೀಟ ಚಕ್ರಗಳುಳ್ಳ ಹರಿ ರೂಪವೂ ಎರಡು ಒಂದಾಗಿ ಸಮರಸವಾಗಿ ತಿರುಪತಿಯಲ್ಲಿ ವಿರಾಜಿಸುತ್ತಿವೆ.]

ತೆರುಂಕಾಲ್ ದೇವನ್ ಒರುವನೆ ಎನ್ರುರೈಪ್ಪರ್
ಅರುಂ ಅರಿಯಾರ್ ಅವನ್ ಪೆರುಮೈ—ಒರುಂ
ಪೊರುಳ್ ಮುಡಿವು ಮಿತ್ತನೈಯೇ ಯೆತ್ತವಂ ಶಯ್ಯುದಾರ್ಕ್ಕುಂ
ಅರುಳ್ ಮುಡಿವ ತಾಳಿಯಾನ್ ಪಾಲ್

[ಎಂದೆಂದಿಗೂ ಶಾಶ್ವತವಾದ ಪರಮಾತ್ಮ ಒಬ್ಬನೇ. ಅವನ ಮಹಿಮೆ ಯಾರಿಗೆ ಗೊತ್ತು? ಎಲ್ಲ ಸಾಧನ ಅನುಷ್ಠಾನಗಳನ್ನೂ ಮಾಡಿ ದವರಿಗೆ ಫಲ ಸರ್ವೇಶ್ವರನಿಂದ ನಿಶ್ಚಯವಾಗಿ ಬಂದೇ ಬರುವುದು.]

ಇಡ ಮಾವ ತೆನ್ನೆಂಜಂ ಇನ್ರೆಲ್ಲಾಂ ಪಂಡುಂ
ಪಡ ನಾಗನ್ನೈ ನೆಡಿಯ—ತಿಡಿಮಾಹ
ವೈಯೇನ್ ವುಡಿಶುಡಿ ತನ್ನೋಡು ಅಯನೈನಾನ್
ವೈಯ್ಯೇನಾಳ್ ಶಯ್ಯೇನ್ ವಲಂ

[ಮೊದಲು ಹಾವಿನ ಹಾಸಿಗೆಯಲ್ಲಿ ಮಲಗಿದ್ದವನು ತನ್ನ ಹಾಸಿಗೆ ಯನ್ನು ಬಿಟ್ಟು ನನ್ನ ಹೃದಯವನ್ನು ವಾಸಸ್ಥಾನವಾಗಿ ಮಾಡಿಕೊಂಡಿದ್ದಾನೆ. ಇದು ಅವನ ಇಚ್ಛೆ. ನನ್ನ ಹೃದಯವಾದರೋ ತೀರಚಿಕ್ಕದು. ಅಲ್ಲಿ ಒಬ್ಬರಿ ಗಿಂತ ಹೆಚ್ಚು ಜನರಿಗೆ ಸ್ಥಳವಿಲ್ಲ. ಆದುದರಿಂದ ಬಿದಿಗೆಯ ಚಂದ್ರನನ್ನೊಡ ಗೊಂಡ ಶಿವನಿಗೂ, ಬ್ರಹ್ಮನಿಗೂ ಕೊಡಲು ಸ್ಥಳವಿಲ್ಲ.]

ಒಂದೇ ಮೂರ್ತಿಯನ್ನು ಧ್ಯಾನಿಸುವುದರ ತತ್ವವನ್ನು ಇದು ಚೆನ್ನಾಗಿ ವಿವರಿಸುವುದು. ನಮ್ಮಾಳ್ವಾರ್ ಹೀಗೆ ಹೇಳುತ್ತಾರೆ:

ಅವರವರ್ ತಮ ತಮದ್ ಅರಿವರಿ ವಗೈ ವಗೈ
ಅವರವರ್ ಇಱೈಯವರೆನ ವಡಿ ಯಡೈವರ್ಗಳ್
ಅವರವರ್ ಇಱೈಯವರ್ ಕುಱೈವಿಲ್ ಱಿಱೈಯವರ್
ಅವರವರ್ ವಿಧಿ ವಳಿ ಯಡೈಯನಿನ್ ಱನರೇ

[ಅವರವರು ಅವರವರ ಜ್ಞಾನಕ್ಕೆ ತಕ್ಕಂತೆ ಆಯಾ ದೇವತೆಯನ್ನು ಈಶನ್ ಎಂದು ಪೂಜಿಸುತ್ತಾರೆ. ಆಯಾ ದೇವತೆಯೂ ತನ್ನನ್ನು ಆರಾಧಿಸುವವರಿಗೆ, ಬೇಡಿದ ಫಲಗಳನ್ನು ಕೊಡುವುದರಲ್ಲಿ ಶಕ್ತವಾಗಿಯೇ ಇದೆ. ಎಲ್ಲ ದೇವತೆಗಳ ಆತ್ಮವಾಗಿ ಸರ್ವೇಶ್ವರನು ಇರುವನಲ್ಲವೇ?]

ಪಿಣಕ್ಕರ ಅಱುವಗೈ ಸಮಯಮುಂ ನೆಱಿಯುಳ್ಳಿಯುಱೈತ್ತ
ಕಣಕ್ಕಱು ನಲತ್ತನನ್ದ ಮಿಲಾದಿಯುಂ ಭಗವನ್
ವಣಕ್ಕುಡೈ ತ್ತವನೆಱಿ ವಳಿ ನಿನ್ಱು ಪುಱನೆಱಿ ಕಳೈಕಟ್ಟು
ಉಣರ್ಕ್ಕ ಮಿನ್ಬ ಶಯ ಱನು ಡೈ ಯಣರ್ಚ್ಚಿ ಕೊಂಡುಣರ್ನ್ದವೆ

[ಎಲ್ಲ ಸಮಯಗಳನ್ನೂ ಸಂದೇಹಗಳನ್ನೂ ನೀಗಿ ಜ್ಞಾನಸಾಧನೆಗೆ ಸಮರಸಪಡಿಸಿದ ಕೃಷ್ಣನಲ್ಲಿ ಯಾವಾಗಲೂ ಭಕ್ತಿಯಿಡಿ ಎನ್ನುತ್ತಾರೆ ಆಳ್ವಾರ್]

ಉಣರ್ನ್ದು ಉಣರ್ನ್ದು ಇಳಿಂದ ಕನ್ ಱುಯುರ್ನ್ದುರುವಿಯನ್ದವಿನ್ನಿಲೈ ಮೈ
ಉಣರ್ನ್ದು ಉಣರ್ನ್ದು ಉಣರಿನು ಮಿಱೈ ನಿಲೈ ಉಣರ್ವರಿ ದುಯಿರ್ ಗಾಳ್
ಉಣರ್ನ್ದು ಉಣರ್ನ್ದು ಉಱೈತ್ತು ಅರಿಯಯ ರೆನ್ಱು ಮಿವರೈ
ಉಣರ್ನ್ದು ಉಣರ್ನ್ದು ರೈತ್ತು ಯಿಱೈಂಜುಮಿನ್ ಮನಪ್ಪಟ್ಟತೊನ್ಱೆ.

[ಉಯಿರ್‌ಗಾಳ್ – ಹೇ ಧಾರಿಗಳೇ, ವಸ್ತುಗಳಲ್ಲಿ ನಿಜವಾದ ವಸ್ತುವನ್ನು ಅರಿತರೂ ಸಹ ಆ ಪರಮವಸ್ತುವಿನ ಲಕ್ಷಣಗಳನ್ನು ಅರಿಯುವುದು ಸಾಧ್ಯವಿಲ್ಲ. ಬ್ರಹ್ಮ ವಿಷ್ಣು ಈಶ್ವರ ಎಂಬ ಈ ಮೂರು ಮೂರ್ತಿಗಳಲ್ಲಿ ನಿಮ್ಮ ಮನಸ್ಸಿಗೆ ಯಾವುದು ಈಶ್ವರನೆಂದು ತೋರುವುದೋ ಆ ಒಬ್ಬನನ್ನೇ ಧ್ಯಾನಿಸಿ ಪೂಜಿಸಿ ಪ್ರೇಮ ತಿರಸ್ಕಾರಗಳನ್ನು ನೀಗಿ ಈಶ್ವರನಲ್ಲಿ ಭಕ್ತಿ ತೋರಿ]

ವಲತ್ತನನ್ ತಿರಿಪುರ ಮೆರಿತ್ತವನಿಡಂ ಪೆರತ್ತುನ್ನಿ
ತಳತ್ತೆಳುದಿಶೈ ಮುಗನ್ ಪಡೈತ್ತ, ನಲ್ಲುಲಗಮುಂ ತಾನುಂ
ಪುಲಪ್ಪಟ ಪಿನ್ನುಂದನ್ ಉಲಗತ್ತಿಲಗತ್ತನ್ನ ತಾನೇ
ಶೊಲ್ ಪ್ಪುಕಿಲ್ ಇವೈಪಿನ್ನುಂ ವಯಿಟ್ರಿಲ್ ವಿನ್ವೈಯವನ್ ದುಯಕ್ಕೆ

[ತ್ರಿಪುರವನ್ನು ಸುಟ್ಟ ಈಶ್ವರನು, ನಾರಾಯಣನ ಬಲಭಾಗ; ಚತುರ್ಮುಖ ಬ್ರಹ್ಮನೂ ಅವನು ಸೃಷ್ಟಿಸಿದ ಲೋಕಗಳೂ ನಾರಾಯಣನ ನಾಭಿಯಲ್ಲಿ ಅಡಗುವುವು. ಮತ್ತು ಲೋಕದ ಜನರ ಕಣ್ಣಿಗೆ ಕಾಣುವಂತೆ ಸರ್ವೇಶ್ವರನು ಅವತಾರ ಮಾಡುತ್ತಾನೆ. ಆದರೂ ಇವೆಲ್ಲ ಅವನ ಉದರದಲ್ಲಿ ಅಡಕ ವಾಗಿರುವುವೇ. ಎಲ್ಲ ಪರಮಾತ್ಮನ ಆಟಗಳೇ]

ಒರುವ ರಿರುವ ರೋರ್ ಮೂವರೆನ್ ನಿನ್ರು
ಉರುವು ಕರಂದುಳ್ಳುಂ ದೋರುಂ ತಿತ್ತಿಪ್ಪಾನ್
ತಿರುವಮರ್ ಮಾರ್ವನ್ ತಿರುಕ್ಕಡಿತ್ತಾನತ್ತೈ
ಮರುವಿ ಯರೈಕಿ ನ್ರ ಮಾಯ ಪಿರಾನೆ

[ತಿರುಕ್ಕಡಿತ್ತಾನಂ ಎಂಬ ದಿವ್ಯ ದೇಶದಲ್ಲಿರುವ ದೇವಾಲಯದಲ್ಲಿ, ಭಕ್ತರಿಗೆ ದರ್ಶನ ಕೊಡುತ್ತಿರುವ ಪರಮಾತ್ಮ ಒಬ್ಬನಾಗಿಯೂ ಇಬ್ಬರಾಗಿಯೂ ಮೂವರಾಗಿಯೂ ಇರುತ್ತಾನೆ. ತನ್ನ ದೇಹವನ್ನೇ ಮರೆಯಿಸಿ ಜಗತ್ತಿನ ಜೀವರಾಶಿಯಲ್ಲಿ ಇರುತ್ತಾನೆ]

ಯಾನುಂ ತಾನಾಯೊಳಿಂದಾನೆ, ಯಾದುಂ ಯವರ್ಕ್ಕುಂ ಮುನ್ನೋನ್ಸೈ
ತಾನುಂ ಶಿವನುಂ ಪಿರಮುನುಂ ಆಕಿ ಪಣೈತ್ತ ತನಿ ಮೊದಲ್ಲೆ
ತೇನುಂ ಪಾಲುಂ ಕಣ್ಣಲು ಯಮುದು ಮಾಗಿ ತಿತ್ತಿತ್ತೇನ್
ಉನಿ ಲುಯಿರಿ ಲುಣರ್ವಿನಿಲ್ ನಿನ್ರ ಒನ್ರೈ ಉಣರ್ನ್ದೇನೆ

ಈ ಪಾಶುರದಲ್ಲಿ ನಮ್ಮಾಳ್ವಾರು, ಪರಮಾತ್ಮನನ್ನು ವೇದಾಂತ ವಿಸ್ತಾರ ಸ್ವರೂಪದಲ್ಲಿ ಸ್ತುತಿಸುತ್ತಾರೆ. ಅದೇ "ಯಾನ್" ಯಾನುಂ ತಾನುಂ ಒಂದಾಗಿ ಮುಗಿಯುವುದು. ಅವೇ ಚೇತನ ಅಚೇತನ ವಸ್ತುಗಳು ಸರ್ವಕ್ಕೂ ಮೊದಲಿನಿಂದಲೂ ಇದ್ದ ಮೂಲವಸ್ತು. ಅದೇ ಶಿವ ಬ್ರಹ್ಮ ವಿಷ್ಣು ಆದ ಮೂರು ಮೂರ್ತಿಗಳು. ಆ ಪರವಸ್ತುವನ್ನು ಅರಿತೆ. ಅದೇ ನನಗೆ ಎಲ್ಲ ವಿಧ ಗಳಾದ ಹಾಲು ಜೇನು ಇಕ್ಷುರಸ ಅಮೃತ, ಸಕಲ ಭೋಗಗಳು ಆಗಿವೆ. ನನ್ನ ದೇಹ ಪ್ರಾಣ ಮನಸ್ಸುಗಳಲ್ಲಿ ಈ ನಿಜವೇ ಉಸಿರಿನ ಉಸಿರಾಗಿ ನಿಂತಿದೆ.

ಈ ಹಾಡು ಇರುವ ತಿರುವಾಯಿಮೊಳಿಯ 78 ರ ಹತ್ತು ಪಾಶುರ ಗಳಲ್ಲಿ ಶ್ರೀ ವೈಷ್ಣವ ಸಿದ್ಧಾಂತವೆಲ್ಲ ಅಡಕವಾಗಿದೆ.

ತಾನೇಯಾಕಿ ನಿರ್೦ದೆಲ್ಲಾ ಉಲಗುಂ ವುಯಿರುಂ ತಾನೇಯಾಯ್
ತಾನೇ ಯಾನೆನ್ಬಾನಾಕಿ ತೆನ್ನೈತ್ತಾನೆ ತುತಿತ್ತು ಎನಕ್ಕು
ತೇನೇ ಪಾಲೇ ಕಣ್ಣಲೇ ಯಮುದೇ ತಿರುಮಾಲಿರುಂ ಚೋಲೈ
ಕೋನೆಯಾಕಿ ನಿನ್ರು ಒಳಿಂದಾನ್ ಎನ್ನೈ ಮುಟ್ಟ್ರು ಮುಯಿ ರುಂಡೆ

[ಸಮಸ್ತ ಲೋಕಗಳಲ್ಲಿಯೂ ವ್ಯಾಪಿಸಿ ಸರ್ವಲೋಕಗಳಿಗೂ ಅಂತರ್ಯಾಮಿಯಾಗಿ ಸ್ವಯಮೇವ ಅಹಂಗೆ ಗೋಚರನಾಗಿರುವ ಪರಮಾತ್ಮನನ್ನು ಕುರಿತ ಈ ಪಾಶುರದಿಂದ ಅರ್ಚಾವತಾರ ಉಪಾಸನೆಗೂ ಪರ ಬ್ರಹ್ಮೋಪಾಸನೆಯೂ ಇರುವ ಭೇದ ತಿಳಿಯಿತು].

ಅವನೇ ಯಯಲ್ ಜ್ಞಾಲಂ ಪಡೈತ್ತಿಡಂದಾನ್
ಅವನೇ ಯಃ ದುಂಡು ಮಿಳಿಂದಾನ್ ಅಳಂದಾನ್
ಅವನೇ ಯವನು ಮವನು ಮವನುಂ
ಅವನೇ ಮಟ್ರೆಲ್ಲಾ ಮಮರಿಂದನಮೇ

[ನಾವು ಕಂಡುಕೊಂಡೆವು. ಲೋಕಗಳನ್ನು ಸೃಷ್ಟಿಸಿದವನೂ ಸಂಹರಿಸುವನೂ ಅವನೇ. ಅವತಾರ ಮಹಿಮೆಗಳನ್ನು ಪ್ರಕಟಿಸಿದವನೂ ಅವನೇ. ಅವನೇ ಶಿವ, ಅವನೇ ವಿಷ್ಣು, ಅವನೇ ಬ್ರಹ್ಮ, ಸಮಸ್ತ ಜಗತ್ತೂ ಎಲ್ಲವೂ ಅವನೇ.]

ವುರವಾಶಿಯ ಆರು ಸಮಯಂ ಗಳ್ಕೆಲ್ಲಾಂ
ವೊರುವಾಶಿ ನಿನ್ರಾನ್ ಆವನ್ ಎಲ್ಲಾ ಪೊರುಳ್ಕುಂ
ಅರುವಾಶಿಯ ವಾದಿಯ್ಯೆ ದೇವರ್‌ಗಳ್ಕೆಲ್ಲಾಂ
ಕರುವಾಶಿಯ ಕಣ್ಣನೈ ಕಂಡುಕೊಂಡೇನ್

[ಕೃಷ್ಣನೇ ಪರಬ್ರಹ್ಮ. ಷಟ್‌ಸಮಯಗಳಲ್ಲಿಯೂ ನೀನು ಒಂದೇ ಸಮನಾಗಿ ನಿಂತೆ. ಎಲ್ಲ ವಸ್ತುಗಳಲ್ಲಿಯೂ ನೀನು ಅಂತರಾತ್ಮನಾಗಿದ್ದೀಯೆ. ನೀನು ಸೃಷ್ಟಿಕರ್ತ. ಎಲ್ಲ ದೇವರಿಗೂ ನೀನೇ ಪ್ರಾಣಾಧಾರ ಎಂಬುದನ್ನು ಅರಿತೆ.] ಸಮಯಂಗಳ್ಕೆಲ್ಲಾಂ ಪೊರುವಾಶಿ ಎಂದರೆ ಎಲ್ಲ ಸಮಯಗಳಲ್ಲಿಯೂ ಸಮನಾಗಿ ನಿಂತೆ ಎಂದು ತಾತ್ಪರ್ಯ. "ಕೋದಿಲ್ ವಣ್ಪುಗಳ್ ಕೊಂಡು ಸಮಯಿಗಳ್ ಭೇದಂಗಳ್ ಶೊಲ್ಲಿ ಪಿವಟ್ರುಂ ಪಿರಾನ್ ಪರನ್" ಎಂಬ ಹಾಡಿದುವರ ಅರ್ಥವೂ ಇದೇಯೇ.

ಇಲಿಂಗತ್ತಿಟ್ಟ ಪುರಾಣತ್ತೀರುವ್ ಶಮಣರುಂ ಶಾಕ್ಕಿಯರುಂ
ವಲಿಂದು ವಾದು ಶೈವೀರ್‌ಗಳುಂ ಮಟ್ರುಂ ನೀಸ್ ಸೈವಮು ಮಾಗಿ ನಿನ್ರಾನ್
ಮಲಿಂದು ಶೆನ್ನೆಲ್ ಕವರಿವೀಶುಂ ತಿರುಕ್ಕುರು ಕೂರ್ತನುಳ್
ಪೊಲಿಂದು ನಿನ್ರ ಪಿರಾಣ ಕಂಡೀರೇನ್ರುಂ ಪೊಯ್ಯಿಲ್ಲೆ ಪೊಟ್ರುಮಿನೆ

[ಇತರ ಸಮಯಗಳವರನ್ನು ನೋಡಿ ಲಿಂಗ ಮಹಾತ್ಮ್ಯ ಪ್ರತಿಪಾದಕ ಪುರಾಣಿಕರೇ ಶ್ರಮಣರೇ ಶಾಕ್ಯರೇ ಶೈವರೇ ನಿಮ್ಮ ದೇವರೂ ಕುರುಹೂರ್ ನಲ್ಲಿ ದಯಮಾಡಿಸಿರುವ ಕೆಂಪು ಛತ್ರ, ಚಾಮರ ಬೀಸುತ್ತಿರುವ ನನ್ನ ದೇವರೂ ಇಬ್ಬರೂ ಒಂದೇ. ನಾನು ಹೇಳುವುದು ಸುಳ್ಳಲ್ಲ] ಎನುತ್ತಾರೆ.

ಅವಾವರ ಚ್ಚೂಳ್ ಅರಿಯ್ಯೆ ಯಯನ್ಯೆ ಯರನ್ಯೆಯಲಟ್ರಿ
ಅವಾವತ್ತು ವೀಡು ಪೆತ್ತು ಕುರುಹೂರ್ ಶಡಗೋಪನ್ ಶೊನ್ನ
ಅವಾವಿಲಂದಾದಿಗಲ್ ಇ ವ್ವೆಯಾಯಿರಮುಂ ಮುಡಿಸ್ದ
ಅವಾವಿಲಂದಾದಿ ಯಿಪ್ಪತ್ತರಿಂದಾನ್ ಪಿರದಾಂರ್ ಪಿರಂದಾರುಯಿರನ್ದೇ

[ಸಾಯುಜ್ಯಪ್ರದನಾಗಿ ಸಕಲಾಂತರ್ಯಾಮಿಯಾಗ ಕುರುಹೂರ್‌ನಲ್ಲಿ ದಯಮಾಡಿಸಿರುವ ಸ್ವಾಮಿಯನ್ನು ಪ್ರಾರ್ಥಿಸಿ, ಶಠಗೋಪರು ಭಕ್ತಿಯಿಂದ ಅಂತಾದಿಗಳಿಂದ ಮಾಡಿದ ಸಾವಿರ ಮುಗಿದ ಈ ಅವಿಲಂದಾದಿ ಪಾಶುರಗಳನ್ನು ತಿಳಿದ ಭಕ್ತರು ಈ ದೇಹದಲ್ಲಿಯೇ ಮುಕ್ತರಾಗುತ್ತಾರೆ] ಎನ್ನುತ್ತಾರೆ.

ಹೀಗೆ ತಿರುವಾಯಿಮೊಳಿ ಅಂತ್ಯವಾಗುತ್ತದೆ.*

---

*ಚಕ್ರವರ್ತಿ ರಾಜಗೋಪಾಲಾಚಾರ್ಯರ ಒಂದು ಲೇಖನವನ್ನು ಅನುಸರಿಸಿ ಬರೆದುದು.

ಜನತೆಯ ಕವಿ

ವರ್ಲ್ಡ್ಸ್ ಪಾಪ್ಯುಲರ್ ಕ್ಲಾಸಿಕ್ಸ್ ಮಾಲೆಯಲ್ಲಿ ಈಗ ತಾನೆ ಪ್ರಕಟವಾದ ವಾಲ್ಟ್ ವಿಟಮಿನ್‌ರ 'ಗರಿಕೆ' (ಲೀವ್ಸ್ ಆಫ್ ಗ್ರಾಸ್) ಎಂಬ ಗ್ರಂಥದ ಸಾಮಾನ್ಯ ಅವಲೋಕನ.

ವಾಲ್ಟ್ ವಿಟಮಿನ್ ತನ್ನ ಗ್ರಂಥವಾದ "ಗರುಕೆಯ ದಳಗಳು" ಎಂಬುದರಲ್ಲಿ ಒಂದೆಡೆ "ಈ ಪುಸ್ತಕವನ್ನು ಮುಟ್ಟುವವರು ಒಬ್ಬ ವ್ಯಕ್ತಿಯನ್ನು ಮುಟ್ಟುತ್ತಾರೆ" ಎಂದು ಹೇಳಿದ್ದಾನೆ. ಆ ಗ್ರಂಥವನ್ನು ಓದುವವನ ಮನಸ್ಸಿನಮೇಲೆ ಉಂಟಾಗುವ ಪರಿಣಾಮವಾದರೂ ಅದೇಯೆ. ಏಕೆಂದರೆ ಆ ಅದ್ಭುತವಾದ ಗ್ರಂಥದಲ್ಲಿ ಹೆಜ್ಜೆ ಹೆಜ್ಜೆಗೂ ನಮ್ಮ ಕಣ್ಣಿಗೆ ಬೀಳುವುದು, ಭಾವನೆ ಪ್ರೇಮಗಳಿಂದ ಕೂಡಿದ ಅಖಿಲ ಜಗತ್ತನ್ನೇ ತನ್ನ ಬಂಧುವಾಗಿ ಕೈಕೊಂಡ ಪರಿಪೂರ್ಣನಾದ ಜನತೆಯ ಕವಿವಾಣಿ.

ಜನತೆಯ ಮಾತೇ ಶೈಲಿ

ವಿಟಮಿನ್‌ನನ್ನು ನಾವು ಕವಿ ಎನ್ನುತ್ತೇವೆ. ಆದರೆ ಅವನು ತನ್ನ ಕವಿತೆಗಳನ್ನು ಛಂದಸ್ಸಿನಲ್ಲಿ ಬರೆಯಲಿಲ್ಲ. ಅವನ ಬಾಳಿನ ಒಂದೇ ಗುರಿ ಡೆಮಾಕ್ರಸಿ ಅಥವಾ ಪ್ರಜಾ ಪ್ರಭುತ್ವವಾಗಿತ್ತು. ಕಲೆಗಳಲ್ಲಿಯೂ ಸಾಹಿತ್ಯದಲ್ಲಿಯೂ, ತಾನು ಕೈಯಿಟ್ಟ ಸಮಸ್ತ ವ್ಯವಹಾರದಲ್ಲಿಯೂ ಈ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅವನು ಹೆಣಗಿದನು. ಆದುದರಿಂದ ಅವನು ಛಂದೋಬದ್ಧವಾದ ಕವಿತೆಯನ್ನೂ ಕೃತಕವಾದ ಒಣ ಆಡಂಬರದ ಹೊರಬೆಡಗಿನ ಶೈಲಿಯನ್ನೂ ಮೀರಿದನು. ಜನತೆಯ ಮಾತೇ ಅವನ ಶೈಲಿಯಾಯಿತು.

ಕಾವ್ಯದಲ್ಲಿ ಪ್ರಜಾಪ್ರಭುತ್ವ

ಬಾಳಿನಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಗುರಿಯಿಂದ ವಿಟಮಿನ್‌ನು ಈ ಬಾಳಿನ ವಿವಿಧತೆಯನ್ನೆಲ್ಲ ತನ್ನದೆಂದೇ ಭಾವಿಸಿ ಸ್ವಾಗತಿಸಿ ಒಪ್ಪಿಕೊಂಡನು. ಅವನ ದಾರಿ, ನಿರಾತಂಕವಾದ ಬಟ್ಟಬಯಲು. ಜಗತ್ತಿನ ನಾನಾಭಾಗದ ಬೇರೆ ಬೇರೆ ಬಣ್ಣಗಳ, ಕುಲಗಳ, ದೇಶಗಳ ಸ್ತ್ರೀಪುರುಷರೆಲ್ಲ ಅವನ ಸಹಜೀವಿ ಬಾಂಧವರು. "ಇಲ್ಲಿ ಬರುವವರಿಗೆಲ್ಲ ಸ್ವಾಗತ" ಎಂಬ ಒಂದೇ ಒಂದು ದೊಡ್ಡ

ಪಾಠ. ತುಂಬಿದ ಕರೆಕೂದಲಿನ ನೀಗ್ರೋವಿಗೂ, ದುಷ್ಟನಿಗೂ, ರೋಗಿಗೂ ಅವಿದ್ಯಾವಂತನಿಗೂ ಯಾರಿಗೂ ಇಲ್ಲಿ ಪ್ರವೇಶಕ್ಕೆ ಅಡ್ಡಿ ಇಲ್ಲ. ಪ್ರಜಾ ಪ್ರಭುತ್ವದ ಸ್ಥಾಪನೆ, ವಿಟಮಿನ್‌ಗೆ ಬರಿಯ ಒಂದು ತತ್ವಮಾತ್ರ ಆಗಲಿಲ್ಲ. ಅದನ್ನು ಅವನು ಹೆಜ್ಜೆ ಹೆಜ್ಜೆಗೂ ಆಚರಣೆಗೆ ತರತೊಡಗಿದನು. ೧೮೬೧ರಲ್ಲಿ ಅಮೆರಿಕದ ಒಳಜಗಳದಲ್ಲಿ (ಸಿವಿಲ್ ವಾರ್) ಭಾಗವಹಿಸಿ ಗಾಯಗೊಂಡ ಸಿಪಾಯಿಗಳನ್ನು ಅವನು ಉಪಚರಿಸಿದನು. ವಿಟಮಿನ್ ವಾಸ್ತವವಾಗಿ ಯುದ್ಧ ವಿರೋಧಿ. ದೇವರು, ಮನುಷ್ಯನಿಗೆ ಕೊಲ್ಲುವ ಹಕ್ಕನ್ನು ಕೊಟ್ಟಿಲ್ಲ ವೆಂಬುದು ಅವನ ಅಭಿಪ್ರಾಯವಾಗಿತ್ತು. ಆದರೆ ಸೋಯಾಳಿಗಳನ್ನು ಉಪಚರಿಸುವುದಕ್ಕೂ ಅವನ ಅಭಿಪ್ರಾಯಕ್ಕೂ ವಿರೋಧವಿರಲಿಲ್ಲ. ಅವನಿಗೆ ಪ್ರೇಮಕ್ಕಿಂತ ದೊಡ್ಡ ಧರ್ಮವಿರಲಿಲ್ಲ.

"ಬೈಬಲ್, ಧರ್ಮ, ಇವು ದೇವರೆಂದು ನೀವು ಭಾವಿಸುತ್ತೀರಿ. ಅವು ದೇವರಲ್ಲ ವೆನ್ನುವುದಿಲ್ಲ ನಾನು. ಆದರೆ ಅವೆಲ್ಲ ಬೆಳೆದಿರುವುದು ನಿಮ್ಮಿಂದ. ಮುಂದೆಯೂ ನಿಮ್ಮಿಂದ ಬೆಳೆಯಬಹುದು. ಜೀವವನ್ನು ಕೊಡುವುವು ಅವಲ್ಲ. ನೀವು.........ದೂರ ಯಾಕೆ ಹುಡುಕುತ್ತ ಹೋಗುತ್ತಿರಿ? ನಿಮ್ಮ ಪಿತೃಪಿಗಳೂ ಪ್ರಿಯರೂ ಮಿತ್ರರೂ ಇಲ್ಲಿಯೇ ನಿಮ್ಮ ಸುತ್ತ ಇದ್ದಾರೆ. ಸುಖವೂ ಸೊಬಗೂ ಆನಂದವೂ ಇಲ್ಲಿ ಈಗಲೆ ಇವೆ."

ಬಡವರ ಮಿತ್ರ

ಮುಂದೆ ವಿಟಮಿನ್ ಪ್ರಸಿದ್ಧನಾಗಿ, ದೃಷ್ಟಾರನೆಂದು ಇಂಗ್ಲೆಂಡ್ ಅಮೆರಿಕ ದೇಶಗಳು ಅವನನ್ನು ಗೌರವಿಸುತ್ತಿದ್ದಾಗಲೂ ಸಹ ಅವನು ತನ್ನ ಬಡತನದಕಾಲದ ಸಾಮಾನ್ಯ ಮಿತ್ರರ ಕೈಬಿಡಲಿಲ್ಲ. ಆ ಮಿತ್ರತ್ವವೇ ಅವನ "ಡೆಮಾಕ್ರಸಿಯ" ಮೂಲತತ್ವವಾಗಿತ್ತು. ತಾನು ಒಬ್ಬನೇ ಒಂದು ಎಂಬ ಭಾವನೆ ಅವನಿಗೆ ಯಾವಾಗಲೂ ಇರಲಿಲ್ಲ. ತಾನು ಜಗತ್ತಿನ ಒಂದು ಭಾಗ; "ನಾನು ಒಂದು ಬ್ರಹ್ಮಾಂಡ, ನಾನೇ ಪ್ರಕೃತಿ; ಈ ಪ್ರಕೃತಿಯ ವಿವಿಧತೆಯೂ ನಾನೇ." ಆದುದರಿಂದ ಅವನ ಪದ್ಯಗಳು ಒಬ್ಬ ವ್ಯಕ್ತಿಯ ಕವನಗಳಲ್ಲ. ಅವು ಸಮಸ್ತ ಸಮಷ್ಟಿಯ ಸೃಷ್ಟಿಯ ಕವಿತೆಗಳು.

ಮತ ಮತ್ತು ಧರ್ಮದಲ್ಲಿ ಪ್ರಜಾಪ್ರಭುತ್ವ

ವಿಟಮಿನ್ ಧರ್ಮದಲ್ಲಿಯೂ ಪ್ರಜಾಪ್ರಭುತ್ವವನ್ನೇ ಸ್ಥಾಪಿಸಿದನು. ಎಲ್ಲಿಯೋ ದೂರದಲ್ಲಿರುವ ದೇವರನ್ನು ಅವನು ಒಪ್ಪಲೇ ಇಲ್ಲ. "ಪ್ರತಿ

ಯೊಂದು ವಸ್ತುವಿನಲ್ಲಿಯೂ ನಾನು ದೇವರನ್ನು ನೋಡುತ್ತೇನೆ. ಆದರೆ ದೇವರು ನನಗೆ ಅರ್ಥವಾಗುತ್ತಿಲ್ಲ. ಜಗತ್ತಿನ ಸ್ತ್ರೀ ಪುರುಷರ ಮುಖದಲ್ಲೆಲ್ಲ ನಾನು ದೇವರನ್ನೇ ನೋಡುತ್ತಿದ್ದೇನೆ. ದೇವರು ರುಜುಹಾಕಿದ ಕಾಗದ ಬೀದಿಯಲ್ಲೆಲ್ಲ ಬಿದ್ದಿರುವುದು ನನಗೆ ಕಾಣುತ್ತಿದೆ. ಆ ಕಾಗದವನ್ನು ನಾನು ಅಲ್ಲೇ ಬಿಟ್ಟು ಹೋಗುತ್ತಿದ್ದೇನೆ. ಏಕೆಂದರೆ ಹೋದೆಡೆಗಳಲ್ಲೆಲ್ಲ ಇನ್ನೂ ಅಂತಹ ಕಾಗದಗಳು ತಪ್ಪದೆ ಬರುತ್ತವೆಂದು ನನಗೆ ಗೊತ್ತು." ವಿಟಮಿನ್‌ನ ದೇವರು, ಜಗತ್ತಿನೊಂದಿಗೆ, ಜಗತ್ತಿನ ಪ್ರಗತಿಯೊಂದಿಗೆ ಬೆಳೆಯುವ ದೇವರು. ಸಮಾಜವೂ ಜನತೆಯೂ ಒಬ್ಬ ವ್ಯಕ್ತಿ ಮಾಡಿದುದಲ್ಲವೆಂಬುದು ವಿಟಮಿನ್‌ನ ಮತ. ವ್ಯಕ್ತಿಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿಂದ ಸಮಾಜ ಬೆಳೆಯುತ್ತದೆ. ಉತ್ತಮತೆಗೆ ಏರಬೇಕೆಂಬ ಅವಿಚ್ಛಿನ್ನವಾದ ಪ್ರಯತ್ನ, ಹೋರಾಟ, ಹೊಂದಾಣಿಕೆಗಳೇ, ವ್ಯಕ್ತಿಯ ಪ್ರಗತಿಗೆ ಸಾಧಕ. ಇದು ಜಗತ್‌ಸೃಷ್ಟಿನಿಯಮ. ಈ ಮಾರ್ಗದಿಂದಲೇ ಸಸ್ಯಜೀವನವೂ ಪ್ರಾಣಿಜೀವನವೂ ಮೆಟ್ಟಲುಮೆಟ್ಟಲಾಗಿ ಪ್ರಗತಿ ಪಡೆಯುತ್ತವೆ. ಉನ್ನತಿಗಾಗಿ ಈ ಹೋರಾಟ ಎಂದೆಂದಿಗೂ ನಡೆದೇ ಇದೆ. ಆದುದರಿಂದ ಪರಿಪೂರ್ಣನೂ ನಿರ್ದೋಷಿಯೂ ಆದ ದೇವರ ಪ್ರಶ್ನೆ ಇಲ್ಲಿ ಬರುವುದೇ ಇಲ್ಲ. ವ್ಯಕ್ತಿಯೂ ಸಮಾಜವೂ ತನ್ನ ಏಳಿಗೆಯನ್ನು ತಾನೇ ತನ್ನ ಸಾಧನೆಯಿಂದ ಸಂಪಾದಿಸಿಕೊಳ್ಳಬೇಕಾಗಿದೆ. ತನ್ನನ್ನು ಕುರಿತ ಕವನದಲ್ಲಿ ವಿಟಮಿನ್ ಹೀಗೆ ಹೇಳುತ್ತಾನೆ: "ಮನುಷ್ಯನಿಗೆ ತನಗಿಂತ ದೊಡ್ಡದು ಯಾವುದೂ ಇಲ್ಲ. ದೇವರೂ ಇಲ್ಲ. ದೇಹಕ್ಕಿಂತ ಆತ್ಮ ಹೆಚ್ಚಲ್ಲ. ಕಾರುಣ್ಯವಿಲ್ಲದೆ ಚಲಿಸುವವನು, ತನ್ನ ಗೋರಿಯ ಕಡೆಗೇ ತನ್ನ ಶವವನ್ನು ತಾನೇ ಹೊತ್ತುಕೊಂಡು ಹೋಗುತ್ತಾನೆ. ಜೇಬಿನಲ್ಲಿ ಒಂದು ಕಾಸು ಇಲ್ಲದ ನಾನೂ ನೀವೂ, ಜಗತ್ತಿನ ಅಮೌಲ್ಯವಸ್ತುಗಳನ್ನು ಕೊಳ್ಳಬಹುದು. ಯಾವ ಕಸಬು ಆದರೇನು? ಅದನ್ನೇ ಅನುಸರಿಸಿ ನಾವು ಧೀರರಾಗಬಹುದು. ಪ್ರಪಂಚದ ಬೆಳವಣಿಗೆಗೆ ಸಹಾಯಕವಾಗದ ಪದಾರ್ಥವಾಗಲೀ, ಕಾರ್ಯವಾಗಲೀ, ಯಾವುದೂ ಇಲ್ಲ. ನಾನು ಪ್ರತಿ ಹೆಣ್ಣು ಗಂಡಿಗೂ ಹೀಗೆ ಹೇಳುತ್ತೇನೆ: 'ಕೋಟಿ ಬ್ರಹ್ಮಾಂಡಗಳ ಎದುರಿಗೂ ನೀವು ಧೈರ್ಯವಾಗಿರಿ, ಶಾಂತರಾಗಿರಿ'. ನಾನು ಮನುಷ್ಯ ಜಗತ್ತಿಗೆ ಹೀಗೆ ಹೇಳುತ್ತೇನೆ: 'ದೇವರನ್ನು ಕುರಿತು ನಿಮಗೆ ಉತ್ಸುಕತೆ ಬೇಡ. ಪ್ರತಿಯೊಬ್ಬ ಮನುಷ್ಯನ ವಿಷಯದಲ್ಲಿಯೂ ಉತ್ಸುಕ

ನಾಗಿರುವ ನಾನು, ದೇವರ ವಿಷಯದಲ್ಲಿ ಉತ್ಸುಕನಾಗಿಯೇ ಇಲ್ಲ. ನಾನು ದೇವರನ್ನು ಪ್ರತಿಯೊಂದು ವಸ್ತುವಿನಲ್ಲಿಯೂ ಕಾಣುತ್ತೇನೆ, ಕೇಳುತ್ತೇನೆ. ಆದರೆ ದೇವರು ಏನೆಂಬುದು ನನಗೆ ಸ್ವಲ್ಪವೂ ಅರ್ಥವಾಗಿಲ್ಲ. ನನಗಿಂತ ಹೆಚ್ಚು ಅದ್ಭುತ ಯಾರೆಂಬುದು ಸಹ ನನಗೆ ಅರ್ಥವಾಗುತ್ತಿಲ್ಲ.'

ಮುಂದಲ ಪದ್ಯದಲ್ಲಿ ವಿಟಮಿನ್ ಹೀಗೆ ಹೇಳುತ್ತಾನೆ. "ದುರ್ಬಲ ಮನಸ್ಸಿನ ಮಾನವನೇ, ಇದುವರೆಗೆ ಎಲ್ಲಿಯೋ ದೂರದಲ್ಲಿ ನಿಂತು, ಮನುಷ್ಯ ಜಗತ್ತಿನ ಕೆಲವು ಭಾಗ ಮಾತ್ರ ನಿನಗೆ ಸೇರಿದುದೆಂದು ಭಾವಿಸಿದ್ದೆ. ಇಂದು ಎಲ್ಲೆಡೆಯೂ ವ್ಯಾಪಿಸಿರುವ ಜಗತ್ ಶಕ್ತಿ ಒಂದೇ ಎಂಬುದು ತಿಳಿಯಿತು." ಅಖಿಲ ಜಗತ್ತನ್ನೂ ಬಂಧಿಸಿರುವ ಸತ್ಯ, ಅದೇಯೇ. ಜಗತ್ತಿನಲ್ಲಿ ಸುಳ್ಳು ಎಂಬುದು ಇಲ್ಲ. ಸತ್ಯದಿಂದ ಸತ್ಯ ಬೆಳೆಯುವಂತೆ, ಸುಳ್ಳಿನಿಂದ ಸುಳ್ಳು ಬೆಳೆಯುತ್ತದೆ. ಎಲ್ಲವೂ ಭೂಮಿಯ ಸ್ವಾಭಾವಿಕ ಬೆಳವಣಿಗೆಗಳೇ.

ಮಾನವನಿಗೇ ಬೆಲೆ

ಪ್ರಜಾಪ್ರಭುತ್ವತತ್ವದ ಈ ಕವಿ, ಮಾನವನಿಗೆ ತುಂಬ ಬೆಲೆ ಕೊಟ್ಟನು. ಜಗತ್ಸೃಷ್ಟಿಯ ಕಟ್ಟಡದಲ್ಲಿ ಮನುಷ್ಯನೇ ಬಹು ದೊಡ್ಡ ಭಾಗವೆಂದು ಭಾವಿಸಿದನು. ಮಾನವತ್ವವನ್ನು ಎತ್ತಿ ಹಿಡಿದ ಕವಿಗಳಲ್ಲಿ ಇವನೇ ಹಿರಿಯ. "ಆಹಾ! ಪೌರುಷದ ಆನಂದವೇ, ಯಾರಿಗೂ ಅಧೀನನಾಗದೇ ಯಾರನ್ನೂ ಹೆಚ್ಚೆಂದು ಭಾವಿಸದೆ, ತಿಳಿದ ಅಥವಾ ತಿಳಿಯದ ಯಾವ ಪಶುಶಕ್ತಿಗೂ ಬಾಗದೆ, ತಲೆಎತ್ತಿಕೊಂಡು ಹಗುರವಾದ ಧೀರವಾದ ಹೆಜ್ಜೆಯಿಂದ ನಡೆಯುತ್ತಾ ಕಣ್ಣಿನ ಹೊಳಪಿನ ನೋಟವನ್ನು ಎಲ್ಲೆಡೆಗೂ ಪ್ರಸರಿಸುತ್ತ, ವಿಶಾಲವಾದ ಎದೆ, ತುಂಬಿದ ದನಿಯ ಗಂಭೀರವಾಣಿಯಿಂದ ಜಗತ್ತಿನ ಎಲ್ಲ ವ್ಯಕ್ತಿಗಳಿಗೂ ಎದುರಾಗಿ ನಿನ್ನ ವ್ಯಕ್ತಿತ್ವವನ್ನು ನಿಲ್ಲಿಸು" ಎನ್ನುತ್ತಾನೆ ವಿಟಮಿನ್.

ಪ್ರಾಣಿಗಳೇ ಉತ್ತಮ

ಮನುಷ್ಯ, ಮನುಷ್ಯನನ್ನು ಗುಲಾಮನನ್ನಾಗಿ ಮಾಡಿಕೊಳ್ಳುವುದನ್ನು ವಿಟಮಿನ್ ಸಹಿಸನು. ಇಂತಹ ಅಧೀನ ಜೀವನಕ್ಕಿಂತ ಪ್ರಾಣಿಗಳೇ ಉತ್ತಮವೆಂಬುದು ಅವನ ಅಭಿಪ್ರಾಯ. "ನಾನು ಪ್ರಾಣಿಗಳೊಂದಿಗೆ ಸುಖವಾಗಿ ಇರಬಲ್ಲನೆಂದು ತೋರುತ್ತೆ. ಅವು ಅಷ್ಟು ಶಾಂತವಾಗಿ ಆತ್ಮತುಷ್ಟಿಯುಳ್ಳ

ವಾಗಿವೆ. ನಾನು ಗಂಟೆಗಟ್ಟಲೆ ನಿಂತುಕೊಂಡು ಅವುಗಳನ್ನೇ ನೋಡುತ್ತೇನೆ. ತಮ್ಮ ಸ್ಥಿತಿಯನ್ನು ಕುರಿತು ಅವು ಬೆವರಿ ಗೋಳಿಟ್ಟು ಕೊರಗುವುದಿಲ್ಲ. ಅವು ತಮ್ಮ ಪಾಪಕ್ಕಾಗಿ ಪಶ್ಚಾತ್ತಾಪಪಡುತ್ತ ರಾತ್ರಿ ರಾತ್ರಿ ಜಾಗರಣೆ ಮಾಡು ವುದಿಲ್ಲ. ದೇವರ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಚರ್ಚಿಸಿ ಚರ್ಚಿಸಿ ಅವು ನನ್ನ ತಲೆ ಕೆಡಿಸುವುದಿಲ್ಲ. ಯಾವುದಕ್ಕೂ ಅತೃಪ್ತಿ ಇಲ್ಲ. ಆಸ್ತಿಯನ್ನು ಸಂಪಾದಿಸಬೇಕೆಂಬ ಹುಚ್ಚು ಯಾವುದಕ್ಕೂ ಹಿಡಿದಿಲ್ಲ; ಯಾವುದೂ ಮತ್ತೊಂದನ್ನು ನಮಸ್ಕರಿಸುವುದಿಲ್ಲ. ಅಥವಾ ಸಾವಿರಾರು ವರುಷಗಳ ಹಿಂದೆ ಜೀವಿಸಿದ್ದ ತನ್ನ ಜಾತಿಯವಕ್ಕೆ ನಮಸ್ಕರಿಸುವುದಿಲ್ಲ. ಪ್ರಾಣಿಗಳಲ್ಲಿ, ಮರ್ಯಾದೆಗಾಗಿ ಬಾಳುವ ಪ್ರಾಣಿಗಳಾಗಲೀ ದುಃಖಿತವಾದ ಪ್ರಾಣಿಯಾಗಲೀ ಜಗತ್ತಿನಲ್ಲಿಯೇ ಇಲ್ಲ."

ಈತನ ಕಲೆ

ವಿಟ್‌ಮನ್‌ನ ಅಭಿಪ್ರಾಯದಲ್ಲಿ "ದೇವರು, ಮನುಷ್ಯಪ್ರಪಂಚದಿಂದ ಬೇರೆಯಾಗಿ ಎಲ್ಲಿಯೋ ದೂರದಲ್ಲಿರುವ ಒಂದು ಭಯಂಕರ ಅದ್ಭುತ ವ್ಯಕ್ತಿ ಯಲ್ಲ. ಪೂರ್ಣತೆಗೆ ಹೋರಾಡುತ್ತಿರುವ ಈ ಮಾನವನ ಪ್ರಯತ್ನಗಳಲ್ಲೆಲ್ಲಾ ಅವನೂ ಇದ್ದಾನೆ."

ಇಂತಹ ಕವಿ ಸೃಷ್ಟಿಸುವ ಕಲೆ, ಇತರ ಕವಿಗಳ ಕಲೆಗಿಂತ ಭಿನ್ನವಾಗಿರುವುದು ಸ್ವಾಭಾವಿಕವಾಗಿದೆ. ದೃಷ್ಟಾರನಾದ ವಿಟ್‌ಮನ್‌ನ ಕೃತಿಗಳಲ್ಲಿ ಕಾವ್ಯ ಸೊಬಗನ್ನು ಹುಡುಕುವುದಕ್ಕಿಂತ ಸತ್ಯವನ್ನು ಮಾತ್ರ ಹುಡುಕಬೇಕೆಂದೂ, ಕಾವ್ಯಸೌಂದರ್ಯ ಅಷ್ಟು ಮುಖ್ಯವಾದುದಲ್ಲವೆಂದೂ ಮೇಲುನೋಟಕ್ಕೆ ತೋರಬಹುದು. ವಿಟ್‌ಮನ್‌ನೇ ಕಲೆ ಮತ್ತು ಸೌಂದರ್ಯಶಾಸ್ತ್ರದ ಎಲ್ಲ ನಿಯಮಗಳನ್ನೂ ಮೀರಿ 'ತನ್ನ ಕೃತಿ ಒರಟು, ತುಚ್ಛ, ಕಾಡುಮನುಷ್ಯನ ಸಂಸ್ಕೃತಿ, ಪ್ರಾಕೃತಿಕ' ಎಂದು ಹೇಳಿದ್ದಾನೆ. ಅವನು ಅನೇಕ ಕಡೆ "ನಾನು ಪ್ರಕೃತಿ- ಪ್ರಕೃತಿಯಂತೆ, ಅಸಭ್ಯ ಒರಟ ಎಂದಿದ್ದಾನೆ. ವಿಟ್‌ಮನ್‌ನ ಕೃತಿಗಳು ಅವನ ವ್ಯಕ್ತಿತ್ವದಿಂದ ಬೇರೆಯಲ್ಲವಾಗಿ ಅವನ ಕೃತಿಗಳಲ್ಲಿ ಸೌಂದರ್ಯವೆಷ್ಟು ಎಂಬುದನ್ನು ಪರಿಕಿಸಬೇಕು. ರೂಸೋ, ವರ್ಡ್ಸ್‌ವರ್ತ್ ಇವರೂ ಹಾಗೆಯೇ ಪ್ರಕೃತಿಯಲ್ಲಿಯೇ ಸರ್ವಸ್ವವನ್ನೂ ಕಂಡರು. ಆದರೂ ಇಂದು ಅವರ ಕೃತಿಗಳು ಕಲಾಕೃತಿಗಳೇ ಆಗಿವೆ. ವಿಟ್‌ಮನ್‌ನ ಕೃತಿ

ಉಳಿಯ ಬೇಕಾದರೂ ಕಲಾಕೃತಿಯಾಗಿಯೇ. ಮತ್ತೇನಾಗಿಯೂ ಅದು ಉಳಿಯಲಾರದು. ಯಾಕೆಂದರೆ ಪ್ರಕೃತಿಗಿಂತ ಕಲೆ ಹಿರಿದು; ಪ್ರಕೃತಿಯ ಕೃತಿಗಿಂತ ಕಲಾಕೃತಿ ಹೆಚ್ಚು ಪೂರ್ಣ ಮತ್ತು ಹೆಚ್ಚು ಗಂಭೀರ, ಹೆಚ್ಚು ಮಹತ್ವವಾದುದು. "ಕಲೆ ಮತ್ತೇನೂ ಅಲ್ಲ, ಪ್ರಕೃತಿಯೇ. ಆದರೆ ನೋಡು ವವನ ಸ್ವಭಾವಕ್ಕೆ ಅನುಗುಣವಾಗಿ" ಎಂದು ಫ್ರೆಂಚ್ ಕಾದಂಬರಿಕಾರ ಎಮಿಲ್ ಜೊಲಾ ಹೇಳಿದ್ದಾನೆ. ದೃಷ್ಟಾರನ ಈ ಸ್ವಭಾವದಿಂದ, ಅಥವಾ ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಕವಿಯ ವ್ಯಕ್ತಿತ್ವದಿಂದ, ಪ್ರಕೃತಿ ಯಲ್ಲಿರುವುದು ಬರಿಯ ಛಾಯಾಗ್ರಾಹ ಯಂತ್ರದ ವರದಿಯಾಗದೆ, ಜೀವನ ದಲ್ಲಿಯ ವಾಸ್ತವಿಕ ಸಂಗತಿಗಳಿಗಿಂತ ಹೆಚ್ಚು ವಾಸ್ತವಿಕವೂ ಸ್ಪಷ್ಟವೂ ಆಗು ತ್ತದೆ. ನಿಜವಾದ ಕಲಾಕೃತಿಯ, ಮೂಲಕ ನಾವು ಒಂದು ವ್ಯಕ್ತಿಯ ಆತ್ಮಕ್ಕೆ ಪ್ರವೇಶ ಹೊಂದುತ್ತೇವೆ. ಆ ಕೃತಿಯು ಬಾಳಿನ ಅಸಂಖ್ಯಾತ ವೈವಿಧ್ಯಗಳ ಕಡೆಗೆ ಬೆಳಕನ್ನು ಎಸೆಯುತ್ತದೆ. ಆದುದರಿಂದ ಯಾವನೊಬ್ಬ ಕವಿಯ ಕಲೆ ಯಾವ ಬಗೆಯದೆಂದು ತಿಳಿಯಬೇಕಾದರೆ, ಆ ಕಲೆಯನ್ನು ಸೃಷ್ಟಿಸುವ ಮತ್ತು ಆ ಕಲೆಯ ಕೇಂದ್ರದಲ್ಲಿರುವ ವ್ಯಕ್ತಿತ್ವ ಎಂತಹುದೆಂಬುದನ್ನು ನಾವು ಅರಿಯ ಬೇಕು.

ವಿಟಮಿನ್, ಪ್ರಜಾಪ್ರಭುತ್ವವಾದಿ. ಆದುದರಿಂದ ಅವನ ವ್ಯಕ್ತಿತ್ವ ಇತರ ಕವಿಗಳ ವ್ಯಕ್ತಿತ್ವಕ್ಕಿಂತ ಹೆಚ್ಚು ತೊಡಕಾದುದು, ವೈಭವಪೂರ್ಣವಾದುದು. ಸಾಧಾರಣವಾಗಿ ಕಲಾವಿದರೆಲ್ಲ ವ್ಯಕ್ತಿವ್ಯಕ್ತಿಗಳ ಸಂಬಂಧ, ಸ್ವಭಾವಕ್ರಿಯೆ, ಪ್ರತಿಕ್ರಿಯೆ ಇವುಗಳನ್ನೇ ತಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸುತ್ತಾರೆ. ಆದರೆ ವಿಟಮಿನ್‌ನು ಈ ಪ್ರತಿಕ್ರಿಯೆಗಳನ್ನು ಇನ್ನೂ ಬೃಹತ್ತಾದ ವಿಸ್ತಾರವಾದ ವ್ಯಕ್ತಿ ಮತ್ತು ಮನುಷ್ಯಪ್ರಪಂಚದ ಆವರಣದಲ್ಲಿ ಪ್ರತಿಬಿಂಬಿಸುತ್ತಾನೆ. ಮನುಷ್ಯ, ಮನುಷ್ಯನಿಗಿರುವ ಕೃತಿ ಪ್ರತಿಕ್ರಿಯೆಗಳಿಗಿಂತ, ಮನುಷ್ಯ ಮತ್ತು ಪ್ರಕೃತಿಗಳ ನಡುವೆ ಇರುವ ಕ್ರಿಯೆಪ್ರತಿಕ್ರಿಯೆ ಹೆಚ್ಚು. ವರ್ಡ್ಸ್‌ವರ್ತ್‌ಗೆ ಹಿಂದೆಯೂ ಪ್ರಕೃ ತಿಯ ಕವಿಗಳಿದ್ದರು. ಅಲ್ಲಲ್ಲಿ ಪ್ರಕೃತಿ ಸೌಂದರ್ಯಭಾವನೆ, ಮನೋನಿಲವು ಅವರ ಕೃತಿಗಳಲ್ಲಿ ಕಾಣುತ್ತಿದೆ. ಆದರೆ ವರ್ಡ್ಸ್‌ವರ್ತ್‌ನಂತೆ ಪ್ರಕೃತಿಯನ್ನು ನೋಡಿ ದವರು ಯಾರೂ ಇಲ್ಲ. ಪ್ರಕೃತಿಯ ಒಂದೊಂದು ಉಸಿರೂ ವರ್ಡ್ಸ್‌ವರ್ತ್‌ಗೆ ಒಂದೊಂದು ಸಂದೇಶವಾಯಿತು. ಅದೇ ರೀತಿ, ವಿಟಮಿನ್‌ನ ಹಿಂದೆಯೂ

ಮಾನವ ಜನಾಂಗವನ್ನೇ ಪೂರ್ಣವಾಗಿ ತಮ್ಮ ಕಾವ್ಯಪ್ರಪಂಚ ವಸ್ತುವಾಗಿ ಮಾಡಿಕೊಂಡವರು ಇರಲಿಲ್ಲವೆಂದಲ್ಲ. ಆದರೆ ವಿಟಮಿನ್ ಉಂಟುಮಾಡುವ, "ಬ್ರಹ್ಮಾಂಡದಲ್ಲಿ ವ್ಯಕ್ತಿ ವ್ಯಕ್ತಿಯಲ್ಲಿ ಸಮಷ್ಟಿ" ಎಂಬ ಸ್ವಾಭಾವಿಕ ಭಾವನೆಯನ್ನು ಉಂಟುಮಾಡಲು ಅವರು ಶಕ್ತರಾಗಲಿಲ್ಲ. ಗರುಕೆಯ ದಳಗಳ ಮೊದಲನೆಯ ಪದ್ಯದಲ್ಲಿಯೇ ವಿಟಮಿನ್‌ರ ಕವಿತೆಗಳ, ಕೇಂದ್ರಸಂದೇಶ ವ್ಯಕ್ತವಾಗಿದೆ. "ನಾನು ವ್ಯಕ್ತಿಯನ್ನು ಕುರಿತು ಹಾಡುತ್ತೇನೆ. ಆದರೆ ಸಮಸ್ತ ಮನುಷ್ಯ ಜನಾಂಗಕ್ಕೂ ಅನ್ವಯಿಸಿ ಪ್ರಜಾಪ್ರಭುತ್ವವನ್ನು ಹಾಡುತ್ತೇನೆ."

ಕವಿಯ ವ್ಯಕ್ತಿತ್ವ

ವಿಟಮಿನ್‌ನ ಅಭಿಪ್ರಾಯದಲ್ಲಿ ವ್ಯಕ್ತಿಯೇ ಪ್ರಜಾಪ್ರಭುತ್ವದ ಅವತಾರ. ವ್ಯಕ್ತಿಯ ವ್ಯಕ್ತಿತ್ವವನ್ನು ಅಳಿಸದ ಹೊಸ ಪ್ರಜಾಪ್ರಭುತ್ವಗಳ ಸ್ಥಾಪನೆಯೇ ವಿಟಮಿನ್‌ನ ಗುರಿಯಾಗಿತ್ತು. ಜಗತ್ತು, ಬರಿಯ ಮನುಷ್ಯರ ಪ್ರಜಾಪ್ರಭುತ್ವ ಮಾತ್ರವಲ್ಲ. ಅದರಲ್ಲಿ ಸಸ್ಯಗಳು ಪ್ರಾಣಿಗಳು ಎಲ್ಲವೂ ಸೇರಿವೆ. ವ್ಯಕ್ತಿಯು ಸಮಷ್ಟಿಜೀವನದ ಸ್ತನ್ಯಪಾನಮಾಡಿ ಬದುಕಬೇಕು.

"ವಿಟಮಿನ್‌ನ ಕವಿತೆ ನಾಜೂಕಾದುದಲ್ಲ, ನವಿರಾದುದಲ್ಲ; ಅದು ಗಾನವಲ್ಲ" ಎಂಬುದು ಸರಿಯಲ್ಲ. ಸಮುದ್ರವು ರಾಗಗಳಿಗನುಸಾರವಾಗಿ ಹಾಡುವುದೇ? ಕಾಡುಮರಗಳ ಎಲೆಗಳು ತಾವು ಲಯಬದ್ಧವಾಗಿ ಶ್ರುತಿಗನುಸಾರವಾಗಿ ಅಲುಗಾಡುವುವೇ? ಈ ಮಹತ್ತುಗಳಾದ ಪ್ರಕೃತಿಕಾರ್ಯಗಳಲ್ಲಿ ಗಾನವಿಲ್ಲವೇ? ಹಾಗೆಯೇ ಗರುಕೆಯ ದಳ (ಲೀವ್ಸ್ ಆಫ್ ಗ್ರಾಸ್) ಗಳಲ್ಲಿಯೂ ತಾಳವೂ ಗಾನವೂ ಇದ್ದೇ ಇದೆ. ಪ್ರಕೃತಿಯ ಕವಿಯಾದ ಅವನು ತಾನು ಅಸಂಸ್ಕೃತನೆಂದು ಹೇಳಿಕೊಂಡಿದ್ದಾನೆ. ಭೂಮಿಯೂ ಪ್ರಕೃತಿಯೂ ಅಸಂಸ್ಕೃತವೇ. ಜಗತ್ತಿನ ಸ್ತ್ರೀ ಪುರುಷರ ಹೆಚ್ಚುಭಾಗ ಅಸಂಸ್ಕೃತರೇ. ವಿಟಮಿನ್‌ನು ಅದನ್ನು ಒಪುತ್ತಾನೆ. ಅದನ್ನೇ ಆತ್ಮಶಕ್ತಿಯಾಗಿ ಪರಿಗಣಿಸಲು ಪ್ರಯತ್ನಿಸುತ್ತಾನೆ.

"ದೇಹದ ಕವಿಯೂ ನಾನೇ, ಆತ್ಮದ ಕವಿಯೂ ನಾನೇ. ಸ್ವರ್ಗದ ಆನಂದವೂ ನನ್ನಲ್ಲಿದೆ, ನರಕದ ಸಂಕಟವೂ ನನ್ನಲ್ಲಿದೆ. ಮೊದಲನೆಯದನ್ನು ಕಸಿಮಾಡಿ ನನ್ನಲ್ಲಿ ಹೆಚ್ಚಿಸಿ ಕೊಳ್ಳುತ್ತೇನೆ. ಎರಡನೆಯದನ್ನು ಹೊಸಮಾತಾಗಿ ಬದಲಾಯಿಸುತ್ತೇನೆ. ನಾನು ಹೆಣ್ಣಿನ ಕವಿ ಹೇಗೆಯೊ, ಹಾಗೆಯೇ ಗಂಡಿನ ಕವಿಯೂ ಹೌದು. ಗಂಡು ಆಗಿರು

ವುದು ಎಷ್ಟು ಮಹತ್ತೊ ಹೆಣ್ಣು ಆಗುವುದೂ ಅಷ್ಟೇ ಮಹತ್ತೆಂದು ನಾನು ಹೇಳುತ್ತೇನೆ. ತಾಯಿಗಿಂತ ಮಹತ್ತಾದುದು ಯಾವುದೂ ಇಲ್ಲ. ನಾನು ಒಳ್ಳೆಯವರ ಕವಿ ಮಾತ್ರವಲ್ಲ. ಕೆಟ್ಟವರ ಕವಿಯೂ ಹೌದು. ನಿಷೇಧಿಸಿದ ಧ್ವನಿಗಳೆಲ್ಲ ನನ್ನ ಮೂಲಕ ಧ್ವನಿಗೊಡುತ್ತವೆ. ಬಹು ಕಾಲದಿಂದ ಮೂಕವಾಗಿದ್ದ ಧ್ವನಿಗಳೆಲ್ಲ ನನ್ನ ಮೂಲಕ ಮಾತಾಡುತ್ತವೆ. ಇಂದ್ರಿಯ ಚಾಪಲ್ಯಗಳೆಲ್ಲ ನನ್ನ ಮೂಲಕ ಧ್ವನಿಗೊಡುತ್ತಿವೆ. ಅವಕುಂಠನದಿಂದ ಆಚ್ಛಾದಿತವಾದ ಎಲ್ಲ ಕ್ರೂರ ಒರಟು ವಿಕಾರಧ್ವನಿಗಳ ಅವಕುಂಠನವನ್ನು ನಾನು ಆಚೆಗೆ ತೆರೆಯುತ್ತೇನೆ, ಅಸಭ್ಯ ಅಶ್ಲೀಲ ದುಷ್ಟಧ್ವನಿಗಳನ್ನೆಲ್ಲ ನಾನು ಬದಲಾಯಿಸಿ ಶುದ್ಧಿಪಡಿಸುತ್ತೇನೆ."

ಕವಿ, ಸಮಸ್ತ ಜಗತ್ತಿನೊಂದಿಗೂ ತನ್ನನ್ನು ಒಂದಾಗಿ ಮಾಡಿಕೊಂಡಿರುವುದರಿಂದ ಅವನು ಯಾವುದನ್ನೂ ಮುಚ್ಚುವುದಿಲ್ಲ. ಬೂಟಾಟಿಕೆ, ಕೇಡು ಇಲ್ಲವೆಂದು ಅವನು ಹೇಳುವುದಿಲ್ಲ. ಕೆಡುಕೂ ಪಾಪವೂ ಪ್ರಕೃತಿಯಲ್ಲಿಯೇ ಇರುವುದರಿಂದ ಅವನ್ನು ಧೈರ್ಯವಾಗಿ ಒಪ್ಪಿಕೊಂಡು ಅಂಗೀಕರಿಸಬೇಕೆಂದು ಅವನು ಹೇಳುತ್ತಾನೆ.

" ನ್ಯಾಯಾಲಯದಲ್ಲಿ ವಿಚಾರಣೆಗೆ ನಿಂತಿರುವ ಅಪರಾಧಿಗಳೇ, ಸೆರೆಮನೆಯಲ್ಲಿರುವ ಖೈದಿಗಳೇ, ಮರಣದಂಡನೆಗೆ ಒಳಗಾಗಿರುವವರೇ, ಕಬ್ಬಿಣದ ಸರಪಣಿ ಕೋಳಗಳಿಂದ ಬಂಧಿತರೆ, ನಿಮ್ಮೊಂದಿಗೆ ಆಪಾದಿತನಾಗಿ ಅಥವಾ ಖೈದಿಯಾಗಿ ನಾನೂ ಯಾಕಿಲ್ಲ ? ಶಾಂತವಾಗಿ ತೋರುತ್ತಿರವ ನನ್ನ ಮುಖದ ಹಿಂದೆ, ಹೃದಯದಲ್ಲಿ ಪಿಶಾಚಿ ನರ್ತನ ನಡೆಯುತ್ತಿವೆ ಲೈಂಗಿಕ ವೃತ್ತಿಯ ಅತಿರೇಕಗಳನ್ನು ನಾನು ಮೆಚ್ಚುತ್ತೇನೆ. ನೀತಿಹೀನರೊಂದಿಗೆ ನಾನು ತೀವ್ರ ಪ್ರೇಮದಿಂದ ಇದ್ದೇನೆ, ನಾನು ಅವರ ಪೈಕಿ ಒಬ್ಬ. ಕಳ್ಳರಿಗೂ ವೇಶ್ಯೆಯರಿಗೂ ಸೇರಿದವನೂ ನಾನು. ಇನ್ನು ಮುಂದೆ ಅವರನ್ನು ನಾನು ಕೈಬಿಡುವುದಿಲ್ಲ. ಯಾಕೆಂದರೆ ನನ್ನನ್ನೇ ನಾನು ಕೈಬಿಡುವುದು ಸಾಧ್ಯವೆ? "

ಮೇಲಿನ ಸ್ಥೂಲವಾದದಿಂದ, ವಿಟಮಿನ್ ಜಗತ್ತನ್ನು ಇದ್ದಂತೆ ಒಪ್ಪಿದನೆಂದು ಅರ್ಥವಾಗಬಹುದು. ಉತ್ತಮಗುಣಗಳ ಪ್ರಕಾಶದ ಸಾಧನೆ ಮತ್ತು ಕೇಡಿಗೆ ಎದುರಾಗಿ ಹೋರಾಡುವ ಪ್ರವೃತ್ತಿಯನ್ನೇ ವಿಟಮಿನ್ ಅಪೇಕ್ಷಿಸಲಿಲ್ಲವೆಂದು ತೋರಬಹುದು. ಆದರೆ ವಿಟಮಿನ್‌ನ ಅಭಿಪ್ರಾಯ ಅದಲ್ಲ. ಮನುಷ್ಯನಲ್ಲಿರುವ ದುಷ್ಟಪ್ರವೃತ್ತಿಯನ್ನು ಮುಚ್ಚಿಕೊಳ್ಳುವುದರಿಂದಾಗಲೀ ಅದು ಅಲ್ಲಿರುವುದನ್ನು ಉದಾಸೀನವಾಗಿ ನೋಡುವುದರಿಂದಾಗಲೀ, ಆ ದುಷ್ಟ ಪ್ರವೃತ್ತಿಗಳು ನಾಶವಾಗುವುದಿಲ್ಲವೆಂಬುದು ಈ ಕವಿಯ ಮತ. ಮನುಷ್ಯ ಪ್ರಪಂಚವೇ ನನ್ನದೆಂದ ಮೇಲೆ ಅದರಲ್ಲಿರುವ ದುಷ್ಟಪ್ರವೃತ್ತಿ, ಕೇಡು, ಅಸತ್ಯ

ಗಳನ್ನು ಒಪ್ಪಲೇಬೇಕು. ಅಸತ್ಯನ್ನು ಅಂಗೀಕರಿಸಿ ಅದನ್ನು ಪ್ರೇಮದಿಂದ ತಿದ್ದಲು ಸಾಧ್ಯವೇ ಹೊರತು, ತಿರಸ್ಕಾರ ಅಥವಾ ತನ್ನ ಪಾಡಿಗೆ ತಾನು ಇರುವ ಔದಾಸೀನ್ಯದಿಂದಲ್ಲ. ರಷ್ಯನ್ ಕಾದಂಬರಿಕಾರ ಡಿಸ್ಟೊವಾಟಾಸ್ಕಿಯ ಅಭಿಪ್ರಾಯದಂತೆಯೇ ವಿಟಮಿನ್‌ನ ಅಭಿಪ್ರಾಯವೂ.

ಯಾವುದೂ ಕೇಡಲ್ಲ

ಒಂದು ವಿಷಯ ಆಶ್ಚರ್ಯವಾಗಿದೆ. ಮಗು ಯಾವುದನ್ನೂ ಕೇಡೆಂದು ಭಾವಿಸುವುದಿಲ್ಲ. ಪೂರ್ಣಜ್ಞಾನಿಯೂ ವಿವೇಕಿಯೂ ಯಾವುದನ್ನೂ ಕೇಡೆಂದು ಭಾವಿಸುವುದಿಲ್ಲ. ಯಾಕೆಂದರೆ, ಪೂರ್ಣಜ್ಞಾನಿಗೆ ಕೇಡು ಎಂಬುದು ಒಳ್ಳೆಯದರ ಮಾರ್ಗವನ್ನು ಕುರಿತು ಹೆಣಗುತ್ತಿರುವ ಪ್ರವೃತ್ತಿ ಎಂದು ಗೊತ್ತು. ಈ ವಿಷಯವನ್ನೇ ಇನ್ನೊಂದು ಕವನದಲ್ಲಿ ವಿಟಮಿನ್ ಹೀಗೆ ಹೇಳಿದ್ದಾನೆ.

"ನನ್ನ ಆಲೋಚನೆ ಜಗತ್ತನ್ನೆಲ್ಲ ಆಳೆಯಿತು. ಅಲ್ಲಿ ಕಣ್ಣಿಗೆ ಬಿದ್ದ ಸತ್ ಸ್ವಲ್ಪವೇ. ಅದು ಅಮೃತತ್ವದಲ್ಲಿ ಲೀನವಾಗಿ ಹೋಯಿತು. ಅಸತ್ ವಿಶಾಲವಾಗಿ ಪರಂಪರೆಯಾಗಿ ಅನಂತವಾಗಿ ಕಣ್ಣಿಗೆ ಬಿದ್ದಿತು. ಆದರೆ ಅದೂ ಮಡಿದು ನಾಶವಾಗಿ ಹೋಯಿತು."

ಪಾಶ್ಚಾತ್ಯ ಲೇಖಕರು ವಿಟಮಿನ್‌ರನ್ನು ಋಷಿ, ವರಕವಿ, ದೃಷ್ಟಾರ ಎಂದು ಕರೆದಿದ್ದಾರೆ. ಎಡ್ವರ್ಡ್ ಕಾರ್ಪೆಂಟರರು "ವಿಟಮಿನ್‌ನು ಕಾವ್ಯದ ಶಾಶ್ವತ ಗಿರಿಶಿಖರ. ಆತನು ದೇವಾಂಶ ಸಂಭೂತ" ಎಂದಿದ್ದಾರೆ. ಆದರೆ ವಿಟಮಿನ್ ಮಾತ್ರ ಜಗತ್ತಿನ ಪ್ರತಿ ಪ್ರಾಣಿಯೂ – ಅದು ಸುಗುಣಿಯಾಗಲೀ ದುರ್ಗುಣಿಯಾಗಲೀ ಕ್ರೂರಿಯಾಗಲೀ ನೀಚನಾಗಲೀ – ದೇವತೆ ಎಂದೇ ಪರಿಗಣಿಸುತ್ತಾನೆ. ಪ್ರಕೃತಿಯನ್ನು ನೋಡಿದ ಕೂಡಲೆ ಅದರ ಪ್ರತಿಕ್ರಿಯೆ ವರ್ಡ್ಸ್‌ವರ್ತ್‌ಗೆ ನಾನಾ ತರಹವಾಗಿ ಆಗುತ್ತಿದ್ದಿತು. ಒಂದು ಸಣ್ಣ ವಸ್ತುವಿನ ಹಿಂದೆ ಅವನಿಗೆ ಒಂದು ಜಗತ್ತೇ, ವೇದಾಂತವೇ ತೋರುತ್ತಿದ್ದಿತು. ಹಾಗೆಯೇ ವಿಟಮಿನ್‌ಗೆ ಮನುಷ್ಯ ಎಂಬುದೇ ಒಂದು ಅದ್ಭುತ ಪ್ರಪಂಚವಾಗಿತ್ತು. ಮನುಷ್ಯ ಎಂಬ ಮಾತನ್ನು ಕೇಳಿದೊಡನೆಯೇ ಅವನಿಗೆ ರೋಮಾಂಚವಾಗುತ್ತಿದ್ದಿತು.

ಅಪರಿಚನೇ, ನನ್ನೊಂದಿಗೆ ಮಾತನಾಡಬೇಕೆಂದು ನಿನಗೆ ತೋರುವುದೇ ಹಾಗಾದರೆ ನೀನು ಯಾಕೆ ಮಾತನಾಡಬಾರದು? ನಾನು ಯಾಕೆ ಮಾತನಾಡಬಾರದು? ಇದುವರೆಗೆ ಜಗತ್ತಿನಲ್ಲಿ ಬಾಳಿದ ನಾನಾ ಜನಾಂಗಗಳು ರಾಷ್ಟ್ರಗಳು ಅವೆಲ್ಲ ಎಲ್ಲಿ?

ಒಂದೂ ಇಲ್ಲ. ಆದರೆ ಎಲ್ಲವೂ ಇವೆ ಆ ಜನರು ದೂರವಲ್ಲಿದ್ದಾರೆ; ಆದರೆ ಹತ್ತಿರವೂ ಇದ್ದಾರೆ. ನಾನು ಇಂದು ಇರುವಂತೆ ಅವರೂ ಇದ್ದಾರೆ. ನಾವು ಬರಿಯ ಆಕಾರ ಸುಖ ದುಃಖ ಮಾತಿನಪ್ರಾಣಿಗಳು ಮಾತ್ರವಲ್ಲ. ನಾನು ನಿಮ್ಮನ್ನು ಒಳಹೊಕ್ಕು ನೋಡಿದಂತೆ ನಿಮ್ಮ ಬಾಹ್ಯವೇಷಗಳಲ್ಲಿ ಮರೆಯಾಗಿ, ನೀವು ಆತ್ಮ ಮತ್ತು ದೇಹ ಮಾತ್ರ ವೆಂದು ನನಗೆ ಕಾಣುವುದು.

“ನಾನು ಎಲ್ಲವನ್ನೂ ಬಿಟ್ಟುಬಂದು ನಿಮಗಾಗಿ ಕವಿತೆಗಳನ್ನು ಮಾಡುತ್ತೇನೆ. ನಿಮ್ಮನ್ನು ಯಾರೂ ಅರ್ಥಮಾಡಿಕೊಂಡಿಲ್ಲ. ನಾನು ಮಾಡಿಕೊಂಡಿದ್ದೇನೆ. ನಿಮ್ಮ ವಿಷಯದಲ್ಲಿ ಯಾರೂ ನ್ಯಾಯವಾಗಿ ನಡೆದಿಲ್ಲ. ನಿಮ್ಮಲ್ಲಿ ಎಲ್ಲರೂ ದೋಷವನ್ನು ಕಂಡಿದ್ದಾರೆ. ನನಗೆ ನಿಮ್ಮಲ್ಲಿ ದೋಷ ಕಾಣುವುದಿಲ್ಲ. ಎಲ್ಲರೂ ನಿಮ್ಮನ್ನು ಅಧೀನನನ್ನಾಗಿ ಮಾಡಿಕೊಳ್ಳುತ್ತಾರೆ. ನಾನು ಹಾಗೆ ಮಾಡಿಕೊಳ್ಳಲು ಎಂದಿಗೂ ಒಪ್ಪುವುದಿಲ್ಲ. ನಿಮಗೆ ನೀವೇ ಒಡೆಯರು. ನಿಮ್ಮ ಮೇಲೆ ಯಾವ ಒಡೆಯರನ್ನೂ ಯಜಮಾನರನ್ನೂ ದೇವರನ್ನೂ ನಾನು ಒಪ್ಪುವುದಿಲ್ಲ.”

ಅದ್ವೈತ ವಾದ

ಇದು ಸ್ವಲ್ಪ ಹೆಚ್ಚು ಕಡಿಮೆ ಭಾರತದ ಅದ್ವೈತವಾದದಂತೆ ತೋರುತ್ತದೆ. “ಸರ್ವಂ ಖಲ್ವಿದಂ ಬ್ರಹ್ಮ” ಎಂಬ ಮಾತಿನ ದೂರದ ಛಾಯೆಯ ನೆರಳು. ಈ ಮಹನ್ ಬೃಹತ್‌ಭಾವನೆ ವಿಟಮಿನ್‌ಗೆ ಹೇಗೆ ಬಂದಿರಬಹುದು ಎಂಬುದು ಆಶ್ಚರ್ಯವಾಗಿದೆ. ಎಮರ್‌ಸನ್, ವಿಟಮಿನ್‌ನ ಸ್ನೇಹಿತನಾಗಿದ್ದನು. ಆತನ ಮೂಲಕ ವಿಟಮಿನ್‌ಗೆ ಭಾರತದ ವೇದಾಂತದ ಪರಿಚಯವಾಗಿದ್ದಿರಬಹುದು. ವಿಟಮಿನ್ ತನ್ನ ಪದ್ಯಗಳಲ್ಲಿ ಎರಡು ಮೂರು ಕಡೆ ಮಾಯೆ ಎಂಬ ಪದವನ್ನು ಉಪಯೋಗಿಸಿದ್ದಾನೆ. ಭಾರತವನ್ನು ಕುರಿತು ಅವನು ಬರೆದಿರುವ ಕವನದಲ್ಲಿ, ಭಾರತದ ಪ್ರಾಚೀನ ಇತಿಹಾಸ ಸಂಸ್ಕೃತಿಗಳಲ್ಲಿ ತನಗಿರುವ ಗೌರವವನ್ನು ವ್ಯಕ್ತಪಡಿಸಿದ್ದಾನೆ. ಆದರೆ, ಮನುಷ್ಯ ಜಗತ್ತೆಲ್ಲ ಒಂದಾಗಿ ತನ್ನ ಗುರಿಗಾಗಿ ಸಾಧನೆಮಾಡಬೇಕೆಂಬ ಧ್ಯೇಯವನ್ನು, ವಿಟಮಿನ್, ಭಾರತ ವೇದಾಂತದಿಂದ ತೆಗೆದುಕೊಳ್ಳಲಿಲ್ಲ. ವ್ಯಕ್ತಿ ಜೀವನ ಮತ್ತು ಸಮಷ್ಟಿಜೀವನ ಇವೆರಡೂ ಅವನಲ್ಲಿ ಸಮರಸವಾಗಿ ತೋರುತ್ತವೆ. ಒಂದೇ ಮತ್ತೊಂದು. ವ್ಯಕ್ತಿಯ ಜೀವನ ಸಮೃಷ್ಟಿಜೀವನದಲ್ಲಿಯೇ ಪೂರ್ಣತೆ ಪಡೆಯುವುದು. ಇಲ್ಲದಿದ್ದರೆ ಅದು ಬೆಳೆಯದೆ ಬಾಡಿ ಸಂಕುಚಿತವಾಗುವುದು. ಮಹದ್ ವ್ಯಕ್ತಿಗಳನ್ನು ಸೃಷ್ಟಿಸದಿದ್ದಲ್ಲಿ ಪ್ರಜಾತಂತ್ರ (ಡೆಮಾಕ್ರಸಿ) ವ್ಯರ್ಥವಾದಂತೆಯೇ. ರಾಷ್ಟ್ರವೆಂದರೆ ಯಾವುದೆಂದು ಪ್ಲೇಟೋ ಹೇಳಿದನೋ, ವಿಟಮಿನ್‌ನ

ಅಭಿಪ್ರಾಯವೂ ಅದೇ. "ಎಲ್ಲ ಸಂಸ್ಥೆಗಳೂ, ಮನುಷ್ಯರಲ್ಲಿ ಎಲ್ಲ ಸದ್ಗುಣಗಳನ್ನೂ ಬೆಳೆಸುವುದಕ್ಕಾಗಿಯೇ." ರಾಜತಂತ್ರ ಕೊನೆಯಲ್ಲಿ ನೀತಿಯ ಬಲವೇ. ರಾಷ್ಟ್ರದ ಪ್ರತಿಯೊಂದು ಕಾನೂನಿನ ಗುರಿಯೂ, ವ್ಯಕ್ತಿಜೀವನವನ್ನು ಪೂರ್ಣಗೊಳಿಸುವುದಾಗಿರಬೇಕು. ವ್ಯಕ್ತಿತ್ವಕ್ಕೆ ಕುಂದಕ ತಂದ ಯಾವ ಕಾನೂನೂ ಒಳ್ಳೆಯ ಕಾನೂನು ಅಲ್ಲ." ವಿಟ್‌ಮನ್ ವ್ಯಕ್ತಿಸ್ವಾತಂತ್ರ್ಯದ ತಡೆಯನ್ನು ಒಪ್ಪಲಿಲ್ಲ.

"ನಾನು ಸಂಸ್ಥೆಗಳನ್ನು ನಾಶಮಾಡಲು ಹೊರಟಿರುವನೆಂದು ನನ್ನ ಮೇಲೆ ಬಂದ ಆಪಾದನೆ ನನಗೆ ತಿಳಿಯಿತು. ನಿಜವಾಗಿ ನಾನು ಸಂಸ್ಥೆಗಳ ಮಿತ್ರನೂ ಅಲ್ಲ, ಶತ್ರುವೂ ಅಲ್ಲ. ಅವುಗಳಿರುವುದರಿಂದ ನನಗೆ ಪ್ರಯೋಜನವೇನು? ನಾಶವಾಗುವುದರಿಂದ ನಷ್ಟವೇನು? ಜಗತ್ತಿನಲ್ಲೆಲ್ಲ — ನಗರಗಳು, ಬಯಲು, ಸಮುದ್ರ ಎಲ್ಲೆಲ್ಲು— ಪ್ರೇಮಸಾಮ್ರಾಜ್ಯವನ್ನು ಸ್ಥಾಪಿಸುವುದೇ ನನ್ನ ಗುರಿ."

ಪ್ರಜಾತಂತ್ರ, ವ್ಯಕ್ತಿಗಳನ್ನು ಉತ್ತಮಗೊಳಿಸುವುದು. ಪ್ರಜಾತಂತ್ರದಲ್ಲಿಯೇ ವ್ಯಕ್ತಿ ತನ್ನ ಗುರಿಯನ್ನು ಸಾಧಿಸುವುದು. ಈ ಧ್ಯೇಯ ವಿಟ್‌ಮನ್‌ರ ಕವನಗಳ ಗುರಿ. ಇದು ಅರ್ಥವಾಗದಿದ್ದರೆ, ವಿಟ್‌ಮನ್‌ರ ಕೃತಿಗಳು ಪರಸ್ಪರ ವಿರುದ್ಧಗಳಾದ ಹರಟೆಗಳಾಗಿಯೇ ತೋರುವುವು. ಇದು ಅರ್ಥವಾದ ಕೂಡಲೇ ವಿಟ್‌ಮನ್ ಹಳೆಯ ಮಾತುಗಳಿಗೆ ಹೊಸ ಬೆಲೆ ಕಟ್ಟುತ್ತಿರುವುದು ಗೋಚರವಾಗುತ್ತದೆ. ನೀತಿಯ ಕೈಪಿಡಿಯನ್ನು, ಬರಿಯ ಒಳ್ಳೆಯದು ಕೆಟ್ಟದು ಎಂಬ ಸಾಮಾನ್ಯ ನಿಯಮದಿಂದಲೇ ನಿರ್ಣಯಿಸುವುದು ಸಾಧ್ಯವಿಲ್ಲ. ಬಲಾತ್ಕಾರದಿಂದ ಮನುಷ್ಯನನ್ನು ನೀತಿಯುತನನ್ನಾಗಿ ಮಾಡುವುದು ಸಾಧ್ಯವಿಲ್ಲ. ಮನುಷ್ಯ ಜಗತ್ತೆಲ್ಲ ಅಣ್ಣತಮ್ಮಂದಿರು, ಎಂಬ ಭಾವನೆಯಲ್ಲಿಯೇ ನೀತಿ, ಅಡಗಿರುವುದು. ಕೆಡಕು ಶಾಶ್ವತವಾದ ಸತ್‌ನಲ್ಲಿ ಲೀನವಾಗುತ್ತದೆ. ವೇದಾಂತ, ಕಂಡುಹಿಡಿಯ ಬೇಕಾದುದು ಇದನ್ನೇ. "ವೇದಾಂತಿಗೆ" ಎಂಬ ಕವನದಲ್ಲಿ ಕವಿಯು, ಮನುಷ್ಯ ಮನುಷ್ಯನನ್ನು ಪ್ರೀತಿಸುವುದು, ಪತಿಪತ್ನಿಯರ ಪ್ರೇಮ, ಮಕ್ಕಳು ತಂದೆತಾಯಿಯರ ಪ್ರೇಮ, ಒಂದುದೇಶ ಮತ್ತೊಂದು ದೇಶವನ್ನು ಪ್ರೀತಿಸುವುದು—ಇದೇ ವೇದಾಂತಿಯು ಪ್ರತಿಪಾದಿಸಬೇಕಾದ ಸತ್ಯ ಎನ್ನುತ್ತಾನೆ. ಕಲೆಯ ತಿರುಳು ಬರಿಯ ತಂತ್ರವಲ್ಲ. ಕಲೆ ಜೀವನದ ಅನುಭವದ ಧ್ವನಿ, ಜೀವನದ ಅನ್ವೇಷಣೆ. "ಜಗತ್ತಿನಿಂದ ಬೀಳ್ಕೊಳ್ಳುವುದು" ಎಂಬ ಕವನದಲ್ಲಿ ಜಗತ್ತಿಗೆ ಕವಿಯ ಸಂದೇಶವನ್ನು ಕುರಿತು ವಿಟ್‌ಮನ್ ಹೀಗೆ ಹೇಳುತ್ತಾನೆ:

ಕವಿಯಂದು ಸಮರಸ ಬಾಳು. ಅವನು ಪ್ರತಿಯೊಂದು ವಸ್ತು ಮತ್ತು ಗುಣಕ್ಕೆ ಎಷ್ಟು ಬೆಲೆ ಕೊಡಬೇಕೋ ಅಷ್ಟನ್ನೇ ಕೊಡುತ್ತಾನೆ. ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ. ವಿವಿಧತೆಯಲ್ಲಿ ಏಕತ್ವವುಂಟುಮಾಡುವವನು ಅವನು. ಎಲ್ಲ ಸಮಸ್ಯೆಗಳಿಗೂ ಅವನು ಉತ್ತರ. ಶಾಂತಿಯ ಕಾಲದಲ್ಲಿ ಶಾಂತಿ, ವೈಭವ, ಮಿತವ್ಯಯ, ದೊಡ್ಡ ದೊಡ್ಡ ನಗರ ನಿರ್ಮಾಣ, ವ್ಯವಸಾಯ ವ್ಯಾಪಾರಾಭಿವೃದ್ಧಿ, ಮಾನವಶಾಸ್ತ್ರ ವ್ಯಾಸಂಗ, ಆತ್ಮ—ದೇಹ ಅಮೃತತ್ವ, ಸರ್ಕ್ಕಾರ, ಇವೇ ಅವನ ಸಂದೇಶ. ಯುದ್ಧದ ಕಾಲದಲ್ಲಿ ಅವನೂ ಸಿಪಾಯಿ, ಇಂಜನಿಯರ್‌ಗಳಂತೆ, ಮಿಷನ್‌ಗನ್ ಹಿಡಿಯುತ್ತಾನೆ. ಅವನು ಹೇಳುವ ಪ್ರತಿಯೊಂದು ಮಾತೂ, ಎದುರಾಳಿಯ ರಕ್ತವನ್ನು ಚೆಲ್ಲುತ್ತದೆ. ಅವನಿಗೆ ಹೆಚ್ಚು ನಂಬಿಕೆ ಶ್ರದ್ಧೆ ಇರುವುದರಿಂದ ಅವನು ದೀರ್ಘದರ್ಶಿ. ದೇವರು—ಅಮೃತತ್ವ, ಈ ವಾದದಲ್ಲಿ ಅವನು ಮೌನಿ. ಜಗತ್ತಿನ ಸ್ತ್ರೀಪುರುಷರಲ್ಲಿಯೇ ಅವನು ಅಮೃತತ್ವವನ್ನು ಕಾಣುತ್ತಾನೆ. ಅವನ ಮಟ್ಟಿಗೆ ಈ ಪ್ರಪಂಚದ ಸ್ತ್ರೀಪುರುಷರು ಬರಿಯ ಆಕಸ್ಮಿಕ ವ್ಯಕ್ತಿಗಳಲ್ಲ. ಜಗತ್ತಿನ ಪ್ರತಿ ವ್ಯಕ್ತಿಯೂ ಸ್ವತಂತ್ರನಾಗಿರಬೇಕೆಂಬ ಧ್ಯೇಯದ ಜೇಹುಗಾರನೇ ಕವಿ. ಇದೇ ಕವಿಗಳ ಆದೇಶ."

ಪ್ರತಿಯೊಂದಕ್ಕೂ ಹೊಸ ಬೆಲೆ

ಪ್ರತಿಯೊಂದಕ್ಕೂ ಹೊಸ ಬೆಲೆ ಕಟ್ಟುವುದು ಕವಿಯ ಗುರಿ ಎಂದು ಹೇಳಿದೆವು. ಅದರಂತೆ ಧರ್ಮಕ್ಕೂ ಹೊಸ ಬೆಲೆ ಉಂಟು. ಧರ್ಮಕ್ಕೆ ಹೊಸ ಬೆಲೆ ಕಟ್ಟುವುದೆಂದರೆ, ಹೊಸ ಜಾತಿ ಪಂಥಗಳನ್ನು ಕಟ್ಟುವುದಲ್ಲ. ಧರ್ಮಕ್ಕೆ ಹೊಸ ಬೆಲೆ ಕಟ್ಟುವುದೆಂದರೆ, ದೇವರನ್ನು ಕಾಣುವ ಸಾಹಸ. ಜೀವನದ ಅನುಭವಗಳೆಲ್ಲ ಆಧ್ಯಾತ್ಮವಾಗಿರಬೇಕು, ಎಂದು

"ನಾನು ಭೌತವಸ್ತುಗಳಿಂದ ಕಾವ್ಯಗಳನ್ನು ಸೃಷ್ಟಿಸುತ್ತೇನೆ. ಅವೇ ಅತ್ಯಂತ ಆಧ್ಯಾತ್ಮ ಕವನಗಳಾಗುತ್ತವೆ. ದೇಹ ಮತ್ತು ಮನುಷ್ಯನಿಗೆ ಸಂಬಂಧಿಸಿದ ಕವನಗಳನ್ನು ಸೃಷ್ಟಿಸುತ್ತೇನೆ. ಹಾಗೆ ಮಾಡುವುದರಿಂದ ಆತ್ಮ ಮತ್ತು ಅಮೃತತ್ವದ ಕವನಗಳು ನನಗೆ ದೊರೆಯುತ್ತವೆ."

ವಿಟಮಿನ್, ದೇಹವೂ ಅಮೃತತ್ವ ಎಂದು ಸಾಧಿಸಲು ಪ್ರಯತ್ನ ಪಡುತ್ತಾನೆ. ಒಂದು ಕಡೆ, "ಜಡವಸ್ತು ಆತ್ಮ ಎರಡೂ ಒಂದೇ" ಎನ್ನುತ್ತಾನೆ. ಆದರೆ ಅದು ಹೇಗೆ? ಅದಕ್ಕೆ ವಿಟಮಿನ್‌ನ ಉತ್ತರ ಇದು: "ಇದನ್ನು ಸ್ಥಾಪಿಸಲು ಯಾವ ವಾದವೂ ಸಾಕ್ಷ್ಯವೂ ಇಲ್ಲ. ಆದರೆ ದೇಹ ಮತ್ತು ಆತ್ಮಗಳ ಬೆಳವಣಿಗೆಯೇ ಸಾಕ್ಷ್ಯ."

ದೇಹ ಯಾವಾಗಲೂ ಆತ್ಮದ, ಸದ್ಯದ ಆವಾಸಸ್ಥಾನ. ಜಡವಸ್ತು ಆತ್ಮದಿಂದ ಬೇರೆ ಎಂದು ನಾವು ಭಾವಿಸುತ್ತೇವೆ. ಆದರೆ ವಿಟಮನ್ ಒಬ್ಬನು ಮಾತ್ರ, ದೇಹವನ್ನು ಆತ್ಮದೊಂದಿಗೆ ಸಮಮಾಡುತ್ತಾನೆ. ದೇಹವೂ, ದೇವತ್ವ ನಿತ್ಯ. ಶಾಶ್ವತ ಎನ್ನುತ್ತಾನೆ.

ದೇಹವೂ, ಜಡವಸ್ತುಗಳೂ ಶಾಶ್ವತ, ಎಂಬ ನಂಬಿಕೆ ಇದ್ದುದರಿಂದಲೇ ವಿಟಮಿನ್‌ನು " ಸಾವು ಬದುಕಿನ ಮುಂದಲ ಅಂಕ " ಎಂದು ಭಾವಿಸಿದನು. ಒಂದೆಡೆ "ಸಾವು ಜೀವನದ ಗುರಿ, ಜೀವನದ ಧ್ಯೇಯ ಸಾಧನೆ" ಎಂದಿದ್ದಾನೆ. ದೈವಿಕ ಮರಣದ ಪಿಸುಮಾತು, ಎಂಬ ಕವನದಲ್ಲಿ " ಜೀವನವು, ಎಲ್ಲರನ್ನೂ ಯಾವಾಗಲೂ ಸ್ವೀಕರಿಸಲಾರದು. ಆದರೆ ದೈವಿಕವಾದ ಮರಣ ಎಲ್ಲರನೂ ಯಾವಾಗಲೂ ಆಲಿಂಗಿಸುತ್ತದೆ " ಎನ್ನುತ್ತಾನೆ.

ಮುಪ್ಪು ಬಂದಂತೆ ವಿಟಮಿನ್‌ಗೆ ಈ ನಂಬಿಕೆ ಕಡಿಮೆಯಾಗಲಿಲ್ಲ ಹೆಚ್ಚುತ್ತಲೇ ಹೋಯಿತು. " ಎಪ್ಪತ್ತರಲ್ಲಿ" ಎಂಬ ಕವನದಲ್ಲಿ ವಿಟಮಿನ್ ಹೀಗೆ ಹೇಳುತ್ತಾನೆ. " ಯಾವುದಕ್ಕೂ ನಾಶವಿಲ್ಲ. ಜೀವ, ವ್ಯಕ್ತಿ ಪ್ರಾಣ ಶಕ್ತಿ, ಕಣ್ಣಿಗೆ ಕಾಣುವ ಯಾವ ವಸ್ತುವಿಗೂ ನಾಶವಿಲ್ಲ. ಮನಸ್ಸನ್ನು ಗೊಂದಲದಲ್ಲಿ ಕೆಡಹಬಾರದು; ಜಗತ್ತು ವಿಶಾಲ, ಕಾಲ ಅನಂತ. ಪಶ್ಚಿಮ ದಲ್ಲಿ ಮುಳುಗಿದ ಸೂರ್ಯ ಮತ್ತೆ ಮತ್ತೆ ಉದಿಸುತ್ತಲೇ ಇರುತ್ತಾನೆ. ಒಣಗಿದ ನೆಲ ಮತ್ತೆ ಮತ್ತೆ ವಸಂತಕಾಲದಲ್ಲಿ ಹೂವು ಹಣ್ಣು ಗಿಡಗಳೊಂದಿಗೆ ನಗು ತ್ತದೆ.

ವಿಟಮಿನ್ ದೊಡ್ಡ ಕವಿ. ಅವನ ಪ್ರತಿಯೊಂದು ಮಾತೂ ಒಂದು ಸುಂದರ ಚಿತ್ರ. ಕವಿಗಿಂತ ಹೆಚ್ಚಾಗಿ ಅವನು ದೃಷ್ಟಾರ, ಋಷಿ, ದೀರ್ಘದರ್ಶಿ. ಅವನ ಮಾತು ಸರಳ, ನೇರ, ಋಜು. ಆ ಮಾತುಗಳಲ್ಲಿ ಜ್ಞಾನ, ಆಳವಾದ ಅನುಭವ, ವಿವೇಕ ಅಡಗಿವೆ. ಅವನ ದಯೆ ಸಹನೆ ಆಶಾವಾದಿತ್ವ ಮಾನವ ಪ್ರೇಮ, ಇವು ಅವನನ್ನು ಅಖಿಲ ಜಗತ್ತಿನ ಬಡವರ ಮಿತ್ರನನ್ನಾಗಿ ಮಾಡಿವೆ. 'ಕಣ್ಣೀರು' ಎಂಬ ಅವನ ಕವನದಲ್ಲಿ ತೋರುವ ಕರುಣೆ, ಮಾನವಪ್ರೇಮ ಅದ್ಭುತ. ಈ ಬಗೆಯ ಗದ್ಯ ಕವನಶೈಲಿಯ ನಿರ್ಮಾಪಕ ವಿಟಮಿನ್ ಎಂದೇ ಹೇಳಬಹುದು. ಜತೆಗೆ ಎಡ್ವರ್ಡ್ ಕಾರ್ಪೆಂಟರ್, ಎಜಿರಾ ಪೌಂಡ್

ರವೀಂದ್ರನಾಥ ಠಾಗೂರ್ ಮುಂತಾದವರು ಗದ್ಯಕವನಗಳನ್ನು ಬೇಕಾದಂತೆ ಬರೆದಿದ್ದಾರೆ. ಆಳವಾದ ಭಾವನೆಗಳಿಗೂ, ದೂರದರ್ಶಿತ್ವದ ವೇದಾಂತದ ಗಂಭೀರ ಪ್ರಕಟಣೆಗೂ, ಅದ್ಭುತ ಪ್ರಕೃತಿವರ್ಣನೆಗೂ, ಇದು ಸರಿಯಾದ ಧಾಟಿ. ವಿಟಮಿನ್‌ನ ಹೆಸರು ' ಸಾಹಿತ್ಯದಲ್ಲಿಋಷಿ ' ಎಂದು ಎಂದೆಂದೂ ಪ್ರಸಿದ್ಧವಾಗುವುದು. ಜಗತ್ತಿಗೆ ಗದ್ಯಕಾವ್ಯದ ಶಕ್ತಿಯನ್ನು ಜಗತ್ತಿಗೆ ಪ್ರಕಟಿಸಿದ ಈತನ ಕೀರ್ತಿ, ಸಾಹಿತ್ಯಕ್ಷೇತ್ರದಲ್ಲಿ ಸ್ವಲ್ಪವೂ ಮಾಸದೆ ಆಚಂದ್ರಾರ್ಕವಾಗಿ ಬೆಳಗುವುದು.

ಒಂದು ಭಕ್ತಿಗೀತೆ

ಮಾನುಷ್ಯಂ ವರವಂಶ ಜನ್ಮವಿಭವೋ ದೀರ್ಘಾಯುರಾರೋಗ್ಯತಾಂ
ಸನ್ಮಿತ್ರಃ ಸುಸುತಃ ಸತೀಪ್ರಿಯತಮಃ ಸತ್ಪಾತ್ರ ದಾನೇ ರತಿಃ
ವಿದ್ವತ್ವಂ ಸುಜನತ್ವ ಮಿಂದ್ರಿಯ ಜಯೋ ಭಕ್ತಿಶ್ಚ ನಾರಾಯಣೇ
ತೇ ಪುಣ್ಯೇನ ವಿನಾ ತ್ರಯೋದಶ ಗುಣಾಃ ಸಂಸಾರಿಣಾಂ ದುರ್ಲಭಂ

[ಮಾನವಜನ್ಮ, ಉತ್ತಮ ವಂಶದಲ್ಲಿ ಜನನ, ವೈಭವ, ತುಂಬು ಆಯುಷ್ಯ, ಆರೋಗ್ಯ, ಒಳ್ಳೆಯ ಸ್ನೇಹಿತರು, ಸತ್ಪುತ್ರ, ಪ್ರಿಯತಮಸತಿ, ಒಳ್ಳೆಯವರಿಗೆ ದಾನಕೊಡುವುದರಲ್ಲಿ ಸಂತೋಷ, ವಿದ್ವತ್ತು, ಸೌಜನ್ಯ ಇಂದ್ರಿಯಜಯ ಪರಮಾತ್ಮನಲ್ಲಿ ಭಕ್ತಿ, ಈ ಹದಿಮೂರು, ಪುಣ್ಯವಿಲ್ಲದೆ ಸಂಸಾರಿಗಳಿಗೆ ದೊರೆಯುವುದಿಲ್ಲ.]

ಸಂಸಾರಿಯ ಬಾಳು ಪೂರ್ಣವಾಗಿ, ಅವನ ಇಹಲೋಕಯಾತ್ರೆ ಸುಖವಾಗಿ ಒಂದು ಲೀಲೆಯಂತೆ ಕಳೆಯಬೇಕಾದರೆ, ಮೇಲಿನ ಹದಿಮೂರು ಸೌಲಭ್ಯಗಳು ಅವನಿಗೆ ದೊರೆಯ ಬೇಕು. ಈ ಹದಿಮೂರು ಒಂದರಷ್ಟೇ ಮತ್ತೊಂದು ಪ್ರಾಮುಖ್ಯವಾದುದು. ಒಂದು ಹೆಚ್ಚು ಒಂದು ಕಡಿಮೆ ಎಂದು ಅಲ್ಲ. ಮನುಷ್ಯನ ಆನಂದಕ್ಕೆ ಎಲ್ಲವೂ ಸಮಪ್ರಮಾಣದಲ್ಲಿ ಸಮತೂಕದಲ್ಲಿ ದೊರಕಬೇಕು. ಪ್ರತಿಯೊಂದು ಗುಣವೂ ಉಳಿದ ಹನ್ನೆರಡರಷ್ಟೇ ಆವಶ್ಯಕ. ಯಾವುದಿಲ್ಲದಿದ್ದರೂ ಮನುಷ್ಯನ ಬಾಳು, ಅಷ್ಟರಿಂದ ಕುಂದು ಆಗುತ್ತದೆ.

ಸಂಸಾರಿಯ ಜೀವನಕ್ಕೆ, ಪರಮಾತ್ಮನಲ್ಲಿ ಭಕ್ತಿ ಊರುಗೋಲು. ಜ್ಞಾನದ ಮಾರ್ಗಕ್ಕಿಂತ, ಇದು ಸುಲಭ. ಇಂತಹ ಯಾವುದಾದರೂ ಒಂದು ಆಸರೆ ಇಲ್ಲದಿದ್ದರೆ, ನಶ್ವರವಾದ, ಹೆಜ್ಜೆಹೆಜ್ಜೆಗೂ ದುಃಖ ಅನ್ಯಾಯದಿಂದ ತುಂಬಿದ ಈ ಜಗತ್ತಿನಲ್ಲಿ, ಬಾಳುವುದು ಕಷ್ಟ. ಇಂದ್ರಿಯನಿಗ್ರಹವನ್ನು ಸಂಪಾದಿಸಿದವರೂ ಯೋಗಿಗಳೂ ವಿರಕ್ತರೂ, ಜಗತ್ತಿನ ಬಾಳನ್ನು ತಾವರೆಯ ಮೇಲಿನ ನೀರಿನಂತೆ ನಿರ್ಲಿಪ್ತರಾಗಿ ದಾಟಿ ಬಿಡುತ್ತಾರೆ. ಜಗತ್ತಿನ ವೈಭವವೆಲ್ಲ "ಮತ್ತಾಂಗನಾಪಾಂಗ ಭಂಗಿ ಲೋಲ" ದಂತೆ ಚಂಚಲವೆಂದು ಅವರಿಗೆ ಗೊತ್ತು. ಆದುದರಿಂದ ಅವರು ಯಾವುದರಿಂದಲೂ ಅವಿಚಲಿತರು.

ನೆರವುದಗಲ್ಬುದರ್ಕೆ ಜನನಂ ಮರಣಕ್ಕೆ ವಿನೂತನಯೌವನಂ
ಜರೆಗೆ ಧನಂ ದರಿದ್ರತೆಗೆ ನಲ್ಮೆ ವಿರಾಗಕ್ಕೆ ಸತ್ಸುಖೋ
ತ್ಕರ ಮಸುಖಕ್ಕೆ ಕಾರಣಮಿದೆಂದರಿದುಂ, ಭವಿಸಿದ್ದ ಪಂಜರೋ
ದರ ಗತರೇಕೆ ಚಿಂತಿಸುವರೇಕೆ ಪಲಂಬುವರೇಕೆ ನೋವರೋ

ಆದರೆ ಸಾಮಾನ್ಯರಾದ ಬಡಪಾಯಿಗಳಿಗೆ ಸಂಸಾರವೇ ಒಂದು ದೊಡ್ಡ ಸಮುದ್ರ. ಅವರು ಅದನ್ನು ಈಜಿ ಜಯಿಸಲಾರರು. ಜಗತ್ತಿನಲ್ಲಿ ಇವೆಲ್ಲ ಏಕೆ ನಡೆಯುತ್ತಿವೆ ಎಂಬುದೂ ಅವರಿಗೆ ಅರ್ಥವಾಗುವುದಿಲ್ಲ. ಬಂದುದನ್ನು ಅನುಭವಿಸಬೇಕು. ಅದಕ್ಕೂ ಶಕ್ತಿಯಿಲ್ಲ. ಆರ್ತರಾಗಿ ಕೊನೆಯಲ್ಲಿ, ಸರ್ವಸ್ವವನ್ನೂ ಭಗವಂತನಿಗೆ ಅರ್ಪಿಸುವ ಭಕ್ತಿಮಾರ್ಗವನ್ನು ಅವರು ಅಂಗೀಕರಿಸುತ್ತಾರೆ. ಮಾನವ ಜಗತ್ತಿಗೆ ಈ ಭಕ್ತಿಮಾರ್ಗವನ್ನು ಬೋಧಿಸುವವರೇ ನಮ್ಮ ಅತ್ಯಂತ ಪ್ರಿಯರಾದ ಹಿತೈಷಿಗಳು. ಅವರಲ್ಲಿ ಆಳವಂದಾರ್ ಎಂದು ಬಿರುದಾಂಕಿತರಾದ ಯಾಮುನಾಚಾರ್ಯರು ಅಗ್ರಗಣ್ಯರು.

ಯಾಮುನಾಚಾರ್ಯರು ಯಾವ ಒಂದು ವಿಶಿಷ್ಟಪಂಥಕ್ಕೂ ಸೇರಿದವರಲ್ಲ. ಅವರು ತಮ್ಮ ಬೋಧನೆಯನ್ನು ಯಾವ ಒಂದು ಮತದ ಅನುಯಾಯಿಗಳೂ ಹೇಳಲಿಲ್ಲ. ಜಗತ್ತಿನ ಭಕ್ತರಿಗೆಲ್ಲ ಹಿತವನ್ನು ಕೋರುವುದಕ್ಕಾಗಿ ಅವರು ಆಳವಂದಾರ್ ಸ್ತೋತ್ರ ಅಥವ ಸ್ತೋತ್ರರತ್ನ ಎಂಬುದನ್ನು ರಚಿಸಿದರು. ಇದನ್ನು ಭಕ್ತಿ ಪಂಥದವರ ಭಗವದ್ಗೀತೆ ಎನ್ನಬಹುದು. ಭಾರತದ ಎಲ್ಲ ಭಾಷೆಗಳಿಗೂ ಪರಿವರ್ತಿತವಾಗಿರುವ ಈ ಸ್ತೋತ್ರರತ್ನಕ್ಕೆ, ಬಂಗಾಳಿ ಭಾಷೆಯಲ್ಲಂತೂ ವಿಸ್ತೃತವಾದ ಮತ್ತು ಬಗೆಬಗೆಯ ವ್ಯಾಖ್ಯಾನಗಳಿವೆ.

ಮಹತ್‌ಕಾವ್ಯದ ಲಕ್ಷಣಗಳಿಂದ ಕೂಡಿದ ಖಂಡಕಾವ್ಯ, ಸ್ತೋತ್ರರತ್ನ. ಇದು ಭಕ್ತಿವಾಹಿನಿ ಭಾವಗೀತೆ. ಇದು ದಾಸಭಾವದಿಂದ ಪರಿಪಕ್ವವಾದ ಸುಸಂಸ್ಕೃತ ಮನಸ್ಸಿನಿಂದ ಭಗವಂತನಲ್ಲಿ ಶರಣಾಗತಿ. ಈ ಭಾವನೆ ಜಗತ್ತಿನಲ್ಲಿ ತಿರಸ್ಕಾರದಿಂದ ಹುಟ್ಟಿದುದಲ್ಲ. ಸಂಸಾರ ನಶ್ವರವೆಂಬುದನ್ನರಿತರೂ ಅದನ್ನು ಕುರಿತ ಜಿಗುಪ್ಸೆಯಿಂದಲ್ಲ, ಪರಮಾತ್ಮನಲ್ಲಿ ಆಶ್ರಯ. ಭಗವಂತನ ಸಂಕಲ್ಪದೊಡನೆ ಒಂದಾಗಿ ಜಗತ್ಕಲ್ಯಾಣಕಾರಕವಾದ ಆ ಸಂಕಲ್ಪದಲ್ಲಿ ತಾನೂ ಭಾಗಿಯಾಗಲು, ತನ್ನನ್ನು ಪೂರ್ಣವಾಗಿ ಸೊನ್ನೆಮಾಡಿಕೊಂಡು ತಾನೇ ಒಂದು ಭಕ್ತಿಯ ಕಾವ್ಯವಾಗುವುದು, ಈ ಭಕ್ತನ ಗುರಿ.

ಯಾಮುನಾಚಾರ್ಯರು ಸುಖವಾದ ಸಮತ್ವದ ಗೃಹಸ್ಥಜೀವನವನ್ನು ನಡೆಸಿದವರು. ಬೆಳಗಿನ ಮಂಜಿನ ಹನಿ, ಸ್ವಾಭಾವಿಕವಾಗಿ ಹುಲ್ಲುಗರಿಕೆಯ ಮೇಲೆ ಬಂದು ಕೂರುವಂತೆ, ಇವರ ಮನಸ್ಸು ಬಾಳಿನ ಗುರಿಯಾದ ಪರಮಾತ್ಮನ ಕಡೆಗೆ ತಿರುಗಿತು. ಭಗವಂತನಲ್ಲಿ ಭಕ್ತಿಯನ್ನು ಕೊಂಡ ಮನೆತನ ಅವರದು. ಗಾಳಿಯನ್ನು ಒಳಗೆ ತುಂಬಿಕೊಂಡ ರಬ್ಬರ್‌ಚೆಂಡು, ಹೇಗೆ ಸರಾಗವಾಗಿ ಹಗುರವಾಗಿ ಹಾರಾಡುವುದೊ ಹಾಗೆ, ಪರಮಾತ್ಮನ ಭಕ್ತಿಯನ್ನು ಹೃದಯದಲ್ಲಿ ತುಂಬಿಕೊಂಡು, ಸುಗಂಧವನ್ನು ಅನುಸರಿಸುತ್ತಿರುವ ಭೃಂಗದಂತೆ ಗಾನದ ಗುಂಗಿನಲ್ಲಿ ಹಾರಾಡುತ್ತಿರುವ ಭ್ರಮರದಂತೆ, ಸಂಸಾರದಲ್ಲಿ ಬಾಳಿದವರು. ಪರಮಾತ್ಮನಿಗೆ ಅವರಲ್ಲಿ ಕರುಣೆ, ಸ್ವಾಭಾವಿಕವಾಗಿ ಉಂಟಾಯಿತು. ಅದು ಉಂಟಾದುದು ಸದ್ಗುರುಸಮಾಗದಿಂದ. ಅಜ್ಞಾನವೆಂಬ ರೋಗದಿಂದ ಕುರುಡನಾದವನ ಕಣ್ಣುಗಳನ್ನು ಜ್ಞಾನದ ಅಂಜನವನ್ನು ಹಚ್ಚಿ ತೆರೆಯುವವನು ಗುರು. ಇಂತಹ ಗುರು ದೊರೆಯುವುದು ಪುಣ್ಯದಿಂದ. ಅಂತಹ ಗುರುವಿಗೆ ಅರ್ಹನಾದ ಶಿಷ್ಯ ದೊರೆಯವುದೂ ಪುಣ್ಯದಿಂದಲೇ. ಯಾಮುನಾಚಾರ್ಯರ ಪಿತಾಮಹರ ಶಿಷ್ಯಪರಂಪರೆಗೆ ಸೇರಿದ ರಾಮಮಿಶ್ರರೆಂಬುವರು ಯಾಮುನಾಚಾರ್ಯರನ್ನು ಹುಡುಕಿಕೊಂಡು ಬಂದು "ನಿನ್ನ ಕುಲಧನವನ್ನು ಪರಿಗ್ರಹಿಸು" ಎಂದು ಹೇಳಿದರು. ತನ್ನ ಕುಲಧನವಾವುದೆಂದು ಯಾಮುನಾಚಾರ್ಯರು ಯೋಚಿಸುತ್ತಿರಲು, ರಾಮಮಿಶ್ರರು ಅವರನ್ನು ಶ್ರೀರಂಗಕ್ಕೆ ಕರೆದುಕೊಂಡು ಹೋಗಿ, ರಂಗನಾಥಸ್ವಾಮಿಯ ದರ್ಶನ ಮಾಡಿಸಿ "ಇದೇ ನಿನ್ನ ಕುಲಧನ" ಎಂದು ಹೇಳಿದರು. ಹೀಗೆ ಸಂಸಾರಿಯ ಮೇಲೆ ಭಗವಂತನ ಕರುಣೆಯುಂಟಾಯಿತು. ಯಾಮುನಾ ಚಾರ್ಯರು, ಪರಮಾತ್ಮನ ಭಕ್ತಿಗಾನಾಮೃತವನ್ನು ನುಡಿಯುವ ಮಾಧುರ್ಯ ಕಂಠವಾದರು. ಅವರ ಹೃದಯದ ತಂತಿಗಳು ಭಗವಂತನಲ್ಲಿ ತಾದಾತ್ಮ್ಯದಿಂದ ಶ್ರುತಿಗೊಂಡವು. ಹೀಗೆ ಭಕ್ತಿ ತುಂಬಿದ ಹೃದಯದಿಂದ ಪರಿಶುದ್ಧವಾಗಿ ಏಕರೂಪದಿಂದ–ಆದರೂ ಬಹುರೂಪದಿಂದ–ಪ್ರವಹಿಸುವ ನಮ್ರಗಾನವಾಹಿನಿ ಸ್ತೋತ್ರರತ್ನ.

ಲೋಕಕಲ್ಯಾಣವೇ ಭಕ್ತರ ಗುರಿ. ಪರಿಪಕ್ವವಾದ ಭಕ್ತನ ಮನಸ್ಸು, ಭಾವನಾಪೂರ್ಣವಾಗಿ, ಇತರರಲ್ಲಿಯೂ ಭಕ್ತಿಯನ್ನು ಪ್ರಚೋದಿಸುವ ಗುಣವನ್ನು ಹೊಂದಿರುತ್ತದೆ. ಭಕ್ತನ ಗುರಿ ಅದು ಅಲ್ಲದಿದ್ದರೂ, ಅದರ ಸ್ವಾಭಾವಿಕ

ಪರಿಣಾಮ ಅದು. ಯಾಮುನಾಚಾರ್ಯರ ಅಂತರಂಗದ ಆರಾಧನೆ, ಈ ಕಾವ್ಯಾ ನೃತ ಬಾಹ್ಯರೂಪ, ಮೀನು ನೀರಿನಲ್ಲಿ ಸ್ವೇಚ್ಛೆಯಿಂದ ವಿಹರಿಸುವಂತೆ ಭಕ್ತನ ಮನಸ್ಸು, ಭಕ್ತಿಗಂಗೆಯಲ್ಲಿ ಇಷ್ಟಬಂದಂತೆ ವಿಹರಿಸುತ್ತದೆ. ವರ್ಣನೆ, ವೇದಾಂತ, ಪರಮಾತ್ಮನ ಸ್ವರೂಪ, ತನ್ನಅಲ್ಪತೆ, ಭಕ್ತರ ಶ್ರೇಷ್ಠತ್ವ, ಭಕ್ತರ ಹೃದಯದ ಆರ್ತಿ, ಮೊರೆ, ಇವೆಲ್ಲ ಸಮಂಜಸವಾಗಿ ಹೊಂದಿಕೊಂಡು ಕೊನೆಗೆ ಭಗವಂತನಲ್ಲಿ ಪೂರ್ಣಶರಣಾಗತಿಯಲ್ಲಿ ಕೊನೆಯಾಗುವುದು. ಈ ಭಕ್ತಿಯ ಗುರಿಯನ್ನು ಮುಟ್ಟಲು ಪ್ರತಿಯೊಂದು ಶ್ಲೋಕವೂ ಒಂದೊಂದು ಮೆಟ್ಟಲು. ಶ್ಲೋಕಗಳು ಸ್ವಯಂಪೂರ್ಣವಾಗಿ ಇರುವುವಲ್ಲದೆ ಒಟ್ಟು ಗುಚ್ಛ ದಲ್ಲಿ ತಮ್ಮ ತಮ್ಮ ಸ್ಥಳದಲ್ಲಿ ವಿರಾಜಿಸುತ್ತವೆ. ಸ್ತೋತ್ರರತ್ನವನ್ನು, ಮೊದ ಲಿನಿಂದ ಕೊನೆಯವರೆಗೆ ಓದಿದಮೇಲೆ ಒಂದು ಅದ್ಭುತವಾದ ಗಾನವನ್ನು ಅನುಭವಿಸಿದ ಆನಂದವುಂಟಾಗುತ್ತದೆ. ಉಪಾಸನೆ, ಪೂಜೆಮಾಡಿದ ಪಾವನತ್ವ, ಧ್ಯಾನಮಗ್ನ ಮನೋವೃತ್ತಿ ಇವು ಈ ಸುಂದರಕಾವ್ಯವನ್ನು ಓದಿದನಂತರ ಉಂಟಾಗುವ ಮನಃಪರಿವರ್ತನೆ

“ ಯಾರ ಪಾದಾರವಿಂದವು, ನನ್ನ ಮತ್ತು ವೇದಗಳ ತಲೆಯಲ್ಲಿ ಪ್ರಕಾಶಿಸುವುದೋ ಮತ್ತು ನನ್ನ ಮನೋರಥಗಳಿಗೆ ಗುರಿಯೋ, ಆ ನನ್ನ ಕುಲಧನವನ್ನು ಸ್ತೋತ್ರಮಾಡುತ್ತೇನೆ. ದೇವೋತ್ತಮರೂ ಸಹ ಯಾವನ ವೈಭವದ ಸಣ್ಣ ಅಂಶವನ್ನಾದರೂ ಅರಿಯರೋ, ಅಂತಹ ಮಹಿಮನನ್ನು ಸ್ತೋತ್ರ ಮಾಡ ಹೊರಡುವುದು ನನ್ನಂತಹ ನಿರ್ಲಜ್ಜನಿಗೆ ಮಾತ್ರ ಸಾಧ್ಯ. ಇದಕ್ಕೂ ನನ್ನ ಅಜ್ಞಾನವೇ ಕಾರಣ. ಪರಮಾತ್ಮನನ್ನು ಸ್ತೋತ್ರಮಾಡಲು ವೇದ, ಚತರ್ಮುಖ ಬ್ರಹ್ಮ ಇವರಿಗೆ ಸಹ ಸಾಧ್ಯವಿಲ್ಲ. ಸಾಗರದಲ್ಲಿ ಮುಳುಗಿದಮೇಲೆ ಅಣು, ಪರ್ವತಗಳ ತಾರತಮ್ಯ ನಿಲ್ಲುವುದೆ? ಬ್ರಹ್ಮನೇ ಮೊದಲಾದ ದೇವೋತ್ತಮರೆಲ್ಲ ಪರಮಾತ್ಮನ ಮಹಿಮಾಸಾಗರದ ತುಂತುರು ಗಳು; ಪರಮಾತ್ಮನು, ಪರಮಮಂಗಳದಾಯಿನಿಯಾದ ಶ್ರೀ ದೇವಿಗೂ ಮಂಗ ಳಕರ ನಾದವನು. ಜಗತ್ತಿನ ಉತ್ಕೃಷ್ಟಸತ್ವವೆಲ್ಲ ಅವನನ್ನೇ ಅವಲಂಬಿಸಿದೆ. ಜಗತ್ತನ್ನೆಲ್ಲ ನುಂಗಿ ಮತ್ತೆ ಹೊರಗೆಡುಹುವವನೂ ಅವನೆ. ಬುದ್ಧಿ ಮತ್ತು ಮಾತಿಗೆ ಮೀರಿದವನು ಪರಮಾತ್ಮ. ಸಮಸ್ತಮಾತಿಗೂ ಬುದ್ಧಿಗೂ ಆತನೇ ಗುರಿ. ಆತ ಅನಂತಮಹಾವಿಭೂತಿ; ದಯಾಸಾಗರ. ಆತನಿಗೆ ಅನಂತ ನಮಸ್ಕಾರ ”

ಈ ಭಕ್ತರ ನೈಚ್ಯಾನುಸಂಧಾನ, ಅದ್ಭುತವಾದುದು. ನಾನು ಧರ್ಮಿಷ್ಟನಲ್ಲ ಆತ್ಮಜ್ಞಾನಿಯಲ್ಲ, ಭಕ್ತನಲ್ಲ, ನಿರ್ಗತಿಕ. ಬೇರೆ ಆಶ್ರಯವಿಲ್ಲದೆ ನಿನ್ನಲ್ಲಿ ಶರಣಾಗತ. ನಾನು ಸಹಸ್ರಾರು ಸಲ ಆಚರಿಸದ ನೀಚ ಕರ್ಮ ಯಾವುದೂ ಇಲ್ಲ. ಈಗ ಈ ಕರ್ಮವಿಪಾಕದ ಫಲವನ್ನು ಅನುಭವಿಸಲಾರದೆ ನಿನ್ನ ಮುಂದೆ ಬಿದ್ದುಕೊಂಡು ಇದನ್ನೆಲ್ಲ ಪರಿಹಾರ ಮಾಡು ಎಂದು ದೀನಸ್ವರದಿಂದ ಗೋಳಿಡುತ್ತಿದ್ದೇನೆ. ನಿನ್ನ ಕರುಣೆಗೆ ನನ್ನಷ್ಟು ಪಾತ್ರರೂ ಮತ್ತಾರೂ ಇಲ್ಲ. ನಿನ್ನ ಎದುರಿಗೇ ನಿನ್ನ ಶರಣಾಗತರು ಮುರಿದು ಬೀಳುವುದು ನಿನ್ನ ಸ್ವರೂಪಕ್ಕೆ ಉಚಿತವಲ್ಲ. ನೀನು ತಿರಸ್ಕಾರ ಮಾಡಿದರೂ ನಿನ್ನ ಪಾದವನ್ನು ಬಿಡಲಾರೆ. ರೋಷದಿಂದ ತಾಯಿ ತಳ್ಳಿದರೂ, ಮೊಲೆಹಾಲು ಕುಡಿಯುವ ಶಿಶು ಅವಳ ಚರಣವನ್ನು ಬಿಡುವುದಿಲ್ಲವಷ್ಟೆ. ನಿನ್ನ ಪಾದಪಂಕಜದಲ್ಲಿ ಒಮ್ಮೆ ಆತ್ಮ ಸೇರಿದಮೇಲೆ, ಮತ್ತಾವುದು ಬೇಕು? ಜೇನು ತುಂಬಿದ ಕಮಲ ಇರುವಾಗ ದುಂಬಿ, ಕ್ಷುದ್ರದಾದ ಕೊಳವಳಿಕೆ ಹೂವಿಗೆ ಆಸೆಪಡುವುದೇ? ನಾನು ಅಶುಚಿ, ದುರ್ವಿನೀತ ನಿರ್ಭಯ ನಿರ್ಲಜ್ಜ, ಅವಿವೇಕಿ, ದುಃಖಿ, ಅಪರಾಧಗಳ ನೆಲೆವೀಡು, ಕೃಪೆಯಿಂದ ಅವಲೋಕಿಸು; ನನ್ನಲ್ಲಿ ನೀನು ದಯೆತೋರದಿದ್ದರೆ ನಿನ್ನ ದಯೆಗೆ ಸರಿಯಾದ ಪಾತ್ರ ಮತ್ತಾರೂ ಸಿಕ್ಕರು. ನಿನ್ನನ್ನು ಬಿಟ್ಟರೆ ನನಗೆ ನಾಥರಿಲ್ಲ ನನ್ನನ್ನು ಬಿಟ್ಟರೆ ನಿನ್ನ ದಯೆಗೆ ಪಾತ್ರರಿಲ್ಲ. ನನಗೆ ನಿನ್ನ ಭಕ್ತರ ಮನೆಯಲ್ಲಿ ಕೀಟ ಜನ್ಮವನ್ನಾದರೂ ಕೊಡು. ಬೇರೆ ಕಡೆ ನನಗೆ ಬ್ರಹ್ಮಪಟ್ಟವೂ ಬೇಡ. ನಾನು ಮನುಷ್ಯನಾದರೂ ಪಶು; ಸತ್ಯವಾಗಿ ನಿನ್ನನ್ನು ಇಚ್ಛಿಸದಿದ್ದರೂ, ಸುಳ್ಳುಪ್ರಾರ್ಥನೆ ಮಾಡುತ್ತಿದ್ದೇನೆ. ಹೇ ಪ್ರಭೋ ಹಾಗಿದ್ದರೂ ಈ ನನ್ನ ಬರಿಯ ಮಾತನ್ನೇ ಅಂಗೀಕರಿಸಿ, ಈ ಪ್ರಾರ್ಥನೆ ಸತ್ಯವಾಗಿಯೂ ನನ್ನ ಆತ್ಮದಿಂದ ಹೊರಡುವಂತೆ ನನ್ನ ಅತಃಕರಣವನ್ನು ಪರಿವರ್ತಿಸು. ನಾನು ಎಲ್ಲೆಗೆಟ್ಟವ, ಕ್ಷುದ್ರ ಅಸ್ಥಿರಮನಸ್ಸಿನವ, ಅಸೂಯಾಪರ, ಕೃತಘ್ನ ದುರಭಿಮಾನಿ ಕಾಮುಕ ವಂಚಕ ಕ್ರೂರಕರ್ಮಿ ಪಾಪಿಷ್ಠ, ನನಗೆ ಧಿಕ್ಕಾರವಿರಲಿ."

ಇಷ್ಟೆಲ್ಲ ಹೇಳಿಕೊಂಡರೂ, ಯಾಮುನಾಚಾರ್ಯರಿಗೆ, ಭಗವತ್ಕೃಪೆಯನ್ನು ಪಡೆಯಲು ತಮಗೆ ಸ್ವಂತ ಅರ್ಹತೆಯಿದೆ ಯೆಂದು ತೋರಲಿಲ್ಲ. ಅವರು "ಯೋಗ್ಯರಾದ ನಮ್ಮ ಹಿರಿಯರನ್ನಾದರೂ ನೋಡಿ ನನ್ನನ್ನು ಕರುಣಿಸು"

ಎಂದು ಭಗವಂತನಲ್ಲಿ ಪ್ರಾರ್ಥಿಸಿದರು "ನಾನು ಹುಟ್ಟಿದುದು ಪ್ರಸಿದ್ಧರಾದ ಮಹನೀಯರ ವಂಶದಲ್ಲಿ. ಋಷಿಗಳೂ ಯೋಗಿಗಳೂ ಆಗಿದ್ದ ನನ್ನ ಪೂರ್ವ ಪುರುಷರು ಆತ್ಮಜ್ಞಾನಿಗಳಾಗಿದ್ದರು. ನಿನ್ನಲ್ಲಿ ಅನನ್ಯಭಕ್ತಿಯುಳ್ಳವರಾಗಿದ್ದರು ನಾನು ಮಾತ್ರ ತಮಸ್ಸಿನ ಅಂಧಕಾರದಲ್ಲಿ ಮುಳುಗಿದ್ದೇನೆ. ಅವರನ್ನಾದರೂ ನೋಡಿ ನನ್ನನ್ನು ಉದ್ಧರಿಸು"

ಹೀಗೆ ಭಕ್ತಿಯ ಗಂಗಾಪ್ರವಾಹ, ಈ ಕಾವ್ಯದ ಉದ್ದಕ್ಕೂ ಹರಿಯುತ್ತಿದೆ. ಯಾಮುನಾಚಾರ್ಯರು, ಪ್ರಯತ್ನವೇ ಇಲ್ಲದೆ ಸೊಗಸಾದ ಶ್ಲೋಕಗಳನ್ನು ರಚಿಸಿದ್ದಾರೆ. ಶಾಂತಿರಸ ಮತ್ತು ಭಕ್ತಿರಸಕ್ಕೆ ಈ ಸಣ್ಣ ಕಾವ್ಯ ಒಂದು ಉದಾಹರಣೆ. ಇದರ ಕಾವ್ಯ ಮಾಧುರ್ಯ ಸಹ, ಆಕರ್ಷಣೀಯವೂ ಹಿತಕರವೂ ಆಗಿದೆ. ಇದರ ಶ್ಲೋಕಗಳನ್ನು ಕುವಲಾಯನಂದ ರಸಗಂಗಾಧರ ಮುಂತಾದ ಅಲಂಕಾರ ಕೃತಿಗಳಲ್ಲಿ ಸಹಾ ಉದ್ಧರಿಸಿದ್ದಾರೆ. ಭಕ್ತಿ ಪಂಥದವರು, ಜೀವಾತ್ಮಕನ ಲಕ್ಷಣಕ್ಕೆ ಯಾಮುನಾಚಾರ್ಯರ ವಿವರಣೆಯನ್ನೇ ಪ್ರಮಾಣವಾಗಿ ಅಂಗೀಕರಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಭಕ್ತರಾದ ಯಾಮುನಾಚಾರ್ಯರಿಗೆ ಪರಮಾತ್ಮನ ಮಂಗಳ ವಿಗ್ರಹವನ್ನು ಎಷ್ಟು ವರ್ಣಿಸಿದರೂ ತೀರದು. ಆ ಭಾಗವೇ ಈ ಅದ್ಭುತ ಕಾವ್ಯದೊಳಗಿನ ಮತ್ತೊಂದು ಶ್ರೇಷ್ಠ ಕಾವ್ಯ, ಮೂಲ ಶ್ಲೋಕಗಳನ್ನು ಓದಿಯೇ ಈ ಭಾಗದ ಸೊಗಸನ್ನು ಅರಿಯಬೇಕು.

(೧) ತ್ರಿವಿಕ್ರಮಾವತಾರವನ್ನು ಮಾಡಿದ ಸ್ವಾಮಿಯೇ. ಶಂಖ ಚಕ್ರ ಕಲ್ಪವೃಕ್ಷ ಧ್ವಜ ಕಮಲ ಅಂಕುಶ ವಜ್ರಾಯುಧ ಇವು ಗುರುತಾಗಿ ಉಳ್ಳ ನಿನ್ನ ಪಾದಕಮಲಗಳೆರಡೂ, ನನ್ನ ತಲೆಯನ್ನು ಯಾವಾಗ ಅಲಂಕಾರ ಮಾಡೀತು.

(೨) ಪ್ರಕಾಶಮಾನವಾದ ಉಜ್ವಲಪೀತಾಂಬರ, ಅಗಸೆಗಿಡದ ಅರಳಿದ ಹೂವಿಗೆ ಸಮಾನವಾದ ನಿರ್ಮಲಕಾಂತಿ, ಆಳವಾದ ನಾಭಿ, ಸಣ್ಣ ನಡು, ಎತ್ತರವಾದ ಅಗಲವಾದ ವಕ್ಷಸ್ಥಳದ ಶೋಭಿತವಾದ ಶ್ರೀ ವತ್ಸವೆಂಬ ಗುರುತು.

(೩) ಬಿಲ್ಲಿನ ಹುರಿಯ ಎಳೆಯುವಿಕೆಯಿಂದ ಜಿಡ್ಡುಗಟ್ಟಿ ಕಠಿಣಗಳಾಗಿರುವ ಮತ್ತು ಮೊಣಕಾಲಿನವರೆಗೆ ಉದ್ದವಾಗಿರುವ ಮತ್ತು ಪತ್ನಿಯಾದ

ಲಕ್ಷ್ಮೀದೇವಿಯ ಕಿವಿಯ ಅಲಂಕಾರ ನೈದಿಲೆ, ಕರ್ಣಭೂಷಣ, ಕೆದರಿದ ಕರುಳು, ಸೀರೆಯ ಶ್ಲಥಬಂಧ ಇವುಗಳ ಗುರುತನ್ನು ತೋರಿಸುತ್ತಿರುವ ನಾಲ್ಕು ತೋಳುಗಳಿಂದ ಪ್ರಕಾಶಿಸುತ್ತಿರುವನು.

(೪) ಎತ್ತರವಾಗಿಯೂ ಪುಷ್ಟವಾಗಿಯೂ ಇರುವ ಹೆಗಲಿನಲ್ಲಿ ಜೋಲಾಡುತ್ತಿರುವ ಕುಂಡಲ, ಮುಂಗುರುಳುಗಳ ಸಮೂಹದಿಂದ ಮನೋಹರವಾಗಿ ಶಂಖದೋಪಾದಿಯಲ್ಲಿರುವ ಕತ್ತು, ನಿರ್ಮಲವಾದ ಪೂರ್ಣಚಂದ್ರಮಂಡಲ ಮತ್ತು ಕಮಲ ಇವುಗಳನ್ನು ತಿರಸ್ಕರಿಸುತ್ತಿರುವ ಮುಖ.

(೫) ಅರಳಿದ ಹೊಸದಾದ ಕಮಲಗಳಂತೆ ಮನೋಹರವಾದ ಕಣ್ಣುಗಳು, ವಿಲಾಸದೊಡಗೂಡಿದ ಬೆಳದಿಂಗಳಂತಹ ಹುಬ್ಬುಗಳು, ಮತ್ತು ಶುಭ್ರವಾದ ಮುಗುಳು ನಗೆಯುಳ್ಳ ಬಿಳುಪಾದ ಕೆನ್ನೆಗಳು, ಉದ್ದವಾದ ಮೂಗು, ಹಣೆಯವರೆಗೆ ಜೋಲಾಡುತ್ತಿರುವ ಮುಂಗುರುಳು.

(೬) ಪ್ರಕಾಶಮಾನಗಳಾದ ಕಿರೀಟ ಭುಜಕೀರ್ತಿ, ಮುತ್ತಿನಸರ, ಕತ್ತಿಗೆ ಭೂಷಣವಾಗಿರುವ ಕೌಸ್ತುಭಮಣಿ, ಸೊಂಟದ ಪಟ್ಟಿ, ನೂಪುರ, ಮೊದಲಾದ ಆಭರಣಗಳು, ಶಂಖ, ಚಕ್ರ, ಕತ್ತಿ, ಗದಾ, ಶ್ರೇಷ್ಠವಾದ ಬಿಲ್ಲು, ತುಳಸೀಮಾಲಿಕೆ.

(೭) ನಿನ್ನ ವಕ್ಷಸ್ಥಳವನ್ನು ಲಕ್ಷ್ಮಿಗೆ ಮನೆಯನ್ನಾಗಿ ಮಾಡಿರುವಿ. ನಿನಗೆ ಪ್ರಿಯವಾದ ಕ್ಷೀರಸಮುದ್ರದಲ್ಲಿ ಆಕೆಯೂ ಜನಿಸಿದಳು. ಚರಾಚರಾತ್ಮಕವಾದ ಪ್ರಪಂಚವು ಲಕ್ಷ್ಮಿಯ ಕಟಾಕ್ಷವನ್ನೇ ಆಶ್ರಯಿಸಿದೆ. ಲಕ್ಷ್ಮಿಯ ಪ್ರಾಪ್ತಿಗಾಗಿ ಸಮುದ್ರವು ಕಡೆಯಲ್ಪಟ್ಟಿತು. ಆ ಲಕ್ಷ್ಮಿಗಾಗಿ ಸೇತುವೆಯನ್ನು ಬಂಧಿಸಿದೆ.

(೮) ಯಾವಾಗಲೂ ನೋಡುತ್ತಿದ್ದರೂ ಹೊಸದೋ ಎಂಬಂತೆ ವಿಸ್ಮಯವನ್ನುಂಟುಮಾಡುವ, ಗುಣರೂಪ ವಿಲಾಸಚೇಷ್ಟೆಗಳಿಂದ ನಿನಗೆ ಮಾತ್ರವೇ ಅರ್ಹಳಾದ ಶ್ರೀಯಿಂದ ಕೂಡಿರುವೆ.

(೯) ಲಕ್ಷ್ಮಿಯೊಡನೆ, ಜಗದುದ್ಧಾರಕನೂ ಸರ್ವೋತ್ಕೃಷ್ಟ ಪ್ರಜ್ಞಾವಂತನೂ ವಿಮಲ ಫಣಾಸಹಸ್ರ ರತ್ನರಾಜಿಯ ಕಿರಣಗಳಿಂದ ಹೊಳೆಯುವವನೂ ಆದ ಆದಿಶೇಷನ ಮೇಲೆ ಪವಡಿಸಿ ಯೋಗದಲ್ಲಿರುವೆ.

(೧೦) ಆದಿಶೇಷ, ನಿನಗೆ ನಿಜವಾದ ಶೇಷನು. ಅವನು ನಿವಾಸ, ಶಯ್ಯಾ. ಆಸನ, ಸಿಂಹಾಸನ, ಪಾದುಕಾ, ಉತ್ತರೀಯ, ದಿಂಬುಗಳು, ಬಿಸಿಲಿಗೂ ಮಳೆಗೂ ಛತ್ರಿ, ಎಲ್ಲ ಆಗಿದ್ದಾನೆ.

ಕದಾಪುನಶ್ಶಂಖ ರಥಾಂಗ ಕಲ್ಪಕ
ಧ್ವಜಾರವಿಂದಾಂಕುಶ ವಜ್ರಲಾಂಛನಂ
ತ್ರಿವಿಕ್ರಮತ್ವ ಚ್ಚರಣಾಂಬುಜ ದ್ವಯಂ
ಮದೀಯ ಮೂರ್ಧಾನ ಮಲಂಕರಿಷ್ಯತಿ

ವಿರಾಜ ಮಾನೋಜ್ವಲ ಪೀತವಾಸಸಂ
ಸ್ಮಿತಾ ಸಸೀಸೂನ ಸಮಾಮಲಚ್ಛವಿಂ
ನಿಮಗ್ನ ನಾಭಿಂ ತನುಮಧ್ಯ ಮುನ್ನತಂ
ವಿಶಾಲವಕ್ಷಸ್ಥಲ ಶೋಭಿಲಕ್ಷಣಂ

ಚಕಾಸತಂ ಜ್ಯಾಕಿಣಕರ್ಕಶೈಶ್ಶುಭೈಃ
ಚತುರ್ಭಿ ರಾಜಾನು ವಿಲಂಬಿಭಿರ್ಭುಜೈಃ
ಪ್ರಿಯಾ ವತಂ ಸೋತ್ಪಲ ಕರ್ಣ ಭೂಷಣ
ಶ್ಲಥಾಲಂಕಾ ಬಂಧ ವಿಮರ್ದಶಂಸಿಭಿಃ

ಉದಗ್ರಪೀನಾಂಸ ವಿಲಂಬಿ ಕುಂಡಲಾ
ಲಕಾವಳೀ ಬಂಧುರ ಕಂಬುಕಂಧರಂ
ಮುಖಶ್ರಿಯಾನ್ಯ ತ್ಕೃತಪೂರ್ಣ ನಿರ್ಮಲಾ
ಅಮೃತಾಂಶು ಬಿಂಬೋಂಬು ರುಹೋ ಜ್ವಳಶ್ರಿಯಂ

ಪ್ರಬುದ್ಧ ಮುಗ್ಧಾಂಬುಜ ಚಾರು ಲೋಚನಂ
ಸವಿಭ್ರಮ ಭ್ರೂಲತ ಮುಜ್ವಲಾಧರಂ
ಶುಚಿಸ್ಮಿತಂ ಕೋಮಲ ಗಂಡ ಮುನ್ನಸಂ
ಲಲಾಟ ಪರ್ಯಂತ ವಿಲಂಬಿತಾಲಕಂ

ಸ್ಫುರತ್ಕಿರೀಟಾಂಗದ ಹಾರಕಂಠಿಕಾ
ಮಣೀಂದ್ರಕಾಂಚೀ ಗುಣ ನೂಪುರಾದಿಭಿಃ
ರಥಾಂಗ ಶಂಖಾಸಿ ಗದಾ ಧನುರ್ವರೈಃ
ಲಸತ್ತುಳಸ್ಯಾ ವಲಮಾಲಯೋಜ್ವಲಂ

ಚಕರ್ಥ ಯಸ್ಯಾ ಭವನಂ ಭುಜಾಂತರಂ
ತವಪ್ರಿಯಂ ಧಾಮ ಯದೀಯ ಜನ್ಮಭೂಃ

ಜಗತ್ಸಮಸ್ತಂ ಯದಪಾಂಗ ಸಂಶ್ರಯಂ
ಯದರ್ಥಮಂಬೋಧಿ ರಮಂಥ್ಯ ಬಂಧಿಚ

ಸ್ವವೈಶ್ವರೂಪ್ಯೇಣ ಸದಾನುಭೂತಯಾ
ಪ್ಯಪೂರ್ವವದ್ವಿಸ್ಮಯ ಮಾದಧಾನಯಾ
ಗುಣೇನ ರೂಪೇಣ ವಿಲಾಸ ಚೇಷ್ಟಿತೈಃ
ಸದಾ ತವೈವೋಚಿತಯಾ ತವಶ್ರಿಯಾ

ತಯಾಸಹಾಸೀನ ಮನಂತ ಭೋಗಿನಿ
ಪ್ರಕೃಷ್ಟ ವಿಜ್ಞಾನ ಬಲೈಕ ಧಾಮನಿ
ಫಣಾಮಣಿವ್ರಾತ ಮಯೂಖ ಮಂಡಲ
ಪ್ರಕಾಶ ಮನೋದರ ದಿವ್ಯಧಾಮನಿ

ನಿವಾಸ ಶಯ್ಯಾಸನ ಪಾದುಕಾಂಶುಕೋ
ಪದಾನ ವರ್ಷಾತಪವಾರಣಾದಿಭಿಃ
ಶರೀರ ಭೇದೈ ಸ್ತವ ಶೇಷತಾಂ ಗತೈಃ
ಯಥೋಚಿತಂ ಶೇಷ ಇತೀ ರಿತೇ ಯತೈಃ

ಭಕ್ತನು, ಪರಮಾತ್ಮನ ಕೃಪೆಯಿಂದ ಸದ್ಗುರುವನ್ನು ಆಶ್ರಯಿಸಿ ತನಗೂ ಭಗವಂತನಿಗೂ ಇರುವ ಸಂಬಂಧವನ್ನು ಅರಿತುಕೊಂಡು ಭಗವತ್ ಸಂಶ್ಲೇಷಣವನ್ನು ಹೊಂದಲು ಪ್ರಯತ್ನಿಸುವುದೇ ಆಳವಂದಾರ್ ಸ್ತೋತ್ರದ ಮುಖ್ಯ ಬೋಧನೆ. ಗುರಿ ಪರಮಾತ್ಮ, ಮಾರ್ಗ ಪೂರ್ಣ ಶರಣಾಗತಿ, ಪರಮಾತ್ಮನ ಸೇವೆ ಭಕ್ತರಸೇವೆ, ಮಿಕ್ಕೆಲ್ಲ ಕಾಮಗಳಿಂದ ಬಿಡುಗಡೆ ಇವೇ ಸ್ತೋತ್ರರತ್ನದ ಉಪದೇಶ. ಸ್ತೋತ್ರರತ್ನದಲ್ಲಿ, ವಿಶಿಷ್ಟಾದ್ವೈತ ತತ್ವ ಸಿದ್ಧಾಂತದತಿರುಳು ಅಡಗಿದೆಯೆಂದು ಪ್ರಾಜ್ಞರು ಹೇಳುತ್ತಾರೆ. ಯಾಮುನಾಚಾರ್ಯರ ನುಡಿಯಲ್ಲಿ ಹೇಳಬೇಕಾದರೆ ಅದು ಹೀಗೆ

ತಂದೆ ನೀ ತಾಯಂತೆ ನೀಂ ಪತಿ
ನಂದನಂನೀಂ ಪ್ರಿಯಸಖನೀಂ
ಬಂಧುನೀಂ ಗುರುನೀನೆ ಜಗಗಳ ಗತಿಯು ಮಾಗಿರ್ಪೆ
ಸಂದ ನಿನ್ನವನೆಂದು ಕಿಂಕರ
ನೆಂದು ಪರಿಜನನೆಂದು ನೀಂಗತಿ
ಯೆಂದು ಮರೆವೊಕ್ಕನೆ ನಿನ್ನೊಳು ಭರಮಸಿಳುಹಿವೆನೈ

(—ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರ ಭಾಷಾಂತರ)

——

ಟಾಲ್‌ಸ್ಟಾಯ್‌ರವರ ತತ್ವಗಳು

—★—

ಸಾಮಾನ್ಯ ಮನುಷ್ಯರ ನಿತ್ಯವ್ಯವಹಾರವನ್ನು ಕಡೆಗಣಿಸಿ, ಜೀವನದ ದಿನದಿನದ ಅಲ್ಪ ಸಮಸ್ಯೆಗಳನ್ನು ಗಮನಿಸದೆ, ಈ ಬಾಳಿನ ಅರ್ಥವೇನೆಂಬ ಶಾಶ್ವತವಾದ ಪ್ರಶ್ನೆಯನ್ನು ಕೇಳುವ, ದೀರ್ಘದರ್ಶಿಗಳೂ ದೃಷ್ಟಾರರೂ ಆದ ಮನುಷ್ಯ ಜಗತ್ತಿನ ಗುರುಗಳು ಆಗಿಂದಾಗ್ಯೆ ಎಲ್ಲ ದೇಶಗಳಲ್ಲಿಯೂ ಜನಿಸಿದ್ದಾರೆ. ಬಾಳಿನ ಅರ್ಥವೇನು? ಎಂಬ ಬಾಳ ಜೀವಾಳದ ಪ್ರಶ್ನೆಯ ಹೊರತು, ಉಳಿದುದಾವುದೂ ಅವರಿಗೆ ಮುಖ್ಯವಾಗಿ ತೋರುವುದಿಲ್ಲ. ಅವರು ಆ ಪ್ರಶ್ನೆಯನ್ನು ಕೇಳಿದಾಗ ಮೊದಮೊದಲು "ಇವರೇನೋ ಹೇಳಿಕೊಳ್ಳುತ್ತಾರೆ" ಎಂದು ಜನ ಉದಾಸೀನರಾಗಿದ್ದರೂ, ಕೊನೆಯಲ್ಲಿ, ಅವರು ಬದುಕಿರುವಾಗಲೇ, ಅಥವಾ ಅನಂತರದಲ್ಲಿಯಂತೂ, ಜನತೆ, ಅವರ ಉಪದೇಶಗಳನ್ನು ಒಪ್ಪಿಯೇ ಒಪ್ಪುತ್ತದೆ. ಇಂತಹ ಗುರುಗಳು, ಬರಿಯ ವಾದದ ಅಥವಾ ವೇದಾಂತ ಜ್ಞಾನ ಮಾರ್ಗದ ದರ್ಶನಿಗಳು ಮಾತ್ರವೇ ಅಲ್ಲ. ಅವರು ತಾವು ಕಂಡುಹಿಡಿದ ಅಥವಾ ಕಂಡ ಸತ್ಯಕ್ಕನುಸಾರವಾಗಿ, ನಿತ್ಯಜೀವನದಲ್ಲಿ ಆ ಸತ್ಯವನ್ನು ಅಳವಡಿಸಿಕೊಳ್ಳುವವರು; ಆ ಸತ್ಯಕ್ಕೆ ಅನುಸಾರವಾಗಿಯಲ್ಲದೆ ಬಾಳುವುದು ಅವರಿಗೆ ಸಾಧ್ಯವೇ ಇಲ್ಲ. ತಮ್ಮ ಸುತ್ತಮುತ್ತಲ ಜನರು ಯಾವುದರ ಬೆನ್ನು ಹತ್ತುತ್ತಾರೋ, ಆ ಆಕರ್ಷಣೆಗಳು ಅವರ ಮನಸ್ಸನ್ನು ಹಿಡಿಯುವುದೇ ಇಲ್ಲ. ಆ ಗುರುಗಳು ಜನತೆಯ ಮನಸ್ಸನ್ನೇ ಬದಲಾಯಿಸಿ ಅವರ ಮುಂದೆ ತಾವು ಕಂಡುಹಿಡಿದ ಹೊಸ ಸತ್ಯವನ್ನು ಇಡುವರು. ಜನತೆ ತಮ್ಮ ಕಡೆಗೆ ಒಲಿಯದಿದ್ದರೆ, ತಾವೇ ಜನರ ಬಾಳಿನಿಂದ ಹೊರಗಾಗಿ, ತಮ್ಮ ಧ್ಯೇಯಕ್ಕೆ ಅನುಸಾರವಾದ ಬಾಳನ್ನು ಬಾಳತೊಡಗುವರು. ಆದರೂ ಯಾವಮಟ್ಟದಲ್ಲಿ ತಾವು ಸತ್ಯವನ್ನು ಕಂಡರೋ, ಆ ಮಟ್ಟಕ್ಕೆ ಉಳಿದವರನ್ನು ಒಯ್ಯುವುದೇ ಅವರ ಗುರಿಯಾಗಿರುವುದು. ಇಂತಹ ಜಗದ್ವಂದ್ಯ ಜಗತ್ ಹಿತೈಷಿಗಳ ಪಂಗ್ತಿಗೆ ಸೇರಿದವರು ಕೌಂಟ್‌ಲಿಯೋಟಾಲ್‌ಸ್ಟಾಯ್, ಮತ್ತು ಮಹಾತ್ಮ ಗಾಂಧಿ ಮೊದಲಾದವರು. ಅಂತಹವರು ಜಗತ್ತಿನಲ್ಲಿ ಯಾವಾಗಲೂ ಅಪರೂಪವೇ.

ಟಾಲ್‌ಸ್ಟಾಯ್‌ರವರ ಬಾಳಿನಲ್ಲಿ ಮೊದಲು ದೃಷ್ಟಿಗೆ ಬೀಳುವುದು, ಅವರ ಬುದ್ಧಿ ಮತ್ತು ಕಾರ್ಯಗಳ ಸಮರಸ; ಕಾಯಾ ವಾಚಾ ಮನಸಾ ಒಮ್ಮುಖತೆ. ಯುಧಿಷ್ಠಿರನು "ದುಃಖ ತಪ್ತರಾದ ಪ್ರಾಣಿಗಳ ದುಃಖವನ್ನು ಹೋಗಲಾಡಿಸುವುದೇ ನನಗೆ ಬೇಕಾದುದು" ಎನ್ನುತ್ತಾನೆ. ಟಾಲ್‌ಸ್ಟಾಯ್, ಆಧುನಿಕ ಜಗತ್ತಿನ ಜಟಿಲ ಸಮಸ್ಯೆಗಳ ಸಂವಿಧಾನಕ್ಕೆ ಸಿಕ್ಕಿಕೊಂಡರೂ ಒಂದೇ ಒಂದು ಉಚ್ಚಧ್ಯೇಯಕ್ಕೆ ಅಂಟಿಕೊಂಡಿದ್ದಾರೆ. ಅವರ ಕಲಾಕೃತಿಗಳಲ್ಲಿಯೂ ವೇದಾಂತಕೃತಿಗಳಲ್ಲಿಯೂ ಈ ಧ್ಯೇಯವೇ ಎದ್ದು ಕಾಣುತ್ತಿದೆ. ಟಾಲ್‌ಸ್ಟಾಯ್‌ರವರು ತಮ್ಮ ಸಾಹಿತ್ಯದಲ್ಲಿ ಜೀವನವನ್ನು ಭಾವನಾಪ್ರಧಾನವಾಗಿ ಚಿತ್ರಿಸಿದ್ದಾರೆ. ಆದರೆ ಸ್ಪಷ್ಟವಾದ ಆದರ್ಶದ ಗುರಿಯಿಲ್ಲದೆ, ಅವರು ಒಂದು ಮಾತನ್ನೂ ಬರೆದಿಲ್ಲ. ತಾವು ಹೇಳಿದುದನ್ನು ಅವರು ಆಚರಿಸಿದ್ದಾರೆ. ಅವರು ಬಾಳಿನ ವೈಭವಯುಕ್ತ ವೈವಿಧ್ಯವನ್ನು ನಾಟಕೀಯವಾಗಿ, ಪೂರ್ಣವಾಗಿ ವಿವಿಧ ಮುಖಗಳಲ್ಲಿ ಅನುಭವಿಸಿದ್ದಾರೆ. ಯುದ್ಧಭೂಮಿಯಲ್ಲಿ, ಸಮಾಜದ ಧನಿಕರ ಸಹವಾಸದಲ್ಲಿ, ಯೂರೋಪುದೇಶದ ನಗರಗಳ ನಾಗರೀಕತೆಯಲ್ಲಿ, ಹಳ್ಳಿಯ ಧನಸುಖಲೋಲುಪ್ತ ಜಮೀನ್ದಾರರ ಜಹಗೀರಿಯಲ್ಲಿ ಎಲ್ಲೆಲ್ಲೂ ಅಂದಿನ ಬಾಳಿನ ನಾನಾ ಕಹಿ ಸಿಹಿಗಳನ್ನು ಅನುಭವಿಸಿ, ಕೊನೆಗೆ ದುಡಿಯುವ ಬಡರೈತನ ಬಾಳು ಉತ್ತಮವಾದುದೆಂಬ ತೀರ್ಮಾನಕ್ಕೆ, ಅವರು ಬಂದರು. ಹಸಿದವರನ್ನೂ ದೀನರನ್ನೂ ದರಿದ್ರರನ್ನೂ ದಲಿತರನ್ನೂ ಸೇವಿಸುವುದರಲ್ಲಿಯೇ ತಮ್ಮ ಸುಖವಿದೆ ಎಂದುಕೊಂಡರು. ಸಮದರ್ಶಿಗಳಾದ ಪಂಡಿತರಂತೆ ಅವರು ರೋಗಿಷ್ಟರೊಂದಿಗೂ ತೊನ್ನುಹಿಡಿದವರೊಂದಿಗೂ ಒಂದೇ ತಟ್ಟೆಯಲ್ಲಿ ಊಟ ಮಾಟಲು ಹಿಂಜರಿಯಲಿಲ್ಲ, ಆದರೆ ಒಂದು ದೃಷ್ಟಿಯಲ್ಲಿ ಅವರು ಹಿಂದಲ ಆ ಪಂಡಿತರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಆಧುನಿಕ ನಾಗರೀಕತೆಯ ಸಂಪರ್ಕದಿಂದ ಟಾಲ್‌ಸ್ಟಾಯ್‌ರವರ ಬುದ್ಧಿ, ಮನೋಭಾವ ಬಹಳ ವಿಶಾಲವಾಗಿದೆ. ಅತ್ಯಂತ ಮೇಧಾವಿಗಳೂ ದೃಷ್ಟಾರರೂ ಆದ ಅವರು ಆಧುನಿಕ ಜಗತ್ತಿನ ಎಲ್ಲ ಸಮಸ್ಯೆಗಳ ಮೇಲೂ, ಪ್ರಶ್ನೆಗಳ ಮೇಲೂ ತಮ್ಮ ಜ್ಞಾನ ವಿವೇಕ ಜ್ಯೋತಿಯ ಬೆಳಕನ್ನು ಬೀರಿದ್ದಾರೆ, ಇಂದಿನ ಸಮಾಜ ಜೀವನದ ಚಟುವಟಿಕೆಗಳು. ನಂಬಿಕೆಗಳು, ವೇದಾಂತಕಲೆಗಳ ಅಭ್ಯಾಸ,ಆದರ್ಶ ಸಾಮಾಜಿಕ ರಾಜಕೀಯ ಪ್ರವೃತ್ತಿ ಕ್ರಿಯೆಪ್ರತಿಕ್ರಿಯೆಗಳು, ಇವೆಲ್ಲ ಅವರ

ಅಧ್ಯಯನ ಪರಿಶೋಧನೆಗೆ ಸಂಬಂಧಪಟ್ಟ ವಿಷಯಗಳಾಗಿವೆ. ಟಾಲ್‌ಸ್ಟಾಯ್ ಸಮಾಜಕ್ಕೆ ಹೀಗೆ ಎರಡು ಬಗೆಯಿಂದ ಸೇವೆ ಮಾಡಿದ್ದಾರೆ. ಪ್ರಪಂಚದ ಪರವಾಗಿ ಪ್ರಪಂಚಕ್ಕೆ ಹೊಂದಿಕೊಂಡ ಒಂದು ದೃಷ್ಟಿ; ಪ್ರಪಂಚಕ್ಕೆ ವಿರೋಧ ವಾಗಿ ತಮ್ಮದೇ ಆದ ಆದರ್ಶ ಬಾಳಿನ ಒಂದು ದೃಷ್ಟಿ. ತಮ್ಮ ಧ್ಯೇಯಗಳನ್ನು ತಮ್ಮ ಆಚರಣೆಯಲ್ಲಿ ತಂದುದು ಪ್ರಪಂಚದ ಪರವಾದ ದೃಷ್ಟಿ. ಜಗತ್ತಿನ ಈ ವರೆಗಿನ ಒಪ್ಪಿಗೆಯಾದ ಪದ್ಧತಿ, ಜೀವನಕ್ರಮಗಳನ್ನೆಲ್ಲ ಎದುರಿಸಿದುದು ಪ್ರಪಂಚಕ್ಕೆ ವಿರೋಧವಾದ ದೃಷ್ಟಿ. ಅವರು ಹೇಳುವ ಮಾತು ನಮ್ಮ ಮನಸ್ಸಿಗೆ ನಾಟಿಯೇ ನಾಟುತ್ತದೆ. ಅವರ ಮಾತಿನಲ್ಲಿ ಅದ್ವಿತೀಯವಾದ ಸರಳತೆ, ಋಜುತ್ವ ಮತ್ತು ಓಜಸ್ಸು ಇವೆ. ಅವರು ಹೇಳುವ ಮಾತುಗಳನ್ನು ದೂರ ದೃಷ್ಟಿಯುಳ್ಳ ಮೇಧಾವಿಗಳು ಯಾರೂ ಕೇಳದಿರುವುದು ಸಾಧ್ಯವಿಲ್ಲ. ಸಾಮಾನ್ಯ ರೈತನ ಉಡುಪನ್ನು ಧರಿಸಿ, ತನ್ನ ಆದರ್ಶವನ್ನು ಬೇಕಾದವರು ಆರಿಸಿಕೊಳ್ಳಬಹುದೆಂದು, ಜಗತ್ತಿನ ಮುಂದೆ ಸಕಾರಣವಾದ ವಿವೇಕವಾದ ಬೋಧನೆಯನ್ನು ಈತ ಇಟ್ಟದ್ದಾನೆ. ಜಗತ್ತಿನ ಭಾವೀ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಗೆ ಈತನು ಸೂಚಿಸಿರುವ—ಅಥವಾ ಜ್ಞಾಪಕಪಡಿಸುತ್ತಿರುವ—ಹಿಂದಲ ಮಾರ್ಗವೇ ಆದರ್ಶವಾಗಿ ತೋರುತ್ತಿದೆ.

ಈ ಆಕರ್ಷಣೆಯ ರಹಸ್ಯವೇನು? ನಾವು ಮೊದಲೇ ಹೇಳಿದಂತೆ ಟಾಲ್‌ಸ್ಟಾಯ್ ತಮ್ಮ ಆದರ್ಶವನ್ನು ತಮ್ಮ ಬಾಳಿನಲ್ಲಿ ಬಾಳಿದರು. ಅವರ ಕತೆಗಳೂ ವಿಮರ್ಶೆಗಳೂ ಅವರ ಮನಸ್ಸಿನ ಬೆಳವಣಿಗೆಯನ್ನೇ ಹೆಜ್ಜೆ ಹೆಜ್ಜೆಗೂ ಪ್ರಕಟಿಸುತ್ತಿರುವ ಯಾತ್ರಿಕನ ನಡೆಗಳಾಗಿವೆ. ಎಂದೆಂದಿಗೂ ಕುತೂಹಲವನ್ನು ಮಾಯಿಸದ ಜಗತ್ತಿನ ಸಮಸ್ಯೆಗಳೊಂದಿಗೆ, ಟಾಲ್‌ಸ್ಟಾಯ್ ತಾವೂ ಒಂದಾಗಿದ್ದುದ್ದು ಎರಡನೆಯ ಕಾರಣ. ಅವರ ಸೃಷ್ಟಿಗಳಾದ ಪಿಯರಿ, ಲೆವಿನ್, ನೆಕುಲಡಾಫ್ ಅವರು ನಮ್ಮ ಕಣ್ಣುಗಳ ಮುಂದೆ ಹೋಗುವಾಗ, ನಾವು ನೋಡುವುದು ಟಾಲ್‌ಸ್ಟಾಯ್ ಅವರ ಆತ್ಮದ ತೊಳಲಾಟವನ್ನು; ಸಾವಿನಿಂದ ಬಾಳಿಗೆ ಪ್ರಯಾಣ ಬೆಳೆಸುತ್ತಿರುವ ಎಲ್ಲ ಜೀವಿಗಳ ಪ್ರವಾಸವನ್ನು. ಟಾಲ್‌ಸ್ಟಾಯ್‌ರವರ ಸೃಷ್ಟಿಯಾದ ಇವಾನ್ ಇಲಿಚ್, ಈ ಗುರಿಯನ್ನು ಮುಟ್ಟುವುದಕ್ಕೆ ಮುಂಚೆಯೇ ಸಾಯುತ್ತಾನೆ; ಅಥವಾ ಮರಣದ ಅಲೆಗಳು ಅವನ ಮೇಲೆ ಹಾದುಹೋಗುತ್ತಿರುವಾಗ, ಈ ತತ್ವ ಅವನಿಗೆ ಗೊತ್ತಾಗುತ್ತದೆ. ಟಾಲ್

ಸ್ಟಾಯ್ ರವರು ತಮ್ಮ ಸ್ವಂತ ಅನುಭವವನ್ನೇ ಕುರಿತು ಹೇಳುತ್ತಾ "ನಾನು ಅತ್ಯಂತ ಪ್ರಸಿದ್ಧನೂ ಆರೋಗ ದೃಢಕಾಯನೂ ಧನಮದ ಯೌವನಮದ "ವಿದ್ಯಾಮದ ರೂಪಮದವುಳ್ಳವನಾಗಿದ್ದಾಗಲೂ ಸಹ" ಇವೆಲ್ಲ ಇದ್ದರೂ ಕೊನೆಯಲ್ಲಿ ಏನು? ಇವು ಅಲ್ಪ" ಎಂಬ ಭಾವನೆ ಬರುತ್ತಿದ್ದಿತು ಎನ್ನುತ್ತಾರೆ. ಇದರ ಪರಿಹಾರೋಪಾಯವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ, ಟಾಲ್‌ಸ್ಟಾಯ್ ಧರ್ಮದ ಮಾರ್ಗವನ್ನೇ ಅನುಸರಿಸಿ ಬೈಬಲಿಗೆ ಆಧುನಿಕ ವ್ಯಾಖ್ಯಾನವನ್ನೇ ಮಾಡಿದ್ದಾರೆ. ಇವಾನ್ ಇಲಿಚ್‌ನ ಕತೆ, ಅನೇಕ ಮನೆಗಳನ್ನೂ ಸೌಧಗಳನ್ನೂ ಕಣಜಗಳನ್ನೂ ಕಟ್ಟಿದರೂ, ಮನುಷ್ಯ ಕೊನೆಯಲ್ಲಿ ತನ್ನ ಆತ್ಮವನ್ನು ಕೊಡಬೇಕೆನ್ನುವುದಕ್ಕೆ ದೃಷ್ಟಾಂತ. 'ಪುನರ್ಜನ್ಮ' ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಹೆಣ್ಣಿನ ಕತೆ, 'ಲೈಫ್' ಎಂಬ ಗ್ರಂಥದಲ್ಲಿ ಟಾಲ್‌ಸ್ಟಾಯ್ ಅವರು ಜೀವನವನ್ನು ಕುರಿತ ತಮ್ಮ ವೇದಾಂತವನ್ನು ಸಂಕ್ಷೇಪವಾಗಿ ವಿವರಿಸಿದ್ದಾರೆ.

ಇಲ್ಲಿ ವಿಷಯ ಪ್ರಾರಂಭವಾಗುವುದು, ಒಬ್ಬ ಗಿರಣಿಯ ಮಾಲೀಕನ ಕತೆಯಿಂದ. ಕಾಳುಗಳನ್ನು ಯಾವಾಗಲೂ ಅರೆದು ಹಿಟ್ಟುಮಾಡುವುದು ತನ್ನ ಬಾಳಿನ ಕರ್ತವ್ಯ ಎಂದು ಗಿರಣಿ ಯಜಮಾನನಿಗೆ ಗೊತ್ತು. ಆದರೆ ಇದ್ದಕ್ಕಿದ್ದಂತೆ ಒಂದು ಸಲ ಆತನ ದೃಷ್ಟಿ, ಆ ಯಂತ್ರದ ಶಾಸ್ತ್ರದ ಕಡೆ ಹೋಗುತ್ತದೆ. ಅವನದೃಷ್ಟಿ ಕೊನೆಯಲ್ಲಿ ಯಂತ್ರದ ಓಟಕ್ಕೆ ಕಾರಣವಾದ ನದಿಯ ಕಟ್ಟೆ, ಕೊನೆಗೆ ನದಿಯವರೆಗೆ ಹೋಗಿ ನಿಲ್ಲುತ್ತದೆ. ತಾನು ಬೀಸಬೇಕಾದ ಕಾಳಿನ ದೃಷ್ಟಿ ಅವನಿಗೆ ಮರೆತು, ಪೂರ್ಣ ಆಸಕ್ತಿಯೂ ಕುತೂಹಲವೂ ನದಿಯಲ್ಲಿ ಅಡಕವಾಗಿ ನಿಲ್ಲುತ್ತದೆ. ಗಿರಣಿಯ ರಹಸ್ಯವಿರುವುದು ನದಿಯಲ್ಲಿ ಎಂಬುದು ಅವನಿಗೆ ಗೊತ್ತಾಗುತ್ತದೆ. ಗಿರಣಿ ಎಂಬುದೇ ಬಾಳು. ಈ ಬಾಳು ಸಾಧಿಸುವ ಒಳ್ಳೆಯದೇ ಕಾಳು. ಆದರೆ ಗಿರಣಿಯ ಮಾಲೀಕನಿಗೆ ಇದು ಸರಿಯಾಗಿ ಅರ್ಥವಾಗುವುದಿಲ್ಲ. ಮನುಷ್ಯ, ತನ್ನನ್ನು ತಾನು ತಿಳಿದುಕೊಳ್ಳಬೇಕೆಂದು ಟಾಲ್‌ಸ್ಟಾಯ್ ಹೇಳುತ್ತಾರೆ. ಮನುಷ್ಯ ತನ್ನನ್ನು ತಾನು ತಿಳಿದುಕೊಳ್ಳಬಹುದು. ಇತರರನ್ನು ತಿಳಿದುಕೊಳ್ಳುವುದು ಅವನಿಗೆ ಕಷ್ಟ. ಪ್ರಾಣಿವರ್ಗ ಮತ್ತು ಸಸ್ಯವರ್ಗಗಳ ಜೀವನ ರಹಸ್ಯವನ್ನು ಅರಿಯುವುದು ಅವನಿಗೆ ಇನ್ನೂ ಕಷ್ಟ. ಪ್ರಕೃತಿಯ ರಹಸ್ಯವನ್ನಂತೂ ಅವನು ಅರಿಯಲಾರ. ಕಾಲ ಮತ್ತು ಕ್ಷೇತ್ರ ಇವುಗಳಿಂದ ಬಂಧಿತವಾಗುವುದು ನಮಗೆ ಅರ್ಥವಾಗುತ್ತದೆ ಎಂದು ನಾವು ಯೋಚಿ

ಸುತ್ತೇವೆ. ಆದರೆ ವಾಸ್ತವಾಂಶ ಹಾಗಿಲ್ಲ. ಉದಾಹರಣೆಗೆ. "ಅವನು ನನ್ನನ್ನು ಪ್ರೀತಿಸುತ್ತಾನೆ" ಎಂಬ ಮಾತಾಗಲಿ ಅಥವಾ "ಅವನು ಒಳ್ಳೆಯ ಮನುಷ್ಯ" ಎಂಬ ಮಾತಾಗಲಿ ಕಾಲ ಮತ್ತು ಕ್ಷೇತ್ರದ ಸೂತ್ರದಿಂದ ಬಂಧಿತವಾಗದಿದ್ದರೂ "ಗುರುತ್ವಾಕರ್ಷಣ ತತ್ವ" ಎಂಬುದಕ್ಕಿಂತ ಸುಲಭವಾಗಿ ನಮಗೆ ಅರ್ಥ ವಾಗುತ್ತವೆ. ಸಾಮಾನ್ಯ ಮನುಷ್ಯರು ಜೀವನರಾಶಿಯನ್ನು ಮೂರ ನಿಲುವಿನಲ್ಲಿ ಕಾಣುತ್ತಾರೆ. (೧) ವಿವೇಕಿಗಳಾದ ಮನುಷ್ಯರು. (೨) ಪ್ರಾಣಿಗಳು ಮತ್ತು ಸಸ್ಯಗಳು. (೩) ಜಡವಸ್ತುಗಳು. ಮನುಷ್ಯ ಜೀವರಾಶಿಯನ್ನು ಹೀಗೆ ಕಾಣಲು ಅವನ ದೃಷ್ಟಿ, ಆ ಮೂರು ನಿಲುವುಗಳಲ್ಲಿ ಚಲಿಸುತ್ತಿರುವುದೇ ಕಾರಣವಾಗಿದೆ. ಎಂದರೆ ಮನುಷ್ಯನಿಗೆ, ತಾನು ಪ್ರಾಣಿಗಳ ಮೇಲೆ ಪ್ರಭುತ್ವ ಸ್ಥಾಪಿಸಿರುವ ಬುದ್ಧಿ ಜೀವಿ, ಎಂಬುದು ಗೊತ್ತು. ತಾನೇ ಬುದ್ಧಿಯುಳ್ಳ ಪ್ರಾಣಿ ಎಂಬುದೂ ಗೊತ್ತು; ಕೊನೆಯದಾಗಿ ತಾನೇ ಜಡವಸ್ತು ಎಂಬುದೂ ಗೊತ್ತು.

ಮನುಷ್ಯನಿಗೆ ಎಲ್ಲಕ್ಕಿಂತ ಹೆಚ್ಚಾಗಿ ಬೇಕಾಗಿರುವುದು ಸ್ವಂತ ಸುಖ. ಇದೇ ಬಾಳಿನ ಜೀವ ಸೂತ್ರ. ಆದರೆ ಈ ಗುರಿಯನ್ನು ಸಾಧಿಸಲು ಅವನು ಹೊರಟ ಕೂಡಲೇ, ಅವನಿಗೇ ಗಾಬರಿಯಾಗುವ ಕೆಲವು ಸಿದ್ಧಾಂತಗಳು ಗೋಚರವಾಗುತ್ತವೆ. ಜೀವನದ ಗುರಿ ಸ್ವಂತ ಸುಖ ಎಂಬುದು, ಇತರರ ಗುರಿಯೂ ಆಗಿರುತ್ತದೆ. ತನ್ನ ಗುರಿಯನ್ನು ಸಾಧಿಸಲು ಇವನು ಯಾರ ಯಾರ ಮೇಲೆ ಅವಲಂಬಿಸಬೇಕೋ ಅವರೆಲ್ಲರ ಗುರಿಯೂ ಅದೇ ಆಗಿ, ಅವರ ಬಾಳು ಅವರಿಗೆ, ಇವನ ಬಾಳಿಗಿಂತ ಹೆಚ್ಚು ಮುಖ್ಯವಾಗಿರುತ್ತದೆ. ಒಂದುವೇಳೆ ಹಾಗೆ ವಿರೋಧಿಗಳನ್ನೆಲ್ಲ ದರ್ಪದಿಂದ ಬಗ್ಗಿಸಿದರೂ, ಅವನಿಗೆ ವಯಸ್ಸು ಹೆಚ್ಚುತ್ತ ಬಂದಂತೆ ಅವನು ಹುಡುಕಿಕೊಂಡು ಹೆಣಗುತ್ತಿರುವ ಸುಖಾನುಭವ ಕಡಮೆ ಯಾಗಿ, ನೋವು ದುಃಖ, ಹೆಚ್ಚುತ್ತದೆ. ಕೊನೆಯದಾಗಿ ಜೀವ, ಸಮಸ್ತ ಆನಂದ ವನ್ನು ನಾಶ ಮಾಡುವ ಮರಣದಲ್ಲಿ ಅಂತ್ಯವಾಗುತ್ತದೆ. ಆದರೆ ತನ್ನ ಜೀವ ಹೀಗೆ ಸಾವಿನಲ್ಲಿ ಲೀನವಾದರೂ, ಜಗತ್ತಿನ ಜೀವಗಳ ಪ್ರವಾಹ ಎಂದೆಂದಿಗೂ ಮುಂದೆ ಹರಿಯುತ್ತಿರುವುದನ್ನು ನೋಡಿ ಅವನಿಗೆ ಬಹಳ ಬೇಸರವಾಗುತ್ತದೆ.

ಟಾಲ್‌ಸ್ಟಾಯ್‌ರವರ ವಾದಸರಣಿಯ ದೃಷ್ಟಾಂತಕ್ಕೆ, ಎರಡು ಉದಾ ಹರಣೆಗಳನ್ನು ಕೊಡಬಹುದು. ಅಹಂಕಾರಿಯೂ ಸುಖಲೋಲುಪನೂ ಆದ ಕ್ಲಾಡಿಯೋ, ಕೊನೆಯಲ್ಲಿ, ತಾನು ತಪ್ಪಿಸಿಕೊಳ್ಳಬೇಕೆಂದಿದ್ದ ಮರಣದ ಬಲೆಗೆ

ಸಿಕ್ಕುತ್ತಾನೆ. ತನ್ನ ಪುಷ್ಟವಾದ ಸುಂದರವಾದ ದೇಹದ ಈ ಕೊನೆಯನ್ನು ಸಹಿಸುವುದು ಅವನಿಗೆ ಕಷ್ಟವಾಗಿ ಭೀಭತ್ಸವಾಗುತ್ತದೆ. ಗೋರಿಯಲ್ಲಿ ಮಲಗಿ, ಬೆಚ್ಚಗಿರುವ ಈ ದೇಹ, ಬರಿಯ ಒಂದು ಕೊರಡು ಆಗುವುದು ನಿಜವಾಗಿಯೂ ಭಯಂಕರವಾದ ಅಂತ್ಯವೇ ಸರಿ. ಆದರೆ ಹೀಗೆ ದೇಹ ಕೊನೆಯಾಗುವುದು, ಈ ಜೀವನಯಾತ್ರೆಯ ಅಂತ್ಯದಲ್ಲಿ ಮಾತ್ರವೇ ಅಲ್ಲ; ಹುಟ್ಟಿದಂದಿನಿಂದ ಸಾಯುವ ವರೆಗೆ ಮನುಷ್ಯನಿಗೆ ಈ ಯೋಚನೆ, ಈ ಭೂತ, ಇದ್ದೇ ಇದೆ. ಆದರೆ ಇದೊಂದು ಶಾಶ್ವತ: ಮರಣವೇ. ಮೋಪ್‌ಸೆಂಟ್ ಎಂಬ ಫ್ರೆಂಚ್ ಕತೆಗಾರ, ದೋಪೈಕದ್ಯಶ್ ಆದ ಕವಿ ವಾರ್ನೆ ಎಂಬುವನ ಬಾಯಲ್ಲಿ ಹೇಳಿಸಿರುವ ಈ ಮುಂದಲ ಮಾತು ಗಳು, ಬಾಳು ಎಂದೆಂದಿಗೂ ಸಾವೇ ಎಂಬುದನ್ನು ಸ್ಪಷ್ಟಪಡಿಸುತ್ತವೆ. ವಾರ್ನೆ ಹೀಗೆ ಹೇಳುತ್ತಾನೆ.

“ನನ್ನದೇಹದಲ್ಲಿ ಒಂದು ಪ್ರಾಣಿ ಸೇರಿಕೊಂಡು ಒಳಗೇ ಕೊರೆಯುತ್ತಿದ್ದರೆ ಹೇಗೋ ಹಾಗೆ, ಹದಿನೈದು ವರ್ಷಗಳಿಂದ ಸಾವು ನನ್ನಲ್ಲಿರುವುದನ್ನು ನಾನು ಅನುಭವಿಸಿದ್ದೇನೆ. ಆಕೆ (ಸಾವು) ಸ್ವಲ್ಪ ಸ್ವಲ್ಪವಾಗಿ ಗಂಟೆ ಗಂಟೆಗೆ ತಿಂಗಳು ತಿಂಗಳಿಗೆ ಹಳೆಯ ಮನೆಯನ್ನು ಚೂರು ಚೂರಾಗಿ ಕೆಡಹುವಂತೆ ನನ್ನನ್ನು ಜರ್ಝರಿತ ಮಾಡುತ್ತಿದ್ದಾಳೆ. ನನಗೆ ನಾನೇ ಗುರುತು ಸಿಕ್ಕದಷ್ಟು ಅವಳು ನನ್ನ ರೂಪವನ್ನು ಬದಲಾಯಿಸಿಬಿಟ್ಟಿದ್ದಾಳೆ. ನನ್ನ ಯೌವನ ಪೂರ್ಣವಾಗಿ ನಾಶವಾಗಿದೆ. ಆ ಗೆಲವು ತೇಜಸ್ಸು ಆರೋಗ್ಯ ವೀರ್ಯ ಎಲ್ಲವನ್ನು ಇವಳು ಅಪ ಹರಿಸಿದ್ದಾಳೆ. ಆಕೆ ಮೋಸದಿಂದ ನನ್ನ ಕಪ್ಪು ಕೂದಲುಗಳೆಲ್ಲವನ್ನೂ ಬೆಳ್ಳಗೆ ಮಾಡುತ್ತಿರುವುದು ನನಗೇ ಕಾಣುತ್ತಿದೆ. ಮೊದಲು ನನ್ನಲ್ಲಿದ್ದ ಪುಷ್ಟವಾದ ಮಾಂಸಖಂಡಗಳು, ಹಲ್ಲು. ರಕ್ತಬಲ ಎಲ್ಲವನ್ನು ಅಪಹರಿಸಿ ನಿರುತ್ಸಾಹಿಯಾದ ಪ್ರಾಣ ಒಂದನ್ನು ಮಾತ್ರ ಬಿಟ್ಟಿದ್ದಾಳೆ. ಇನ್ನೇನು ಸ್ವಲ್ಪದರಲ್ಲಿ ಅದನ್ನೂ ಅಪ ಹರಿಸಿ ಬಿಡುತ್ತಾಳೆ. ಹೌದು, ಅವಳು ನನ್ನನ್ನು ತೂತು ಮಾಡಿಬಿಟ್ಟಿದ್ದಾಳೆ. ನನ್ನ ಈ ನಾಶವನ್ನು ನಿಧಾನವಾಗಿ ಕ್ರೂರವಾಗಿ ಭಯಂಕರವಾಗಿ ನಡೆಸಿದ್ದಾಳೆ. ಈಗ ನನ್ನ ಪ್ರತಿಯೊಂದು ಕಾರ್ಯದಲ್ಲಿಯೂ ನನ್ನ ಸಾವು ಕಾಣುತ್ತಿದೆ. ನಾನು ಪ್ರತಿಯೊಂದುಸಲ ಉಸಿರಾಡುವಾಗಲೂ ಅವಳು ಹತ್ತಿರ ಹತ್ತಿರ ಬರುತ್ತಿದ್ದಾಳೆ. ಊಟ, ನಿದ್ರೆ, ಕುಡಿತ, ಕೆಲಸ, ಕನಸು, ಉಸಿರಾಡುವುದು, ಒಟ್ಟಿನಲ್ಲಿ ನಾವು ಮಾಡುತ್ತಿರುವುದೆಲ್ಲ ಸಾವೇ. ಜೀವನವೇ ಸಾವು.”

ಸಾಮಾನ್ಯ ಇಂದ್ರಿಯಲೋಲುಪ ಮನುಷ್ಯ ಹೇಳುವುದು ಹೀಗೆ. ಅವನು

ಹಾಗೆ ಹೇಳಿದಾಗ ತನ್ನ ಅಭಿಪ್ರಾಯವನ್ನು ನಿರಾಶಾವಾದಿಗಳಾದ ಕವಿಗಳ ಮೂಲಕ ಹೊರಗೆಡಹಿದ್ದಾನೆ. ಇದು ಇಂದ್ರಿಯಗಳಿಗೆ ಒಳಗಾದ ಸುಖಲೋಲುಪತೆಯ ಜೀವನದಿಂದುಂಟಾದ ನಿರುತ್ಸಾಹದ ಫಲ. ಟಾಲ್‌ಸ್ಟಾಯ್‌ರವರು ಕಾರ್ಯಕಾರಿಯಾದ ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಈ ಭಯದಿಂದ ಬಿಡುಗಡೆ ಇಲ್ಲವೆ? ಮನುಷ್ಯನ ಸ್ವಾಭಾವಿಕವಾದ ಸುಖದ ಆಸೆಗೂ, ಆ ಸುಖಸಾಧ್ಯವಲ್ಲ—ಸಾಧ್ಯವಾದರೂ ಶಾಶ್ವತವಲ್ಲವೆಂಬ ಅನುಭವಕ್ಕೂ ಸಮರಸವಿದೆಯೇ? ಈ ಪ್ರಶ್ನೆಗೆ ಟಾಲ್‌ಸ್ಟಾಯ್‌ರವರು ಕೊಟ್ಟಿರುವ ಉತ್ತರ ಪ್ರಾಚೀನವಾದದು ಸರಳವಾದುದು. ಆ ಉತ್ತರ, ಆಧುನಿಕ ಜೀವನ ಸಮಸ್ಯೆಗಳೊಂದಿಗೂ ಮನುಷ್ಯನಸೂಕ್ಷ್ಮ ಭಾವನೆಗಳೊಂದಿಗೂ ನಿಕಟವಾದ ಸಂಬಂಧವುಳ್ಳದ್ದಾಗಿದೆ.

ಮೊದಲನೆಯದಾಗಿ ಜೀವವೆಂದರೇನು? ಈ ಪ್ರಶ್ನೆಗೆ ವಿಜ್ಞಾನ ಯಾವ ಪ್ರತ್ಯುತ್ತರವನ್ನೂ ಕೊಟ್ಟಿಲ್ಲ; ಕೊಡಲಾರದು. ಶಕ್ತಿ ಎಂದರೆ ಏನು ಎಂಬುದನ್ನು ವಿವರಿಸದೆ ವಿಜ್ಞಾನ, ಶಕ್ತಿಗಳ ಪರಸ್ಪರ ಸಂಬಂಧವನ್ನು ಹೇಳಹೋಗುತ್ತದೆ. ಜೀವಿಗಳಲ್ಲಿ ಜೀವನಕ್ಕಾಗಿ ನಡೆಯುತ್ತಿರುವ ಹೋರಾಟವನ್ನು ನೋಡಿ ವಿಜ್ಞಾನವು, ‘‘ಜೀವನದ ಮೂಲವೇ ಹೋರಾಟ. ಹೋರಾಡುವುದೇ ಜೀವನದ ಕಾರ್ಯ” ಎನ್ನುತ್ತದೆ. ಪ್ರಾಣಿಗಳ ಜೀವನದ ನಿಯಮವನ್ನು ನೋಡಿಕೊಂಡು, ಮನುಷ್ಯನ ಬಾಳಿನ ನಿಯಮಗಳನ್ನು ನಿರ್ಣಯಿಸುವ ವಿಜ್ಞಾನ ಮನುಷ್ಯನಿಗೆ ಅವನ ನೀತಿ ಮತ್ತು ನಡತೆಯ ವಿಷಯದಲ್ಲಿ ಮಾರ್ಗದರ್ಶಿಯಾಗಲಾರದು. ಉದಾಹರಣೆಗೆ, ವಿಜ್ಞಾನವು ಮನುಷ್ಯನ ಕೈಯಲ್ಲಿರುವ ರೊಟ್ಟಿಯನ್ನು ಅವನು ಏನು ಮಾಡಬೇಕೆಂದು ಹೇಳುವುದಿಲ್ಲ. ತಾನೇ ತಿನ್ನಬೇಕೇ? ಇತರರಿಗೆ ಕೊಡಬೇಕೇ? ಕೊಡಬೇಕಾದರೆ ಯಾರಿಗೆ ಎಂಬುದನ್ನು ಅದು ತಿಳಿಸುವುದಿಲ್ಲ. ಅದರ ಬದಲು ಮನುಷ್ಯ ಸಮಾಜವೆಲ್ಲ—ಅವರು ಹಿಂದುವಾಗಲಿ ಕ್ರಿಸ್ತರಾಗಲೀ ಚೀಣರಾಗಲೀ ಮುಸಲ್ಮಾನಲಾಗಲೀ-ಅನಾದಿಕಾಲದಿಂದ ತಮ್ಮ ಮತಗ್ರಂಥಗಳಿಂದಲೂ ಧರ್ಮಗ್ರಂಥಗಳಿಂದಲೂ ಜೀವನಸೂತ್ರಗಳಾದ ನೀತಿಗಳನ್ನು ಕಲಿತುಕೊಂಡಿವೆ. ಆ ನೀತಿಗಳು, “ಸ್ವಂತ ಸುಖವೇ ಜೀವನದ ಗುರಿಯಲ್ಲ. ತ್ಯಾಗವೇ ಆತ್ಮಾರ್ಪಣೆಯೇ ಜೀವನದ ಗುರಿ” ಎಂದು ಹೇಳುತ್ತವೆ. ತಾನುಂಟೋ ಮೂರು ಲೋಕವುಂಟೋ ಎಂದು ಮನುಷ್ಯ, ತನ್ನಿಷ್ಟಕ್ಕೆ ತಾನು ಸ್ವಾರ್ಥಿಯಾಗುವುದನ್ನು, ಯಾವಧರ್ಮವೂ ಒಪ್ಪುವುದಿಲ್ಲ. ತನ್ನ ಸ್ವಂತಬಾಳಿಗಾಗಲೀ, ತನಗೆ ಸೇರಿದ

ತನ್ನ ಸಂಸಾರದವರ ಬಾಳಿಗಾಗೇಲಿ, ಕೊನೆಗೆ ದೇಶ ಸಾಮ್ರಾಜ್ಯದ ಹೆಸರಿನಲ್ಲಿಯಾಗಲೀ, ಮನುಷ್ಯ ಸ್ವಾರ್ಥಿಯಾಗಬಾರದೆಂದು ಎಲ್ಲ ಧರ್ಮಗಳೂ ಸಾರುತ್ತಿವೆ. ಮನುಷ್ಯನಲ್ಲಿರುವ ವಿವೇಕದಿಂದ ಅವನಿಗೆ "ಸ್ವಾರ್ಥದಿಂದ ಸುಖವಿಲ್ಲ. ಸ್ವಂತ ಸುಖವನ್ನು ಸಾಧಿಸುವುದೂ ಸಾಧ್ಯವಿಲ್ಲ" ಎಂಬ ಮಹನೀಯರ ಬೋಧನೆ ಅದನ್ನು ಅನುಸರಿಸಲು ಅವನಿಗೆ ಶಕ್ತಿ ಇಲ್ಲದಿದ್ದರೂ ಸರಿ, ಎಂದು ಗೊತ್ತಾಗುತ್ತದೆ. ಅಂತೂ ಮನುಷ್ಯನ ವಿವೇಕದ ಮೊದಲನೆಯ ಕಾರ್ಯ, ಈ ಜೀವನವನ್ನು ವಿಷಮವಾಗಿಸಿರುವ, ಈ ಜೀವನದಲ್ಲಿಯ ಪರಸ್ಪರ ಆಭಾಸವನ್ನು ತೋರಿಸಿ ಅವನನ್ನು ಕಾತರ ಉದ್ವಿಗ್ನನನ್ನಾಗಿ ಮಾಡುವುದೇ ಆಗಿದೆ. ಅವನ ವಿವೇಕವು ಅವನಿಗೆ ಹೀಗೆ ಹೇಳುವಂತೆ ತೋರುತ್ತದೆ: "ತನ್ನಲ್ಲಿ ತಾನು ತುಷ್ಟವಾಗಿರುವ ಪ್ರಾಣಿಯನ್ನು ನೋಡು. ಅದಕ್ಕೆ ಗೊತ್ತಿರುವುದು ತನ್ನ ಆವಶ್ಯಕತೆಗಳೇ ಹೊರತು ಮತ್ತೇನೂ ಅಲ್ಲ. ಆದರೆ ನಿನ್ನನ್ನೇ ನೋಡಿಕೊ. ನಿನಗೆ ತೃಪ್ತಿ ಎಂಬುದೇ ಇಲ್ಲ." ಈ ಗಂಟನ್ನು ಬಿಡಿಸುವುದು ಮೊದಲು ಮೊದಲು ಮನುಷ್ಯನಿಗೆ ಸಾಧ್ಯವಿಲ್ಲ. ಆದುದರಿಂದ ಅವನು ಅದನ್ನು ಕತ್ತರಿಸಿಬಿಡುತ್ತಾನೆ. ಎಂದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸಮಸ್ಯೆ ಅಂತಹ ಬಿಕ್ಕಟ್ಟಿಗೆ ಬಂದಾಗ, ಜೀವನ ಕೊನೆಯಾದಂತೆ ಕಾಣುತ್ತದೆ. ಆದರೆ ಟಾಲ್‌ಸ್ಟಾಯ್, "ಜೀವನ ಕೊನೆಯಾದಂತೆ ಕಾಣುತ್ತದೆಯೇ ಹೊರತು ನಿಜವಾಗಿ ಕೊನೆಗಾಣುವುದಿಲ್ಲ. ಜೀವನ ನಿಜವಾಗಿ ಪ್ರಾರಂಭವಾಗುವುದು ಅಲ್ಲಿಂದಲೇ" ಎನ್ನುತ್ತಾರೆ.

ಹೀಗೆ, ಭೌತದ ಬಾಳಿನಿಂದ ಪ್ರಯೋಜನವಿಲ್ಲ. ಇದು ಬರಿಯ ನೀರಿನ ಮೇಲಿನ ಗುಳ್ಳೆ, ಎಂಬುದನ್ನು ಮನುಷ್ಯನಿಗೆ ಅವನ ವಿವೇಕ ತೋರಿಸಿದ ಮೇಲೆ ವಿವೇಕದ ಎರಡನೆಯ ಕಾರ್ಯವೇನು? ಇದಕ್ಕೆ ಟಾಲ್‌ಸ್ಟಾಯ್ ಹೀಗೆ ಪ್ರತ್ಯುತ್ತರ ಕೊಡುತ್ತಾರೆ. ಮನುಷ್ಯನ ಬಾಳಿನಲ್ಲಿ ಮುಖ್ಯವಾದುದು ಕರ್ತವ್ಯ, ಸತ್ಫಲವೇ ಗುರಿಯಾದ ಕರ್ತವ್ಯ. ಪ್ರಾಣಿಯ ಮೂಲಭೂತ ಸ್ವಭಾವ ಸುಮ್ಮನೆ ಬಿದ್ದಲ್ಲಿಯೇ ಬಿದ್ದಿದ್ದು ಉಸಿರಾಡುತ್ತಿರುವುದಷ್ಟೇ. ಆದರೆ ಹಾಗೆ ಮಾಡುವುದರಿಂದ, ತನ್ನ ಬೆಳವಣಿಗೆ ಪೂರ್ಣವಾಗುವುದಿಲ್ಲವೆಂದು ಆ ಪ್ರಾಣಿಗೆ ಗೊತ್ತು. ಆದುದರಿಂದ ಅದು ಎದ್ದು ಬೇಟೆಯಾಡಿ ಆಹಾರವನ್ನು ಹುಡುಕಿ ತನ್ನ ಸಂತತಿಯನ್ನು ಮುಂದುವರಿಸುತ್ತದೆ. ಹಾಗೆಯೇ ಮನುಷ್ಯನೂ ತನ್ನ ಸದ್ಗತಿಯ ಮಾರ್ಗವನ್ನು ಹುಡುಕಬೇಕು. ಇದೊಂದು ಆಕಸ್ಮಿಕವಲ್ಲ. ಮನುಷ್ಯನಾಗಿ

ಹುಟ್ಟಿದುದಕ್ಕೆ ಮಾಡಬೇಕಾದ ಅನಿವಾರ್ಯ ಕರ್ತವ್ಯ. ಭೌತಜನನ ಹೇಗೋ ಹಾಗೆಯೇ ಆಧ್ಯಾತ್ಮಿಕ ಜನನವೂ, ಮನುಷ್ಯನಿಗೆ ಒಂದು ಕಾಲದಲ್ಲಿ ಉಂಟಾಗುತ್ತದೆ. ಆಗ ಅವನ ಹಳೆಯ ಬಾಳು ನಾಶವಾಗಿ ಹೊಸ ಬಾಳು ಉದಯಿಸುತ್ತದೆ. ಆದರೆ ಭೌತಜನನ ಕಣ್ಣಿಗೆ ಕಾಣುತ್ತದೆ. ಆಧ್ಯಾತ್ಮಿಕ ಜನನ ಕಾಣುವುದಿಲ್ಲ. ನಿಜ. ಆಧ್ಯಾತ್ಮಿಕ ಜನನ ಜೀವನದಲ್ಲಿ ಸಂಭವಿಸುವುದೇ ಒಂದು ಅದ್ಭುತ. ಪ್ರಾರಂಭದಲ್ಲಿ ಅದು ಮನುಷ್ಯನನ್ನು ಉತ್ಸಾಹ ಹೀನನನ್ನಾಗಿ ಮಾಡುತ್ತದೆ. ಅದರಿಂದ ಮನಸ್ಸಿಗೆ ನೋವೂ ಸಹ ಉಂಟಾಗುತ್ತದೆ. ಆದರೆ ಅದರಿಂದ ಗಾಬರಿಗೊಳ್ಳಬೇಕಾದುದೇನೂ ಇಲ್ಲ. ಈ ಆಧಿಭೌತ ಜನನವೆಂಬುದು ಮನಸ್ಸಿನ ವ್ಯಾಪಾರ. "ನಾನು ಇದುವರೆಗೆ ಪಶುಪ್ರಾಣಿಯಾಗಿದ್ದೆ. ಇನ್ನು ಇದು ಸಾಕು" ಎಂದು ಮನುಷ್ಯ ತನ್ನನ್ನೇ ತಿರಸ್ಕರಿಸಿಕೊಳ್ಳುತ್ತಾನೆ. ಅಲ್ಲಿಂದ ಮುಂದೆ ಮನುಷ್ಯನ ಪ್ರಗತಿ ಪ್ರಾರಂಭವಾಗುತ್ತದೆ. ಈ ಪ್ರಗತಿ ಮನುಷ್ಯನನ್ನು ಉನ್ನತಿಗೇರಿಸುತ್ತದೆ. ಅವನ ಭಾವನಾಶೀಲತೆ, ಧ್ಯೇಯವಾದಿತ್ವ ಅವನನ್ನು ರೆಕ್ಕೆಗಳ ಮೇಲೆ ಗಗನಕ್ಕೆ ಎತ್ತಿಕೊಂಡು ಹೋಗುತ್ತದೆ. ಅಲ್ಲಿಂದ ಕೆಳಗೆ ನೋಡಿದರೆ ಮನುಷ್ಯನಿಗೆ ಗಾಬರಿಯಾಗುತ್ತದೆ. ಅವನಿಗೆ ರೆಕ್ಕೆ ಇಲ್ಲದಿದ್ದರೆ ಆಲೋಚನೆಗಳ ಗಗನಕ್ಕೆ ಅವನು ಹಾರುತ್ತಲೇ ಇರಲಿಲ್ಲವೆಂಬುದು ಅವನಿಗೆ ಮರೆಯುತ್ತದೆ. ತನ್ನ ಆತ್ಮಶಕ್ತಿಯಿಂದಲೇ ತಾನು ಈ ಜಡಪ್ರಪಂಚದಿಂದ-ದೇಹದಿಂದ ಮೇಲೆದ್ದಿರುವುದನ್ನು ಅವನು ಮರೆಯುತ್ತಾನೆ. ಅವನ ನಿಜವಾದ ಮಾರ್ಗ, ಹಿಂದಕ್ಕೆ ನೋಡುವುದಲ್ಲ. ಧ್ಯಾನ ರೆಕ್ಕೆಗಳು ಎತ್ತಿಕೊಂಡು ಹೋದೆಡೆಗೆ ಸುಖವಾಗಿ ಹಾರಿ ಹೋಗುವುದು. ಒಂದು ಯೋಚನೆಯಿಂದ ಅವನಿಗೆ ಹೆಚ್ಚು ಧೈರ್ಯ ಬರುತ್ತದೆ. ಅವನು ಪಾಣಿಯೇ ಆದರೂ ಪ್ರಾಣಿಗಳಿಗೂ ಅವನಿಗೂ ಎಷ್ಟು ಅಂತರ? ತನಗಾಗಿ ಕೆಲಸಮಾಡಿಕೊಳ್ಳದ ಪ್ರಾಣಿ ನಾಶವಾಗುತ್ತದೆ. ಆದರೆ ಮನುಷ್ಯನ ಜೀವನವೋ? ಇದು ಎಂದೆದೂ ಅಂತ್ಯವಿಲ್ಲದ ನದಿಯಂತೆ ಹೋಗುತ್ತಲೇ ಇರುತ್ತದೆ. ಅವನು ಬಂದಿರುವ ದಾರಿಯಿಂದ ಹಿಂದಕ್ಕೆ ಹೋಗಲಾರ. ತಾನು, ತನ್ನ ಸುಖ ಇವನ್ನು ತಿರಸ್ಕರಿಸಲೇಬೇಕು. ಅವನ ದೇಹ ಎಂದಿದ್ದರೂ ನಾಶವಾಗಬೇಕಾಗಿರುವುದರಿಂದ ಅದು ಅನಿವಾರ್ಯವೆಂಬುದು ಅವನಿಗೆ ಗೊತ್ತಾಗುವುದು. ಲಾಯದಿಂದ ಹೊರಕ್ಕೆ ಕುದುರೆಯನ್ನು ಹೊಡೆದು ತರುವಂತೆ ಅವನನ್ನು ಹೊರಕ್ಕೆ ತಂದು ಸವಾರಿಗೆ ಸಿದ್ಧಪಡಿಸಿದುದಾಯಿತು. ಕುದುರೆ

ಹಳ್ಳಕೊಳ್ಳಕ್ಕೆ ಬಿದ್ದರೆ ಮೊಂಡುಹಿಡಿದರೆ ತನ್ನನ್ನೇ ತಾನು ಕೊಂದುಕೊಳ್ಳ ಬಹುದು. ಹಾಗಾಗದೆ ಅದು ಜೀವಂತವಾಗಿ ಉಳಿದರೆ ಅದರ ಯಜಮಾನ ಅದು ಮೊಂಡು ಎಂಬುದನ್ನರಿತು ಅದಕ್ಕೆ ಶಿಸ್ತನ್ನು ಕಲಿಸುವನು. ಮನಸ್ಸು ಬಂದಂತೆ ತಿರುಗುವುದಕ್ಕಿಂತ, ಈ ಶಿಸ್ತಿನ ನಡವಳಿಕೆ ಕಷ್ಟವೆಂಬುದು ಕುದುರೆಗೆ ಗೊತ್ತಾಗುವುದು. ದೇಹವೇ ಕುದುರೆ, ಆತ್ಮವೇ ಸಾರಥಿ. ಸಾರಥಿಯ ಇಚ್ಛೆಯಂತೆ ದೇಹವನ್ನು ಸವೆಸಬೇಕಾದುದು ಕುದುರೆಯ ಕಾರ್ಯ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವತು
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗೃಹಮೇವಚ

[ಕಠೋಪನಿಷತ್]

(ಆತ್ಮನೇ ರಥದ ಯಜಮಾನ. ಶರೀರವೇ ರಥ. ಬುದ್ಧಿಯೇ ಸಾರಥಿ. ಮನಸ್ಸು ಕಡಿವಾಣ.)

ದೇಹವನ್ನು ಚೆನ್ನಾಗಿ ದುಡಿಸಬೇಕು. ಪದೇ ಪದೇ ಹರಿತಮಾಡಿ ಉಪಯೋಗಿಸದೆ ಸುಮ್ಮನೆ ಅಲಂಕರಿಸಿ ಇಟ್ಟ ಆಯುಧ ವ್ಯರ್ಥ. ಅಮೃತತ್ವ ಹೊಂದುವವನು ಜೀವವನ್ನು ತೆರಬೇಕು (He that saveth his life shall lose it.)

ಮನುಷ್ಯನನ್ನು ಪ್ರಗತಿಮಾರ್ಗದಲ್ಲಿ ತಳ್ಳುವ ಮತ್ತೊಂದು ಗುರಿ ಇದೆ. ತಾನು ಸುಖಿಯಾಗಿರಬೇಕಾದರೆ, ತನ್ನ ಸುತ್ತಲಿರುವವರನ್ನೆಲ್ಲ, ತನ್ನನ್ನು ಪ್ರೀತಿಸಿ ಕೊಳ್ಳುವುದಕ್ಕಿಂತ ಹೆಚ್ಚಾಗಿ ಪ್ರೀತಿಸಬೇಕೆಂಬುದೂ ಸೇವಿಸಬೇಕೆಂಬುದೂ ಮನುಷ್ಯನ ಗುರಿ. ಆದರೆ ಪ್ರತಿಯೊಬ್ಬನಿಗೂ ತನ್ನ ವಿಷಯದಲ್ಲಿ ಅದೇ ಗುರಿ ಇದೆ. ಆದುದರಿಂದ ಸುಖವುಂಟಾಗಬೇಕಾದರೆ ಎಲ್ಲರೂ ಇತರರ ಹಿತಕ್ಕಾಗಿ ಜೀವಿಸಿದಾಗ ಮಾತ್ರ ಸಾಧ್ಯ. ಸುಖಾಭಿಲಾಷಿಗಳಲ್ಲಿ ಪರಸ್ಪರ ಹೋರಾಟ ಅತ್ಯಂತ ನೀಚವೂ ಕ್ರೂರವೂ ವಿಕಟವೂ ಆಗಿದೆ. ಆದರೆ ಅವು ಸಾಮಾನ್ಯರ ಕಣ್ಣಿಗೆ ಬೀಳದಂತೆ ಮರೆಯಾಗಿವೆ. ಆದರೆ ಹಿಂದಲ ಇತಿಹಾಸ ಅನುಭವಗಳಿಂದ ಪ್ರತಿಯೊಬ್ಬನಿಗೂ ಗೊತ್ತು, "ಯುದ್ಧ ಬೇಡ, ಹೋರಾಟ ಬೇಡ. ಜಗತ್ತೆಲ್ಲ ಒಂದೇ ಸಂಸಾರ. ಪರಸ್ಪರ ಭ್ರಾತೃತ್ವವನ್ನು ಸ್ಥಾಪಿಸುವುದರಲ್ಲಿಯೇ ಜಗತ್ತಿನ ಕಲ್ಯಾಣ ಇರುವುದು" ಎಂದು. ಈ ಭ್ರಾತೃತ್ವ ಭಾವನೆ ಎಲ್ಲೆಲ್ಲೂ ಬೆಳೆಯುತ್ತದೆ. ಯುದ್ಧವನ್ನು ಕೂಡ ದಯಾಯುದ್ಧವನ್ನಾಗಿ ಮಾಡುವ ಪ್ರಯತ್ನ ನಡೆಯು

ತ್ತದೆ. ಪ್ರಾಣಿಗಳನ್ನು ಹಿಂಸಿಸಲೂ ಯಾರೂ ಒಪ್ಪುವುದಿಲ್ಲ. ಅಹಿಂಸೆ ಅತ್ಯುತ್ತಮ ಧರ್ಮ. ಕೊಲ್ಲುವುದಕ್ಕಿಂತ ತಾನೇ ಸಾಯುವುದು ಮೇಲು, ಎಂದು ಪ್ರಗತಿಶೀಲರೆಲ್ಲ ಭೋಧಿಸುತ್ತಿದ್ದಾರೆ. ಹೋರಾಟಕ್ಕಿಂತ, ಒಂದಾಗುವ ಸಾಧನವನ್ನು ಕಂಡುಹಿಡಿಯುವುದರಲ್ಲಿ ವಿಜ್ಞಾನ ತೊಡಗಿದೆ. ಹೀಗೆ ಇತರರ ಸುಖದಲ್ಲಿ ತನ್ನ ಸುಖ ಕಾಣುವವನಿಗೆ, ಮರಣದಲ್ಲಿ ಭಯವಿಲ್ಲ. ತಾನೇ ತಾನು ಎಂದು ಎಲ್ಲಿಯವರೆಗೆ ಮನುಷ್ಯನ ಭಾವನೆಯೋ ಅಲ್ಲಿಯವರೆಗೆ ಅವನಿಗೆ ಮರಣ ಭಯ ತಪ್ಪಿದ್ದಲ್ಲ. ಆದರೆ ಅವನ ಕಾರ್ಯಕ್ಷೇತ್ರ, ಅಭಿರುಚಿಗಳು ವಿಶಾಲವಾದಾಗ ಅವನು ಬದುಕಿದ್ದರೂ ಸತ್ತರೂ ಎರಡೂ ಎಂದೇ. ಒಂದು ವೇಳೆ ನಾವು ಸತ್ತರೂ ನಮಗೆ ಲಾಭವೇ ಎಂಬ ಭಾವನೆ ಇರುವಾಗ ಮರಣ ತನ್ನ ಕ್ರೌರ್ಯವನ್ನು ಕಳೆದುಕೊಳ್ಳುತ್ತದೆ. ಅನುಭವ ಧರ್ಮ ವಿವೇಕ ಇತಿಹಾಸ ಇವುಗಳು ಮನುಷ್ಯನಿಗೆ ಒಂದೇ ಸತ್ಯವನ್ನು ಬೋಧಿಸುತ್ತವೆ. "ಸಾವು ಬರುವುದು ಒಂದೇ ಸಲ. ಅನಂತರ ಮತ್ತೆ ಇಲ್ಲ" (Death once dead–there is no more to die then.)

ಆದರೆ ಈ ವಿವೇಕ ಮಹನೀಯರಾದ ಕೆಲವರಿಗೆ ಸಹ ತಿಳಿಯುವುದಿಲ್ಲವೆಂಬುದು ಟಾಲ್‌ಸ್ಟಾಯ್ ಅವರಿಗೆ ಗೊತ್ತು. ಅಂತಹ ಮಹನೀಯರ ವಿಷಯದಲ್ಲಿ ಟಾಲ್‌ಸ್ಟಾಯ್ ಹೇಳಿದ ಮಾತು ಆಧುನಿಕ ನಾಗರೀಕತೆಯನ್ನು ಕುರಿತ ಅವರ ಕಟುಟೀಕೆಯೇ ಆಗಿದೆ. "ಮನುಷ್ಯ ಎಷ್ಟೇ ಧನವಂತರಾದರೂ ಅವನಿಗೆ ಜೀವನದ ನಿಜವಾದ ಉದ್ದೇಶ ಗೊತ್ತಾಗುವುದಿಲ್ಲ." ಏಕೆಂದರೆ ಅವನಿಗೆ ಸರಿಯಾದ ಗುರು ದೊರೆತಿರುವುದಿಲ್ಲ. ಅವರ ಗುರುಗಳು ಅವರಿಗೆ "ನಿಮ್ಮ ಆವಶ್ಯಕತೆಗಳನ್ನು ಹೆಚ್ಚಿಸಿಕೊಂಡು ಸುಖವಾಗಿರಿ. ಆವಶ್ಯಕತೆ ಹೆಚ್ಚಿಸಿಕೊಳ್ಳುವುದೇ ನಾಗರೀಕತೆ" ಎಂದು ಮಾತ್ರ ಹೇಳುತ್ತಾರೆ. ಎಮರ್ಸನ್ ಹೇಳಿದ "ಆವಶ್ಯಕತೆ ಒಬ್ಬ ರಾಕ್ಷಸ. ಅವನ ದೇಹವನ್ನು ಮುಚ್ಚುವ 'ಸಾಕು' ಎಂಬ ವಸ್ತು ಇಲ್ಲವೇ ಇಲ್ಲ" (ಆಶಾಶಾಃ ಪರಮುಂ ದುಃಖಂ ನಿರಾಶಾಃ ಪರಮುಃ ಸುಖಂ.) ಈ ಆವಶ್ಯಕತೆಗಳ ಜೀವನ, ಕೆಲವು ಕೃತಕ ಜೀವನದ ನಾಗರೀಕರಿಗೆ ಮಾತ್ರ. ಪರಸ್ಪರ ಹಿತದಲ್ಲಿ ತೊಡಗಿರುವಾಗ ಯಾರೊಬ್ಬರಿಗೂ ಅಪಾಯವಿಲ್ಲ. ಉಳಿದ ಸಾಮಾನ್ಯರಿಗೆ ಬಾಳು ಹೇಗೋ ಕಳೆಯುತ್ತದೆಂಬ ಭಾವನೆ. ಇಂತಹ ಭಾವನೆ ಬರಿಯ ಜ್ಞಾನಿಯಲ್ಲಿ ಮಾತ್ರ ಇದೆ ಎಂದಲ್ಲ. ಸರಳರಾದ, ಅವಿದ್ಯಾವಂತ

ರಾದ, ಪ್ರಕೃತಿಯ ಮಕ್ಕಳಾದ, ನಾಗರೀಕತೆಯರಿಯದ ಹಳ್ಳಿಯ ಜನ ಪರಸ್ಪರ ಸಹಾಯ ಮಾಡುತ್ತ ಒಬ್ಬರ ಹೊಣೆಯನ್ನು ಒಬ್ಬರು ಹೊರುತ್ತ ಜೀವಿಸುತ್ತಿರುತ್ತಾರೆ. ಆ ಜನರಿಗೆ ಅನ್ನ ಬಟ್ಟೆಯದೇ, ನಾಗರೀಕರಿಗಾಗುವಂತೆ, ದೊಡ್ಡ ಪ್ರಶ್ನೆಯಾಗಿ ಬಿಡುವುದಿಲ್ಲ. ಇತರರ ಮೇಲೆ ಕಾಲು ನೀಡದೆ, ಅವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳದೆ, ಇತರರ ವಸ್ತುಗಳಿಗೆ ಆಸೆಪಡದೆ ರೈತನಿಗೆ ನಾಗರೀಕತೆಯ ಅರ್ಥ—ಆಧುನಿಕ ವಿದ್ಯಾವಂತರಿಗೂ ಅವನ ಗುರುಗಳಿಗೂ ತಿಳಿದಿರುವುದಕ್ಕಿಂತ ಚೆನ್ನಾಗಿ–ತಿಳಿದಿದೆ. ಟಾಲ್‌ಸ್ಟಾಯ್ ಈ ಭಾವನೆಯನ್ನು ಒತ್ತಿ ಒತ್ತಿ ಹೇಳುತ್ತಾರೆ. 'ಅನ್ನಾ ಕರೆನಿನಾ' ದಲ್ಲಿರುವ ಒಂದು ಸಂಗತಿ ಬೋಧಪ್ರದವಾಗಿದೆ. ಬಾಳಿನ ಗುರಿಯಾವುದೆಂದು ಎಲ್ಲೆಲ್ಲೂ ಹುಡುಕುತ್ತಿರುವ ಲೆವಿನ್‌ಗೆ, ಕೂಲಿಯೊಬ್ಬನ ಸಾಮಾನ್ಯ ಮಾತಿನಿಂದ ಜ್ಞಾನೋದಯವಾಗುತ್ತದೆ. ಆ ಕೂಲಿ "ಮನುಷ್ಯ ಬಾಳುವುದು ಕೂಳಿಗಾಗಿ ಅಲ್ಲ. ದೇವರಿಗಾಗಿ, ಆತ್ಮಕ್ಕಾಗಿ" ಎನ್ನುತ್ತಾನೆ. ಆದುದರಿಂದ ಸಾಮಾನ್ಯರ ಅಭಿಪ್ರಾಯದಲ್ಲಿಯೇ, ಟಾಲ್ ಸ್ಟಾಯ್ ತಮ್ಮ ತತ್ವಗಳ ಪುಷ್ಟಿಯನ್ನು ಕಂಡುಕೊಳ್ಳುತ್ತಾರೆ. "ಪರೋಪಕಾರಾರ್ಥಮಿದಂ ಶರೀರಂ" ಎಂಬ ಆರ್ಯ ವಚನದ ಅಭಿಪ್ರಾಯವೂ ಇದೇಯೇ. ಬಾಳುವುದೇ ಇತರರಿಗೆ ಒಳ್ಳೆಯದನ್ನು ಮಾಡುವುದಕ್ಕೆ ಎಂಬುದಕ್ಕೆ, ನಮಗೆ ಮಹಾತ್ಮ ಗಾಂಧಿಯವರಿಗಿಂತ ಹತ್ತಿರದ ಉದಾಹರಣೆ ಬೇಕೇ?

ಜ್ಞಾನಿಗಳೆಲ್ಲರ ತೀರ್ಮಾನವೂ ಒಂದೇ. ಅವರು ಹೇಗೆ ಹೇಗೆ ಯೋಚಿಸಿ ಚರ್ಚಿಸಿ ತೀರ್ಮಾನಿಸಿದರೂ ಮನುಷ್ಯ ಜೀವಿಸಿರುವುದು ಪ್ರೇಮಕ್ಕಾಗಿಯೇಎಂಬುದೇ ಅವರು ಹೊಂದುವ ಸಿದ್ಧಾಂತ. ಆ ಸಿದ್ಧಾಂತವನ್ನು ಮನುಷ್ಯ ಒಪ್ಪಿದನೆಂದರೆ ಅವನಬಾಳಿನ ಭಯ ನಿವಾರಣೆಯಾಗುತ್ತದೆ. ಅವನ ಮನಸ್ಸಿನ ಹಿನ್ನಲೆಯಲ್ಲಿ ಎಂದೆಂದಿಗೂ ಇರುವ ಸಾವಿನ ಭಯ, ಜುಗುಪ್ಸೆ, ಮರೆಯಾಗುತ್ತದೆ. ಹಾಗಾದ ಮೇಲೆ ಪ್ರೇಮಪೂರ್ಣನಾದ ಮನುಷ್ಯನ ಸ್ವಭಾವ ಗುಣ ಕಾರ್ಯ ಕ್ಷೇತ್ರ ಕಾರ್ಯ ವಿಧಾನ ಯಾವುವು? ಅದೇ ಪ್ರೇಮ! ಸರ್ವವನ್ನೂ ತನ್ನ ಆಲಿಂಗನದಲ್ಲಿ ತೆಗೆದುಕೊಳ್ಳುವ ಪ್ರೇಮ. ಪ್ರೇಮಕ್ಕೆ ತನ್ನ ಪೂರ್ಣ ಆತ್ಮಾರ್ಪಣೆ. ಹೀಗೆ ಪ್ರೇಮ ಮಾಡುವವನಲ್ಲಿ, ಕೆಲವು ಗುಣಗಳಿರಬೇಕೆಂದು ಟಾಲ್‌ಸ್ಟಾಯ್ ಹೇಳುತ್ತಾರೆ. ಸರ್ವದಲ್ಲಿಯೂ ಪ್ರೇಮ, ಆ ಪ್ರೇಮ ಸಾಂಪ್ರತದಲ್ಲಿ—ಎಂದರೆ

ತತ್‌ಕ್ಷಣ ಇದ್ದಲ್ಲಿಂದಲೇ ಪ್ರಾರಂಭವಾಗಬೇಕು. ಉದಾಹರಣೆಗೆ ಈ ವಿಶ್ವ ಪ್ರೇಮಿಯು ಮುಂದೆ ತನ್ನ ಮಕ್ಕಳಿಗೆ ಕಷ್ಟ ಸಂಭವಿಸಬಹುದೆಂಬ ಭಯದಿಂದ ಈಗ ಕಷ್ಟದಲ್ಲಿರುವವರಿಗೆ ತನ್ನ ಸರ್ವಸ್ವವನ್ನೂ ದಾನಮಾಡದಿರಲು ಸಾಧ್ಯವಿಲ್ಲ, ತನ್ನ ಹೆಂಡತಿ ಮಕ್ಕಳನ್ನು ಮಾತ್ರ ಪ್ರೀತಿಸಿ ಅದು ಪ್ರೇಮವೆಂದು ಹೇಳುವುದು, ಒಂದು ಹೆಜ್ಜೆ ಮುಂದುವರಿದ ಸ್ವಾರ್ಥ ಅಷ್ಟೆ. ಹೆಂಡತಿ ಮಕ್ಕಳನ್ನು ಪ್ರೀತಿಸುವುದು ಅವರು ಈತನ ಸುಖಕ್ಕೂ ಅನುಕೂಲಕ್ಕೂ ಕಾರಣರಾಗಿರುವುದರಿಂದಲೇ. ಅದು ಪ್ರೇಮವಲ್ಲ. ಆದರೆ ತಾನೇ ತಾನು ಎನ್ನುವ ವ್ಯಕ್ತಿಯ ಪ್ರೇಮಸ್ವಭಾವವನ್ನು ಅದು ಚಿಗುರಿಸಬಹುದು. ಹೀಗೆ ಪ್ರೇಮವನ್ನು ಬರಿಯ ಹೆಂಡತಿ ಮಕ್ಕಳಿಗೆ ಹಂಚಿ ಅದರಿಂದಲೂ ತನ್ನ ಸುಖವನ್ನೇ ಕಾಣುವುದು ಬರಿಯ ಪಶುಸ್ವಭಾವ, ಆದರೆ ಪ್ರಾಣಿಗಳಲ್ಲಿರುವ, ತನ್ನನ್ನು ತಾನು ಕಾಯ್ದುಕೊಳ್ಳುವ ಈ ಸ್ವಭಾವದಿಂದ ಇತರರಿಗೆ ತೊಂದರೆ ಇಲ್ಲ. ಆದರೆ ಮನುಷ್ಯನ ಈ ಸ್ವಭಾವದಿಂದ ವ್ಯಕ್ತಿಗಳಿಗೂ ಸಮಾಜಕ್ಕೂ ತುಂಬ ಅನಾಹುತವುಂಟಾಗುತ್ತದೆ. ತೋಳಗಳೂ ತಮ್ಮ ಮರಿಗಳನ್ನು ಪ್ರೀತಿಸುತ್ತವೆ. ಇತರ ತೋಳಗಳೂ ತಮ್ಮ ಮರಿಗಳನ್ನು ಪ್ರೀತಿಸುತ್ತವೆಂಬುದು ಅವಕ್ಕೆ ತಿಳಿಯದು. ಆದರೆ ಮನುಷ್ಯ ಹೀಗೆ ಮಾಡಲಾರ. ವಿವೇಕವುಳ್ಳ ಪ್ರಾಣಿಯಾದುದರಿಂದ ತನ್ನ ಸ್ವಾರ್ಥದ ಪ್ರೇಮ ವಿಶ್ವಪ್ರೇಮಕ್ಕೆ ಅಡ್ಡಿ ಬರುತ್ತಿದೆಯೆಂಬುದು ಅವನಿಗೆ ಗೊತ್ತಾಗುತ್ತದೆ. ಸ್ವಾರ್ಥದ ಪ್ರೇಮವನ್ನು ಹತೋಟಿಯಲ್ಲಿಡದಿದ್ದರೆ ತಾನು ಅತ್ಯಂತ ಕ್ರೂರಿಯೂ ನೀಚನೂ ಆಗುವೆನೆಂಬುದು ಮನುಷ್ಯನಿಗೆ ಗೊತ್ತು. ಪ್ರೇಮವೆಂದರೆ ಕೆಲವರಿಗಿಂತ ಕೆಲವರನ್ನು ಹೆಚ್ಚಾಗಿ ಪ್ರೀತಿಸುವುದಲ್ಲ. ಎಲ್ಲರನ್ನೂ ತನಗಿಂತ ಹೆಚ್ಚಾಗಿ ಪ್ರೀತಿಸುವುದೆಂದರ್ಥ; ಜ ಗ ತ್ತ ನ್ನೇ ಪ್ರೀ ತಿ ಸು ವು ದು. ವಿ ಶ್ವ ಪ್ರೇ ಮವೆಂಬುದೇ ಆ ಸ್ಥಿತಿ—ಮಕ್ಕಳು ಎಲ್ಲರನ್ನೂ ಒಂದೇ ಸಮನಾಗಿಪ್ರೀತಿಸುವಂತೆ. ವಯಸ್ಸಾಗುವ ವರೆಗೆ ಮಕ್ಕಳು ವಿಶ್ವಪ್ರೇಮಿಗಳು. ಆಮೇಲೆ ಅವರು ಒಂದು ಬಗೆಯ ಪ್ರೇಮಕ್ಕೂ ಮತ್ತೊಂದು ಬಗೆಯ ಪ್ರೇಮಕ್ಕೂ, ವ್ಯತ್ಯಾಸ ಮಾಡತೊಡಗುತ್ತಾರೆ. ಬಾಳಿನ ಗಿಡ ಸ್ವಾಭಾವಿಕವಾಗಿ ಬೆಳಕಿನೆಡೆಗೆ ತಿರುಗುತ್ತದೆ. ಪ್ರೇಮವೇ ಬಾಳಿನ ಸೂರ್ಯ. ಬಾಳು ಬೆಳೆಯುವುದೂ ಬೆಳಗುವುದೂ ಆ ಸೂರ್ಯನ ಕಿರಣಗಳಿಂದಲೇ.

ಈ ಗ್ರಂಥದ ಮುಂದಲ ಭಾಗಗಳಲ್ಲಿ, ಸಾವಿನ ಒಂದು ಮೀಮಾಂಸೆ ಇದೆ. ಹಿಂದೆ ಟಾಲ್‌ಸ್ಟಾಯ್ ಅವರು "ಬಾಳು ಎಂದರೆ ಏನು?" ಎಂಬ ಪ್ರಶ್ನೆಯನ್ನು ಕೇಳಿದ್ದರು. ಇದರಲ್ಲಿ "ಮರಣವೆಂದರೆ ಏನು?" ಎಂದು ಕೇಳುತ್ತಾರೆ. ಟಾಲ್‌ಸ್ಟಾಯ್, ಮರಣವೆಂಬುದೇ ಇಲ್ಲವೆನ್ನುತ್ತಾರೆ. ಇದು ಬರಿಯ ನಾಗರಿಕ ಕೃತಕ ಜೀವನದ ಅಭಿಪ್ರಾಯವಲ್ಲ. ಬಾಳಿನಿಂದ ಹೊರಡುವ ಉತ್ತರವೇ ಇದೆನ್ನುತ್ತಾರೆ. ಮೊದಲನೆಯದಾಗಿ ಮನುಷ್ಯನಿಗೆ ತನ್ನ ಮರಣ ಗೊತ್ತಾಗುವುದಿಲ್ಲ. ಏಕೆಂದರೆ ಅವನಿಗೆ ಅದರ ಸಂಪರ್ಕವೇ ಉಂಟಾಗಿರುವುದಿಲ್ಲ. ಹಾಗಿರುವಲ್ಲಿ ಅದನ್ನು ಕಂಡು ಭಯವೇಕೆ? ಮರಣ, ಬದಲಾವಣೆ ಎಂದು ಭಯಪಡಬೇಕೇ? ಆದರೆ ದೇಹದಲ್ಲಿ ಬದಲಾವಣೆ ಗಳಿಗೆ ಗಳಿಗೆಗೂ ನಡೆಯುತ್ತಲೇ ಇರುತ್ತದೆ. ಮರಣ, ಮನುಷ್ಯನ ವಿವೇಕಕ್ಕೆ ವಿರೋಧವಾದುದೆಂದು ಅವನಿಗೆ ಅದರಲ್ಲಿ ಭಯವಿಲ್ಲ; ಮರಣ, ಕಣ್ಣಿಗೆ ಕಾಣದ ಅಪಾಯ ಎಂಬುದರಿಂದಲೂ ಅದು ಭಯಂಕರವಲ್ಲ. ಇತರ ಮನುಷ್ಯರೂ ಪ್ರಾಣಿಗಳೂ ಸಾಯುತ್ತಾರೆ. ಅವುಗಳ ಮರಣ ಇವನಿಗೆ ಸ್ವಾಭಾವಿಕ. ಒಂದು ವೇಳೆ ಇಷ್ಟವೇ. ಬರಿಯ ಭೌತವಾದಿಗೆ ಬಾಳಿನಲ್ಲಿ ಮರಣವೇ ಸ್ವಾಭಾವಿಕ. ಜಡಪದಾರ್ಥ ಜೀವಜ್ಯೋತಿಯ ಸಂಪರ್ಕದಿಂದ ಜ್ವಲಿಸಿ ಮತ್ತೆ ಜಡವೇ ಆಗುತ್ತದೆ. ಆದರೆ ಮನುಷ್ಯನ ವಿವೇಕಬುದ್ಧಿ ಅದನ್ನು ಒಪ್ಪುವುದಿಲ್ಲ. ಅವನಿಗೆ ಬಾಳು ಆದಿ ಅಂತ್ಯ ರಹಿತವಾದ ಶಾಶ್ವತ ವಸ್ತು. ಪ್ರಕೃತಿಯ ಈ ಆಟದಲ್ಲಿ ಮರಣ ಒಂದು ಆಕಸ್ಮಿಕ. ಮರಣವನ್ನು ಕುರಿತು ಭಯ, ಜೀವನವನ್ನು ಕುರಿತ ಪರಸ್ಪರ ವಿರುದ್ಧವಾದ ಭಾವನೆಗಳ ಪರಿಣಾಮ. ನಿಜವಾದ, ರಸಪೂರ್ಣವಾದ ಬಾಳನ್ನು ಬಾಳಬೇಕು. ಆದರೆ ಅದು ಸಾಧ್ಯವಿಲ್ಲವೆಂದು ಮನುಷ್ಯನಿಗೆ ತೋರುತ್ತದೆ. ಬಾಳು ವ್ಯರ್ಥವೂ ಬರಿದೂ ಆಗಿ ತೋರುತ್ತದೆ. ಆಗ ಆ ಬರಿದಾದ ನೀರಸ ಬಾಳಿನ ಭಯದಿಂದ ತಪ್ಪಿಸಿಕೊಳ್ಳಲು ಮನುಷ್ಯ, ಮರಣಕ್ಕೆ ಧಾವಿಸುತ್ತಾನೆ. ಅಂಧಕಾರ, ಶೂನ್ಯ ಇವೇ ಮರಣದ ಸ್ವರೂಪ. ಬಾಳಿನಲ್ಲಿ ಬೆಳಕು ಕಾಣದುದರಿಂದ ಅಂಧರು ಮರಣವನ್ನು ಅಪ್ಪುತ್ತಾರೆ.

ವಿವೇಕಿಯಾದ ಮನುಷ್ಯ ಇದನ್ನು ಎದುರಿಸುವ ವಾದವನ್ನು ಇಟ್ಟುಕೊಂಡಿದ್ದಾನೆ. ಅವನು ೫೦, ೬೦, ೭೦ ವರುಷ ಬಾಳಿ ಆಗಿದೆ. ಕೊನೆ

ಹತ್ತಿರಕ್ಕೆ ಬರುತ್ತಿದೆ. ಟಾಲ್‌ಸ್ಟಾಯ್ "ಇದು ಕೊನೆಯಲ್ಲ" ಎನ್ನುತ್ತಾರೆ. "ನಿಮ್ಮ ಬಲ ನಿಮ್ಮ ಆತ್ಮ. ಇಲ್ಲಿಯವರೆಗೆ ನಿಮ್ಮ ದೇಹದಲ್ಲಿದ್ದು ಯಂತ್ರದಂತೆ ಕೆಲಸಮಾಡಿದುದು ಬರಿಯ ದೇಹವಲ್ಲ. ಅದು ಬೇರೆಬೇರೆ ಯಾಗಿ ಆಲೋಚಿಸಿದೆ, ಅನುಭವಿಸಿದೆ. ಇವತ್ತಿನ 'ನೀನು' ಹತ್ತು ವರುಷ ಗಳ ಅಥವಾ ಇಪ್ಪತ್ತು ವರುಷಗಳ ಹಿಂದಣ 'ನೀನು' ಅಲ್ಲ. ನಿನ್ನ ದೇಹದ ಪ್ರತಿಯೊಂದು ಕಣವೂ ಬದಲಾಯಿಸಿದೆ, ನಿನ್ನ ಚೈತನ್ಯ ಬುದ್ಧಿ ಮನಸ್ಸು ಬದಲಾಯಿಸಿದೆ. ಪ್ರತಿ ದಿನ ನಿದ್ರೆ ಮಾಡಿದ ಮೇಲೂ ನಾವು ಹೊಸಜನ. ಬಾಲಕರಾಗಿದ್ದಾಗಿನ ನಾವು ಯೌವನದ ನಾವಲ್ಲ. ಯೌವನದ ನಾವು ಮುಪ್ಪಿನ ನಾವಲ್ಲ."

ಹಾಗಾದರೆ ಈ "ನಾನು" ಎಂಬುದು ಯಾವುದು? "ನಾನು" ಎಂಬುದು ಜಗತ್ತಿನೊಂದಿಗೆ ಬಾಂಧವ್ಯವುಳ್ಳ ಒಂದು ವಸ್ತು. ಅದು ಸರ್ವಪ್ರೇಮಿ. ಇದು ಅದು ಎಂಬ ವ್ಯತ್ಯಾಸ ಅದಕ್ಕೆ ಇಲ್ಲ. ಅದನ್ನು ಒಂದು ಭೌತ ಕಾರ್ಯದಿಂದ ನಾಶಮಾಡುವುದು ಸಾಧ್ಯವಿಲ್ಲ. ನಿದ್ರೆಮಾಡಲು ಪ್ರಾರಂಭಿ ಸುವಾಗ, "ನೀವು ಇನ್ನು ಹತ್ತು ಲಕ್ಷ ವರ್ಷ ಮಲಗುತ್ತೀರಿ" ಎಂದು ತಿಳಿದುಕೊಂಡರೂ ನಿಮಗೆ ಭಯವಾಗುವುದಿಲ್ಲ. ಅಥವಾ ಬರಿಯ ಬಾಲಕ ನಾಗಿದ್ದ ನೀವು ಒಳ್ಳೆ ಬೆಳೆದ ವಿವೇಕಿಯಾದ, ಬೇರೆ ಮನುಷ್ಯನೇ ಆದ ಯುವಕರಾಗಿರುವಿರೆಂಬುದರಿಂದಲೂ ನಿಮಗೆ ಭಯವಾಗುವುದಿಲ್ಲ. ಆದರೆ ಈ ನಿಮ್ಮ ಬಾಳು ಅಂತ್ಯವಿಲ್ಲದ ಚಲನೆಯೇ. ನಾನಾ ಬಗೆಯಿಂದ ನಿಮಗೆ ಜಗತ್ತಿನೊಂದಿಗೆ ಸಂಪರ್ಕವುಂಟಾಗುತ್ತದೆ. ಆದರೆ ನಿಮ್ಮ ಪ್ರೇಮ ಜಗತ್ತಿನೊಂದಿಗೆ ಎಷ್ಟು ಹೆಚ್ಚೋ ನಿಮ್ಮ ಸಂಪರ್ಕ ಅದರೊಂದಿಗೆ ಅಷ್ಟೇ ಹೆಚ್ಚು. ಇತರರನ್ನು ಪ್ರೀತಿಸುವ ನಿಮ್ಮ ಜೀವನದ ಆ ವ್ಯಾಪಾರವನ್ನು ನೀವು ನಿಲ್ಲಿಸಿದ ಕೂಡಲೇ, ಮರಣ ತನ್ನ ಭಯಂಕರ ವಸ್ತ್ರಗಳನ್ನು ಧರಿಸಿ ನಿಮ್ಮೆದುರಿಗೆ ನಿಲ್ಲುತ್ತದೆ. ಹೆಚ್ಚು ಹೆಚ್ಚಾಗಿ, ಹೆಚ್ಚು ಹೆಚ್ಚಾಗಿ ಪ್ರೀತಿಸುತ್ತಾ ಹೋಗಿ. ಆಗ ನೀವು, ಬಾಳಿನ, ಶಾಶ್ವತಜೀವನ ಝರಿಯಲ್ಲಿ ಸೇರಿ ಹೋಗುತ್ತೀರಿ. ಆಗ, ಮರಣವೆಂಬುದು ನಿಮ್ಮ ಬಾಳಿನ ಜತೆ ಹುಟ್ಟಿದುದಲ್ಲ ವೆಂದೂ, ಅದೊಂದು ಸಾಮಾನ್ಯ ಬದಲಾವಣೆಯೆಂದೂ, ನಿಮ್ಮ ಆಗಿನ ಜೀರ್ಣದೇಹದೊಂದಿಗೆ ಅದರ ಅಂತ್ಯವಲ್ಲವೆಂಬುದೂ ನಿಮಗೆ ಗೊತ್ತಾಗುತ್ತದೆ.

ಇವು ಜೀವನ-ಮರಣಗಳನ್ನು ಕುರಿತ ಟಾಲ್‌ಸ್ಟಾಯ್ ಅವರ ಅಭಿಪ್ರಾಯಗಳು. ಟಾಲ್‌ಸ್ಟಾಯ್ ಅವರು "ಧರ್ಮವು ಬರಿಯ ಮಾತಿನ ಧರ್ಮವಾಗಿರಬಾರದು. ಕಾರ್ಯ ಮತ್ತು ಪ್ರೇಮದ ಧರ್ಮವಾಗಿರಬೇಕು" ಎನ್ನುತ್ತಾರೆ. ಈ ಪ್ರೇಮಧರ್ಮವನ್ನು ಜಗತ್ತಿನಲ್ಲಿ ಸ್ಥಾಪಿಸುವುದರಲ್ಲಿ ಟಾಲ್‌ಸ್ಟಾಯ್, ಅದುವರೆಗೆ ಸ್ಥಾಪನೆಯಾಗಿದ್ದ ಎಲ್ಲ ಸಂಸ್ಥೆ ಸಂಪ್ರದಾಯಗಳನ್ನೂ, ಯೇಸು ಕ್ರಿಸ್ತನಂತೆಯೇ ಎದುರಿಸಬೇಕಾಯಿತು. ಸರ್ವಪ್ರೇಮಮಯವಾದ ಮನುಷ್ಯತ್ವ—ಟಾಲ್‌ಸ್ಟಾಯ್ ಇವನನ್ನು ದೇವಪುತ್ರ (ದಿ ಸನ್ ಆಫ್ ಗಾಡ್) ಎಂದು ಕರೆಯುತ್ತಾರೆ— ಎಂದು ಜಗತ್ತಿನಲ್ಲಿ ಸಂಭವಿಸುವುದೋ ಹೇಳುವುದು ಸಾಧ್ಯವಿಲ್ಲ ಅದು ಸಂಭವವೆಂಬುದಕ್ಕೆ ಮಹಾತ್ಮಾ ಗಾಂಧಿಯವರೇ ನಿದರ್ಶನ.

ಟಾಲ್‌ಸ್ಟಾಯ್‌ರಂತಹ ಋಷಿಗಳಿಂದ ಜಗತ್ತಿಗೆ ಬೆಳಕು ಬರುತ್ತದೆ. ಆ ಪವಿತ್ರ ಜ್ಯೋತಿಯಿಂದ ಸಾಮಾನ್ಯ ಜನರ ಬಾಳು ಬೆಳಗಿ ಮಹತ್ವದ ದರ್ಶನ ಪಡೆಯುತ್ತದೆ.

[ಟಾಲ್‌ಸ್ಟಾಯ್‌ರವರ "ಜೀವನ" ಎಂಬ ಗ್ರಂಥದ ಸಾಮಾನ್ಯ ಅವಲೋಕನ.]

—★—

ರುಧಿರದ ತಿಲಕವಾದನಲ್ಲೈ ಧರಾಂಗನೆಗೆ

ಮಹಾಭಾರತಕ್ಕೆ ಗದಾಯುದ್ಧವು ಹೇಗೆ ಕೊನೆಯೋ ಹಾಗೆಯೇ ಕುಮಾರವ್ಯಾಸನ ಲೇಖನಿ, ಭಾರತಕಥಾನಕ ವಿವರಣೆಗೆ ವಿಶ್ರಾಮವನ್ನು ಹೊಂದುವ ಸ್ಥಾನ ಸಹ. ಧುರ್ಯೋಧನನು ನಾಯಕನೆಂಬ ದೃಷ್ಟಿಯಿಂದ ಮಹಾಭಾರತವು ದುರ್ಯೋಧನ ದುಃಖಾಂತ ಕಾವ್ಯ. ದುರ್ಯೋಧನನ ಅಂತ್ಯವಾದಲ್ಲದೆ ಮಹಾಭಾರತ ಕಥೆ ಸಮಾಪ್ತವಾಗುವಂತೆ ಇಲ್ಲ. ದುರ್ಯೋಧನನ ಮರಣವಾದಲ್ಲದೆ ಮಹಾಭಾರತದ ಇನ್ನೂ ಅನೇಕ ಜಟಿಲ ಸಮಸ್ಯೆಗಳೂ ಪರಿಹಾರವಾಗುವಂತೆ ಇಲ್ಲ ಈ ಕಾರಣದಿಂದಲೇ ಮೂಲ ಭಾರತ ಲೇಖಕರಾದ ವ್ಯಾಸ ಮಹರ್ಷಿಗಳಿಂದ ಹಿಡಿದು ಈಚಿನ ನಮ್ಮ ಕನ್ನಡ ಕವಿಗಳಾದ ರನ್ನ, ಪಂಪ, ಕುಮಾರ ವ್ಯಾಸಾದಿಗಳೆಲ್ಲ ಗದಾಯುದ್ಧ ಪ್ರಕರಣವನ್ನು ಪೂರ್ಣವಾಗಿ ವಿವರವಾಗಿ ಪ್ರಫುಲ್ಲ ಮನಸ್ಸಿನಿಂದ ಮನಃ ಪೂರ್ತಿಯಾಗಿ ಚಿತ್ರಿಸಿದ್ದಾರೆ. ಇದರಿಂದ ಭೀಮ ದುರ್ಯೋಧನರಿಬ್ಬರ ಸ್ವಭಾವಗಳು ಚೆನ್ನಾಗಿ ಸ್ಪಷ್ಟವಾಗಿ ಹೊರಬಂದಿವೆ. ದುರ್ಯೋಧನನು ಬಾಳಿನಲ್ಲಿದ್ದುದಕ್ಕಿಂತಲೂ ಸಾವಿನಲ್ಲಿ ಹೆಚ್ಚು ಮಹನೀಯನಾಗಿದ್ದನೆಂಬುದೇ ಆ ಪಾತ್ರವನ್ನು ಹೆಚ್ಚು ಸ್ಪಷ್ಟಪಡಿಸಿದುದರ ಪರಿಣಾಮ. ಮರಣಕಾಲವು ಸಮೀಪಿಸಿದಂತೆ ಒಂದೊಂದು ಘಳಿಗೆಗೂ ದುರ್ಯೋಧನನು ಪುಟಕ್ಕೆ ಇಟ್ಟ ಚಿನ್ನದಂತೆ ಒಂದೊಂದು ಹೊಸ ಹೊಸ ಗಾಂಭೀರ್ಯ ಮಹನೀಯತೆ ಸುಗುಣಗಳನ್ನು ತೋರಿಸುತ್ತಾನೆ. ಸಂಸ್ಕೃತ ಮೂಲ ಲೇಖಕರಾದ ವ್ಯಾಸ ಮಹರ್ಷಿಗಳಿಂದ ಹಿಡಿದು ಕುಮಾರವ್ಯಾಸನವರೆಗೆ ಎಲ್ಲಾ ಕವಿಗಳ ಗುರಿಯೂ ಭೀಮನನ್ನೇ ಗದಾಯುದ್ಧದ ನಾಯಕನನ್ನೇ ಮಾಡುವುದಾಗಿದ್ದರೂ ಅವರ ಪ್ರಯತ್ನವಿಲ್ಲದೆ ದುರ್ಯೋಧನನೇ ತನ್ನ ಸ್ವಾಭಾವಿಕ ಸುಗುಣಗಳಿಂದ, ಕೊನೆಯ ಘಳಿಗೆಯವರೆಗೆ ತಾನೇ ಗದಾಯುದ್ಧದ ನಾಯಕನಾಗುತ್ತಾನೆ. ಸಂಸ್ಕೃತ ಭಾರತದಲ್ಲಿ ದುರ್ಯೋಧನನು, ಪಂಪ, ರನ್ನರ ಕಾವ್ಯಗಳಲ್ಲಿ ಕಂಡಷ್ಟು ಉಜ್ವಲನಾಗಿ ಕಾಣದಿದ್ದರೂ ಉಳಿದ ಹಿಂದಲ ಒಂಭತ್ತು ಪರ್ವಗಳಲ್ಲಿ ತೋರಿದುದಕ್ಕಿಂತ ಹೆಚ್ಚು ಮಹನೀಯನಾಗಿ ಕಾಣುತ್ತಾನೆ. ವ್ಯಾಸನನ್ನೇ ಅನುಸರಿಸುವ ಕುಮಾರ ವ್ಯಾಸನಲ್ಲಿಯೂ ದುರ್ಯೋಧನ ಬರಿಯ ಉನ್ಮತ್ತ ನೀಚ ಅಹಂಕಾರಿಯೇ ಅಲ್ಲ; ದುರ್ಯೋಧನ ಭೀಮರಿಬ್ಬರೂ ಧೀರೋದ್ಧತ

ನಾಯಕರೇ ಆದರೂ ಒಂದೊಂದು ಸಮಯದಲ್ಲಿ ದುರ್ಯೋಧನನೇ ಧೀರೋದಾತ್ತನಾಗಿ ತೋರುತ್ತಾನೆ.

ಕುಮಾರವ್ಯಾಸ, ಗದಾಯುದ್ಧ ಸನ್ನಿವೇಶವನ್ನು ಬಹಳ ನಾಟಕೀಯವಾಗಿ ಚಿತ್ರಿಸಿದ್ದಾನೆ. ಪ್ರಾರಂಭದ ಸಂಧಿಯಲ್ಲಿ ಕುರುರಾಯನ ಏಕಾದಶ ಅಕ್ಷೋಹಿಣಿ ಬಲದ ತೊಂಬತ್ತೊಂಬತ್ತು ಭಾಗ ನಾಶವಾಗಿದೆ. ಉಳಿದ ಅಲ್ಪ ಸಂಖ್ಯೆಯ ಸೇನೆ ಪಾರ್ಥನಿಗೆ ಇದಿರಾಗಿದೆ. ಪಾರ್ಥನನ್ನು ಕೆಣಕಿದುದು ಕಾಲರುದ್ರನನ್ನು ಕೆರಳಿಸಿದಂತಾಗಿದೆ; ಪ್ರಚಂಡ ಪ್ರಳಯ ಭೈರವನೊಂದಿಗೆ ಸರಸವಾಡಿದಂತಾಗಿದೆ. ಕೃತಾಂತನನ್ನು ಕರೆದು ಮೂದಲಿಸಿದಂತಾಗಿದೆ. ಅರ್ಜುನನ ರಭಸಕ್ಕೆ ತಡೆಯುವ ಸೈನ್ಯ ಯಾವುದೂ ಇಲ್ಲ. ಆತ, ಪರಬಲವನ್ನೆಲ್ಲ ಒಂದೇ ಏಟಿಗೆ ಸವರಿದನು. ಉಳಿದ ನಾಲ್ಕಾರು ರಾಜರು ರಥದಿಂದ ಇಳಿದು ಫಲಾಯನ ಸೂತ್ರವನ್ನು ಜಪಿಸಿದರು. ಹೀಗೆ ರಾಜರು ಓಡುತ್ತಿದ್ದುದನ್ನು ದುರ್ಯೋಧನನು ನೋಡಿದನು. ರಣಶೂರನಾದ ಆತನು ಇನ್ನು ಗೆಲುವು ಸ್ವಪ್ನ ಪ್ರಾಯವೆಂದು ತಿಳಿದಿದ್ದರೂ ಆ ರಾಜರನ್ನು ಪುತ್ತೆಹುರಿದುಂಬಿಸಿದನು. "ಎಲೈ ಮಹೀಪತಿಗಳಿರಾ ಕುರುಕ್ಷೇತ್ರವು ಪುಣ್ಯಸ್ಥಳ; ಕ್ಷತ್ರಿಯೋತ್ತಮರಾದ ನೀವು ಇಲ್ಲಿಂದ ಪಲಾಯನಗೈವುದೇ? ಇಲ್ಲಿ ಕಾದಿ ಮಡಿದರೆ ಸುರಸಂಕುಳದ ಸೇರುವೆ; ಓಡಿದರೆ ರೌರವದಲ್ಲಿ ಇಳಿವಿರಿ. ಇಲ್ಲಿ ಮನುಜ ಸ್ತ್ರೀಯರ ಮೇಳ, ಅಲ್ಲಿ ಸುರನಾರಿಯರ ರತಿ; ಇಲ್ಲಿ ಸಾರೋಧ್ಯಾನರಸ, ಪೀಯೂಷರಸ ಅಲ್ಲಿ, ಇಲ್ಲಿ ಅಧ್ರುವ ವಿಭವ, ಅಲ್ಲಿ ವಿಮಲತೆ, ಇಲ್ಲಿ ಕಿಲ್ಬಿಷ; ಅಲ್ಲಿ ಶಿವಮಯ; ನೀವು ನಿಮ್ಮ ರಾಜ್ಯ, ಮಂತ್ರಿ, ರಾಣಿ, ಇವೆಲ್ಲ ಧ್ರುವವೇ? ಈ ವಿಡಂಬ ದೇಹವನ್ನು ಸಂಭಾವಿಸುತ ಪರಲೋಕ ಹಿತವನು ನೀವು ನೆನೆಯದೆ ಕೆಟ್ಟುದಕ್ಕೆ ಬೆರಗಾದೆ" ಹೀಗೆ ಅರ್ಜುನನನ್ನು ಕೆಣಕಿದುದರಿಂದ ಮಾರಿಯ ಸೆರಗನ್ನು ಹಿಡಿದಂತಾಯಿತೆಂದು ತನಗೆ ಗೊತ್ತಿದ್ದರೂ ದುರ್ಯೋಧನನು, ಅಪಮಾನಾನುತಾಪದಿಂದ ಹಿಂದಿರುಗಿದ ರಾಜರೊಡನೆ ಅರ್ಜುನನನ್ನು ಎದುರಿಸಿದನು. ಆದರೆ ಪ್ರತಿಕೂಲದೈವನಾದ ದುರ್ಯೋಧನ ಕೊನೆಯಲ್ಲಿ ಏಕಾಂಗಿಯಾಗಿ ಉಳಿದನು. ಆಗಲೂ ಸಹ ಆವನ ಛಲ ಕಡಿಮೆಯಾಗಲಿಲ್ಲ.

ನರಶಿರದ ದರ್ಭೆಗಳ ಮಿದುಳಿನ
ಚರುವಿನೆಲುವಿನ ಸಮಿಧೆಗಳ ಬಿಲು

ದಿರುವರವ ಚತುರಂಗ ರಭಸದ ಸಾಮ ವೇದಿಗಳ
ಅರುಣಜಲ ದಾಜ್ಯಾಶ್ರುವಾರಿಯು
ಶಿರಕಪಾಲದ ವೈರಿ ಪಶು ಬಂಧು
ರದ ಸಂಗರ ಯಜ್ಞದೀಕ್ಷೆಯ ಮರೆತಿರಕಟೆಂದ

ಏಕಾದಶ ಅಕ್ಷೋಹಿಣಿ ಸೈನ್ಯದ ಪೈಕಿ ದುರ್ಯೋಧನನಲ್ಲದೆ ಉಳಿದವರು ಇನ್ನು ಮೂರೇ ಮಂದಿ. ಕೃಪ, ಕೃತವರ್ಮ, ಗುರುಸುತ. ದುರ್ಯೋಧನನು ಹೆಗಲಲ್ಲಿ ಗದೆಯನ್ನು ಇಟ್ಟುಕೊಂಡು ಏಕಾಂಗಿಯಾಗಿ ರಣಭೂಮಿಯಲ್ಲಿ "ಎಡಹುದಲೆಗಳ ದಾಟುತ್ತಾ ರಕುತದ ಮಡುವಿನೊಳು ಗದೆಯೂರಿ, ಕುಣಿವ ಮುಂಡಗಳನ್ನು ಅಪ್ಪಳಿಸುತ್ತಾ, ಓಡದಿಹ ನರಿ ಹದ್ದು ಕಾಗೆಗಳಿಗೆ ಗದೆಯನ್ನು ಬೀಸುತ್ತಾ" ನಡೆಯುತ್ತಿದ್ದನು. ಛತ್ರ ಚಾಮರ ಗಜ ಹಯಾವಳಿಗಳಿಲ್ಲದಿದ್ದರೂ ಆತನು ಕುರುಪತಿಯೆಂದು, ದೂರದಿಂದಲೇ ಸಂಜಯನು ಗುರುತಿಸಿ ಅವನ ಬಳಿಗೆ ಬಂದನು. ದುರ್ಯೋಧನನ ಅವಸ್ಥೆಯನ್ನು ಕಂಡು ಸಂಜಯನಿಗೆ ವಿಮೋಚನಾಂಬುಗಳಾದುವು. ಪರಶುರಾಮನಬುದ್ಧಿ ಗಾಲವನೊರೆದ ನೀತಿ, ವಿಕರ್ಣ ಭೀಷ್ಮರ ಪರಮವಚನಾಮೃತ,ಕಣ್ವರ ನುಡಿ ನಾರದನ ಪರಮ ಕೃತದ ಮಂತ್ರ ಇವುಗಳನ್ನು ಅಂದು ಅಂಗೀಕರಿಸದೆ ಇಂದು ಹೀಗೆ ಚಿಂತಿಸಿದರೇನು ಫಲ ಎಂದು ಸಂಜಯನು ದುರ್ಯೋಧನನನ್ನು ಹುರಿದುಂಬಿಸಿದನು. ಆದರೆ ದುರ್ಯೋಧನನಿಗೆ ಹಾಗೆ ಹೊರಗಿನವರ ಪ್ರೋತ್ಸಾಹ ಅವಶ್ಯಕವೇ ಇರಲಿಲ್ಲ. "ಕಡಲ ಪರಿಯಂತ ರಾಯರ ಗಡಣದಲಿ ನೀನೊಬ್ಬನೆಂಬೀ ನುಡಿಗೆ ನಿಶ್ಚಯವೀಗಳಾದುದು" ಎಂದ ಸಂಜಯನ ಶ್ಲೇಷಾರ್ಥದ ಮಾತಿನಂತೆ ದುರ್ಯೋಧನನು ಒಬ್ಬನೇ ಉಳಿದಿದ್ದರೂ, ಅವನ ಕಿಚ್ಚೂ ಮನಶ್ಶಾಂತಿಯೂ 'ಅವಶ್ಯಮನುಭೋಕ್ತವ್ಯಂ' ಎಂಬ ವಿರಕ್ತಿಭಾವವೂ ಕಡಿಮೆಯಾಗಿರಲಿಲ್ಲ. "ಕೇಳು ಸಂಜಯ, ನಿರರ್ಥಕವಾಗಿ ಒದರದಿರು, ಬೆದರದಿರು, ಹಿಂದಣದ ಎಣಿಸದಿರು. ಪೂರ್ವ ಸುಕೃತದ ಶಾಲಿವನ ಬೊಣಗಿದೊಡೆ, ಭಾರಿಯ ತೋಳು ಗುತ್ತಿನ ಜಯದ ಸಿರಿಯಂಗಳವ ದಾಂಟಿದೊಡೆ, ಬಾಳಲಿಪಿಗಳ ಲೆಕ್ಕವನು ಪ್ರತಿಕೂಲ ವಿಧಿಪಲ್ಲಟಿಸಿ ಬರೆದರೆ ಹೇಳಿಫಲವೇನು? ಹಾಗಲ್ಲದಿದ್ದರೆ ಇಮನರಿಗೆ ನಾನುಮಾಡಿದ ಕಾರ್ಯಗಳೆಲ್ಲ ಜಯಿಸಿದರೂ ಇಂದು ಹೀಗೆ ಪರಾಜಯವಾಗಲು ಕಾರಣವೇನು? ಕದನದಲಿ ಬಕವೈರಿ ದುಶ್ಶಾಸನನನ್ನು ತೇಗಿದನಲ್ಲವೆ? ತಮ್ಮನನ್ನು ಅವನ ಉದರದಲ್ಲಿ ತೆಗೆವೆನು, ವಿಚಿತ್ರವನ್ನು ನೋಡು" ಎಂದನು.

ಜಯದ ಆಶೆ ಲೇಶವೂ ಇಲ್ಲದಿದ್ದರೂ ದುರ್ಯೋಧನನು ಮನಹೀನನಾಗಲಿಲ್ಲ. ಪಾಂಡವರ ಮೇಲಿನ ಛಲವೇ ಅವನ ಪರಾಕ್ರಮಕ್ಕೆ ಸ್ಫೂರ್ತಿ. ಪಾಂಡವರು ಬದುಕಿರುವ ವರೆಗೆ ಅವನ ಉತ್ಸಾಹಕ್ಕೆ ಕುಂದಿಲ್ಲ.

ನರನ ಬಸುರಲಿ ಕರ್ಣನನು ನೃಪ
ವರನೊಳಾ ಶಲ್ಯನನು ನೀ ಕಾ
ತರಿಸದಿರು ಶಕುನಿಯನುಲೂಕನಯಮಳರಿಬ್ಬರಲಿ
ಹರಿಬಕೆದಲಾಗದೆ ಮುರಾಂತಕ
ಹರಹಿಕೊಳಲಿಮದೀಯ ಬಾಹು
ಸ್ಫುರಣ ಶಕ್ತಿಗೆ ಭಂಗ ಬಾರದು ನೋಡು ನೀನೆಂದ

ಏಕಾಂಗ ವೀರನಾದ ದುರ್ಯೋಧನನು ಸಹಜ ಪರಾಕ್ರಮಿ. ಅಕ್ಷೋಹಿಣೀ ಸೈನ್ಯಗಳು ಅವನ ಬೆಂಬಲಕ್ಕೆ ಇದ್ದಿದ್ದರೂ, ಸೈನ್ಯ ನಾಶವಾದ ನಂತರವೂ ಅವನು ಮೊದಲಿನಷ್ಟೇ ಅಪ್ರತಿಮವೀರ. ಆತನು ಸಂಜಯನಿಗೆ "ಆಳುಬಿದ್ದುದು ನಾಯಕರು ಅಮರಿಯರನ್ನು ಓಲಗಿಸಿದರು, ಈ ರಣದೂಳಿಗಕೆ ನಾನೊಬ್ಬನೇ ಎಂದು ನಿನಗೆ ತೋರಿತಲ್ಲವೆ? ಆ ನಾಯಕರನ್ನೂ ಅವರ ಬಿಲ್ಲಿನ ಬಲವನ್ನೂ ನಾನು ಚಿತ್ತದಲ್ಲಿ ಎಣಿಸಿದೆನೆ? ನನ್ನ ಖ್ಯಾತಿಗುಂದದು, ಮನದ ಧೈರ್ಯದ ಧಾತು ಕುಂದದು, ಲಜ್ಜೆಯಭಿಮತ ಜಾತಿಗೆಡದು, ಯುಧಿಷ್ಠಿರಾದಿಗಳ ವಿರೋಧ ಬಿಡದು; ವಿಧೂತ ರಿಪು ಕುರುರಾಯನೆಂಬೀ ಖ್ಯಾತಿಯಲ್ಲದೇ ಬೇರೆ ರಾಜ್ಯವನೊಲ್ಲೆ" ಎಂದನು. ಸಂಜಯನು "ಗುರು ಗಾಂಗೇಯ ವಿದುರಾದಿಗಳು ನಿಮಗೆ ಹೇಳಿಕಳುಹಿಸಿದುದನ್ನು ಹೇಳಿದೆ. ಮುಂದಲ ಮಾರ್ಗವೇನು?" ಎಂದು ಕೇಳಿದನು. ದುರ್ಯೋಧನನು "ಒಂದು ದಿನ ವೈಶಂಪಾಯನ ಸರೋವರದಲ್ಲಿ ಧ್ಯಾನದಲ್ಲಿ ಮುಳುಗಿರುವೆನು. ಅನಂತರ ಕದನದಲ್ಲಿ ಕೌಂತೇಯರನ್ನು ಯಮಸದನದಲ್ಲಿ ತೋರುವೆನು" ಎಂದು ಸಂಜಯನನ್ನು ಕಳುಹಿಸಿಕೊಟ್ಟು ಸರಸ್ಸಿಗೆ ಅಭಿಮುಖನಾದನು. ಸುಗಂಧ ಶೈತ್ಯಪೂರವಾದ ವಾಯು ತನುವಿಗೆ ಆಪ್ಯಾಯನವಾಯಿತು ಕುಮಾರವ್ಯಾಸ ಸರಸ್ಸನ್ನು ಹೃದಯಂಗಮವಾಗಿ ವರ್ಣಿಸಿದ್ದಾನೆ.

ವಳಿಯ ಸುಭಟರ ಝಡಿವ ಕೊಳರ್ವಕ್ಕಿಗಳ ಪಡಿಯರರ
ಅಲರ್ದ ಪೊಂದಾವರೆಯ ನವ ಪರಿ
ಮಳದ ಸಿಂಹಾಸನದಿ ಲಕ್ಷ್ಮೀ
ಲಲನೆಯೋಲಗಶಾಲೆಯಂತಿರೆ ಮೆರೆದುದಾಸರಸಿ

ಸಂಜಯನಿಗೆ ದುರ್ಯೋಧನನ ಅವಸ್ಥೆಯನ್ನು ನೋಡಿ ಕನಿಕರ ಉಂಟಾಯಿತು. "ಚಾರು ಚಂದ್ರೋತ್ಪಲದ ರಮ್ಯಾಗಾರದಲಿ ಮಣಿಮಯದ ರಚನೋದಾರದಿಂ ಹೊಳೆ ಹೊಳೆವ ಭವನದ ಚಿತ್ರಶಾಲೆಯಲಿ, ಸಾರಮಣಿ ಪರಿಯಂಕ ಸಂಸ್ಕಾರದಲಿ ಮಲಗುವ ಮಹೀಪತಿ ನೀರಲೊರಗುವನೆಂದು" ಚಿಂತಿಸುತ್ತಾ ಸಂಜಯನು ಅತ್ತ ಹೊರಳಿದನು. ದುರ್ಯೋಧನನು ಕೈಕಾಲು ಮುಖವನ್ನು ತೊಳೆದುಕೊಂಡು ಆಚಮನ ವಿಸ್ತರಣದಲಿ ಸಪ್ರಣವದಂಗನ್ಯಾಸ ವಿಧಿಗಳಲಿ ವರುಣ ಮಂತ್ರಾಕ್ಷರವ ಜಪಿಸಿ, ನಿರ್ಮುಕ್ತ ಚಿತ್ತ ಸ್ಫುರಣ ಸಲಿಲ ಸ್ತಂಭನವನ್ನು ಮಂತ್ರಿಸಿ ಕೊಳವನ್ನು ಹೊಕ್ಕನು. ಅಷ್ಟಾದರೂ ಕೌರವನು ಇನ್ನೂ ಪೂರ್ಣವಾಗಿ ನಿಸ್ಸಹಾಯಕನಾದನೆಂದು ಹೇಳುವಂತಿರಲಿಲ್ಲ. ಕೃಪ ಗುರುಜ ಕೃತವರ್ಮರು ಇನ್ನೂ ಇದ್ದರು. ಅವರು ಸಾಮಾನ್ಯರಲ್ಲ. ಅಶ್ವತ್ಥಾಮನು ಜಗತ್ತನ್ನು ಭಸ್ಮ ಮಾಡಿ ಹಣೆಗೆ ಹಚ್ಚಿಕೊಳ್ಳುವ ಪರಾಕ್ರಮಿ. "ಅರಸ ಪೊರಮಡು. ಭೀಮ ಪಾರ್ಥರ ಕರುಳ ಬೀಯವ ಭೂರಿನಿಕರಕೆ ಬರಿಸುವೆವು ಕರ್ಣಾದಿ ಸುಭಟರಲಿ ಜಾಳಿಸಿದ ಜಯಕಾಮಿನಿಯ ಜಂಘಾಜಿತ್ವವನು ನಿಲಿಸಿ ನಿನ್ನಯ ತೋಳಿನಲಿ ತೋರುವೆನು. ಬೇಕಾದರೆ ಹಸ್ತಿನಾಪುರದಲಿ ನೀನು ನಿಲ್ಲು. ಶತ್ರುಗಳು ಬಂದರೆ ನನ್ನ ಕೈಚಳಕವನ್ನು ತೋರುವೆ" ಎಂದು ಅಶ್ವತ್ಥಾಮನು ಎಷ್ಟು ಒಡಂಬಡಿಸಿದರೂ ದುರ್ಯೋಧನನು ಕೊಳದಿಂದ ಹೊರಕ್ಕೆ ಬರಲು ಒಪ್ಪುವುದಿಲ್ಲ. ಕೊಳದಲ್ಲಿ ಕುಳಿತಿರುವುದು ಹೇಡಿತನವಾದರೂ ಅದೂ ಒಂದು ಸಮರ ನೀತಿಯೇ ಎಂಬಂತೆ ದುರ್ಯೋಧನನು "ನೀವು ಏಳಿ. ಸಲಿಲದಲಿ ವಿರೋಧಿಗಳ ಆಳು ಮಾಡುವುದೇನು? ಎಂದನು.

ಅನಿಮಿಷರು ಗಂಧರ್ವ ಶೇಷರು
ಮುನಿದು ಮಾಡುವುದಿಲ್ಲ ಮಾಯದ
ಮನುಜರಿಗೆ ತಾ ಸಾಧ್ಯವಹನೇ ತನ್ನನರಿಯಂಲ
ವಿನುತ ಸಲಿಲ ಸ್ತಂಭವಿದ್ಯೆಯೊ

ಳಿನಗಿರವು ಪಾತಾಳದಲಿ ಯಮ
ತನುಜನೇಗುವರೂಹುದೋರದೆ ಹೋಗಿ ನೀವೆಂದ

ವ್ಯಾಸಮಹರ್ಷಿಗಳನ್ನೇ ಅನುಸರಿಸಿರುವ ಕುಮಾರವ್ಯಾಸ ಮೂಲ ಭಾರತದಲ್ಲಿರುವಂತೆ ಕಥೆಯನ್ನು ಇಲ್ಲಿ ನಿರೂಪಿಸಿದ್ದಾನೆ. ಪಂಪ ರನ್ನರು ದುರ್ಯೋಧನನು ಭೀಷ್ಮರ ಬಲಾತ್ಕಾರಕ್ಕೆ ಒಳಗಾಗಿ ಸರಸ್ಸನ್ನು ಹೊಕ್ಕನೆಂದು ಹೇಳಿ ದುರ್ಯೋಧನನ ಘನತೆಯನ್ನು ಇನ್ನೂ ಹೆಚ್ಚಿಸಿದ್ದಾರೆ.

ಪಾಂಡವರು ಸೈನ್ಯಸಮೇತರಾಗಿ ಬಂದು ಕೊಳದ ತೀರದಲ್ಲಿ ನೆರೆದರು. ತೂಳಿದುದು ಬಲುಬೊಬ್ಬೆಯಬ್ಬರವಭ್ರಮಂಡಲವ, ಸೂಳವಿಸಿದವು ಲಗ್ಗೆಯಲಿ ನಿಸ್ಸಾಳ ಬಹುವಿಧ ವಾದ್ಯರವ ಹೆಗ್ಗಾಳೆಗಳು ಚೀರಿದವು ಬೈಸಿಕೆ ಬಿಡೆ ಕುಲಾದ್ರಿಗಳು. ಕೃಷ್ಣನ ಮಾತಿನಂತರ ಮೊದಲು ಧರ್ಮಜನು ದುರ್ಯೋಧನನಿಗೆ ನೀತಿಯನ್ನು ಬೋಧಿಸತೊಡಗಿದನು. ಕೌರವರಾಯ ಏಳು, ನೀನು ಸಲಿಲವ್ಯಾಳನೇ ಎಂದು ತಿರಸ್ಕರಿಸಿದನು. ಆದರೆ ಯುಧಿಷ್ಠಿರನ ಕೂಡ ದುರ್ಯೋಧನನಿಗೆ ಅವನು ತಾನೇ ಮುಂದೆ ಹೇಳುವಂತೆ ಯಾವ ಛಲವೂ ಇಲ್ಲ. ಆದುದರಿಂದ ಯುಧಿಷ್ಟಿರ ಎಷ್ಟು ಬೋಧನೆಮಾಡಿದರೂ ದುರ್ಯೋಧನ ನೀರಿನಲ್ಲಿ ಉದಾಸೀನನಾಗಿಯೇ ಅಡಗಿದ್ದನು. ಆಗ ಧರ್ಮರಾಜನು "ಅನಿಲಸುತ ಬಾ, ಕುರುಕುಲಾನ್ವಯ ವನದವಾನಲ ವೈರಿ ಪುತ್ರಜ ಘನ ಶರಧಿ ವಡಬಾಗ್ನಿ ಬಾರೈ ನುಡಿಸು ಕುರುಪತಿಯ" ಎಂದು ಭೀಮನನ್ನು ಆಹ್ವಾನಿಸಿದನು. ತಾನು ನುಡಿಸಿದಲ್ಲದೆ ದುರ್ಯೋಧನನು ಹೊರಕ್ಕೆ ಹೊರಡುವುದಿಲ್ಲವೆಂಬುದು ಭೀಮನಿಗೂ ಗೊತ್ತು.

ಭೀಮನೆನೆ ಭುಗಿಲೆಂಬ ರೋಷದ
ತಾಮಸವ ಬೀಳ್ಕೊಟ್ಟೆಲಾ, ನಿ
ರ್ನಾಮವಾಯಿತೆ ಬಿರುದು ಪಾಂಡವರ ತಿಮಿರ ರವಿ ಎಂಬ
ಭೀಮ ವನ ದಾವಾಗ್ನಿ ಹೊರವಡು
ಭೀಮ ಭಾಸ್ಕರ ರಾಹು ಹೊರವಡು
ಭೀಮ ಗರ್ಜನೆ ಮಧುರ ಗೀತವೆ ನೃಪತಿಬಾರೆಂದ

ಭೀಮನ ಧ್ವನಿಯನ್ನು ಕೇಳಿ ದುರ್ಯೋಧನನು ಕೆರಳಿದನು. ಅಧಿಕ ಕ್ರೋಧಶಿಖಿ ಅವನ ಮನಸ್ಸಿನಲ್ಲಿ ಭುಗಿಲೆದ್ದಿತು. ಕರಣೇಂದ್ರಿಯಾದಿಗಳು ತರು

ಬಿದವು, ಮಂತ್ರಾಕ್ಷರಗಳು ಪಲ್ಲಟಿಸಿದವು, ನಿರ್ಭರದ ವೀರಾವೇಶದಲ್ಲಿ ಸಲಿಲ ಸ್ತಂಭ ಮಂತ್ರವನ್ನು ಮರೆದನು. ದುರ್ಯೋಧನನು ನೀರಿನಲ್ಲಿದ್ದರೂ ದುಃಖದ ಮತ್ತು ಕ್ರೋಧದ ಬಿಸುಸುಯ್ಲಿನ ಸೆಕೆಯಲ್ಲಿ ನೀರು ಮರುಗಿ ಕುದಿಯಿತು, ನೀರಿನ ಮೇಲುಗಡೆ ಬೊಬ್ಬುಳಿಗಳು ತೆರೆನೊರೆಗಳು ಘಳಿಘಳಿಸಿ ತುರುಬಿದವು. ವಿವೇಕದಿಂದ ಪ್ರಾಣ ಉಳಿಸಿಕೊಳ್ಳಬೇಕೆಂಬ ಜ್ಞಾನ ಮರೆಯಾಯಿತು, ವೀರ ಪಣದ ಅಭಿಮಾನ ಮಸೆಯಿತು, ಮೌನ ಹೆಬ್ಬಳಸಾಯ್ತು, ಆಹವ ವ್ಯಸನ ಆವರಿಸಿತು, ಅಹಿತ ವಚನವನ್ನು ಕೇಳಿ ಆತನಿಗೆ ನಾಚಿಕೆಯಾಯಿತು.

ಕೌರವನು ನೀರಿನಿಂದ ಹೊರಬಿದ್ದನು. ಪರಾಕ್ರಮ ಭೂಷಣನಾದ ಆತ ಪರಾಜಯದಿಂದ ಪೆಚ್ಚಾಗಿರಲಿಲ್ಲ. ಸೂರ್ಯನು ಪೂರ್ವದಿಕ್ಕಿನಲ್ಲಿ ಉದ ಯಿಸುವಂತೆ ಆತನು ಜಾಜ್ವಲ್ಯಮಾನನಾಗಿ ತೇಜಃಪುಂಜನಾಗಿ ಹೊಳೆದನು. ಅವನನ್ನು ಆಗ ನೋಡಿದವರಿಗೆ ಹನ್ನೊಂದು ಅಕ್ಷೋಹಿಣಿಯನ್ನು ಕಳೆದು ಕೊಂಡ ದೀನನಾಗಿ ನತದೃಷ್ಟನಾಗಿ ಆತ ತೋರಲಿಲ್ಲ. ಶತೃಗಳ ಎದೆಯನ್ನು ನಡುಗಿಸುವ ಏಕಾಂಗವೀರ ಕುರುಕುಲ ಭಾನುವಿನಂತೆ ಉದಯಿಸಿದನು.

ಜಲಧಿ ಮಧ್ಯದೊಳೇಳ್ವ ವಡಬಾ
ನಲನವೊಲು, ತವಕದಲಿ ತಡಿಗು
ಚ್ಚಳಿಸಿದನು ತತ್ಕ್ರೋಧಶಿಖಿ ಕಿಡಿಮಸೆಗೆ ಕಂಗಳಲಿ
ಹೊಳೆವ ಭಾರಿಯ ಹೆಗಲಗದೆ ಕರ
ತಳದ ವಿಪುಳ ಸಘಾಟ ವರ್ಗದ
ಚಲನಯನದ ಚಢಾಳ ಛಲದ ನೃಪಾಲ ಹೊರವಂಟ

ನೀರಿನಿಂದ ಮೇಲಕ್ಕೆ ಬಂದ ದುರ್ಯೋಧನನು ಅತ್ಯಂತ ಉತ್ಸಾಹದ ಸಮಾರಂಭಕ್ಕೆ ಹೋಗುವವನಂತೆ ಮಂಗಳ ದ್ರವ್ಯಗಳಿಂದ ಅಲಂಕರಿಸಿ ಕೊಂಡನು. ಯುದ್ಧದಲ್ಲಿ ಆತ ಪೂರ್ಣವಾಗಿ ಸೋತಿದ್ದರೂ, ಗೆದ್ದವನೂ ಸಹ ಅವನಷ್ಟು ಠೀವಿಯಿಂದ ಸಿಂಗಾರವಾಗುತ್ತಿರಲಿಲ್ಲ. ಕುರುಭೂಪಾಲನು ಗಂಧವನುಪೂರವಿಸಿದನು, ಸರಳೋರೆ ಪೋರೆಯ ಮೈಯುಗಾಯವ ಹೋರುಗಳ ಮೆತ್ತಿದನು ಘಟ್ಟಿಸಿ ಗಂಧಸಾರದಲಿ, ಸಾರತರ ಸಾದಿನ ಜವಾದಿಯ ಭೂರಿ ಪರಿಮಳದಿಂದ ವರ ಕಸ್ತೂರಿ ತಿಲಕವ ರಚಿಸಿ ಗೆಲಿದನು; ತೆಗೆದು ವಜ್ರಾಂಗಿ ಯನು ಮೈಯಲಿ ಬಿಗಿದು, ಹೊಂಬರಹದ ಸುರತ್ನಾಳಿಗಳ ಬಲು ಸೀಸಕವ

ನಳವಡಿಸಿದನು ಶಿರಿಮುಡಿಗೆ ಝುಗಝುಗಿಪ ಬೆಳುದಿಂಗಳಿನ ತೆಳುದಗಡೆನಲು ತೊಳಗುವ ದುಕೂಲವ ಬಿಗಿದು ಕತ್ತೂರಿ ಕರ್ಪುರ ವೀಳೆಯವ ಕೊಂಡು, ಮುಂಜೆರಸ್ನು ಅಳವಡಿಸಿದನು.

ರಣಭೂಮಿಯಲ್ಲಿ ಕೌರವರ ಪಕ್ಷದವನಾಗಿ ದುರ್ಯೋಧನನೊಬ್ಬನೇ. ಪಾಂಡವರು ಸೇನಾಸಮೇತರಾಗಿ ಸುತ್ತಲೂ ಕವಿದುನಿಂತಿದ್ದರು. ಆ ಸೈನ್ಯ ವನ್ನೆಲ್ಲ ಆತನೊಬ್ಬನೇ ಎದುರಿಸುವ ಸಾಹಸದಿಂದ ನಿಂತಿದ್ದನು. ಕೌರವನ ಪರಾಕ್ರಮವೋ ಅವ್ಯಾಜ, ನೈಸರ್ಗಿಕ, ಫಲಾಪೇಕ್ಷೆ ರಹಿತವಾದ ಪರಾಕ್ರಮ. ಆತನಿಗಿಂತ ಹಿಂದೆ ಸತ್ತವರಿಗೆ ಸ್ವಾಮಿ ಕಾರ್ಯಕ್ಕೆ ಮಡಿಯಲೇ ಬೇಕು ಎಂಬ ಕರ್ತವ್ಯ ಬುದ್ಧಿ, ಮುಂದೆ ದುರ್ಯೋಧನನಿಗೆ ಜಯ ಎಂಬ ಆಸೆಗಳಿದ್ದವು. ಆದರೆ ದುರ್ಯೋಧನನಿಗೆ ಆ ಬಗೆಯ ನೆಚ್ಚೊಂದೂ ಇರಲಿಲ್ಲ. ಸರಸ್ಸಿನಿಂದ ಅವನು ಎದ್ದ ನಂತರ, ಕೊನೆಯವರೆಗೆ ಅವನ ದೊಡ್ಡ ಗುಣಗಳು ಕಾಣುತ್ತಲೇ ಹೋಗುತ್ತವೆ. ಕೌರವಾನ್ವಯಭಾನುವಿನ ಅಸ್ತಮಯದ ಆ ಕಾಲದಲ್ಲಿ, ಕೌರ ವನ ಹಿಂದಲದನ್ನೆಲ್ಲ ಮರೆಸಿ ಅವನ ಮಹೋನ್ನತ ಗುಣಗಳನ್ನೇ ವಿಧಿ ಕಾಣಿಸಿದೆ. ಕೌರವನು ಎದ್ದವನೇ "ಯುಧಿಷ್ಠಿರ ಹಿಡಿ ಧನುವ, ಪವನಜ ತುಡುಕು ಗದೆಯ, ಪಾರ್ಥ ಸಮರಕೆ ತಡೆಯದಿರು, ಮಾದ್ರೀ ಕುಮಾರಕರೇ ಕಾಳಗಕೆ ಏಳಿ ಧೃಷ್ಟದ್ಯುಮ್ನ ಮಿಡುಕು, ಸಾತ್ಯಕಿ ಹೊಡೆಕರಿಸು, ಪಾಂಚಾಲ ಎನ್ನೊಡನೆ ಏಳು ನಾನು ಒಬ್ಬನೇ ನಿಲುವೆನು" ಎಂದನು. ದುರ್ಯೋಧನ, ಶತೃವಿನಿಂದ ಯಾವ ದಯೆಯನ್ನು ನಿರೀಕ್ಷಿಸಲಿಲ್ಲ. ಎಲ್ಲರೂ ಒಟ್ಟಾಗಿ ಮೇಲೆ ಬೀಳಲೆಂದೇ ಅವನು ಬಯಸಿದನು. ಯುಧಿಷ್ಠಿರನು ಅದಕ್ಕೆ ಒಪ್ಪಲಿಲ್ಲ, 'ನೀನು ಧಿಟ್ಟ. ಈ ಛಲ ನಿನಗೆ ಯೋಗ್ಯ' ಎಂದು ಪ್ರಶಂಸಿಸಿದನು. "ಹುಟ್ಟಿದವರಿಗೆ ಸಾವು ತಲೆ ಯಲ್ಲಿ ಕಟ್ಟಿದುದು. ಆದರೆ ಅವಸಿಯಲ್ಲಿ ಈ ಮುಟ್ಟವನ್ನು ಮುಟ್ಟಿದವರು ಯಾರು" ಎಂದು ಸಮಸ್ತ ಪರಿವಾರವೂ ಬೆರಗಾಯಿತು. "ನಮ್ಮಲ್ಲಿ ಒಬ್ಬ ನನ್ನು ಆರಿಸಿಕೊ" ಎಂದು ಯುಧಿಷ್ಠಿರನು ಹೇಳಿದನು. ಹಾಗೆ ಆರಿಸಿಕೊಳ್ಳು ವುದರಲ್ಲಿಯೂ ದುರ್ಯೋಧನನ ದಿಟ್ಟತನವೇ ವ್ಯಕ್ತವಾಗುತ್ತದೆ. ಗದೆಯ ಯುದ್ಧದಲ್ಲಿ ದುರ್ಯೋಧನನ ಸಮಬಲರು ಯಾರೂ ಇಲ್ಲ. ಭೀಮನೂ ಇಲ್ಲ. ಈ ವಿಚಾರವು ಕೃಷ್ಣನಿಗೆ ಗೊತ್ತಿದ್ದಿತು. ಮಹಾಭಾರತದ ಮೂಲದಲ್ಲಿ ಶ್ರೀ ಕೃಷ್ಣನು "ಉಪದೇಶೋನಯೋಸ್ತುಲ್ಯೋ ಭೀಮಸ್ತು ಬಲವತ್ತರಃ।

ಕೃತೀಯತ್ನಪರಸ್ತ್ವೇಷ ಧಾರ್ತರಾಷ್ಟ್ರೋ ವೃಕೋದರಾತ್" ಎಂಬ ಮಾತಿನಲ್ಲಿ ಭೀಮನು ದುರ್ಯೋಧನನಿಗಿಂತ ಕಡಿಮೆ ಎಂದು ಹೇಳಿದ್ದಾನೆ. ಇಷ್ಟಾದರೂ ದುರ್ಯೋಧನನು ಸುಲಭವಾಗಿ ಜಯವಾಗಬಹುದಾಗಿದ್ದ, ಯುಧಿಷ್ಠಿರ ಅರ್ಜುನ ಯಮಳರನ್ನು ಕಾಳಗಕ್ಕೆ ಆರಿಸಿಕೊಳ್ಳಲಿಲ್ಲ. ಹಾಗೆ ಅವನು ಆರಿಸಿಕೊಂಡಿದ್ದರೆ ಪಾಂಡವರು ಮತ್ತೆ ಕಾಡಿಗೆ ಹೋಗಬೇಕಾಗುತ್ತಿತ್ತು. ಯುಧಿಷ್ಠಿರನ ಮಾತಿನಿಂದ ಕೃಷ್ಣನಿಗೆ ಸಹ ಗಾಬರಿಯಾಯಿತು. ದುರ್ಯೋಧನನು ಪ್ರತ್ಯುತ್ತರ ಕೊಡುವವರೆಗೆ, ಪರಮಾತ್ಮನಾದರೂ ಕೃಷ್ಣನ ಎದೆ ಸಹ ಡವ ಡವ ಎನ್ನುತ್ತಿತ್ತು. ಆತನು ಧರ್ಮರಾಜನಿಗೆ "ಮರುಳೆ ನೀ ಹೆಚ್ಚಾಳ್ತನದಿಯು| ಬ್ಬರಿಸಿ ನುಡಿದೆ ಸುಯೋಧನನನೀ| ನರಿಯಲಾಗದೇ ಕೈಗೆ ಬಂದೊಡೆ ಕದನ ಭೂಮಿಯಲಿ || ಸರಿಸದಲಿ ಮಲೆತವನು ಜೀವಿಸಿ | ಮರಳಲರಿವನೆ ನಮ್ಮೊಳೊಬ್ಬರ| ವರಿಸುವಿಗ್ರಹಕೆಂದು ನಮ್ಮನು ಕೊಂದೆ ನೀನೆಂದ|| ಗೆಲಿದರೈವರೊಳೊಬ್ಬನನು ಮಿ|ಕ್ಕಳಿದ ನಾಲ್ವರರು ಕಿಂಕರರು ಗಡ| ತಿಳಿದು ನುಡಿದಾ ನಿನ್ನನಾಹವ ಮುಖಕೆ ವರಿಸುವೊಡೆ || ಗೆಲಲು ಬಲ್ಲಾ ಮೇಣು ಫಲುಗುಣ | ಗೆಲುವನೇ ಯಿನ್ನುಳಿದರಿಬ್ಬರು ನಿಲುವರೇ ಕುರುಪತಿಯ ಗಾಢದ ಗದೆಯಗಾಳಿಯಲಿ ||

ಕೃಷ್ಣನ ಭಯ ನಿರಾಧಾರವಾಗಿದ್ದಿತು. ಅಸಮ ಸಾಹಸಿಯಾದ ದುರ್ಯೋಧನನು ಕಾಳಗಕ್ಕೆ ಅಸಮಬಲನನ್ನು ಆರಿಸಿಕೊಳ್ಳಲಿಲ್ಲ. ದುರ್ಯೋಧನನ ಛಲ ಭೀಮನ ಮೇಲೆ. ಉಳಿದವರ ಮೇಲೆ ಯುದ್ಧಮಾಡುವುದು ಅವನ ಶೌರ್ಯಕ್ಕೇ ಕುಂದಕವಾಗಿದ್ದಿತು. ತಿಳಿದೂ ತಿಳಿದೂ ಅವನು ತನಗೆ ದೊರೆತ ಸುಲಭ ಜಯವನ್ನು ಬಿಟ್ಟನು. ಯುಧಿಷ್ಠಿರನ "ಮರುಳುತನದ" ಲಾಭವನ್ನು ಅವನು ಮಾಡಿಕೊಳ್ಳಲಿಲ್ಲ. ದುರ್ಯೋಧನನ ಔದಾರ್ಯ ಯುಧಿಷ್ಠಿರನನ್ನು ನಾಚಿಸಿತು.

ಹಾ ಯುಧಿಷ್ಠಿರ ನಿಮ್ಮ ಕೂಡೆಮ
ಗಾವ ಛಲವಿಲ್ಲರ್ಜುನನು ಮಗು
ವೀಯಮಳರಲಿ ಕೈದುಕೊಳ್ಳೆನು ಹೊಯ್ದು ಕೆಣಕಿದರೆ
ಬಾಯಬಡಿಕನು ಸತ್ವದಲಿ ನಾ
ಗಾಯುತದ ಬಲನೆಂಬ ದೊಂಬಿನ |
ವಾಯುವಿನ ಮಗ ನನ್ನೊಡನೆ ಮಾರಾಂತೊಡಹುದೆಂದ

ವರಿಸಿದೆನು ಭೀಮನನು ನೀವಾ | ದರಿಸುವೊಡೆ ಧರ್ಮವನು ದುರ್ಜನ |
ಸರಣಿಯಲಿ ನಿಲು ಬಹಡೆ ದಳಸಹಿತೇಳಿ ಕಾಳಗಕೆ ||

ದುರ್ಯೋಧನನು ಅರ್ಜುನನು ಮಗು ಎಂದಾಗಲೂ, ದುರ್ಜನರ ಜತೆ ನೀವು ಕಾಳಗಕ್ಕೆ ನಿಲ್ಲುವಾದರೆ ಏಳಿ ಎಂದು ತನ್ನನ್ನೇ ಹಳಿದು ಕೊಂಡಾಗಲೂ ಪಾಂಡವರ ಮುಖವನ್ನು ನೋಡಿರಬೇಕು! ಸುಯೋಧನನಿಗೆ ರಣೋತ್ಸಾಹವೇ ದೊಡ್ಡ ಉತ್ಸವ. ಭೀಮನಿಗಿರುವಂತೆ ಯುದ್ಧ ದುರ್ಯೋಧನನಿಗೆ ಒಂದು ಅವಮಾನದ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಅಲ್ಲ. ಆತನು ಅನಾಸಕ್ತಿಯಿಂದ, ಒಂದು ಠೀವಿಯಿಂದ, ಒಂದು ಧೋರಣೆಯಿಂದಲೇ ಯುದ್ಧವನ್ನು ಪ್ರಾರಂಭಿಸಿದನು. ಕುರುರಾಯನು ನಗುತ್ತಾ ಒಂದು ಆಟಕ್ಕೆ ಪ್ರೇಕ್ಷಕರನ್ನು ಕರೆಯುವಂತೆ “ದೊರೆಗಳೇ ಕೇಳಿ. ಪರಿವಾರಗಳೇ ಕುಳ್ಳಿರಿ, ಪಾರ್ಥ ಸಾತ್ಯಕಿ ವೀರ ದ್ರುಪ್ಟದ್ಯುಮ್ನ ಯಮಳ ಶಿಖಂಡಿ ಮೊದಲಾದ ವೀರ ಭಟರೇ, ನಮ್ಮ ಆಹವದ ವಿಸ್ತಾರ ಸಮವಿಷಮಪಯಗತಿ ಯೋರೆಪೋರೆಯ ನರಿವುದು” ಎಂದನು. ಭೀಮನು “ನಿನ್ನ ಬಯಲ ಕಂಠದ ಮಾತು ಸಾಕು. ದುಶ್ಯಾಸನ ರಕುತಪಾನ ಭವತ್ಸಹೋದರ ನಿಕರ ನಾಶಮಾಡಿದೆ ಬಾ’’ ಎನ್ನುತ್ತಾನೆ.

ಈ ಸಂದರ್ಭದಲ್ಲಿ ಕುಮಾರವ್ಯಾಸನು ದುರ್ಯೋಧನನ ಬಾಯಿನಲ್ಲಿ ಹಾಕಿರುವ ಮಾತು ದುರ್ಯೋಧನನ ಘನತೆಯನ್ನು ಬಹಳ ಹೆಚ್ಚಿಸುತ್ತದೆ. ದುರ್ಯೋಧನನು ಆ ವೇಳೆಗೆ ಹೊಂದಿದ್ದ ವಿರಕ್ತಭಾವನೆ ಸಹ ಇದರಿಂದ ವ್ಯಕ್ತವಾಗುತ್ತದೆ. ಅವನ ಪರಾಕ್ರಮಕ್ಕೆ ಇನ್ನೂ ಕಳೆಯೇರುತ್ತದೆ. ಭೀಮನು ಅಂತಹ ಮಾತನ್ನು ಆಡಲು ಎಂದೂ ಸಮರ್ಥನಲ್ಲ. ದುರ್ಯೋಧನನು ಹೀಗೆನ್ನುತ್ತಾನೆ.

ಸಾಯಲಾಗದೆ ಸುಭಟರ್, ಆ ಚಂ
ದ್ರಾಯತವೆ ತನು, ವಿಧಿಯ ಟಿಪ್ಪಣ
ದಾಯುಷವು ತೀರಿದರೆ ಸಾವರು, ನಿನ್ನಲೇನಹುದು?
ಕಾಯಲಳವೆ ನಿನಗೆ, ಮುನಿದೊಡೆ
ನೋಯಿಸುವುದಳವೆ ಫಡ ದೈ
ವಾಯತಕೆ ನೀನೇಕೆ ಬೆರೆತಿಹೆಯೆಂದನಾ ಭೂಪ

"ಎಲೈ ಭೀಮ ಸುಭಟರು ಸಾಯಲಾಗದೆ? ದೇಹವು ಆಚಂದ್ರಾರ್ಕ ಸ್ಥಿತವೆ? ಕೊಲ್ಲುವವನು ಕಾವನು ವಿಧಿ, ನೀನಲ್ಲ. ನೀನು ಮನಸ್ಸುಮಾಡಿದರೆ ಕಾಯಬಲ್ಲೆಯ? ಕೋಪಿಸಿಕೊಂಡರೆ ನೋಯಿಸಬಲ್ಲೆಯ? ವಿಧಿ ಮಾಡಿದುದಕ್ಕೆ ನೀನೇಕೆ ಕೊಬ್ಬಿ ಕುಣಿಯುತ್ತಿರುವೆ."

ದುರ್ಯೋಧನ, ಭೀಮನ ಪರಾಕ್ರಮವನ್ನು ಗಣನೆಯಲ್ಲಿಯೇ ಇಟ್ಟಿರಲಿಲ್ಲ. ಭೀಮನಿಂದಲೂ ಏನೂ ಆಗದು, ಪಾಂಡವರಿಂದಲೂ ಏನೂ ಆಗದು, "ವಿಧಿ ಮುನಿದರೆ ಜಯಸಿರಿ ತೋಳಿನಿಂದ ತೊಲಗುವಳು. ನಾನಾದರೋ "ಮಣಿದುಬದುಕುವನಲ್ಲ ಹಗೆಯಲಿ ಸೆಣಸಿಬಿಡುವವನಲ್ಲ ದಿಟ, ಧಾರುಣಿಯ ಸಿರಿಗೆ ಅಳುಪುವನಲ್ಲ, ಅಳುಕಿಲ್ಲ ಕಾಯದಲಿ, ರಣಮಹೋತ್ಸವ ಮತ ಕೈದಣಿಯೆ ಹೊಯ್ದಾಡುವೆನು." ಭೀಮನ ಬಾಯಲ್ಲಿ ಆ ಬಗೆಯ ಗಂಭೀರವಾದ ಮಾತೇ ಹೊರಡುವುದಿಲ್ಲ. ದುರ್ಯೋಧನನು ವಿಧಿ ಮುನಿದರೆ ನಿನ್ನಲೇನಹುದು ಎಂದಾಗ ಭೀಮನ ದುರಭಿಮಾನ ಮಿತಿಮೀರುವುದು. ಅವನು ಹಿರಣ್ಯಕಶಿಪುವಿನಂತೆ ನಾನೇ ದೇವರು ಎನ್ನುತ್ತಾನೆ. ಭೀಮನ ಮಾತನ್ನು ಕೇಳಿ, ಪಾಂಡವ ಸೈನ್ಯಕ್ಕೆ ತುಂಬ ನಾಚಿಕೆಯಾಗಿದ್ದಿರಬೇಕು.

ಎಲವೊ ದುರ್ಮತಿ ಕೇಳು ನಿನ್ನಯ
ಕುಲದ ಶಿಕ್ಷಾರಕ್ಷೆಗಿನ್ನಾ
ರೊಳರು ಹೊರಬಿಗ ದೈವವುಂಟೇ ನಾನೆ ದೈವ ಕಣ
ಕಳಚಿದೆನೆಲಾ ಹಿಂದೆ ನೂರ್ವರ
ತಲೆಯ ನೆನ್ನರಗಳಿಗೆಯಲಿ ಹೆಡ
ತಲೆಯ ನೊದೆವೆನು ನೋಡೆನುತ ಹೊಯ್ದನು ಸುಯೋಧನನ

ಕುಮಾರವ್ಯಾಸನು ಗದಾಯುದ್ಧವನ್ನು ಬಹಳ ಕಾವಿನಿಂದ ವರ್ಣಿಸಿದ್ದಾನೆ. ಮತ್ತಗಜದಂತೆ ಎರಗಿದರು, ಸಿಡಿಲಂತೆ ಮಿಂಚಿನ ಮಿರುಗಿನಂತೆ ಮುಕ್ಕುರುಕಿದರು ಕೊನೆಯಲ್ಲಿ ಭೀಮನು ದುರ್ಯೋಧನನ ಹೊಡೆತವನ್ನು ತಾಳಲಾರದವನಾದನು. "ಭೀಮನ ಮಿಡುಕ ನಿಂದುದು ನಗುವ ಪಾಂಡವ ಬಲದ ತಲೆ ಮಣಿಯೆ" ಭೀಮನು ರಕುತವನ್ನು ಕಾರುತ್ತಾ ಜ್ಞಾನ ತಪ್ಪಿ ನೆಲಕ್ಕುರುಳಿದನು. ಜಯವೊಂದೇ ದುರ್ಯೋಧನನ ಗುರಿಯಾಗಿದ್ದರೆ, ಆತ ಮತ್ತೆ ಒಂದೇ ಏಟನಿಂದ ಭೀಮನನ್ನು ಮುಗಿಸಿ, ಯುಧಿಷ್ಠಿರನನ್ನು ಅವನ

ಪ್ರತಿಜ್ಞೆಗೆ ಕಟ್ಟುಬಹುದಾಗಿದ್ದಿತು. ಆತ ಹಾಗೆ ಮಾಡಲಿಲ್ಲ. ಮತ್ತೆ ಪಾಂಡವರಿಗೇ ರಿಯಾಯ್ತಿಯನ್ನು ತೋರಿಸಿದನು. "ಧನಂಜಯ, ಮಡಿದವ ನನ್ನು ಹೊಯ್ಯೆನು, ಎಲ್ಲರೂ ಒಟ್ಟಾಗಿ ನಿಮ್ಮವನ ಸಹಾಯಕ್ಕೆ ಬನ್ನಿ" ಎಂದು ಗದೆಯನ್ನು ಭೀಮನ ಮೇಲೆ ಗಾಳಿಯಾಗಿ ಬೀಸಿದನು. ಮೇಲೆ ನೆರೆದಿದ್ದ ಪಿಶಾಚ ರಾಕ್ಷಸ ಜಾಲ ವಿದ್ಯಾಧರ ಮಹೋರಗ ಯಕ್ಷ ಕಿನ್ನರರು. 'ಆಳು ನೀನಹೆ ಕರಾಳ ಭುಜಬಲ ನೀನೆನುತ' ಕೊಂಡಾಡಿ ಕುರು ಪತಿಯ ಸಿರಿಮುಡಿಗೆ ಅರಳಮಳೆಗರೆದರು. ಅರ್ಜುನಾದಿಗಳು ಯುಧಿಷ್ಠಿರನ ವಾಗ್ದಾನವನ್ನೇ ಮರತು ಯುದ್ಧಾಸಕ್ತರಾಗಿ ಧನಸ್ಸುಗಳನ್ನು ಹಿಡಿದರು. ಪಾಂಡವರು ಸಂಧಿಮಾಡಿಕೊಳ್ಳಲಿ ಎಂದು ಬಲರಾಮನು ಹೇಳಿದನು. ದುರ್ಯೋಧನನ ಗದೆಯ ಗಾಳಿಯಿಂದ ಭೀಮನಿಗೆ ಎಚ್ಚರವಾಯಿತು. ಸುಯೋಧನನು ನಗುತ್ತಾ "ಶ್ವಾಸು ಮರಳಿತೆ ನಿನಗೆ? ಯೋಗಾಭ್ಯಾಸಿಯೋ ಭೀಮ ಸೈರಣೆ ಲೇಸು ಮೆಚ್ಚಿದೆನು" ಎಂದು ಎರಗಿದನು.

ಇನ್ನು ಗದಾಯುದ್ಧದಲ್ಲಿ ಧರ್ಮಮಾರ್ಗದಿಂದ ಭೀಮನಿಗೆ ಜಯ ವಾಗುವ ಸೂಚನೆ ತೋರಲಿಲ್ಲ. ಪಾಂಡವರೂ ಕೃಷ್ಣನೂ ಅಧರ್ಮ ಮಾರ್ಗಕ್ಕೆ ಇಳಿಯಬೇಕಾಯಿತು. ತೊಡೆಯಿಂದ ಕೆಳಕ್ಕೆ ಹೊಡೆಯುವುದು ಗದಾಯುದ್ಧದ ಧರ್ಮವಲ್ಲ. ಧರ್ಮದ ಹೆಸರಿನಲ್ಲಿ ಹೆಮ್ಮೆಪಡುತ್ತಿದ್ದ ಪಾಂಡವರು ಅಧರ್ಮಯುದ್ಧ ಮಾಡುವುದಿಲ್ಲವೆಂದು ದುರ್ಯೋಧನನು ಅರಿ ತಿದ್ದನು. "ಭಾಷೆಗಳುಪರು ಪಾಂಡುಸುತರೆಂಬಾಸೆಯಲಿ ನಿನ್ನಾತ ಮೈಮರೆದೋಸರಿಸದಿದಿರಾದ ನೂರುದ್ವಯವ ವಂಚಿಸದೆ "ಇದನ್ನು ನೋಡಿ ದರೆ ಧರ್ಮಯುದ್ಧವನ್ನು ಮಾಡಿದ್ದರೆ ನಿಜವಾಗಿ ಪಾಂಡವರು ಗೆಲ್ಲುತ್ತಿ ದ್ದರೆ? ಪಾಂಡವರ ಸಹನೆ ಪರಾಕ್ರಮದ ಸಹನೆಯೇ, ಅಥವಾ ಬರಿಯ ಕಾರ್ಯಸಾಧನ ತತ್ಪರರ ಸಹನೆಯೇ ಎಂಬ ಅನುಮಾನ ಸಹ ಉಂಟಾ ಗುತ್ತದೆ. ದುರ್ಯೋಧನನನ್ನು ಧರ್ಮಯುದ್ಧದಿಂದ ಗೆಲ್ಲುವುದು ಸಾಧ್ಯವಲ್ಲ ವೆಂದು ಕೃಷ್ಣನು ಮೊದಲೇ ತೀರ್ಮಾನಿಸಿದ್ದನು. ಗದಾಯುದ್ಧದ ಪ್ರಾರಂ ಭದಲ್ಲಿಯೇ ಕೃಷ್ಣನು "ಠಕ್ಕಿನಲಿ ಮಾಯಾ ತಿಮಿರವನು ಮಾಯೆಯಲಿ ಗೆಲಿದೆನು, ಸೀಳಿದೆನು ಕೃತಮಾಯರನು ಮಾಯಾ ಪ್ರಪಂಚದಲಿ। ಧೌಳರನು ಧವಳರನು ಠಕ್ಕಿನ ಠೌಳಿಕಾರರ ವಿದ್ಯೆಯೆಲ್ಲವ ಸಲೆನಾಳಿಗೊಂ

ಡರೆ ದೋಷವಿಲ್ಲ" ಎಂದಿದ್ದನು. ಪಾಂಡವರ ಅಧರ್ಮ ದುರ್ಯೋಧನನ ಅಧರ್ಮಕ್ಕಿಂತ ಕಡಿಮೆಯಾಗಲಿಲ್ಲ.

ದುರ್ಯೋಧನನ ಮರಣದಲ್ಲಿ ಒಂದು ಮಹಾವ್ಯಕ್ತಿಯ ನಿಧನವನ್ನು ನಾವು ಕಾಣುತ್ತೇವೆ. ಕುಮಾರವ್ಯಾಸನು ಆತನ ಸಾವನ್ನು ಕುರಿತು "ಮಾನ ನಿಧಿ ಮಲಗಿದನ್ನೆ ತವಸೂಸು ರುಧಿರದ ತಿಲಕವಾದನಲ್ಲೆ ಧರಾಂಗನೆಗೆ" ಎನ್ನುತ್ತಾನೆ. ಅನಂತರ ಭೀಮನು ಕೇವಲ ಅನುಚಿತವಾದ ರೀತಿಯಲ್ಲಿ ಸಾರ್ವಭೌಮನಾದ ದುರ್ಯೋಧನನ ತಲೆಯನ್ನು ಒದೆದು ಅವಮಾನ ಪಡಿಸಿದನು. ದೇವತೆಗಳು ಸೋತವನ ತಲೆಯಮೇಲೆಯೆ ಪುಷ್ಪವೃಷ್ಟಿಕರೆದರು. "ಖಚರ ಕಿನ್ನರ ಯಕ್ಷ ನಿರ್ಜರ ನಿಚಯರು ಭೀಮಸೇನನ ಬೈದು ಕುರುಪತಿಯಚಲ ಬಲವನು ಬಣ್ಣಿಸುತ ಹೊಕ್ಕರು ನಿಜಾಲಯವ" ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ ತಲೆಯನ್ನು ಭೀಮನು ಒದೆದುದಕ್ಕೂ ಪಾಂಚಾಲಿಯ ಸೀರೆಯನ್ನು ದುರ್ಯೋಧನನು ಸೆಳೆಸಿದನೆಂಬುದಕ್ಕೂ ಏನೂ ವ್ಯತ್ಯಾಸವಿಲ್ಲ. ಎರಡೂ ಒಂದೇ ಬಗೆಯ ಅನ್ಯಾಯಗಳು. ಯಾರು ಮೊದಲು ಪ್ರಾರಂಭಿಸಿದರು ಎಂಬುದಲ್ಲ ಮುಖ್ಯವಾದುದು. ದ್ರೌಪದಿಗೆ ಉಂಟಾದ ಅಪಮಾನಕ್ಕೂ ದುರ್ಯೋಧನನಿಗೆ ಉಂಟಾದ ಅವಮಾನಕ್ಕೂ ಏನೂ ವ್ಯತ್ಯಾಸವಿಲ್ಲ. ಕುಮಾರವ್ಯಾಸ ಭೀಮನ ಕಾರ್ಯವನ್ನು ಕುರಿತು ಹೀಗೆ ಹೇಳುತ್ತಾನೆ. "ಹಿಂದಣಪಕಾರವನು ಲೆಕ್ಕಿಸು | ತೊಂದೆರಡು ಮೂರಾಯ್ತು ನಾಲ್ಕೈ | ದೆಂದು ಮೆಟ್ಟಿದನವನಿಪಾಲನ ಮಕುಟ ಮಸ್ತಕವ|| ಇಂದುಮುಖಿಯನು ಭೂತಗೆಡಿದುದ | ಕೊಂದು ಗಾಯವ ಕೊಳ್ಳೆನುತ ಮದ | ದಿಂದ ವದನವನೊದೆದು ಹಲುಗಳ ಕಳೆದನಾ ಭೀಮ || ಹಳುವದಲಿ ನಾನಾ ಪ್ರಕಾರದ | ಉಳಲಿಸಿದ ಫಲಭೋಗವನು ನೀ | ತಲೆಯಲೇ ಧರಿಸೆಂದು ವಾಮಾಂಘ್ರಿಯನು ಮಕುಟದಲಿ | ಇಳುಹಿದನು ಕುರುಕುಲದ ರವಿಯೆಂ | ದುಲಿದೆಲಾಯೆನುತೊದೆದು ಮಕುಟವ | ಕಳಚಿದನು ಕೀಲಣದ ಮಣಿಗಳು ಕೆದರೆ ದೆಸೆದೆಸೆಗೆ || ಗುಣನಿಧಿಯನೇಕಾದಶಕ್ಷೋ | ಹಿಣೀ ಪತಿಯನಶೇಷ ಪಾರ್ಥಿವ| ಮಣಿಮಕುಟ ಕಿರಣೋಪಲಾಲಿತ ಪಾದಪಲ್ಲವನ| ರಣದೊಳನ್ಯಾಯದಲಿ ತೊಡೆಗಳ | ಹಣಿದುದಲ್ಲದೆ ಪಾದದಲಿ ನೀ | ಕೆಣಕುವರೆ ಒರುರಾಯ ಮೌಳಿಯನೆಂದನಾ ರಾಯ ||

ಆದರೆ ಹಿಂದೆ ದ್ರೌಪದಿಗೆ ಆದ ಅವಮಾನದ ವರ್ಣನೆ ಇದೇ ಬಗೆಯಾಗಿದೆ.

ಆ ಮಹೀಶ ಕ್ರತುವರದೊಳು
ದ್ದಾಮ ಮನಿಜನ ರಚಿತ ಮಂತ್ರ
ಸ್ತೋಮ ಪುಷ್ಕಲ ಪೂತಪುಣ್ಯ ಜಲಾಭಿಷೇಚನದ
ಶ್ರೀಮುಡಿಗೆ ಕೈಯಿಕ್ಕಿದನು ವರ
ಕಾಮಿನೀ ನಿಕುರುಂಬವಕಟಕ
ಟಾ ಮಹಾ ಸತಿ ಶಿವಶಿವಾ ಎಂಧೊರಲಿತಲ್ಲಲ್ಲಿ
ಕೆದರಿದವು ಸೂಸಕದ ಮುತ್ತುಗ
ಳುದರಿದವು ಸೀಮಂತ ಮಣಿಗಳ
ಹೊದರು ಮುರಿದುವು ಕರ್ಣಪೂರದ ರತ್ನದೋಲೆಗಳು
ಸುದತಿಯರು ಗೋಳಿಡುತ ಬರೆಮೆ
ಟ್ಟಿದನು ತಿವಿದನು ಕಾಲಲಡಿ ಬಿ
ದ್ದುದು ಸಖೀ ಜನವೆಳೆದು ಝಾಡಿಸಿ ಜರೆದು ಝೋಂಪಿಸಿದ

ಭೀಮನಿಂದ ಹಾಗೆ ಅವಮಾನಿತನಾದರೂ ಕುರುರಾಯನ ಧೃತಿ ಕೆಡಲಿಲ್ಲ. ಆತನು ಕೃಪ ಅಶ್ವತ್ಥಾಮರೊಡನೆ ನಗುತ್ತಲೇ "ಉದಯದಲಿ ನಾವೀ ಶರೀರವ ನೊದೆದು ಹಾಯ್ವೆವು, ನೀವು ನಿಜಮಾರ್ಗದಲ್ಲಿ ಬಿಜಯಂಗೈವುದೆ"ಂದನು. ಸಾವಿನ ಕೂಡ ಸರಸವೆಂಬುದು ಇದೇಯೆ.

ಗದಾಪರ್ವದಲ್ಲಿ ದುರ್ಯೋಧನನ ಮಹಿಮೆ ಚೆನ್ನಾಗಿ ವ್ಯಕ್ತವಾಗಿದೆ. ನಾವು ಆತನ ಹಿಂದೀ ದುರ್ಗುಣಗಳನ್ನೆಲ್ಲ ಮರೆತು ಅವನಿಗೇ ಅನ್ಯಾಯವಾಯಿತೆನ್ನುತ್ತೇವೆ. ಸೋತ ದುರ್ಯೋಧನನಲ್ಲಿಯೇ ನಮಗೆ ಸಹಾನುಭೂತಿ. ದುರ್ಯೋಧನನ ಸಾವಿನೊಂದಿಗೆ ಮಹಾಭಾರತವೇ ಮುಗಿದಂತೆ ತೋರುತ್ತದೆ. ಮುಂದೆ ಯಾರಿಗೆ ಪಟ್ಟವಾದರೇನು? ಬಿಟ್ಟರೇನು ? ಯಾರ ಛಲದಿಂದ ಭಾರತ ಕಾವ್ಯ ಸೃಷ್ಟಿಯೋ, ಆ ಛಲಪುರುಷ ಕಣ್ಮರೆಯಾಗುತ್ತಾನೆ.

ಈ ಕಾರಣದಿಂದಲೇ ಇರಬೇಕು. ಕುಮಾರವ್ಯಾಸ, ಗದಾಪರ್ವದೊಂದಿಗೆ ತನ್ನ ಭಾರತವನ್ನು ಮುಕ್ತಾಯಗೊಳಿಸಿದ್ದಾನೆ.

ವಿಶ್ವಗುಣಾದರ್ಶ

೧

ಕಲ್ಯಾಣೋಲ್ಲಾಸ ಸೀಮಾ ಕಲಯತು ಕುಶಲಂ ಕಾಳಮೇಘಾಭಿರಾಮಾ
ಕಾಚಿತ್ ಸಾಕೇತ ಧಾಮಾ ಭವಗಹನಗತಿ ಕ್ಲಾಂತಿ ಹಾರಿ ಪ್ರಣಾಮಾ ||
ಸೌಂದರ್ಯಾಧ್ರೀಣಕಾಮಾ ಧೃತ ಜನಕಸುತಾ ಸಾದರಾಪಾಂಗಧಾಮಾ
ದಿಕ್ಷುಃ ಪ್ರಖ್ಯಾತ ಭೂಮಾ ದಿವಿಷನಭಿನುತಾ ದೇವತಾರಾಮ ನಾಮ ||

ಈ ಮೇಲಿನ ಶ್ಲೋಕ ಒಂದಲ್ಲ ಒಂದು ಸಲ ನಮ್ಮ ಕಿವಿಗೆ ಬಿದ್ದ ಪ್ರಸಿದ್ಧ ವಾದ ಶ್ಲೋಕ. ಇದರ ತಾತ್ಪರ್ಯವಾದರೂ ಸುಲಭವಾಗಿದೆ. [ಕ್ಷೇಮೋಲ್ಲಾಸಕ್ಕೆ ಮೇರೆಯಾದ, ಕಾರ್ಮುಗಿಲಿನಂತೆ ಸೊಬಗುಳ್ಳ, ಅಯೋಧ್ಯಾನಗರಿಯನ್ನು ಮನೆಯಾಗಿ ಮಾಡಿಕೊಂಡಿರುವ, ಪ್ರಣಾಮಮಾಡಿದವರ ಸಂಸಾರ ಕ್ಲಾಂತಿಯನ್ನು ನಾಶಮಾಡುವ, ಮನ್ಮಥನನ್ನು ನಾಚಿಸುವ ಸೌಂದರ್ಯವುಳ್ಳ, ಜನಕಸುತೆಯ ಆದರವುಳ್ಳ ನೇತ್ರಕಟಾಕ್ಷಕ್ಕೆ ನೆಲೆಯಾದ, ನಾಲ್ಕು ದಿಕ್ಕುಗಳಲ್ಲಿಯೂ ಪ್ರಖ್ಯಾತವಾದ ಮಹಿಮೆಯುಳ್ಳ, ದೇವತೆಗಳಿಂದ ಸ್ತುತಿಸಲ್ಪಡುವ ರಾಮ ಎಂಬ ಹೆಸರುಳ್ಳ ದೇವತೆ ನಮಗೆ ಕ್ಷೇಮವುಂಟುಮಾಡಲಿ.]

ಈ ಶ್ಲೋಕವನ್ನು ಬರೆದವರು ವೆಂಕಟಾಧ್ವರಿ ಎಂಬುವವರು. ವಿಶ್ವಗುಣಾದರ್ಶ ಎಂಬ ಕಾವ್ಯದಲ್ಲಿ ಮೇಲಿನ ಶ್ಲೋಕ ಬರುತ್ತದೆ. ಈ ಕಾವ್ಯವನ್ನು ವೆಂಕಟಾಧ್ವರಿ ಬರೆದು ಸುಮಾರು ಮೂರು ನೂರು ವರುಷಗಳಾಗಿರುವಂತೆ ತೋರುತ್ತದೆ. ಕವಿಯು, ಕಾಂಚೀ ನಗರ ವಾಸಿಯಾಗಿದ್ದ "ಕರ್ಣಾಟಕ ಭೂ ಭೃದ್ ಗುರು" ಕರ್ಣಾಟಕದ ರಾಜ ಕೃಷ್ಣರಾಯರ ಗುರುವಾಗಿದ್ದ ತಾತಾರ್ಯ ಎಂಬುವರ ವಂಶದಲ್ಲಿ ಜನಿಸಿ ತರ್ಕ ವೇದಾಂತ ವ್ಯಾಕರಣ ಶಾಸ್ತ್ರ ಪಾರಂಗತನಾದವನು. ಇವನ ಶಿಕ್ಷಣ ಮತ್ತು ಬಿರುದಿಗೆ ತಕ್ಕಂತೆ ಇವನ ಕಾವ್ಯ ಸ್ವಾರಸ್ಯವೂ ಚಮತ್ಕಾರವುಳ್ಳದುದೂ ಪ್ರೌಢವೂ ರಸವತ್ತಾದುದೂ ಹಾಸ್ಯಮಯವೂ ಆಗಿದೆ. ಹೆಸರಿಗೆ ತಕ್ಕಂತೆ ವಿಶ್ವಗುಣಾದರ್ಶವೆಂಬದು ಭಾರತದ ನಾನಾ ಭಾಗದ ಜನರ ಗುಣದೋಷಗಳ ವರ್ಣನೆಯು. ಕೃಶಾನು ಮತ್ತು ವಿಶ್ವಾವಸು ಎಂಬ ಹೆಸರಿನ ಇಬ್ಬರು ಗಂಧರ್ವರು ವಿಶ್ವವನ್ನು ನೋಡುವ ಇಚ್ಛೆಯಿಂದ ವಿಮಾನವನ್ನೇರಿ ಆಕಾಶ

ಮಾರ್ಗದಲ್ಲಿ ಸಂಚರಿಸುವರು. ಅವರಲ್ಲಿ ಕೃಶಾನು, ಬರಿಯ ದೋಷೈಕದೃಕ್ ದೋಶಗಳನ್ನು ಮಾತ್ರ ನೋಡುವವನು ವಿಶ್ವಾವಸು ಗುಣಗಳನ್ನು ಲಕ್ಷಿಸುವಂತವನು. ಇದೊಂದು, ಪಂಗಡ ಅಥವ ಜಾತಿಗೆ ಸಂಬಂಧಿಸಿದ ಗ್ರಂಥವಲ್ಲ. ಪ್ರತಿಯೊಂದು ಜಾತಿಯವರಲ್ಲಿಯೂ ಇರುವ ಗುಣದೋಶಗಳನ್ನು ಕವಿ ವಿವರಿಸಿ ಚರ್ಚಿಸಿ, ಗುಣದೋಷಗಳು ಎಲ್ಲರಲ್ಲಿಯೂ ಸಮಾನವಾಗಿವುದರಿಂದ ಎಲ್ಲರೂ ಸ್ನೇಹದಿಂದ ಭಾರತದ ಮಕ್ಕಳಾಗಿ ಬಾಳಬೇಕೆಂದು ಬೋಧಿಸುತ್ತಾನೆ. ಜತೆಗೆ ಈ ಕಾವ್ಯದಲ್ಲಿ ಪುರೋಹಿತರ ವಂಚಕತ್ವ, ಬೂಟಾಟಿಕೆಗಾರರು ಮೋಸದಿಂದ ಜನರಿಂದ ದುಡ್ಡು ಸೆಳೆಯುವುದು; ವೇಷಧಾರಿ ಸಾತ್ವಿಕರ ಟಕ್ಕು ಇವುಗಳೆಲ್ಲದರ ವರ್ಣನೆಯೂ ಇದೆ. ಧರ್ಮೋಪದೇಶದಿಂದ ಪರಸ್ಪರ ದ್ವೇಷವನ್ನು ತಗ್ಗಿಸುವುದೇ ಈ ಕಾವ್ಯದ ಉದ್ದೇಶ "ಈ ರಘುನಾಥ ದೀಕ್ಷಿತರ ಮಗನಾದ, ನ್ಯಾಯ, ವೇದಾಂತ ವ್ಯಾಕರಣ ಶಾಸ್ತ್ರಗಳನ್ನು ಕಲಿತ ವೆಂಕಟಾಧ್ವರಿ ಎಂಬುವನು, ಪ್ರಪಂಚದ ಗುಣಗಳನ್ನು ಸ್ಪಷ್ಟವಾಗಿ ತೋರಿಸುವ ಕನ್ನಡಿಯಂತೆ ಈ ಕಾವ್ಯವನ್ನು ಮಾಡುತ್ತಾನೆ." ಎಂದು ಕವಿಯೇ ಹೇಳಿಕೊಂಡಿದ್ದಾನೆ. ಈ ಕಾವ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ ಸಹ ಚಮತ್ಕಾರವಾಗಿ ಬಂದಿದೆ. ಸಂಸ್ಕೃತ ಸಾಹಿತ್ಯದಂತಹ ಅಪಾರ ಗ್ರಂಥರಾಶಿಯುಳ್ಳ ಸಾಹಿತ್ಯದಲ್ಲಿಯೂ ಈ ಬಗೆಯ ಕಾವ್ಯ ಅಪರೂಪವೇ.

ಈ ಕಾವ್ಯವನ್ನು ಕವಿ ಪದ್ಯ ಮತ್ತು ಗದ್ಯ ಎರಡರಲ್ಲಿಯೂ ಬರೆದಿದ್ದಾನೆ. ಯಾವಾಗಲೂ ಸಂಸ್ಕೃತ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಾಶಸ್ತ್ಯ ಹೆಚ್ಚು. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಕವಿ, ಗದ್ಯ ಮತ್ತು ಪದ್ಯಗಳ ಸ್ಥಾನವನ್ನು ಹೀಗೆ ಹೇಳಿದ್ದಾನೆ. "ಪದ್ಯಕಾವ್ಯಗಳು ಲೋಕದಲ್ಲಿ ಬೇಕಾದಂತೆ ಇವೆ. ಆದರೆ ಗದ್ಯವಿಲ್ಲದ ಪದ್ಯ ರಸಿಕರಿಗೆ ರುಚಿಸುವುದಿಲ್ಲ. ಪದ್ಯವಿಲ್ಲದ ಗದ್ಯವನ್ನು ಜಾಣರು ಒಪ್ಪುವುದಿಲ್ಲ. ಗದ್ಯ ಪದ್ಯಗಳೆರಡರ ಕೂಡುವಿಕೆ ಹಿತವಾಗುತ್ತದೆ. ಜೇನುತುಪ್ಪ ಮತ್ತು ದ್ರಾಕ್ಷಾರಸ ಇವೆರಡರ ಯೋಗ, ಯಾರಿಗೆ ತಾನೇ ಸವಿಯಾಗುವುದಿಲ್ಲ!"

ಕವಿಯ ವರ್ಣನಾ ಚಾತುರ್ಯ, ಮನಸ್ಸೆಳೆಯುವಂಥದ್ದು. "ಸೂರ್ಯನು ತನ್ನ ಕಿರಣಗಳಿಂದ ಮಳೆಯನ್ನು ಹುಟ್ಟಿಸಿ ಜಗತ್ತಿಗೆ ಆನಂದವನ್ನುಂಟು

ಮಾಡುತ್ತಾನೆ. ಮನುಷ್ಯನ ಕಣ್ಣುಗಳ ಬಲವನ್ನು ಕಾಪಾಡುತ್ತಾನೆ. ತಿಳಿದವರಿಗೆ ಮೋಕ್ಷದ ದಾರಿಯನ್ನು ತೋರಿಸುತ್ತಾನೆ. ಲಕ್ಷ್ಮಿಯು ಮನೆಗೆ ಆನಂದವೀಯುತ್ತಾನೆ. ಇಡೀ ಲೋಕಕ್ಕೆ ಸುಖವನ್ನು ಕೊಡುತ್ತಾನೆ. ಆಕಾಶಕ್ಕೆ ಅಲಂಕಾರವನ್ನು ಕೊಡುತ್ತಾನೆ. ಇಂತಹ ಸೂರ್ಯನನ್ನು ಯಾರು ಹೊಗಳರು!"

ಮನುಷ್ಯನೇ ಹಿರಿಯ

ಇತರ ಸಂಸ್ಕೃತ ಕವಿಗಳಂತಲ್ಲದೆ ವೆಂಕಟಾಧ್ವರಿ ಕವಿ, ಪುರುಷ ಪ್ರಯತ್ನಕ್ಕೇ ಹೆಚ್ಚು ಪ್ರಾಶಸ್ತ್ಯಕೊಟ್ಟಿದ್ದಾನೆ. ಮಿತ್ರನು "ಅಪಾರ ದುಃಖವನ್ನನುಭವಿಸುವ ಮನುಷ್ಯ ಜನ್ಮದಿಂದ ಏನು ಫಲ? ಉಳುವುದರಿಂದ ಎತ್ತುಗಳನ್ನು ಪಾರುಮಾಡುವ ಗ್ರಾಮವುಂಟೆ?" ಎನ್ನುತ್ತಾನೆ. ಅದಕ್ಕೆ ಆತನ ಮಿತ್ರನು "ಅಯ್ಯಾ, ಮನುಷ್ಯ ಜನ್ಮವನ್ನು ನಿಂದಿಸಬೇಡ. ಭೂಲೋಕಕ್ಕೆ ಕ್ಷೇಮವುಂಟುಮಾಡಿದ ರಾಮನು ಮನುಷ್ಯನಲ್ಲವೆ? ಇಂದ್ರನಿಗೆ, ದೈತ್ಯ ಯುದ್ಧದಲ್ಲಿ ಸಹಾಯಮಾಡಿದ ರಾಮನ ತಂದೆ ದಶರಥ, ಮನುಷ್ಯನಲ್ಲವೆ? ಇಂದ್ರನ ಅಹಂಕಾರ ಇಳಿಸಿದ ಕೃಷ್ಣನು ಮನುಷ್ಯನಲ್ಲವೆ? ದೇವರಲ್ಲಾಗಲೀ ದಾನವರಲ್ಲಾಗಲೀ ತಮ್ಮ ಸ್ವಂತ ಪರಾಕ್ರಮದಿಂದ ಮನುಷ್ಯನಿಗಿಂತ ಹಿರಿಯರೆನ್ನಿಸಿ ಕೊಂಡವರು ಯಾರು? ಎನ್ನುತ್ತಾನೆ.

ಆದರೆ ಮಿತ್ರನು ರಾಮನಲ್ಲಿಯೂ ದೋಷವನ್ನು ಎಣಿಸದೆ ಬಿಡನು. 'ಅಗ್ನಿ ಪ್ರವೇಶದಿಂದ ಪರಿಶುದ್ಧಳಾದ, ತನಗೆ ಆತ್ಮನಂತೆ ಹಿತಳಾದ ಗರ್ಭಿಣಿಯಾದ ಸೀತಾದೇವಿಯನ್ನೇ ಕಾಡುಪಾಲು ಮಾಡಿದನಲ್ಲ. ಅಯ್ಯೋ ಎಂತಹ ಕಷ್ಟವು' ಎನ್ನುತ್ತಾನೆ. ಆದರೆ ರಾಮ ಭಕ್ತನಿಗೆ, ರಾಮನ ದೋಷವೂ ಗುಣವಾಗಿಯೇ ತೋರುತ್ತದೆ. "ರಾಮರೂಪವನ್ನು ಧರಿಸಿದ ವಿಷ್ಣು, ಯಾವಾಗಲೂ ಲಕ್ಷ್ಮೀದೇವಿಯನ್ನು ಎದೆಯಮೇಲೆ ಹೊತ್ತಿರುವನಾದರೂ ಮನುಷ್ಯರೀತಿಯನ್ನು ಅಭಿನಯಿಸಿ ಒಬ್ಬ ಕೀಳು ಮನುಷ್ಯ ಆಡಿದ ಮಾತನ್ನು ಸಹಿಸಲಾರದೆ ಪತಿವ್ರತಾ ಶಿರೋಮಣಿಯಾದ ಕಲ್ಯಾಣಿಯಾದ ಸೀತಾದೇವಿಯನ್ನೇ ಕಾಡಿಗೆ ಕಳುಹಿಸಿದನು. ಮಾನ ಒಂದರ ಮೇಲೆಯೇ ದೃಷ್ಟಿಯುಳ್ಳ ಇಂತಹ ಣ್ಣೀರೆ ಮನುಷ್ಯನನ್ನು ನೀವು ಲೋಕದಲ್ಲಿ ನೋಡಿದ್ದೀರಾ? ಕವಿಯು ರಾಮನು ಮನುಷ್ಯನಂತೆ ನಡೆದು ಕೊಂಡನು. ಮನುಷ್ಯನಾಗಿ ನಡೆದುಕೊಂಡನು.

ಅದಕ್ಕಿಂತ ಅದ್ಭುತವಾದುದು ಮತ್ತೇನೂ ಇಲ್ಲ" ಎನ್ನುತ್ತಾನೆ. "ಎಲೈ ರಾಮನೇ ನೀನು ಬಿಟ್ಟ ಹುಲ್ಲುಕಡ್ಡಿ, ಸೀತಾ ದೇವಿಗೆ ಅಪಚಾರ ಮಾಡಿದ ಕಾಕಾಸುರನಿಗೆ ಬಾಣವಾಯಿತು. ನಿನಗೆ ಶಂಕರನ ಧನಸ್ಸು ಹುಲ್ಲುಕಡ್ಡಿಯಾಯಿತು. ನಿನ್ನಿಂದ ಶಿಲೆ, ಋಷಿಯ ಹೆಂಡತಿಯಾದಳು; ನಿನ್ನ ಪಾದುಕೆಗಳು ಅರಸಾದವು. ವಿಸ್ತಾರವಾದ ಸಮುದ್ರವು ಕಾಲುವೆಯಾಯಿತು.. ಮಂಗಗಳು ರಣಭಟರಾದವು. ರಾವಣನು ನುಸಿಯಂತೆ ಆದನು. ಹೆಚ್ಚಿಗೆ ಏನು ಬಣ್ಣಿಸಲಿ? ನೀನು ಮನುಷ್ಯನಾಗಿ ನಡೆದುಕೊಂಡೆ."

ಅನಂತರ ಮಿತ್ರರಿಬ್ಬರೂ ಭಾಗೀರಥೀ ನದಿಯ ದರ್ಶನ ಪಡೆಯುತ್ತಾರೆ. ಕವಿಗೆ ಗಂಗಾನದಿ ತುಂಬ ಪ್ರಿಯ. "ಗಂಗೆ ಸಂಸಾರಿಗಳ ದುಃಖವನ್ನು ಸಡಲಿಸುತ್ತಾಳೆ. ವಿಷ್ಣುವಿನ ಅಡಿಯನ್ನು ಆಶ್ರಯಿಸಿ ದುಃಖಿತರ ವಿಪತ್ತುಗಳನ್ನು ನಿವಾರಿಸಿ ಅವರ ಮನಸ್ಸುಗಳನ್ನು ಸುಖಪಡಿಸುತ್ತಾಳೆ. ಪಾಪಗಳನ್ನು ನಾಶ ಮಾಡುತ್ತಾಳೆ. ಅತಿಸ್ವಚ್ಛವಾದ ನೀರು ಗುಳ್ಳೆಗಳುಳ್ಳವಾಗಿದ್ದಾಳೆ.

"ಈ ಗಂಗಾನೀರು, ಬಹಳ ಆಳವಾಗಿರುವುದರಿಂದ ವಿಷ್ಣುವಿನ ಹೃದಯವನ್ನು ಅನುಕರಿಸುತ್ತದೆ. ಮಧುಕರವಾಗಿರುವುದರಿಂದ ವಿಷ್ಣುವಿನ ವಾಕ್ಕನ್ನು ಅನುಸರಿಸುತ್ತದೆ. ಬಿಳುಪು ವರ್ಣವುಳ್ಳದುದರಿಂದ ವಿಷ್ಣುವಿನ ಯಶಸ್ಸನ್ನು ಅನುಕರಿಸುತ್ತವೆ. ತಂಪು ಇರುವುದರಿಂದ ವಿಷ್ಣುವಿನ ದಯೆಯನ್ನು ಅನುಕರಿಸುತ್ತದೆ. ಅತಿ ನಿರ್ಮಲವಾಗಿರುವುದರಿಂದ ವಿಷ್ಣುವಿನ ಬುದ್ಧಿಯನ್ನನುಕರಿಸುತ್ತದೆ. ಯಾವಾಗಲೂ ನಿಷ್ಕಳಂಕವಾದ ಶೋಭೆ ಅಥವ ಸೌಮ್ಯತೆಯಿರುವುದರಿಂದ ವಿಷ್ಣುವಿನ ಮುಖವನ್ನನುಕರಿಸುತ್ತದೆ. ಕವಿ, ಗಂಗಾನದಿಯನ್ನು ಮನೋಹರವಾಗಿ ವರ್ಣಿಸುತ್ತಾನೆ. ವಿಷ್ಣುವಿಗೆ ಹೋಲಿಸುತ್ತಾನೆ. "ಕಪ್ಪು ವರ್ಣದ ಸರಸ್ವತೀ ನದಿಯಿಂದಲೂ ನೀಲವರ್ಣದ ಯಮುನಾ ನದಿಯಿಂದಲೂ ಅಪ್ಪಿಕೊಳ್ಳಲ್ಪಟ್ಟ ಶುಭ್ರವರ್ಣದ ಹೂವು ಗೊಂಚಲಿನಂತೆ ಬಿಳಿಯವಳಾದ" ಗಂಗೆಯಲ್ಲಿ ಅವರು ಮೀಯುತ್ತಾರೆ.

ಕವಿಗೆ ನಾಡಿನ ಪಾರತಂತ್ರ್ಯವನ್ನು ಕಂಡು ಹೃದಯ ಬಹಳ ಕರಗುತ್ತದೆ. ಮುಸಲ್ಮಾನರ ಪ್ರಾಬಲ್ಯದಿಂದ ವೇದಗಳೆಲ್ಲ ನಾಶವಾದುವೆಂದು ಅವನು ಕೊರಗುತ್ತಾನೆ. "ಹಿಮಾಲಯದಿಂದ ರಾಮೇಶ್ವರದವರೆಗೆ ಪೃಥ್ವಿ ಮುಸಲ್ಮಾನರದಾಗಿದೆ. ಭೂಪಾಲಕರಾದ ಅರಸರು ಓಡಿಹೋಗಿ ಅವಿತು

ಕೊಂಡಿದ್ದಾರೆ. ವಿಷ್ಣು ನಿರ್ದಯನಾಗಿ ಗೊರಿಕೆ ಹೊಡೆಯುತ್ತಿದ್ದಾನೆ. ಕಲಿ ನಿರಾತಂಕವಾಗಿ ಹಬ್ಬುತ್ತಿದ್ದಾನೆ. ಇಂತಹ ಕಾಲದಲ್ಲಿ ವೇದಾಧ್ಯಯನ ಮಾಡುವವನು ಒಬ್ಬನಿದ್ದರೂ ಅವನು ಹಿರಿಯನು."

ಅನಂತರ ಮಿತ್ರರು ಗುರ್ಜರ ದೇಶಕ್ಕೆ ಬರುವರು. ಕವಿಗೆ ಗುರ್ಜರ ದೇಶ ಬಹಳ ಪ್ರಿಯವಾದ ದೇಶವೆಂದು ತೋರುತ್ತದೆ. ಸಕಲೈಶ್ವರ್ಯಗಳಿಗೆ ಮನೆಯಾಗಿ ಪ್ರತಿಸ್ವರ್ಗವೋ ಎಂಬಂತಿರುವ ಗುರ್ಜರ ದೇಶವನ್ನು ಕವಿ ಹೀಗೆ ವರ್ಣಿಸಿದ್ದಾನೆ.

ಸಕರ್ಪೂರ ಸ್ವಾದು ಕ್ರಮುಕ ನವವೀಟೀ ರಸಲಸನ್ಮು
ಖಾಸ್ಸರ್ವ ಶ್ಲಾಘ್ಯೌ ಪದ ವಿವಿಧ ದಿವ್ಯಾಂಬರಧರಾಃ
ಕನದ್ರತ್ನಾ ಕಲ್ಪಾ ಘನ ಘನಿತ ದೇಹಾಶ್ಚಘೃಸೃಣ್ಯೈಃ
ಯುವಾನೋ ಮೋದಂತೆ ಯುವತಿ ಭಿ ರಮೀತುಲ್ಯ ರತಿಭಿಃ

ಕರ್ಪೂರದಿಂದ ಸವಿಯಾದ ಅಡಕೆಯ ನೂತನ ತಾಂಬೂಲ ಮಡಪಿನ ರಸದಿಂದ ಶೋಭಿಸುವ ಮುಖವುಳ್ಳವರಾಗಿ, ಎಲ್ಲರೂ ಹೊಗಳುವ ವಿವಿಧ ವಸ್ತ್ರಾಭರಣಗಳನ್ನು ಧರಿಸಿದವರಾಗಿ, ಹೊಳೆಯುವ ರತ್ನಖಚಿತಭೂಷಣಗಳನ್ನು ತೊಟ್ಟು, ಕುಂಕುಮದಿಂದ ಘಮ ಘಮನೆ ಪರಿಮಳಿಸುವ ಮೈಯ್ಯುಳ್ಳವರಾಗಿ ಗುರ್ಜರನಾಡಿನ ಯುವಕರು ಅನುರಕ್ತಿಯುಳ್ಳ ಯುವತಿಯರೊಡನೆ ಕ್ರೀಡಿಸುತ್ತಾರೆ.

ಗುರ್ಜರ ದೇಶದ ಯುವತಿಯರು ಮಿತ್ರನನ್ನು ಬಹಳ ಆಕರ್ಷಿಸುತ್ತಾರೆ. ಅವರನ್ನು ಎಷ್ಟು ವರ್ಣಿಸಿದರೂ ಮಿತ್ರನಿಗೆ ತೃಪ್ತಿಯಿಲ್ಲ.

"ಗುರ್ಜರ ಸ್ತ್ರೀಯರ ರೂಪಲಾವಣ್ಯಗಳು ಅಸದೃಶವಾದುವು. ಈ ಹೆಣ್ಗಳ ಮೈ, ಪುಟಕ್ಕೆ ಹಾಕಿದ ಚಿನ್ನದಂತಹ ಬಣ್ಣವುಳ್ಳದ್ದು. ತುಟಿಗಳು ಕೆಂಪಾಗಿ ಕೋಮಲವಾದುವು; ಕೈಗಳು ಹೊಸ ಚಿಗುರಿನಂತಿರುವುವು. ವಾಕ್ಕು ಅಮೃತ ಧಾರೆ; ಕಣ್ಣುಗಳು ಕಮಲದಳ ಸದೃಶ; ಮುಖ ನೈದಿಲೆಗೆ ಸಮಾನವಾದುದು. ಇಂತಹ ಗುರ್ಜರ ಹೆಣ್ಣುಗಳ ಯಾವ ಅಂಗತಾನೇ ತರುಣರನ್ನು ಮರುಳು ಮಾಡುವುದಿಲ್ಲ!"

ಆದರೆ ಆ ಮಿತ್ರನ ಮಾತನ್ನು ಸಹಪಾಠಿ ಒಪ್ಪಿದರೂ "ಈ ಗುರ್ಜರ ದೇಶದವರಿಗೆ ಈ ಸವಿಯನ್ನು ಸವಿಯುವ ಜ್ಞಾನ್ಮ ಇಲ್ಲ" ಎನ್ನುತ್ತಾನೆ.

"ಉದಯದ್ಯವ್ವನೆಯರಾದ ಕಾಮಾವಾಸ್ಥೆಯನ್ನು ಹೊಂದಿದ, ಮಿಂಚಿನಂತೆ ಕಾಂತಿಯುಳ್ಳ ತೆಳ್ಳನೆಯ ಮೈಯುಳ್ಳಂಥ ಹೆಂಡತಿಯರನ್ನು ವಿಲಾಸಯೋಗ್ಯವಾದ ಕಾಲದಲ್ಲಿ ಮನೆಯಲ್ಲಿಯೇ ಬಿಟ್ಟು ಬಿಟ್ಟು, ಗುರ್ಜರ ಪುರುಷರು ಅನರ್ಘ್ಯಗಳಾದ ರತ್ನ ರಾಶಿಗಳ ವ್ಯಾಪಾರದಿಂದ ಹೇರಳ ಹಣಗಳಿಸುತ್ತಾ ದೇಶವಿದೇಶಗಳಲ್ಲಿ ತಿರುಗುತ್ತಿರುತ್ತಾರೆ."

ಈ ಆಕ್ಷೇಪಣೆಯನ್ನು ಮಿತ್ರನು ಒಪ್ಪುವುದಿಲ್ಲ. "ಎಲೈ ಮೂಢ ಬುದ್ಧಿಯುಳ್ಳವನೇ! ಇದು ಈ ಜನರಲ್ಲಿ ಗುಣವೇ ಹೊರತು ದೋಷವಲ್ಲ. ಈ ಗುರ್ಜರರು ಜ್ಞಾನಾರ್ಜನೆಯ ಆಸೆಯಿಂದ ಬೇರೆಬೇರೆ ದೇಶಗಳಿಗೆ ಹೋಗಿ ಅಪೂರ್ವವಾದ ಚಮತ್ಕಾರವನ್ನು ತೋರಿಸಿ, ನೋಡಿ, ಅಪಾರ ಹಣವನ್ನು ಗಳಿಸಿಕೊಂಡು ಮರಳಿ ಮನೆಗೆ ಬರುತ್ತಾರೆ. ಅಗಲಿಕೆಯಿಂದ ಉತ್ಕಂಠಿತರಾಗಿರುವ ಪತ್ನಿಯರನ್ನು ಕೂಡಿ ಸಕಲೈಶ್ವರ್ಯದಿಂದ ಯುಕ್ತರಾಗಿ ಸುಖವನ್ನನುಭವಿಸುತ್ತಾರೆ. ಇದಕ್ಕಿಂತ ಇನ್ನೇನು ಬೇಕು?"

ಮಿತ್ರನು ಇನ್ನೂ ಹೇಳುತ್ತಾನೆ "ಬಾವಿಯೊಳಗಿನ ಆಮೆಯಂತೆ ಸೋಮಾರಿಯಾಗಿ ಮನೆಯಲ್ಲಿಯೇ ಕುಳಿತ ಮನುಷ್ಯ, ದರಿದ್ರನಾಗಿ ದೀನನಾಗಿ ಹೆಂಡತಿಯಿಂದಲೂ ತಿರಸ್ಕರಿಸಲ್ಪಡುತ್ತಾನೆ. ಮತ್ತು ರಾಜರ ಬಳಿ ಹೋಗದುದರಿಂದ ಸಕಲರೂ ಅವನನ್ನು ಹೆದರಿಸುತ್ತಾರೆ. ಅವನಿಗೆ ಲೋಕ ವ್ಯವಹಾರ ಏನು ತಿಳಿಯುತ್ತೆ? ಅವನು ಯಾವ ಸುಖವನ್ನು ತಾನೇ ಅನುಭವಿಸುತ್ತಾನೆ? ನಿರರ್ಥಕವಾದ ಯಾವುದಾದರೂ ಕೆಲಸದ ನೆಪ ಮಾಡಿಕೊಂಡು ಮನೆಯಲ್ಲಿಯೇ ಮಲಗುವ ಮೂರ್ಖನು ದರಿದ್ರನಾಗುವನು. ಭೂಮಿಯಲ್ಲಿ ಸುಖವಾಗಿ ಬಾಳಬೇಕೆಂದು ಬಯಸುವವನು ಅರಸನ ಸಭೆಗೆ ಹೋಗಿ ಸಭೆಯಲ್ಲಿ ತನಗೂ ಅರಸರಿಗೂ ಹಿತಕರವಾದ ಮಾತುಗಳನ್ನಾಡಿ ಅರಸನ ಮಿತ್ರರಿಗೆ ದ್ರವ್ಯ, ವಸ್ತ್ರ ಮೊದಲಾದುವನ್ನು ಕೊಟ್ಟು, ಆ ಮೂಲಕ ತಾನೂ ಸುಲಭವಾಗಿ ದ್ರವ್ಯವನ್ನು ಸಂಪಾದಿಸಬೇಕು. ಯಾವಾಗಲೂ ರಾಜಮಿತ್ರರನ್ನು ಅನುಕೂಲಪಡಿಸಿಕೊಳ್ಳಬೇಕು. ಯಾರಿಗೂ ಅಪಕಾರ ಮಾಡಬಾರದು. ಅರಸನು ಹೇಳಿದುದು ಸರಿಯಾಗಲೀ ತಪ್ಪಾಗಲಿ ಅದನ್ನು "ಬುದ್ಧಿ, ಒಡೆಯ, ಸನ್ನಿದಾನದಿಂದ ಹೇಳೋಣಾದ ಮಾತು ಯುಕ್ತವೇ." ಎಂದು ಶ್ಲಾಘಿಸತಕ್ಕದ್ದು. ಆ ಅರಸನ ಗುರು, ಮೂರ್ಖನಾದರೂ ಅವನನ್ನು

ಹೊಗಳತಕ್ಕದ್ದು. ಅರಸನ ಮನಸ್ಸಿನೊಳಗಿನ ಇಂಗಿತವನ್ನು ತಿಳಿದುಕೊಳ್ಳಲಪೇಕ್ಷೆಯುಳ್ಳವನು, ತಾನು ನಿಷ್ಕಾಮನಾಗಿ ಬಂದವನೆಂದು ಸಭೆಯಲ್ಲಿ ಯಾವ ತರಹದಿಂದಲಾದರೂ ಕಾಣಿಸಿಕೊಳ್ಳಬೇಕು, ಮತ್ತು ತನ್ನ ಕೆಲಸವನ್ನು ಅರಸನ ಒಲವು ಆದಮೇಲೆ ಮರೆಯಾಗಿ ಅಂದರೆ ಏಕಾಂತದಲ್ಲಿ ಅರಿಕೆ ಮಾಡಬೇಕು.

೨

ಅನಂತರ ಮಿತ್ರರಿಬ್ಬರೂ ದೂರದಿಂದಲೇ ಯಮುನಾ ನದಿಯನ್ನು ನೋಡುತ್ತಾರೆ "ಶ್ರೀ ಕೃಷ್ಣನ ಆಲಿಂಗನದಿಂದ ಅಧಿಕವಾದ ಕಪ್ಪುಬಣ್ಣವುಳ್ಳ ಹೇ ಯಮುನೆಯೇ ನಿನ್ನನ್ನು ನಮಸ್ಕಾರ ಮಾಡುತ್ತೇನೆ. ನಿನ್ನ ನೀರಿನ ತುಂತುರುಗಳ ಗುಂಪಿನಿಂದ ಆಶ್ರಯಿಸಲ್ಪಟ್ಟ ಲತಾಗೃಹಗಳಿಗೆ ಕೈ ಮುಗಿಯುತ್ತೇನೆ. ಆ ಶ್ರೀ ಕೃಷ್ಣನನ್ನು ಆಲಂಗಿಸಬೇಕೆಂಬ ಆತುರದಿಂದ ಆ ಲತಾಗೃಹಗಳಲ್ಲಿ ಕುಳಿತಿರುವ ಗೋಪಸ್ತ್ರೀಯರನ್ನು ವಂದನೆ ಮಾಡುತ್ತೇನೆ. ಅವರಿಂದ ಸೇವಿಸಲ್ಪಟ್ಟ ಒಡೆಯನನ್ನು ತಿರು ತಿರುಗಿ ಶರಣುಮಾಡುತ್ತೇನೆ"

ವೆಂಕಟಾಧ್ವರಿ ಕವಿ, ಪ್ರಕೃತಿಯ ವೈಭವ ವೈಶಾಲ್ಯ ನಾನಾರೂಪ ಪಶು ಪಕ್ಷಿ ಮೃಗಗಳಿಂದ, ಆಕರ್ಷಿತನಾಗಿ ಬೆರಗಾಗುತ್ತಾನೆ ಪರಮಾತ್ಮನ ನಾನಾ ರೂಪ, ಬಹುರೂಪ ಲೀಲೆಗೆ ಕೊನೆಯೇ ಇಲ್ಲವೆಂಬಂತೆ ಅವನಿಗೆ ಕಾಣುತ್ತದೆ.

"ಹೇ ನಾಥ, ಹೇ ಲೋಕದೊಡೆಯ, ನೀನು ಎಷ್ಟು ಗಿಡಮೂಲಿಕೆಗಳನ್ನು ಎಷ್ಟು ಬೆಟ್ಟಗಳನ್ನು, ಎಷ್ಟು ಸಮುದ್ರಗಳನ್ನು, ಎಷ್ಟು ನದಿಗಳನ್ನು, ಎಷ್ಟು ಪುರುಷರನ್ನು ಎಷ್ಟು ಸ್ತ್ರೀಯರನ್ನು ಮತ್ತು ಎಷ್ಟು ನಾಡುಗಳನ್ನು ನಿರ್ಮಾಣ ಮಾಡಿದ್ದೀಯೆ. ನಿನ್ನ ಮಹಿಮೆ ಇಂತಿಷ್ಟೇ ಎಂದು ಗೊತ್ತುಮಾಡುವುದು ಜನರ ತಿಳುವಳಿಕೆಗೆ ಅಳವಲ್ಲ (ತಸ್ಮಾತ್ ಬಹುರೂಪಾಃ ಪಶವಃ ಸಮೃದ್ಧೈಃ)

ಈತನ ವಿಡಂಬನೆ ಬಹಳ ಚಮತ್ಕಾರಿಕವಾಗಿದೆ. "ರಾತ್ರಿಕಾಲದಲ್ಲಿ ಮನೆಗಳಿಗೆ ಕನ್ನವಿಕ್ಕಿ ಕಳವು ಮಾಡುವವ, ಅಥವ ಹಗಲು ಹೊತ್ತು ಅಡವಿಯಲ್ಲಿ ಬಲಾತ್ಕಾರವಾಗಿ ಸುಲಿಗೆ ಮಾಡುವವರೂ, ತನ್ನ ಸ್ವಂತ ಒಡೆಯನ ಸ್ವತ್ತುಗಳನ್ನು ಚೋರಿಮಾಡುವುದಿಲ್ಲ. ಆದಾಗ್ಗೂ ಜನರು ಅವರನ್ನು ಕಳ್ಳರೆಂದು ಕರೆಯುತ್ತಾರೆ. ಆದರೆ ಲೆಕ್ಕದಲ್ಲಿ ಅಂಕಿಗಳನ್ನು ಹೆಚ್ಚೊ ಕಡಿಮೆ

ಮಾಡಿ ತಮ್ಮ ಒಡೆಯನ ಧನವನ್ನು ವಂಚನೆ ಮಾಡುವವರನ್ನು ಈ ಲೋಕದಲ್ಲಿ ಎಲ್ಲರೂ ಸನ್ಮಾನಿಸುತ್ತಾರೆ."

ಮಹಾರಾಷ್ಟ್ರ ದೇಶಕ್ಕೆ ಹೋದಾಗ "ಬ್ರಾಹ್ಮಣರು ಯುದ್ಧ ಕರ್ಮದಲ್ಲಿ ತೊಡಗುವುದು ತಪ್ಪು" ಎಂದು ಕೃಶಾನು ಹೇಳುತ್ತಾನೆ. ಅದಕ್ಕೆ ವಿಶ್ವಾವಸು ಹೀಗೆ ಉತ್ತರಿಸುತ್ತಾನೆ.

"ಮಹಾರಾಷ್ಟ್ರದ ನಾಯಕರು ಸೇನಾ ನಾಯಕತನ ಅಥವ ದೇಶಾಧಿಕಾರ ನಡೆಸಿ, ಅರಸುತನ ಪ್ರಾಪ್ತವಾಡಿಕೊಂಡು ಈ ಲೋಕದಲ್ಲಿ ಸನಾತನ ವೃತ್ತಿಯನ್ನು ಸಂರಕ್ಷಿಸದೆ ಇದ್ದಿದ್ದರೆ, ಇಡೀ ಜಗತ್ತೂ ಯವನರಿಂದ ಪ್ರಾಪ್ತವಾಗಿ ಹೋಗುತ್ತಿದ್ದಿತು"

ಅನಂತರ ಮಿತ್ರರು ಆಂಧ್ರದೇಶವನ್ನು ಪ್ರವೇಶಿಸುತ್ತಾರೆ. ಆಂಧ್ರ ಸ್ತ್ರೀಯರ ಲೋಕೋತ್ತರ ಸೌಂದರ್ಯ, ಗಂಧರ್ವನಾದರೂ ವಿಶ್ವಾವಸುವನ್ನು ಆಕರ್ಷಿಸುತ್ತದೆ.

ರೋಮರಾಜಿಗಳಿಂದ ಯಮುನಾ ನದಿಯಂತೆ, ಸುಂದರವಾದ ಮಾಲಿಗಳಿಂದ ಗಂಗಾನದಿಯಂತೆ, ಮನೋಹರವಾಗಿ ಉತ್ತುಂಗಸ್ತನ, ವಾಪೀವತಯಾ ಮನೋಜ್ಞನಾಭಿಗಳುಳ್ಳವರಾಗಿ, ಚಿತ್ತಮೋಹಕವಾಗಿ ಧನಕನಕಪದಪಿಸಿಂದ ಹೊಳೆಯುವವರಾಗಿ ಭೂದೇವಿಯಮೂರ್ತಿಯರನ್ನು ಹೋಲುವ ತಮ್ಮ ತೈಲಂಗಣಪತ್ನಿಯರನ್ನು, ಶ್ರೀಮಂತರಾದ ತೈಲಂಗಣ ತರುಣರು ಅರಸುಗಳಂತೆ ಯಥೇಚ್ಛವಾಗಿ ಭೋಗಿಸುತ್ತಾರೆ.

ವಿಶ್ವಗುಣಾದರ್ಶ ಎಂಬ ಗ್ರಂಥದ ಹೆಸರಿಗೆ ತಕ್ಕಂತೆ, ಇದರಲ್ಲಿ ಎಲ್ಲದರ ಗುಣದೋಷವರ್ಣನೆಯೂ ಇದೆ. ಕವಿಯು, ಮೊದಲು ಎಲ್ಲರ ಕಣ್ಣುಗಳಿಗೂ ಕಾಣುವ ದೋಷಗಳನ್ನು ಎತ್ತಿ ಹೇಳಿ, ಅನಂತರ ಯಾರೂ ಗಮನಿಸದಿರುವ ಗುಣಗಳನ್ನು ಹೇಳುತ್ತಾನೆ. ಆ ಕಾಲದಲ್ಲಿ ಮುಸಲ್ಮಾನರು ಆಂಧ್ರದಲ್ಲಿ ಬಹಳ ಪ್ರಬಲರಾಗಿದ್ದರೆಂದು ಮಿತ್ರ ಹೇಳಿ "ಅವರು ಗಾಳಿಯವೇಗವನ್ನು ಮೀರಿಸುವ ವೇಗವುಳ್ಳ ಕುದುರೆಯೇರಿ, ರಾಜ್ಯದಾಹದಿಂದ ಮಾಡಬಾರದ ಅನ್ಯಾಯಗಳನ್ನು ಮಾಡುತ್ತಿದ್ದಾರೆಂದು" ದೋಷಾರೋಪಣೆ ಮಾಡುತ್ತಾನೆ. ಅದಕ್ಕೆ ಕವಿ ಹೀಗೆ ಸಮಾಧಾನ ಹೇಳುತ್ತಾನೆ.

"ಯುದ್ಧದಲ್ಲಿ ಕಲಿಗಳಾದ ಇತರವೀರರು ಸಾವಿರಸಂಖ್ಯೆಯಲ್ಲಿ ಬಂದರೂ

ಮುಸಲ್ಮಾನ ದಂಡಿನೊಳಗಿನ ಒಬ್ಬ ವೀರನು ಮಾತ್ರವೇ ಸಿಟ್ಟಿನಿಂದ ಕುದುರೆ ಯೇರಿ ಕತ್ತಿಯನ್ನು ಆಡಿಸುತ್ತಾ ಹೊರಟರೆ ಸಾಕು,ಆ ಎದುರಾಳಿ ವೀರರೆಲ್ಲ ಗತಿ ಗೆಟ್ಟು ದೀನರಾಗಿ ಹುಲ್ಲು ತಿನ್ನುತ್ತಾರೆ, ನಡಗುತ್ತಾರೆ. ಮುಸಲ್ಮಾನ ವೀರ, ರಣಾಂಗದಲ್ಲಿ ತನ್ನ ಶರೀರವನ್ನು ತೃಣವಾಗಿ ಎಣಿಸಿ ಬಲಾತ್ಕಾರದಿಂದ ಸ್ವರ್ಗದ ಬಾಗಿಲನ್ನು ತೆರೆಯುತ್ತಾನೆ."

ಕವಿಗೆ ಕರ್ಣಾಟಕ ದೇಶವನ್ನು ಕಂಡರೆ ತುಂಬ ಪ್ರೀತಿ "ಇದಕ್ಕೆ ಮೊದಲು ನಮ್ಮ ಶ್ರವಣೇಂದ್ರಿಯವನ್ನು ಅಲಂಕರಿಸಿದ ಕನ್ನಡ ದೇಶ, ಇದೇ ಈಗ ನಮ್ಮ ಕಣ್ಣುಗಳಿಗೆ ಸೊಬಗನ್ನುಂಟು ಮಾಡುತ್ತಿದೆ.

"ಈ ಕನ್ನಡನಾಡಿನಲ್ಲಿ ಪ್ರತಿಪಟ್ಟಣದಲ್ಲಿಯೂ ತೋಟಗಳಿವೆ. ಪ್ರತಿ ತೋಟದಲ್ಲಿಯೂ ಮಾಗುತ್ತಿರುವ ಗೊನೆಗಳನ್ನು ಹೊತ್ತ ಅಡಿಕೆಮರಗಳಿವೆ. ಪ್ರತಿ ಅಡಿಕೆಮರದಲ್ಲಿಯೂ ಕೊನಲ್ದ ಹೂವುಗಳಿವೆ. ಅವುಗಳಿಂದ ಮಕರಂದ ಸುರಿಯುತ್ತಿರುತ್ತದೆ. ಮಕರಂದದ ತಟಕಿನ ಸುತ್ತಲೂ ದುಂಬಿಗಳು ಹಾರುತ್ತಿವೆ ಝೇಂಕಾರ ಮಾಡುತ್ತಿವೆ. ಆ ಝೇಂಕಾರವು ಚೆಲ್ವೆಯರ ವಿಲಾಸಗಳನ್ನು ವಿಸ್ತರಿಸುತ್ತದೆ. ಪ್ರತಿವಿಲಾಸವೂ ಕಾಮನನ್ನು ರೇಗಿಸುತ್ತದೆ. ಈ ಕರ್ಣಾ ಟಕದೇಶದಲ್ಲಿ ಯದುಶೈಲವೆಂಬ ಮೇಲುಕೋಟೆ ಇದೆ. ಇದು ಶರಣು ಬಂದ ವರ ಕಠೋರ ಪಾಪಗಳನ್ನು ನಾಶಮಾಡುತ್ತದೆ. ಶುದ್ಧಮನಸ್ಕರು ಇಲ್ಲಿ ವಾಸಿ ಸುತ್ತಿದ್ದಾರೆ. ಈ ಯದುಗಿರಿ ಪರ್ವತದಮೇಲೆ ಶ್ರೀ ಕೃಷ್ಣನೆಂಬ ನೀಲಮೇಘ, ಆನಂದವೆಂಬ ಮಳೆಯನ್ನು ಸುರಿಸುತ್ತಾ ವಾಸಮಾಡಿಕೊಂಡಿದ್ದಾನೆ. ಸ್ವರ್ಗದ ಅರಸನಾದ ಇಂದ್ರನ ನೆತ್ತಿಯ ಮೇಲಿನ ಕಿರೀಟದ ಪಚ್ಚೆರತ್ನಗಳೆಂಬ ದೀವಿ ಗೆಗಳ ಸಾಲುಗಳಿಂದ ಆರತಿ ಮಾಡಲ್ಪಡುವ ಚರಣಕಮಲಗಳುಳ್ಳ, ನೂತನ ಮೇಘದಂತಿರುವ ನಾರಾಯಣನೆಂಬ ಹೆಸರಿನಿಂದ ಖ್ಯಾತಿಪಡೆದ ಪರಬ್ರಹ ಸ್ವರೂಪನಾದ ದೇವತೆ, ಅಪಾರ ಕರುಣಾರಸದಿಂದ ತುಂಬಿ ಯದುಗಿರಿ ಪರ್ವ ತವನ್ನು ಮನೆಯಾಗಿ ಮಾಡಿಕೊಂಡು ಶೋಭಿಸುತ್ತಾನೆ.

೩

ವೆಂಕಟಾಧ್ವರಿ ಕವಿ ತುಂಬ ರಸಿಕ. ಭಾರತದ ವಿವಿಧ ಭಾಗಗಳ ಜನರೆಲ್ಲ ಇವರ ಚಾವಟಿ ಏಟಿಗೆ ಸಿಕ್ಕಿಯೇ ಸಿಕ್ಕುತ್ತಾರೆ. ಈ ಏಟಿನಿಂದ ಸನ್ಯಾಸಿಗಳಿಗೆ ಸಹ ಮುಕ್ತಿ ಇಲ್ಲ. "ಸನ್ಯಾಸಿಗಳೇ ಧನ್ಯರು. ಗೃಹಸ್ಥರು

ಹೊಟ್ಟೆತುಂಬಿಕೊಳ್ಳಲು ಊರುಊರು ತಿರುಗಾಡಿ ಬಳಲುತ್ತಾರೆ. ಕಾಲು ನಡಿಗೆಯಿಂದ ನಡೆದು ದಣಿಯುತ್ತಾರೆ. ಹರಕು ಬಟ್ಟೆಗಳಿಂದ ಮೈಮುಚ್ಚಿ ಕೊಳ್ಳುತ್ತಾರೆ. ಜೀರ್ಣವಾದ ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಆದರೆ ಸನ್ಯಾಸಿಗಳೋ? ನಯವಾದ ವಸ್ತ್ರಗಳನ್ನು ತೊಟ್ಟು, ಸುಖಕರವಾದ ಪಾಲಕಿಗಳಲ್ಲಿ ಏರಿ, ಕುಟುಂಬಿಕರಿಗೆ ಸಹ ಅನ್ನ ದಾನಮಾಡುತ್ತಾ ಕಲ್ಲುಗಳಿಂದ ಭದ್ರವಾಗಿ ಕಟ್ಟಿದ ಮಠಗಳಲ್ಲಿ ವಾಸಿಸುತ್ತಾರೆ."

ಸಂಸಾರಿಕರಿಗಿಂತ ಸನ್ಯಾಸಿಗಳೇ ಹೆಚ್ಚು ಸುಖಿಗಳು!

ಅನಂತರ ಯಾತ್ರಿಕರು ತಿರುಪತಿ ಬೆಟ್ಟಕ್ಕೆ ಹೋಗುತ್ತಾರೆ. ಒಬ್ಬ ಯಾತ್ರಿಕ ತಿಮ್ಮಪ್ಪನನ್ನು ಬಹಳ ಪ್ರಶಂಸಿಸುತ್ತಾನೆ. ಆದರೆ ಅವನ ಮಿತ್ರ ತಿರುಪತಿಯ ತಿಮ್ಮಪ್ಪನಲ್ಲಿಯೂ ದೋಷವನ್ನು ಕಾಣುತ್ತಾನೆ. ಅವನೊಬ್ಬ ಲಂಚಕೋರ. ಇಷ್ಟವಾದ್ದು ಬೇಕು, ಅನಿಷ್ಟ ಹೋಗಬೇಕು, ಎಂದು ಬೇಡಿ ಕೊಂಡು ಜನರು ಹರಕೆ ಹೊತ್ತ ಹಣವನ್ನು, ಮನೋರಥ ಪೂರ್ಣವಾದ ನಂತರ ಕೊಡದೆ ಇದ್ದರೆ, ಹಿರಣ್ಯಹೃತ್ ಅಂದರೆ ದ್ರವ್ಯಹರಣ ಮಾಡುವ ನೆಂಬ ಬಿರುದುಳ್ಳ ಈ ದೇವರು, ಅವರಿಗೆ ಭಯ ಹುಟ್ಟಿಸಿ ಅವರಿಂದ ಬಡ್ಡಿಸಹಿತವಾಗಿ ಗಂಟು ಸಾಧಿಸಿಕೊಳ್ಳುತ್ತಾನೆ.

ವೆಂಕಟಾಧ್ವರಿ ಕವಿ, ಉಜ್ವಲ ವಾಕ್ಯಗಳಲ್ಲಿ ತಿರುಪತಿ ತಿಮ್ಮಪ್ಪನ ಮಹಿಮೆಯನ್ನು ವರ್ಣಿಸುತ್ತಾರೆ. ಭಕ್ತರಾದ ಅವರ ಸಂಸ್ಕೃತ ಕಾವ್ಯ ರಸ ಪ್ರವಾಹವಾಗಿ ಹರಿಯುತ್ತದೆ. "ವೆಂಕಟೇಶ್ವರ, ಅಡವಿಯಲ್ಲಿ ಬೇಟೆಯಾಡಿ ಬಳಲಿ, ಒಬ್ಬ ಭಕ್ತನನ್ನು 'ಅಪ್ಪ ಒಂದು ತೊಟ್ಟು ನೀರು ಕೊಡು. ಬಾಯಾರಿದೆ' ಎಂದು ಬೇಡಿದನು. ಜನರಿಗೆ ಉಪಕಾರ ಮಾಡುವುದಕ್ಕಾಗಿ ಭಕ್ತನೊಬ್ಬ ಊರಿನಲ್ಲಿ ಕೆರೆ ತೋಡುತ್ತಿರಲು, ವೆಂಕಟೇಶ ವೇಷವನ್ನು ಮರೆಸಿ ಕೊಂಡು ಆ ಮಣ್ಣನ್ನೆಲ್ಲಾ ಮೇಲಕ್ಕೆ ಸಾಗಿಸಿದನು. ಮತ್ತೊಬ್ಬ ದೀನ ಭಕ್ತನು ಕೊಟ್ಟ ಮಣ್ಣು ಹೂವುಗಳ ಮಾಲೆಯನ್ನು ರತ್ನ ಖಚಿತವಾದ ಕಿರೀಟದಲ್ಲಿ ತೊಟ್ಟುಕೊಂಡನು. "ಗಾಂಭೀರ್ಯಕ್ಕೆ ಮುಖ್ಯ ನೆಲೆಯಾದ ಗೌರವಕ್ಕೆ ವಾಸಸ್ಥಾನವಾದ ಮಂಗಳವೆಂಬ ಕಮಲಗಳಿಗೆ ಪ್ರಾತಃಕಾಲ ವಾದ ದಯಾರಸ ಸಮುದ್ರನಾದ ಚಾತುರ್ಯ ಔದಾರ್ಯ ಕ್ರೀಡಾ ಸ್ಥಾನವಾದ ಸ್ವಯಂ ಪ್ರಕಾಶನಾದ" ಎಂದು ವೆಂಕಟೇಶನನ್ನು ಸ್ತುತಿಸುತ್ತಾರೆ. ಕೊನೆ

ಯಲ್ಲಿ "ದೃಷ್ಟಿಗೋಚರವಾದ ಪರಮಾತ್ಮನ ಮಂಗಳ ರೂಪವನ್ನು ನೋಡಿದರೆ, ಅವರ ಅಪ್ರತ್ಯಕ್ಷ ರೂಪವನ್ನು ಕುರಿತು ಇರುವ ಸಂದೇಹವು ದೂರವಾಗುತ್ತದೆ" ಎನ್ನುತ್ತಾರೆ.

ಇವರ ಮಾತಿನ ಚಮತ್ಕಾರಕ್ಕೆ ಮುಂದಲ ಉದಾಹರಣೆಯನ್ನು ಹೇಳಬಹುದು. "ಈ ವೆಂಕಟೇಶಸ್ವಾಮಿಯ ಅನುಗ್ರಹದಿಂದ ಮೂಕನು ರಚಿಸಿದ ಶ್ಲೋಕವನ್ನು ಕಿವುಡರು ಕೇಳುತ್ತಾರೆ. ಕೈ ಇಲ್ಲದವರು ಆ ಶ್ಲೋಕವನ್ನು ಬರೆಯುತ್ತಾರೆ. ಕುರುಡನು ಚೆನ್ನಾಗಿ ನೋಡುತ್ತಾನೆ. ಕುಂಟನು ಜೋರಾಗಿ ಪರ್ವತ ಶಿಖರವನ್ನೇರುತ್ತಾನೆ. ಬಂಜೆ, ಶಿಶುವಿನ ಭಾರದಿಂದ ಮೆಲ್ಲಮೆಲ್ಲನೆ ಹೆಜ್ಜೆಗಳನ್ನಿಡುತ್ತಾ ಪರ್ವತದ ಮೇಲಕ್ಕೆ ಬರುತ್ತಾಳೆ! ಸರ್ಪಗಳಾಗಿಯಾಗಲೀ, ಗಿಡುಗಳಾಗಿಯಾಗಲೀ, ಪಕ್ಷಿಗಳಾಗಿಯಾಗಲೀ, ಹುಲಿಗಳಾಗಿ, ಜಿಂಕೆಗಳಾಗಿ, ಶಿಶುಗಳಾಗಿ, ಶಿಲೆಗಳಾಗಿ, ಬಳ್ಳಿಗಳಾಗಿ, ಝರಿಗಳಾಗಿಯಾಗಲೀ ತಮಗೆ ಈ ಬೆಟ್ಟದ ಮೇಲೆ ಜನ್ಮ ಬರಲೆಂದು ಮುನಿಗಳು ಪ್ರಾರ್ಥಿಸುತ್ತಾರೆ."

ಪನ್ನಗೇಷುಚ ನಗೇಷುದ್ವೀಪಿರಾಜಿಸು ಪೃಷತ್ಸು ಹೃಷತ್ಸು
ವಲ್ಲಿರೀಷುಚ ದರಾಷು ಪ್ರಾರ್ಥಯಂತಿ ಜನಿಮತ್ರ ಮುನೀಂದ್ರಾಃ ॥

ಯಾತ್ರಿಕರು ತಿರುಪತಿ ಬೆಟ್ಟದ ಕಾಡುಗಳಿಗೆ ಪ್ರವೇಶಿಸುತ್ತಾರೆ. ವೆಂಕಟಾಧ್ವರಿ ಕವಿಗೆ ಕಾಡನ್ನು ಕಂಡರೆ ತುಂಬ ಪ್ರಿಯ. ಅದರ ವರ್ಣನೆಯನ್ನೂ ಮನೋಹರವಾಗಿ ಮಾಡಿದ್ದಾನೆ. 'ದಟ್ಟವಾದ ಕಾಡುಗಳು, ಕಾಡಿನಲ್ಲಿ ದೊಡ್ಡದೊಡ್ಡ ಬೆಟ್ಟಗಳು, ಬೆಟ್ಟಗಳಲ್ಲಿ ಮನೆಗಳಂತೆ ಗುಹೆಗಳು ಗುಹೆಗಳಲ್ಲಿ ನಿರಂಕುಶವಾಗಿ ಆನೆಗಳನ್ನು ಹೆದರಿಸುವ ಕ್ರೀಡಾಸಕ್ತಗಳಾದ ಸಿಂಹಗಳು ಒಂದೆಡೆ ಕಲ್ಲುರಾಸಿ ಮತ್ತೊಂದೆಡೆ ಹೆಬ್ಬಾವು; ಕಳ್ಳರ ಹಿಂಡು, ಮುಳ್ಳು, ಹುಲಿ, ಕಾಡುಗಿಚ್ಚು ಹುದುರು, ಅರಸುಗಳ ಉಪಯೋಗಕ್ಕೆ ಯೋಗ್ಯವಾದ ಹಣ್ಣುಗಳು, ವಿಶಾಲ ಲೋಚನೆಯರಾದ ಸ್ತ್ರೀಯರಿಗೆ ಇಷ್ಟವಾದ ಹೂವುಗಳು, ಸೂರ್ಯ ಕಿರಣಗಳ ಪ್ರವೇಶವಿಲ್ಲದ ಶಿಲಾಗೃಹಗಳು—ತಿರುಪತಿ ಬೆಟ್ಟದ ಅರಣ್ಯಗಳಲ್ಲಿ ವಾಸಿಸುವವರು ಪುಣ್ಯಶಾಲಿಗಳು.

ರತಿ ವಿಲಾಸಾಸಕ್ತರಾದ ಬೇಡರು, ಸಿಂಹವು ಆನೆಗಳ ಗಂಡಸ್ಥಳಗಳನ್ನು ಸೀಳಿ ಸೋರಿಸಿದ ಮುತ್ತುಗಳ ರಾಸಿಗಳಿಂದ ಅಲಂಕೃತರಾದ ಹೆಣ್ಣಿಳೊಡನೆ, ಈ ಮಲೆಯಲ್ಲಿ ನಿರ್ಭಯರಾಗಿ ಕ್ರೀಡಾಸಕ್ತರಾಗಿ ಹೊತ್ತುಗಳೆಯುತ್ತಾರೆ."

ವೆಂಕಟಾಧ್ವರಿ ಕವಿ, ತನ್ನ ಕಾವ್ಯದಲ್ಲಿ ಪ್ರಸಂಗತ್ವೇನ ದ್ರಾವಿಡ ಭಾಷೆಗಳ ಪ್ರಾಧಾನ್ಯತೆಯನ್ನು ಪ್ರಸ್ತಾಪಿಸಿದ್ದಾನೆ. ಸಂಸ್ಕೃತ ಭಾಷೆಗೆ ಎಂದೆಂದಿಗೂ ಪ್ರಧಾನ್ಯತೆ ಇರುವುದು ಸರಿಯಷ್ಟೆ. ಆದರೆ ಸಂಸ್ಕೃತ ಬಿಟ್ಟರೆ ಬೇರೆ ಭಾಷೆ ಇಲ್ಲ ಎನ್ನುವರು ಯಾವಾಗಲೂ ಭಾರತದಲ್ಲಿ ಇದ್ದೆ ಇದ್ದರು. "ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಸಾಧಿಸಲು ಮಾಡಬೇಕಾದ ಕರ್ತವ್ಯಗಳನ್ನು ತಿಳಿಸಲು ವೇದವು ಎಚ್ಚರಿಕೆಯಾಗಿರಲು, ರಾಮಾನುಜೀಯರು ದ್ರಾವಿಡ ಭಾಷೆಗಳಲ್ಲಿ ಬರೆದಿರುವ ಪ್ರಬಂಧಗಳನ್ನು ಪಾಠಮಾಡುವುದರಲ್ಲಿ ಆಯಾಸ ಪಡುವುದು ಸರಿಯಲ್ಲ. ವಿಷ್ಣುವಿನ ಕಾಂತಿಯಿಂದ ಆವೃತವಾದ ಕ್ಷೀರಸಮುದ್ರದಡಕ್ಕೆ ಹೋದವನು ಹಾಲಿಗಾಗಿ ಗೊಲ್ಲರ ಮನೆಗೆ ಹೋಗುತ್ತಾನೆಯೆ?"

ಆದರೆ ಮಿತ್ರನು ಸಂಸ್ಕೃತದ ಈ ಸರ್ವಾಧಿಕಾರತ್ವವನ್ನು ಒಪ್ಪುವುದಿಲ್ಲ. ಅವನ ಅಭಿಪ್ರಾಯದಲ್ಲಿ ಸಂಸ್ಕೃತ ದೊಡ್ಡ ಭಾಷೆ. ಆದರೆ ದ್ರಾವಿಡ ಭಾಷೆಗಳಿಗೆ ಅವುಗಳ ಪ್ರಾಧಾನ್ಯತೆ ಇದ್ದೇ ಇದೆ. "ವಿಚಾರ ಮಾಡಿ ನೋಡಿದರೆ ಅಗಸ್ತ್ಯ ಋಷಿಯು ಮಾಡಿದ ಇಲಕ್ಕಣವೆಂಬ ವ್ಯಾಕರಣವುಳ್ಳ ನಿರ್ದೋಷವಾದ ದ್ರಾವಿಡ ಭಾಷೆಯನ್ನು ಯಾಕೆ ಸಂಸ್ಕೃತಕ್ಕಿಂತ ಕೀಳು ಎನ್ನಬೇಕು? ದ್ರಾವಿಡ ಭಾಷೆಗಳಿಗೆ ಮಹಿಮೆ ಕಡಮೆ ಯಾದುದಿಲ್ಲ. ಅಗಸ್ತ್ಯರು ಈ ಭಾಷೆಯಲ್ಲಿ ಕೈ ಆಡಿಸಿದರು; ಮುಕ್ತರು ಇದರಲ್ಲಿ ಪ್ರಬಂಧಗಳನ್ನು ಬರೆದಿದ್ದಾರೆ. ರಾಮಾನುಜರೇ ಮೊದಲಾದ ಆಚಾರ್ಯರು ದ್ರಾವಿಡ ಭಾಷೆಗಳ ಶ್ರೇಷ್ಠತ್ವವನ್ನು ಒಪ್ಪಿದ್ದಾರೆ.

> ಉಪಾದೇಯಂ ಪ್ರಾಜ್ಞೈ ರುಚಿತ ವಿಷಯಂ ದ್ರಾವಿಡವಚೋ।
> ಪ್ಯಯುಕ್ತಾರ್ಥಂ ಹೇಯಂ ಭವತಿ ವಚನಂ ಸಂಸ್ಕೃತ ಮಪಿ
> ಹರಿಂಬಿಭ್ರಚ್ಛ್ವೇ ತಸ್ಯ ನತಿ ಸುಭಗೋಪಿ ಸ್ತುತಿ ಪದಂ
> ನಸಮ್ರೂಪೋ ಪ್ಯಂತಃ ಕರಣ ಧೃತ ನಾರೀ ಸ್ತನ ಭರಃ॥

"ನ್ಯಾಯವಾದ ವಿಷಯವು ದ್ರಾವಿಡ ಭಾಷೆಯಲ್ಲಿದ್ದರೂ ಪ್ರಾಜ್ಞರಿಗೆ ಸ್ವೀಕಾರ್ಯವಾಗುತ್ತದೆ. ಕುರೂಪಿಯಾದರೂ ಮನಸ್ಸಿನಲ್ಲಿ ಹರಿಧ್ಯಾನ ಮಾಡುವವನು ಶ್ಲಾಘ್ಯನಾಗುತ್ತಾನೆ. ಸೊಬಗು ಉಳ್ಳವನಾದರೂ ಮನಸ್ಸಿನಲ್ಲಿ ಹೆಂಗಸರ ಕುಚಗಳ ಭಾರವನ್ನು ಹೊತ್ತುಕೊಂಡಿರುವವನು ಸ್ತುತಿಗೆ ಪಾತ್ರನಾಗುವುದಿಲ್ಲ."

ಸಂಸ್ಕೃತ ಪಕ್ಷಸಾತಿಗಳಿರಲಿ, ಉತ್ತರ ದೇಶದವರಿಗೇ ದಾಕ್ಷಿಣಾತ್ಯರನ್ನು ಕಂಡರೆ ತಿಸಸ್ಕಾರ. ಒಬ್ಬ ಕವಿ ದಕ್ಷಿಣದ ಶ್ರೀ ವೈಷ್ಣವರನ್ನು ಕುರಿತು ಹೀಗೆ ಹೇಳಿದ್ದಾನೆ. 'ಇವರು ಗೋವುಗಳೇ ಸರಿ. ಮೃಣಾಲ ಶೃಂಗಾಃ ಮಣ್ಣಿನ ಕೋಡು ಉಳ್ಳವರು (ನಾವು) ಅರೋಗದಗ್ಧಾಃ ; ದನಗಳಿಗೆ ರೋಗ ಬಂದರೆ ಬರೆ ಹಾಕುತ್ತಾರೆ. ಇವರಿಗೆ ರೋಗವಿಲ್ಲದೆ ಬರೆ (ಚಕ್ರಾಂಕಿತ) ಆದರೆ ಇವರು ಹೀಗೆ ಪಶುಪತಿ ವಿಮುಖಾಃ, ಈಶ್ವರನಿಂದ ವಿಮುಖರು ಅಂದರೆ ವಿಷ್ಣುಭಕ್ತರು. ಹೀಗೆ ಈ ದಕ್ಷಿಣದವರು "ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ" ಯಾವ ಕೆಲಸವನ್ನೂ ಕೊನೆ ಮುಟ್ಟಿಸುವುದಿಲ್ಲ, ಪ್ರಾರಂಭ ಶೂರರು' ಎಂದು."

ಬರಿಯ ಆಚಾರ್ಯರನ್ನು ಮಾತ್ರವೇ ಅಲ್ಲ, ಕಂಡ ಕಂಡವರಿಗೆ ಶಿಷ್ಯರಾಗುವ ಮೂಢ ಜನರನ್ನು ಕವಿ ಟೀಕಿಸುತ್ತಾನೆ. "ಸಂಸಾರ ದುಃಖದಿಂದ ತನ್ನನ್ನೇ ರಕ್ಷಿಸಿಕೊಳ್ಳಲಾರದವನು ಇತರರನ್ನು ಹೇಗೆ ಪಾರುಗಾಣಿಸುತ್ತಾನೊ ಎಂಬ ಯೋಚನೆಯನ್ನೇ ಮಾಡದೆ ಜನರು, ಪುಸ್ತಕಗಳ ರಾಶಿಗಳಿಗೂ ಅರ್ಘ್ಯ ಪಾತ್ರೆಗಳಿಗೂ ದೇವತಾ ವಿಗ್ರಹಗಳಿಗೂ ಆಡಂಬರಗಳಿಗೂ ಮರುಳಾಗಿ, ಹಣವನ್ನೂ ವೆಚ್ಚಮಾಡಿಕೊಂಡು ಯಾವನಾದರೂ ಮೂರ್ಖ ಠಕ್ಕನನ್ನು ಗುರು ಎಂದು ಅನುಸರಿಸುತ್ತಾರೆ." ಆದರೆ ಕವಿಗೆ ನಿಜವಾದ ವಿರಕ್ತರಾದ ಶಂಕರ, ರಾಮಾನುಜ ಮಧ್ವಾಚಾರ್ಯರೇ ಮೊದಲಾದ ಸಾಧು ಸತ್ಪುರುಷರನ್ನು ಕಂಡರೆ ಗೌರವ ಅಧಿಕ.

ಸನ್ಯಾಸಿಗಳಲ್ಲಿ ಹಿರಿಯನಾದ ಶ್ರೀ ರಾಮಾನುಜನು ಕಾಮಕ್ರೋಧ ಮೊದಲಾದ ಷಡ್ವೈರಿಗಳನ್ನು ಗೆದ್ದವನು. ಅವನ ಉತ್ತಮವಾದ ಹೆಸರ ಕೀರ್ತನವು ಬಹಳ ಶ್ರೇಷ್ಠವಾದದ್ದು. ಪೃಥ್ವಿಯಲ್ಲಿ ದೇವಗುರುವಾದ ಬೃಹಸ್ಪತಿಗೆ ಸಮಾನವಾದ ವಾಕ್‌ಶಕ್ತಿಯುಳ್ಳವನು. ಅವನ ಮಹಿಮೆಯನ್ನು ವರ್ಣಿಸುವುದು ಯಾರಿಗೂ ಅಳವಲ್ಲ. ಅವನ ಮುಖವು ಸಂಪೂರ್ಣ ಕಲಾಯುಕ್ತವಾದ ಚಂದ್ರನಂತಿರುವುದು. ಅವನ ನಿಷ್ಕಳಂಕವಾದ ಕಾಂತಿಯು ಸೂರ್ಯನಿಗೆ ಲಜ್ಜೆ ಪಡಿಸುವುದು. ಇಂತಹ ಪ್ರೀತಿಯಿಂದ ಯುಕ್ತನಾಗಿರುವ ರಾಮಾನುಜನು ಈ ಲೋಕದಲ್ಲಿಯೂ, ಆ ಲೋಕದಲ್ಲಿಯೂ ನಮಗೆ ಮಂಗಳ ವುಂಟುಮಾಡಲಿ.

ವೆಂಕಟಾಧ್ವರಿ ಕವಿಯು ಬರಿಯ ವಂಶಕ್ಕಿಂತ ಯೋಗ್ಯತೆಗೆ ಹೆಚ್ಚು ಗೌರವವನ್ನು ಕೊಡುತ್ತಾನೆ.

"ಲೋಕದಲ್ಲಿ ನಿರ್ಮಲ ಚಿತ್ತರಾದಂಥಾವರು ಅನೇಕರಿರಲು, ಒಳ್ಳೆಯ ನಡೆತೆಯನ್ನು ಬಿಟ್ಟು, ಶ್ರುತಿಸ್ಮೃತಿ ಮೊದಲಾದ ಶಾಸ್ತ್ರಗಳನ್ನರಿಯದ ಯಾವನೋ ಒಬ್ಬ ಮೂಢನನ್ನು, ತಮ್ಮ ಕುಲಗುರುವಿನ ವಂಶದಲ್ಲಿ ಹುಟ್ಟಿದವನೆಂಬ ಒಂದೇ ಕಾರಣದಿಂದ ಜನ ಪೂಜಿಸುತ್ತಾರೆ."

ಇಂಗ್ಲೀಷರ ಪ್ರಾಬಲ್ಯಕಾಲದಲ್ಲಿ ಕವಿ, ಹೂಣರನ್ನು ತಿರಸ್ಕರಿಸುತ್ತಾನೆ. ಆದರೆ ಮಿತ್ರ ಅದಕ್ಕೆ ಒಂದು ವಿಚಿತ್ರವಾದ ಸಮಾಧಾನ ಹೇಳುತ್ತಾನೆ. ಈ ಹೂಣರು ಹೆರರ ದ್ರವ್ಯವನ್ನು ಅನ್ಯಾಯವಾಗಿ ಬಲತ್ಕಾರದಿಂದ ಸುಲಿದು ಕೊಳ್ಳುವುದಿಲ್ಲ. ಸಟೆಯಾಡುವುದಿಲ್ಲ. ಚಮತ್ಕಾರಿಕ ಪದಾರ್ಥಗಳನ್ನು ನಿರ್ಮಿಸುತ್ತಾರೆ. ತಪ್ಪುಗಾರರಿಗೆ ಕಾಯಿದೆಗನುಸಾರ ಶಿಕ್ಷೆ ಮಾಡುತ್ತಾರೆ. ಅವಗುಣಗಳಿಗೆ ಎಡೆಯಾಗಿರುವ ಈ ಹೂಣರಲ್ಲಿ ಈ ಗುಣಗಳನ್ನು ತಿಳಿ.

"ಶೌಚತ್ಯಾಗಿಗಳಾದ ಹೂಣರಿಗೆ ಧನ, ಶಿಷ್ಟರಿಗೆ ದಾರಿದ್ರ್ಯ, ಹೆಡ್ಡರಿಗೆ ಅಧಿಕಾರ ದಕ್ಷರಿಗೆ ಭಿಕ್ಷಾಟನೆ, ದುಷ್ಕುಲಪ್ರಸೂತ ಲಲನೆಯರಿಗೆ ಲಾವಣ್ಯ, ಉತ್ತಮಕುಲದವರೆನ್ನಿಸಿಕೊಳ್ಳುವವರಿಗೆ ಕುರೂಪ — ಎಲೈ ದುಷ್ಟನಾದ ವಿಧಿಯೇ ಹೀಗೆ ಮಾಡಿದುದರಿಂದ ನಿನಗೇನು ಫಲ?"

೪

ವೆಂಕಟಾಧ್ವರಿ ಕವಿ ಒಳ್ಳೆಯ ಪ್ರಕೃತಿ ನಿರೀಕ್ಷಕ. ಕಾಂಚೀ ಪಟ್ಟಣದ ಬಳಿ ಇರುವ ವೇಗವತೀ ನದಿಯನ್ನು ಹೀಗೆ ವರ್ಣಿಸುತ್ತಾನೆ: "ಮಾಧುರ್ಯವನ್ನು ಪಡೆಯುತ್ತಿರುವ ಹೂವುಗಳಿಂದ ಕೂಡಿದ, ದಡದ ಮರಗಳ ತುದಿಗಳಿಂದ ಗಾಳಿಯಲ್ಲಾಡಿದಾಗ ಕೆಳಗೆ ಉದುರಿದ ರಮಣೀಯವಾದ ಹೂವುಗಳಿಂದ ಹೆಚ್ಚಿದ ನೊರೆಯಂತೆ ನಗುತ್ತಿರುವ, ಹೆಚ್ಚಿದ ವೇಗದಿಂದ, ಅಶ್ವಮೇಧ ಮಾಡುತ್ತಿದ್ದ ಬ್ರಹ್ಮ ದೇವರಿಗೇ ಭಯವನ್ನುಂಟುಮಾಡಿದ, ವೇಗವತೀ ನದಿಯ ನೀರು ನಮ್ಮನ್ನು ಪಾಪದಿಂದ ರಕ್ಷಿಸಲಿ."

ಈತನು ಮಾಡಿರುವ ವರದರಾಜಸ್ವಾಮಿಯ ವರ್ಣನೆ ಆಹ್ಲಾದಕರವಾಗಿದೆ.

"ಇಂದ್ರನೀಲಮಣಿಯಂತೆ ಶ್ಯಾಮವರ್ಣ, ಸರ್ಪವೇ ಮಲಗುವ ಮಂಚ. ಚಂದ್ರಸಮಾನ ಮುಖ, ತಾವರೆ ಸಮಾನ ಕಣ್ಣುಗಳು; ಎತ್ತರವಾದ ಮೂಗು ಉಳ್ಳವನಾಗಿ, ಬ್ರಹ್ಮನ ಹೆಂಡತಿ ಸರಸ್ವತಿಯಿಂದ ಪೂಜಿಸಲ್ಪಡುವ ಪಾದಗಳುಳ್ಳವನಾದ ಕೆಂದುಟಿಯುಳ್ಳ ಜ್ಞಾನ ಮೂರ್ತಿಯಾದ ವರದರಾಜಸ್ವಾಮಿಯಾವಾಗಲೂ ನನ್ನ ಹೃದಯದಲ್ಲಿ ನೆಲಸಿರಲಿ.

ರಂಗನಾಥಸ್ವಾಮಿಯು ಭಕ್ತರ ನುಡಿಗಳು ರತಿದೇವಿಯ ಹೊಳೆಯುವ ತುಟಿಯ ಅಮೃತರಸದ ಗರ್ವವನ್ನು ಹರಣಮಾಡಿ ಭಕ್ತಜನರಿಗೆ ಆಹ್ಲಾದವನ್ನುಂಟು ಮಾಡುತ್ತವೆ. ಆ ನುಡಿಗಳಿಗೆ ಮೆಚ್ಚಿ ಬ್ರಹ್ಮಪತ್ನಿಯಿಂದ ಸರಸ್ವತಿಯು ತಲೆತೂಗಿದಾಗ. ಅವಳ ಕಿರೀಟವನ್ನಲಂಕರಿಸಿದ್ದ ಕಲ್ಪವೃಕ್ಷಗಳ ಮೇಲಿದ್ದ ದುಂಬಿಗಳು ಹಾರಿದವು. ಆ ದುಂಬಿಗಳ ಝೇಂಕಾರ ರೂಪತಾನಗಳಿಂದ ಸರಸ್ವತಿದೇವಿಯ ಸುಂದರವಾದ ವೀಣಾಗಾನ, ಸುತ್ತಲೂ ತುಂಬಿಹೋಯಿತು.

ಮನುಷ್ಯ ನಿಜವಾಗಿ ವಿದ್ಯಾವಂತನೆನಿಸಿಕೊಳ್ಳಬೇಕಾದರೆ ಆತನ ವ್ಯಾಸಂಗ ಎಲ್ಲಾ ರೀತಿಯಲ್ಲಿಯೂ ಸಂಪೂರ್ಣವಾಗಿರಬೇಕು.

"ಸಂಪೂರ್ಣ ವೇದಾಧ್ಯಯನಮಾಡಿದವರಿಗೆ, ಬಹಳ ಮಡಿ ಶಾಸ್ತ್ರಜ್ಞಾನ ತಿಳಿಯುವುದಿಲ್ಲ. ವೇದ ಮತ್ತು ಶಾಸ್ತ್ರ, ಕಲಿತವರಿಗೆ ಸಾಹಿತ್ಯದ ಜ್ಞಾನ ಇರುವುದಿಲ್ಲ. ಈ ಮೂರು ಎಂದರೆ ವೇದ, ಶಾಸ್ತ್ರ ಮತ್ತು ಸಾಹಿತ್ಯ ಬಲ್ಲವರಲ್ಲಿ ನಮ್ರತೆ, ಶ್ರುತಿಸ್ಮೃತಿಗಳಿಗೆ ಸರಿಯಾದ ನಡತೆ, ಹರಿಭಕ್ತಿ, ಸುಖದುಃಖ ತಾಳ್ಮೆ ವ್ಯವಹಾರಿಕ ಜಾಣತನ ಮೊದಲಾದ ಗುಣಗಳಿರುವುದಿಲ್ಲ. ಆದರೆ ಆಚಾರ್ಯರಲ್ಲಿ ವೇದಭ್ಯಾಸ, ಶಾಸ್ತ್ರಜ್ಞಾನ, ಸಾಹಿತ್ಯದ ಅರಿವು, ನಮ್ರತೆ, ಅಪಾರ ಭಕ್ತಿ; ತಾಳ್ಮೆ, ಜಾಣತನ ಈ ಎಲ್ಲ ಸೇರಿಕೊಂಡು ಕ್ರೀಡಿಸುತ್ತಿದ್ದವು.

ತ್ರಿವಿಕ್ರಮಾವತಾರ, ಭಕ್ತರಿಗೆ ಬಹು ಪ್ರಿಯವಾದ ಅವತಾರ. ಇದಕ್ಕೆ ಕಾರಣ ಈ ಅವತಾರದಲ್ಲಿ, ಇಬ್ಬರಿಗೂ (ವಿಷ್ಣುವಿಗೆ ಮತ್ತು ಬಲಿಗೆ) ಜಯವಾದುದೆ. ಕವಿಯು ತ್ರಿವಿಕ್ರಮ ಮಂದಿರವನ್ನು ಹೀಗೆ ವರ್ಣಿಸುತ್ತಾನೆ.

ತ್ರಿವಿಕ್ರಮ ಮಂದಿರವನ್ನು ನೋಡು. ಅದರ ಗೋಪುರಗಳು ಸೂರ್ಯನ ಗಮನದ ವೇಗವನ್ನು ತಡೆಯುತ್ತಿವೆ. ಸಮೀಪದ ಭೂಮಿಯಲ್ಲಿ ಹುಟ್ಟಿದ ಮರಗಳ ಹೂವುಗಳಿಂದ ಮಂದಿರದ ಮೇಲೆ ಮಕರಂದ ಸುರಿಯುತ್ತಿದೆ. ಕಾಮಾಕ್ಷಿಯನ್ನು ನೋಡಿ ಕವಿ ಭಾವ ಪರವಶನಾಗಿ ಹಾಡುತ್ತಾನೆ. ಇದು ಆ ಮಾತಿನ ಮುತ್ತು.

ದಂತ ಶ್ರೀ ಸ್ತವ ದೃಶ್ಯತೇಯದಿ ತತಃ ಕುಂದಂ ನಸಿಂದಂತಿಕೇ
ವಕ್ತ್ರಂ ಯದ್ಯಭಿಲಕ್ಷ್ಯತೇ ಬುಧಜನಶ್ಚಂದ್ರಂನ ಸಂದ್ರಕ್ಷ್ಯತೇ
ದೃಷ್ಟೇ ದೃಷ್ಟಿಯುಗೇ ಪುನರ್ನವಿನುಯಾದ್ಬಾಲೋಪಿ ನೀಲೋತ್ಪಲಂ
ಸೂಕ್ತಿಶ್ಚೇದನು ಭೂಯತೇ ಮಧುರತಾ ಕಾಮಾಕ್ಷಿ ಕಾಮಾಕ್ಷಿಕೇ

"ಎಲೈ ಕಾಮಾಕ್ಷಿಯೇ ನಿನ್ನ ಹಲ್ಲುಗಳ ಕಾಂತಿಯನ್ನು ನೋಡಿ, ಯಾರು ತಾನೆ ಕುಂದ ಪುಷ್ಪಗಳನ್ನು ನಿಂದಿಸುವುದಿಲ್ಲ! ನಿನ್ನ ಮುಖವನ್ನು ನೋಡಿದ ಜಾಣರು ಚಂದ್ರನನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ನಿನ್ನ ಕಣ್ಣುಗಳೆರಡನ್ನೂ ನೋಡಿದ ಹುಡುಗನೂ ಸಹ ಕಪ್ಪು ನೈದಿಲೆಗಳನ್ನು ನೋಡನು. ನಿನ್ನ ಸವಿ ನುಡಿಗಳನ್ನು ಕೇಳಿದವರು ಜೇನು ತುಪ್ಪದ ರುಚಿ ನೋಡರು." ಅನಂತರ ಕಾಮಾಕ್ಷಿ, ಈಶ್ವರನನ್ನು ವರಿಸಿದುದು ಸರಿಯೋ ಎಂಬ ವಿಷಯದಲ್ಲಿ ಮಿತ್ರರಲ್ಲಿ ಚಮತ್ಕಾರವಾದ ವಾದಸರಣಿ ನಡೆಯುತ್ತದೆ.

"ನೋಡು, ಈ ಅಂಬಿಕೆಯು ಸಕಲ ಕಲ್ಯಾಣಗಳುಳ್ಳವಳು, ಮುಕ್ಕಣ್ಣನು ಸುಡುಗಾಡು ಸಿದ್ಧ. ಇವಳು ಚಿನ್ನ. ಅವನು ಭಿಕ್ಷೆಗಾಗಿ ಅತ್ತಿತ್ತ ಸುಳಿಯುತ್ತಾನೆ. ಇವಳು ಕುಂಕಮದ ಬೊಟ್ಟನ್ನು ಇಟ್ಟುಕೊಂಡವಳು. ಅವನು ಬೂದಿಬಡಕನು, ಇವಳು ಅರಾಳ ಕುಂತಲೆ (ಉಂಗುರಗೂದಲುಳ್ಳವಳು) ಅವನು ಭಯಂಕರವಾದ ಜಡೆಯುಳ್ಳವನು.

ಅದಕ್ಕೆ ಮಿತ್ರನು ಹೀಗೆ ಪ್ರತ್ಯುತ್ತರವೀಯುತ್ತಾನೆ. "ಸಾಂಸಿದ್ಧಿಕ ಅಭಿರೂಪವೆಂದರೆ ಹುಟ್ಟು ಸೊಬಗು, ಶಿವನು ಆನೆಯ ತೊಗಲನ್ನು ಬಟ್ಟೆಯಾಗಿ ತೊಟ್ಟುಕೊಂಡರೆ ತೊಟ್ಟುಕೊಳ್ಳಲಿ ; ಯಾವಾಗಲೂ ಸುಡುಗಾಡಿನಲ್ಲಿ ವಾಸ ಮಾಡಿಕೊಂಡಿದ್ದರೆ ಇರಲಿ, ಸರ್ಪಗಳ ಗುಂಪುಗಳನ್ನು ಧರಿಸಿಕೊಂಡರೆ ಧರಿಸಿಕೊಳ್ಳಲಿ, ಆದಾಗ್ಗೂ ಸುಂದರನೆ. ಏಕೆಂದರೆ ನೈದಿಲೆಯು ಹಾವಸೆಯಿಂದ ಸುತ್ತಿದ್ದರೇನು, ಕೆಸರಿನಲ್ಲಿದ್ದರೇನು, ಕಪ್ಪಾದ ದುಂಬಿಗಳು ಅದರ ಮೇಲಿದ್ದರೇನು ಅದು ಸುಂದರವೆ. ಹಿಮವತ್ಪರ್ವತನ ಕನ್ನೆಯ ಹಿರಿಯ ಮಗನು, ಆನೆಯ ಮೊಗವುಳ್ಳವನು ಮತ್ತೂ ಜಾಣನು. ಎರಡನೆಯ ಮಗನು ಆರ್ಮೊಗನಾಗಿ ಐಮುಮುಖವುಳ್ಳ ತಂದೆಗಿಂತಲೂ ಮೇಲಾದವನು. ತಿಂಗಳ ಸೂಡಿದವನಾದ ಶಿವನು, ಇಲ್ಲಿ ಕಾಂಚಿಯ ಒಂದು ಮಾವಿನ ಮರದ ಬುಡದಲ್ಲಿ ಮೈದೋರಿದನು. ಇವನ ಕಣ್ಣಿನಿಂದ ಬೆಂಕಿ ಹೊರಡುತ್ತದೆ. ಅವನ ಮಗನು ಬೆಂಕಿ

ಯಿಂದ ಹುಟ್ಟಿದವನು. ಪರ್ವತಗಳ ಅರಸನಾದ ಹಿಮಾಚಲನ ಕನ್ಯೆ. ಅವನ ಹೆಂಡತಿ. ಸರ್ಪಗಳ ಸಾಲು ಅವನ ಅಲಂಕಾರವು. ಮಹಾದೇವನು ಮಾರ್ಕಂಡೇಯ ಮುನಿಗೆ ಚಿರಂಜೀವಿತ್ವ, ಕೊಟ್ಟನು. ಹೆಸರು ಹೋದ ಭಗೀರಥನಿಗೆ ಇಷ್ಟಾರ್ಥವನ್ನೀವ ವಿಷ್ಣು ಪಾದಾಮೃತವಾದ ಸ್ವರ್ಗ ನದೀ ಎಂದರೆ ಗಂಗಾನದಿಯ ಜಲವನ್ನು ಕೊಟ್ಟನು. ಬಾಣಾಸುರ ಮತ್ತು ರಾವ ಣರೇ ಮುಖ್ಯರಾದ ಪಾಪಿಷ್ಠರ ಬಯಕೆಯನ್ನು ಈಡೇರಿಸಿದನು. ಈ ಬಗೆಯ ಮಹಾದೇವನ ಔದಾರ್ಯ ಸಂತೋಷಕರವಾದದ್ದು

ಅನಂತರ ಯಾತ್ರಿಕರು ಚಂಜೀಪುರವನ್ನು ನೋಡುತ್ತಾರೆ. ‘‘ಬೇರೆ ಎಲ್ಲಾ ಸ್ತ್ರೀಯರ ಮನಸ್ಸಿನ ಹಮ್ಮಿಕೆ ಇಳಿಸುವಂತರಾದ, ಚೆಲ್ವೆಯರ ಕಾಲ್ಗ ಡಗಗಳ ನುಣುಪಾದ ಸ್ವರದಿಂದ ಓಲ್ದ ಎಳೆಯರ ಗುಂಪಿನಿಂದ ನೆರೆತ ಈ ಚಂಜೀಪುರವೆಂಬ ಪಟ್ಟಣವು, ಶಿವನು ಸುಟ್ಟು ಬೂದಿಮಾಡಿದ ಕಾಮನನ್ನು ತಿರುಗಿ ಹುಟ್ಟಿಸುವಂಥಾದ್ದಾಗಿ ಎಸೆಯುತ್ತಿದೆ.

ಈ ಮಿತ್ರರ ಪಾದಸರಣಿ ಗಂಭೀರ ಹಾಸ್ಯ. ಒಬ್ಬನು “ಲೋಕದಲ್ಲಿ ಕಣ್ಣಿಗೆ ತಂಪಾಗಬೇಕೆಂದು ಎಲ್ಲರೂ ಹೆಣಗುತ್ತಾರೆ. ಆದರೆ ಸ್ಥಾಣುವಾದ ಈಶ್ವರನು ಕಣ್ಣನ್ನೇ ಬೆಂಕಿಯಲ್ಲಿ ಹಾಕಿದ್ದಾನೆ” ಎನ್ನುತ್ತಾನೆ. ಅವನ ಮಿತ್ರನು “ಗಂಗೆ ಮತ್ತು ಚಂದ್ರ ಈ ಎರಡು ಶೈತ್ಯಗಳೂ ತಲೆಯಲ್ಲಿ ಕೂಡಿರುವುದರಿಂದ ಉಂಟಾದ ನೆಗಡಿ ತೊಂದರೆಯನ್ನು ತಪ್ಪಿಸಿಕೊಳ್ಳಲು ಶಿವನು, ಬೆಂಕಿಯು ಉರಿಯಿಂದ ನಗುತ್ತಿದೆಯೋ ಎಂಬಂತೆ ಕಂಡುಬರುವ ಅಗ್ನಿಮಯವಾದ ಮೂರನೆಯ ಕಣ್ಣನ್ನು ಧರಿಸಿದ್ದಾನೆ.’ ಎನ್ನುತ್ತಾನೆ. ಅದಕ್ಕೆ ಅವನ ಮಿತ್ರನು “ಸಂತತವಾಗಿ ಹರಿಯುವ ಗಂಗಾನದಿಯ ತೆರೆಗಳಿಂದಲೂ ಚಂದ್ರನ ಅಮೃತ ಧಾರೆಯಿಂದಲೂ ತೊಯ್ದ ಶಿರವುಳ್ಳ ಶಿವನಿಗೆ ಮತ್ತೆಯಾಕೆ ಅಭಿಷೇಕ? ನೀರು ಕುಡಿದು ದಣಿದವನಿಗೆ ಮತ್ತೆ ನೀರೇ?” ಎನ್ನುತ್ತಾನೆ. ಅದಕ್ಕೆ ಅವನ ಮಿತ್ರನು ‘‘ ಹಣೆಯಲ್ಲಿ ಬೆಂಕಿ ಇರುವುದರಿಂದಲೂ ನಂಜು ಕುಡಿದಿರುವುದರಿಂದಲೂ ವಿಷ ಸರ್ಪಗಳನ್ನು ಧರಿಸಿ ಕೊಂಡಿರುವುದರಿಂದಲೂ ಕಾವು ಉಂಟಾಗಿ ಗಂಗಾಧರ ನಿಗೆ ಅಭಿಷೇಕದಲ್ಲಿ ಇಷ್ಟವುಂಟಾಯಿತು.” ಎಂದು ಪ್ರತ್ಯುತ್ತರ ಕೊಡುತ್ತಾನೆ. ಅನಂತರ ಕವಿ ತ್ರಿವಿಕ್ರಮಾವತಾರವನ್ನು, ಮೋಸದ ಮತ್ತು ಕುತ್ಸಿತವಾದ ಅವ ತಾರವೆಂದು ಹಾಸ್ಯ ಮಾಡುತ್ತಾನೆ.

ಮುಂದೆ ಶ್ರೀ ಕೃಷ್ಣಪರಮಾತ್ಮನ ಗುಣದೋಷಗಳ ವರ್ಣನೆ ಬರುತ್ತದೆ. ಅನಂತರ ಕವಿ ಚಮತ್ಕಾರವಾದ ಒಂದು ಸ್ವಭಾವೋಕ್ತಿಯನ್ನು ಹಾಡುತ್ತಾನೆ.

ಕಾವ್ಯಕ್ಕೆ ಭಾವರಸಗಳ ಆಳವೇ ಭೂಷಣ. ಸಂಪತ್ತಿಗೆ ದಾತೃತ್ವ ಭೂಷಣ. ಅರಸುತನಕ್ಕೆ ಕಲಿತನ ಭೂಷಣ. ಗುರುವಿಗೆ ವಿದ್ಯೆಯೇ ಭೂಷಣ. ಕುಲೀನನಾದವನಿಗೆ ಒಳ್ಳೇ ನಡತೆಯೇ ಭೂಷಣ. ದೊಡ್ಡಸ್ತಿಕೆಗೆ ಸೌಲಭ್ಯವೇ ಭೂಷಣ.

ಕವಿತ್ವಸ್ಯ ಗಾಂಭೀರ್ಯ ಮೌದಾರ್ಯ ಮೃದ್ಧೇಃ
ಪ್ರಭುತ್ವಸ್ಯ ಶೌರ್ಯಂ ಗುರುಸ್ವಸ್ಯವಿದ್ಯಾಂ
ಮಹಾವಂಶ್ಯತಾಯಸ್ಸದಾಚಾರ ಪೂರ್ತಿಂ
ಮಹತ್ವಸ್ಯಸೌಲಭ್ಯ ಮಾಕಲ್ಪಮಾಹುಃ

ಮುಂದೆ ರಾಜತ್ವದ ಗುಣದೋಷಗಳ ವರ್ಣನೆ ಬರುತ್ತದೆ. ಅರಸರು ದುರಾಶಾ ಪೀಡಿತರಾಗಿ ಇತರ ರಾಜ್ಯಗಳ ಮೇಲೆ ದಂಡೆತ್ತಿ ಹೋಗುವುದರ ತೆಗಳಿಕೆ. ಆದರೆ "ಇದು ಬರಿಯ ದುರಾಸೆಯಲ್ಲ. ನಿಜವಾದ ಧೀರನಿಗೆ ಇದು ಶೌರ್ಯ ಮತ್ತು ಅನಾಸಕ್ತಿಯ ಕಾರ್ಯವೇ ಹೌದು. ಮಳೆಗಾಲದ ಪ್ರವಾಹದಲ್ಲಿ ತುಂಬಿ ಭೋರ್ಗರೆದು ನಾಲ್ಕುದಿನಗಳಲ್ಲಿ ಬತ್ತಿಹೋಗುವ ಝರಿಗಳಿಗೆ ರಾಜತ್ವ ಸಮಾನವಾದುದೆಂದೂ, ಮಿಂಚಿನಂತೆ ತೋರಿ ಅಡಗುವುದೆಂದೂ, ಸೂರ್ಯನ ಕಿರಣಗಳಿಗೆ ತೆರೆಯಂತಿರುವ ಮೋಡಗಳ ನೆರಳಿನಂತೆ ಹೆಣ್ಣುಗಳ ಯೌವನವೆಂದೂ, ದೇಹವು, ಎಣ್ಣೆ ಮುಗಿದಿರುವ ಬತ್ತಿ ಎಂದೂ ತಿಳಿದು, ಯೋಗ್ಯರಾದ ರಾಜರು, ಸ್ವರ್ಗವನ್ನು ಹೊಂದಲು ಕಾಳಗವೆಂಬ ಕಿಚ್ಚಿನಲ್ಲಿ ತಮ್ಮ ಜೀವಗಳನ್ನು ಬಲಿಯಾಗಿ ಅರ್ಪಿಸಿ ಶುದ್ಧರಾಗುತ್ತಾರೆ. ಯುದ್ಧಾರಂಭದಲ್ಲಿ ರಕ್ತದಿಂದ ಕೆಂಪಾದ ವೀರನಲ್ಲಿ, ಸ್ವರ್ಗಲೋಕದ ಹೆಣ್ಣು ಪತಿವ್ರತೆಯಂತೆ ಪ್ರೀತಳಾಗುತ್ತಾಳೆ. ಸ್ವರ್ಗಸುಂದರಿಯ ಕೈ ಹಿಡಿದು ವಿಮಾನವೇರಿದ ಶೂರ, ಕಾಂತಿರಹಿತವಾದ ವೈರಿಗಳ ಬಾಣಗಳಿಂದ ಗಾಯಗೊಂಡ ತನ್ನ ಜಡದೇಹ, ಭೂಮಿಯಮೇಲೆ ಬಿದ್ದಿರುವುದನ್ನು ಸಂತೋಷದಿಂದಲೇ ನೋಡುತ್ತಾನೆ." ಎಂಬುದು ರಾಜಸ್ತುತಿ.

ಕವಿಗೆ ಕಾವೇರಿ ನದಿ ತುಂಬ ಪ್ರಿಯ. ತಮಿಳು ನಾಡಿಗೂ ಮೈಸೂರು ದೇಶಕ್ಕೂ ಕಾವೇರಿ ನದಿ ಅಮೃತಧಾರೆ. ಅದರ ವರ್ಣನೆಯಲ್ಲಿ ಕವಿ ತನ್ನನ್ನೇ ಮರೆಯುತ್ತಾನೆ. ಪದಗಳು ಕುಣಿ ಕುಣಿಯುತ್ತಾ ನಾನು ಮುಂದು ನಾನು ಮುಂದು ಎಂದು ನುಗ್ಗುತ್ತವೆ. “ಈ ನೀರಿನ ಪ್ರವಾಹವೇ ಪಾಪಹಾರಿ. ತೆರೆಗಳಿಂದ ಬಳುಕುವ ತಾವರೆಗಳ ಹಿಂಡು ; ದಡಗಳಲ್ಲಿ ಸಾಂದ್ರವಾಗಿ ಬೆಳೆದಿರುವ ಗೋಳಿ ಧವ ಎಳ್ಳು ನೆಲ್ಲಿಮಲ್ಲಿಗೆ ಚಂದನ ಮಂದಾರ ಮಾವು ನಾಗ ಸಂಪಿಗೆ ಜೋರೆ ಕಡವಾಲ ನಿಂಬೆ ನೀರಲು, ತುಂಬ ಹೂ ತುಂಬಿದ ಮುತ್ತಾಲ ಬೆಳವಲ ಲೋದಿ ಆಳಂಬ ಪಾಟಲ ಗಿಡವೃಕ್ಷಗಳ ಹೂವುಗಳ ಮೇಲೆ ಎರಗಿ ಮಧು ಪಾನಮಾಡಿ ಸ್ವೇಚ್ಛೆಯಿಂದ ಹಾರಾಡುವ ವಿಲಾಸಯುಕ್ತ ದುಂಬಿಗಳು, ರಾತ್ರಿಯ ಶ್ರಮವನ್ನು ಪರಿಹರಿಸಿ ಕೊಳ್ಳಲು ಕಾವೇರಿಯ ತಂಪಾದ ನೀರಿನಲ್ಲಿ ಮೈಮುಳುಗಿಸಿರುವ ಯುವತಿಯರ ಮುತ್ತಿನ ಹಾರಗಳಿಂದ ಬಿಳುಪಾದ ನೀರು, ಉಭಯ ಪಾರ್ಶ್ವಗಳಲ್ಲಿ ಸ್ನಾನ ಸಂಧ್ಯಾ ಕರ್ಮಗಳನ್ನು ಮಾಡಿ ದೃಢ ನಿಷ್ಠರಾಗಿ ಕುಳಿತು ಧ್ಯಾನವೆಸಗುತ್ತಿರುವ ಪವಿತ್ರಾತ್ಮರು, ತಮ್ಮ ಸಹಚರಿಯರನ್ನು ಬಿಗಿಯಪ್ಪಿ ಮುದ್ದಾಡುತ್ತಿರುವ ಹಂಸಗಳು, ಕತ್ತಿನವರೆಗೆ ನೀರಿನಲ್ಲಿ ತಮ್ಮ ಪನ್ನೀರಿನ ದೇಹಗಳನ್ನು ಮುಳುಗಿಸಿರುವ ಚೆಲ್ವೆಯರ ಮುಖಗಳನ್ನು ನೋಡಲು ಆಕಾಶದಲ್ಲಿ ತಿರುಗುತ್ತಿರುವ ಚಂದ್ರ. ಗಂಗೆಯಂತೆ ಯಮುನೆಯಂತೆ ಸರಸ್ವತಿಯಂತೆ ಈ ಕಾವೇರಿ ನದಿ, ಕಣ್ಗೆ,ತುಂಬ ಆನಂದವೀಯುತ್ತದೆ. ವಿಳ್ಳೆದೆಲೆ ಹಬ್ಬಿರುವ ಅಡಿಕೆ ಮರಗಳು ಸೊಂಪಿನ ಚೆಲ್ವೆಯರು ಪ್ರೀತಿಯಿಂದ ಅಪ್ಪಿಕೊಂಡ ಕಾಮಾತುರ ಪುರುಷರಂತೆ ಕಣ್ಗೊಳಿಸುತ್ತವೆ. ಕಾವೇರಿ ತೀರದಲ್ಲಿ ಹುಟ್ಟಿರುವ, ಆಕಾಶವನ್ನು ಚುಂಬಿಸುವ ಎತ್ತರದ ತೋರವಾದ ತೆಂಗು, ಕಾಯಿಗಳನ್ನು ಹೊತ್ತು, ಸೂರ್ಯಮಂಡಲವನ್ನೇರಿ ಬರುವ ಒಡೆಯನಿಗಾಗಿ ಕಾಣಿಕೆಅರ್ಪಿಸಲು ಸಿದ್ಧವಾಗಿವೆ — ಇಲ್ಲಿಯ ಚೆಲುವೆಯರು ನಿರಪರಾಧಿಗಳಾದ ಯೋಗಿಗಳ ಮನಸ್ಸನ್ನು ಮರುಳುಮಾಡುತ್ತಾರೆ ! ”

ಕವಿಗೆ ಸಹ್ಯಾದ್ರಿ ಪರ್ವತ ಪ್ರಿಯ. ಪ್ರಕೃತಿಯನ್ನೂ ಶೃಂಗಾರವನ್ನೂ ಸೇರಿಸಿದ್ದಾನೆ.

ಪೀತಾಂಬರಾಲಂಕೃತ ಮಧ್ಯಭಾಗಾ
ಕಲ್ಹಾರಮಾಲಾ ಕಮನೀಯ ವೇಣೀ

ಸಹ್ಯಾದ್ರಿ ಕನ್ಯಾ ಜನಕಸ್ಯ ಗೇಹಾತ್ಪತ್ಯು
ಸ್ಸಮೀಪಂ ವ್ರಜತಿ ಪ್ರಸನ್ನಾ

ಪೀತಾಂಬರಾಲಂಕೃತ ನಡುವುಳ್ಳ ಕೆಂಪು ತಾವರೆ ಮುಡಿದ ಹೆರಳುಳ್ಳವಳಾಗಿ (ಸೆಳವು) ನಗುಮೊಗಳಾಗಿ ಸಹ್ಯಾದ್ರಿ ಕುಮಾರಿಯು ತವರು ಮನೆಯಿಂದ ಗಂಡನ ಮನೆಗೆ (ಸಮುದ್ರ) ಹೋಗುತ್ತಿದ್ದಾಳೆ. ಈ ನದಿಯ ಎರಡು ಕಡೆಗಳಲ್ಲಿಯೂ ಇರುವ ಹೂ ಗೊಂಚಲುಗಳಿಂದೆಸೆವ ಎತ್ತರವಾದ ಮರಗಳು, ಉಟ್ಟ ಧೋತ್ರಗಳನ್ನು ತಲೆಗೆ ಸುತ್ತಿಕೊಂಡು ನದಿ ದಾಟಲು ಸಿದ್ಧರಾದ ಹಾದಿಕಾರರಂತೆ ಕಾಣುತ್ತವೆ. ತನಿಗಂಪೊಗೆಯುವ ನೀರು, ತಾವರೆಗಳನ್ನು ತೇಲಾಡಿಸುತ್ತಿರುವ ತೆರೆಗಳೊಳಗೆ ಬಳುಕುವ, ತಾವರೆ ಹಿಂಡಿನ ಬಲು ಸುಳಿದಾಟದಿಂದ ತುಂಬಿದ ಕಂಪು ಮತ್ತು ಪರಿಮಳವುಳ್ಳ ನೀರಿನಲ್ಲಿ ಸ್ನಾನ ಮಾಡುವ ಲೀಲೆಯುಳ್ಳವರೇ ಪುಣ್ಯವಂತರು. ಕಾವೇರಿ ತೀರದಲ್ಲಿ ಎಲ್ಲೆಯೂ ಮಾವಿನ ಮರಗಳು, ಸೂರ್ಯ ರಶ್ಮಿ ಸಹ ಕೆಳಗೆ ಬೀಳದ ಎತ್ತರವಾದ ತೆಂಗು........

ಕವಿ, ಲಕ್ಷ್ಮಿಯನ್ನು ಹೀಗೆ ಸ್ತುತಿಸುತ್ತಾನೆ "ಹೇ ತಾಯಿ, ಕಮಲಾದೇವಿ ನೀನು ಸಂಸಾರದಲ್ಲಿ ಸಿಲುಕಿದವರ ಮೋಹವನ್ನು ನಿರ್ಮೂಲ ಮಾಡುವ ಗಿಡಮೂಲಿಕೆಯಾಗಿರುತ್ತಿ. ಮುಕ್ತಿಮಾರ್ಗಕ್ಕೆ ನಿಚ್ಚಣಿಕೆಯಾಗಿರುತ್ತಿ. ಮನಸ್ಸಿಗೆ ನಿರ್ಮಲತೆಯನ್ನುಂಟುಮಾಡುವ ಮಾತ್ರೆಯಾಗಿರುತ್ತಿ. ಚಿಂತೆಯೆಂಬ ಕತ್ತಲೆಗೆ ಬೆಳದಿಂಗಳಾಗಿರುತ್ತಿ. ವಿದ್ಯೆಗಳು ವಿಲಾಸಮಾಡುವ ಸ್ಥಾನವಾಗಿರುತ್ತಿ. ಬೇಡಿದುದನ್ನು ಕೊಡುವ ಕಲ್ಪವೃಕ್ಷ ಬಳ್ಳಿಯಾಗಿರುತ್ತಿ. ಆನಂದ ಸಮುದ್ರ ಲಹರಿ ಯಾಗಿರುತ್ತಿ"

ಕವಿ, ಲಕ್ಷ್ಮಿಯ ವರ್ಣನೆಯನ್ನು ಮುಂದುವರಿಸುತ್ತಾನೆ. "ಅರಸನೇ ಆಗಲಿ, ಲಕ್ಷ್ಮಿಯ ದೃಷ್ಟಿ ತೊಲಗಲು ಮೊದಲು ರತ್ನಗಳು ಕೆತ್ತಿದ್ದ ಮಂಚದ ಮೇಲೆ ಮಲಗುತ್ತಿದ್ದವನು, ಎಲೆಗಳ ಹಾಸಿಗೆಯಾದರೂ ಸಿಗಲಿ ಎಂದು ಬೇಡುತ್ತಾನೆ. ಹಾಲು ಪಾಯಸ ಉಂಡವನು, ಸವಿಯಿಲ್ಲದ ಗಂಜಿಯನ್ನು ಅಮೃತದಂತೆ ಎಣಿಸಿ ಸವಿಯುತ್ತಾನೆ. ಮೊದಲು ಪಟ್ಟೆ ಧೋತ್ರ ತೊಟ್ಟುಕೊಂಡವನು, ದಾಸನಂತೆ ಹರಕು ಬಟ್ಟೆ ತುಂಡುಗಳಿಂದ ಹೊಲೆದ ಕೌದಿ ಸಿಗಲಿ ಎಂದು ಬೇಡಿಕೊಳ್ಳುತ್ತಾನೆ."

"ಹಣಕಾರನ ಬಾಗಿಲಿಗೆ ಭಿಕ್ಷೆ ಬೇಡಲು ಹೋದಾಗ ತಡೆಸಲ್ಪಟ್ಟ ಭಿಕ್ಷುಕನ ಬಾಗಿಲಿನಲ್ಲಿ ಈಗ ಆನೆಯನ್ನು ನೋಡುತ್ತೇನೆ. ಬಹುಕಾಲದಿಂದ ಭೂಮಿಯ ಮೇಲೆ ಮಲಗುತ್ತಿದ್ದವನ ಭುಜಗಳಲ್ಲಿ ಈಗ ಭೂಮಿ ಮಲಗುತ್ತದೆ. ಯಾವಾತನ ಹೆಂಡರಿಗೆ ತಿನ್ನಲಿಕ್ಕೆ ಹಿಟ್ಟು ಇರಲಿಲ್ಲವೋ ಅವನ ಹೆಂಗಸರು ಈಗ ಸರಗಳನ್ನು ತೊಟ್ಟುಕೊಳ್ಳುತ್ತಾರೆ. ಅಹೋ! ತಗ್ಗಿರುವವನು ಲಕ್ಷ್ಮೀದೇವಿಯ ಕಣ್ಣುಸನ್ನೆಯಿಂದ ಮೇಲಾಗುತ್ತಾನೆ."

ಜಗತ್ತಿನ ಜನರ ಆರ್ಥಿಕ ಅಸಮಾನತೆಯಿಂದ ಕವಿ ಬಹಳ ನೊಂದುಕೊಳ್ಳುತ್ತಾನೆ. "ಹೇ ಲಕ್ಷ್ಮಿ, ಹಣಕ್ಕಾಗಿ ನಿರಪರಾಧಿಗಳನ್ನೂ ನೆಂಟರಿಷ್ಟರನ್ನೂ ತಿರಸ್ಕರಿಸುವವರ ಮನೆಯನ್ನೇ ಸೇರುವೆ; ಪರ ಸ್ತ್ರೀಯರನ್ನು ಕಾಮಿಸುವವರನ್ನೂ ಕಠಿಣರನ್ನೂ ದುರ್ಭಾಷಿಗಳನ್ನೂ ಜಿಪುಣರನ್ನೂ ಸೇರಿ ಸದಾ ಅಲ್ಲಿ ಕುಣಿಯುತ್ತಿರುವೆ—ಯಾರ ಕಣ್ಣಿಗೆ ಪರ ಸ್ತ್ರೀಯರನ್ನು ನೋಡುವ ಚಾಳಿ ಹುಟ್ಟಲಿಲ್ಲವೋ, ಯಾರ ಹೃದಯ ಪರರಿಗೆ ಕೇಡು ಬಗೆಯುವುದರಲ್ಲಿ ಬುದ್ಧಿ ಶೂನ್ಯವೋ, ಯಾರ ನಾಲಿಗೆ ಸುಳ್ಳಾಡುವುದಿಲ್ಲವೋ ಅಂಥವರ ಮನೆಗಳಲ್ಲಿ ಹಸುಗಳೇ ಇಲ್ಲ. ಹುಡುಗರಿಗೆ ಹಾಲಿಲ್ಲ. ಮನೆಗಳು ಬೀಳುತ್ತಿರುತ್ತವೆ— ಹೇ ಲಕ್ಷ್ಮಿ, ನಿನ್ನ ದೃಷ್ಟಿ ಯಾರಿಂದ ತೊಲಗುತ್ತದೆಯೋ ಅವನ ಸುಗುಣಗಳೆಲ್ಲ ಕೂಡಲೆ ಕೆಟ್ಟು ಹೋಗುತ್ತವೆ. ನೀಚರಿಗೆ ಕೆಟ್ಟ ಮಾರ್ಗದಿಂದ ಬಂದ ಐಶ್ವರ್ಯದಿಂದ ಅವರು ಉದ್ಧತರಾಗಿ ನರಕ ಹೊಂದುತ್ತಾರೆ—ಪ್ರಾತಃ ಕಾಲದ ತಾವರೆಯೊಂದಿಗೆ ಸ್ಪರ್ಧಿಸುವ ಕಲ್ಯಾಣ ಗುಣಗಳುಳ್ಳ ಆ ಲಕ್ಷ್ಮಿಯ ಕಣ್ಣುಗಳು ಒಂದು ಸಲ ನಮ್ಮನ್ನು ನೋಡಲಿ ಎಂದು ಬ್ರಹ್ಮ ಇಂದ್ರ ಸಹ ಬೇಡಿ ಕೊಳ್ಳುತ್ತಾರೆ.— ಕೂದಲಿಗೆ ಎಣ್ಣೆ ಇಲ್ಲ, ಮುಖ ಭೂಷಣಕ್ಕೆ ವೀಳ್ಯವಿಲ್ಲ. ಪೂಸಿಕೊಳ್ಳಲು ಗಂಧವಿಲ್ಲ. ಇಡಲು ಆಭರಣಗಳಿಲ್ಲ. ಉಡಲು ವಸ್ತ್ರಗಳಿಲ್ಲ. ಮುಡಿಯಲು ಹೂವಿಲ್ಲ. ಹೆಣ್ಣುಗಳಿಗೆ ಹಣವಿಲ್ಲದವರ ಮನೆಯಲ್ಲಿ ಸೊಸೆತನ ಪಾಪ ಫಲ."

ವೆಂಕಟಾಧ್ವರಿ ಕವಿ ಯಾರನ್ನೂ ಬಿಡುವುದಿಲ್ಲ. ಎಲ್ಲರನ್ನೂ ಚಾವಟಿಯಿಂದ ಬಾರಿಸುತ್ತಾನೆ: "ವಾರ ಸ್ತ್ರೀಯರ ಕುಚಗಳನ್ನು ಮರ್ದಿಸಿದ ಕೈಗಳಿಂದ ಪೂಜಾರಿ ದೇವರ ಪೂಜೆ ಮಾಡುತ್ತಾನೆ. ಆಕೆ ಕೊಟ್ಟ ವಿಳ್ಳೆದೆಲೆ ರಸದ ಕಂಪೂಗೆಯುವ ಬಾಯಿಂದ ಮಂತ್ರಗಳನ್ನು ಕೂಗುತ್ತಾನೆ.

ದೇವರಗಂಟನ್ನೆಲ್ಲ ಭಯವಿಲ್ಲದೆ ಎತ್ತಿಹಾಕುತ್ತಾನೆ. ಇಂತಹ ಅರ್ಚಕರಿಂದ ಪೂಜಿಸಲ್ಪಡುವ ಮೂರ್ತಿಗಳಲ್ಲಿ, ದೇವತಾ ಸಾನ್ನಿಧ್ಯ ಹೇಗೆ ಬಂದೀತು? ಸೂಳೆಯರ ಸುದ್ದಿಯನ್ನೇ ಆಡುತ್ತಾ, ಸಂಧ್ಯಾವಂದನೆ ಮುಂತಾದ ಕರ್ಮಗಳನ್ನು ಬಿಟ್ಟು ಸಭ್ಯ ವಚನಗಳನ್ನು ಕಲಿತು, ವೇದಾಕ್ಷರ ಶೂನ್ಯರಾಗಿ ಅನ್ನಗಳ್ಳರಾದ ಪೂಜಾರಿಗಳ ನೈವೇದ್ಯಕ್ಕೆ ದೇವರು ಒಪ್ಪಿಯಾನೆ?" ಈ ಕವಿ ಒಂದು ದೃಷ್ಟಿಯಿಂದ ಪ್ರಾಚೀನ ಇಂಗರ್‌ಸಾಲ್.

ಮುಂದೆ ಕವಿ ಒಂದೆರಡು ಸ್ವಭಾವೋಕ್ತಿಗಳನ್ನು ಹೇಳುತ್ತಾನೆ. ನಿಷ್ಕಾಮ ಕರ್ಮಕ್ಕೆ ಯಾವಾಗಲೂ ಪ್ರಾಶಸ್ತ್ಯ. "ಭೋಗಕ್ಕಾಗಿಯೇ ಸಂಸಾರಿಯಾಗುವವನೂ, ಕೀರ್ತಿಗಾಗಿಯೇ ಯಜ್ಞಮಾಡುವವನೂ ತನ್ನೊಬ್ಬನ ಹೊಟ್ಟೆಗಾಗಿಯೇ ಸಂಪಾದಿಸುವವನೂ, ದುಷ್ಕಾರ್ಯವೆಚ್ಚ ಮಾಡುವುದಕ್ಕಾಗಿಯೇ ಹಣ ಕೂಡಿಸುವವನು, ವೇತನ ಮತ್ತು ದಾನ ಸಂಪಾದನೆಗಾಗಿಯೇ ವಿದ್ಯೆ ಕಲಿತವನು, ಇತರರನ್ನು ವಾದದಲ್ಲಿ, ಸೋಲಿಸುವುದಕ್ಕಾಗಿಯೇ ಶಾಸ್ತ್ರಾಭ್ಯಾಸಮಾಡಿದವನು, ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿಯೇ ಹರಿಭಕ್ತಿ ಮಾಡುವವನು, ಇವರೆಲ್ಲ ನಿಂದಾರ್ಹರು."

ಆಸೆಯನ್ನು ಕವಿ ಸ್ವಾರಸ್ಯವಾಗಿ ನಿರಸನ ಮಾಡಿದ್ದಾನೆ. ಆಸೆ ಯಾರಲ್ಲಿದ್ದರೂ ಕೆಟ್ಟದ್ದೇ. ಆಶಾಪೀಡಿತ, ಯಾವ ಕಾರ್ಯಬೇಕಾದರೂ ಮಾಡುತ್ತಾನೆ. ಯಾವ ವೇಷ ಬೇಕಾದರೂ ಹಾಕುತ್ತಾನೆ. "ರಾಗ ದ್ವೇಷಾದಿ ತುಚ್ಛಗುಣಗಳಿಲ್ಲದ ಪ್ರಸಿದ್ಧನಾದ ವಿಷ್ಣು ಸಹ, ಭೂಮಿಯನ್ನು ಬಯಸಿ ಹಂದಿಯ ರೂಪವನ್ನು ತಳೆದನು. ಅಂದ ಮೇಲೆ ನೆಲಗಳಿಸುವ ಆಸೆಯಿಂದ ಮನುಷ್ಯ ಯಾವ ರೂಪವನ್ನು ತಾನೇ ತೆಗೆದು ಕೊಳ್ಳುವುದಿಲ್ಲ!"

ಕವಿಯು ಮಾನವನ ದುರಾಸೆಯನ್ನು ತುಂಬ ತಿರಸ್ಕರಿಸುತ್ತಾನೆ. ಪುಣ್ಯ ಕ್ಷೇತ್ರಗಳಲ್ಲಿ ಅನ್ನ ಮಾರುವವರನ್ನು ತೆಗಳುತ್ತಾನೆ. "ಶ್ರೀರಂಗೇಶನಿಗೆ ನಿವೇದಿತವಾದ ಬಳಿಕ ಪವಿತ್ರವಾಗಿ ಸುತ್ತಲಿನ ಇಂದ್ರಾದಿ ದೇವತೆಗಳಿಗೆ ಅರ್ಪಿತವಾದ ಅನ್ನವನ್ನು ದುಡ್ಡಿನ ಆಸೆಯುಳ್ಳ ಕೆಲವರು ಮಾರುತ್ತಾರೆ. ಅವರಿಗೆ ಶ್ರೀ ವಿಷ್ಣು ವೈಕುಂಠವನ್ನೇ ಕೊಟ್ಟರೂ ಅದರಿಂದ ದಣಿಯದೆ ಅದನ್ನೂ ಕೂಡ ಅವರು ಹಣದ ಹಸಿವಿಗೆ ಮಾರಿಬಿಟ್ಟಾರು.

ದುರ್ಜನರ ಸೇವೆ ಮಾಡುವವರನ್ನೂ ದುಷ್ಟ ಅರಸರನ್ನೂ ಕವಿ ಮೆಚ್ಚು

ವುದಿಲ್ಲ. "ಕೋಪಿಷ್ಟರಾಗಿ, ತೀಕ್ಷ್ಣವಾದ ನುಡಿಗಳಿಂದ, ಬೇಡುವುದಕ್ಕೆ ಬಂದವರ ಹೃದಯವನ್ನಿರಿಯುವ ಅರಸುಗಳ ದರ್ಶನ ನಮಗೆ ಬೇಡ. ಆಧ್ಯಾತ್ಮಿಕ ಆದಿದೈವಿಕ ಮತ್ತು ಆದಿಭೌತಿಕವೆಂಬ ತಾಪತ್ರಯಗಳಿರದ, ಬಂದು ಶರಣ ಬಂದವರಿಗೆ ಕೂಡಲೇ ಮೋಕ್ಷವನ್ನು ದಯಪಾಲಿಸುವ ವ್ರತವನ್ನು ಹಿಡಿದಿರುವ ಭಗವಂತನನ್ನು ಮರೆಹೊಕ್ಕು ಪಾದಗಳನ್ನು ಕಟ್ಟಿಕೊಳ್ಳೋಣ.

ವೆಂಕಟಾಧ್ವರಿ ಕವಿ, ನಿಜವಾಗಿ ನಾಸ್ತಿಕನಲ್ಲ. ಅವನು ಆಸ್ತಿಕನೇ ಹೌದು. ವಿಗ್ರಹಾರಾಧಕನೂ ಹೌದು. ಅವನು ತೆಗಳುವುದು ದೇವಾಲಯದ ವಾತಾವರಣವನ್ನು ಮಾತ್ರ.

೫

ಪ್ರಾಚೀನ ಕವಿಗಳ ಕಾವ್ಯಗಳಲ್ಲಿ ಚಮತ್ಕಾರ ಒಂದು ಮುಖ್ಯ ಅಂಶ. ಈ ಗುಣ ವೆಂಕಟಾಧ್ವರಿಯಲ್ಲಿ ಪೂರ್ಣವಾಗಿದೆ. ಈ ಕೆಳಗಿನ ಉದಾಹರಣೆಗಳನ್ನು ನೋಡಿ.

ಜ್ಯೋತಿಷಿಕ ವರ್ಣನೆ

ತುಂಬ ನಿಯಮ ಅಪವಾದಗಳೆಂಬ ತರಂಗಗಳುಳ್ಳ ಜ್ಯೋತಿಷ ಶಾಸ್ತ್ರ ಸಮುದ್ರದಲ್ಲಿ ಒಂದೆರಡು ತಟಾಕಗಳನ್ನು ಕಲಿತು ಸಂಪೂರ್ಣ ಜ್ಯೋತಿಷ ಶಾಸ್ತ್ರ ತಿಳಿದವರಂತೆ ಈ ಅಧಮ ಜೋಯಿಸರು ಮನೆಮನೆಗೆ ಹೋಗಿ "ನಿನಗೆ ದೀರ್ಘಾಯಸ್ಸು, ಸಂತಾನ ಸಂಪತ್ತು, ಸುಖಗಳು ಹೆಚ್ಚುವುವು" ವೆಂದು ಹೇಳಿ ಹಣವಂತರನ್ನು ಮರುಳು ಮಾಡುತ್ತಾರೆ—ಈ ಜೋಯಿಸರು ಸುಳ್ಳಾಗಲಿ ನಿಜವಾಗಲಿ ಜನರ ಜನ್ಮಪತ್ರಿಕೆಗಳನ್ನು ಬರೆದು, ತಾವು ಹೇಳಿದುದಕ್ಕೆ ಸರಿಯಾಗಿ ಫಲಾಫಲ ಕೂಡಿಬಂದರೆ,ತಮ್ಮ ಸ್ವಂತ ಜಾಣ್ಮೆಯನ್ನು ಮೆರೆಸುತ್ತಾರೆ. ಸರಿ ಕೂಡಿ ಬಾರದಿದ್ದರೆ, ಲಗ್ನವನ್ನು ಸರಿಯಾಗಿ ತಿಳಿಸಲಿಲ್ಲವೆಂದು ಕೇಳುವವನ ತಲೆಯ ಮೇಲೆಯೇ ತಪ್ಪು ಹೊರಿಸುತ್ತಾರೆ. ಹಿಂದಲ ಜನ್ಮದ ಪುಣ್ಯ ಪಾಪಗಳ ಫಲವಾಗಿ ಯಾರಿಗಾದರೂ ಸುಖ ಅಥವ ದುಃಖ ಸಂಭವಿಸಿದರೆ 'ಇದನ್ನು ನಾನು ಮೊದಲೇ ನಿಮಗೆ ಹೇಳಲಿಲ್ಲವೇ? ಎಂದು ಠಕ್ಕಿಸುತ್ತಾರೆ.

ಜೋಯಿಸನು ಸತ್ಯವನ್ನೇ ಹೇಳುವವನಾದರೂ ಅವನ ಮಾತುಗಳಿಂದ ಫಲವೇನು.

ಕರ್ಮ ಹಣ್ಣಾಗಲು ಮನುಷ್ಯನು ಸುಖವಾಗಲೀ ದುಃಖವಾಗಲೀ ಉಣಲೇಬೇಕು. ಅದನ್ನು ಜೋಯಿಸನು ಮುಂಚಿತವಾಗಿ ಜನರಿಗೆ ಹೇಳಿದರೆ ಫಲವೇನು ?

ಅನಂತರ ಕವಿಯ ದೃಷ್ಟಿ ವೈದ್ಯರೆಡೆಗೆ ಹೋಗುತ್ತದೆ. "ಅಯ್ಯೋ ವೈದ್ಯರೆ ಇವರಿಗೆ ಶಾರೀರ ಸೂತ್ರಸ್ಥಾನಗಳು ಗೊತ್ತಿಲ್ಲ, ರೋಗ ಪರೀಕ್ಷೆ ಇಲ್ಲ. ವೈದ್ಯ ವಸ್ತುಗಳ ಗುಣ ಪರಿಚಯವಿಲ್ಲ, ಆದರೂ ತಾವು ವೈದ್ಯರೆನ್ನಿಸಿ ಕೊಂಡು ಯಮನ ಸಹೋದರರಂತೆ, ಮೂಢರಾದ ರೋಗಿಗಳ ಪ್ರಾಣ ಗಳನ್ನೂ ಧನವನ್ನೂ ಹರಣಮಾಡುತ್ತಾರೆ"—ಆದರೆ ಮಿತ್ರನು, ವೈದ್ಯರಿಂದ ಪ್ರಯೋಜನವಿದೆ ಎಂದು ಹೇಳುತ್ತಾನೆ. "ಯಜ್ಞಮುಗಿಸಿದ ನಂತರ ದಕ್ಷಿಣೆ ಬೇಡುವ ವೈದಿಕನನ್ನು ಯಜಮಾನ ದ್ವೇಷಿಸುತ್ತಾನೆ. ಹೊಳೆದಾಟಿಸಿ ದುಡ್ಡು ಬೇಡುವ ದೋಣಿಕಾರನನ್ನು ದಾಟಿದವನು ದ್ವೇಷಿಸುತ್ತಾನೆ. ಮುಟ್ಟಬೇಕಾದ ಸ್ಥಳಕ್ಕೆ ಮುಟ್ಟಿದವನು, ಬಾಡಿಗೆ ಕೇಳುವ ವಾಹಕನನ್ನು ದ್ವೇಷಿಸುತ್ತಾನೆ. ಸೂಳೆಯ ಯವ್ವನವನ್ನು ಭೋಗಿಸಿದ ವಂಚಕನು, ಮುಪ್ಪಿನಲ್ಲಿ ಆಕೆ ದುಡ್ಡು ಬೇಡಿದರೆ ದ್ವೇಷಿಸುತ್ತಾನೆ. ರೋಗ ವಾಸಿಯಾಗಿ, ವೈದ್ಯ ಭಾಗ (ಹಣ) ಬೇಡುವ ವೈದ್ಯನನ್ನು, ಆರೋಗ್ಯ ಹೊಂದಿದ ಗೃಹಸ್ಥ ದ್ವೇಷಿಸುತ್ತಾನೆ.

ಕವಿವರ್ಣನಮ್

ಕವಿಯ ಗುರಿಯೇನು? ಯಾಕೆ ಕಾವ್ಯವನ್ನು ಹೇಳ ಬೇಕು? ಈ ಚರ್ಚೆ ಎಂದಿನಿಂದೂ ನಡೆದು ಬರುತ್ತಲೇ ಇದೆ. "ಪರಮಾತ್ಮ ಕೊಟ್ಟ ಕಾವ್ಯಶಕ್ತಿಯನ್ನು, ಅರಸುಗಳ ಅಧೀನ ಮಾಡಿ ಬಿಡಬಾರದು. ಬಹಳ ದೂರ ದಿಂದ ತಂದ, ದೇವತಾ ಅಭಿಷೇಕಕ್ಕೆ ಅರ್ಹವಾದ ಗಂಗಾಜಲವನ್ನು ಬುದ್ಧಿ ವಂತರು ಸೊಪ್ಪಿನ ಬುಡಕ್ಕೆ ಚೆಲ್ಲಿಬಿಡುತ್ತಾರೆಯೆ?—ಹಿರಿಯರಿಂದ ಶಿಕ್ಷಿತನಾ ಗದ ಅರಸು ದೇವತೆಗಳ ಕಿರೀಟಕ್ಕೆ ಯೋಗ್ಯವಾದ ರತ್ನಗಳಿಂದ ತನ್ನ ಮನೆಯ ಹೆಣ್ಣು ನಾಯಿಯನ್ನು ಅಲಂಕರಿಸುವಂತೆ, ಸಂಸಾರ ಪಾಶದಿಂದಲೇ ಬಿಡು ಗಡೆಮಾಡುವ ಕವಿ ಸೂಕ್ತಿಗಳಿಂದ ಕುಕವಿಗಳು—ಪರಮಾತ್ಮನನ್ನು ಬಿಟ್ಟು ವಾರಾಂಗನೆಯರ ಚರಿತ್ರೆಗಳನ್ನೇ ಬಣ್ಣಿಸುತ್ತಾರೆ."

ಅವನ ಮಿತ್ರನು ಕವಿಗಳ ಪ್ರಶಂಸೆಯನ್ನೇ ಮಾಡುತ್ತಾನೆ, "ಅಯ್ಯಾ ಕೇಳು, ಮಂಗಳಕರವಾದ ಭಗವಂತನ ಮತ್ತು ಸತ್ಪುರುಷರ ಚರಿತ್ರೆಗಳನ್ನು

ರಚಿಸುವ ಕವಿಯು ಕಾವ್ಯದ ಅಂಗವಾಗಿ ಶೃಂಗಾರಾದಿ ರಸಗಳನ್ನು ತಂದರೆ ತಪ್ಪಿಲ್ಲ. ವ್ಯಾಸವಾಲ್ಮೀಕಿಗಳ ಗ್ರಂಥಗಳಲ್ಲಿ ಸಹ ಇದು ಕಾಣುತ್ತದೆ. ಕವಿಗಳು ಕಾವ್ಯದಿಂದ ನರಸ್ತುತಿ ಮಾಡಿದರೆ ಇತರರು ಬರಿಯವಾಕ್ಸಿಂದಲೇ ಮಾಡು ತ್ತಾರೆ. ಈ ಕುಂದು ಎಲ್ಲರಿಗೂ ಇದೆ–ಮಾಘ, ಚೋರ ಮಯೂರ, ಮುರಾರಿ, ಭಾರವಿ, ಹರ್ಷ, ಕಾಳಿದಾಸ. ಭವಭೂತಿ, ಭೋಜ, ದಂಡಿ, ದಿಂಡಿಮ, ಬಿಲ್ಹಣ, ಬಾಣ, ಸುಬಂಧು ಮಂತಾದ ಕವಿಗಳು ತಮ್ಮ ಕವಿತೆಗಳಿಂದ ಜಗತ್ತನ್ನೇ ಆನಂದ ಪಡಿಸುತ್ತಾರೆ. ಐಶ್ವರ್ಯ ಮತ್ತು ನಮ್ರತೆ, ಕವಿತಾ ಚಾತುರ್ಯ ವಿದ್ವಾಂಸಿಕೆ, ಶಕ್ತಿ ಮತ್ತು ಪರೋಪಕಾರ ಬುದ್ಧಿ, ಪ್ರಭುತ್ವಕ್ಕೆ ದಾನ ಶೂರತ್ವ ಮತ್ತು ನಯನುಡಿ, ಆಚಾರ್ಯತ್ವ ಮತ್ತು ಜ್ಞಾನ. ಹೀಗೆ ಗುಣಗಳು ದ್ವಂದ್ವದಲ್ಲಿ ಸೇರಿದ್ದರೆ ಮಾತ್ರ ಶ್ಲಾಘನೆಗೆ ಪಾತ್ರವೆಂದು ಹಿರಿಯರು ಹೇಳುತ್ತಾರೆ.

ವೆಂಕಟಾಧ್ವರಿ ಕವಿ ಬರಿಯ ಪ್ರಾಚೀನರನ್ನೇ ಸ್ತುತಿಸುವುದಿಲ್ಲ. ಆಧುನಿಕ ಕವಿಗಳನ್ನೂ ಸನ್ಮಾನಿಸುತ್ತಾನೆ.

ಪ್ರಾಚೇತಸವ್ಯಾಸ ಪರಾಶರಾದ್ಯಾಃ ಪ್ರಾಂಚಃ
ಕವೀಂದ್ರಾ ಜಗದಂಚಿತಾಸ್ತೆ
ಗೋಷ್ಠೀನವೀನಾಪಿ ಮಹಾಕವಿನಾಂ
ಪೂಜ್ಯಾ ಗುಣಜ್ಞೈರ್ಭುವನೋಪ ಕರ್ತ್ರೀ

ವಾಲ್ಮೀಕಿ ವ್ಯಾಸ ಪರಾಶರರೇ ಮೊದಲಾದ ಪ್ರಾಚೀನ ಕವಿವರ್ಯರು ಲೋಕದಲ್ಲಿ ಶ್ರೇಷ್ಠರೇ ಸರಿ. ಆದರೆ ಲೋಕೋಪಕಾರಿಗಳಾದ **ನೂತನ ಮಹಾಕವಿಗಳ** ಸಮೂಹವೂ ಸಹ ಪ್ರಾಜ್ಞರ ಸನ್ಮಾನಕ್ಕೆ ಅರ್ಹವಾಗಿದೆ.

ಮುಂದೆ ಕವಿ, ತಾರ್ಕಿಕರ ವರ್ಣನೆ ಮಾಡುತ್ತಾನೆ. ತರ್ಕವನ್ನು ಅರಿಯದವನ ಬಾಯಿಂದ ಸಭೆಯಲ್ಲಿ ಮಾತು ಹೊರಡುವುದಿಲ್ಲ. ತರ್ಕ ಸಮುದ್ರ, ಅದ್ಭುತವಾಗಿದೆ. ಗೌತಮನು ಅದನ್ನು ಬುಡಮಟ್ಟ ಶೋಧಿಸಿದ್ದಾನೆ" —ಮೀಮಾಂಸಕರ ವಿಚಾರವನ್ನು ಪ್ರಸ್ತಾಪಿಸಿ ಕವಿ "ಕರ್ಮದ ಮಹತ್ವ ವನ್ನು ಸ್ಥಾಪಿಸಬೇಕು, ಕರ್ಮದಲ್ಲಿ ಭಕ್ತಿ ಸ್ಥಿರವಾಗಿರಬೇಕು ಎಂಬ ಉದ್ದೇಶದಿಂದ ಮಾತ್ರವೇ, ಮೀಮಾಂಸಕರು ಭಗವಂತನನ್ನೂ ಆವನ ಶಕ್ತಿಯನ್ನೂ ಅಂಗೀಕರಿಸುವುದಿಲ್ಲ. ಮೀಮಾಂಸ ಶಾಸ್ತ್ರ ಸ್ಥಾಪಕ ಜೈಮಿನಿ ಮುನಿಯು ವಂದನಾರ್ಹನು." ಎಂದಿದ್ದಾನೆ.

ಕವಿ ವ್ಯಾಕರಣ ಪಕ್ಷಪಾತಿ 'ಯಾರು ವ್ಯಾಕರಣವೆಂಬ ಔಷಧಿಯನ್ನು ಸೇವಿಸುವುದಿಲ್ಲವೋ ಅವನಿಗೆ ವಾಕ್ಪಟುತ್ವ ಇಲ್ಲ. ಯಾವನಾದರೂ ಒಂದು ಶಬ್ದ ಉಚ್ಚರಿಸಿದರೆ ಅವನ ಮೈ ಬೆವರುತ್ತೆ, ಮೈ ನಡುಗುತ್ತೆ, ಬಿಲ್ಲು ವಿದ್ಯೆ ತಿಳಿಯದವರಿಗೆ ಯುದ್ಧ ಹೇಗೋ ವ್ಯಾಕರಣ ಓದದವರಿಗೆ ಪಂಡಿತರ ಸಭೆ ಹಾಗೆ. ಪತಂಜಲೀ ಕೃತ ವ್ಯಾಕರಣ ಭಾಷ್ಯದಲ್ಲಿಯೂ, ಗಂಗಾನದಿಯ ಜಲದಲ್ಲಿಯೂ, ವಿಷ್ಣುವಿನಲ್ಲಿಯೂ ಯಾರು ಪ್ರವೇಶ ಮಾಡುತ್ತಾರೋ ಅವರಿಗೆ ಪಾವಿತ್ರ್ಯತೆ ಉಂಟಾಗುತ್ತದೆ.'

ಕೊನೆ

ಈತ ಬಹು ದೊಡ್ಡ ಕವಿ; ವಿದ್ವಾಂಸನೂ ಹೌದು. ಇವನ ಕಾವ್ಯವನ್ನು ಹಿಂದಲ ತಲಮಾರಿನ ರಸಿಕರು ಬಾಯಿಪಾಠ ಮಾಡುತ್ತಿದ್ದರು. ಇವನ ಮಾತು, ಸೂಕ್ತಿ ಮುಕ್ತಕ. ಸಂಸ್ಕೃತ ಭಾಷೆಯ ಬಿಗಿಗೆ ಇವನ ಕಾವ್ಯ ಉದಾಹರಣೆ. ಈತ ಭಾರತವನ್ನೆಲ್ಲ ಪರ್ಯಟನ ಮಾಡಿ ಎರಡು ಗಂಧರ್ವ ದೇವತೆಗಳ ಸಂಭಾಷಣೆಯ ನೆಪದಿಂದ, ಭಾರತದ ನಾನಾ ಭಾಗದ ಜನರ ವೇಷ ಭೂಷಣ ಆಚಾರ ಗುಣ ದೋಷಗಳನ್ನು ಪರೀಕ್ಷಿಸಿ ಗುಣಗಳೇ ಹೆಚ್ಚೆಂದು ತೀರ್ಮಾನಿಸಿದ್ದಾನೆ. ಇವನಿಗೆ ನಮ್ಮ ದೇಶ, ನಮ್ಮ ಜನ, ನಮ್ಮ ನದಿ, ನಮ್ಮ ಬೆಟ್ಟಗಳು ಸಮುದ್ರ ಎಲ್ಲವೂ ಪ್ರಿಯ. ನಮ್ಮ ಆಕಾಶ ನಮ್ಮ ಸಮುದ್ರ ಇವುಗಳಿಗೆ ಇವನು ಅನೇಕ ಸಲ ಹೋಲಿಕೆ ಮಾಡಿದ್ದಾನೆ. ಗುಣ ಚೆನ್ನಾಗಿ ಹೊರಬರಲೆಂದು ದೋಷಗಳನ್ನು ಉದ್ಘಾಟನೆ ಮಾಡಿದ್ದಾನೆ.

ಗಂಗಾ ಝುರೀ ಪರಿಚಿತಾಂಘ್ರಿ ಜಗನ್ನಿದಾನಂ
ರಂಗಾಧಿಧಾಮ ಸು ಚಿರಾತ್ಕೃತ ಸನ್ನಿಧಾನಂ
ವಿಶ್ವಂ ಸ್ವತೋಃ ವಿಶದಮೇವ ವಿಲೋಕಮಾನಂ
ವಂದಸ್ವವಸ್ತು ವರದಾರ್ತಿ ಹರಾಭಿಧಾನಂ

ಗಂಗಾನದೀ ಪ್ರವಾಹ ಝುರಿ ಹೊರಟ ಪಾದವುಳ್ಳ, ಗಂಗಾನದಿಗೆ ಪರಿಚಿತವಾಗಿರುವ ಬೇರುಗಳಂತೆ ಜಡೆಯುಳ್ಳ ಶ್ರೀರಂಗ ಜಂಬುಕೇಶ್ವರ ಮೊದಲಾದ ಸ್ಥಾನಗಳಲ್ಲಿ ಬಹಳ ಕಾಲದಿಂದ ಪ್ರತ್ಯಕ್ಷವಾಗಿ ಜಗತ್ತನ್ನು ರಕ್ಷಿಸಿ ಹರಿಹರ ಮುಂತಾದ ಹೆಸರುಗಳಿಂದ ಬೆಳಗುವ ಜಗತ್ಕಾರಣ ವಸ್ತುವಿಗೆ, ನಮಸ್ಕಾರ.

"ಯಾರನ್ನೂ ಯಾರೂ ಪೂರ್ಣವಾಗಿ ನಿಂದಿಸಬಾರದು. ಪಾಪದ

ಬಲಿಮೆಯುಳ್ಳ ಕಲಿಯುಗದಲ್ಲಿ ಸಹ ಯಾರೂ ಸಂಪೂರ್ಣ ನಿಂದಾರ್ಹರಲ್ಲ. ಗುಣಗಳನ್ನು ಬಲಪಡಿಸುವುದಕ್ಕಾಗಿಯೇ ಪೂರ್ವಪಕ್ಷದ ದೋಷಗಳನ್ನು ಹೇಳಿದುದು." ಎನ್ನುತ್ತಾನೆ.

ಕೊನೆಯಲ್ಲಿ ವಿನಯಶೀಲನಾದ ಕವಿ ಹೀಗೆ ಮುಕ್ತಾಯಗೊಳಿಸುತ್ತಾನೆ.

ಪ್ರಕಾಶ ದೋಷ ಪ್ರಚುರೆ ಮದೀಯೆ
ಗ್ರಂಥೇಪ್ಯಮುಷ್ಮಿನ್ ಕರುಣಾನುಬಂಧಾತ್
ಪ್ರಸಾದವಂತೋನ ಕೃಶಾನವಂತು
ಪರಂತು ವಿಶ್ವಾಸವಂತು ಸಂತಃ

[ಈ ಗ್ರಂಥದಲ್ಲಿ ಸ್ಪಷ್ಟವಾಗಿ ದೋಷಗಳಿವೆ. ಬಲ್ಲವರು ಕರುಣಾಳುಗಳಾಗಿ ಗುಣ ಗ್ರಹಣ ಕೌತುಕಿಗಳಾಗಬೇಕೆಂದು ಬೇಡುತ್ತೇನೆ.]

ರತ್ನಾಕರ

—★—

ರತ್ನಾಕರನು "ಕನ್ನಡದಲ್ಲಿ ಒಂದು ಕಥೆ ಹೇಳುವೆನು" ಎಂದೇ ಪ್ರಾರಂಭಿಸುತ್ತಾನೆ. ಹೃದಯಂಗಮವಾಗಿ ಮನೋರಂಜಕವಾಗಿ, ಬಿದಿರಿನಂತಲ್ಲ, ಕಬ್ಬಿನಂತೆ, ರಳಕುಳ ಶಿಥಿಲ ಸಮಾಸದ ಗರಡಿಗಳನ್ನು ಬದಿಗೊತ್ತಿ, ಹದಿನೆಂಟು ವರ್ಣನೆಗಳಲ್ಲಿ ಸ್ವಲ್ಪ ವಿಕಳವಾದರೂ ದೋಷವಿಲ್ಲವೆಂದುಕೊಂಡು, ಶಬ್ದದೋಷಗಳೊಮ್ಮೆ ಸುಕಥೆಗೆ ಬಂದರೂ ಧರ್ಮ ಮಾಸುವುದಿಲ್ಲವೆಂದುಕೊಂಡು, ಎಲ್ಲರೂ ಒಪ್ಪುವಂತೆ ಈ ಹಾಡುಗಬ್ಬವನ್ನು ಹೇಳುವೆನೆಂದು ಹೇಳಿಕೊಂಡಿದ್ದಾನೆ. ಕೆಲವು ಕವಿಗಳಲ್ಲಿರುವಂತೆ, ಇವನ ಹಾಡುಗಬ್ಬದ ಸಾಂಗತ್ಯದಲ್ಲಿ, ಇವನ ಸ್ವಂತ ಪ್ರಶಸ್ತಿ ಮಹಿಮೆಯ ಭೇರಿರವ ಅಟ್ಟಹಾಸಗಂಟೆಗಳು ಇಲ್ಲ. ಇವನು ಹೇಳಿಕೊಂಡಿರುವ ಗುರಿ ಮಿತವಾದುದು. "ಅತಿ ಮೃದುವಾಗಿ ನಿಮಗೊಂದು ಸುಕಥೆಯ ಹೇಳುವೆನು. ಕೇಳಿದಿರಾದರೆ ನಿಮಗೆ ಆತ್ಮಸುಖ. ಧ್ಯಾನಕೆ ಬೇಸರಾದಾಗ, ನಿನ್ನನಾದಿಯು ಮಾಡಿಕೊಂಡು ಉಚಿತಕ್ಕೆ ತಕ್ಕಷ್ಟು ಪೇಳ್ವೆ. ಆಧ್ಯಾತ್ಮ ಎನಗೆ ನಿಚಿತ ಪ್ರಯೋಜನ "ಧ್ಯಾನವೆಂಬ ಕಷ್ಟವಾದ ಸಾಧನೆಯಿಂದ ಮಾತ್ರ ಸಾಧ್ಯವಾಗುವ" ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ, ಕಿರಣ ಸುಜ್ಞಾನ ಪ್ರಕಾಶ, ಸುರರ ಮಣಿ ಮಕುಟ ರಂಜಿತ ಚರಣಾಬ್ಜ"ನಲ್ಲಿ ಶರಣಾಗತಿಯನ್ನು ಭವಿಗಳಿಗೆ ಸುಖಸಂಕಥಾ ವಿನೋದದಲ್ಲಿಯೇ ನಾನು ಒದಗಿಸುತ್ತೇನೆ, ಎಂದು ಹೇಳಿ ಲಲಿತವಾಗಿ ಮೃದು ಮಧುರವಾಗಿ ಆಧ್ಯಾತ್ಮವನ್ನು ಒಳಗಿಟ್ಟು, ಶೃಂಗಾರ ತ್ಯಾಗ ಭೋಗದ ಮೋಡಿ ಮೆರೆಯೆ ಕಥೆಗೆ ವಾಚಕರನ್ನು ಸಿದ್ಧಗೊಳಿಸುತ್ತಾನೆ. "ಸರಸ್ವತಿಯ ಕವಾಟವನ್ನು ನಾನೇ ಒಡೆದವನು" ಎಂಬ ಹೆಮ್ಮೆ ಇಲ್ಲ. "ನನಗೆ ತೋರಿದಂತೆ ಹೇಳುತ್ತೇನೆ. ಬೇಕಾದರೆ ತಿಳಿದುಕೊಳ್ಳಿ, ಇಲ್ಲವಾದರೆ ಬಿಡಿ. ಕಾಲಕ್ಕೆ ಕೊನೆಯಿಲ್ಲ. ಯಾವನೋ ಒಬ್ಬ ನನ್ನ ಸಮಾನಧರ್ಮದವನು ಬಂದು ತಿಳಿದುಕೊಳ್ಳುತ್ತಾನೆ" ಎಂಬ ಭವಭೂತಿಯ ಕೆಚ್ಚೂ ಕಾವೂ ಇಲ್ಲ. "ನಾನು ಸಾಮಾನ್ಯನಿರಬಹುದು. ಆದರೆ ಕಾವ್ಯಪತಿ ಚಕ್ರಿ, ಸಾಮಾನ್ಯನಲ್ಲ. ಕಾವ್ಯಕೃತನ ದೋಷವ ನೋಡಬೇಡ" ಎಂಬ ವಿನಯವನ್ನೇ ಮೆರೆದಿದ್ದಾನೆ.

ಈ ವಿನಯ ಕವಿಯ ಲೋಕಾನುಭವದ ಗುರುತು. ಒಬ್ಬ ಕಾಳಿದಾಸನಲ್ಲದೆ ಉಳಿದವರು ಕವಿಗಳೇ ಎಂದು ಹೇಳುವ ಜಗತ್ತಿನಲ್ಲಿ, ಕಾಳಿದಾಸನೇ ನನ್ನಲ್ಲಿ ಗುಣವಿದ್ದರೆ ಸ್ವೀಕರಿಸಿ ಎಂದು ವಿನಯದಿಂದ ಹೇಳುವಾಗ, ಯಾವಕವಿ ಉಳಿಯಬಹುದು, ಯಾವ ಕವಿ ಹೋಗಬಹುದು! ಇದು ರತ್ನಾಕರನಿಗೆ ಚೆನ್ನಾಗಿ ಗೊತ್ತು. ಆದುದರಿಂದ ಆತ, ಆಚಂದ್ರಾರ್ಕಕೀರ್ತಿಕಾವ್ಯ ಬರೆಯುವೆ ನೆಂಬ ಆಟಾಟೋಪ ಹೂಡಲೆ ಇಲ್ಲ. "ಓಂನಮ ಎನ್ನಿ, ಜಿನಂನಮ ಎನ್ನಿ, ಸಿದ್ಧಂ ನಮೋ ಹಂಸಂ ನಮೋ ಎನ್ನಿ. ಹಾಗೆಂದ ಮೇಲೆ ಈ ಕಥೆಗಿಚ್ಛಾಮಿ ಎನ್ನಿ. ಚೆನ್ನಾಗಿ ಕೇಳಿ."

ನೀವು ಕೇಳುತ್ತಿರುವುದು ಕಥೆ. ಗಣನೆಯಿಲ್ಲದೆ ರಾಜ್ಯ ಸುಖದೊಳೋಲಾಡಿ ಧಾರಣಿಮೆಚ್ಚೆ ಜಿನಯೋಗಿಯಾದ ಯೋಗಿಭೋಗಿಯ ಕಥೆ. ತೆರೆ ತೆರೆಯಿತು. ನೋಡಿ, ಸಂಜೆಗೆಂಪೊಲೆವಂತೆ ತೆರೆತೊಲಗಿತು; ಕಣ್ಗೆ ಕಂಜಾಕ್ಷಿಯರು ಕಾಣಿಸಿದರು. ರಂಜಿಪನಳಿತೋಳ್ಗಳೆತ್ತಿ ಸುವರ್ಣ ಪುಷ್ಪಾಂಜಲಿ ಮಾಡಿದರೊಡನೆ; ನಡುವಿನೊಳಿಟ್ಟ ಹಸ್ತಗಳು, ಪಸರಿಸಿದತೊಡೆ; ಮಿಡುಕದೆ ನಿಲುವಿನ ರೇಖೆ ದೋರಿದರು ಮುಪ್ಪೊಡವಿಯಂದವ ತೋರುವಂತೆ; ಪಚ್ಚೆಯ ಜಲ್ಲಣ ಪಚ್ಚೆವರ್ಣದ ಕಾಸೆ ಬೆಚ್ಚ ಮುತ್ತಿನ ಮೊಲೆಗಟ್ಟು ಅಚ್ಚಜವ್ವನೆಯರಿದ್ದರು, ನೋಡುವವರ ಮನ ಹುಚ್ಚೆದ್ದು ಧರೆಗೆ ಬೀಳ್ವಂತೆ; ಹಜ್ಜೆಸರಿದು ಮೆಲ್ಲ ನೊಲೆದರು, ಕಾಲ ಹೊಂಗೆಜ್ಜೆ ಝಲಿ ಝಲಿರೆನಲು, ಸಜ್ಜುಕ ಮೊಲೆಯ ಪೆಂಗಳು ಮುಂದೆ ನಡೆದರು ಪಜ್ಜಳಿಸುತ ಮುಖಕಾಂತಿ; ನೋಟದೊಳು ಕೊಂದರೊಮ್ಮೆ ನೋಟಕರನು, ನಾಟಿಸಿ ನಸು ನಗೆಯಿಂದ, ಲೂಟಮಾಡಿದರು ಮೈಯೊಲೆದಾಟದಿಂದ ಎದೆಕೋಟೆಯ ನೇನೆಂಬೆ; ಎತ್ತ ನೀಡಿತು ಹಸ್ತ ವತ್ತ ದೃಷ್ಟಿಗಳಲ್ಲಿ, ಚಿತ್ತದಲ್ಲಿಯೆ ಭಾವರಸವು; ತತ್ತತ ತಿತ್ತಿತಿ ಯಾರಿ ಯಾರೆ ಯೆನಲತ್ತಿತ್ತಲೊಲೆದು ಹರಿದಳು, ಮೋರೆಯೊಲೆದು ನೋಡಿ ನೃಪ ಸುತರಿಗೆ ಹುಬ್ಬು ಹಾರಿಸುವಳು ನಗುತ, ಹಾರುವುದೊಜನವರೆದೆ, ತನ್ನ ತೋಳೆತ್ತಿ ನೀರೆ ಕೊಲ್ಲಣಿಸಿ ಸುತ್ತುವಳು"

ಈ ನಾಟ್ಯವನ್ನು ನೋಡುತ್ತಿರುವವರು ಯಾರು? ಆರು ಖಂಡಗಳ ಚಕ್ರವರ್ತಿಯಾಗಿ ಭೋಗದೊಳಿದ್ದರೂ ಭೋಗದ ದಾಸನಾಗದೆ ತಾವರೆ ಮೇಲಿನ ನೀರಿನಂತೆ ನಿರ್ಲಿಪ್ತನಾಗಿರುವ ಚಕ್ರಿ. ಆತನ ರಾಣಿಯರು.

ಅವರ ಹೆಸರು ಏನು ಸೊಗಸು. ಆ ಹೆಸರುಗಳನ್ನು ಉಚ್ಚರಿಸುತ್ತಿದ್ದರೆ ಬಾಯಲ್ಲಿ ಜೇನು ಸೋರುವುದು. ವಿಮಲಾಜಿ, ಹೊನ್ನಾಜಿ, ಸುಮನಾಜಿ, ಮಧುರಾಜಿ, ರನ್ನಾಜಿ, ಚೆನ್ನಾಜಿ, ಮುಕುರಾಜಿ, ಚಿನ್ನಾಜಿ, ಕುಸುಮಾಜಿ, ಕಾಂತಾಜಿ, ಕುಸುಮಗಂಧಾಜಿ, ಸುಖಾಜಿ, ಶಾಂತಾಜಿ, ಅಂತರಂಗಾಜಿ, ಮಧು ಮಾಧವಾಜಿ, ವಸಂತಾಜಿ, ಕುರಂಗಲೋಚನೆ, ಪುಷ್ಪಮಾಲೆ, ಭೃಂಗ ಲೋಚನೆ, ನೀಲಲೋಚನೆ, ಚಂದ್ರಮತಿ, ಶೃಂಗಾರವತಿ, ಗುಣವತಿ ಸಾರಂಗ ಲೋಚನೆ, ವೀಣಾದೇವಿ, ವಿದ್ಯಾದೇವಿ, ಶ್ರೀದೇವಿ, ಕಲ್ಯಾಣಿದೇವಿ, ಸುರದೇವಿ ಮಲ್ಲಿಕಾದೇವಿ, ಉತ್ಸಾಹಾದೇವಿ, ಪದ್ಮಲತೆ, ಲಲಿತಾಂಗಿ, ಕುಂದಲತೆ, ರತ್ನಮಾಲೆ, ಕಾಂತಿಮಾಲೆ, ರೂಪಾಣಿ, ಕುಸುಮಿ, ಮಧುವಾಣಿ ಇಂತಹ ನಾಯಕ ನಾಯಕಿಯರ ಈ ಕತೆಯನ್ನು ಕವಿ ಹಿತವಾಗಿ ಸುಖವಾಗಿ ಮೃದು ವಾಗಿ ಹೇಳುತ್ತಾನೆ. ನಮಗೆ ಬೇಕಾದ ರೀತಿಯಲ್ಲಿಯೇ ಹೇಳುತ್ತಾನೆ. ನಮಗೆ ತಿಳಿಯದೆಯೇ ಒಂಬತ್ತು ಸಾವಿರ ಸಾಂಗತ್ಯ ಪದ್ಯಗಳು ಸಾಗಿ ಹೋಗುತ್ತವೆ. ನಾವು ಕತೆಯಲ್ಲಿ ತಲ್ಲೀನರಾಗುತ್ತೇವೆ. ಕವಿ ಕೃತಕೃತ್ಯ ನಾಗುತ್ತಾನೆ.

ಭರತ, ಹದಿನಾರನೆಯ ಮನು. ಪ್ರಥಮ ಚಕ್ರೇಶ್ವರ ಯೋಗದಲ್ಲಿ, ಲೀನ ವಾಗುವುದು ಅವನ ಸ್ವಾಭಾವಿಕ ಲಕ್ಷಣ. ಆದರೆ ಆ ಪರಿಪಕ್ವ ಪಡೆಯು ವುದೂ ಸ್ವಾಭಾವಿಕವೇ ಆಗಿರಬೇಕು. ಇದರಲ್ಲಿ ಬಲಾತ್ಕಾರ ಕೃತಕತೆ ಇರ ಬಾರದು. ಯೋಗ ಭೋಗಗಳು ಒಂದೇ ನಾಣ್ಯದ ಎರಡು ಮುಖಗಳು. ಭೋಗವನ್ನು ಪೂರ್ಣವಾಗಿ ಅನುಭವಿಸದವನ ಯೋಗ, ಪೂರ್ಣವಾಗುವುದಿಲ್ಲ. ಭೋಗ ನೀಚವಲ್ಲ. ಅದು ಕಾಯಿ; ಯೋಗ ಹಣ್ಣು. ಭೋಗ, ಮೊದಲ ಹೆಜ್ಜೆ. ಯೋಗ ಎರಡನೆಯ ಹೆಜ್ಜೆ. ಭೋಗಿ, ಭೋಗಗಳ ದಾಸನಾಗ ಬಾರದು "ಕಾಮಿಸಿ ಭೋಗಿಸುವಗೆ ಕರ್ಮಬಂಧ; ನಿಪ್ರೇಮ ಭೋಗಿಗೆ ಬಂಧವುಂಟೆ?" ಹುಟ್ಟಿದವನು ಸಂಸಾರದಲ್ಲಿ ಬಾಳಲೇಬೇಕು. ಇಲ್ಲಿಂದ ಕದ್ದು ಹೋಗುವುದು ಸಾಧ್ಯವಿಲ್ಲ. ಆದರೆ ಸಂಸಾರದಲ್ಲಿ ಬಾಳುವುದಕ್ಕೆ ಕೌಶಲ್ಯ ಬೇಕು. ದಕ್ಷತೆ ಬೇಕು. ವ್ಯಾಮೋಹ ರಹಿತನಾಗಬೇಕು. "ನಾಗಲೋಕ ದೊಳಿದ್ದರೇನು ಗರುತ್ಮಗೆ. ನಾಗರ ಬಾಧೆಗಳುಂಟೆ? ಭೋಗದೊಳಿದ್ದರೇ ನಾತ್ಮ ವಿಜ್ಞಾನಿಗೆ ಭೋಗದಿಂದಿಹ ಕರ್ಮವುಂಟೆ?" ಎಂಬ ರೀತಿಯ

ಬಾಳನ್ನು ಲೋಗರ ಮುಂದೆ ಪ್ರಕಟಿಸಬೇಕು. ಹೀಗೆ ಪ್ರಕಟಿಸುವುದರಲ್ಲಿ ರತ್ನಾಕರನು ಎದೆಗಾರಿಕೆಯನ್ನೇ ತೋರಿದನು. ಅಂಥಿಂತವರ ಭೋಗವನ್ನು ತೋರಿಸದೆ, ತೀರ್ಥಂಕರನಿಗೆ ಸಮಾನನಾಗಿ ಪಂಚಕಲ್ಯಾಣಗಳಿಗೆ ಅರ್ಹನಾದ ಚಕ್ರಿಯ ಭೋಗಗಳನ್ನೇ ತೋರಿಸಿದನು. ಸಂಪ್ರದಾಯಾನುಸಾರವಾದ ಮಾರ್ಗದಲ್ಲಿ ಹೇಳದೇ ಇರುವ ಈ ಭೋಗಗಳನ್ನು, ಇಷ್ಟು ಉಜ್ವಲವಾಗಿ, ಭೂಲೋಕದ ಭೋಗ ಸ್ವರ್ಗದ ಭೋಗದ ಹತ್ತರಷ್ಟು, ನೂರುಮಡಿ, ಎಂದು ಹೇಳಿ, ಭೋಗದಿಂದ ಯೋಗಕ್ಕೆ ರೋಗವಿಲ್ಲ ಎಂದು ಸಾರಿದನು. ಕವಿಯ ಕೈ ಚೆನ್ನಾಗಿ ಪಳಗಿರುವುದು ಈ ಸಂಸಾರ ವರ್ಣನೆಯಲ್ಲಿ, ಜಿನಸೇನ ಪಂಪರು ಮಾಡದಿದ್ದ ಈ ಕಥನ ಭಾಗವನ್ನು, ಈತ ಆರಿಸಿಕೊಂಡಿದ್ದಾನೆ. ರತ್ನಾಕರನ ಮಾತಿನ ಸೊಗಸು ವರ್ಣನೆ. ಪಾತ್ರ ನಿರೂಪಣೆ, ಸಂಸಾರದಲ್ಲಿ ಪರಸ್ಪರ ನಡವಳಿಕೆ, ಗಂಡ ಹೆಂಡರು, ಅತ್ತೆ ಸೊಸೆ ಸವತಿಯರು ನಡೆದುಕೊಳ್ಳಬೇಕಾದ ರೀತಿ, ಅಲ್ಲಿ ಬರುವ ಎಡರುಗಳು ಅವುಗಳನ್ನು ದಾಟುವುದು – ಭೋಗವಿಜಯ ರತ್ನಾಕರನ ಪ್ರತಿಭೆಯ ಬೆಳಕು, ಭರತೇಶ ವೈಭವದ ಗುರಿ ಕಾವ್ಯದೃಷ್ಟಿಯಿಂದ ಭೋಗ ವಿಜಯದಲ್ಲಿಯೇ ಸಾಧಿತವಾಗಿದೆ ಎಂದು ಹೇಳಬಹುದು.

ಹೀಗೆ ಜೈನ ಕತೆಗಳನ್ನು ಹೇಳುವ ಸಂಪ್ರದಾಯವನ್ನು ಬದಲಾಯಿಸಿ, ಭೂಮಿಯಲ್ಲಿ ಚಕ್ರಿಯ ಭೋಗವನ್ನು ವರ್ಣಿಸುವ ಹೊಸ ಮಾರ್ಗವನ್ನು ಹಿಡಿಯುವುದರಲ್ಲಿ ರತ್ನಾಕರ, ತನ್ನಜಾಣ್ಮೆಯನ್ನೂ ಲೋಗರ ಅಭಿರುಚಿಯನ್ನು ತಾನು ಚೆನ್ನಾಗಿ ಅರಿತಿರುವುದನ್ನು ತೋರಿಸಿಕೊಂಡಿದ್ದಾನೆ. ಒಬ್ಬ ಸಂಸಾರಿಯ ಬಾಳು. ಹೇಗೆ ಸಮರಸವಾಗಿರಬೇಕು? ಅದಕ್ಕೆ ಆತನಲ್ಲಿರಬೇಕಾದ ಚಾ ು ರ್ಯವೇನು? ಅವನು ಅವರಲ್ಲೆಲ್ಲಾ ಹೇಗೆ ನಡೆದುಕೊಳ್ಳಬೇಕು? ಇದರಿಂದ ಆತನ ಬಾಳು ಹೇಗೆ ಸುಂದರವೂ ಪೂರ್ಣವೂ ಆಗುವುದು, ಎಂಬುದನ್ನು ಕವಿ ಹೃದಯಂಗಮ ಮಾಡುವುದರಲ್ಲಿ ಜಯಶಾಲಿಯಾಗಿದ್ದಾನೆ. ಭರತ, ಜನಕ ಮಹಾರಾಜನಂತೆ; ಶ್ರೀ ಕೃಷ್ಣನಂತೆ; ತೊಂಭತ್ತಾರು ಸಾವಿರ ರಾಣಿಯರು: ಒಬ್ಬಳಿಗಿಂತ ಒಬ್ಬಳು ಚೆಲುವೆ, ಭರತ ಎಲ್ಲರಲ್ಲಿಯೂ ಶ್ರೀ ಕೃಷ್ಣನಂತೆ ಸಮಾನ ಪ್ರೇಮದಿಂದಲೇ ನಡೆದುಕೊಳ್ಳುತ್ತಾನೆ. ದಶದಿಕ್ಕುಗಳಲ್ಲಿಯೂ ರಾಜ್ಯವನ್ನು ವಿಸ್ತರಿಸಿ ಶತ್ರುಗಳನ್ನು ನಿರ್ಮೂಲನಮಾಡುತ್ತಾನೆ. ಕೊನೆಯಲ್ಲಿ ಆತ್ಮಸಾಕ್ಷಾತ್ಕಾರವನ್ನು ಹೊಂದುತ್ತಾನೆ. ಆಸೆಯಿಲ್ಲ, ಅಸೂಯೆ ಇಲ್ಲ, ಕಾತರವಿಲ್ಲ.

ಕೊರತೆ ಇಲ್ಲ. ಜೀವನ್ಮುಕ್ತನಾಗಿ ಸಂಸಾರವನ್ನೇ ಅನುಭವಿಸುತ್ತಾ "ನಿನ್ನ ವರ್ತನವಿದು ಪರಮರಹಸ್ಯ ಇನ್ನೊಬ್ಬರೊಳು ಕಾಣ್ಬೊಡಿಲ್ಲ. ನಿನ್ನ ನಡೆಯು ನಿನ್ನ ನುಡಿಯು ನಿನ್ನೊಳೆ ಕಂಡೆ" ಎನ್ನುವ ರೀತಿ ಬಾಳುತ್ತಾನೆ. ಶೃಂಗಾರ ಪೂರ್ಣವಾಗಿರುವ ಭರತನ ಬಾಳು, ಆಧ್ಯಾತ್ಮದ ಅನ್ವೇಷಕರಿಗೂ ಆದರ್ಶ. ಇದು ಬರಿಯ ಮೊಲೆಮುಡಿ ಮುಖ ನಖ ಕಟಿ ತುಟಿಯ ಕಥೆಯಲ್ಲ. ಕೊಬ್ಬಿದ ಪೊರವಾರು, ಪಿಡಿನಡು, ಕೊಂಕಿದ ಹುಬ್ಬು, ಮದವೆದ್ದ ಜವ್ವನ, ನಡುಸಣ್ಣ, ಮುಡಿತೋರ ತೊಡೆನುಣ್ಪು ಮೊಲೆಗಳಿಟ್ಟೆಡೆ ಎಂದರರೆ ಬಾಯ್ಬಿಟ್ಟು ಕೇಳು ವರು. ಆದರೆ "ನುಣ್ದೊಡೆಯೆನೆ ರೋಮಜುಂಮೆಂದು, ನೇರಿಲ ಪಣ್ದುಟಿ ಯೆನೆ ಜಿಹ್ವೆಯೊಸರಿ ರಣಕತೆ ಜಾರಚೋರರ ಕಥೆ ಸ್ತ್ರೀಕಥೆ ಗಣಿಕಾಕಥೆಗೆ ಎದೆ ಸೋಲುವವರೂ" ಕೂಡ ಭರತನ ಕಥೆಯನ್ನು ಆದರದಿಂದ ಆಲಿಸು ವರು.

ಭರತನ ರಾಣಿಯರೂ ಭರತನಿಗೆ ಅನುರೂಪರಾದವರೇ, ಪ್ರತಿಯೊ ಬ್ಬರೂ ಚಕ್ರವರ್ತಿಯ ಜೀವನ ಸಾಮರಸ್ಯಕ್ಕೆ ಕುಂದು ಉಂಟಾಗದಂತೆ ನಡೆ ದುಕೊಳ್ಳುತ್ತಾರೆ. ಪ್ರತಿಯೊಬ್ಬಳಿಗೂ ತನ್ನ ಶಕ್ತಿ, ತನ್ನ ಗಾಡಿ ತನ್ನ ಮೋಡಿ ಮಾಟ ಉಂಟು. ಆದರೆ ಅವೆಲ್ಲಾ ಚಕ್ರಿಯ ಬಾಳು ಸುಖಮಯವಾಗುವು ದಕ್ಕೇ ಹೊರತು "ಸೊಕ್ಕಿಸುವ ಸೌಭಾಗ್ಯಕಲ್ಲ." ಅವರೇನು ಲೋಕದ ಹೆಡ್ಡ ಹೆಂಗಳೆ?" ಚಂಚಲಾಕ್ಷಿಯರು ಮಿಂಚಿನ ಲತೆಗಳಂತೆ ಅತ್ತಿತ್ತ ಸುಳಿದು ಭರತನನ್ನು ಉಪಚರಿಸುತ್ತಿದ್ದರು. ಉಪ್ಪರಿಗೆಯ ಸಂಧಿ ಎಂಬುದರಲ್ಲಿ ಕವಿ ಅದ್ಭುತ ಶಕ್ತಿಯಿಂದಲೇ ಅರಸನ ದಾಂಪತ್ಯ ಜೀವನ ಸೌಂದರ್ಯವನ್ನು ಚಿತ್ರಿಸಿದ್ದಾನೆ. ಆ ಭಾಗವನ್ನು ಕಾವ್ಯದಲ್ಲಿ ಓದಿಯೇ ಆನಂದಿಸಬೇಕು. ರಾಜರನ್ನು ನೋಡಲು ರಾಣಿಯರೆಲ್ಲಾ ತವಕದಿಂದ ಹೊರಟಿದ್ದಾರೆ. ಒಬ್ಬಳು ಹೆಜ್ಜೆ, ಸ್ವಲ್ಪ ವೇಗವಾಗಿಕ್ಕಿದಳು "ಹರಿವುತಿದ್ದಪಳಿಗೆ, ಹರಿಹರಿ ಮುಂದೆ ನಿನ್ನರಸ ನೀವನು ದೊಡ್ಡ ಮೆಚ್ಚ" ಎಂದು ಹಾಸ್ಯ ಮಾಡಿದರು. ಆಕೆ ಇವರಿಗೆ ಸೋಲುವವಳೆ? "ಬರಲಾರದವರು ಏನುತಾನೆ ಹೇಳರು" ಎಂದು ಮಾರು ತ್ತರಗೊಟ್ಟಳು. ವೇಗವಾಗಿ ಹೋದರೆ "ಇವಳು ಎಷ್ಟುದಿನದಿಂದ ಕಾಣಳೋ ಪತಿಯ" ಎನ್ನುತ್ತಾರೆ. ಹಾಸ್ಯಮಾಡುವರಲ್ಲಾ ಎಂದು ನಿಧಾನವಾಗಿ ಹೋದರೆ "ಬರಲಾರಳವಳಿಗೆ ಕೈಗೊಡಿರಿ, ಎಡೆಯಲ್ಲಿ ಪಿರಿಯ ಹೊರೆ ಹೊತ್ತ

ವಳು, ಭರತಚಕ್ರೇಶಗೆ ಕೃಪೆಯಿಲ್ಲ,ನಾಡಕೆ ಬರಹೇಳಬಹುದೇ ನೋಡಿವಳಾ” ಎಂದೂ ಹಾಸ್ಯಮಾಡುತ್ತಾರೆ. ಒಬ್ಬ ಮುಗ್ಧೆ ಮೌನವಾಗಿ ಹೋಗುತ್ತಿದ್ದಾಳೆ. ಅದನ್ನು ನೋಡಿ “ಈಕೆಯೂ ಗಂಡನಂತೆ ಆತ್ಮಧ್ಯಾನದಲ್ಲಿದ್ದಾಳೆ” ಎನ್ನು ತ್ತಾರೆ. ಆ ಪ್ರೌಢೆ “ಧ್ಯಾನ ಗೀನವು ನೀವು ನಿಮ್ಮರಸನು ಬಲ್ಲಿರಿ, ನಾನೇನ ಬಲ್ಲೆನಾಗುಸುಟ” ಎನ್ನುತ್ತಾಳೆ. “ಅವ್ವಾ, ನೀವೇನನಾಡೀರಿ ಚಕ್ರವರ್ತಿಯ ಸುವ್ವಾಲೆ ನಾಡಿಸುವವರು” ಎನ್ನುತ್ತಾಳೆ. ಹೀಗೆ ಆ ಕಿನ್ನರಿಯರಂತಹ ಹೆಣ್ಣುಗಳು ಹಿಂದೆ ಉಳಿದರೆ, ಮುಂದೆ ಸುಮ್ಮನೆ ಬಂದರೆ, ಮಾತನಾಡಿದರೆ ಒಂದೊಂದು ಕಲ್ಪಿಸುತ್ತಾ ಚಕ್ರಿಯ ಮಂಟಪವೆಡೆ ಹೋಗುತ್ತಾರೆ. ಕವಿ ಈ ಚಿತ್ರದ ಸೊಗಸಿನ ಮೇಲೆ, ಎಲ್ಲಿಯೂ ಅಸೂಯೆ ಮಾತ್ಸರ್ಯ ಕಾಮದ ಮಸಿ ಬಳಿದಿಲ್ಲ. ಸವತಿಯ ಕಾಲಿನ ಮೇಲೆ ಒಂದು ಕಪ್ಪುಕಲೆ ಇದ್ದುದನ್ನು ಕಂಡು ಮತ್ತೊಬ್ಬಳು ಅದನ್ನು ಕೈಮುಟ್ಟಿ ತೊಡೆದಳು. ಆಕೆ “ಹಾಹಾ” ಎಂದು ಝುಂಕಿಸಿ “ಕಪ್ಪು ತೊಳೆದು ಕೊಳ್ಳೆಂದು ಹೇಳದೆ ತೊಡೆವರೆ ತಂಗಿ” ಎಂದಳು. ತೊಡೆದವಳು, “ಓಲಗ ಹತ್ತಿರವಾಯಿತು. ನಮ್ಮ ಮಾತು ಕೇಳುತ್ತೆ. ಸುಮ್ಮನೆ ಬನ್ನಿ ಅಕ್ಕ” ಎಂದು ಮಾತನ್ನು ನಿಲ್ಲಿಸಿದಳು.

ಭರತನ ಆ ಓಲಗದ ಸೊಗಸೇ-ಸೊಗಸು. ಅದು ಯಾವ ಇಂದ್ರಲೋಕದ, ಗಂಧರ್ವಲೋಕದ ವೈಭವ ಸೊಗಸಿಗೂ ಕಡಿಮೆಯಾದುದಲ್ಲ. ಅನೇಕ ನದಿಗಳು ಸಂಗಮದಲ್ಲಿ ಬಂದು ಲೀನವಾಗುವಂತೆ, ಭರತ, ಆ ರಾಣಿಯರ ಕೇಂದ್ರ. ಒಬ್ಬಳು ಅರಸಗೆ ಕೆಂಚಾಜಿ ಸರ ಕೊಡುವಾಗ, ಕೆಂಚಾಜಿ ಜುಗುಳಿತು. ಸಖಿಯರು,“ಕಾಣಿಕೆಯಲ್ಲಿ ಪುಷ್ಪಾಂಜಲಿ” ಎಂದರು. ಮತ್ತೊಬ್ಬ ಮುಗ್ಧೆ ನಾಚುತ್ತಾ ಬಂದು ಮಲ್ಲಿಗೆ ಸರ ಕೊಡುವಾಗ, ಮಲ್ಲಿಗೆ ಜಾರಿತು. ದೊರೆ “ಜಾರಿದರೇನು ಅದು ಎಮ್ಮಲ್ಲಿಗೆ” ಎಂದು ಸಮಾಧಾನ ಪಡಿಸಿ ದನು. ಕಡೆಗಣ್ಣ ಪ್ರಭೆಯಿತ್ತಲತ್ತಲೊಲೆದು ನೋಡೆ ಕುಡಿಮಿಂಚಿನಂತೆ ಒಬ್ಬಳು; ಮಲ್ಲಿಕಾಲತೆ ನಡೆದು ಬಂದಂತೆ ಒಬ್ಬಳು, ಜ್ಯೋತಿರ್ಲೋಕದ ಪೆಣ್ಣೋ ಎನೆ ಒಬ್ಬಳು, ಇಂತಹ ರಾಣಿವಾಸ. ಒಬ್ಬಳು ರಾಯನಿಗೆ ಮುತ್ತಿನ ಮಣಿ ಕಾಣಿಕೆ ಇತ್ತಳು. ಸಖಿಯು “ವದನ ವದನ ಸೋಂಕಿ ಮುತ್ತು ಕೊಡುವುದು ಲೋಕದೊಳುಂಟು, ಕರಯುಗ ಸೋಂಕಿ ಮುತ್ತೀವುದು ಚಿತ್ರ” ಎಂದು ಸಭೆಯನ್ನು ನಗಿಸಿದಳು. ಚಕ್ರವರ್ತಿ ಇವರೆಲ್ಲರಿಗೂ ಉಚಿತವ

ಮಾಡುವನು. ವಿರಸವ ಬೆಳೆಯಲು ಬಿಡನು. "ಸುಳಿವ ಮಾತ್ರದೊಳೆ ಮಾನಿನಿಯರ ಹೃದಯದ ಸುಳುಹು ಕಾಣ್ಬನು ಭಾವಿತಾತ್ಮ, ಸುಳಿಗುರುಳಿನೆ ಸೊಬಗೆಯರ ತನ್ನ ಸುತ್ತ ಸುಳಿದಾಡಿಸುವನು, ಸೋಲದೊಳು; "ತನಗೆ ಒಬ್ಬಳಲ್ಲಿ ಪಕ್ಷಪಾತವಿದ್ದರೂ ಅದನ್ನು ತೋರಿಸುವುದಿಲ್ಲ" ಒಬ್ಬ ಪುರುಷ ಒಬ್ಬ ಸತಿಯೊಳಿಪ್ಪಂತೆ, ಉಬ್ಬಸವಿಲ್ಲದೆ ಎಲ್ಲರೊಡನೆಯೂ ಇರುವನು. ರಾಣಿಯರನ್ನು ಒಲಿಸುವನು; ಅವರ ಇಚ್ಛೆ ಸಲಿಸುವನು." ಆದರೆ ಚಕ್ರಿಯ ಧ್ಯಾನ ಬೇರೆ "ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ, ಸೊಕ್ಕಿದಂತಿಹನಲ್ಲಿ ಸೊಕ್ಕ, ಠಕ್ಕನಂತಿಹನದು ಠಕ್ಕಲ್ಲ, ನಿಜವ ಕಣ್ಣಿಕ್ಕಿ ಕಂಡವನ ಲೀಲೆ" ಈತನ ನಡೆ ನುಡಿ, ರತಿ ಸುಖ, ಶೃಂಗಾರ ನೋಡಿದರೆ ಆಧ್ಯಾತ್ಮಕ್ಕೆ ಇದು ಮಾರ್ಗವೇ? ಎಂದು ತೋರುವುದು." ಆರ್ಗೆ ತಿಳಿಯಲಹುದು ಆತ್ಮವಿಜ್ಞಾನಿಯಂತರ್ಗತವನು? ಜಿನಬಲ್ಲ"

ಆ ರಾಣಿಯರು ರಾಜನಿಗೆ ಅನುರೂಪರಾದ ಪತ್ನಿಯರಾಗಿದ್ದಂತೆ ಸಂಸಾರದಲ್ಲಿ ಅತ್ತೆಗೆ ಅನುರೂಪರಾದ ಸೊಸೆಯರಾಗಿದ್ದರು. ಭರತ, ದಿಗ್ವಿಜಯಕ್ಕೆ ಹೊರಟಾಗ, ಆತನ ಜತೆಯಲ್ಲಿ ಸತಿಯರೆಲ್ಲರೂ ಹೊರಟರು. "ಅತ್ಯಮ್ಮನ ಮೆಲ್ಲಡಿಯ ಮತ್ತೆ ಕಾಣುವ ತನಕ" ಆಕೆಯ ಜ್ಞಾಪಕಕ್ಕಾಗಿ ಪ್ರತಿಯೊಬ್ಬ ರಾಣಿಯೂ ಒಂದೊಂದು ವ್ರತ ಕೈಕೊಂಡಳು. ಉಂಬ ರಸಗಳಲ್ಲಿ, ಪುಷ್ಪಗಳಲ್ಲಿ ತುಂಬುಲದು ಕೂಲಗಳಲ್ಲಿ ಒಬ್ಬೊಬ್ಬರು ಒಂದೊಂದನ್ನು ತೊರೆದರು. ಒಬ್ಬಳು, ನಾನು ಮಲ್ಲಿಗೆ ತೊಡೆ ಎಂದಳು. ಒಬ್ಬಳು, ಜಾಜಿ ಒಲ್ಲೆನೆಂದಳು. ಮತ್ತೊಬ್ಬಳು ಮಲ್ಲೆ ಬೇಡ ಎಂದಳು. ಒಬ್ಬಳು ರಾಣಿ, ಚಿಲುಪಾಲು, ಒಬ್ಬಳು ಪೇಣಿ, ಒಬ್ಬಳು ಗೋರೋಜನ, ಒಬ್ಬಳು ಕಸ್ತೂರಿ, ಒಬ್ಬಳು ಹೊಸಸೀರೆ, ಕೈರಗುಳಿಗೆ ನೊರೆಯಡಿಕೆ ಮುತ್ತಿನಸುಣ್ಣ, ನೇರದ ಚವರಿ, ಹೀಗೆ ಒಬ್ಬೊಬ್ಬರು ಒಂದೊಂದನ್ನು ಬಿಟ್ಟರು. ಸಂಸಾರದಲ್ಲಿ ಅತ್ತೆ ಸೊಸೆಯರು ಹೇಗೆ ನಡೆಯಬೇಕೆಂಬ ಚಿರಕಾಲದ ಸಮಸ್ಯೆಯನ್ನು, ರತ್ನಾಕರ ಪರಿಹರಿಸಿದ್ದಾನೆ. ಅವರಿಬ್ಬರಿಗೂ ಸಮಾನತೆ ಇರಬೇಕು. ಸೊಸೆಯರು "ಪತಿಯ ಪೆತ್ತಳ ಚರಣದಲ್ಲಿ" ಎರಗಿದಾಗ ಆಕೆ "ನನ್ನಣುಗನ ಕೂಡೆ ಲೀಲೆಯೊಳಾಡಿ ಬನ್ನಿರೆಂದು ಹರಸಿದಳು. "ನಮಗೆ ಬುದ್ಧಿ ಹೇಳಿ" ಎಂದು ಅವರು ಕೇಳಿಕೊಂಡಾಗ, ಬುದ್ಧಿಯ "ಜೇಲೇನು

ಪೇಳಲಿ. ನಿಮ್ಮ ಪತಿವೇಳ್ದ ಸೊಮ್ಮಿನೊಳಿಹುದದೇ ಬುದ್ಧಿ. ನೀವು ಜಾಡ್ಯೆಯರಲ್ಲ" ಎಂದಳು. ಪರಸ್ಪರವಾದ ಗೌರವ ಪ್ರೀತಿ, ಮುಖ್ಯವಾಗಿ ಸಮಾನತೆ, ಇದರಿಂದ ಮಾತ್ರ ಸಂಸಾರದಲ್ಲಿ ಅತ್ತೆಸೊಸೆಯರ ಸಮರಸವೇರ್ಪಡುವುದೆಂಬುದನ್ನು ಕವಿ ಚೆನ್ನಾಗಿ ತೋರಿಸಿದ್ದಾನೆ.

ರತ್ನಾಕರ ರಸಜೀವಿ. ಇವನ ಕಾವ್ಯ, ಪ್ರೀಯಳಾದ ಹೆಂಡತಿಯ ಸಂಸಾರದಂತೆ ಅಚ್ಚುಮೆಚ್ಚು. ಅದರಲ್ಲಿ ಎಲ್ಲಾ ವರ್ಣನೆಗಳಲ್ಲಿಯೂ ಮಿತಿ. ಜೀವನದ ಅನುಭವ ಕವಿಗೆ ಚೆನ್ನಾಗಿದೆ ಎಂಬುದಕ್ಕೆ ಕಾವ್ಯದಪೂರ್ತ ನಿದರ್ಶನಗಳಿವೆ, ಎಲ್ಲಾದಕ್ಕಿಂತ ಹೆಚ್ಚಾಗಿ ಅವನು ಕತೆ ಹೇಳಿರುವ ರೀತಿಯೇ ಅದಕ್ಕೆ ಸಾಕ್ಷಿ. ರಸಿಕನಾದ ಈ ಕವಿಗೆ, ಗಾನ ನೃತ್ಯದಲ್ಲಿ ಒಳ್ಳೆಯ ಅನುಭವವಿದ್ದಿರಬೇಕು. ಗಾನವನ್ನು ಕುರಿತು ಹೇಳುವಾಗ ಕವಿ "ಜಾಡ್ಯವ ತುಳಿವಂತೆ" ಎನ್ನುತ್ತಾನೆ. ಗಾನ, ರೋಗಕ್ಕೆ ಮದ್ದು. ಅಲಸಿಕೆಗೆ ಎದುರು, ತಾಮಸಕ್ಕೆ ಸಂಜೀವಿನಿ, ಸಕಲಸಂಕಟಗಳಿಗೂ ಒಂದು ಪರಿಹಾರ ಎಂಬುದು ರಸಜೀವಿಯಾದವನೊಬ್ಬನಿಗೆ ಮಾತ್ರ ಅನುಭವ. "ಒಳಗೊಮ್ಮಿದಾನಂದ ರಸ ತನ್ನತನುತುಂಬಿ ತುಳುಕಿ ಹೊರಗೆ ಸೂಸುವಂತೆ; ಸರಳ ಸರಲವಾಗಿ ಸಪುರ ಸಪುರವಾಗಿ ತರಲ ತರಲವಾಗಿ ಅಳಿವಂತೆ ರಾಗವ, ತುಳಿವಂತೆ ಜಾಡ್ಯವ, ಹಿಳಿವಂತೆ ಮೋಹನರಸವ, ತೊಳೆವಂತೆ ಮನವ ಸಂಜೀವನಾಮೃತವನು ತಳಿವಂತೆ" ರಾಗ ದೋರಿದರು. ಇದು ನಿಜವಾಗಿ ಗಾನವನ್ನು ಅನುಭವಿಸಿದವನ ವಾಣಿ.

"ನಾನ್ ಋಷಿಃ ಕುರುತೇ ಕಾವ್ಯಂ" ಎಂಬ ನಾಣ್ಣುಡಿ ಪ್ರಸಿದ್ಧ. ಋಷಿಯಲ್ಲದವನು ನಿಜವಾದ ಕವಿಯಾಗಲಾರ. ಆದರೆ ರತ್ನಾಕರನು ತಾನು ಋಷಿ ಎಂದು ಹೇಳಿಕೊಳ್ಳಲೇ ಇಲ್ಲ. ಆದರೆ ಅವನ ಕಾವ್ಯ ಸಂಸಾರ ಧರ್ಮದ ಕೈಪಿಡಿ. ಅದರಲ್ಲಿ ಗುಡುಗು ಮಿಂಚು ಸಿಡಿಲುಗಳ ಆರ್ಭಟವಿಲ್ಲ. ಅದು ಅವನ ಗುರಿಯೂ ಅಲ್ಲ. ಅವನ ಮಾತು ವಾಚಕನಿಗೆ ತಿಳಿಯಬೇಕು. ಅಷ್ಟೆ. ಪರಮಾತ್ಮನ ಅನುಭವ, ಮಾತಿಗೆ ಅಳವಡುವುದಲ್ಲ. "ಶಬ್ದ ಸಮುದ್ರವನ್ನು ಹೊಕ್ಕು ಒಂದು ಪದಕೆ ನೂರಬ್ದ ಪ್ರಸಂಗಿಸಬಹುದು, ತರ್ಕಶಾಸ್ತ್ರದೊಳೊಡ್ಡಿ. ತಗುರು ತಗುರಿನಂತೆ ಮಾರ್ಕೊಂಡು ಹೊಡೆದಾಡಬಹುದು. ಆಗಮ ಕಾವ್ಯ ನಾಟಕದೊಳೆಲ್ಲರ ತಲೆದೂಗಿಸಿ ಮಲಗಿಸಬಹುದು. ಮುಡಿ ಮೊಗ ಮೊಲೆಯ

ವರ್ಣಿಸಿ ಕೇಳ್ವರೆಲ್ಲರುಟ್ಟುಡುಗೆಯ ಸುಲಿಕೊಳ್ಳಬಹುದು. ಆದರೆ ಮೂಗರು ಕಂಡ ಕನಸಿನಂತೆ ಮೆರೆವಾತ್ಮಯೋಗವನಾಡಬಹುದೆ?" ಆತ್ಮಾನುಭವ ಮೂಗರು ಕಂಡ ಕನಸು ಎಂಬುದು ಒಂದು ಸತ್ಯ. "ದಾನವು ಶ್ರೇಷ್ಠ ಅದರ ಫಲ ಹೆಚ್ಚು. ಚಿಪ್ಪಿನಲ್ಲಿ ಬಿದ್ದ ಸ್ವಾತಿಯ ನೀರ್ವನಿ ಸುಪ್ಪಾಣಿ ಮುತ್ತಾಗುವಂತೆ; ಉಣಲರಿಯದ ಜಿನಪ್ರತಿಮೆಯ, ಪೂಜೆಯಿಂದುಣಿಸುವುದು ಉಪಚಾರ ಭಕ್ತಿ, ಉಣಬಲ್ಲ ಮುನಿ ಎಂಬ ಜಿನಗನ್ನವೀವ ಸಂದಣಿ ಮುಖ್ಯ ಭುಕ್ತಿ" ಭಕ್ಷ್ಯಸುಖವ ಮೈಗೆ ತೋರುವನು,ಆತ್ಮಗೆ ಮೋಕ್ಷ ಸುಖವ ತೋರುತಿಹನು; ಪತಿಹೊಲ್ಲ ಸತಿ ಲೇಸು ಸತಿಹೊಲ್ಲ ಪತಿಲೇಸು ಎಂಬರೆ ವಿಕೃತಿಗಳುಂಟು ಪರರ್ಗೆ. ಪತಿಲೇಸು ಸತಿಯರು ಲೇಸು ಲೇಸು ಎಂಬಂತೆ ನುಡಿವೆತ್ತರಾರು ನಿಮ್ಮಂತೆ; ಕಲೆಯನರಿವ ಪುರುಷನ ಪಡೆವುದು ಪೂರ್ವದೊಳು ನಾರಿ ಮಾಡಿದ ಪುಣ್ಯ. ಕಲೆಗನುಕೂಲೆಯು ಪಡೆವುದು ಆ ಪುರುಷನ ಬಲು ಪುಣ್ಯ." ದಾಂಪತ್ಯ ಅನುಕೂಲವಾಗಿರಬೇಕು. "ಜಾಣೆ ಜಾಣ ಕೂಡಿವರೆ ತಂತಿಗೂಡಿದ ವೀಣೆಯಂತೆ. ಜಾಣೆ ಹೆಡ್ಡ ಕೂಡಿದರೆ ವೀಣೆಗೆ ನೇಣು ಬಿಗಿದಂತೆ; "ಹೊತ್ತನರಿಯಬೇಕು. ಹೊತ್ತು ಹೊತ್ತಿಗೆ ಹೊಸಪರಿಯ ಸಿಂಗರಬೇಕು. ರಮಣಿಯ ಸಿಂಗರ ತನ್ನ ರಮಣನ ಕಣ್ಣಾರ್ತಿ. ಗಂಭೀರ ಬೇಕು, ಹೊತ್ತು ಬೇಕು. ಆಚಾರ ಶೀಲ ಬೇಕು. ಉತ್ತಮ ಭೋಗಿಗಳ ಮಾರ್ಗವಿದು. ನವ ಯೌವನ ಶಕ್ತಿಯಿಂದಾದ ರತಿಸುಖ ದಿವಿಜಗಂಗೆಯಂತೆ; ಕವಳ ಮದ್ದುಗಳ ಶಕ್ತಿಯೊಳಾದ ಸುಖ ಲವಣವಾರ್ಧಿಯ ಜಲದಂತೆ, ದಣಿದು ರತಿಕ್ರೀಡೆಯಿಂದಾದ ಸುಕವಿತ್ವ ಗಣಿಕೆಯ ಶೃಂಗಾರದಂತೆ: ಮನ ಮೆಚ್ಚಿದೆಡೆಯಲ್ಲಿ ತನುಮೆಚ್ಚುವುದು; ಪೊಡವಿವೆಂಗಳಬಿಟ್ಟು ಸಗ್ಗವೆಂಗಳಿಗೊಲ್ದ ಜಡಬ್ರಹ್ಮಚಾರಿ; ಅತಿಸರಸೆಗಳಾಗದು; ನುಡಿ ಬೇಕು; ಮೌನವೂ ಬೇಕು, ಮೊನೆ ದೋರಿ ಹೆಣ್ಣ ಭೋಗಿಸುವುದು ಸೊಗಸಲ್ಲ. ವಿನಯದೊಲುಮೆ ಸೊಗಸು; ಇವು ಸಂಸಾರಿಗಳಿಗೆ ಸೂತ್ರಗಳು. ಗೂಳಿ ನಡೆವ ಹೆಜ್ಜೆ ತೋರುವುದಲ್ಲದೆ ಗಾಳಿ ನಡೆವ ಹೆಜ್ಜೆ ತೋರುವುದೆ? ಮುರಿದ ಚಿತ್ತವನಿನ್ನು ಮೊನೆಮಾಡಬಹುದೆ? ಹೆಣ್ಣಿಗೆ ಸಿಕ್ಕಿ ಬಾಳುವ ಬಾಳು ನೊಣಹಾರಿ ಎಣ್ಣೆಯೊಳಗೆ ಬಿದ್ದ ರೀತಿ: ಮೊಲೆಯ ಮೇಲಿದ್ದೂ ಯೋಗಿಗಳುಂಟು? ಬೆಟ್ಟದ ಶಿಲೆಯ ಮೇಲಿಹ ಮೋಹಿಯುಂಟು." ಹಿಡಿದರೆ ವ್ರತವ ಹಿಡಿಯಬೇಕು, ಸರ್ಪನ ಹಿಡಿವಂತೆ

ಕಡುದೃಢವಾಗಿ, ಹಿಡಿದ ಮೇಲಳಿಮನಸಾದರೆ ವ್ರತ, ತಾನೆ ಕಡಿವುದು ಫಣಿಯಂತೆ ತನ್ನಾ! ನೀರು ಸೋಂಕಿದರೆ ಬಾಳೆಲೆಗಳು ನೆನೆದಂತೆ ವಾರಿಜದೆಲೆ ನೆನೆದಪ್ಪುದೆ? ಊರುಗರೆದೆ, ಹೆಣ್ಣು ಸೋಂಕಿಂದ ನೆನೆವ್ಪುದು, ಧೀರರಚಿತ್ತ ರಂಜಿಪುದೆ" ಇವು ರತ್ನಾಕರನ ಕೆಲವು ಮನ ಮೆಚ್ಚುವ ಮಾತುಗಳು. ಈ ಮಾತುಗಳಲ್ಲಿ ಸರಳವಾದ ಸ್ವಭಾವೋಕ್ತಿಗಳು ಅಡಕವಾಗಿವೆ. ಪ್ರಭಾತವನ್ನು ವರ್ಣಿಸುವಾಗ ಕವಿ "ತಂಗಾಳಿ ತೀಡಿತು ತಾರಗೆ ಮುಸುಳ್ದವು ಹಿಂಗಿತು ಜಗದಂಧಕಾರ, ಮುಂಗಾರ ಮೊಳಗಿನಂದದಿ ಮೊಳಗಿದುವು ವಾದ್ಯಂಗಳು ಜಿನಗೃಹದೊಳಗೆ;" ಮಗನನ್ನು ಆಡಿಸುವಾಗ ಚಕ್ರಿ "ಆದಿ ತೀರ್ಥಂಕರ ಎನ್ನು ಅರ್ಕಕೀರ್ತಿ"ಎನ್ನು ಎನ್ನುತ್ತಾನೆ. ಆ ಹಸುಳೆ. ಆದಿಂಕರನೆನ್ನುತ್ತದೆ. ಅಣ್ಣ ಚಿದಂಬರ ಪುರುಷ ಎಂದು ಹೇಳಿಕೊಟ್ಟರೆ, ಚಿಣ್ಣ ಚಿಂಬರ ಪೂಸ ಎಂಬುದು; ಗುರು ನಿರಂಜನ ಸಿದ್ಧ ಎನ್ನಪ್ಪಾ ಎಂದರೆ ತರಳನದಕೆ "ನಿಂಜಸಿದ್ದ" ಎಂಬನು. ಹೊಟ್ಟೆ ಹುಣ್ಣಾಗೆ ನಗುವನಾಚಕ್ರಿ."

ರತ್ನಾಕರನು ಭವಿಗಳಿಗಾಗಿ ಈ ಕಥೆ ಬರೆದು ಭೋಗ ಯೋಗಗಳ ಸಾಮರಸ್ಯವನ್ನು ತೋರಿಸಿ ಜಗತ್ತಿಗೆ ಉಪಕಾರ ಮಾಡಿದ್ದಾನೆ. ನಮ್ಮ ಸಂಪ್ರದಾಯ ಗ್ರಂಥಗಳಲ್ಲಿ ಶ್ರೀ ಕೃಷ್ಣನೊಬ್ಬನನ್ನು ಬಿಟ್ಟರೆ ಇಂತಹ ಕಥಾನಾಯಕ ಬೇರೆಲ್ಲೂ ದೊರೆಯುವುದಿಲ್ಲ. ಸಂಪ್ರದಾಯ ಬದ್ಧವಾಗಿ ಅದರಲ್ಲಿಯೂ ಮತಸಂಬಂಧವಾದ ಗ್ರಂಥದಲ್ಲಿ, ಪಂಚಕಲ್ಯಾಣಗಳಿಗೆ ಅರ್ಹನಾದ ಚಕ್ರಿಯ ಭೋಗ ವಿಲಾಸಗಳನ್ನು ವರ್ಣಿಸುವವನಿಗೆ ಎದೆಗಾರಿಕೆ ಬೇಕು. ಭೋಗ, ಯೋಗದ ಹಾದಿ ಎಂದು ತೋರಿಸುವುದು ಕತ್ತಿಯ ಮೇಲೆ ನಡೆಯುವ ವರಸೆ, ಮಿತಿ ಸ್ವಲ್ಪ ತಪ್ಪಿದರೂ ಕತೆ, ಹಾದರದ ಕತೆಯಾಗುವುದು. ಈ ಶೃಂಗಾರ ಭಗವದ್ಗೀತೆಯ ಅನಾಸಕ್ತಿ ಯೋಗದಂತೆ, ಅನಾಸಕ್ತಿಶೃಂಗಾರ. ಈ ಕಥಾಭಾಗ ರತ್ನಾಕರನ ಸ್ವಂತ. ಪೂರ್ವದ ಯಾವ ಕವಿಯಿಂದಲೂ ಇದನ್ನು ಆತ ತೆಗೆದುಕೊಂಡಿಲ್ಲ. ಸಂಸಾರಿಗಳ ಸ್ವಭಾವವನ್ನು ಕವಿ ಚನ್ನಾಗಿ ಅರಿತವನಾದುದರಿಂದಲೇ, ಸಂಸಾರಿಗಳಿಗೆ ಹಿತವಾಗುವ ಚಕ್ರವರ್ತಿಯ ಹಿಂದಲ ಕಥೆಯನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಕೊನೆಯದಾಗಿ, ಯಾವಕಾವ್ಯ, ಕಲಾಕೃತಿಯನ್ನೂ ಅಳೆಯುವ ಮಟ್ಟಗೋಲು ಒಂದು ಉಂಟು. ಕಾವ್ಯ ಹಿತವಾಗಿದೆಯೆ? ಓದುವುದಕ್ಕೆ ಚೆನ್ನಾಗಿದೆಯೇ? ಎಂಬುದು. ಭರತೇಶ

ವೈಭವವನ್ನು ಓದಲು ಪ್ರಾರಂಭಮಾಡುವವರಿಗೆ ಈ ಅನುಭವ ತಾನಾಗಿಯೇ ಗೊತ್ತಾಗುತ್ತದೆ. ಕಥೆ ಮುಗಿಸುವವರೆಗೆ ಪುಸ್ತಕವನ್ನು ಕೆಳಗಿಡಲು ಮನಸ್ಸು ಬರುವುದಿಲ್ಲ.

ಭರತೇಶ ವೈಭವವನ್ನು ಎಲ್ಲರೂ ಓದಬೇಕು. ಭೋಗ ವಿಜಯ ವನ್ನು ಓದದವರು, ಒಂದು ದೊಡ್ಡ ಭೋಗದಿಂದ ವಂಚಿತರಾಗುತ್ತಾರೆಂದು ಧಾರಾಳವಾಗಿ ಹೇಳಬಹುದು.

"ಒಡಲು ಬೇರಾತ್ಮ ಬೇರೆಂಬ ತತ್ವಾರ್ಥವ, ನುಡಿನುಡಿದೆಲ್ಲರ ಮನದ
ಜಡವ ಜಾರಿಸುವ ಜಗನ್ನಾಥ ಜಾಣ್ಮೆಯ ನುಡಿಸು ನಿರಂಜನಸಿದ್ಧಾ

ನಾಲಡಿಯಾರ್

ದಕ್ಷಿಣದೇಶದಲ್ಲಿ ಒಂದು ಬಾರಿ, ಅತ್ಯಂತ ಘೋರವಾದ ಬರ ಬಂದಿತು. ಆಗ ಎಂಟುಸಾವಿರ ಜೈನಸನ್ಯಾಸಿಗಳು, ಆಹಾರವಿಲ್ಲದೆ ತೊಳಲುತ್ತಾ, ಪಾಂಡ್ಯ ರಾಜನ ರಾಜಧಾನಿಗೆ ಬಂದರು. ರಾಜನು ಅವರನ್ನು ತನ್ನಲ್ಲಿ ಇರಿಸಿಕೊಂಡು ಆತಿಥ್ಯಮಾಡುತ್ತಿದ್ದನು. ಕೆಲವು ಕಾಲದನಂತರ ಕ್ಷಾಮ ಇಲ್ಲದಂತಾಗಲು ಸನ್ಯಾಸಿಗಳು, ತಮ್ಮನಾಡಿಗೆ ಹೊರಟರು. ರಾಜನಿಗೆ ಅವರಲ್ಲಿ ಅತ್ಯಂತ ಪ್ರೀತಿಯೂ ಗೌರವವೂ ಉಂಟಾಗಿದ್ದುದರಿಂದಲೂ, ಯೋಗ್ಯರಿಂದ ಮಾತ್ರವೇ ಆಸ್ಥಾನ ಶೋಭಿಸುವುದೆಂದು ಅವನು ನಂಬಿದ್ದುದರಿಂದಲೂ, ತನ್ನ ರಾಜ್ಯ ದಲ್ಲಿಯೇ ಆ ಸನ್ಯಾಸಿಗಳನ್ನು ಉಳಿಸಿಕೊಳ್ಳಲು ಅವನು ಬಯಸಿದ್ದನು. ಸನ್ಯಾಸಿಗಳು ತಮ್ಮ ನಾಡಿಗೆ ಹಿಂದಿರುಗಲು ಆತುರರಾಗಿದ್ದರು. ಉಪ ಕಾರಿಯಾದ ರಾಜನ ಮನಸ್ಸನ್ನು ನೋಯಿಸಬಾರದೆಂದು ಅವರು, ರಾತ್ರಿ ರಹಸ್ಯವಾಗಿ ಅರಮನೆಯಿಂದ ಪ್ರಯಾಣ ಮಾಡಿದರು. ಬೆಳಗಾದಮೇಲೆ ದೊರೆ ಬಂದು ನೋಡಿದಾಗ, ಪ್ರತಿಸನ್ಯಾಸಿಯೂ ತನ್ನ ಆಸನದ ಮೇಲೆ, ಒಂದು ಚೌಪದಿ (ನಾಲಡಿ) ಯನ್ನು ತಾಳೆಯಗರಿಯಲ್ಲಿ ಬರೆದು, ಬಿಟ್ಟು ಹೋಗಿ ದ್ದನು. ರಾಜನು ಪಂಡಿತರಿಂದ ಆ ಎಂಟುಸಾವಿರ ಚೌಪದಿಗಳನ್ನೂ ಪರೀಕ್ಷೆ ಮಾಡಿಸಿದನು. ಎಲ್ಲ ಕವಿತೆಗಳ ಯೋಗ್ಯತೆಯೂ ಒಂದೇ ಸಮನಾಗಿರಲಿಲ್ಲ. ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ನಾಶಮಾಡಬೇಕು ಎಂಬುದು ರಾಜನಿಗೂ ಪಂಡಿತರಿಗೂ ಸಮಸ್ಯೆಯಾಯಿತು. ಅಂದಿನ ಪದ್ಧತಿಯಂತೆ, ರಾಜ, ಎಂಟುಸಾವಿರ ನಾಲಡಿಗಳನ್ನೂ ನದಿಗೆ ಎಸೆಸಿದನು. ಈ ನಾಲ್ಕುನೂರು ಪದ್ಯಗಳ ತಾಳೆಯಗರಿಗಳನ್ನು, ನದಿಯ ಅಲೆಗಳು ದಡಕ್ಕೆ ಎಸೆದವು. ದೊರೆ, ಈ ನಾಲ್ಕು ನೂರಕ್ಕೆ, ನಾಲಡಿಯಾರ್ (ನಾಲಡಿ ಕೃತಿಗಳು) ಎಂದು ಹೆಸರಿಟ್ಟನು. ಇನ್ನೂ ಕೆಲವು ಗರಿಗಳು ಪ್ರವಾಹದಲ್ಲಿ ದೂರ ತೇಲಿಹೋಗಿ ಕೊನೆಯಲ್ಲಿ ದಡವನ್ನು ಸೇರಿದುವು. ಅವುಗಳೂ ಸಹ ಪಳಿಮೋಳಿ (ಪ್ರಾಚೀನ ಉಕ್ತಿಗಳು) ಮತ್ತು ಅರಿನೆರಿಸಾರಂ (ಸನ್ಮಾರ್ಗ ಪುರುಳ್) ಎಂಬ ಹೆಸರುಗಳ ಎರಡು ಗ್ರಂಥಗಳಾಗಿವೆ. ಆದರೆ ಅವು ನಾಲಡಿಯಾರ್ ನಷ್ಟು ಪ್ರಸಿದ್ಧವಾಗಿಲ್ಲ. ಅವು ನಾಲಡಿಯಾರ್‌ನ ಅನುಕರಣೆಯಾಗಿ ಮಾತ್ರ

ತ್ತೀರುತ್ತವೆ. ಹೀಗೆ ಮೊದಲು ನದಿಯಲ್ಲಿ ತೇಲಿಬಂದ ನಾಲ್ಕುನೂರನ್ನು, ಪದುಮನಾರ್, ಎಂಬುವವರು ಹತ್ತು ಹತ್ತು ನಾಲಡಿಗಳುಳ್ಳ ನಲವತ್ತು ಪ್ರಕರಣಗಳಾಗಿ ವಿಷಯಗಳಿಗೆ ಅನುಗುಣವಾಗಿ ವಿಂಗಡಿಸಿದ್ದಾರೆ.

ಸಂಸ್ಕೃತ ಸಾಹಿತ್ಯದ. ನೀತಿಶಾಸ್ತ್ರ ಸುಭಾಷಿತಗಳಂತೆ, ಪ್ರಾಚೀನ ತಮಿಳರ ಕುರುಳ್ ಮತ್ತು ನಾಲಡಿಯಾರ್ ಎಂಬ ಗ್ರಂಥಗಳು. ಅವುಗಳಲ್ಲಿ, ಸಾರ್ವಕಾಲಿಕಗಳಾದ ಸರ್ವಮಾನ್ಯವಾದ ಗಂಭೀರವಾದ ತತ್ವಗಳು ಜೀವನವನ್ನು ಕುರಿತ ಚಿಂತನೆಗಳು, ಆಧ್ಯಾತ್ಮ, ಬೋಧನೆಗಳು, ಪ್ರಾಸಬದ್ಧವಾದ ಕವಿತೆಯಲ್ಲಿ ಅಡಕವಾಗಿವೆ. ಸಂಸ್ಕೃತದ ಭರ್ತೃಹರಿ, ನಮ್ಮ ಸರ್ವಜ್ಞ ಇವರ ಗ್ರಂಥಗಳಂತೆ. ಕುರುಳ್ ಮತ್ತು ನಾಲಡಿಯಾರ್ ಈ ಎರಡು ಗ್ರಂಥಗಳನ್ನು, ಇಂದಿಗೂ ತಮಿಳು ನಾಡಿನಲ್ಲಿ ಬೋಧನೆ ಮಾಡದ ಶಾಲೆಗಳು ಯಾವುವೂ ಇಲ್ಲ. ಇವುಗಳ ಪೈಕಿ ಕುರುಳ್ ಈಗಾಗಲೇ ಅತ್ಯಂತ ಪ್ರಸಿದ್ಧವಾಗಿ ಜನತೆಗೆ ಪರಿಚಯವಾಗಿದೆ. ಈ ಲೇಖನದಲ್ಲಿ ನಾಲಡಿಯಾರ್‌ನ್ನು ಕುರಿತು ಸಂಕ್ಷೇಪವಾಗಿ ಪರಿಚಯಮಾಡಿಕೊಡುವ ಪ್ರಯತ್ನ ಮಾಡಲಾಗಿದೆ.

ಹೆಸರೇ ಸೂಚಿಸುವಂತೆ, ನಾಲಡಿ ಎಂಬುದು ನಾಲ್ಕು ಪಾದಗಳ ಪ್ರಾಸಬದ್ಧ ಕವಿತೆ ಚೌಪದಿ, ಕನ್ನಡದ ಅಕ್ಕರಗಳಂತೆ, ಅದು ತಮಿಳು ಸಾಹಿತ್ಯದ ಪ್ರಾಚೀನ ಛಂದಸ್ಸು. ಈ ಛಂದಸ್ಸಿನ ಪದ್ಯಗಳು, ಸುಲಭವಾಗಿ ಬಾಯಿಪಾಠ ಮಾಡಿಕೊಳ್ಳಲು ಸರಾಗವಾಗಿ, ಯಾವ ಸಂದರ್ಭಕ್ಕಾದರೂ ಪಠಿಸಲು ಅನುಕೂಲವಾಗುವಂತಹ ವೈವಿಧ್ಯಗಳುಳ್ಳವುಗಳಾಗಿವೆ. ಪುರಾಣ ಹರಿಕಥೆಗಳ ಪ್ರಕರಣಗಳಲ್ಲಿ, ವೇದಾಂತಪ್ರಚಾರದಲ್ಲಿ, ಗೃಹಸ್ಥ ಧರ್ಮ, ವೈರಾಗ್ಯ ಮೋಕ್ಷಬೋಧನೆಯಲ್ಲಿ, ಮಧ್ಯೆ ಮಧ್ಯೆ ನಂಜಿಕೊಳ್ಳುವ ಉಪ್ಪಿನಕಾಯಂತೆ—ಆದರೆ ಅತ್ಯಂತ ಗಂಭೀರವಾದ ಉನ್ನತಮಟ್ಟದ ತತ್ವಗಳನ್ನೊಳಗೊಂಡು ಇವು ಇಂದಿಗೂ, ಪಂಡಿತ ಪಾಮರರ ಬಾಯಲ್ಲಿ ಉಚ್ಚಾರವಾಗುತ್ತಿವೆ. ನಾಲಡಿಯಾರ್ ನೀತಿಬೋಧೆಗಾಗಿ, ಸತ್ಯ ಪ್ರಚಾರಕ್ಕಾಗಿ, ಉನ್ನತ ಆದರ್ಶ ಪ್ರಚಾರಕ್ಕಾಗಿ. ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಅನುಕೂಲವಾಗುವಂತೆ ರಚಿತವಾಗಿರುವ ಚೌಪದಿ. ಇವು ಕಾವ್ಯ ಧರ್ಮಕ್ಕಿಂತ ಹೆಚ್ಚಾಗಿ, ನೀತಿಧರ್ಮ ವಿವರಣೆಗಾಗಿ ರಚಿತವಾದ ಪದ್ಯಗಳು. ಆದರೂ ಇವುಗಳಲ್ಲಿ ಕೆಲವೆಡೆ ಅತ್ಯುತ್ತಮ ಕವಿತಾ ಗುಣಗಳು ಇವೆ. ಇವುಗಳನ್ನು ರಚಿಸಿದವರು ಮುಖ್ಯ

ವಾಗಿ ನೀತಿಬೋಧಕರೂ ಧರ್ಮಬೋಧಕರೂ ಆಗಿದ್ದರೂ ಸಹ, ಕವಿಗಳೂ ಆಗಿದ್ದರು. ಕೆಲವು ಚೌಪದಿಗಳನ್ನು ನೋಡಿದರಂತೂ, ಹುಟ್ಟು ಕವಿಗಳು ನೀತಿಬೋಧಕರಾಗಲು ಇಚ್ಛಿಸಿದರೆಂದು ಭಾವಿಸಬಹುದು. ಹೀಗೆ ಈ ಚೌಪದಿಗಳಲ್ಲಿ ಕಾವ್ಯಗುಣಗಳಿರುವುದರಿಂದ, ಇವು ಸಂದರ್ಭೋಚಿತವಾದ ಉಕ್ತಿಗೆ ಅರ್ಹವಾಗಿವೆ. "ನಾಲುಂ ಇರುಂಡುಂ ಸೊಲ್ಲುಕ್ಕು ಉರುದಿ" [ಕುರುಳಿನ ದ್ವಿಪದಿಗಳೂ ನಾಲಡಿಯಾರ್‌ನ ಚೌಪದಿಗಳೂ ನೀತಿಪ್ರಚಾರೋಕ್ತಿಗಳಿಗೆ ಅತ್ಯುತ್ತಮವಾದುವು]

ತಮಿಳು ಸಾಹಿತ್ಯದಲ್ಲಿ ಚೌಪದಿಗಳು (ನಾಲಡಿ) ಹೇರಳವಾಗಿವೆ. ಆದರೆ ನಾಲಡಿ ಎಂದರೆ ಈ ಪದ್ಯಗಳೇ ಎಂದು ಅರ್ಥವಾಗುವುದರಿಂದ, ಇವು ತಮಿಳು ಸಾಹಿತ್ಯದಲ್ಲಿ ಪ್ರಾಚೀನವಾದುದಿರಬೇಕು. ಈ ಚೌಪದಿಗಳು ನಾಲ್ಕುನೂರು ಇರುವುದರಿಂದ, ಇವುಗಳಿಗೆ ನಾಲಡಿ ನಾನ್ನೂರು ಎಂದೂ ಸಹ ಹೆಸರು. ಈ ಪದ್ಯಗಳ ಕರ್ತೃಗಳ ವಿಷಯದಲ್ಲಿ ಹಿಂದೆ ಹೇಳಿದ ಕತೆ ಪ್ರಚಾರದಲ್ಲಿದೆ.

ಹೀಗೆ ಜೈನ ಸನ್ಯಾಸಿಗಳು ಇವನ್ನು ರಚಿಸಿದವರಾದರೂ, ಇವುಗಳಲ್ಲಿ ಜೈನಧರ್ಮ ಪ್ರಚಾರ ಎಲ್ಲಿಯೂ ಅಷ್ಟೇನೂ ಇಲ್ಲ. ಇವು ಸರ್ವರಿಗೂ ಸರ್ವಕಾಲಕ್ಕೂ ಬೇಕಾಗುವ ಸತ್ಯಗಳು. ಅನೇಕ ನಾಲಡಿಗಳಲ್ಲಿ, ಸಂಸ್ಕೃತ ಸುಭಾಷಿತ ಮತ್ತು ಮಹಾಭಾರತ ಶ್ಲೋಕಗಳ ಅಭಿಪ್ರಾಯಗಳು ಅಡಕವಾಗಿವೆ. ಈ ಪದ್ಯಗಳು ಹೆಚ್ಚಾಗಿ ನಿವೃತ್ತಿಮಾರ್ಗ (ವೈರಾಗ್ಯ) ಪರಗಳೇ ಆಗಿವೆ. ಮನುಷ್ಯ ಜನ್ಮ ಬರಿಯ ಸುಖಕ್ಕಾಗಿ ಅಲ್ಲ. ಸುಖ ಶಾಶ್ವತವಲ್ಲ. ಯೌವನದಲ್ಲಿಯೇ ವಿವೇಕ ಗಳಿಸಿಕೊಳ್ಳಿ. ಐಶ್ವರ್ಯ ಶಾಶ್ವತವಲ್ಲ. ಅದನ್ನು ಇತರರೊಂದಿಗೆ ಹಂಚಿಕೊಳ್ಳಿ. ಯೌವನ ಶಾಶ್ವತವಲ್ಲ. ದೇಹ ಅಶಾಶ್ವತ, ಸತ್ಯ ಸರ್ವಶಕ್ತಿ, ಶುದ್ಧರಾಗಿರಿ, ತ್ಯಾಗಿಗಳಾಗಿ, ಕ್ರೋಧ ಬಿಡಿ. ಸಹನೆ ಇರಲಿ. ಪರಸ್ತ್ರೀ ಆಸೆ ಬಿಡಿ. ಉದಾರಿಗಳಾಗಿ. ನಿಮ್ಮ ಕರ್ಮ ಫಲವನ್ನು ನೀವು ಅನುಭವಿಸಿಯೇ ತೀರಬೇಕು; ಸತ್ಯ ಯಾವುದು? ಯಾವುದಕ್ಕೆ ಅಸ್ತಿತ್ವ ಇವನ್ನು ತಿಳಿಯಿರಿ. ದುಷ್ಕಾರ್ಯಗಳಿಂದ ಹಿಂದೆಗೆಯಿರಿ. ಜ್ಞಾನವನ್ನು ಸಂಪಾದಿಸಿ; ಸತ್ಕುಲ ಪ್ರಸೂತರೆಂದರೆ ಯಾರು? ಮಹನೀಯರು ಯಾರು? ಯೋಚಿಸಿ. ಹಿರಿಯರನ್ನು ಅವಮಾನಗೊಳಿಸಬೇಡಿ. ಒಳ್ಳೆಯವರೊಂದಿಗೆ ಸೇರಿ, ನೈತಿಕ ಆದರ್ಶ ಹಿಡಿದು ಕೆಲಸ ಮಾಡಿ. ಬಂಧುಗಳನ್ನು ರಕ್ಷಿಸಿ. ವಿವೇಕದಿಂದ ಸ್ನೇಹಿತರನ್ನು ಆರಿಸಿಕೊಳ್ಳಿ.

ಮಿತ್ರರ ದೋಷಗಳನ್ನು ಸಹಿಸಿಕೊಳ್ಳಿ. ಕೃತ್ರಿಮ ಮಿತ್ರರು ಯಾರು? ನಿಜವಾದ ವಿವೇಕ ಯಾವುದು? ತಿಳಿಯಿರಿ. ವಿವೇಕಹೀನತೆ, ಉಪಯೋಗವಿಲ್ಲದ ಐಶ್ವರ್ಯ, ಜಿಪುಣತನ, ಬಡತನ, ಆತ್ಮಗೌರವ, ಭಿಕ್ಷೆ ಮಾಡುವ ಕಷ್ಟ, ಸಭಾ ಮರ್ಯಾದೆ, ಅಪೂರ್ಣಜ್ಞಾನ, ಅಧಮತನ ನೀಚತನ, ಮುಂತಾದ ವಿವಿಧ ವಿಷಯ, ಇವುಗಳನ್ನೆಲ್ಲ ಕುರಿತ ನಾಲಡಿಗಳು, ಈ ನಾಲ್ಕುನೂರು.

ಉನ್ನತವಾದ ನೈತಿಕ ಆದರ್ಶ. ಉನ್ನತ ಜೀವನ, ಸತ್ಯ ಪ್ರೇರಣೆ, ಸ್ವಾರ್ಥತ್ಯಾಗ, ಔದಾರ್ಯ ಆತ್ಮಜ್ಞಾನ ಇವುಗಳನ್ನು ಸ್ಥಾಪಿಸುವುದೇ ನಾಗರಿಕ ಮತ್ತು ಸುಸಂಸ್ಕೃತ ಜೀವನದ ಗುರಿ. ಪ್ರಾಚೀನ ತಮಿಳು ಸಾಹಿತ್ಯ, ಈ ಗುರಿಯನ್ನು ಎಂದಿಗೂ ಮರೆಯಲಿಲ್ಲ. ಬಿಗಿಯಾದ ಶೈಲಿ, ಅತ್ಯಂತ ಮಿತವಾದ ಮಾತು, ಎಲ್ಲರಿಗೂ ತಿಳಿದ ಉದಾಹರಣೆಗಳು, ಜ್ಞಾಪಕದಲ್ಲಿಟ್ಟುಕೊಳ್ಳಲು ಅನುಕೂಲವಾಗುವ ಶ್ಲೇಷಗಳ ಅರ್ಥಗಳುಳ್ಳ ಪದ ಸಮೂಹ, ಇವುಗಳಿಂದ ನಾಲಡಿಯಾರ್, ತಮಿಳರಿಗೆ ಅತ್ಯಂತ ಪ್ರಿಯವಾಗಿದೆ. ಇದಕ್ಕೆ ವೆಲ್ಲವರ್ ವೇದಂ ಎಂದೂ ಹೆಸರು. ಸಂಸ್ಕೃತ, ವಿದ್ವಜ್ಜನರ ಗ್ರಂಥಗಳಾಗಿದ್ದರೂ, ದೇಶಭಾಷೆಯಲ್ಲಿ, ನೀತಿಬೋಧೆಮಾಡುವ ಉದ್ದೇಶದಿಂದ ಪ್ರಾಚೀನ ಕಾಲದಲ್ಲಿಯೇ ಈ ತಮಿಳು ಗ್ರಂಥಗಳು ಹುಟ್ಟಿದವು. ಈ ದೃಷ್ಟಿಯಲ್ಲಿ ಕನ್ನಡದಲ್ಲಿ ಹೇಗೆಯೋ ಹಾಗೆ ತಮಿಳಿನಲ್ಲಿಯೂ, ಜೈನರು ಸಂಸ್ಕೃತ ತಿಳಿಯದವರಿಗಾಗಿ ತುಂಬ ಸೇವೆ ಮಾಡಿರುವುದು ವೇದ್ಯವಾಗುತ್ತದೆ.

"ಆನೆಯೇರಿ ಶ್ವೇತಚ್ಛತ್ರಿಯನ್ನು ಹಿಡಿಸಿಕೊಂಡು ಸೇನೆಯ ಮುಖಂಡರಾಗಿ ಹೋದವರು, ನಾಳೆ ಶತ್ರುಗಳಿಂದ ನಾಶ ಹೊಂದುವರು; ಇದು ಶಾಶ್ವತ ಇದು ಶಾಶ್ವತ ಎಂದು ನೀನು ಹೇಳಿಕೊಂಡುದೆಲ್ಲ ಒಂದೂ ನಿಲ್ಲಲಿಲ್ಲ. ಕೇಳು, ನಿನ್ನ ಬಾಳದಿನಗಳು ಕಳೆಯುತ್ತಿವೆ; ಮರಣ ಬರುತ್ತಿದೆ; ನಿನ್ನ ಕರ್ತವ್ಯವನ್ನು ಮಾಡು. ಮನೆ, ಯೌವನ, ಸೌಂದರ್ಯ ಅಧಿಕಾರ, ಧನಶಕ್ತಿ ಎಲ್ಲ ನಾಶವಾಗುವುದೆಂಬುದನ್ನು ಅರಿತು, ವಿವೇಕಿಗಳು ವಿರಕ್ತಿಮಾರ್ಗವನ್ನು ಅವಲಂಬಿಸುತ್ತಾರೆ. ಅವರನ್ನು ಗೌರವಿಸುವವರು ಗೌರವಿಸಲಿ, ದೂರುವವರು ದೂರಲಿ, ಆದರೆ ಅವರ ತಲೆಯೇರಿದ ಒಂದು ಕೊಳಕು,ಸೊಣವನ್ನು ಸಹ ಜ್ಞಾನಿಗಳು ನಾಶಮಾಡುವುದಿಲ್ಲ.ಚೆನ್ನಾಗಿಯೋಚಿಸದೆ ಮಾತನಾಡುವವನಮಾತು ಬೆಂಕಿಯಂತೆ ಅವನನ್ನೇ ಸುಡುವುದು. ಕೇಳಿ ನಿಧಾನವಾಗಿ ಯೋಚಿಸುವ ವಿವೇಕಿಗಳು ಕೋಪದಲ್ಲಿಯೂ

ಸಹ ಕ್ರೂರವಾದ ಮಾತನ್ನು ಆಡುವುದಿಲ್ಲ. ಯುವಕನ ಸಂಯಮವೇ ಸಂಯಮ. ದರಿದ್ರನು ಮಾಡುವ ದಾನವೇ ದಾನ. ಶಿಕ್ಷಿಸಲು ಶಕ್ತಿಯಿರುವವನ ಕ್ಷಮೆಯೇ ಕ್ಷಮೆ. ನಾಯಿಯು ನಮ್ಮನ್ನು ಕಡಿದರೆ, ನಾವು ಅದನ್ನು ಕಡಿಯುವುದಿಲ್ಲ. ಹಾಗೆಯೇ ನೀಚರು ತಮ್ಮ ಬಾಯಿಂದ ಕೆಟ್ಟ ಮಾತು ಗಳನ್ನಾಡಿದರೆ, ವಿವೇಕಿಗಳು ತಾವೂ ಅಂತಹ ಮಾತುಗಳನ್ನು ಎಂದಿಗೂ ಆಡುವುದಿಲ್ಲ. ತಿಳಿಯಬೇಕಾದುದನ್ನು ತಿಳಿದು ಅದಕ್ಕೆ ವಿಧೇಯರಾಗಿ. ಹೆದರಬೇಕಾದುಹಕ್ಕೆ ಹೆದರಿ, ತಮ್ಮ ಕರ್ತವ್ಯವನ್ನು ಲೋಕೋಪಕಾರಕ್ಕಾಗಿ ಮಾಡುತ್ತಾ ದೊರೆತ ಸುಖವನ್ನು ಅನುಭವಿಸುವವರಿಗೆ, ಕಷ್ಟಗಳು ಸಂಭವಿ ಸುವುದಿಲ್ಲ; ನೀನು ಕೆಟ್ಟರೂ ಇತರರಿಗೆ ಕೇಡೆಣಿಸಬೇಡ. ಹಸಿವಿನಿಂದ ಸಾಯುತ್ತಿದ್ದರೂ, ಅಯೋಗ್ಯರ ಕೈಯಿನ ಅನ್ನವನ್ನು ತಿನ್ನಬೇಡ. ಅಂತರಿಕ್ಷ ಕವಿದ ಭೂಮಂಡಲವೇ ನಿನಗೆ ದೊರೆತರೂ, ಸುಳ್ಳು ಆಡಬೇಡ. ಲಜ್ಜಾ ಹೀನರೇ, ನಿಮ್ಮ ನೆರೆಯವರ ಹೆಂಡಿರನ್ನು ಬಯಸಬೇಡಿ. ಅದರಲ್ಲಿ ಭಯ ಅಧಿಕ. ಅದರಿಂದ ಉಂಟಾಗುವ ಸುಖ ಕ್ಷಣಿಕ, ದಿನ ದಿನವೂ ಅದು ಪ್ರಕಟವಾದರೆ ಮರಣದ ಭಯ, ಅದರಿಂದ ಎಂದಿಗೂ ನೋವು ಅಪಾಯ; ನೆರೆಯವರ ಹೆಂಡಿರನ್ನು ಬಯಸುವವನ, ಸದ್ಗುಣ ಸ್ನೇಹ ಹೆಚ್ಚುಗಾರಿಕೆ ಘನತೆ ಯಾವುದಕ್ಕೂ, ಜೆಲೆಯಿಲ್ಲ. ಹಗೆತನ, ಸೇಡು, ಪಾಪ, ಭಯ ಇವು ನಾಲ್ಕು ಎಂದಿಗೂ ಅಂತಹವರ ಮಿತ್ರರು. ಪ್ರವೇಶಿಸುವಾಗ ಭಯ ಹಿಂದಿರುಗುವಾಗ ಭಯ, ಒಳಗಿರುವಾಗ ಭಯ, ರಹಸ್ಯವನ್ನು ಕಾಯ್ದು ಕೊಳ್ಳಬೇಕಾದ ಭಯ, ಯಾವಾಗಲೂ ಭಯವೇ, ಹೀಗಿದ್ದರೂ ಯಾಕೆ ನೆರೆಯವನ ಮನೆ? ಎಷ್ಟೇ ಕಡಿಮೆಯಾದರೂ ಸರಿಯೇ, ನಿತ್ಯ ಸ್ವಲ್ಪ ವಾದರೂ ದಾನ ಮಾಡಿ, ನಿಮ್ಮ ಊಟಮಾಡಿ. ಇಲ್ಲದಿದ್ದರೆ ಅದೆಂತಹ ಗೃಹಸ್ಥರ ಮನೆ? ಪ್ರತ್ಯುಪಕಾರಮಾಡಲು ಶಕ್ತಿಯಿಲ್ಲದವನಿಗೆ ಕೊಡಿ. ಪ್ರತ್ಯುಪಕಾರ ಮಾಡುವವನಿಗೆ ಕೊಡುವುದು, ಬಡ್ಡಿಗಾಗಿ ಹಣಕೊಟ್ಟಂತೆ. ಹಸುಗಳು ಹಲವು ಬಗೆ. ಆದರೂ ಅವು ಕೊಡುವ ಹಾಲು ಒಂದೇ ಬಗೆ. ಹಾಗೆ ಸತ್ಯ ಒಂದೇ. ಅದನ್ನು ಪ್ರಚಾರಮಾಡುವ ಮತಗಳೂ ಧರ್ಮ ಗಳೂ ಬೇರೆ ಬೇರೆ, ಯೋಚಿಸಿ ನೋಡಿ. ಜಗತ್ತಿನ ದೂಷಣೆಗೆ ಪಾತ್ರರಾಗ ದವರು ಯಾರು? ವಿವೇಕ ಉಪಾಯಗಳಿಂದ ಅಭಿವೃದ್ಧಿ ಹೊಂದವವರು

ಯಾರು? ಬಾಳಿನಲ್ಲಿ ತೀವ್ರವಾದ ದುಃಖವನ್ನು ಅನುಭವಿಸದವರು ಯಾರು? ತಮ್ಮ ಜೀವಮಾನಪರ್ಯಂತ ತಮ್ಮ ಐಶ್ವರ್ಯವನ್ನು ಇಟ್ಟು ಕೊಂಡಿರುವವರು ಯಾರು? ಕುರುಳ ಸೌಂದರ್ಯ; ಉಡುಪಿನ ಸೌಂದರ್ಯ ಇವು ನಿಜವಾದ ಸೌಂದರ್ಯವಲ್ಲ. ಜ್ಞಾನದಿಂದ ಮನಶ್ಶಾಂತಿ ಕೊಡುವ ಹೃದಯದ ಸೌಂದರ್ಯವೇ ನಿಜವಾದ ಸೌಂದರ್ಯ; ನದಿಯನ್ನು ದಾಟುವವನು, ಅಂಬಿಗ, ಕಡಿಮೆ ಜಾತಿಗೆ ಸೇರಿದವನೆಂದು ಯೋಚಿಸದೆ, ಅವನ ಸಹಾಯ ದಿಂದ ದಾಟಿ ಹೋಗುತ್ತಾನೆ. ಹಾಗೆಯೇ ಜ್ಞಾನ ಯಾರಲ್ಲಿರಲಿ ಅವನು ಯಾವ ಜಾತಿಯವನಾಗಿರಲಿ, ಆ ಜ್ಞಾನವನ್ನು ನಾವು ಸಂಪಾದಿಸಿಕೊಳ್ಳ ಬೇಕು ಅಸೂಯಾರಹಿತರಾದ ತೀಕ್ಷ್ಣಬುದ್ಧಿಯ ರಸಿಕರ ನಗುವಿಗೆ ಸಮಾ ನವಾದ ಸುಖ. ಸ್ವರ್ಗದಲ್ಲಿಯೂ ಇಲ್ಲ; ಲಾಭವಾಗಲೀ ನಷ್ಟವಾಗಲೀ, ವಿವೇಕಿ ಗಳು ಯೋಗ್ಯವಾದ ಕೆಲಸವನ್ನೇ ಮಾಡುತ್ತಾರೆ. ಸಿಂಹಕ್ಕೆ ಇಟ್ಟ ಗುರಿ ತಪ್ಪಿ ದರೂ, ನರಿಯನ್ನು ಕೊಲ್ಲುವುದಕ್ಕಿಂತ ಅದು ಉತ್ತಮವಲ್ಲವೆ? ಇತರರ ರಹ ಸ್ಯದ ವಿಷಯದಲ್ಲಿ ಮೂಗನಾಗಿರು, ನೆರೆಯವನ ಹೆಂಡತಿಯ ವಿಷಯದಲ್ಲಿ ಕುರುಡನಾಗಿರು, ಹಿಂದುಗಡೆ ನಿನ್ನನ್ನು ದೂರುವವರಲ್ಲಿ ಉದಾರಿಯಾಗಿರು. ಇವನ್ನು ಅರಿತು ನಡೆಯುವವನು, ಅರಿಯಬೇಕಾದ ಜ್ಞಾನ ಯಾವುದೂ ಇಲ್ಲ. ದೊಡ್ಡವರ ದೊಡ್ಡಗುಣ ಅವರ ವಿನಯವೇ. ಸಂಯಮವೇ ಸಂಪಾದಿಸಬಹು ದಾದ ದೊಡ್ಡ ಆಸ್ತಿ. ತಮ್ಮನ್ನು ಬೇಡುವವರ ಕಷ್ಟವನ್ನು ಪರಿಹರಿಸುವವರೇ ನಿಜವಾದ ಧನಿಕರು; ಮೃದುವಾಗಿರುವವರಲ್ಲಿ ಅವರಿಗಿಂತ ಹೆಚ್ಚು ಮೃದು ವಾಗಿರು, ವಿರೋಧಿಗಳಿಗೆದುರಾಗಿ, ಅವರಿಗಿಂತ ಹೆಚ್ಚು ಕೋಪತೋರಿಸು. ಛಲವುಳ್ಳವರೊಡನೆ ವ್ಯವಹರಿಸುವಾಗ ಅವರಿಗಿಂತ ಹೆಚ್ಚು ಛಲವುಳ್ಳವನಾಗು. ಒಳ್ಳೆಯವರೊಂದಿಗೆ ಒಳ್ಳೆಯವನಾಗಿರು. ಇದೇ ನಿನ್ನ ಜೀವನದ ನಿಯಮ ವಾಗಿರಲಿ; ಹಿಡಿದ ಕಾರ್ಯದಲ್ಲಿ ಜಯವಾಗದಿದ್ದರೂ ವಿಚಲಿತನಾಗದೆ ಧೀರ ನಾಗಿರುವುದೇ ಪುರುಷತ್ವ. ಎಲ್ಲವೂ ಸುಖವಾಗಿರುವಾಗ, ಹೆಂಗಸರು ಸಹ ಉತ್ಸಾಹದಿಂದ ಬಾಳುತ್ತಾರೆ. ಧನಿಕರು ಕರುಣೆಯಿಂದ ಕೊಡುವ ಮೃಷ್ಟಾನ್ನ ದಿಂದ, ಅಧಮರು ಜೀವಿಸುತ್ತಾರೆ. ಆದರೆ ತನ್ನ ಕಷ್ಟದಿಂದ ಸಂಪಾದಿಸಿದ ಬರಿಯ ನೀರು, ಮೃಷ್ಟಾನ್ನದ ಹೆಸರನ್ನು ಅರಿಯದವರಿಗೆ ಸಹ–ಅಮೃತವಾಗು ತ್ತದೆ. ಉರಿಬಿಸಿಲಿನಲ್ಲಿ, ತನ್ನಲ್ಲಿ ಬಂದವರಿಗೆ ನೆಳಲು ಕೊಡುವ ಮರದಂತೆ

ಎಲ್ಲರಿಗೂ ಆಶ್ರಯನಾಗಿ, ಹಣ್ಣು ಬಿಡುವ ಮರದಂತೆ ಎಲ್ಲರಿಗೂ ಉಪಕಾರಿಯಾಗಿ ಜೀವಿಸುವುದೇ ನಿಜವಾದ ಪುರುಷತ್ವದ ಲಕ್ಷಣ. ಪ್ರೇಮವಿಲ್ಲದವರ ಮನೆಯಲ್ಲಿ ದೊರೆಯುವ, ಹಾಲು ಸಕ್ಕರೆ ಬೆರೆತ, ಹುಲಿಯುಗುರಿನಂತೆ ಬೆಳ್ಳಗಿರುವ ಸೊಗಸಾದ ಸಣ್ಣಕ್ಕಿ ಅನ್ನಕ್ಕಿಂತ, ಪ್ರಿಯರಾದ ಬಂಧುಗಳ ಮನೆಯ ಉಪ್ಪಿಲ್ಲದ ಊಟ, ಹೆಚ್ಚು ಹಿತವಾಗಿರುತ್ತದೆ.

ಮೂರ್ಖರ ಸ್ನೇಹಕ್ಕಿಂತ ದ್ವೇಷವೇ ಉತ್ತಮ. ಗುಣವಾಗದ ರೋಗಕ್ಕಿಂತ ಮರಣವೇ ಮೇಲು. ಉತ್ಸಾಹವನ್ನು ಭಂಗಗೊಳಿಸುವ ತಿರಸ್ಕಾರಕ್ಕಿಂತ ಸಾವು ಉತ್ತಮ. ತನಗೆ ಅರ್ಹತೆಯಿಲ್ಲದ ಹೊಗಳಿಕೆಗಿಂತ, ಬೈಗಳವೇ ಉತ್ತಮ. ಜ್ಞಾನದ ದಾರಿದ್ರ್ಯವೇ ದಾರಿದ್ರ್ಯ, ಜ್ಞಾನ ಇರುವುದೇ ದೊಡ್ಡ ಐಶ್ವರ್ಯ; ಪುರುಷರೂ ಸಹ ಸ್ತ್ರೀಯರಿಗಿಂತ ಹೆಚ್ಚು ಸ್ತ್ರೀಯರಾಗಿ–ಆಭರಣಗಳನ್ನು ಸಹ ಧರಿಸುತ್ತಾರೆಲ್ಲ! ಬಾಲ್ಯದಲ್ಲಿ ತನ್ನ ತಂದೆ ವ್ಯಾಸಂಗಮಾಡು ಎಂದು ಆಗ್ರಹದಿಂದ ಬಲಾತ್ಕರಿಸಿದಾಗ ತಿರಸ್ಕರಿಸಿದವನು, ಸಭೆಯಲ್ಲಿ ಒಬ್ಬ ವಿನಯದಿಂದ ಅವನಿಗೆ ಓದಲು ಒಂದು ಓಲೆ ಕೊಟ್ಟಾಗ, ಅವಮಾನಿತನಾದವನಂತೆ ಅವನ ಮೇಲೆಯೇ ಬೀಳುತ್ತಾನೆ. ಅವಿವೇಕಿಗಳು, ದಾರಿದ್ರ್ಯ ಅಥವ ರೋಗಬಂದಾಗ ವಿರಕ್ತರಾಗುತ್ತಾರೆ. ಹಣ ಸಂಪಾದನೆಯಾಗುತ್ತಿದ್ದರೆ, ಪರವನ್ನು ಕುರಿತು ಸಾಸಿವೆಯಷ್ಟೂ ಯೋಚಿಸುವುದಿಲ್ಲ ಅಲ್ಪರಿಗಿಂತ ಕಲ್ಲುಗಳೇ ಉತ್ತಮ.ಯಾಕೆಂದರೆ, ಕಲ್ಲುಗಳಿಗೂ ನಾವು ಹೇಳುವ ಮಾತುತಿಳಿಯದಿದ್ದರೂ ಅವು ಉಪಯೋಗಿಸುವವರಿಗೆ ಕೆಲಸಕ್ಕೆ ಒದಗುತ್ತವೆ. ಎಲ್ಲಿ ಅವುಗಳನ್ನು ಇಟ್ಟರೆ ಅಲ್ಲಿ ಇರುತ್ತವೆ. ಜಾಡಿಯಲ್ಲಿ ತುಪ್ಪವಿದ್ದರೆ, ಒಳಕ್ಕೆ ಪ್ರವೇಶಿಸಲು ಆಗದಿದ್ದರೂ ಅದರ ಬಾಯಿನಲ್ಲಿ ಇರುವೆಗಳು ಮುತ್ತುತ್ತಿರುತ್ತವೆ. ಹಾಗೆಯೇ ಧನಿಕರು, ಏನನ್ನೂ ಕೊಡುವುದಿಲ್ಲವೆಂದು ತಿಳಿದಿದ್ದರೂ, ಜನರು ಅವರ ಸುತ್ತ ತಿರುಗುತ್ತಿರುತ್ತಾರೆ; ಯೋಗ್ಯರಿಗೆ ಏನಾದರೂ ಒಳ್ಳೆಯದು ಸಂಭವಿಸಿದರೆ ಅದರಿಂದ ಅವರ ಸ್ವಭಾವ ವ್ಯತ್ಯಾಸ ಹೊಂದುವುದಿಲ್ಲ. ಅವರು ಎಂದಿನಂತೆ ಯೋಗ್ಯರಾಗಿಯೇ ಉಳಿಯುತ್ತಾರೆ. ಹಾಗೆಯೇ ನೀಚನಿಗೆ ಒಳ್ಳೆಯದಾದರೆ ಅವನ ಸ್ವಭಾವವೂ ಬದಲಾಯಿಸುವುದಿಲ್ಲ. ಅಂದರೆ ಅವನು ತನ್ನ ನೀಚತನವನ್ನು ಬಿಡುವುದಿಲ್ಲ. ಮೋಡಗಳನ್ನು ಮುಟ್ಟುವ ಮಹಡಿಮನೆ, ಅದಕ್ಕೆ ಒಪ್ಪುವ ಕಾವಲುಗಾರರು, ಒಳಗೆ ದೀಪಗಳಂತೆ ಜ್ವಲಿಸುವ ಮುತ್ತುರತ್ನ

ಗಳು ; ಆದರೇನು? ಸುಂದರಿಯಾದ ಹೆಂಡತಿಯಿಲ್ಲದ ಮೇಲೆ ಆ ಮನೆ ಪ್ರವೇಶಿಸಲರ್ಹವಲ್ಲದ ಕಾಡು. ಗಂಡನನ್ನು ವಿರೋಧಿಸುವ ಹೆಂಡತಿಯೇ ಸಾವು; ಎದ್ದವಳೆ ಅಡಿಗೆಮನೆ ಸೇರುವ ಹೆಂಡತಿ, ಒಂದು ರೋಗ. ಮಾಡಿದುದನ್ನು ಸಂತೋಷದಿಂದ ಬಡಿಸದವಳು ಒಂದು ಪಿಶಾಚಿ, ಈ ಮೂವರೂ ಪತಿಯನ್ನೇ ಕೊಲ್ಲುವ ಕತ್ತಿಗಳು. ಉತ್ತಮರು ಜ್ಞಾನಸಂಪಾದನೆಯಲ್ಲಿಯೇ ಕಾಲ ಕಳೆಯುತ್ತಾರೆ. ಮಧ್ಯಮರು ಸುಖಭೋಗದಲ್ಲಿ ಕಳೆಯುತ್ತಾರೆ. ಅಧಮರು ನಮಗೆ ಸುಖಭೋಜನ, ಹೊಟ್ಟೆತುಂಬ, ಸಿಕ್ಕಲಿಲ್ಲ." ಎಂದು ಕೋಪಿಸಿಕೊಂಡು ನಿದ್ರೆಕೆಡುತ್ತಾರೆ; ಪ್ರಿಯಬಂಧುಗಳು ತಮ್ಮ ಹೃದಯವೇದನೆಯನ್ನು ಹೇಳಿದರೆ, ಅದನ್ನು ಅರಿಯಲಾರದವರು, ಯೋಗ್ಯರಾದರೆ, ಕಮರಿಯಿಂದ ದುಮುಕಿ ಸಾಯುವುದು ಲೇಸು. ವೇಶ್ಯೆಯರ ಪ್ರೇಮವೂ ದೀಪದ ಬೆಳಕೂ ಎರಡೂ ಒಂದೇ. ಎಣ್ಣೆ ಮುಗಿದಕೂಡಲೇ ದೀಪ ಆರುತ್ತದೆ. ಧನಿಕನ ಹಣವೆಲ್ಲ ಮುಗಿದಕೂಡಲೆ, ವೇಶ್ಯೆಯ ಪ್ರೇಮವೂ ನಿಲ್ಲುತ್ತದೆ. ಶಿಂಗಣ್‌ಮಾಲ್ (ಲಕ್ಷ್ಮಿಯಂತೆ,) ವಿಟನು ಎಷ್ಟೇ ಉದಾರಿಯಾಗಿದ್ದರೂ, ಮೊಗ್ಗುಜೆರಳಿನ ವೇಶ್ಯೆಯರು ಧನವಿಲ್ಲದಾಗ, ಅವನನ್ನು ಕೈಜೋಡಿಸಿ ನಮಸ್ಕರಿಸಿ ತಿರಸ್ಕರಿಸಿ ಬಿಡುತ್ತಾರೆ. ಸ್ತ್ರೀಯರು ಇಂದ್ರಾಣಿಯರಂತೆ ಸುಂದರಿಯರೂ ಪತಿವ್ರತೆಯರೂ ಆಗಿರಬಹುದು. ಆದರೆ ಅವರು ಸಹ, ಆಸೆಯಿಂದ ತಮ್ಮನ್ನು ಅನುಸರಿಸುವ ಕಾಮುಕರ ಕಣ್ಣಿನಿಂದ ಮರೆಯಾಗಿರುತ್ತಾರೆ. ಯಾಕೆಂದರೆ ಅಂತಹ ಎಚ್ಚರಿಕೆಯಿಂದ, ಸುಗಂಧಯುಕ್ತ ಸಿರಿಮುಡಿಯರಿಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸುಲಭವಾಗುವುದು. ಬಡತನದಿಂದ ಸಂಸಾರದವರೆಲ್ಲ ಬರಿಯ ನೀರನ್ನೇ ಕುದಿಸಿ ಕುಡಿಯುತ್ತಿರುವ ಕಾಲದಲ್ಲಿ ಸಹ, ಸಮುದ್ರದ ನೀರನ್ನೆಲ್ಲಾ ಹೀರುವಷ್ಟು ಮಂದಿ ಬಂಧುಗಳು ಬಂದರೂ, ಔದಾರ್ಯ ಸಮುದ್ರವೇ ಆದ ಗೃಹಿಣಿಯೇ, ಮನೆಗೆ ಭೂಷಣ; ಮನೆಯ ಗೋಡೆಗಳು ನಾಲ್ಕು ಕಡೆಯೂ ಬಿದ್ದಿರಬಹುದು, ಎಲ್ಲೆಲ್ಲಿಯೂ ಮಳೆ ಸೋರುತ್ತಿರಬಹುದು, ಆದರೆ ಗೃಹಿಣಿ ಎಲ್ಲರ ಬಾಯಿಂದಲೂ ಹೊಗಳಿಸಿಕೊಳ್ಳುವ ಸದ್ಗುಣಯುತಳಾದರೆ, ಅದೇ ನಿಜವಾದ ಮನೆ. ಕಣ್ಣಿಗೆ ಇಂಪಾಗಿ, ಗಂಡನಿಗೆ ಪ್ರೇಯಸಿಯಾಗಿ, ಎಲ್ಲರ ಗೌರವಕ್ಕೆ ಅರ್ಹಳಾಗಿ, ತನ್ನ ಗಾಂಭೀರ್ಯ ಸಂಯಮ ಲಜ್ಜೆಯಿಂದ ಊರವರನ್ನು ನಾಚಿಸುವವಳಾಗಿ, ವಿನಯಶೀಲಳಾಗಿ, ಅವಶ್ಯಕನಾದಲ್ಲಿ ಖಂಡಿತಳಾಗಿ

ಆದರೂ ಮೃದುವಾಗಿ ಇರುವವಳೇ, ನಿಜವಾದ ಹೆಂಡತಿ. ಆಲಿಂಗನವಿಲ್ಲದಿದ್ದರೆ ಆಕೆಯ ಮುಖ ಕಪ್ಪು ಆಗುವುದು; ಪ್ರೇಮಕಲಹವಿಲ್ಲದಿದ್ದಲ್ಲಿ ಪ್ರೇಮಕ್ಕೆ ಕಾವು ಇಲ್ಲ. ಕಲಹ-ಆಲಿಂಗನ, ಇದೇ ಪ್ರೇಮದ ಮಾರ್ಗವೆಂದು ತೋರುತ್ತದೆ. ಎಲ್ಲರೂ ವಿಶ್ರಾಂತಿ ಹೊಂದುವ ಸಂಧ್ಯಾಕಾಲ, ಆಕೆ ತೋಟದ ಹೂವುಗಳನ್ನೆಲ್ಲ ಆಯ್ದು ಒಂದು ಹಾರವನ್ನು ಕಟ್ಟಿದಳು. ಅನಂತರ ಅದನ್ನು ನೆಲಕ್ಕೆ ಎಸೆದು, 'ಒಂಟಿಯಾಗಿ ಕೊರಗುತ್ತಿರುವ ನನಗೆ ಈ ಹಾರದಿಂದ ಏನು ಪ್ರಯೋಜನ?' ಎಂದು ಅತ್ತಳು; ಮುಳುಗುತ್ತಿರುವ ಸೂರ್ಯನನ್ನು ನೋಡುತ್ತಾ, ಅತ್ತು ಅತ್ತು ಕೆಂಪಾದ ಕಣ್ಣುಗಳುಳ್ಳವಳಾಗಿ, ಕಣ್ಣುಗಳಲ್ಲಿ ತುಂಬುತ್ತಿರುವ ನೀರು ಹನಿಗಳನ್ನು ತನ್ನ ಮೃದುವಾದ ಬೆರಳುಗಳಿಂದ ತೊಡೆಯುತ್ತಾ, ಮಂಚದ ಮೇಲೆ ಒರಗಿಕೊಂಡು ಆಕೆ ಕುಳಿತಿದ್ದಾಳೆ. ಅದೇ ಮೃದುವಾದ ಬೆರಳುಗಳಿಂದ ಆಕೆಯು ಕಳೆದು ಹೋದ ದಿನಗಳನ್ನು ಎಣಿಸುತ್ತಿದ್ದಾಳೆ, ಅಯ್ಯೋ, ಅವಳು ಎಣಿಸುತ್ತಿರುವುದು ನನ್ನ ಅಪರಾಧಗಳನ್ನು ಇರಬಹುದೆ? ಎಂದು ತಿರಸ್ಕೃತ ಪ್ರಿಯನು ಯೋಚಿಸುತ್ತಾನೆ; ದಾನ ಮಾಡುವ ಶಕ್ತಿ ಹೋಯಿತು; ಯೌವನ ಬಹಳ ಹಿಂದೆಯೇ ಕಳೆದುಹೋಯಿತು. ನಮ್ಮನ್ನು ಪ್ರೀತಿಸಿದವರಾರೂ, ಈಗ ನಮ್ಮನ್ನು ನೆನೆಯುತ್ತಿಲ್ಲ. ಇನ್ನು ಭವಿಷ್ಯದ ಸುಖವನ್ನು ಹುಡುಕುವ ಆಸೆಯನ್ನು ಬಿಟ್ಟು ವಿರಕ್ತನಾಗಿ ಸನ್ಯಾಸಿಯಾಗುವುದೇ ಮೇಲು."

ನಾಲಡಿಗಳಲ್ಲಿರುವ ಮುಖ್ಯ ಸ್ವಾರಸ್ಯ, ಅವುಗಳ ಛಂದಸ್ಸು ಮತ್ತು ಅತ್ಯಂತ ಬಿಗಿಯಾದ ಮಿತವಾದ ಪದಪ್ರಯೋಗ. ಕವನಕಾರರು ಇದರಲ್ಲಿ ಒಂದು ಮಾತ್ರೆಯನ್ನು ಸಹ ಹೆಚ್ಚಾಗಿ ಉಪಯೋಗಿಸಲು ಒಪ್ಪುವವರಲ್ಲ. ಇದರ ಛಂದಸ್ಸನ್ನು ಅರಿಯಲು ಒಂದು ಎರಡು ಉದಾಹರಣೆ ಕೊಡಬಹುದು.

> ಈಟ್ಟಲುಂ ತುಣ್ಬಂ ತೀಟ್ಟಿಯ ಒಣ್ ಪೊರುಳೈ
> ಕಾತ್ತಲುಂ ಆಂಗೆ ಕಡುಂತುಣ್ಬಂ—ಕಾತ್ತಲ್
> ಕುರೈಪಡಿನ್ ತುಣ್ಬಂ, ಕೆಡಿನ್ ತುಣ್ಬಂ ತುಣ್ಬ
> ಕುರೈಪದಿ ಮತ್ತೈ ಪೊರುಳ್.

ಹಣವನ್ನು ಶೇಖರಿಸಿಡುವುದು ಕಷ್ಟ. ಅದನ್ನು ಕಾಯುವುದು ಹೆಚ್ಚು ಕಷ್ಟ. ಧನ ಕಡಿಮೆಯಾದರೆ ಅದೂ ಕಷ್ಟ. ಹೀಗೆ ಧನವೇ ಕಷ್ಟಕ್ಕೆ ಆವಾಸಸ್ಥಾನ.

ಕಲ್ವಿಕರೈಯಿಲ್ ಕಲ್ಪವರ್ ನಾಳ್ ಶಿಲ
ಮೆಲ್ಲ ನಿನೈಕ್ಕಿರ ಪಿಣಿಪಲ–ತೆಳ್ಳಿದಿನ್
ಆರಾಯುಂ ದಮೈಯುಪ್ಪೈಯು ಕಲ್ಪವೇ ನೀರೊಳಿಯು
ಪಾಲುಣ್ಕುರುಕಿತ್ತೆರಿಂದು

ಜ್ಞಾನ ಸಮುದ್ರ. ಕಲಿಯುವವನ ಆಯಸ್ಸು ಅಲ್ಪ. ಅದರಲ್ಲಿಯೂ ರೋಗವೂ ಬರಬಹುದು. ಆದುದರಿಂದ ವಿವೇಕದಿಂದ ಕಲಿಯಬೇಕಾದುದನ್ನು ಕಲಿಯಿರಿ; ಹಂಸಕ್ಷೀರ ನ್ಯಾಯದಂತೆ.

ನೀರಿನುಂ ನುಣ್ಣಿದು ನೆಯ್ ಎಣ್ಬರ್, ನೆಯ್ಯಿನುಂ
ಯಾರುಂ ಅರಿವರ್ ಪುಗೈ ನುಣ್ಬಂ- ತೇರಿನ್
ನಿರಪ್ಪಿಡುಂ ಪೈಯಾಳನ್ ಪುಕುವೇ, ಪುಕೈಯುಂ
ಪುಗಳ್ಕರಿಯ ಪೊಳ್ಳೈ ನುಳ್ಳೆಂದು

ನೀರು ಪ್ರವೇಶಿಸದ ಎಡೆ ತುಪ್ಪ ಒಳಗೆ ನುಗ್ಗುತ್ತೆ. ಹೊಗೆ ತುಪ್ಪಕ್ಕಿಂತ ಸೂಕ್ಷ್ಮ. ತುಪ್ಪ ಹೋಗದೆಡೆ ಹೋಗುತ್ತೆ. ಭಿಕ್ಷುಕ, ಹೊಗೆ ಸಹ ಪ್ರವೇಶಿಸದ ಕಡೆ ಪ್ರವೇಶಿಸುತ್ತಾನೆ.

ಪುಕ್ಕ ವಿಡತ್ತಚ್ಚಂ ಪೋದರುಂ ಪೋದಚ್ಚಂ
ತುಯ್ಕುವಿಡತ್ತಚ್ಚಂ ತೋನ್ರಾಮಲ್ಕಾಪಚ್ಚಂ
ಎಕ್ಕಾಲುಂ ಅಚ್ಚಂ, ಅಚ್ಚಂ ತರುಮಾಲ್ ಎವರ್ಕೋಲೋ
ಉಲ್ಕಾನ್ ಪಿರನ್ಇಳಂ ಪುಗಳ್.

ವ್ಯಭಿಚಾರಿಗೆ ನೆರೆಯವನ ಮನೆಗೆ ಹೋಗುವಲ್ಲಿ ಭಯ, ಹಿಂದಿರುಗುವಲ್ಲಿ ಭಯ, ಒಳಗಿರುವಾಗ ಭಯ. ರಹಸ್ಯವನ್ನು ಕಾಯ್ದುಕೊಳ್ಳುದು ಭಯ, ಯಾವಾಗಲೂ ಭಯವೆ. ಹೀಗಿದ್ದರೂ ನೆರೆಯವನ ಮನೆಗೆ ಯಾಕೆ ಹೋಗದೆ ಇರುವುದಿಲ್ಲ?

ಈ ಚೌಪದಿಕಾರರು ನಿಜವಾದ ಕವಿಗಳಾದುದರಿಂದ ಇವರು ಕೊಟ್ಟಿರುವ ಹೋಲಿಕೆಗಳು ತುಂಬ ಉಚಿತವಾಗಿವೆ. 'ತಾನೂ ಅನುಭವಿಸದೆ ಇತರರಿಗೂ ಕೊಡದ ಹಣ, ಜೇನು ಹುಳು ಕೂಡುಹಾಕಿದ ಜೇನಿನಂತೆ ಇತರರ ಪಾಲು ಆಗುವುದು" "ಸಾವಿರಾರು ಗೋವುಗಳ ನಡುವೆ ತನ್ನ ತಾಯಿ ಇದ್ದರೂ ಅದನ್ನು ಎಳೆಗರು ಹೋಗಿ ಹಿಡಿಯುವಂತೆ, ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳು, ತಮ್ಮ ಕರ್ತೃವನ್ನು ಕಂಡುಹಿಡಿದು ಅವನಿಗೆ ಫಲವನ್ನು ತಲಪಿಸುತ್ತವೆ; ಇತರರ ಹೆಂಡತಿಯನ್ನು ಬಯಸುವುದು ಸರ್ಪದ ಹೆಡೆಯನ್ನು ನೆಕ್ಕಿದಂತೆ,

ಪರಮಾತ್ಮ, ಸೊಗಸಾದ ಪ್ರಕೃತಿ ಸೊಬಗಿನ ಒಡವೆಗಳಿಂದಲೇ ಮೆರೆಯುತ್ತಾನೆ. "ತಂಪಾದ ಬೆಟ್ಟಗಳಿಂದ ಹೂವಿನ ಹಾರಗಳಂತೆ ಸೊಗಸಾದ ಪ್ರದೇಶಗಳಲ್ಲಿ ಝರಿಗಳು ಹರಿಯುತ್ತಿವೆ; ಪ್ರಕಾಶಮಾನವಾದ ದುಂಬಿಗಳು ಹೂವಿನ ಸುತ್ತ ಅಲೆಯುತ್ತಿವೆ; ಎತ್ತರವಾದ ಪರ್ವತಪ್ರದೇಶದಿಂದ ಬೀಳುವ ಜಲಪಾತಗಳು, ಗಂಭೀರವಾಗಿ ಧ್ವನಿಮಾಡುತ್ತಿವೆ. ಗಾಳಿ, ಪುನ್ನೈ ಸುಗಂಧವನ್ನೂ ನೈದಿಲೆಯ ಸುವಾಸನೆಯನ್ನೂ ಎಲ್ಲೆಲ್ಲಿಯೂ ಹರಡುತ್ತಿದೆ. ಸಮುದ್ರತೀರ, ಇಂಪಾಗಿದೆ. ಪರ್ವತದ ಇಳಿಜಾರಿನಲ್ಲಿ ತೋರಾದ ಮಣಿಗಳು ಹೊಳೆಯುತ್ತಿವೆ. ಹಸಿರು ಬೆಳೆದ ಪ್ರದೇಶದಲ್ಲಿ ಅನರ್ಘ್ಯಗಳಾದ ವಸ್ತುಗಳನ್ನು ಝರಿಗಳು ಸಾಗಿಸುತ್ತಿವೆ. ಗಿರಿಗಳೆಲ್ಲ ಪುಷ್ಪಭರಿತವಾಗಿವೆ. ಸಮುದ್ರದಲ್ಲಿ ತೆಂಗಿನ ಮರದ ಗಾತ್ರದ ಅಲೆಗಳು ಒಂದೇ ಸಮನೆ ಏಳುತ್ತಿವೆ, ತೀರದ ಸುಗಂಧಯುಕ್ತವಾದ ಮುಳ್ಳುಗಳಿಗೆ, ಅಲೆಗಳು ಕಚಕುಳಿಯಿಡುತ್ತಿವೆ. ಸುವರ್ಣವರ್ಣದ ಕಾಡುಕೋಳಿಯನ್ನು ಜಲಪಾತ, ಹೆದರಿಸಿ ಓಡಿಸುತ್ತಿದೆ. ಗಿರಿಗಳು, ಅಂತರಿಕ್ಷವನ್ನು ಮುಟ್ಟುತ್ತಿವೆ; ಗೂಡುಗಳಿಂದ ಜೇನು ಯಾವಾಗಲೂ ತೊಟ್ಟಿಕ್ಕುತ್ತಿರುತ್ತದೆ. ಪರ್ವತಗಳ ಬುಡವನ್ನು ಸಮುದ್ರ ತೊಳೆಯುತ್ತಿರುತ್ತದೆ." ಈ ಪ್ರಕೃತಿಯೇ ಸೌಂದರ್ಯ ತೊಡುವುಗಳಾದ, ದೀರ್ಘವಾದ ಬಾಣಗಳಂತೆ ಕಣ್ಣುಳ್ಳ ದೇವರು ನಮ್ಮನ್ನು ರಕ್ಷಿಸಲಿ."

ಉತ್ತರ ದಕ್ಷಿಣದ ವಿರೋಧ ಆಗಲೂ ಇತ್ತು. "ಯಾವ ಭೂಮಿಯಲ್ಲಿ ನಂಜಿನ ಬೀಜವನ್ನು ಬಿತ್ತಿದರೂ ಅದು ತೆಂಗಿನ ಮರವಾಗಿ ಬೆಳೆಯುವುದಿಲ್ಲ. ದಕ್ಷಿಣದವರೂ ಸ್ವರ್ಗಕ್ಕೆ ಹೋಗಿದ್ದಾರೆ. ಮನುಷ್ಯನ ಭವಿಷ್ಯವನ್ನು ನಿರ್ಧರಿಸುವುದು ಅವನ ಜೀವನ ಕ್ರಮ. ಉತ್ತರದ ಅನೇಕರೂ ನರಕವಾಸಿಗಳಾಗಿದ್ದಾರೆ" ಎನ್ನುತ್ತಾನೆ. ಈ ಕವಿ.

ಈ ಗ್ರಂಥವು ಎಂದಿನಿಂದಲೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಓರಿಯೆಂಟಲ್ ಆನರ್ಸ್ ಪರೀಕ್ಷೆಯ ಪಠ್ಯಪುಸ್ತಕವಾಗಿದೆ. ಇದನ್ನು ಅದೇ ವಿಶ್ವವಿದ್ಯಾಲಯದ ಪೌರ್ವಾತ್ಯ ಸಂಸ್ಕೃತಿ ಮತ್ತು ಭಾಷಾಪಂಡಿತ ರೆವರೆಂಡ್ G. V. ಪೋಪ್‌ರು ಇಂಗ್ಲೀಷಿಗೆ ತರ್ಜುಮೆ ಮಾಡಿದರು. ಹಾಗೆಯೇ ಎಲ್ಲಿಸ್ ಎಂಬುವರೂ ಸಹ ಇದರ ಬಹುಭಾಗವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾರೆ.

ರವೀಂದ್ರನಾಥ ಠಾಕೂರರು‡

—★—

(ಸಂಕ್ಷಿಪ್ತ ಸಮಗ್ರ ಸಿಂಹಾವಲೋಕನ)

ರವೀಂದ್ರನಾಥ ಠಾಕೂರರು ಭಾರತದ ಅತ್ಯಂತ ಮಹದ್ವ್ಯಕ್ತಿಗಳ ಪೈಕಿ ಪ್ರಥಮಶ್ರೇಣಿಯಲ್ಲಿ ನಿಲ್ಲಲು ಅರ್ಹರಾದವರು. ಸಮಸ್ತ ಮಾನವ ಜಗತ್ತಿನ ಉದ್ಧಾರಕ್ಕಾಗಿ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿ, ಮಾನವನ ಹಿತಸಾಧನೆಗಾಗಿಯೇ ದುಡಿದ ಹಿರಿಮೆ ಅವರದು. ಠಾಕೂರರು 80 ವರ್ಷಗಳ ಕಾಲ ಅವಿಶ್ರಾಂತವಾಗಿ, ಕವಿತೆ ಕಥೆ ಕಾದಂಬರಿ ನಾಟಕ ಗದ್ಯ ಉಪನ್ಯಾಸ ಚಿತ್ರಕಲೆ ಜಗತ್ತಿನಲ್ಲೆಲ್ಲ ಪ್ರವಾಸ, ಸಂಭಾಷಣೆ ಪತ್ರಲೇಖನ ಇವುಗಳ ಮೂಲಕ ಮಾನವ ಜಗತ್ತಿನ ಏಕತ್ವವನ್ನೂ, ಅವನಲ್ಲಿ ಅಡಗಿರುವ ದೇವತ್ವವಿಕಾಸದ ಮಾರ್ಗವನ್ನೂ ಶಾಶ್ವತವಾದ ಮಾನವೀಯ ಮೌಲ್ಯಗಳನ್ನೂ ಬಾಳಿನ ಸೌಂದರ್ಯವನ್ನೂ, ಸತ್ಯ ಮತ್ತು ಶ್ರದ್ಧಾಪೂರ್ವಕ ವಾಣಿಯಿಂದ ಪ್ರಚಾರಮಾಡಿದರು. ಠಾಕೂರರು ಒಂದು ಅತ್ಯದ್ಭುತ ವ್ಯಕ್ತಿ, ಒಂದು ಅದ್ಭುತಶಕ್ತಿ. ಅವರು ನೂರಾರು ವ್ಯಕ್ತಿಗಳ ಸ್ವಭಾವ ಶಕ್ತಿ ತೇಜಸ್ಸು ಸಾಮರ್ಥ್ಯಗಳನ್ನು ಹೊಂದಿದ್ದರೂ, ಮೂಲದಲ್ಲಿ ಒಂದೇ ಒಂದು ವ್ಯಕ್ತಿಯಾಗಿದ್ದರು. ಜೀವನಪೂರಿತವಾದ ದೊಡ್ಡನದಿಯೊಂದು, ತನ್ನ ಗಮನದ ಮಧ್ಯಮಾರ್ಗದಲ್ಲಿ, ನೂರಾರು ಉಪ ಪ್ರವಾಹಗಳಾಗಿ ಒಡೆದು, ಒಂದೊಂದು ಪ್ರವಾಹವೂ ಮೂಲ ನದಿಯಷ್ಟೇ ಜಲಪೂರ್ಣವಾಗಿ ವೇಗವಾಗಿ ಅನೇಕ ಮೈಲಿಗಳು ಹರಿದು ಸಮೃದ್ಧವಾಗಿ ಬೆಳೆಗಳನ್ನು ಬೆಳೆಸಿ, ಮತ್ತೆ ಎಲ್ಲವೂ ಒಂದಾಗಿ ಸಮುದ್ರದ ಕಡೆಗೆ ಹೊರಡುವಂತೆ, ಠಾಕೂರರು ಒಂದೊಂದು ಸಾಹಿತ್ಯಪ್ರಕಾರದಲ್ಲಿಯೂ ಜೀವನ ಪ್ರಕಾರದಲ್ಲಿಯೂ ಒಂದೊಂದು ಜೀವನದ ಕಾರ್ಯವನ್ನೇ ಮಾಡಿದರೂ, ಅವರ ಜೀವಿತದ ಒಟ್ಟು ಸಾಧನೆ ಅವುಗಳೆಲ್ಲದರ ಮೊತ್ತಕ್ಕಿಂತ ನೂರು ಪಾಲು ಹೆಚ್ಚಾಗಿತ್ತು. ಅವರು, ಕವಿ ಕಲೆಗಾರ ಸಾಧಕ ದಾರ್ಶನಿಕ ವೇದಾಂತಿ ಮಾನವಪ್ರೇಮಿ ಮತ್ತು ಮಾನವ ಜಗತ್ತಿನ ಸೇವಕರು ಆಗಿದ್ದರು. ವಂಗಭೂಮಿಯ ಶ್ರೇಷ್ಠ ವ್ಯಕ್ತಿಗಳಾದ ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರಸೇನ, ರಾಜಾ

‡ಠಾಕೂರರ ಶತಮಾನ ಜನ್ಮೋತ್ಸವಕ್ಕಾಗಿ ಬರೆದುದು.

ರಾಮ ಮೋಹನರಾಯ್, ಬಂಕಿಂ ಚಂದ್ರ, ಸ್ವಾಮಿ ವಿವೇಕಾನಂದ ಈ ಜ್ಯೋತಿಗಳ ಪಂಕ್ತಿಯಲ್ಲಿ ಬೆಳಗಿದವರು ಠಾಕೂರರು. 1941 ನೆ ಸಂವತ್ಸರದ ಆಗಸ್ಟ್ 7 ನೆ ತಾರೀಖು ಅವರಿಗೆ 80 ವರ್ಷ 3 ತಿಂಗಳು ವಯಸ್ಸಾದಾಗ, ಅವರ ಆತ್ಮ, ದೇಹದ ಬಂಧನವನ್ನು ಕಿತ್ತು ಒಗೆದು ಸ್ವಸ್ಥಾನಕ್ಕೆ ಹೋಯಿತು. ಅವರ ಮರಣ ವಾರ್ತೆಯನ್ನು ಕೇಳಿ, ಪೂರ್ಣಮಾನವ ಜನಾಂಗ—ಜಾತಿ ಬುಡಕಟ್ಟು, ದೇಶ, ಪಂಗಡ, ರಾಜಕೀಯಪಕ್ಷಗಳ ವ್ಯತ್ಯಾಸವಿಲ್ಲದೆ, ದುಃಖದಲ್ಲಿ ಮುಳುಗಿತು. ಜಗತ್ತಿನ ಎಲ್ಲಾ ರಾಷ್ಟ್ರಗಳೂ ಈ ವಿಶ್ವಪ್ರೇಮಿ ಕವಿಯ ಮರಣದಿಂದ ಮಾನವ ಜಗತ್ತು ಅತ್ಯಂತ ಬಡವಾಯಿತೆಂದೂ ಆತನ ಅಗಲುವಿಕೆಯಿಂದ ಬರಿದಾದ ಸ್ಥಾನವನ್ನು ತುಂಬುವವರು ಇಲ್ಲವೆಂದೂ ಹಲುಬಿದವು.

ಅವರ ಮರಣವಾರ್ತೆಯನ್ನು ಕೇಳಿ, ವರ್ಧಾದಲ್ಲಿ ಮಹಾತ್ಮ ಗಾಂಧಿಯವರ ಸಮ್ಮುಖದಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್‌ಸಮಿತಿ, ಈ ಮುಂದಲ ನಿರ್ಣಯವನ್ನು ಅಂಗೀಕರಿಸಿತು.

"ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅತ್ಯಂತ ದುಃಖಹೃದಯದಿಂದ ರವೀಂದ್ರನಾಥ ಠಾಕೂರರಿಗೆ ಗೌರವವನ್ನು ಅರ್ಪಿಸುತ್ತದೆ. ಅವರು ಮಹತ್ಕಾರ್ಯವನ್ನು ಸಾಧಿಸಿ ಭಾರತಕ್ಕೂ ಜಗತ್ತಿಗೂ ಶಾಶ್ವತವಾದ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಭಾರತ, ಅವರನ್ನು ಹೆಮ್ಮೆ ಮತ್ತು ಕೃತಜ್ಞತೆಯಿಂದ ನೆನೆಯುತ್ತದೆ. ಅವರೇ ನಮ್ಮ ದೊಡ್ಡ ಆಸ್ತಿ. ಅವರು ನಮ್ಮ ಪ್ರಾಚೀನ ಋಷಿಗಳ ವರ್ಗಕ್ಕೆ ಸೇರಿದವರು. ಅವರು, ಭಾರತದ ಬಹುಮುಖವಾದ ವೈಭವಪೂರ್ಣ ಸಂಸ್ಕೃತಿಯ ಪ್ರತೀಕ. ಭಾರತದ ಪರಂಪರಾಗತವಾದ ಜ್ಞಾನವಿವೇಕನಿಧಿಯಾಗಿ ಅವರು ಹೊಸದು ಹಳೆಯದರ ಮತ್ತು ಪೂರ್ವ ಪಶ್ಚಿಮಗಳ ಸಮರಸ ಮಿಳನವಾಗಿದ್ದಾರೆ. ನಮ್ಮ ವೈಭವಪೂರ್ಣ ಸಂಸ್ಕೃತಿಗೆ ಅವರು ತಮ್ಮ ತೀಕ್ಷ್ಣಬುದ್ಧಿ ಮತ್ತು ಕಲ್ಪನೆಯನ್ನು ಎರೆದು ಗಾನ ಆನಂದ ಸೌಂದರ್ಯಗಳನ್ನು ಸೇರಿಸಿದರು. ಅವು, ಇಂದಿನ ಜನಾಂಗಗಳ ದುಃಖದ ಹೊರೆಯನ್ನು ಕಳೆದು, ಮುಂದೆ ಬರುವ ಜನಾಂಗಗಳಿಗೆ ಸ್ಫೂರ್ತಿಯನ್ನು ನೀಡುತ್ತವೆ. ಭಾರತದ ಸುಪುತ್ರರಾದ ಅವರು ಭಾರತದ ಸ್ವಾತಂತ್ರ್ಯವನ್ನೂ ನಮ್ಮ ಜನರ ದಾರಿದ್ರ್ಯ ಮತ್ತು ಇತರ ಕುಂದುಕಗಳ ನಿವಾರಣೆಯನ್ನೂ ಬಯಸಿ ಹೋರಾಡಿದರು. ಅಖಿಲ ಜಗತ್ತಿನ ಸತ್ಪ್ರಜೆಯಾದ ಅವರು, ಯಾವ ಸಂಕುಚಿತ

ಭಾವನೆಯೂ ಇಲ್ಲದೆ ಮನುಷ್ಯಸಮಾಜದ ಶಾಂತಿ,ಸ್ವಾತಂತ್ರ್ಯ,ಜ್ಞಾನೋದಯ ವನ್ನು, ಬಯಸಿ ದುಡಿದರು. ಶಾಂತಿನಿಕೇತನ ಮತ್ತು ವಿಶ್ವಭಾರತಿಯಲ್ಲಿ ಅವರು ತಮ್ಮ ಕನಸಿನ ಶಾಲೆಗಳನ್ನೂ ವಿಶ್ವವಿದ್ಯಾಲಯವನ್ನೂ ಸ್ಥಾಪಿಸಿದರು. ಅವುಗಳನ್ನು ಬೆಳೆಸಿ ಅಭಿವೃದ್ಧಿಪಡಿಸಿ ಫಲಕಾರಿಯಾಗಿ ಮಾಡುವುದು ಭಾರತೀಯರಾದ ನಮಗೆ ಹೆಮ್ಮೆಯ ಕರ್ತವ್ಯ. ಭಾರತೀಯರಿಗೆ ಒಂದು ಸ್ಫೂರ್ತಿಯಾಗಿ ಸದಾ ಸವಾಲಿನಂತಿರುವ ಈ ಸಂಸ್ಥೆಗಳನ್ನು ಬೆಳೆಸುವುದೇ ಇವರಿಗೆ ನಾವು ನಿರ್ಮಿಸುವ ಸ್ಮಾರಕ."

ಭಾರತೀಯರಿಗಂತೂ ದುಃಖ ಸಹಿಸಲಸದಳವಾಯಿತು. ರವೀಂದ್ರನಾಥ ಠಾಕೂರರು ಭಾರತೀಯರ ಹೃದಯವನ್ನು ಅರವತ್ತು ವರ್ಷಗಳ ಕಾಲ ಹಾಗೆ ಸೂರೆಗೊಂಡಿದ್ದರು. ನಿಸ್ಸಂದೇಹವಾಗಿ ಅವರು ಭಾರತೀಯರ ಹೃದಯದ ರಾಜ ಆಗಿದ್ದರು. ಎಂಭತ್ತು ವರುಷದ ಜೀವನ ಎಂದರೆ ಕಡಿಮೆಯ ಕಾಲವಲ್ಲ. ಆದರೆ ಅದೇ ಅಷ್ಟೊಂದು ದೀರ್ಘಾವಧಿಯೂ ಅಲ್ಲ. ನೂರು ವರುಷ ಬದುಕಬೇಕು ಎಂಬುದು ಭಾರತೀಯರ ಗುರಿ. ವೈಷ್ಣವ ಸಂಪ್ರದಾಯದ ಗುರುಗಳಾದ ಶ್ರೀ ರಾಮಾನುಜಾಚಾರ್ಯರು ನೂರ ಇಪ್ಪತ್ತೈದು ವರುಷಗಳು ಬದುಕಿದ್ದರೆಂದು ಪ್ರತೀತಿ ಇದೆ. ಮಹಾತ್ಮ ಗಾಂಧಿಯವರು ತಮಗೆ ನೂರ ಇಪ್ಪತ್ತೈದು ವರುಷಗಳು ಬದುಕುವ ಆಸೆ ಇದೆಯೆಂದು ಹೇಳುತ್ತಿದ್ದರು. ಆದರೆ ಬರಿಯ ದೀರ್ಘ ಜೀವನವನ್ನು ಬಾಳುವುದು ಮಾತ್ರವೇ ಮಾನವನ ಗುರಿಯಲ್ಲವಷ್ಟೆ.

ತರವೋಪಿ ಹಿ ಜೀವಂತಿ ಜೀವಂತಿ ಮೃಗಪಕ್ಷಿಣಃ
ಸಜೀವತಿ ಮನೋಯಸ್ಯ ಮನಸೇನ ಹಿ ಜೀವತಿ

[ಗಿಡಮರಗಳೂ ಬಾಳುತ್ತವೆ. ಮೃಗಪಕ್ಷಿಗಳೂ ಬಾಳುತ್ತವೆ. ಆದರೆ ಮನಸ್ಸು, ಬುದ್ಧಿ ಆತ್ಮದಿಂದ ಯಾರು ಬಾಳುತ್ತಾರೆಯೋ, ಅವರೇ ನಿಜವಾಗಿ ಬಾಳುವವರು.]

ಭಾರತೀಯರ ಜೀವನದ ಮೇಲೆ. ರವೀಂದ್ರನಾಥ ಠಾಕೂರರ ಪ್ರಭಾವವನ್ನು ಅವರ ಕೃತಿಗಳಿಂದ ಮಾತ್ರವೇ ನಿರ್ಣಯಿಸುವುದು ಕಷ್ಟ, ಒಬ್ಬ ಮಹದ್ವ್ಯಕ್ತಿಯ ಅಂತರಂಗವನ್ನೂ ಆತನ ವಿವಿಧಮುಖ ಪ್ರತಿಭೆ ವ್ಯಕ್ತಿತ್ವ ಯೋಗ್ಯತೆಗಳನ್ನೂ ಆತನ ಕೃತಿಗಳಿಂದಲೇ ಅರಿಯುವುದು ಸಾಧ್ಯವಿಲ್ಲ. ಠಾಕೂರರೇ ತಮ್ಮ ಒಂದು ಕವನದಲ್ಲಿ "ನನ್ನನ್ನು ಮೇಲೆ ಮೇಲೆ ಮಾತ್ರ ನೋಡಿ ನಿರ್ಣಯಿಸಬೇಡಿ" ಎಂದು ಹೇಳುತ್ತಾರೆ.

"ಹೀಗೆ ನನ್ನನ್ನು ಮೇಲೆ ಮೇಲೆ ನೋಡಬೇಡಿ. ನನ್ನ ಬಾಹ್ಯವೇಷ ದಲ್ಲಿ ನನ್ನನ್ನು ಹುಡುಕಬೇಡಿ. ನನ್ನ ಸಂತೋಷ ಮತ್ತು ದುಃಖದಲ್ಲಿಯೂ ನಾನು ಇಲ್ಲ. ನನ್ನ ಸಂಕಟವನ್ನರಿಯಲು ನನ್ನ ಹೃದಯವನ್ನು ಹುಡುಕಿದರೂ ಸಾಲದು. ನನ್ನ ಸಂತೋಷದಲ್ಲಿಯೂ ನಾನು ಇಲ್ಲ. ಕವಿಯನ್ನು ಅವನ ಜೀವನ ಚರಿತ್ರೆಯಲ್ಲಿಯೂ ಕಾಣಲಾರಿರಿ."

\+ + + +

1857ರ ಪ್ರಥಮ ಸ್ವಾತಂತ್ರ್ಯ ಯುದ್ಧ ಮುಗಿದು, ಅದರ ಕೊಳ್ಳಿಗಳು ಇನ್ನೂ ಹೊಗೆಯಾಡುತ್ತಲೇ ಇದ್ದವು. 1861ನೆ ಮೇ. 7ನೆ ತಾರೀಖು ಬೆಳಗಿನಜಾವ, ಅಂದರೆ ಬಂಗಾಳಿ ಸಂವತ್ಸರದ ವೈಶಾಖ 25 ರಂದು ಕಲ್ಕತ್ತ ದಲ್ಲಿ ಅವರ ತಂದೆತಾಯಿಗಳ 14ನೆಯ ಮಗನಾಗಿ ರವೀಂದ್ರ ಜನಿಸಿದ. ಅವ ರದು ಶಾಂಡಿಲ್ಯಗೋತ್ರ. ಅವರ ವಂಶದ ಪೂರ್ವೀಕರು ಬಹಳ ಕಾಲದ ಹಿಂದೆಯೇ ಜೆಸ್ಸೂರಿನಿಂದ ಕಲ್ಕತ್ತದ ಪೋರ್ಟ್ ವಿಲಿಯಂ ಕೋಟೆಯ ಪ್ರದೇ ಶದಲ್ಲಿದ್ದ ಗೋವಿಂದಪುರ್ ಎಂಬ ಬಡಾವಣೆಗೆ ಬಂದು ನೆಲಸಿದ್ದರು. ಸ್ವಲ್ಪ ಕಾಲದೊಳಗೆ ಆ ವಂಶದ ಜಯರಾಮ ಠಾಕೂರ್ ಎಂಬುವರು ಈಸ್ಟ್ ಇಂಡಿಯ ಕಂಪನಿಯ ಜತೆಯಲ್ಲಿ ಸೇರಿ ವ್ಯಾಪಾರ, ವ್ಯವಹಾರದಿಂದ ಧನಿಕ ರಾದರು. ಅವರ ಮರಿಮಗನೇ ರಾಜಕುಮಾರ ದ್ವಾರಕಾನಾಥ ಠಾಕೂರ್. ಅವರು ಆಚರಣೆಯಲ್ಲಿ ಪ್ರಗತಿಪರರೂ ಸುಧಾರಿತ ಅಭಿಪ್ರಾಯವುಳ್ಳವರೂ ಸಾರ್ವಜನಿಕ ವ್ಯಕ್ತಿಗಳೂ ಆಗಿದ್ದರು. ಅವರು ಆಂಗ್ಲೇಯರ ಕ್ರಮದಲ್ಲಿ ವ್ಯಾಪಾರ ಉದ್ಯಮಗಳನ್ನು ಮಾಡಿ ಹಣ ಸಂಪಾದಿಸಿ ದೊಡ್ಡ ಜಮೀನ್‌ದಾರ ರಾದರು. ಅವರ ಜೀವನ ಕ್ರಮ ಅತ್ಯಂತ ವೈಭವಯುಕ್ತವಾಗಿತ್ತು. ಅವರು ರಾಜಾರಾಮ್ ಮೋಹನರಾಯರ ಪ್ರಭಾವಕ್ಕೆ ಒಳಗಾಗಿ ಇಂಗ್ಲೆಂಡಿಗೆ ಸಹ ಹೋಗಿದ್ದು ಅಲ್ಲಿಯೇ 1846ರಲ್ಲಿ ಮೃತಪಟ್ಟರು. ಅವರ ಮಗನೇ ದೇವೇಂದ್ರ ನಾಥ. ದೇವೇಂದ್ರನಾಥರನ್ನು ಜನ, ಮಹರ್ಷಿ ಎಂದೇ ಕರೆಯುತ್ತಿದ್ದರು. ಬ್ರಹ್ಮ ಸಮಾಜವು, ಉಪನಿಷತ್‌ಗಳ ಸತ್ಯಗಳನ್ನು ಮಾತ್ರ ಒಪ್ಪುತ್ತವೆಯಾ ದರೂ, ಸಂಪ್ರದಾಯಬದ್ಧ ಹಿಂದುಗಳಿಗೆ ಸಹ ಮಹರ್ಷಿ ದೇವೇಂದ್ರನಾಥರಲ್ಲಿ, ಅವರ ಸಾತ್ವಿಕ ಗುಣ, ಜ್ಞಾನಕ್ಕಾಗಿ, ಗೌರವವಿದ್ದಿತು. ದೇವೇಂದ್ರನಾಥರು ಪ್ರಾಮಾಣಿಕರು; ತಂದೆ ಮಾಡಿದ ಸಾಲವನ್ನು ಕಾನೂನಿಗನುಸಾರವಾಗಿ

ಅವರು ಕೊಡಬೇಕಾದುದಿಲ್ಲದಿದ್ದರೂ, ಕರ್ತವ್ಯ ಮತ್ತು ನ್ಯಾಯದ ದೃಷ್ಟಿಯಿಂದ ಅವರು ತಮಗೆ ಎಷ್ಟು ಕಷ್ಟವಾದರೂ ಆ ಸಾಲವನ್ನೆಲ್ಲ ತೀರಿಸಿದರು. ರವೀಂದ್ರನಾಥ ಠಾಕೂರರು ಇವರ ಹದಿನಾಲ್ಕನೆಯ ಮಗ.

ಠಾಕೂರರ ಬಾಲ್ಯಜೀವನ, ಮನೆಯಲ್ಲಿ, ಹೆಚ್ಚಾಗಿ ನಿಯಮಬದ್ಧ ವಾತಾವರಣದಲ್ಲಿಯೇ ಕಳೆಯಿತು. ಅವರ ಬಾಲ್ಯ ವಿದ್ಯಾಭ್ಯಾಸ ಕಲ್ಕತ್ತದ ಓರಿಯೆಂಟಲ್ ಸೆಮಿನರಿ ಮತ್ತು ವಂಗೀಯ ಪರಿಷತ್ ಎಂಬುವುಗಳಲ್ಲಿ ನಡೆದವು. ಆಗಿನ ಪಾಠಕ್ರಮ ಈಗಿನ ಪಾಠಕ್ರಮದಿಂದ ಬೇರೆಯಾಗಿರಲಿಲ್ಲ. ಆದರೆ ಸ್ವಾಭಾವಿಕವಾಗಿ ಠಾಕೂರರಿಗೆ ಆ ವಿದ್ಯೆಯಲ್ಲಿ ಪ್ರೀತಿಯುಂಟಾಗಲಿಲ್ಲ. ಅದರ ಬದಲು, ಜುಳುಜುಳು ಹರಿಯುತ್ತಿರುವ ಝರಿಗಳ ಗಾನ, ಎತ್ತರವಾಗಿ ಎಲೆಗಳಿಂದ ತುಂಬಿರುವ ಹುಣಸೆಮರಗಳ ನೆರಳುಗಳು, ಹಾರಾಡುತ್ತಿರುವ ಹಕ್ಕಿಗಳ ಚಿಲಿಪಿಲಿ, ಅರಳುತ್ತಿರುವ ಪುಷ್ಪಗಳು, ಬೆಳದಿಂಗಳು, ಚಂದ್ರ, ತಂಗಾಳಿ ಇವುಗಳೇ ಅವರ ಪಠ್ಯಪುಸ್ತಕಗಳಾದವು. ಮಹರ್ಷಿ ದೇವೇಂದ್ರನಾಥ (ತಂದೆ) ರಿಂದ ರವೀಂದ್ರರಿಗೆ, ಉಪನಿಷತ್ ಭಾರತೀಯ ಸಂಸ್ಕೃತಿ ಇವುಗಳಲ್ಲಿ ಪ್ರೇಮವುಂಟಾಯಿತು. ಮಹರ್ಷಿಗಳು ಠಾಕೂರರನ್ನು ಒಂದುಸಲ ಹಿಮಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಇವೆಲ್ಲವುಗಳಿಂದ ಠಾಕೂರರ ಏಕಾಗ್ರತೆ, ಧ್ಯಾನಪರತೆ, ಏಕಾಂತ ಆಲೋಚನಾಶಕ್ತಿ, ಇವೆಲ್ಲ ಹೆಚ್ಚಾದವು. ತಮ್ಮ ಧ್ಯಾನಕ್ಕೆ ಆವಶ್ಯಕವೆಂದು ಭಾವಿಸಿ, ಮಹರ್ಷಿಗಳು 1863 ರಲ್ಲಿ ಶಾಂತಿನಿಕೇತನವನ್ನು ಕೊಂಡುಕೊಂಡಿದ್ದರು. ಅದರ ಸೀಮಾತೀತವಾದ ಬಯಲುಗಳಲ್ಲಿ ಠಾಕೂರರು ತಂದೆಯೊಂದಿಗೆ ಕುಳಿತು ಅನೇಕ ವೇಳೆ ಅವರಿಂದ ಉಪನಿಷತ್ ರಹಸ್ಯಗಳ ಬೋಧನೆಯನ್ನು ಪಡೆಯುತ್ತಿದ್ದುದಲ್ಲದೆ, ಜೀವನಮರಣ, ಸೃಷ್ಟಿಸ್ಥಿತಿಲಯಗಳ ಅದ್ಭುತ ರಹಸ್ಯಚಿಂತನದಲ್ಲಿ ತಲ್ಲೀನರಾಗುತ್ತಿದ್ದರು. ಕೊನೆಯವರೆಗೆ ಶಾಂತಿನಿಕೇತನ, ರವೀಂದ್ರರ ಅಂತರಂಗ ರಾಜಧಾನಿಯೂ, ಅವರಿಗೆ ನಿಜವಾಗಿಯೂ ಶಾಂತಿಯ ಬೀಡೂ ಆಗಿದ್ದಿತು.

ರವೀಂದ್ರರು ಪಾಠಶಾಲೆಯಲ್ಲಿ ವಿದ್ಯೆ ಕಲಿಯದಿದ್ದರೂ, ಮಹರ್ಷಿ ದೇವೇಂದ್ರನಾಥ ಠಾಕೂರರ ಸಹವಾಸ ಮತ್ತು ಸ್ವಭಾವದ ನಿರೀಕ್ಷಣೆಯಿಂದಲೇ ಒಳ್ಳೆಯ ವಿದ್ಯಾವಂತರಾದರು. ಮಹರ್ಷಿಗಳು ಅವನ 12 ನೆ ವಯಸ್ಸಿನಲ್ಲಿ ರವೀಂದ್ರನನ್ನು ಅಮೃತಸರದ ಸ್ವರ್ಣ ದೇವಾಲಯಕ್ಕೆ ಕರೆದುಕೊಂಡು

ಹೋದರು. ರವೀಂದ್ರನಲ್ಲಿದ್ದ ಕೆಲವಾದರೂ ಸೂಕ್ಷ್ಮಗುಣಗಳನ್ನು ಅವರ ತಂದೆ ಗ್ರಹಿಸಿದ್ದರೋ ಏನೋ? ಅಂತೂ ಅವಕಾಶ ದೊರೆತಾಗಲೆಲ್ಲಾ ಅವರು ಮಗನಿಗೆ,ಸಂಸ್ಕೃತ ಇಂಗ್ಲಿಷು ಖಗೋಳ ಮುಂತಾದ ವಿಷಯಗಳನ್ನು ಬೋಧಿಸುತ್ತಲೇ ಇದ್ದರು. ಖಗೋಳ ಶಾಸ್ತ್ರ, ಕೊನೆಯವರೆಗೆ ಠಾಕೂರರ ಪ್ರೀತಿಯ ವಿಷಯವೇ ಆಗಿತ್ತು. ರವೀಂದ್ರರ ಧ್ಯಾನಾಸಕ್ತಮನೋವೃತ್ತಿ ಸಹ ಅವರಿಗೆ, ಅವರ ತಂದೆಯವರಿಂದಲೇ ಲಭ್ಯವಾಗಿತ್ತು.

ರವೀಂದ್ರರು ತಮ್ಮ 9ನೆ ವಯಸ್ಸಿನಲ್ಲಿಯೇ ಕವನಗಳನ್ನು ರಚಿಸಲು ಪ್ರಾರಂಭಿಸಿದರೆಂದು ಗೊತ್ತಾಗುತ್ತದೆ. ಅವರ ಹನ್ನೆರಡನೆಯ ವಯಸ್ಸಿನಲ್ಲಿ ಅವರು ಪೃಥ್ವಿರಾಜಪರಾಜಯವೆಂಬ ನಾಟಕವನ್ನು ಬರೆದರು. ತಮ್ಮ 13ನೆ ವಯಸ್ಸಿನಲ್ಲಿ ಮ್ಯಾಕಬೆತ್‌ನ್ನು ಬಂಗಾಳಿಗೆ ಭಾಷಾಂತರಿಸಿದರು. ತಮ್ಮ 15ನೆ ವಯಸ್ಸಿನಲ್ಲಿ ಅವರು ಬನ್‌ಫೂಲ್ ಎಂಬ ಕಥನಕವನವನ್ನು ಬರೆದರು. ರವೀಂದ್ರರು ಆ ವೇಳೆಗಾಗಲೇ ಭಾನುಸಿಂಗ್ ಠಾಕೂರ್ ಎಂಬ ಹೆಸರಿನಲ್ಲಿ ಬಂಗಾಳದಲ್ಲಿ ಪ್ರಸಿದ್ಧರಾಗಿದ್ದರು. ತಮ್ಮ 17ನೆ ವಯಸ್ಸಿನಲ್ಲಿ ರವೀಂದ್ರರು ತಮ್ಮ ಅಣ್ಣ (ಭಾರತೀಯರ ಪೈಕಿ ಮೊದಲನೆಯ ಐ.ಸಿ.ಎಸ್.)ಆದ ಎಸ್. ಎನ್. ಠಾಕೂರರೊಂದಿಗೆ ಇಂಗ್ಲೆಂಡಿಗೆ ಹೋದರು. ಅಲ್ಲಿ ಹೆನ್ರಿ ಮಾರ್ಲೆ, (ಲಾರ್ಡ್ ಮಾರ್ಲೆಯವರ ತಮ್ಮಂದಿರು) ಇವರ ಗುರುಗಳಾಗಿದ್ದರು. "ಭಾರತದಲ್ಲಿ ಆಂಗ್ಲೇಯರು" ಎಂಬ ರವೀಂದ್ರರ ನಿಬಂಧವನ್ನು ಮಾರ್ಲೆಯವರು ತರಗತಿಯಲ್ಲಿ ಓದಿ ಹೇಳಿದರು. ಅದರಲ್ಲಿ ರವೀಂದ್ರರು, ಭಾರತದಲ್ಲಿ ಆಂಗ್ಲರ ನಡೆನುಡಿ ಜರ್ಬು ರಾಜಠೀವಿ ಪ್ರತಿಷ್ಠೆ ಇವುಗಳನ್ನೆಲ್ಲ ಹಾಸ್ಯಮಾಡಿದ್ದರು. ಆದರೆ ರವೀಂದ್ರರಿಗೆ ಇಂಗ್ಲೆಂಡಿನಲ್ಲಿ ಕಲಿತ ವಿದ್ಯೆಯಿಂದ ಏನೂ ಪ್ರಯೋಜನವಾದಂತೆ ಕಾಣುವುದಿಲ್ಲ. ಅಲ್ಲಿಯ ಪಾಠಕ್ರಮಗಳೂ ಅವರನ್ನು ಆಕರ್ಷಿಸಲಿಲ್ಲ. ಅವರು ಅಲ್ಲಿ ಸ್ವಲ್ಪ ಕಾಲ ಪಾಶ್ಚಾತ್ಯಸಂಗೀತವನ್ನೂ ಕಲಿತರು; ಅನೇಕ ವೇಳೆ ಬ್ರಿಟಿಷ್ ಮ್ಯೂಸಿಯಮ್‌ಗೆ ಹೋಗಿ ಕುಳಿತುಕೊಳ್ಳುತ್ತಿದ್ದರು. ಆದರೆ ಯಾವ ವಿದ್ಯೆಯನ್ನೂ ಪೂರ್ತಿ ಮುಗಿಸದೆ ಭಾರತಕ್ಕೆ ಹಿಂದಿರುಗಿದರು.

ರವೀಂದ್ರರು, ಬ್ಯಾರಿಸ್ಟರ್ ಆಗುವ ಉದ್ದೇಶದಿಂದ ಮತ್ತೆ ಒಂದು ಬಾರಿ ಇಂಗ್ಲೆಂಡಿಗೆ ಹೊರಟರು. ಆದರೆ ಮದರಾಸನ್ನು ತಲಪಿ ಮತ್ತೆ ಮನೆಗೆ ಹಿಂದಿರುಗಿದರು. ಒಂದು ಕಡೆಗೆ ಹೊರಡುವುದು ಮತ್ತೆ ಮಧ್ಯ ಮಾರ್ಗದಲ್ಲಿ

ಪ್ರಯಾಣವನ್ನು ಬದಲಾಯಿಸುವುದು, ಈ ವಿಚಿತ್ರ ಸ್ವಭಾವ ಆ ಸಂಸಾರದಲ್ಲಿ ಎಲ್ಲರಿಗೂ ಇತ್ತು. ರವೀಂದ್ರರು ಪ್ರಯಾಣ ಹೊರಟು, ಸ್ಟೇಷನ್‌ಗೆ ಹೋಗಿ ಅಥವ ಮುಂದಲ ಊರಿಗೆ ಹೋಗಿ, ಹಿಂದಿರುಗುತ್ತಿದ್ದರು. ಆದರೆ ಅವರ ತಂದೆ ಮಹರ್ಷಿ ದೇವೇಂದ್ರ ನಾಥ ಠಾಕೂರರು, ಗಂಟು ಮೂಟೆ ಕಟ್ಟಿ ಸಾಮಾನುಗಳನ್ನೆಲ್ಲ ಗಾಡಿಯಲ್ಲಿ ಹಾಕಿಸಿ ಕಾಂಪೌಂಡಿನ ಬಾಗಿಲಿಗೆ ಬಂದ ನಂತರ, ಮನಸ್ಸನ್ನು ಬದಲಾಯಿಸಿ ಮನೆಗೆ ಹಿಂದಿರುಗುತ್ತಿದ್ದರು. ಪ್ರಯಾಣ ಕ್ಕಾಗಿ ಸಿದ್ಧವಾದ ಗಂಟುಗಳು, ಅನೇಕ ದಿನಗಳ ವರೆಗೆ ಪ್ರಯಾಣ ಎಲ್ಲಿಗೆ ಎಂಬುದು ನಿಶ್ಚಯವಾಗದೆ ಹಾಗೆಯೇ ಇರುತ್ತಿದ್ದವು.

ಆದರೆ ಈ ಕಾಲದಲ್ಲೆಲ್ಲ ರವೀಂದ್ರರ ಕಾವ್ಯ ಶಕ್ತಿ ಒಂದೇ ಸಮನಾಗಿ ಬೆಳೆಯುತ್ತಲೇ ಇದ್ದಿತು. ವಾಲ್ಮೀಕಿ ಪ್ರತಿಭಾವನ್ನು ಠಾಕೂರರು ಬರೆದು ತಾವೇ ಅದರಲ್ಲಿ ಅಭಿನಯಿಸಿದರು. ಠಾಕೂರರು ಇದರಲ್ಲಿ ಪಾಶ್ಚಾತ್ಯ ಸಂಗೀತದ ಮಟ್ಟುಗಳನ್ನು ಉಪಯೋಗಿಸಿದ್ದಾರೆ. ಠಾಕೂರರಿಗೆ 20 ವರ್ಷ ವಾಗಿದ್ದಾಗ, ಅವರ ಸಂಧ್ಯಾಸಂಗೀತ ಎಂಬ ಕವನ ಸಂಗ್ರಹ ಪ್ರಕಟವಾ ಯಿತು. ಇದರ ವಿಷಯದಲ್ಲಿ ಬಂಗಾಳದಲ್ಲಿ ಒಂದು ಕಥೆ ಪ್ರಚಾರದಲ್ಲಿದೆ. ರಮೇಶ್ ಚಂದ್ರ ದತ್‌ರ ಮನೆಯಲ್ಲಿ ಅವರ ಮಗಳ ವಿವಾಹದ ಏರ್ಪಾಡಾಗಿತ್ತು. ಬಂಕಿಂ ಚಂದ್ರ ಚಟ್ಟೋಪಾಧ್ಯಾಯರಿಗಾಗಿ, ಶ್ರೀದತ್‌ರು, ಒಂದು ಉತ್ತಮ ಹಾರವನ್ನು ಸಿದ್ಧಮಾಡಿಟ್ಟುಕೊಂಡಿದ್ದರು. ಅದೇ ಬೆಳಿಗ್ಗೆ ರವೀಂದ್ರರ ಸಂಧ್ಯಾಸಂಗೀತವೆಂಬ ಕವನಸಂಗ್ರಹ ಪ್ರಕಟವಾಗಿ, ಅದರ ಒಂದು ಪ್ರತಿಯನ್ನು, ಬಂಕಿಂಚಂದ್ರರು ಓದಿದ್ದರು. ದತ್ತರು ಹಾರವನ್ನು ತಂದಕೂಡಲೇ, ಬಂಕಿಂಚಂದ್ರರು ಎಲ್ಲೋ ಹಿಂದುಗಡೆ ಕುಳಿತಿದ್ದ ರವೀಂದ್ರನಾಥರನ್ನು ತೋರಿಸಿ, ಅವರಿಗೆ ಆ ಹಾರವನ್ನು ಹಾಕಿಸಿದರು. ಮುಂದೆ ಠಾಕೂರರ ಕೃತಿಗಳು ಒಂದಾದ ಮೇಲೆ ಒಂದರಂತೆ ಬರತೊಡಗಿದವು. ಬಹುಥಾಕುರಾನಿಕಹ್ಯಾಟ್ (ಕಿಶೋರಿ ರಾಣಿಯ ಅಂಗಡಿ) ಕಾಲಮೃಗಯಾ, ಪ್ರಭಾತ ಸಂಗೀತ, ಜೀವನ ಸ್ಮೃತಿ, ಪ್ರಕೃತಿಪರಿಶೋಧ, ಕರಿ ಒಕೊಮಲ್, ಮಾಯರ್ ಖೇಲ, ರಾಜಾರಾಣಿ, ಸೋನಾರ್‌ತರಿ ಮುಂತಾದ ಕೃತಿಗಳೆಲ್ಲ ಪ್ರಕಟವಾದವು. ಠಾಕೂರರು ಮತ್ತೊಂದು ಸಲ ಯೂರೋಪಿಗೆ ಹೋಗಿ ನಾಲ್ಕು ತಿಂಗಳೊಳಗೆ ಇಟಲಿ ಫ್ರಾನ್ಸ್ ಇಂಗ್ಲೆಂಡ ಗಳನ್ನು ಸಂದರ್ಶಿಸಿ ಯೂರೋಪಿನಿಂದ ಹಿಂದಿರುಗಿದನಂತರ

ಪೋಸ್ಟ್ ಮಾಸ್ಟರ್ ಬರೆದರು. ಅನಂತರ ತಮ್ಮದೇ ಆದ 'ಸಾಧನ' ಎಂಬ ಪತ್ರಿಕೆಯನ್ನು ಹೊರಡಿಸಿದರು. ರವೀಂದ್ರರು, ಮಾತೃ ಭಾಷೆಯಲ್ಲಿಯೇ ಎಲ್ಲ ಮಟ್ಟಗಳಲ್ಲಿಯೂ ಶಿಕ್ಷಣವನ್ನು ಕೊಡಬೇಕೆಂದು ಆ ಪತ್ರಿಕೆಯ ಮೂಲಕ ವಾದಿಸಿದರು. ಆ ವಾದಕ್ಕೆ ಸಕಾರಣವಾದ ಪ್ರತಿವಾದವನ್ನು ಇಂದಿನವರೆಗೂ ಯಾರೂ ಕೊಟ್ಟಿಲ್ಲ. ಈ ಕಾಲದಲ್ಲಿಯೇ (1892-93,) ಚಿತ್ರಾಂಗದ ಪ್ರಕಟ ವಾಯಿತು. ಇದು ದೇಹ ಮತ್ತು ಆತ್ಮದ ಹೋರಾಟದ ಕಥೆ. ಆತ್ಮದ ಗೆಲು ವಿನಲ್ಲಿ ಕೊನೆ. ಠಾಕೂರರು ನಿಧಾನವಾಗಿ ರಾಜಕೀಯದಲ್ಲಿ ಪ್ರವೇಶಿಸತೊಡ ಗಿದರು. ಅವರು ರಚನಾತ್ಮಕ ಸ್ವಭಾವದವರಾಗಿದ್ದುದರಿಂದ, ಅವರ ರಾಜಕೀ ಯ ಲೇಖನಗಳೂ ಸಾಮಾಜಿಕ ಲಕ್ಷಣಗಳುಳ್ಳವುಗಳೇ ಆಗಿದ್ದವು. ಆ ಕಾಲದ ಅವರ ಎರಡು ಪ್ರಸಿದ್ಧ ಲೇಖನಗಳು "ಇಂಗ್ಲಿಷರೂ ಭಾರತೀಯರೂ" "ಇಂಗ್ಲೀಷರ ಆತಂಕ" ಎಂಬುವು. ಎರಡನೆಯ ಲೇಖನದಲ್ಲಿ ಠಾಕೂರರು, ಹಿಂದು ಮುಸಲ್ಮಾನ್ ಐಕ್ಯವನ್ನು ಪ್ರಸ್ತಾಪಿಸಿದ್ದರು. 1897 ರಲ್ಲಿ ರವೀಂದ್ರರು ಬಂಗಾಳದ ಪ್ರಾಂತ ಸಮ್ಮೇಳನಕ್ಕೆ ಹೋಗಿ ಸಮ್ಮೇ ಳನದ ಕಾರ್ಯಗಳನ್ನು ಬಂಗಾಳಿ ಭಾಷೆಯಲ್ಲಿ ನಡೆಸಬೇಕೆಂದು ಪ್ರಯತ್ನಿಸಿ ವಿಫಲರಾದರು. ಅನಂತರ ಠಾಕೂರರು ಕಲ್ಕತ್ತದಲ್ಲಿ ಒಂದು ಸ್ವದೇಶಿ ಅಂಗಡಿಯನ್ನು ತೆರೆದರು. ಒಂದು ಸೆಣಬಿನ (ಜೂಟ್) ಕಾರ್ಖಾನೆಯನ್ನೂ ಸ್ಥಾಪಿಸಿದರು. ಭಾರತ ಸರ್ಕಾರ, 1898 ರಲ್ಲಿ ಜಾರಿ ಮಾಡಿದ ರಾಜದ್ರೋಹ ಕಾನೂನಿಗೆ ವಿರೋಧವಾಗಿ ಕಂಠರೋಧ ಎಂಬ ಹೆಸರಿನ ಒಂದು ಪ್ರಬಂಧ ವನ್ನು ಬರೆದು ಸಾರ್ವಜನಿಕ ಸಭೆಯಲ್ಲಿ ಓದಿದರು. 1892ರಲ್ಲಿ ಭಾರತಸರ್ಕಾರ, ಲೋಕಮಾನ್ಯ ಬಾಲಗಂಗಾಧರ ತಿಳಕರನ್ನುಸೆರೆಹಿಡಿದಾಗ, ಠಾಕೂರರು ಸರ್ಕಾ ರವನ್ನು ತೀಕ್ಷ್ಣವಾಗಿ ಖಂಡಿಸಿದುದಲ್ಲದೆ ತಿಲಕ್‌ರ ರಕ್ಷಣೆಗಾಗಿ ಹಣಶೇಖರಿಸು ವುದರಲ್ಲಿಯೂ ತೊಡಗಿದರು. ಕಲ್ಕತ್ತದಲ್ಲಿ ಪ್ಲೇಗು ತಲೆದೋರಿತು. ಸೋದರಿ ನಿವೇದಿತಾರೊಂದಿಗೆ ಠಾಕೂರರು ಆ ರೋಗವನ್ನು ಎದುರಿಸುವ ಏರ್ಪಾಡು ಗಳಲ್ಲಿ ನಿರತರಾದರು. ಡಕ್ಕದ ರಾಜಕೀಯ ಸಮ್ಮೇಳನದಲ್ಲಿ ಠಾಕೂರರು ಮತ್ತೆ ದೇಶಭಾಷೆಯಲ್ಲಿ ಎಲ್ಲ ಕಾರ್ಯಗಳನ್ನು ನಡೆಸಬೇಕೆಂದು ಪ್ರಯತ್ನಿಸಿ ವಿಫಲರಾದರು.

ಹೀಗೆ ಠಾಕೂರರು ಆ ವರ್ಷಗಳಲ್ಲಿ ಹೆಚ್ಚಾಗಿ ರಾಜಕೀಯದಲ್ಲಿ ತೊಡ

ಗಿದ್ದರೂ ಸಹ ಅವರ ಸಾಹಿತ್ಯಕೃತಿಗಳು ಕಡಿಮೆಯಾಗಲಿಲ್ಲ. ಆ ಕಾಲದಲ್ಲಿ ಅವರು ಬರೆದ ಅನೇಕ ಕೃತಿಗಳ ಪೈಕಿ ಮುಖ್ಯವಾದುವು, ಚಿತ್ರ ಚೈತಾಲಿ, ಜೀವನದೇವತಾ, ಮಾಲಿನಿ, ವೈಕುಂಠ ಗಾಥಾ, ಗಾಂಧಾರಿ ಅಭೇದನ ಸತಿ ಮತ್ತು ನರಕವಾಸ, ಕಣಿಕ, ಕಥಾ, ಕ್ಷಣಿಕ, ಲಕ್ಷ್ಮಿ ಪರೀಕ್ಷ, ಚಿರಕುಮಾರ ಸಭಾ, ಪಂಚಭೂತರ್ ಡೈರಿ, ಮತ್ತು ಕ್ಷುಧಿತಪಾಷಾಣ, ಪ್ರಕಟವಾದುವು. ಅವುಗಳ ಪೈಕಿ ಪಂಚಭೂತರ್ ಡೈರಿ ಮತ್ತು ಚಿರಕುಮಾರ ಸಭಾ ಯಾವ ಜಾತಿಗೂ ಸೇರದ ವಿಚಿತ್ರ ಕೃತಿಗಳು, ವಿಡಂಬನೆಗಳು. ಇಂದೂ ಸಹ ಅವುಗಳನ್ನೂ ಅಭಿನಯಿಸದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘ ಗಳಿಲ್ಲ. ಅವುಗಳ ಸಂಭಾಷಣೆ, ಹಾಸ್ಯ ವಚನಗಾರುಡಿ, ಪಾತ್ರಗಳ ಸ್ವಭಾವ ನಿರೂಪಣಗಳಿಂದ, ಇಂದೂ ವಂಗದೇಶದ ಯಾವ ಭಾಗದಲ್ಲಿ ನಾಟ್ಯಕೋದ್ಯ ಮಿಗಳು ಈ ನಾಟಕಗಳನ್ನು ಅಭಿನಯಿಸಿದರೂ ಇವು ಹಣ ಸಂಪಾದನೆಗೆ ಸಾಧನಗಳಾಗಿವೆ. ಜನರು ದುಡ್ಡು ಕೊಟ್ಟು ಟಿಕೆಟ್‌ಕೊಂಡು ಇವುಗಳನ್ನು ನೋಡುವಂತೆ, ಮತ್ತಾವ ನಾಟಕವನ್ನೂ ನೋಡುವುದಿಲ್ಲ. ರವೀಂದ್ರರು ತಮ್ಮ ಮಗ ಶಾಮೀಂದ್ರನಿಗಾಗಿ ಶಿಶು ಎಂಬ ಕವನ ಮಾಲಿಕೆಯನ್ನು ಬರೆದರು. ಜೋಕರ್ ಬಾಲಿ, ನೌಕಾದುಬಿ ಎಂಬ ಕಾದಂಬರಿಗಳು, ನಿವೇದನ ಇವೆಲ್ಲ 1901 ರ ಒಳಗೆ ಪ್ರಕಟವಾದುವು.

ಠಾಕೂರರ ನಾಟಕಗಳು ಬರಿಯ ವೇದಾಂತ, ದರ್ಶನ, ಮತ್ತು ಬುದ್ಧಿಯ ವ್ಯಾಯಾಮ ಎಂದು ಕೆಲವರು ಹೇಳುತ್ತಾರೆ. ಇದು ನಿಜವಲ್ಲ. ಠಾಕೂರರು, ಹಾಸ್ಯ ವಿನೋದ ಪ್ರಸಂಗಗಳನ್ನು ಚಿತ್ರಿಸುವುದರಲ್ಲಿ ಎತ್ತಿದ ಕೈ ಯಾಗಿದ್ದರು. ಸಮಯೋಚಿತ ಉತ್ತರಕೊಡುವುದರಲ್ಲಿ ಅವರು ಅದ್ವಿತೀಯರು. ಸಂಭಾಷಣೆಯನ್ನು ಅತ್ಯಂತ ಸ್ವಾರಸ್ಯವಾಗಿ ಮಾಡುತ್ತಿದ್ದರು. ಠಾಕೂರರ ಹಾಸ್ಯ ನಾಟಕಗಳನ್ನು ಓದದವರು; ಠಾಕೂರರನ್ನು ತಿಳಿದಿಲ್ಲವೆಂದು ಹೇಳಬ ಹುದು. ಠಾಕೂರರ ಪೂರ್ಣ ಕೃತಿಗಳ ಒಂದು ಮುದ್ರಣ, ಠಾಕೂರರಿಗೆ 35 ವರುಷವಾಗಿದ್ದಾಗ ಅಂದರೆ 1896ರಲ್ಲಿ ಪ್ರಕಟವಾಯಿತು. ಎರಡನೆಯ ಮುದ್ರಣ 1901 ರಲ್ಲಿ ಅಂದರೆ ಅವರಿಗೆ 41 ವರುಷವಾಗಿದ್ದಾಗ ಒಂಬತ್ತು ಸಂಪುಟಗಳಲ್ಲಿ ಪ್ರಕಟವಾಯಿತು. ಈಚಿನ ಕಾಲದಲ್ಲಿ, ಇಷ್ಟು ಚಿಕ್ಕವಯಸ್ಸಿನಲ್ಲಿ, ಭಾರತದ ಕವಿಯೊಬ್ಬರ ಕೃತಿಗಳು, ಹೀಗೆ ಎರಡು ಸಲ ಸಂಪೂರ್ಣವಾಗಿ ಪ್ರಕಟವಾದುದು ಅದೇ ಮೊದಲು.

ಪರದೇಶದಲ್ಲಿ ಭಾರತಸ್ವಾತಂತ್ರ್ಯ ಪ್ರಚಾರವನ್ನು ನಡೆಸುವುದಕ್ಕಾಗಿ, ಲೋಕಮಾನ್ಯ ತಿಳಕರು ಠಾಕೂರರಿಗೆ 50 ಸಾವಿರ ರೂ. ಅರ್ಪಿಸಲು ಮುಂದೆ ಬಂದರು. ಆದರೆ ಠಾಕೂರರು ಅದನ್ನು ಸ್ವೀಕರಿಸದೆ ತಮ್ಮ ಸ್ವಂತ ಶಕ್ತಿಯಿಂದಲೇ ಪ್ರಚಾರಮಾಡಿದರು.

ಠಾಕೂರರು ರಾಜಕೀಯದಲ್ಲಿ ಉತ್ಸಾಹದಿಂದ ಕೆಲಸಮಾಡಿದುದು ಅಷ್ಟಕ್ಕೇ ನಿಲ್ಲಲಿಲ್ಲ. ವಂಗವಿಭಜನೆಗೆ ಮುಂಚೆಯೇ ಠಾಕೂರರು ರಾಜ ಕುಟುಂಬ, ಧರ್ಮಬೋಧೆಯ ದೃಷ್ಟಾಂತ, ಸ್ವದೇಶಿ ಸಮಾಜ, ಶಿವಾಜಿ ಉತ್ಸವ ರಾಜ-ಪ್ರಜ ಮೊದಲಾದ ರಾಜಕೀಯ ಲೇಖನಗಳನ್ನು ಬರೆದರು. ರಾಜ-ಪ್ರಜ ಎಂಬ ಲೇಖನದಲ್ಲಿ ಆಂಗ್ಲೇಯರು ಭಾರತವನ್ನು ಶೋಷಣಮಾಡಿದುದನ್ನು ಪ್ರತಿಭಟಿಸಿದರು. ಠಾಕೂರರು ಆ ಕಾಲದಲ್ಲಿ ಸ್ವದೇಶಿಯನ್ನು ಬಹಳ ಪ್ರಚಾರಮಾಡಿದರು. ಸಾಹಿತ್ಯ ಸಮ್ಮೇಳನಗಳಲ್ಲಿ ಸಹ, ಅವರು ಗೃಹ ಕೈಗಾರಿಕೆ ಗುಡಿಕೈಗಾರಿಕೆ ಇವುಗಳ ಪುನರುಜ್ಜೀವನವನ್ನು ಕುರಿತು ಭಾಷಣ ಮಾಡುತ್ತಿದ್ದರು. ಠಾಕೂರರಿಗೆ ಪ್ರಾರಂಭದಿಂದಲೂ ಸಕ್ಕರೆಗಿಂತ ಬೆಲ್ಲದಲ್ಲಿ ಪ್ರೀತಿಹೆಚ್ಚು. ಇದಕ್ಕೆ ಅವರ ಸ್ವದೇಶಿಯ ಪ್ರೀತಿಯೇ ಕಾರಣ, ಠಾಕೂರರು ತಮ್ಮ ರಾಜಕೀಯ ಅಭಿಪ್ರಾಯಗಳ ಪ್ರಚಾರಕ್ಕಾಗಿಯೇ, ಭಂಡಾರ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ವೈಸರಾಯ್ ಕರ್ಜನ್‌ರು ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ಮಾಡಿದ ಭಾಷಣವನ್ನು ಅವರು ಪ್ರತಿಭಟಿಸಿದರು. ಇದೇ ಕಾಲದಲ್ಲಿ ಠಾಕೂರರು ವಂಗ ಕಲೆಯ ಪುನರುಜ್ಜೀವನಕ್ಕಾಗಿ ಇ. ಬಿ. ಹ್ಯಾವಲ್‌ರು ಪ್ರಾರಂಭಿಸಿದ ಚಳುವಳಿಗೆ, ತಮ್ಮ ಅಣ್ಣನ ಮಗನಾದ ಅವನೀಂದ್ರನಾಥ ಠಾಕೂರ್ ಮತ್ತು ಗಂಗೇಂದ್ರನಾಥರ ಸಹಾಯದೊಂದಿಗೆ ತಮ್ಮ ಪೂರ್ಣ ಬೆಂಬಲವನ್ನು ಕೊಟ್ಟರು.

ಲಾರ್ಡ್ ಕರ್ಜನ್‌ರು 1905 ರಲ್ಲಿ ಬಂಗಾಳದ ವಿಭಜನೆಯನ್ನು ಪ್ರಕಟಿಸಿದರು. ಅದೇ ವರ್ಷದ ಆಗಸ್ಟ್ 25 ರಲ್ಲಿ ಠಾಕೂರರು ರಚನಾತ್ಮಕ ಅಸಹಕಾರವನ್ನು ಪ್ರಚಾರ ಪಡಿಸಿದರು. ಆ ವೇಳೆಗೆ ಸರ್ಕಾರ, ರಿಸ್ಲೆ ಸರ್ಕ್ಯುಲರ್ ಎಂಬ ನಿಬಂಧನೆಗಳನ್ನು ಹೊರಡಿಸಿ ವಿದ್ಯಾರ್ಥಿಗಳು ರಾಜಕೀಯ ಸಭೆಗಳಿಗೆ ಹೋಗ ಕೂಡದೆಂದು ವಿಧಿಸಿದರು. ಆ ಕಾಲದ ಎಲ್ಲ ರಾಜಕೀಯ ಸಭೆಗಳಲ್ಲಿಯೂ ಠಾಕೂರರು ಭಾಗವಹಿಸುತ್ತಿದ್ದರು.

ಸಭೆಗಳಲ್ಲಿ ವಂದೆಮಾತರಂ, ಮತ್ತು ತಮ್ಮ ಸ್ವಂತ ಕವಿತೆಗಳನ್ನು ಹಾಡುತ್ತಿದ್ದರು. ಅವರ ಉಪನ್ಯಾಸ ಪ್ರಬಂಧಗಳು ವಂಗದೇಶದ ಎಲ್ಲ ಜನರ ಬಾಯಲ್ಲಿ ಇದ್ದವು. ಠಾಕೂರರು ಭಾರತ ರಾಷ್ಟ್ರೀಯತೆಯ ಪ್ರತೀಕವೇ ಆದರು. 1905-6 ರಲ್ಲಿ ಅವರು ಜನಪ್ರಿಯರಾಗಿದ್ದಷ್ಟು ಮತ್ತಾವಾಗಲೂ ಆಗಲಿಲ್ಲ.

ಜನವರಿ 19-1905 ರಲ್ಲಿ ಅವರ ತಂದೆ ಮಹರ್ಷಿ ದೇವೇಂದ್ರನಾಥ ಠಾಕೂರರು ಸ್ವರ್ಗಸ್ಥರಾದರು. 1906 ರಲ್ಲಿ ಠಾಕೂರರು ವಂಗಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಗಾಗಿ ಒಂದು ಸಮಿತಿಯನ್ನು ನಿರೂಪಿಸಬೇಕೆಂದು ಸೂಚಿಸಿ, ಅದರ ಸಂವಿಧಾನವನ್ನು ವಿವರಿಸಿದರು. ಆ ಸಮಿತಿಗೆ ಶ್ರೀ ಅರವಿಂದರು ಮುಖ್ಯಸ್ಥರಾದರು. ರಿಸ್ಲೆ ಸರ್ಕ್ಯುಲರ್‌ಗನುಗುಣವಾಗಿ ಕಾಲೇಜುಗಳಿಂದ ಹೊರದೂಡಲ್ಪಟ್ಟ ವಿದ್ಯಾರ್ಥಿಗಳಿಗೆಲ್ಲ, ಶಿಕ್ಷಣವನ್ನು ಮುಂದುವರಿಸಲು ಏರ್ಪಡಿಸುವುದೇ ರಾಷ್ಟ್ರೀಯ ಶಿಕ್ಷಣ ಸಮಿತಿಯ ಗುರಿಯಾಗಿತ್ತು. ಆ ಸಂಸ್ಥೆಯಲ್ಲಿ ಠಾಕೂರರು, ಸಾಹಿತ್ಯ ಅಧ್ಯಾಪಕರಾದರು, ಆಗಲೇ ಅವರು ಅರವಿಂದರ ಗೌರವಕ್ಕಾಗಿ "ಅರವಿಂದ ರವೀಂದ್ರ ವಂದನೆಯನ್ನು ಸ್ವೀಕರಿಸು" ಎಂಬ ಕವನವನ್ನು ಬರೆದರು. ಠಾಕೂರರಿಗೆ ಅರವಿಂದರಲ್ಲಿ ಕೊನೆಯವರೆಗೆ ಅದೇ ಪ್ರೀತಿ ಅಚಲವಾಗಿತ್ತು. ಅವರು ಆಗಿಂದಾಗ್ಗೆ ಪಾಂಡಿಚೆರಿಗೆ ಹೋಗಿ ಅರವಿಂದರ ದರ್ಶನ ಮಾಡಿಕೊಂಡು ಬರುತ್ತಿದ್ದರು. ಸ್ವದೇಶಿಚಳುವಳಿಯ ನಂತರ, ಠಾಕೂರರು, ಶಾಂತಿನಿಕೇತನದ ವ್ಯವಸ್ಥೆಯಲ್ಲಿ ತೊಡಗಿದರು. ಆಗಲೂ ಅವರ ಸಾಹಿತ್ಯಕೃತಿಗಳು ಕಡಿಮೆಯಾಗಲಿಲ್ಲ. ನೋಬಲ್ ಪಾರಿತೋಷಕ ಬರುವುದಕ್ಕೆ ಮುಂಚೆ, ಠಾಕೂರರು 1909 ರಲ್ಲಿ ಶಬ್ದತತ್ವ (ವಂಗಭಾಷಾಶಾಸ್ತ್ರ) ಧರ್ಮ ಮತ್ತು ಶಾಂತಿನಿಕೇತನ ಇಂಗ್ರೇಜಿ ಪಾತ್, ಚಾಣಕ್ಯ, ಚುಟಿಕ್ ಪಾರಾ, ತಪೋವನ, ಪ್ರಾಯಶ್ಚಿತ್ತ (1895 ರಲ್ಲಿ ಬರದಿದ್ದುದರ ಹೊಸರೂಪ) ಇವುಗಳನ್ನು ಬರೆದರು. ರಾಜ (ನಾಟಕ) ಗೋರಾ, ಗೀತಿಲಿಪಿ, ಜೀವನಸ್ಮೃತಿ ಚಿನ್ನ ಪತ್ರ (ಬಂಗಾಳದ ನೋಟಗಳು) ಮತ್ತು ಧಾಕ್‌ಘರ್ ಇವು 1912ರಲ್ಲಿ ಪ್ರಕಟವಾದುವು. ಠಾಕೂರರು ತಾವು ಬರೆದ ಪ್ರತಿಯೊಂದು ನಾಟಕದಲ್ಲಿಯ ಕ್ಲಿಷ್ಟವಾದ ಪಾತ್ರಗಳನ್ನೆಲ್ಲ ತಾವೇ ಅಭಿನಯಿಸುತ್ತಿದ್ದರು. 1912 ರಲ್ಲಿ ಠಾಕೂರರು ನಮ್ಮ ರಾಷ್ಟ್ರಗೀತವಾದ ಜನಗಣಮನವನ್ನು ರಚಿಸಿ, ತಮ್ಮನ್ನು

ತಮ್ಮ ಸುವರ್ಣ ಮಹೋತ್ಸವಕ್ಕಾಗಿ ಸತ್ಕರಿಸಲು ಸೇರಿದ್ದ ವಂಗೀಯ ಸಾಹಿತ್ಯ ಪರಿಷತ್ತಿನಲ್ಲಿ ಓದಿದರು. ಇವೆಲ್ಲವುಗಳಿಂದ ಠಾಕೂರರ ಆರೋಗ್ಯ ಕೆಟ್ಟಿತು. ಅವರು 1912 ರ ಅಕ್ಟೋಬರ್ ತಿಂಗಳಿನಲ್ಲಿ ಅಮೆರಿಕದ ಪ್ರವಾಸ ವನ್ನು ಕೈಕೊಂಡರು. ಅಲ್ಲಿ ಅವರು ಚಿಕಾಗೋದಲ್ಲಿ ಪ್ರಾಚೀನ ಭಾರತ ಸಂಸ್ಕೃತಿಯ ಧ್ಯೇಯಗಳನ್ನು ಕುರಿತು ಉಪನ್ಯಾಸಮಾಡಿದುದಲ್ಲದೆ ಬುಡಕಟ್ಟು ಗಳ ಸಮ್ಮೇಳನದಲ್ಲಿ (Race Congress) ಬುಡಕಟ್ಟುಗಳ ಹೋರಾಟ ವನ್ನು ಕುರಿತು ಭಾಷಣಮಾಡಿದರು. ಅವರ ದೇಹ ದುರ್ಬಲವಾಗುತ್ತಲೇ ನಡೆದುದರಿಂದ ಆರೋಗ್ಯ ಮತ್ತೆ ಕೆಟ್ಟಿತು. ಅವರು ಸೆಪ್ಟಂಬರ್ 4 ರಂದು ಭಾರತಕ್ಕೆ ಹಿಂದಿರುಗಿದರು. ನೋಬಲ್ ಪಾರಿತೋಷಕ ನವಂಬರ್‌ನಲ್ಲಿ ಪ್ರಕಟವಾಯಿತು.

ನವಂಬರ್ 23 ರಂದು, ಸಾರ್ವಜನಿಕರ ಒಂದು ನಿಯೋಗ ನೋಬಲ್ ಪಾರಿತೋಷಕಕ್ಕಾಗಿ ಅವರನ್ನು ಅಭಿನಂದಿಸಲು ಅವರಲ್ಲಿ ಹೋಯಿತು. ನಿಯೋಗವನ್ನು ನೋಡಿ ಠಾಕೂರರಿಗೆ ದುಃಖವಾಯಿತು. “ಪರದೇಶದವರು ಹೇಳಿದ ಹೊರತು ನನ್ನ ಕೃತಿ ಉತ್ತಮವಾಗಿದೆ ಎಂದು ಇವರಿಗೆ ತೋರಲಿಲ್ಲ ವಲ್ಲ. ಇದು ಭಾರತೀಯರ ದೌರ್ಬಲ್ಯ. ಅವರು ಗೌರವಿಸಿದರು, ಇವರೂ ಗೌರವಿಸುತ್ತಾರೆ. ಇವರು ನಿಜವಾಗಿ ದೊಡ್ಡಸ್ತಿಕೆಯ ದಾಸಯ್ಯಗಳು,” ಎಂದು ಅವರಿಗೆ ಕೋಪ ಬಂತು. ಆದರೆ ವಾಸ್ತವವಾಗಿ ವಂಗದೇಶದ ಜನ, ಠಾಕೂರರ ಮಹತ್ವವನ್ನು, ನೋಬಲ್ ಪಾರಿತೋಷಕ ಅವರಿಗೆ ದೊರೆಯುವುದಕ್ಕೆ ಮುಂಚೆ ಯೇ ಒಪ್ಪಿದ್ದರು. ಅವರ ಸುವರ್ಣೋತ್ಸವವನ್ನು ಕಲ್ಕತ್ತ ಪುರಭವನದಲ್ಲಿ ಜನ ಅತ್ಯಂತ ವೈಭವದಿಂದ ಆಚರಿಸಿದುದೇ ಅದಕ್ಕೆ ಸಾಕ್ಷಿ. ಆದರೆ ನೋಬಲ್ ಪಾರಿತೋಷಕ ದೊರೆಯುವುದಕ್ಕೆ ಮುಂಚೆ, ಬಂಗಾಳದಲ್ಲಿ ಕೆಲವರೂ ಮತ್ತು ಹಳೆಯ ಸಂಪ್ರದಾಯದ ಕೆವಲರೂ ಅವರನ್ನು ಒಪ್ಪಿರಲಿಲ್ಲ. ಠಾಕೂರರು ತುಂಬ ಸೂಕ್ಷ್ಮಸ್ವಭಾವದವರಾದುದರಿಂದ, ಆ ಕೆಲವು ವಿರೋಧಿಗಳ ಧ್ವನಿಯೇ ವಂಗದೇಶದ ಧ್ವನಿ ಎಂದು ಅವರು ಭಾವಿಸಿದರು. ಹಳೆಯ ಸಂಪ್ರದಾಯದ ವರಿಗೂ ತನಗೂ ಇದ್ದ ವ್ಯತ್ಯಾಸವನ್ನು ಸ್ಪಷ್ಟಪಡಿಸಲು, ಠಾಕೂರರು ಅಚ ಲಾಯತನ ಎಂಬ ನಾಟಕವನ್ನು ಬರೆದರು.

ವಂಗದೇಶದ ಸಾಹಿತಿಗಳಲ್ಲಿ ಠಾಕೂರರು ಪ್ರಥಮ ಶ್ರೇಣಿಯಲ್ಲಿ ನಿಲ್ಲ

ತ್ತಾರೆ. ಅವರು ಪ್ರಯೋಗಿಸದ ಸಾಹಿತ್ಯಪ್ರಕಾರ ಒಂದೂ ಇಲ್ಲ. ಎಲ್ಲವನ್ನೂ ಅವರು ತಮ್ಮ ಪ್ರತಿಭೆಯಿಂದ ಬೆಳಗಿದರು, ಘನತೆಗೇರಿಸಿದರು, ಸ್ಫೂರ್ತಿಗೊಳಿಸಿದರು. ತಮ್ಮ ಬಾಲ್ಯದ ಕೃತಿಗಳನ್ನು ಪುನರ್ಮುದ್ರಣಗೊಳಿಸಬಾರದೆಂಬುದು ಅವರ ಇಚ್ಛೆಯಾಗಿತ್ತು. ಆದರೆ ವಿಶ್ವಭಾರತಿಯ ವ್ಯವಸ್ಥಾಪಕರ ಬಲಾತ್ಕಾರಕ್ಕೆ ಒಪ್ಪಿ ಅವುಗಳಲ್ಲಿ ಕೆಲವನ್ನು ಪುನರ್ಮುದ್ರಣಮಾಡಲು ಅವರು ಅವಕಾಶಕೊಟ್ಟರು. ಒಟ್ಟಿನಲ್ಲಿ ಠಾಕೂರರ ಕೃತಿಗಳು ಆಕ್ಟೆವೊ (Royal) 17000 ಪುಟಗಳು ಆಗಬಹುದೆಂದು ಅಂದಾಜುಮಾಡಲಾಗಿದೆ. ಅವರು ತಮ್ಮ ಮರಣಕಾಲದವರೆಗೆ ಕವಿತೆಗಳನ್ನು ಬರೆಯುತ್ತಲೇ ನಡೆದುದರಿಂದ, ಅದು ಇನ್ನೂ ಹೆಚ್ಚು ಆಗಬಹುದು. ಅವರ ಭಾವಗೀತೆಗಳ ಸಂಖ್ಯೆ 2000 ಕ್ಕೂ ಹೆಚ್ಚಾಗಿವೆ. ಎಲ್ಲವುಗಳಿಗೂ ಅವರೇ ಪ್ರಸ್ತಾರ ಹಾಕಿ ಹಾಡಲು ಅಳವಡಿಸಿದ್ದಾರೆ. ಇದಲ್ಲದೆ ಠಾಕೂರರೇ ಅನೇಕ ಕೃತಿಗಳನ್ನು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಅವರ ಬಂಗಾಳಿ ಕೃತಿಗಳು, ಬಂಗಾಳಿಯಿಂದ ಇಂಗ್ಲಿಷಿಗೆ ಇತರರಿಂದ ಭಾಷಾಂತರಿಸಲ್ಪಟ್ಟವು – ಸಹ ಬೇರೆ ಇವೆ. ಭಾರತದ ಪ್ರಾಚೀನ ಅಥವ ಅರ್ವಾಚೀನ ಯಾವ ಕವಿಯೂ ಠಾಕೂರರಷ್ಟು ಭಾವಗೀತೆಗಳನ್ನು ಬರೆದಿಲ್ಲ.

ಅವರ ಕೆಲವು ಕೃತಿಗಳು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಿತವಾಗಿವೆ. ಅವರ ಕೃತಿಗಳ ಬಹುಭಾಗ – ಅದರಲ್ಲಿಯೂ ಕೆಲವು ಬಂಗಾಳಿ ಕೃತಿಗಳು, ಸರಸೋಕ್ತಿ ಚತುರೋಕ್ತಿ ಹಾಸ್ಯ ಮತ್ತು ವಿಡಂಬನೆಗಳ ಕೃತಿಗಳು ಇನ್ನೂ ಇಂಗ್ಲಿಷಿಗೆ ಭಾಷಾಂತರವಾಗಿಲ್ಲ. ಭಾಷಾಂತರವಾಗಿರುವುದರಲ್ಲಿಯೂ ಸಹ, ಭಾರತ ಮತ್ತು ಬಂಗಾಳಿಯ ಪೃಥಕ್ ಲಕ್ಷಣಗಳಾದ ಮೂಲದ ಬಹಳ ಭಾಗ, ಗಾನಮಾಧುರ್ಯ ಸೂಚಿತಾರ್ಥ ಮತ್ತು ಧ್ವನಿ, ಬಂಗಾಳಿ ಮಾತು ಮತ್ತು ಪದಗುಚ್ಛಗಳ ಸುತ್ತ ಹೆಣೆದುಕೊಂಡಿರುವ ವರ್ಣನಾತೀತ ಅರ್ಥಗಳು ಮತ್ತು ಸಂಪರ್ಕಗಳು ಸುವಾಸನೆ, ಮರೆಯಾಗಿದೆ. ಠಾಕೂರರ ಬಂಗಾಳಿ ಕೃತಿಗಳಲ್ಲಿ 1/6 ಭಾಗ ಮಾತ್ರ ಇಂಗ್ಲಿಷಿಗೆ ಅನುವಾದವಾಗಿದೆಯೆಂದು ಹೇಳಬಹುದು. ಠಾಕೂರರೇ, ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರ ಸಮರ್ಪಕವಾಗುವುದಿಲ್ಲವೆಂದು ಹೇಳಿದರು. "ನಿಮ್ಮ ಪ್ರಿಯರಿಗೆ ಪ್ರೇಮ ಸಂದೇಶವನ್ನು ಮಧ್ಯಸ್ಥಗಾರರ ಮೂಲಕ ಕಳುಹಿಸುವುದು ಸಾಧ್ಯವಿಲ್ಲ."

ಠಾಕೂರರ ಬುದ್ಧಿ ಶಕ್ತಿ ಮತ್ತು ಸಾಹಿತ್ಯ ಶಕ್ತಿಯನ್ನು ನಿಜವಾಗಿ ಅಳೆಯಲು ಕವಿಯ ಬಂಗಾಳಿ ಮತ್ತು ಇಂಗ್ಲಿಷ್ ಕೃತಿಗಳೆಲ್ಲವನ್ನೂ ನೋಡ ಬೇಕಾದುದು ಆವಶ್ಯಕವಾಗುತ್ತದೆ. ಜತೆಗೆ ವ್ಯಕ್ತಿತ್ವ, personality ಸಾಧನ, ಮಾನವ ಧರ್ಮ, Religion of man ಇವನ್ನೂ ವ್ಯಾಸಂಗ ಮಾಡಬೇಕಾಗುತ್ತದೆ. ಅವರ ಪ್ರತಿಭೆಯನ್ನೂ ಸಾಧನೆಯನ್ನು ಅರಿಯಲು ಅವರ ಕೃತಿಗಳನ್ನು ಮೂಲ ವಂಗಭಾಷೆಯಲ್ಲಿ ಅಭ್ಯಾಸಮಾಡಬೇಕು. ಅವರ ಕೃತಿಗಳ ಜರ್ಮನ್ ಭಾಷಾಂತರದ ಪ್ರತಿಗಳು, ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಅನೇಕ ಲಕ್ಷಸಂಖ್ಯೆಯಲ್ಲಿ ಖರ್ಚಾದುವು. ಯುದ್ಧದ ಕಾರಣದಿಂದ ಜರ್ಮನ್ ಮಾರ್ಕ್ಕಿನ ಪರ್ಮಾಲ್ಯ ಸೊನ್ನೆಯಾಗದಿದ್ದರೆ, ವಿಶ್ವಭಾರತಿಗೆ ಬೇಕಾದ ಹಣವೆಲ್ಲ, ಜರ್ಮನ್ ಮುದ್ರಣದ ಸಂಭಾವನೆಯಿಂದಲೇ ಠಾಕೂರರಿಗೆ ಬರು ತ್ತಿದ್ದಿತು.

1916ರಲ್ಲಿ ಠಾಕೂರರು ಜಪಾನ್ ಮತ್ತು ಅಮೆರಿಕಕ್ಕೆ ನಾಲ್ಕನೆಯ ಸಲ ಯಾತ್ರೆ ಹೊರಟು, 1917ನೆ ಜನವರಿಯಲ್ಲಿ ಹಿಂದಿರುಗಿದರು. ಅವರು ರಾಷ್ಟ್ರೀಯತೆಯನ್ನು ತೆಗಳುತ್ತಿದ್ದರೂ (Nationalism) ಭಾರತದ ರಾಷ್ಟ್ರೀ ಯತೆ ಅವರನ್ನು ಬಿಡಲಿಲ್ಲ. ಭಾರತ ರಕ್ಷಣೆಯ ಕಾನೂನಿನ್ವಯ, ಸರ್ಕಾರ ಆನಿಬೆಸೆಂಟ್‌ರನ್ನು ದಸ್ತಗಿರಿ ಮಾಡಿತ್ತು. ಕಾಂಗ್ರೆಸ್ ಮಹಾಸಭೆಗೆ ಬೆಸೆಂ ಟರನ್ನು ಅಧ್ಯಕ್ಷರನ್ನಾಗಿ ಮಾಡುವ ವಿಷಯದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ವುಂಟಾಗಿ ಚರ್ಚೆ ನಡೆಯುತ್ತಿತ್ತು. ಚರ್ಚೆಯನ್ನು ಮುಕ್ತಾಯಗೊಳಿಸುವ ಸಲುವಾಗಿ, ಠಾಕೂರರು ಸ್ವಾಗತ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿ ಕೊಂಡರು. ಕಾಂಗ್ರೆಸ್‌ನ ಅಧಿವೇಶನದಲ್ಲಿ ಟಾಕೂರರ "ಭಾರತದ ಪ್ರಾರ್ಥನೆ" (ಎಂಬ ಕವನಕ್ಕೆ) ಗೀತಕ್ಕೆ ಅದ್ಭುತ ಸ್ವಾಗತ ದೊರಕಿತು. ಠಾಕೂರರು ಗಾಂಧೀಜಿ ಟಿಳಕ್ ಬೆಸೆಂಟ್ ಮಾಳವ್ಯಜಿ ಮುಂತಾದವರ ಸಮಕ್ಷಮದಲ್ಲಿ ತಮ್ಮ ನಾಟಕಗಳನ್ನು ತಾವೇ ಅಭಿನಯಿಸಿದರು. ಇಂಗ್ಲೆಂಡಿನಿಂದ ಬಂದಿದ್ದ ಭಾರತದ ಸೆಕ್ರೆಟರಿ ಮಾಂಟೆಗೊ, ಠಾಗೂರರನ್ನು ಅವರ ಮನೆಯಲ್ಲಿ ನೋಡಿ ದರು. ಸರ್ ಮೈಕೇಲ್ ಸಾಡ್ಲರ್ ಅವರನ್ನು ಶಾಂತಿನಿಕೇತನದಲ್ಲಿ ಸಂಧಿಸಿ ಶಿಕ್ಷಣ ಸಮಸ್ಯೆಗಳನ್ನು ಚರ್ಚಿಸಿದರು. 1918 ನೆಯ ಇಸವಿಯಲ್ಲಿ ಠಾಕೂರರು ಅಮೆಚೂರ್ ನಾಟಕ ಸಂಘದ ಉತ್ಸವದಲ್ಲಿ ಭಾಗವಹಿಸಲು ಬೆಂಗಳೂರಿಗೆ

ಬಂದರು. ಆ ಸಮಯದಲ್ಲಿ ಅವರು ದಕ್ಷಿಣದೇಶದ ಇತರ ಕೆಲವು ಭಾಗಗಳಿಗೂ ಭೇಟಿಯಿತ್ತರು. ಜಲಿಯನ್‌ವಾಲಾಬಾಗ್ ಅತ್ಯಾಚಾರ, ಏಪ್ರಿಲ್ 12ರಂದು ನಡೆಯಿತು. ಠಾಕೂರರು, ಭಾರತದ ಅಸ್ವಾತಂತ್ರ್ಯದಿಂದ ತುಂಬ ದುಃಖಿತರಾದರು. ಅನಂತರ ಅವರು ಅನ್ಯಾದೃಶ್ಯ ನುಡಿಗಳಲ್ಲಿ ವೈಸರಾಯ್ ಲಾರ್ಡ್ ಚೆಲಮ್ಸ್ ಫರ್ಡರಿಗೆ ಕಾಗದ ಬರೆದು ತಮ್ಮ 'ಸರ್' ಪದವಿಯನ್ನು ತಿರಸ್ಕರಿಸಿದರು. ಅವರ ಆ ಕಾರ್ಯ, ಅಖಿಲಭಾರತದಲ್ಲಿ ಅವರನ್ನು ಅತಿಪ್ರಿಯರನ್ನಾಗಿ ಮಾಡಿತು. 1920ರಲ್ಲಿ ಠಾಕೂರರು ತಮ್ಮ ಐದನೆಯ ಪ್ರವಾಸದಲ್ಲಿ (ಇಂಗ್ಲೆಂಡ್‌ಗೆ) ಹೊರಟರು. ಆವರೆ ಅವರು ತಮ್ಮ ಸರ್ ಪದವಿಯನ್ನು ಹಿಂದಕ್ಕೆ ಕೊಟ್ಟದ್ದರಿಂದ, ಇಂಗ್ಲೆಂಡಿನಲ್ಲಿ ಅವರಿಗೆ ಸರಿಯಾದ ಸ್ವಾಗತ ಸಿಕ್ಕಲಿಲ್ಲ. ಫ್ರಾನ್ಸ್ ಹಾಲೆಂಡ್‌ಗಳಲ್ಲಿ ಜನತೆ ಅವರನ್ನು ಸತ್ಕರಿಸಿದರು. ಅಮೆರಿಕದಲ್ಲಿ ಭಾಷಣಗಳನ್ನು ಏರ್ಪಡಿಸಲು ಸಾಧ್ಯವಿಲ್ಲವೆಂದು ಅಲ್ಲಿಂದ ಕೇಬಲ್ ಬಂದಿತು. ಆದರೂ ಠಾಕೂರರು "ಪಶ್ಚಿಮದವರು ಪೂರ್ವದ ಧ್ವನಿಯನ್ನು ಕೇಳಲೇಬೇಕೆಂದು" ಅಮೇರಿಕಕ್ಕೆ ಹೋಗಿ ನ್ಯೂಯಾರ್ಕ್‌ನಲ್ಲಿ "ಪೂರ್ವ ಮತ್ತು ಪಶ್ಚಿಮ, ಬಂಗಾಳದ ಆಧ್ಯಾತ್ಮ ಕವಿಗಳು" ಮತ್ತು "ಕವಿಯ ಧರ್ಮ" ಎಂಬ ಮೂರು ಭಾಷಣಗಳನ್ನು ಮಾಡಿದರು. ಠಾಕೂರರು ಹಿಂದಿರುಗುವ ದಾರಿಯಲ್ಲಿ ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಡೆನ್ಮಾರ್ಕ್, ಸ್ವೀಡನ್, ಆಸ್ಟ್ರಿಯ, ಜಕಸ್ಲೋವೇಕಿಯ ಇವುಗಳಿಗೂ ಭೇಟಿಯಿತ್ತರು. ಆ ರಾಷ್ಟ್ರಗಳಲ್ಲೆಲ್ಲ ಅವರಿಗೆ ಸಂಭ್ರಮದ ಸ್ವಾಗತ ದೊರಕಿತು. ಠಾಕೂರರು ಶರದೋತ್ಸವ, ಮುಕ್ತಧಾರಾ ರಕ್ತಕರಾಬಿ, ವಿಸರ್ಜನ ಮುಂತಾದ ನಾಟಕಗಳನ್ನು ಬರೆದು ಅಭಿನಯಿಸಿದರು. ಅನಂತರ ಅವರು ಚೀಣಕ್ಕೆ ಭೇಟಿಯಿತ್ತರು. ಹಿಂದಿರುಗಿದ ನಂತರ ಲಾರ್ಡ್ ಲಿಟ್ಟನ್, ಭಾರತ ಮಹಿಳೆಯರನ್ನು ಕುರಿತು ಗೌಣವಾಗಿ ಮಾತನಾಡಿದುದಕ್ಕಾಗಿ ಕಟುವಾದ ಉತ್ತರವನ್ನು ಕೊಟ್ಟರು. ಅನಂತರ ಠಾಕೂರರು ಪೆರುವಿನ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ದಕ್ಷಿಣ ಅಮೆರಿಕಕ್ಕೆ ಹೋದರು. ಹಿಂದಿರುಗುವಾಗ ಜಿನೋವ ವೆನಿಸ್ ಗೋವ ಮೈಲಾನ್ ಇವುಗಳನ್ನು ಸಂದರ್ಶಿಸಿದರು. ಅನಂತರ ಠಾಕೂರರು ಇಟಲಿಗೆ ಪ್ರವಾಸ ಹೊರಟರು. ಅದು ಅವರ ಎಂಟನೆಯ ಪ್ರವಾಸವಾಗಿತ್ತು. ಅಲ್ಲಿ ಅವರಿಗೆ ಅದ್ಭುತ ಸ್ವಾಗತ ದೊರಕಿತು. ಫೇಸಿಸ್ಟ್ ಸರ್ವಾಧಿಕಾರದಲ್ಲಿಯೂ ವ್ಯಕ್ತಿತ್ವದ ಬೆಳವಣಿಗೆ ಪೂರ್ಣವಾಗಿ ಆಗು

ತ್ತಿರುವಂತೆ ಅವರಿಗೆ ಭಾಸವಾಗುವ ಹಾಗೆ ಮುಸಲೋನಿಯವರು ಉತ್ಸವಗಳನ್ನು ಏರ್ಪಡಿಸಿದ್ದರು. ಫೇಸಿಸ್ಟ್ ಕ್ರಮಗಳನ್ನು ಠಾಕೂರರು ಬಹಳ ಮೆಚ್ಚಿದ್ದಾರೆಂದು ಪ್ರಕಟವಾಯಿತು. ಠಾಕೂರರು ಕುಪಿತರಾಗಿ ಮುಂದಲ ವಾರದಲ್ಲಿಯೇ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಫೇಸಿಸ್ಟ್ ಕ್ರಮಕ್ಕೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ಠಾಕೂರರು ತಮ್ಮ ಎಂಟನೆ ಪ್ರವಾಸದಿಂದ 1927 ರಲ್ಲಿ ಹಿಂದಿರುಗಿದರು. ಅನಂತರ ಮಲಯಾ ಜಾವಾ ಬಾಲಿ ಸಿಯಾಂ ಮುಂತಾದ ಕಡೆಗಳಿಗೆ ಯಾತ್ರೆ ಮಾಡಿದರು (9ನೇ ಪ್ರವಾಸ) ಸಿಂಹಳ ಮಾರ್ಗದಲ್ಲಿ ಹಿಂದಿರುಗುವ ದಾರಿಯಲ್ಲಿ ಮತ್ತೆ ಪಾಂಡಿಚರಿಯಲ್ಲಿ ಅರವಿಂದರನ್ನು ಸಂಧಿಸಿದರು. ಬೆಂಗಳೂರಿನಲ್ಲಿ ಕೆಲವು ದಿನ ನಿಂತು ಶೇಷರ್ ಕವಿತಾ ಎಂಬ ಕಾದಂಬರಿಯನ್ನು ಪೂರ್ತಿಮಾಡಿದರು. ಸ್ವಲ್ಪ ಕಾಲವನಂತರ ಠಾಕೂರರು ಕೆನಡದ ಪ್ರವಾಸವನ್ನು (ಹತ್ತನೆಯ) ಕೈಕೊಂಡರು.

ಈ ವೇಳೆಗೆ ಠಾಕೂರರು ಚಿತ್ರಗಳನ್ನು ಬರೆಯಲು ಪ್ರಾರಂಭಿಸಿದ್ದರು. ಇಂಗ್ಲೆಂಡಿನ ಒಂದು ಪ್ರದರ್ಶನದಲ್ಲಿ ಸಹ ಪ್ರಸಿದ್ಧ ಚಿತ್ರಗಾರರನೇಕರು ಅವನ್ನು ಮೆಚ್ಚಿದ್ದರು. ಠಾಕೂರರು ಬರ್ಮಿಂಗ್‌ಹ್ಯಾಂನಲ್ಲಿ "ನಾಗರೀಕತೆ ಮತ್ತು ಸುಧಾರಣೆ" ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿ "ಮಾನವ ಧರ್ಮ" ಎಂಬ ಹರ್ಬರ್ಟ ಉಪನ್ಯಾಸಗಳನ್ನು ಕೊಟ್ಟರು. ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗಿತ್ತಸಂದರ್ಶನದಲ್ಲಿ, ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನುಖಂಡಿಸಿದರು. ಠಾಕೂರರು ರಷ್ಯಕ್ಕೆ ತಮ್ಮ ಪ್ರವಾಸವನ್ನು ಮುಂದುವರಿಸಿದರು. ರಷ್ಯದಲ್ಲಿ ಅವರಿಗೆ ಅನೇಕ ವಿಷಯಗಳು ಒಪ್ಪಿಗೆ ಯಾದವು. ಅವರು ಮಾಡರ್ನ್‌ರೆವ್ಯೂನಲ್ಲಿ ರಷ್ಯವನ್ನು ಪ್ರಶಂಸಿಸಿ ಕೆಲವು ಲೇಖನಗಳನ್ನು ಬರೆದರು ಸರ್ಕಾರ, ಮಾಡರ್ನ್ ರೆವ್ಯೂ ಆಫೀಸನ್ನು ಮುತ್ತಿ ಆ ಲೇಖನಗಳ ಮೂಲಪ್ರತಿಗಳನ್ನು ದಸ್ತುಮಾಡಿ ತೆಗೆದು ಕೊಂಡು ಹೋದರು. ರಶಿಯಾದಿಂದ ಠಾಕೂರರು ಮತ್ತೆ ಅಮೇರಿಕಕ್ಕೆ ಹೋದರು. ನ್ಯೂಯಾರ್ಕ್ ಮತ್ತು ಬಾಸ್ಟನ್‌ನಲ್ಲಿ ಅವರ ಚಿತ್ರಗಳ ಪ್ರದರ್ಶನವಾಯಿತು. ಅವರು ಇಂಗ್ಲೆಂಡಿನ ಮಾರ್ಗವಾಗಿ 1931ನೇ ಜನವರಿಯಲ್ಲಿ ಭಾರತಕ್ಕೆ ಹಿಂದಿರುಗಿದರು. ಅನಂತರ ಠಾಕೂರರು ಇರಾಕ್‌ಗೆ ಹೊರಟರು. ಬಾಗದಾದ್‌ನಲ್ಲಿ ಅವರ ಜನ್ಮೋತ್ಸವನನ್ನು ಜನತೆ ವೈಭವದಿಂದ ಆಚರಿಸಿತು. ಠಾಕೂರರು ಸಿಂಹಳಕ್ಕೆ ಹೋಗಿ, ಆ ಪ್ರವಾಸದಲ್ಲಿ ಮುಖ್ಯ

ವಾಗಿ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡಿ ಹಿಂದಿರುಗಿದರು. ತಮ್ಮ 74 ನೆಯ ವಯಸ್ಸಿನಲ್ಲಿ ವಿಶ್ವಭಾರತಿಗಾಗಿ ಧನ ಸಂಗ್ರಹ ಮಾಡಲು ಅವರು ತಮ್ಮ ನಾಟಕಗಳನ್ನು ತಾವೇ ಅಭಿನಯಿಸತೊಡಗಿದರು. ಡಿಲ್ಲಿಯಲ್ಲಿ, ಪ್ರಾಯಶಃ ಮಹಾತ್ಮ ಗಾಂಧಿಯವರ ಸೂಚನೆಯಂತೆ ಅವರಿಗೆ 60,000 ರೂಪಾಯಿಗಳ ನಿಧಿ ಅಪರಿಚಿತರಿಂದ ದೊರೆಯಿತು. ಠಾಕೂರರು ಶರತ್‌ಚಂದ್ರರ 60 ನೆಯ ಜನ್ಮ ಉತ್ಸವದಂದು, ಶರತ್‌ಚಂದ್ರ ಚಟರ್ಜಿಯವರನ್ನು ಕುರಿತು ಒಂದು ಪ್ರಬಂಧವನ್ನು ಓದಿದರು. 1937ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣವನ್ನು ವಂಗಭಾಷೆಯಲ್ಲಿ ಮಾಡಿದರು. ಆವರೆಗೆ ದೇಶಭಾಷೆಯಲ್ಲಿ ಘಟಿಕೋತ್ಸವ ಭಾಷಣ, ಭಾರತದ ವಿಶ್ವವಿದ್ಯಾಲಯದಲ್ಲಿ ಎಲ್ಲಿಯೂ ನಡೆದಿರಲಿಲ್ಲ. ಠಾಕೂರರು ಕಲ್ಕತ್ತದಲ್ಲಿ ಸೇರಿದ Parliament of religions ಧರ್ಮ ಸಮ್ಮೇಳನದ ಒಂದು ಸಭೆಯಲ್ಲಿ ಭಾಗವಹಿಸಿದರು. ಅವರ ದೇಹಾರೋಗ್ಯ ಮತ್ತೆ ಕೆಟ್ಟಿತು. ಆಗ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಮಿತಿ ಕಲ್ಕತ್ತದಲ್ಲಿ ತನ್ನ ಸಭೆಯನ್ನು ನಡೆಸುತ್ತಿತ್ತು. ದೇಶನಾಯಕರೆಲ್ಲ ಅವರನ್ನು ನೋಡಲು ಹೋದರು. ಅವರಿಗೆ ಗುಣವಾದನಂತರ ಕಾಂಗ್ರೆಸ್ ಸಮಿತಿ ಒಂದು ಸಂತೋಷದ ನಿರ್ಣಯವನ್ನು ಮಾಡಿತು.

ಠಾಕೂರರ ದೇಹ ದುರ್ಬಲವಾಗುತ್ತಲೇ ನಡೆಯಿತು. ಅವರು ದೇಹಕ್ಕಿಂತ ಹೆಚ್ಚಾಗಿ ಆತ್ಮದಿಂದಲೇ ಜೀವಿಸುತ್ತಿದ್ದರೆಂದು ಹೇಳಬಹುದು. ಸರ್ ರಾಧಾಕೃಷ್ಣ ಮತ್ತು ಸರ್‌ಮಾರಿಸ್‌ಗ್ವಯರ್‌ರು ಶಾಂತಿನಿಕೇತನಕ್ಕೆ ಭೇಟಿಯಿತ್ತು, ಠಾಕೂರರಿಗೆ, ಆಕ್ಸ್‌ಫರ್ಡ ವಿಶ್ವವಿದ್ಯಾಲಯದ ಡಾಕ್ಟರ್ ಪ್ರಶಸ್ತಿಯನ್ನು ನೀಡಿದರು. ಶಾಂತಿನಿಕೇತನದಲ್ಲಿ 80ನೆ ತಮ್ಮ ವರ್ಷ ವರ್ಧಂತಿಯಲ್ಲಿ ಭಾಗವಹಿಸಲು ಠಾಕೂರರು ನಿಶ್ಯಕ್ತರಾದರು. ಆದುದರಿಂದ Crisis in civilisation [ನಾಗರೀಕತೆಯಲ್ಲಿ ಸಂದಿಗ್ಧಸಮಯ] ಎಂಬ ಲೇಖನವನ್ನು ಹೇಳಿ ಬರೆಸಿ ಸಭೆಯಲ್ಲಿ ಓದಿಸಿದರು. ಜುಲೈ 30ರಂದು ಅವರಿಗೆ ಶಸ್ತ್ರ ಚಿಕಿತ್ಸೆಯಾಯಿತು. ಆದರೆ ಅವರ ಸ್ಥಿತಿ ಚಿಂತಾಜನಕವಾಗಿಯೇ ಇತ್ತು. 7 ನೆ ಆಗಸ್ಟ್ 1941 ಗುರುವಾರ (80 ವರ್ಷ 3 ತಿಂಗಳು) ಅವರು ಸ್ವರ್ಗಸ್ಥರಾದರು. ಕಾರ್ಯ ಮತ್ತು ಸಾಧನೆಗಳಿಂದಲೇ ತುಂಬಿದ ಆ ಧೀರ ಮಹದ್ ವ್ಯಕ್ತಿಯ ಬಾಳು ಪೂರ್ಣವಿಶ್ರಾಂತಿಗೆ ಸಂದಿತು.

1915 ರಲ್ಲಿ ಮೊದಲನೆಯ ಸಲ ಮಹಾತ್ಮ ಗಾಂಧಿ ಮತ್ತು ಠಾಕೂರರ ಭೆಟ್ಟಿಯಾಯಿತು. ಆಗ ಠಾಕೂರರು ಗಾಂಧಿಯವರ ಸಮಕ್ಷಮದಲ್ಲಿ ಫಲ್ಗುನಿ ಎಂಬ ಗೀತ ನಾಟಕವನ್ನು, ಬಂಕುರ ಕ್ಷಾಮನಿಧಿಯ ಸಹಾಯಕ್ಕಾಗಿ ಅಭಿನಯಿಸಿದರು. ಪ್ರಥಮ ಸಂದರ್ಶನದಲ್ಲಿಯೇ ಆ ಇಬ್ಬರು ಮಹಾತ್ಮರಿಗೂ ಒಬ್ಬರಲ್ಲಿ ಒಬ್ಬರಿಗೆ ಪೂರ್ಣಪ್ರೇಮ ಗೌರವವುಂಟಾದವು. 1920 ರಲ್ಲಿ ಠಾಕೂರರು ಸಬರಮತಿಗೆ ಭೇಟಿಯಿತ್ತರು. ರೊಮೇನ್ ರೋಲೆಂಡರು, "ಗಾಂಧಿ ಠಾಕೂರ್‌ರು ಇಬ್ಬರೂ ಭಾರತದ ಗಂಗೆ ಯಮುನೆಗಳಂತೆ" ಎಂದು ಹೇಳಿದ್ದಾರೆ. ಪರದೇಶದ ವಸ್ತ್ರ ಬಹಿಷ್ಕಾರ, ಚರಕದ ಪ್ರಾಮುಖ್ಯತೆ, ಬಿಹಾರ ಭೂಕಂಪ ಅಸ್ಪೃಶ್ಯತೆಯನ್ನು ಸ್ಥಾಪಿಸಿದ ಭಾರತೀಯರ ಪಾಪಕ್ಕೆ ಶಿಕ್ಷೆ, ಮೊದಲಾದ ಗಾಂಧಿಯವರ ಅಭಿಪ್ರಾಯಗಳನ್ನು ಠಾಕೂರರು ಒಪ್ಪದಿದ್ದರೂ, ಆ ಇಬ್ಬರೂ ಎಂದೆಂದಿಗೂ ಆತ್ಮೀಯರಾಗಿಯೇ ಇದ್ದರು. ಚರಕವನ್ನು ಕುರಿತ ಗಾಂಧಿಯವರ ಅಭಿಪ್ರಾಯಗಳನ್ನು ಠಾಕೂರರು ಸತ್ಯ ಅಭನ್ (The call for truth) ಎಂಬ ಲೇಖನದಲ್ಲಿ ವಿರೋಧಿಸಿದರು. ಮಹಾತ್ಮರು ಠಾಕೂರರನ್ನು Sentinel of the East ಏಷ್ಯದ ಎಚ್ಚರಿಕೆಗಾರ ಎಂದು ಕರೆದರು. 1931 ರಲ್ಲಿ ಠಾಕೂರರ 70 ನೇ ವರ್ಷದ ಉತ್ಸವಗಳು ಪ್ರಾರಂಭವಾಗುತ್ತಿರುವಾಗಲೇ ಹಿಜಲಿ ಕ್ಯಾಂಪಿನಲ್ಲಿ ಸರ್ಕಾರ ಇಬ್ಬರು ಸ್ಥಾನಬಂಧಿತರನ್ನು ಗುಂಡಿಕ್ಕಿ ಕೊಂದರು. ದುಂಡು ಮೇಜು ಪರಿಷತ್ತಿನಿಂದ ಹಿಂದಿರುಗಿದ್ದ ಗಾಂಧಿಯವರನ್ನು, ಸರ್ಕಾರ ಸೆರೆಹಿಡಿಯಿತು. ಠಾಕೂರರು ತಮ್ಮ ಹೆಸರಿನ ಉತ್ಸವ ಸಮಾರಂಭಗಳನ್ನೆಲ್ಲ ನಿಲ್ಲಿಸಿಬಿಟ್ಟರು. ಗಾಂಧಿಯವರು ಪ್ರಾರಂಭಿಸಿದ ಆಮರಣಾಂತ ಉಪವಾಸ ಮುಕ್ತಾಯದಲ್ಲಿ ಠಾಕೂರರು ಅವರಿಗೆ ಕಿತ್ತಳೆ ಹಣ್ಣಿನ ರಸವನ್ನು ಕೊಟ್ಟರು.

ಮಹಾತ್ಮರು ಠಾಕೂರರ ಯೋಗ ಕ್ಷೇಮವನ್ನು ವಿಚಾರಿಸಲು 1940 ರಲ್ಲಿ ವಿಶ್ವ ಭಾರತಿಗೆ ಹೋದರು. ಗುರುದೇವರು ಅವರನ್ನು ಎದುರುಗೊಳ್ಳಲು ಎದ್ದು ನಿಲ್ಲ ತೊಡಗಿದರು. ಮಹಾತ್ಮರು ಅವರನ್ನು ಏಳಗೊಡಲಿಲ್ಲ. ಇಬ್ಬರೂ ಆಲಿಂಗಿಸಿಕೊಂಡರು. ಭಾರತದ ಸಂಸ್ಕೃತಿಯ ಲಕ್ಷಣವೇ ಇದು. ಮಹಾತ್ಮರನ್ನು ಕುರಿತ ಯಾವ ಟೀಕೆಗೂ ಠಾಕೂರರು ಸಮ್ಮತಿಸುತ್ತಿರಲಿಲ್ಲ. ಮಹಾತ್ಮರು, "ವಿಶ್ವಭಾರತಿ ದೇಶದ ಹೊಣೆ ಎಂದು ಹೇಳಿದರು."

1931 ರಲ್ಲಿ ಗಾಂಧಿ, ಠಾಕೂರರ ಯೋಗ ಕ್ಷೇಮವನ್ನು ವಿಚಾರಿಸಲು ಮಹದೇವ ದೇಸಾಯ್‌ರವರ ಕೈಯಲ್ಲಿ ಒಂದು ಪತ್ರವನ್ನು ಕಳುಹಿಸಿದರು. ಅದರಲ್ಲಿದ್ದ ಪ್ರೇಮಪೂರಿತ ವಾಕ್ಯಗಳನ್ನು ಓದಿ, ಎಂದಿಗೂ ಅಳದೇ ಇದ್ದ ಠಾಕೂರರ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಹರಿಯಿತು.

ಠಾಕೂರರ ಗೀತಗಳಲ್ಲಿ ಆಧ್ಯಾತ್ಮ ಭಾವನೆ, ಭಕ್ತಿಭಾವಗಳು ತುಂಬಿ, ಅವುಗಳನ್ನು ಓದುವವರಿಗೆ (ಭಾಷಾಂತರದಲ್ಲಿ ಸಹ) ಮನಸ್ಸಮಾಧಾನವನ್ನೂ ಶಾಂತಿಯನ್ನೂ ಕೊಡುತ್ತವೆ. ಅವರ ಅನೇಕ ರಾಜಕೀಯ ಗೀತಗಳೂ ಸಹ ಪ್ರಾರ್ಥನಾ ಗೀತಗಳೇ ಆಗಿವೆ. ಅಂತರಂಗ ದರ್ಶನ ಮತ್ತು ಊಹನಾಶಕ್ತಿಗಳ ಮೂಲಕ, ಕವಿ ಬೇಕಾದಲ್ಲಿಗೆ ಹೋಗಬಲ್ಲವರಲ್ಲದೆ ವಾಚಕರನ್ನೂ ಕರೆದುಕೊಂಡು ಹೋಗುತ್ತಾರೆ. ಅವರ ಕೈಯ್ಯಲ್ಲಿ ವಂಗಭಾಷೆ, ಪ್ರಾಂತಭಾಷೆಯ ಮಟ್ಟವನ್ನು ಮೀರಿ ಜಗತ್ತಿನ ಇತರ ಭಾಷೆಗಳ ಜತೆ ಸಮಾನ ಸ್ಥಾನದ ಗೌರವವನ್ನು ಹೊಂದಿದೆ. ವಿಶ್ವಾತ್ಮ ವಿಶ್ವಭಾವಗಳು ಅವರ ಕೃತಿಗಳಲ್ಲಿ ಪ್ರಕಟವಾಗಿವೆ. 1931 ರಲ್ಲಿ ಠಾಕೂರರಿಗೆ, ಜಗತ್ತು ಅರ್ಪಿಸಿದ ಸುವರ್ಣ ಸಂಪುಟ, ಅವರಲ್ಲಿ ಜಗತ್ತಿನ ಎಲ್ಲ ಭಾಗದ ವಿದ್ವಾಂಸರೂ ಜ್ಞಾನಿಗಳೂ ಇಟ್ಟಿದ್ದ ಗೌರವಕ್ಕೆ ಗುರುತು.

ಠಾಕೂರರು ಮುಖ್ಯವಾಗಿ ಕವಿ. ಅದರಲ್ಲಿಯೂ ಅವರ ಅತ್ಯುತ್ತಮ ಕೃತಿಗಳು ಭಾವಗೀತೆಗಳು. ಠಾಕೂರರು ಮಹತ್ಕಾವ್ಯವನ್ನು ಬರೆಯಲಿಲ್ಲ. ಆಧುನಿಕ ವೇಗಕ್ಕೆ, ಮಹಾಕಾವ್ಯಗಳು ಬೇಕಿಲ್ಲವೆಂದು ಅವರು ಭಾವಿಸಿದಂತೆ ಕಾಣುತ್ತದೆ. ಕ್ಷಣಿಕ ಎಂಬ ಪದ್ಯಸಂಗ್ರಹದಲ್ಲಿ ಅವರು ಮಹಾಕಾವ್ಯವನ್ನು ಬರೆಯುವ ತಮ್ಮ ಪ್ರಯತ್ನವನ್ನು ಕುರಿತು ವಿನೋದವಾಗಿ ಹೇಳಿದ್ದಾರೆ. ಆ ಕವಿತೆ, ಅನಂತರ ಇಂಗ್ಲಿಷ್ ಗಾರ್ಡನರ್‌ನಲ್ಲಿ ಪ್ರಕಟವಾಯಿತು.

“ಪ್ರಿಯೆ. ಒಂದು ಸಲ, ಕವಿ, ದೊಡ್ಡ ಕಾವ್ಯವನ್ನು ಬರೆಯಬೇಕೆಂದು ಯೋಚಿಸಿದ. ಅಯ್ಯೋ ನಾನು ಎಚ್ಚರಿಕೆಯಿಂದಿರಲಿಲ್ಲ. ಅದು ನಿನ್ನ ಝಣಝಣಿಸುವ ನೂಪುರಕ್ಕೆ ತಗಲಿ ಕಷ್ಟಪಟ್ಟಿತು. ಅದು ಒಡೆದು, ಸಣ್ಣ ಸಣ್ಣ ಗೀತಗಳಾಗಿ ನಿನ್ನ ಪಾದದಲ್ಲಿ ಬಿದ್ದಿತು. ಹಳೆಯ ಕಾಲದ ಯುದ್ಧದ ಕಥೆಗಳ ನನ್ನ ಹಡಗಿನ ಸರಕುಗಳನ್ನೆಲ್ಲ, ಭೋರ್ಗರೆಯುವ ಅಲೆಗಳು ಚೆಲ್ಲಾಪಿಲ್ಲಿಯಾಗಿ ಮಾಡಿದವು. ಅವು ಕಣ್ಣೀರಿನಲ್ಲಿ ನೆನೆದು ಮುಳುಗಿ ಹೋದವು. ಪ್ರಿಯೆ.

ಈ ನಷ್ಟವನ್ನು ನೀನು ನನಗೆ ಕಟ್ಟಿಕೊಡಬೇಕು. ನನ್ನ ಮರಣಾನಂತರ ನನಗೆ ಬರಬೇಕಾದ ಅಮರಪ್ರಸಿದ್ಧಿ ಇದರಿಂದ ನಾಶವಾಗುವುದಾದರೆ, ನಾನು ಜೀವಿಸಿರುವಾಗಲೇ ನನ್ನನ್ನು ಅಮರನನ್ನಾಗಿ ಮಾಡು. ನನಗಾದ ನಷ್ಟಕ್ಕಾಗಿ ನಾನು ದುಃಖಿಸುವುದೂ ಇಲ್ಲ. ನಿನ್ನನ್ನು ದೂರುವುದೂ ಇಲ್ಲ."

ಕಾವ್ಯ ನಾಟಕ ಕಾದಂಬರಿಗಳಿರಲಿ. ಠಾಕೂರರು ಜ್ಞಾನಸಾಹಿತ್ಯಕ್ಕೆ ಸಲ್ಲಿಸಿದ ಕಾಣಿಕೆ ಸಹ ಸಾಮಾನ್ಯವಾದುದಲ್ಲ ಮಹಾಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿ ಎಂ.ಎ., ಡಿ.ಲಿಟ್‌ರು, ಠಾಕೂರರ 70ನೆ ಉತ್ಸವ ಸಮಾರಂಭದ ಪ್ರಾರಂಭದ ಸಭೆಯಲ್ಲಿ ಹೀಗೆ ಹೇಳಿದರು.

"ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೈ ಆಡಿಸಿದ್ದಾರೆ. ದ್ವಿಪದಿ, ಪದ್ಯ, ಖಂಡಕಾವ್ಯ, ನಾಟಕಗಳು, ಪ್ರಹಸನಗಳು, ಹರ್ಷ ನಾಟಕಗಳು, ದುಃಖಾಂತ ನಾಟಗಳು, ಗೀತ ನಾಟಕಗಳು, ಕೀರ್ತನೆಗಳು ಮತ್ತು ಭಾವಗೀತೆಗಳು ಎಲ್ಲವುಗಳಲ್ಲಿಯೂ ಪ್ರಯೋಗ ನಡೆಸಿದ್ದಾರೆ. ಸಾಹಿತ್ಯದ ಯಾವ ಪ್ರಕಾರದಲ್ಲಿ ಕೈಹಾಕಿದರೂ, ಅದರಲ್ಲೆಲ್ಲ ಅವರು ಯಶಸ್ವಿಯಾಗಿದ್ದಾರೆ. ಆದರೆ ಅವರು ಸಂಪೂರ್ಣ ಜಯಶಾಲಿಯಾಗಿರುವುದು ಭಾವಗೀತೆಗಳಲ್ಲಿ, ಅವರ ಪ್ರಬಂಧಗಳು ಜ್ಞಾನಪ್ರಚೋದಕವಾಗಿವೆ. ಅಣಕಗಳು ಕಟುವಾಗಿವೆ. ವಿಡಂಬನೆ ಮರ್ಮೋದ್ಘಾತಕವಾಗಿದೆ. ಅವರಿಗೆ ಪ್ರಾಚೀನ ಕವಿಗಳಲ್ಲಿ ಪೂರ್ಣ ಮೆಚ್ಚುಕೆ ಮತ್ತು ಸಹಾನುಭೂತಿ. ವ್ಯಾಕರಣ ಮತ್ತು ನಿಘಂಟನ ಪ್ರಶ್ನೆಗಳಲ್ಲಿ ಅವರು ನಮ್ಮೆಲ್ಲರಿಗಿಂತ ಆಳವಾಗಿ ಪ್ರವೇಶಿಸಿದ್ದಾರೆ."

ಆಧುನಿಕ ಅಥವಾ ಪ್ರಾಚೀನ ಯಾವ ಕವಿಯೂ, ಠಾಕೂರರಷ್ಟು ಹೆಚ್ಚು ಸಂಖ್ಯೆಯಲ್ಲಿ ಭಾವಗೀತೆಗಳನ್ನು ಬರೆಯಲಿಲ್ಲ, ಟೆನಿಸನ್‌ರು ವಿಕ್ಟರ್ ಹ್ಯೂಗೋರವರನ್ನು "Victor of drama, Victor of Romance Cloud weaver of Phantsmal hopes and fears, Lord of human tears, Child lover, weird Titan, by thy winter weight of years, as yet un born, ಎಂದು ಹೇಳಿದರು. ಇವೇ ಮಾತುಗಳು ಠಾಕೂರರಿಗೆ ಸಹ ಅನ್ವಯಿಸುತ್ತವೆ. ಠಾಕೂರರು ಧರ್ಮ, ಶಿಕ್ಷಣ, ಸಮಾಜ, ರಾಜಕೀಯ ಐತಿಹಾಸಿಕ ಆರ್ಥಿಕ ಭಾಷಾಶಾಸ್ತ್ರ ಇವುಗಳ ಮೇಲೆ ಬೇಕಾದಷ್ಟು ಬರೆದರು. ಸಂಗೀತ ಮತ್ತು ಪ್ರಾಸದಲ್ಲಿ

ಅವರದು ಅಧಿಕಾರವಾಣಿ, ಬಂಗಾಳಿ ಭಾಷೆಯಲ್ಲಿ ಅವರು ದೊಡ್ಡ ವಿಮರ್ಶಕರು. ಉತ್ತಮ ಪತ್ರಲೇಖಕರು. ಅವರು ಬರೆದ ಪೋಸ್ಟ್ ಕಾರ್ಡುಗಳು ಸಹ ಸಾಹಿತ್ಯ. ಗದ್ಯ ಕವನ (Prose Poems) ಮತ್ತು ಸರಳರಗಳೆಯಲ್ಲಿ ಅವರಿಗೆ ಸಮಾನರೇ ಇರಲಿಲ್ಲ. ಪದ ಸಮಸ್ಯೆ ಸಂಭಾಷಣೆಯಲ್ಲಿ ಸಹ ಠಾಕೂರರು ಅದ್ವಿತೀಯರಾಗಿದ್ದರು.

ಅವರು ಅನೇಕ ನೃತ್ಯ ನಾಟಕಗಳನ್ನು ಬರೆದಿದ್ದಾರೆ. ಅವರ ಕಾವ್ಯ ಶಕ್ತಿ ವಿಪುಲವಾಗಿತ್ತು. 1930 ರಲ್ಲಿ ಅವರಿಗೆ ಆರೋಗ್ಯ ಕೆಟ್ಟಾಗ ಅವರು ಮೂರು ಡಜನ್ ಪುಸ್ತಕಗಳನ್ನು ಬರೆದರು. ಇವುಗಳ ಪೈಕಿ ಪ್ರಾಥಮಿಕ ಮತ್ತು ಶಿಶುಗೀತೆಗಳು, ಅರ್ಥವಿಲ್ಲದ ಪದ್ಯಗಳು (Nonsense Rhymes) ಚಿತ್ರ ಪುಸ್ತಕಗಳು, ನರ್ತನ, ನಾಟಕಗಳು ಎಲ್ಲ ಇದ್ದವು. ಅವರ ಕೊನೆಯ ಕಾಹಿಲೆಯಲ್ಲಿ, ನೆನಪುಗಳ ಎರಡು ಪುಸ್ತಕ ಮತ್ತು ಪದ್ಯ ಪುಸ್ತಕ ಒಂದು ಸಿದ್ಧವಾಯಿತು.

ಅವರು, ಬಂಗಾಳಿ ಸಂಸ್ಕೃತ ಇಂಗ್ಲೀಷು ಪಾಲಿ ಭಾಷೆಗಳಲ್ಲಿ ಎಲ್ಲ ವಿಷಯಗಳ ಮೇಲೆಯೂ ಪ್ರಕಟವಾಗುತ್ತಿದ್ದ ಎಲ್ಲ ಗ್ರಂಥಗಳನ್ನೂ ಓದುತ್ತಿದ್ದರು. ಜ್ಞಾನವೆಲ್ಲ ಕವಿಯ ಪ್ರಪಂಚ ಎಂದು ಮಿಲ್ಟನ್ ಹೇಳಿರುವುದು ಠಾಕೂರರಿಗೆ ಅನ್ವಯಿಸುತ್ತದೆ. ಅವರು ಸಾಯುವುದಕ್ಕೆ 4 ವರ್ಷಗಳ ಮುಂಚೆ, ವಿಶ್ವ ಪರಿಚಯವೆಂಬ ವಿಜ್ಞಾನ ಗ್ರಂಥವನ್ನು ಬರೆದರು. ನಾಲ್ಕು ವರ್ಷಗಳಲ್ಲಿ ಅದರ ಆರು ಪುನರ್ಮುದ್ರಣಗಳಾದವು. ಇಷ್ಟಾದರೂ ಅವರು ಬಹಳ ವಿನಯಪರರಾಗಿ ತನಗೆ ಏನೂ ಗೊತ್ತಿಲ್ಲವೆಂದು ಹೇಳಿ ಕೊಳ್ಳುತ್ತಿದ್ದರು. ಮಹತ್ ಸ್ವರಮೇಳ ಎಂಬ ಕವನದಲ್ಲಿ ಅವರು ಹೀಗೆ ಹೇಳಿದರು

ಈ ಅದ್ಭುತ ಜಗತ್ತಿನ ವಿಷಯ ನನಗೆ ತಿಳಿದಿರುವುದು ಅತ್ಯಲ್ಪ. ಧೀರರ ಸಾಹಸಗಳು ರಾಷ್ಟ್ರಗಳು, ನಗರಗಳು, ಬೆಟ್ಟಗಳು ನದಿಗಳು ಸಮುದ್ರ ಮರಳು ಗಾಡು, ನಾನಾ ರೂಪದ ಪಶುಪಕ್ಷಿಗಳು ವೃಕ್ಷಗಳು ಇವಾವುದೂ ನನಗೆ ತಿಳಿಯದು. ಈ ವಿಶಾಲವಾದ ಪೃಥ್ವಿಯಲ್ಲಿ, ಜೀವ, ವಿರಾಟ್‌ರೂಪದಲ್ಲಿದೆ. ಆದರೆ ನನ್ನ ಮನಸ್ಸು ಒಂದು ಸಣ್ಣ ಮೂಲೆಯಲ್ಲಿದೆ."

ಆಕ್ಸ್‌ಫರ್ಡ ವಿಶ್ವವಿದ್ಯಾಲಯ ಅವರ ಕೃತಿಗಳ ಬರಿಯ ಅನುವಾದಗ

ಳಿಂದಲೇ ಅವರ ಯೋಗ್ಯತೆಯರಿತು ಅವರಿಗೆ ಸಮರ್ಪಿಸಿದ ಡಾಕ್ಟರೇಟ್ ಪದವಿಯ ಸಮಾರಂಭ ಪತ್ರದಲ್ಲಿ (Citations) ಹೀಗೆ ಹೇಳಿತ್ತು.

"ನಿಮ್ಮ ಮುಂದೆ ಇರುವ ಈ ನಮ್ಮ ಭ್ರಾತೃ, ತನ್ನ ಬಾಳು ಪ್ರತಿಭೆ ಮತ್ತು ಚಾರಿತ್ರ್ಯದಿಂದ, ತನ್ನ ದೇಶದ ಕೀರ್ತಿಯನ್ನು ಬಹಳ ಹೆಚ್ಚಿಸಿದ್ದಾರೆ. ಇವರು ಸಾತ್ವಿಕರು ವಿನಯಶೀಲರು. ಇಲ್ಲದಿದ್ದರೆ "ನನ್ನ ಬಾಳು ನನ್ನ ಪೂರ್ವಿಕರ ಸತ್ಕಾರ್ಯಗಳ ಕಿರೀಟವನ್ನು ಧರಿಸಿದೆ" ಎಂದು ಹೇಳಿಕೊಳ್ಳಬಹುದಾಗಿದ್ದಿತು. ಇವರು ಗದ್ಯದಲ್ಲಿಯೂ ಕವನದಲ್ಲಿಯೂ ಉದ್ದಾಮ ಕಲಾವಂತರು. ಕವಿತೆ, ಕಥನ ಕಾವ್ಯ, ವಿಡಂಬನೆ, ಇತಿಹಾಸ ಎಲ್ಲವನ್ನೂ ಬರೆದಿದ್ದಾರೆ. ಇವರು ಸಾಹಿತ್ಯದ ಎಲ್ಲ ಭಾಗದಲ್ಲಿಯೂ ಪ್ರಯೋಗ ನಡೆಸಿದ್ದಾರೆ. ಎಲ್ಲದರಲ್ಲಿಯೂ ಪೂರ್ಣ ಯಶಸ್ವಿಯಾಗಿದ್ದಾರೆ. ಇಲ್ಲಿ ಕಲ್ಪನಾ ವೈಭವ ಅಪರೂಪವಾಗಿ ಲಲಿತ ಶೈಲಿಯೊಡನೆ ಬೆರೆತಿದೆ. ಇವರ ವಿವಿಧ ಮುಖವಾದ ಪ್ರಜ್ಞೆ, ವಿವೇಕ, ನಗು, ಅಳು, ರೌದ್ರ, ಆನಂದ ಭಾವನೆಗಳನ್ನು ಪ್ರಚೋದಿಸುವ ಶಕ್ತಿ ಏನು ಆಶ್ಚರ್ಯಕರ! ಇವರ ಮನುಷ್ಯತ್ವವೋ? ಮನುಷ್ಯ ಪ್ರಪಂಚಕ್ಕೆ ಸಂಬಂಧಿಸಿದ ಯಾವುದೂ ಇವರ ದೃಷ್ಟಿಯನ್ನು ಆಕರ್ಷಿಸದಷ್ಟು ಕಡಿಮೆಯಲ್ಲ. ಇವರು ಒಬ್ಬ ಗಾಯಕರು, ಇವರು ಯಾವ ಗಾಯನ ನಿಯಮಗಳಿಗೂ ಒಳಗಾದವರಲ್ಲ. ಆದರೂ ಸಾವಿರಾರು ಹೊಸ ರಾಗವಿನ್ಯಾಸಗಳನ್ನು ಸೃಷ್ಟಿಸಿದ್ದಾರೆ. ಇವರು ಉತ್ತಮ ದಾರ್ಶನಿಕರು. ಚಾರಿತ್ರ್ಯಕ್ಕೂ ತತ್ವಕ್ಕೂ ಸಮರಸವನ್ನು ಕಂಡು, ಹಿಡಿದು ಕೆಲವರಿಗೆ ಮಾತ್ರ ಸಾಧ್ಯವಾದ, ಪೂರ್ಣಸ್ಥಿತಪ್ರಜ್ಞತ್ವವನ್ನು ಅನುಭವಿಸುತ್ತಿದ್ದಾರೆ. ಈ ಸಾಧನೆಗಳಲ್ಲಿ ಇವರು ತೊಡಗಿದ್ದರೂ ತಮ್ಮ ಸ್ವಂತ ಬಿಡುಗಡೆಗಾಗಿಯೇ ಇವರು ಬಾಳಲಿಲ್ಲ. ಯುವಕರಿಗೆ ಉತ್ತಮಶಿಕ್ಷಣಕ್ಕಿಂತ ಹೆಚ್ಚಾದುದು ಮತ್ತಾವುದೂ ಇಲ್ಲವೆಂದು ಇವರು ನಂಬಿ, ಒಂದು ಆದರ್ಶ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ತಾವೇ ಅದರ ಜೀವವಾಗಿದ್ದಾರೆ. ಜ್ಞಾನಕ್ಕಾಗಿಯೇ ಜ್ಞಾನವನ್ನು ಸಂಪಾದಿಸುವ ಆಸೆಯನ್ನು ಯುವಕರಲ್ಲಿ ಉಂಟುಮಾಡುವುದೇ ಆ ಸಂಸ್ಥೆಯ ಮುಖ್ಯಗುರಿ. ಇದರಿಂದ ಇವರು ಪ್ರಪಂಚದ ಹೋರಾಟ ಗೊಂದಲ ಇವುಗಳಿಂದ ದೂರವಾಗಿ ಸನ್ಯಾಸಿಯಂತೆ ಏಕಾಂತದಲ್ಲಿ ಬಾಳುವವರೆಂದು ಯಾರೂ ಭಾವಿಸದಿರಲಿ. ಸಮಯ ಬಿದ್ದಾಗಲೆಲ್ಲ ಇವರು ದೇಶದ ಬಾಳ್ವೆಯಲ್ಲಿ ಧುಮುಕಿದ್ದಾರೆ. ಬ್ರಿಟಿಷ್ ಸರ್ಕಾರ ಅನ್ಯಾಯ ಮಾಡಿತೆಂದು ತಿಳಿದಾಗ ಅವನ್ನೂ

ಅವರ ಅಧಿಕಾರಿಗಳನ್ನು ನಿರ್ಭಯವಾಗಿ ಎದುರಿಸಿದ್ದಾರೆ. ಅಷ್ಟೇ ನಿರ್ಭಯ ವಾಗಿ ಭಾರತೀಯರ ತಪ್ಪುಗಳನ್ನೂ ತಿದ್ದಿದ್ದಾರೆ. ಇವರ ವಿಷಯ ಮತ್ತೇನು ಹೇಳೋಣ? ಇಲ್ಲಿ ನಿಮ್ಮ ಮುಂದೆ ಈ ಸಹಸ್ರಮುಖದ ಮನಸ್ಸಿನ ಕವಿ, ಲೇಖಕ, ಪ್ರಸಿದ್ಧ ಗಾಯಕ, ಜ್ಞಾನದಿಂದಲೂ ಕಾರ್ಯದಿಂದಲೂ ಸಾಧಕನಾದ ದಾರ್ಶನಿಕ, ವಿದ್ಯೆ ಮತ್ತು ವಿವೇಕಗಳನ್ನು ಎತ್ತಿಹಿಡಿಯುವವ, ಸಾರ್ವ ಜನಿಕ ಹಕ್ಕುಗಳ ಯೋದ್ಧ, ತನ್ನ ಪವಿತ್ರ ಮತ್ತು ನಿಷ್ಕಲ್ಮಶ ಜೀವನ ಮತ್ತು ಚಾರಿತ್ರ್ಯದಿಂದ ಮನುಷ್ಯ ಪ್ರಪಂಚದ ಪ್ರಶಸ್ತಿಗೆ ಪಾತ್ರನಾದ ಮಹ ನೀಯ, ಇದ್ದಾರೆ."

ಅವರ ಭಕ್ತಿಗೀತೆಗಳು, ಅವರು ಪರಮಾತ್ಮನ ತೀವ್ರ ಭಕ್ತರೆಂಬುದನ್ನು ತೋರಿಸುತ್ತವೆ. ಅವರು ದೊಡ್ಡ ವೇದಾಂತಿಯೂ ಹೌದು. ಅವರು 1925 ರಲ್ಲಿ ವೇದಾಂತ ಸಮ್ಮೇಳನದ Philosophical Congress ನ ಅಧ್ಯ ಕ್ಷತೆ ವಹಿಸಿದರು. ಅವರು ಪರದೇಶದಲ್ಲಿ ಕೊಟ್ಟ ಉಪನ್ಯಾಸಗಳ ಹೆಸರು Religion of man ಮಾನವನ ಧರ್ಮ. ಆ ಉಪನ್ಯಾಸಗಳ ತಿರು ಳನ್ನು ಠಾಕೂರರೇ ಹೀಗೆ ಹೇಳಿದ್ದಾರೆ.

"ಭಾರತ, ಮನುಷ್ಯನ ಆಧ್ಯಾತ್ಮ ಸತ್ಯದಲ್ಲಿ ಎಂದೆಂದಿಗೂ ನಂಬಿಕೆಯಿ ಟ್ಟಿದೆ. ಅದರ ಸಾಕ್ಷಾತ್ಕಾರಕ್ಕಾಗಿ ಭಾರತ, ಹಿಂದಲಿಂದ ಅಸಂಖ್ಯಾತ ಪ್ರಯೋಗಗಳನ್ನೂ ತ್ಯಾಗಗಳನ್ನೂ ತಪಸ್ಸನ್ನೂ ಮಾಡಿದೆ. ಆತ್ಮದ ಅನ್ವೇಷಣೆ ಯನ್ನು ಭಾರತ ಬಿಟ್ಟಿಲ್ಲ. ಇದರಿಂದ ಭಾರತದ ಭೌತ ವೈಭವಕ್ಕೆ ಅಡ್ಡಿಯೊದ ಗಿದೆ. ಆದುದರಿಂದ ನಿಜವಾದ ಭಾರತ ಒಂದು ಭಾವನೆಯೇ ಹೊರತು, ಬರಿಯ ಭೂಭಾಗವಲ್ಲ. ನಾನು ದೂರವಾದ ಯೂರೋಪಿನಲ್ಲಿ ಈ ಭಾವದ ಸಂಪರ್ಕ ಹೊಂದಿದೆ. ಭಾರತೀಯರಲ್ಲದವರಲ್ಲಿ ಈ ಭಾವನೆಯನ್ನು ಕಂಡು ಅದರಿಂದ ಆಕರ್ಷಿತನಾದೆ. ಈ ಭಾವಕ್ಕೆ ಜಯವಾದಾಗ ಭಾರತಕ್ಕೇ ಜಯ. ಅಂಧಕಾರ ವನ್ನು ಭೇದಿಸಿಕೊಂಡು ಹೊಳೆಯುವ ಅನಂತ ವ್ಯಕ್ತಿತ್ವವೇ ಈ ಭಾವ. ನಾವು ಹೋರಾಡುತ್ತಿರುವುದು ಈ ಅಂಧಕಾರಕ್ಕೆ ಎದುರಾಗಿ. ಮನುಷ್ಯನ ಈ ಅನಂತ ವ್ಯಕ್ತಿತ್ವ ಜ್ಯೋತಿಯ ಪ್ರಕಟನೆಯೇ, ನಮ್ಮ ಗುರಿ. ಇದು ಬಿಡಿ ವ್ಯಕ್ತಿ ಗಳು ಸಾಧಿಸುವುದಲ್ಲ. ಸಮಸ್ತ ಮನುಷ್ಯ ಪ್ರಪಂಚದ, ಅದ್ಭುತ ಒಮ್ಮತದಿಂದ ಮಾತ್ರ ಸಾಧ್ಯ. ನಾಶವಾಗಬೇಕಾಗಿರುವ ಅಹಂಕಾರ ರಾಷ್ಟ್ರೀಯತೆಯ

ಅಹಂಕಾರ. ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದಿಂದ ಪೂರ್ಣವಾಗಿ ಬೇರೆ ಎಂಬುದನ್ನು ಭಾರತ ಒಪ್ಪುವುದಿಲ್ಲ. ಆ ಬಗೆಯ ಭಾವನೆಯಿಂದ ಕೊನೆಯಿಲ್ಲದ ಹೋರಾಟವಾಗುತ್ತದೆ. ಆದುದರಿಂದ ನನ್ನ ಪ್ರಾರ್ಥನೆ ಇದು. ಭಾರತ ಜಗತ್ತಿನ ಎಲ್ಲ ಜನಾಂಗಗಳ ಸಹಕಾರ ಪ್ರತೀಕವಾಗಿರಲಿ. ನನ್ನ ವ್ಯಕ್ತಿತ್ವದಲ್ಲಿ ಜಗತ್ತಿನ ವ್ಯಕ್ತಿತ್ವವನ್ನು ಒಂದುಗೂಡಿಸುವುದೇ ನನ್ನ ಧರ್ಮ."

ಠಾಕೂರರಿಗೆ, ಗಾನ ಸ್ವಾಭಾವಿಕವಾಗಿ ಸ್ವಾಧೀನವಾಗಿತ್ತು. ಅವರು ಸಂಗೀತದ ವಿದ್ವಾಂಸರಾಗಿರಲಿಲ್ಲ. ಆದರೆ ಹೊಸ ಧಾಟಿಗಳೂ ಮಟ್ಟುಗಳೂ ಅವರಿಗೆ ತನ್ನಷ್ಟಕ್ಕೆ ತಾನೇ ಹೊಳೆಯುತ್ತಿದ್ದವು.

ಠಾಕೂರರು ಸಂಗೀತ ಶಾಸ್ತ್ರಾಧ್ಯಯನ ಮಾಡಿದ ವಿದ್ವಾಂಸ (ಉಸ್ತಾದ್) ಅಲ್ಲ. ಆದರೆ ಅವರ ಕಿವಿ ಸ್ವಾಭಾವಿಕವಾಗಿಯೇ ಮಧುರಸ್ವರಗಳನ್ನು ಗುರುತಿಸಿ ಅವರ ಹಿಂದೆ ಹೋಗುತ್ತಿದ್ದಿತು. ಅವರು ಅನೇಕ ಹೊಸ ಮಟ್ಟುಗಳನ್ನೂ ಧಾಟಿಗಳನ್ನೂ ಸೃಷ್ಟಿಸಿದರು. ಆ ಮಟ್ಟುಗಳಲ್ಲಿ ತಮ್ಮ ಕವಿತೆಗಳನ್ನು ಅವರು ಅತ್ಯಂತ ಮಧುರವಾಗಿ ಹಾಡುತ್ತಿದ್ದರು. 1926ರ ಜರ್ಮನಿ ಮತ್ತು ಜೆಕೊಸ್ಲೋವೇಕಿಯಗಳ ಅವರ ಪ್ರವಾಸದಲ್ಲಿ ಡ್ರೆಸ್‌ಡನ್ ಎಂಬಲ್ಲಿ, ಜನ, ಠಾಕೂರರು ತಮ್ಮ ಬಂಗಾಳಿ ಕವಿತೆಗಳನ್ನು ಹಾಡಬೇಕೆಂದು ಕೇಳಿಕೊಂಡರು. ಅವರಿಗೆ ವಂಗಭಾಷೆ ತಿಳಿಯದಿದ್ದರೂ ಕವಿ ಹಾಡುವುದು ಅವರಿಗೆಲ್ಲ ಹಿತವಾಯಿತು.

ಹಾಡುವುದರಲ್ಲಿ ಹೇಗೋ ಹಾಗೆ ಅಭಿನಯದಲ್ಲಿಯೂ ಠಾಕೂರರು ನಿಪುಣರಾಗಿದ್ದರು. ತಾವು ರಚಿಸಿದ ಅನೇಕ ಕೃತಿಗಳಲ್ಲಿ ಅವರೇ ಅಭಿನಯಿಸಿ ಉತ್ತಮ ಅಭಿನಯ ಹೇಗಿರಬೇಕೆಂಬುದಕ್ಕೆ ಉದಾಹರಣೆಯಾಗಿದ್ದಾರೆ. ಅವರು ತಮ್ಮ ಪದ್ಯಗಳನ್ನು ಓದುವಾಗಲೂ ಅಭಿನಯಿಸುತ್ತಿದ್ದರು. ಬಂಗಾಳದಲ್ಲಿ ಉತ್ತಮ ಸಂಸಾರಗಳ ಮಹಿಳೆಯರು ಬಂದು ಮೊದಲು ನಾಟಕಗಳಲ್ಲಿ ಅಭಿನಯಿಸಿದುದು ಠಾಕೂರರ ಸ್ಫೂರ್ತಿಯಿಂದಲೇ. ಅಭಿನಯ ಶುದ್ಧವಾದ ಸಾತ್ವಿಕವಾದ ವಿನೋದಾನಂದ. ಇದರಲ್ಲಿ ಸ್ತ್ರೀಯರೂ ಹುಡುಗಿಯರೂ ಭಾಗವಹಿಸಬಹುದು ಎಂಬುದು ಠಾಕೂರರ ಮತವಾಗಿದ್ದಿತು. ಅವರೇ ಅನೇಕ ಹೊಸ ನರ್ತನಗಳನ್ನು ಸೃಷ್ಟಿಮಾಡಿ ಅವುಗಳನ್ನು ಶಾಂತಿನಿಕೇತನದ ವಿದ್ಯಾರ್ಥಿನಿಯರಿಗೆ ಕಲಿಸಿದ್ದರು. ಆ ನರ್ತನಗಳನ್ನು ನೋಡುವವರಿಗೆ ಯಾವ

ಬಗೆಯ ಉದ್ರೇಕವಾಗಲೀ ವಿಕಾರವಾಗಲೀ ಉಂಟಾಗುತ್ತಿರಲಿಲ್ಲ. ವಿಶ್ವ ಭಾರತಿಯಲ್ಲಿ ಈ ಕಲಾಶಿಕ್ಷಣಕ್ಕೆ ಕವಿ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದರು. ಅದನ್ನು ಕುರಿತು ಬರೆದ ಒಂದು ಪತ್ರದಲ್ಲಿ ಅವರು ಹೀಗೆ ಹೇಳಿದ್ದಾರೆ.

"ನಮ್ಮ ಆದರ್ಶದ ಮತ್ತೊಂದು ಅಂಶವನ್ನು ನಿಮ್ಮ ಮುಂದೆ ನಾವು ಈಗ ಪ್ರದರ್ಶಿಸುತ್ತೇವೆ. ನಮ್ಮ ಆತ್ಮವನ್ನು ಗಾನ ನರ್ತನಗಳ ಮೂಲಕ ವ್ಯಕ್ತಗೊಳಿಸುವುದೇ ಆ ಇನ್ನೊಂದು ಅಂಶ. ಪೂರ್ಣತೆಯನ್ನು ಹುಡುಕಿ ಕೊಂಡು ಹೋಗುವುದೇ ಜ್ಞಾನದ ಗುರಿ. ಬಾಳಿನ ವೈವಿಧ್ಯವನ್ನು ಆನಂದಕ್ಕೆ ಪರಿ ವರ್ತಿಸುವುದೇ ಬಾಳಿಕೆಗೆ ವಿವೇಕದ ಲಕ್ಷಣ. ನಮ್ಮ ಆನಂದ, ದುಷ್ಟಸಹವಾಸ ದಿಂದ ದೂರವಾಗಿರಬೇಕು. ಶಿಕ್ಷಣ, ಜೀವನದೊಡನೆ ಸಂಪರ್ಕಹೊಂದಿರಬೇಕು. ಆದುದರಿಂದ ಶಾಂತಿನಿಕೇತನದಲ್ಲಿ ನಾವೇ ವಿನೋದ ಆನಂದಗಳನ್ನು ಏರ್ಪಡಿ ಸುತ್ತೇವೆ. ಸೌಂದರ್ಯವನ್ನು ಪೂರ್ಣವೂ ನಿರ್ದೋಷವೂ ಆಗಿ ಮಾಡುವುದರಲ್ಲಿ ನಾವೂ ಭಾಗಿಗಳಾಗುತ್ತೇವೆ. ವಿನೋದ ಆನಂದಗಳು ಬಾಳನ್ನು ತಿದ್ದಬೇಕಾದರೆ, ಶಿಸ್ತಿನ ಬಾಳು ಆವಶ್ಯಕವೆಂಬುದು ನಮ್ಮ ಮತ. ಇದರಲ್ಲಿ ನಾವು ಭಾರತದ ಪ್ರಾಚೀನ ಸಂಪ್ರದಾಯವನ್ನೇ ಅನುಸರಿಸುತ್ತೇವೆ. ಸರಸ್ವತಿ, ಕಮಲ ಸಿಂಹಾಸ ನದಲ್ಲಿ ವೀಣಾಪಾಣಿಯಾಗಿ ಕುಳಿತಿದ್ದಾಳೆ. ಇಲ್ಲಿ ಮನುಷ್ಯನ ಅಮರಕೃತಿಗೆ ದೇವಲೋಕದ ಆಶೀರ್ವಾದವಿದೆ. ಇದೇ ನಿಜವಾದ ಜ್ಞಾನ."

ಇವುಗಳ ಜತೆ ಠಾಕೂರರು, ಅನೇಕ ದೇಶಭಕ್ತಿಯ ಹಾಡುಗಳನ್ನು ಬರೆ ದಿದ್ದಾರೆ. ಅವುಗಳಲ್ಲಿ ಕಾವ್ಯಭಾವನೆ ಮಾತೃಭೂಮಿಯ ಸೇವಾ ದೀಕ್ಷೆ ಇವೆಲ್ಲ ಅಡಕವಾಗಿವೆ. ಅವರ ಕಾಲದಲ್ಲಿ ಅವರು ಆದರ್ಶ ಜಮೀನುದಾರರೂ ಆಗಿದ್ದರು. ಅವರು ಜಮೀನ್ದಾರಿಯನ್ನು ಹೊಸದಾಗಿ ವಹಿಸಿಕೊಂಡಾಗ ಒಬ್ಬ ಇಂಗ್ಲಿಷ್ ಮ್ಯಾಜಿಸ್ಟ್ರೇಟರನ್ನು ಯಾವುದೋ ಕೆಲಸಕ್ಕಾಗಿ ಹೋಗಿ ನೋಡಬೇ ಕಾಯಿತು. ಠಾಕೂರರು ಮ್ಯಾಜಿಸ್ಟ್ರೇಟರಲ್ಲಿಗೆ ಹೋದರು. ಆ ಕಾಲದಲ್ಲಿ ಮ್ಯಾಜಿ ಸ್ಟ್ರೇಟರು, ಅದರಲ್ಲಿಯೂ ಇಂಗ್ಲಿಷ್‌ನವರು ಎಂದರೆ ಜನ ನಡುಗುತ್ತಿದ್ದರು. ಠಾಕೂರರು ಮ್ಯಾಜಿಸ್ಟ್ರೇಟರೂ ಯಾವುದೋ ಪರಿಶೀಲನೆಗಾಗಿ ಕೆಲವು ಮೈಲಿ ಹೋಗಬೇಕಾಯಿತು. ಠಾಕೂರರು, ತಮಗೂ ಮತ್ತು ಮ್ಯಾಜಿಸ್ಟ್ರೇಟರಿಗೂ ವಾಹನ ಸೌಕರ್ಯವನ್ನು ಏರ್ಪಡಿಸಬೇಕೆಂದು ತಮ್ಮ ರೈತನಿಗೆ ಹೇಳಿದರು. ಆತ ಹೋಗಿ ಒಂದೇ ಒಂದು ಪಲ್ಲಕ್ಕಿಯನ್ನು ತಂದನು. ಯಾರಾದರೂ

ಸರಿಯೆ. ಠಾಕೂರರ ಜತೆ ಹೋಗುವುದಾದರೆ ನಡೆದುಕೊಂಡೇ ಹೋಗುತ್ತಾರೆ. ಎಂಬುದು ಅವನ ಅಭಿಪ್ರಾಯವಾಗಿದ್ದಿತು. ಠಾಕೂರರು ಅವನನ್ನು ಗದ್ದರಿಸಿದ ನಂತರ ಅವನು ಮ್ಯಾಜಿಸ್ಟ್ರೇಟರಿಗಾಗಿ ಒಂದು ಕುದುರೆಯನ್ನು ತಂದನು.

ಠಾಕೂರರ ಕಾಲದ ಬಹುಭಾಗ, ಕಾವ್ಯ ಸೃಷ್ಟಿಗೆ ವಿನಿಯೋಗವಾದರೂ ಬಡವರ ದುಃಖಸ್ಥಿತಿಯೂವಾಗಲೂ ಅವರ ಕಣ್ಣುಮುಂದೆಯೇ ಇರುತ್ತಿದ್ದಿತು. ಜನರನ್ನು ಆತ್ಮಾವಲಂಬಿಗಳಾಗಿ ಮಾಡುವುದು ಸಹ, ವಿಶ್ವಭಾರತಿಯ ಒಂದು ಮುಖ್ಯ ಉದ್ದೇಶವಾಗಿದ್ದಿತು. ಇದನ್ನೇ ಠಾಕೂರರು ತಮ್ಮ ನಾಗರೀಕತೆಯ ಉತ್ಕಟ ಸ್ಥಿತಿ ಎಂಬುದರಲ್ಲಿ ಹೀಗೆ ವಿವರಿಸಿದ್ದಾರೆ.

"ನಾನು, ಬರಿ ಸಾಹಿತ್ಯದ ಆನಂದದಿಂದ ವಿಮುಖನಾಗುವ ಕಾಲ ಬಂದಿತು. ನಾನು ವಾಸ್ತವ ಪರಿಸ್ಥಿತಿಯನ್ನು ಎದುರಿಸಿದಾಗ ಭಾರತದ ಬಡರೈತರ ಅತಿಶಯ ದಾರಿದ್ರ್ಯ, ನನ್ನ ಹೃದಯುವನ್ನು ಚೂರುಚೂರು ಮಾಡಿತು. ಕಾವ್ಯಪ್ರಪಂಚದಲ್ಲಿ ವಿಹರಿಸುತ್ತಿದ್ದ ನನ್ನ ಕನಸು ಮಾಯವಾಯಿತು. ಜೀವನದ ಅತ್ಯವಶ್ಯಕ ವಸ್ತುಗಳಿಗೂ ಗತಿಯಿಲ್ಲದ ನಿರಾಶೆಯ ಭಾರತದ ರೈತರಂತಹ ಜನ, ಮತ್ತಾವ ದೇಶದಲ್ಲಿಯೂ ಇಲ್ಲವೆಂಬುದು ನನಗೆ ಮನದಟ್ಟಾಯಿತು. ಆದರೆ ಈ ರಾಜ್ಯದ ಉತ್ಪತ್ತಿಯಿಂದಲೇ ಬ್ರಿಟಿಷರು ಬಹಳ ವರುಷಗಳಿಂದ ಜೀವಿಸುತ್ತಿದ್ದಾರೆ. ಅವರ ವೈಭವ ಮೆರೆಯುತ್ತಿರುವುದು ಇಲ್ಲಿಯುವರ ದುಡಿತದಿಂದ. ನಾನು ವಿಶಾಲ ಜಗತ್ತಿನ ನಾಗರಿಕತೆ ಆಗು ಹೋಗುಗಳ ಕನಸಿನಲ್ಲಿರುತ್ತಾ, ಮನುಷ್ಯತ್ವದ ಧ್ಯೇಯ, ಹೀಗೆ ಭಾರತದಲ್ಲಿ ಅದರ ನಾಶದಲ್ಲಿ ಪರ್ಯವಸಾನವಾಗುವುದೆಂದು ಭಾವಿಸಲಿಲ್ಲ, ಆದರೆ ಇಂದು ಅದರ ಉದಾಹರಣೆ ನನ್ನ ಕಣ್ಣ ಮುಂದೆ ನಿಂತಿದೆ. ನಾಗರಿಕವೆನ್ನಿಸಿಕೊಳ್ಳುವ ಒಂದು ರಾಷ್ಟ್ರ, ಅನೇಕ ಕೋಟಿ ಭಾರತೀಯರ ಹಿತವನ್ನು ಪೂರ್ಣವಾಗಿ ಅಲಕ್ಷಿಸಿ ಆಳ್ವಿಕೆ ನಡೆಸುತ್ತಿದೆ."

ವಿದೇಶೀ ಸರ್ಕಾರದ ವಿರುದ್ಧ ಹೋರಾಡುವಾಗ ಕರನಿರಾಕರಣ, ಸವಿನಯ ಕಾಯದೆ ಭಂಗದ ಒಂದು ಸ್ವಾಭಾವಿಕ ಅಂಗ. ಮಹಾತ್ಮಾ ಗಾಂಧಿಯವರೂ ಕಾಂಗ್ರೆಸ್‌ನವರೂ ಇದನ್ನು ಮನಗಂಡಂತೆ ಠಾಕೂರರೂ ಅರಿತಿದ್ದರು. ಆದರೆ ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವ ಮತ್ತು ಆ ಶಾಸ್ತ್ರದಲ್ಲಿ ಅವರ ದೀರ್ಘವಾದ ಅನುಭವದಿಂದ ಅದನ್ನು ಕಾರ್ಯಕಾರಿಯಾಗಿ ಮಾಡಲು

ಅವರಿಗೆ ಸಾಧ್ಯವಾಯಿತು. ಠಾಕೂರರು 1884 ರಲ್ಲಿಯೇ ಬಹುಥಾಕುರಾಣಿ ಹಾತ್ ಎಂಬ ಕಥೆಯನ್ನು ಬರೆದಿದ್ದರು. ವಂಗವಿಭಜನೆಯ ನಂತರ 1909ರಲ್ಲಿ ಅದಕ್ಕೆಮತ್ತೆ ಕಾಲ ಪರಿಪಕ್ವವಾಗಿದೆಯೆಂದು ಅರಿತು, ಠಾಕೂರರು ಪರಿತ್ರಾಣ ಮತ್ತು ಪ್ರಾಯಶ್ಚಿತ್ತ ಎಂಬ ಹೆಸರಿನಲ್ಲಿ ಆ ಕಥೆಯನ್ನು ನಾಟಕಗಳಾಗಿ ಪುನ ರ್ರಚಿಸಿದರು. ಇವುಗಳಲ್ಲಿ ಮೊದಲನೆಯದು ಪ್ರಾಯಶ್ಚಿತ್ತ. ಇದರಲ್ಲಿ ನಾಯ ಕನು, ತಾನು ಅನುಸರಿಸುವ ಸನಿನಯ ಕಾಯದೆ ಭಂಗಕ್ಕಾಗಿ ತನಗೆ ಒದ ಗುವ ಎಲ್ಲ ಕಷ್ಟಗಳನ್ನೂ ಸಂತೋಷದಿಂದಲೇ ಸಹಿಸುತ್ತಾನೆ. ಅವನ ಅನು ಯಾಯಿಗಳೂ ಹಾಗೆಯೇ ಇರುತ್ತಾರೆ. ಈ ಎರಡು ನಾಟಕಗಳಲ್ಲಿಯೂ ಧನಂಜಯ ಬೈರಾಗಿ ಬರುತ್ತಾನೆ. (ಇವನು ಮುಕ್ತಧಾರಾದಲ್ಲಿಯೂ ಬರು ತ್ತಾನೆ)

ಧನಂಜಯ ಬೈರಾಗಿ ಮತ್ತು ಮಾಧವಾಪುರದ ರೈತರೆಲ್ಲ ರಾಜನ ಬಳಿಗೆ ಹೋಗುತ್ತಿದ್ದಾರೆ.

ಮೂರನೆಯ ರೈತ—ತಂದೆಯೇ, ದೊರೆಯ ಹತ್ತಿರ ಹೋಗಿ ನಾವು ಏನು ಹೇಳೋಣ.

ಧನಂಜಯ—ಕಂದಾಯ ಕೊಡುವುದಿಲ್ಲ ಎಂದು ಹೇಳೋಣ

ಮೂರನೆ ರೈತ—ಯಾಕೆ ಕೊಡುವುದಿಲ್ಲ ಅಂತ ದೊರೆ ಕೇಳಿದರೆ?

ಧನಂಜಯ— ಕೇಳಿದರೆ ಹೇಳೋಣ. ನಿಮಗೆ ಹಣ ಕೊಟ್ಟರೆ ನಮ್ಮ ಮಕ್ಕಳು, ಆಹಾರಕ್ಕೆ ಗತಿಯಿಲ್ಲದೆ ಹಸಿವಿನಿಂದ ಅತ್ತು ಸಾಯುತ್ತಾರೆ. ಇದರಿಂದ ದೇವರಿಗೆ ದುಃಖವುಂಟಾಗುತ್ತದೆ. ಪ್ರಾಣವನ್ನು ಉಳಿಸುವ ಅನ್ನ ದೇವರಿಗೆ ಅರ್ಪಿಸಿರುವ ಪ್ರಸಾದ. ಯಾಕೆಂದರೆ ಎಲ್ಲ ಪ್ರಾಣಕ್ಕೂ ದೇವರೇ ಒಡೆಯ. ನಮ್ಮ ಅನ್ನಕ್ಕೆ ಹೆಚ್ಚಾಗಿ ನಮ್ಮಲ್ಲಿ ಉಳಿದರೆ ನಿಮಗೆ (ರಾಜನಿಗೆ) ಕೊಡುತ್ತೇವೆ. ಆದರೆ ನಮ್ಮ ಮಕ್ಕಳಿಗೆ ಮೋಸಮಾಡಿ ಅವರಿಗೆ ಅನ್ನ ಹಾಕದೆ, ನಿಮಗೆ ತೆರಿಗೆ ಕೊಡುವುದಿಲ್ಲ.

ನಾಲ್ಕನೆಯ ರೈತ—"ಈ ಮಾತನ್ನೆಲ್ಲ ಎಲ್ಲಿ ಕೇಳ್ತಾನೆ ದೊರೆ"

ಧನಂಜಯ—"ಆದರೂ ನಾವೂ ಅವನಿಗೆ ಹೇಳಲೇಬೇಕು. ರಾಜನಾದ ಕೂಡಲೇ ಜನರು ಹೇಳುವ ಸತ್ಯವಾದ ಮಾತು, ಮನಸ್ಸಿಗೇ ತಟ್ಟದಷ್ಟು

ದುರದೃಷ್ಟಶಾಲಿಯೇ ಅವನು. ನಾವು ಹೇಳುವುದನ್ನು ಅವನು ಕೇಳುವಂತೆ ನಾವು ಒತ್ತಾಯ ಪಡಿಸೋಣ

ಐದನಯೆ ರೈತ—"ಪೂಜ್ಯತಂದೆ, ಕೊನೆಯಲ್ಲಿ ರಾಜನೇ ಗೆಲ್ಲುತ್ತಾನೆ ಅವನಲ್ಲಿ ಹೆಚ್ಚು ಬಲವಿದೆ.

ಧನಂಜಯ—''ಬಿಡಿ ಬಿಡಿ. ನೀವು ಶುದ್ಧಕಪಿಗಳು. ನಿಮ್ಮ ಬುದ್ಧಿ ಇಷ್ಟೇಯೆ? ದೀನರಿಗೂ ಸೋತವರಿಗೂ, ಶಕ್ತಿಯಿಲ್ಲವೆ? ದೀನರ ಶಕ್ತಿ ಸ್ವರ್ಗವನ್ನು ಮುಟ್ಟುತ್ತದೆ.

ಆರನೆಯ ರೈತ—''ತಂದೆಯೇ, ನಾವು ಇಲ್ಲಿ ಬರುವುದಕ್ಕಿಂತ ಮುಂಚೆ. ಎಲ್ಲಿಯೋ ದೊರೆಯಿಂದ ದೂರವಾಗಿದ್ದೆವು. ಅವನ ಕಣ್ಣಿಗೇ ಸಿಕ್ಕದೇ ತಪ್ಪಿಸಿಕೊಂಡಿರಬಹುದಾಗಿತ್ತು. ಈಗ ನಾವು ದೊರೆಯ ಅರಮನೆಯ ಬಾಗಿಲಿಗೇ ಬಂದುಬಿಟ್ಟೆವು. ನಮಗೇನಾದರೂ ಕಷ್ಟ ಸಂಭವಿಸಿದರೆ ತಪ್ಪಿಸಿಕೊಂಡು ಹೋಗಲು ಸಹ ದಾರಿಯಿಲ್ಲ.

ಧನಂಜಯ—''ಕೇಳು. ಹೀಗೆ ವಿಷಯಗಳನ್ನು ತೀರ್ಮಾನಿಸದೆ, ಅವುಗಳಿಂದ ತಪ್ಪಿಸಿಕೊಳ್ಳುವುದರಿಂದ ಯಾವ ಫಲವೂ ಇಲ್ಲ. ಆಗುವುದೆಲ್ಲ ಆಗಲಿ. ಇಲ್ಲದಿದ್ದರೆ ಇದಕ್ಕೆ ಅಂತ್ಯವೆಲ್ಲಿ? ತುದಿ ಮುಟ್ಟಿದಾಗಲೇ ಶಾಂತಿ.

ಮುಂದೆ ಧನಂಜಯ ಬೈರಾಗಿಗೂ ರಾಜನಿಗೂ ನಡೆಯುವ ಸಂಭಾಷಣೆಯನ್ನು ಕೇಳೋಣ.

ಪ್ರತಾಪಾದಿತ್ಯ—''ಇಲ್ಲಿ ನೋಡು ಬೈರಾಗಿ. ಈ ಹುಚ್ಚುವೇಷ ಹಾಕಿಕ್ಕೊಂಡು ನನ್ನನ್ನೂ ಮೋಸಪಡಿಸಲು ಸಾಧ್ಯವಿಲ್ಲ. ಮಾಡಬೇಕಾದ್ದನ್ನು ಗಮನಿಸೋಣ ; ಮಾಧವಪುರದ ಜನರು ಎರಡು ವರುಷಗಳಿಂದ ತೆರಿಗೆ ಕೊಟ್ಟಿಲ್ಲ. ಏನು? ಕೊಡುತ್ತೀರೋ ಇಲ್ಲವೋ ಹೇಳಿ.

ಧನಂಜಯ—ಇಲ್ಲ ಮಹಾರಾಜ, ಕೊಡುವುದಿಲ್ಲ.

ಪ್ರತಾಪಾದಿತ್ಯ—''ಕೊಡುವುದಿಲ್ಲವೆ? ಎಲ ಅವಿಧೇಯ

ಧನಂಜಯ—ನಿನ್ನದಲ್ಲದ್ದನ್ನು ನಿನಗೆ ನಾವು ಕೊಡಲಾರೆವು

ಪ್ರತಾಪಾದಿತ್ಯ—ನನ್ನದಲ್ಲದ್ದೆ?

ಧನಂಜಯ—ನಮ್ಮ ಹಸಿವನ್ನು ಅಡಗಿಸುವ ಅನ್ನ ನಿನ್ನದಲ್ಲ. ನಮಗೆ ಜೀವನನ್ನು ಕೊಟ್ಟವನದು ಈ ಅನ್ನ. ಅದನ್ನು ನಿನಗೆ ಹೇಗೆ ಕೊಡುವುದು?

ಪ್ರತಾಪಾದಿತ್ಯ—ಹೀಗೋ. ಹಾಗಾದರೆ ನನ್ನ ಪ್ರಜೆಗಳು ನನಗೆ ಕಂದಾಯವನ್ನು ಕೊಡದಂತೆ ಹೇಳಿ ಕೊಟ್ಟಿರುವವನು ನೀನು?

ಧನಂಜಯ—ಹೌದು ಮಹಾರಾಜ. ನಾನೇ ಹೀಗೆ ಮಾಡಿದ್ದು. ಅವರು ದಡ್ಡರು. ಅವರಿಗೆ ಬುದ್ಧಿಯಿಲ್ಲ; ತೆರಿಗೆ ವಸೂಲಿ ಮಾಡುವವರ ಭಯದಿಂದ, ಅವರು ತಮ್ಮಲ್ಲಿರುವದನ್ನೆಲ್ಲ ಕೊಟ್ಟುಬಿಡುತ್ತಾರೆ, ಪಾಪ. ಅವರಿಗೆ "ಬೇಡಬೇಡ ಹಾಗೆ ಮಾಡಬೇಡಿ" ಎಂದು ಹೇಳಿಕೊಟ್ಟವನು ನಾನು. ನಿಮ್ಮ ಪ್ರಾಣವನ್ನು ಕೊಡಬೇಕಾದರೆ, ನಿಮಗೆ ಪ್ರಾಣ ಕೊಟ್ಟವನ ಅಪ್ಪಣೆ ಯಂತೆ ಕೊಡಿ ಎಂದು ನಾನು ಹೇಳಿದ್ದೇನೆ. ನಿಮ್ಮ ಅನ್ನವನ್ನು ರಾಜ, ಕಿತ್ತುಕೊಂಡರೆ, ನಿಮ್ಮನ್ನುಕೊಂದ ಪಾಪ ಅವನಿಗೆ ಬರುವುದು. ಈ ಪಾಪಕ್ಕೆ ಅವನನ್ನು ಭಾಗಿಯಾಗಿ ಮಾಡಬೇಡಿ ಎಂದು ನಾನೇ ಹೇಳಿದ್ದೇನೆ.

ಮುಂದೆ ರಾಜ, ಬೈರಾಗಿಗೆ ಹೀಗೆ ಹೇಳುತ್ತಾನೆ

ಪ್ರತಾಪಾದಿತ್ಯ—ಇಲ್ಲಿ ನೋಡು ಬೈರಾಗಿ. ನಿನಗೆ ಮನೆಇಲ್ಲ ಮಠ ಇಲ್ಲ ಆದರೆ ಈ ಹಳ್ಳಿಗರೆಲ್ಲ ಸಂಸಾರಿಗಳು. ಅವರನ್ನ ಯಾಕೆ ಕಷ್ಟಕ್ಕೆ ಸಿಕ್ಕುಸುತ್ತಿ? ಹಳ್ಳಿಯವರಿಗೆ ನಾನು ಹೀಗೆ ಹೇಳುತ್ತೇನೆ. ನಿಮ್ಮ ನಿಮ್ಮ ಮನೆಗಳಿಗೆ ಹಿಂದಿರುಗಿ. ಬೈರಾಗಿ ನೀನು ಇಲ್ಲಿಯೇ ಇರಬೇಕು (ನಿನ್ನನ್ನು ಸೆರೆಹಿಡಿದು ತುರಂಗಕ್ಕೆ ಕಳುಹಿಸುತ್ತೇನೆ)

ಹಳ್ಳಿಗರು—ಆಗದು, ನಾವು ಬದುಕಿರುವವರಗೆ ಇದನ್ನು ಆಗಗೊಡೆವು

ಧನಂಜಯ—ಯಾಕಾಗದು? ನಿಮಗೆ ಬುದ್ಧಿಯಿಲ್ಲ. ರಾಜ "ಇಲ್ಲಿಯೇ ಇರು ಅಂತ" ಹೇಳುತ್ತಾ ನೀವು "ಬೇಡ" ಎನ್ನುತ್ತೀರಿ. ಈ ದುರದೃಷ್ಟದ ಬೈರಾಗಿ, ಜನರು ಯಾವ ಕಡೆಗೆ ಎಸೆದರೆ ಅಲ್ಲಿಗೆ ಹೋಗಬೆಕೆ? ಅವನು ತನಗೆ ತಾನೇ ಯಜಮಾನನಲ್ಲವೆ? ನಾನು ಇಲ್ಲಿ ಇರಬೇಕೆ? ಹೋಗಬೇಕೆ ಎಂಬುದನ್ನು ರಾಜ ಮತ್ತು ನೀವುಗಳೇ ತೀರ್ಮಾನಿಸುವವರು?

ಹಾಡು

ಇಲ್ಲಿಯೇ ಇರು ಎಂದು ಹೇಳಿ ನೀವು ಯಾರನ್ನು ತಾನೇ ನಿಲ್ಲಿಸಬಲ್ಲಿರಿ? ತಮ್ಮ ನಿನ್ನ ಬಲ ಉಳಿಯುವುದಿಲ್ಲ. ಯಾವುದು

ಉಳಿಯಬೇಕೋ ಅದು ಮಾತ್ರ ಉಳಿಯುತ್ತದೆ. ನಿನ್ನ ಮನಸ್ಸಿಗೆ ತೋರಿದಂತೆ ನೀನೇನೋ ಮಾಡಬಹುದು. ಬಲವನ್ನು ಪ್ರಯೋಗಿಸಿ ಈ ದೇಹವನ್ನು ಬಂಧನದಲ್ಲಿಡಬಹುದು, ಅಥವಾ ಕೊಲ್ಲಬಹುದು. ಎಲ್ಲವನ್ನೂ ಭರಿಸಬಲ್ಲ ಪರಮಾತ್ಮನೊಬ್ಬನೇ ಎಂದಿಗೂ ನಿಲ್ಲುವವನು. ಎಲೈ ರಾಜ, ನಿನ್ನಲ್ಲಿ ಬೇಕಾದಂತೆ ಹಣ ಇದೆ. ಸರಪಣಿಗಳೂ ಹಗ್ಗಗಳೂ ಲೆಕ್ಕವಿಲ್ಲದಷ್ಟು ಇವೆ. ಆನೆ ಕುದುರೆಗಳೂ ಇವೆ. ನಿನ್ನ ಹತ್ತಿರ ಬಹಳ ಶಕ್ತಿಗಳಿವೆ. ನೀನು ಹೇಳಿದ್ದು ನಡೆಯುತ್ತದೆ ಎಂದು ಭಾವಿಸಿರುವೆ. ನಿನ್ನ ಮಾತಿನಂತೆ ಜಗತ್ತನ್ನು ಕುಣಿಸಬಲ್ಲೆಯೆಂದು ನಂಬಿರುವೆ. ಆದರೆ ಕಣ್ಣುಮುಚ್ಚಿ ತೆಗೆಯುವುದರೊಳಗೆ ನಿನಗೆ ಗೊತ್ತಾಗುತ್ತದೆ. ಯಾವುದು ಸಾಮಾನ್ಯವಾಗಿ ನಡೆಯುವುದಿಲ್ಲವೋ ಅದೂ ನಡೆದು ಹೋಗುತ್ತದೆ."

(ಮಂತ್ರಿಯ ಪ್ರವೇಶ)

ಪ್ರತಾಪಾದಿತ್ಯ—ಮಂತ್ರಿ, ನೀನು ಇಲ್ಲಿ ಸಕಾಲದಲ್ಲಿ ಬಂದಿದ್ದೀಯೆ. ಈ ಬೈರಾಗಿಯನ್ನು ಬಂಧನದಲ್ಲಿಡು. ಅವನನ್ನು ಮತ್ತೆ ಮಾಧವಪುರಕ್ಕೆ ಹೋಗಲು ಬಿಡಬೇಡ.

ಮಂತ್ರಿ—ಮಹಾರಾಜ........

ಪ್ರತಾಪಾದಿತ್ಯ—ಯಾಕೆ? ಈ ಆಜ್ಞೆ ನಿನಗೆ ಇಷ್ಟವಿಲ್ಲವೋ?

ಉದಯಾದಿತ್ಯ (ಪ್ರತಾಪಾದಿತ್ಯನ ಮಗ) ಮಹಾರಾಜ. ಈ ಬೈರಾಗಿ ಒಬ್ಬ ಸಾಧು ಪುರುಷ.

ಹಳ್ಳಿಗರು—ಮಹಾರಾಜ, ನಾವು ಇನ್ನು ಸಹಿಸಲಾರೆವು. ಇದರಿಂದ ಅನರ್ಥ ಸಂಭವಿಸುವುದು.

ಧನಂಜಯ—ನೀವೆಲ್ಲ ನಿಮ್ಮ ಊರಿಗೆ ಹೋಗಿ. ರಾಜ. ಅಪ್ಪಣೆ ಕೊಟ್ಟಿದ್ದಾಯಿತು. ನಾನು ರಾಜನೊಡನೆ ಕೆಲವು ದಿನ ಇರಬೇಕಾಗಿದೆ. ನನ್ನ ಈ ಒಳ್ಳೆಯ ಅದೃಷ್ಟ ಕಂಡು, ನಮ್ಮ ಈ ಹಳ್ಳಿಯವರಿಗೆ ಹೊಟ್ಟೆಗಿಚ್ಚು ಉಂಟಾಗಿದೆ.

ಹಳ್ಳಿಗರು— ನಾವು ಧೊರೆಯ ಮುಂದೆ ಹೇಳಿಕೊಳ್ಳಲು ಬಂದುದು

ಇದಕ್ಕಾಗಿಯೇ? ಯುವರಾಜನನ್ನೂ ಕಳೆದುಕೊಂಡು ನಿನ್ನನ್ನೂ ಕಳೆದು ಕೊಳ್ಳಬೇಕೆ?

ಧನಂಜಯ–ನೀವು ಹೇಳುವುದನ್ನು ಕೇಳಿದರೆ. ನನ್ನ ಮೈ ಉರಿಯುತ್ತದೆ. ನನ್ನನ್ನು ಕಳೆದುಕೊಳ್ಳುವುದೆಂದರೆ ಏನು ಅರ್ಥ. ನನ್ನನ್ನ ನಿಮ್ಮ ಬಟ್ಟೆಯ ತುದಿಯಲ್ಲಿ ಗಂಟುಹಾಕಿ ಇಟ್ಟುಕೊಂಡಿದ್ದೀರಾ? ನಿಮ್ಮ ಕೆಲಸ ಇನ್ನು ಮುಗಿಯಿತು. ಹೊರಡಿ.

[ಧನಂಜಯ ಸೆರೆಮನೆಗೆ ಹೋಗುತ್ತಾನೆ. ಏನೋ ಕಾರಣದಿಂದ ಸೆರೆ ಮನೆಗೆ ಬೆಂಕಿ ಬೀಳುತ್ತದೆ. ಧನಂಜಯ ಸ್ವತಂತ್ರನಾಗಿ ಹೊರಕ್ಕೆಬರುತ್ತಾನೆ.] ರಾಜನನ್ನು ನೋಡಿ

"ಮಹಾರಾಜ ಜೈ. ನನ್ನಿಂದ ಬೇರೆಯಾಗಲು ನೀನು ಬಯಸಲಿಲ್ಲ. ಆದರೆ ಹೇಗೋ ಯಾರಿಗೂ ಗೊತ್ತಿಲ್ಲದೆ ಬೆಂಕಿ ಬಂದು ನನಗೆ ಬಿಡುಗಡೆಯ ಚೀಟಿಯನ್ನು ಜಾರಿ ಮಾಡಿತು. ಆದರೂ ನಿಮಗೆ ತಿಳಿಸದೆ ನಾನು ಹೋಗು ವುದು ಹೇಗೆ? ಆದುದರಿಂದ ನಿಮ್ಮ ಅಪ್ಪಣೆ ಪಡೆಯಲು ಇಲ್ಲಿ ಬಂದೆ.

ಪ್ರತಾಪಾದಿತ್ಯ–(ವಿನೋದದಿಂದ) ಸೆರೆಮನೆಯಲ್ಲಿ ಸುಖವಾಗಿದ್ದೆಯ?

ಧನಂಜಯ—ಹೌದು. ನಾನು ಬಹು ಸುಖಿಯಾಗಿದ್ದೆ. ಯಾವ ಬಗೆಯ ತೊಂದರೆಯೂ ಇರಲಿಲ್ಲ. ಇದು ನನಗೂ ದೇವರಿಗೂ ಕಣ್ಣು ಮುಚ್ಚಾಲೆಯಾಟವಾಯಿತು. ದೇವರು, ನನ್ನ ಕಣ್ಣಿಗೆ ಬೀಳಬಾರದೆಂದು ಸೆರೆಮನೆಯಲ್ಲಿ ಅವಿತುಕುಳಿತಿದ್ದ. ಕೊನೆಗೂ ನನ್ನ ಆಲಿಂಗನಕ್ಕೆ ಸಿಕ್ಕಿಯೇ ಸಿಕ್ಕಿದ. ಅನಂತರ ನಗುವಿಗೂ ಹಾಡುಗಳಿಗೂ ಕೊನೆಯೇ ಇರಲಿಲ್ಲ. ಈ ದಿನಗಳನ್ನು ನಾನು ಸೆರೆಮನೆಯಲ್ಲಿ ಆನಂದದಿಂದ ಕಳೆದೆ. ನನ್ನ ಭ್ರಾತೃ, ಸೆರೆ ಮನೆಯನ್ನು ನಾನು ಮರೆಯುವುದಿಲ್ಲ.

ಹಾಡುತ್ತಾನೆ.

"ನನ್ನ ಸರಣಿಗಳೇ, ನಿಮ್ಮನ್ನು ಆಲಂಗಿಸುತ್ತಾ, ನಿಮ್ಮ ಸರಪಣಿಯ ಸದ್ದನ್ನು ಕೇಳಿ ಆನಂದಿಸಿದ್ದೇನೆ. ನೀವು ನನ್ನ ಹೆಮ್ಮೆಯನ್ನು ಮುರಿದಿರಿ. ಅದರಿಂದ ನನಗೆ ಸಂತೋಷವೇ ಆಯಿತು. ನೀವು ನನ್ನೊಂದಿಗೆ ಸುಮ್ಮನೆ ಆಟವಾಡಿದಿರಿ. ನನ್ನ ಕಾಲ, ಸೆರೆಮನೆಯಲ್ಲಿ ಹೊರಗಿನಂತೆಯೇ ಸುಖದುಃಖ

ದಲ್ಲಿ ಕಳೆಯಿತು. ಆ ಸರಪಣಿಗಳೇ ನನ್ನ ವಜ್ರಾಭರಣಗಳಾದವು. ನಿಮ್ಮೊಂದಿಗೆ ನನಗೆ ಕೋಪವಿಲ್ಲ. ತಪ್ಪು ಏನಿದ್ದರೂ ನನ್ನದೇ. ನನ್ನ ಮನಸ್ಸಿನಲ್ಲಿ ಭಯವಿದ್ದರೆ, ನೀವು ನನಗೆ ಭಯಂಕರವಾಗಿ ಕಾಣುತ್ತಿದ್ದಿರಿ. ರಾತ್ರಿಗಳಲ್ಲೆಲ್ಲ ನೀವು ನನ್ನ ಗೆಳೆಯರಾಗಿದ್ದಿರಿ. ಆ ನಿಮ್ಮ ಕರುಣೆಯನ್ನು ಯೋಚಿಸಿಕೊಂಡು, ನಾನು ನಿಮ್ಮನ್ನು ವಂದಿಸುತ್ತೇನೆ."

ಪ್ರತಾಪಾದಿತ್ಯ— ನೀನು ಹೇಳುತ್ತಿರುವುದೇನು ಬೈರಾಗಿ? ಸೆರೆಮನೆಯಲ್ಲಿ ನೀನು ಅಷ್ಟು ಸುಖವಾಗಿದ್ದುದು ಹೇಗೆ?

ಧನಂಜಯ— ಮಹಾರಾಜ. ನಿಮ್ಮ ರಾಜ್ಯದಲ್ಲಿ ನಿಮಗೆ ಹೇಗೆ ಆನಂದವೋ ಸೆರೆಮನೆಯಲ್ಲಿಯೂ ನನಗೆ ಅಷ್ಟೇ ಆನಂದವಾಯಿತು. ಅಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ದೇವರು ನಿನಗೆ ಸುಖವುಂಟುಮಾಡ ಬಲ್ಲನಾದರೆ, ನನಗೆ ಮಾಡಲಾರನೆ?

ಪ್ರತಾಪಾದಿತ್ಯ—ಈಗ ನೀನು ಎಲ್ಲಿಗೆ ಹೋಗುವಿ?

ಧನಂಜಯ—ಮಾರ್ಗಕ್ರಮಣ

ಪ್ರತಾಪಾದಿತ್ಯ— ನಿನ್ನ ಮಾರ್ಗ, ನನ್ನದಕ್ಕಿಂತ ಉತ್ತಮ ಅಂತ ನಾನು ಯೋಚಿಸುತ್ತೇನೆ. ನನಗೆ ರಾಜ್ಯ, ಏನೂ ಸುಖವಿಲ್ಲ.

ಧನಂಜಯ— ಮಹಾರಾಜ, ರಾಜ್ಯವೂ ಸಹ ಒಂದು ದಾರಿಯೇ. ಆದರೆ ನೇರವಾಗಿ ನಡೆಯುವುದನ್ನು ಕಲಿಯಬೇಕು. ಮಾರ್ಗ, ಗುರಿ ಮುಟ್ಟಲು ಮಾರ್ಗ ಎಂದು ಯಾವನಿಗೆ ತಿಳಿದಿದೆಯೋ ಅವನೇ ಸರಿಯಾದ ಮಾರ್ಗಕ್ರಮಣಕಾರ. ಅಂಥವನಿಗೆ ಹೋಲಿಸಿದರೆ, ಸನ್ಯಾಸಿಗಳಾದ ನಮ್ಮ ಸಾಧನೆಯೇ ಅತ್ಯಲ್ಪ. ಮಹಾರಾಜ, ನೀವು ಇನ್ನು ಅಪ್ಪಣೆಕೊಟ್ಟರೆ ನನ್ನ ದಾರಿ ಹಿಡಿಯುತ್ತೇನೆ.

ಪ್ರತಾಪಾದಿತ್ಯ— ಒಳ್ಳೆಯದು. ಆದರೆ ಮಾಧವಾಪುರಕ್ಕೆ ಹೋಗ ಬೇಡ.

ಧನಂಜಯ— ಆ ಕಟ್ಟುಪಾಡಿಗೆ ನಾನು ಒಳಪಡಲಾರೆ. ದೇವರು ನನ್ನನ್ನು ಎಲ್ಲಿಗೆ ಕಳುಹಿಸುತ್ತಾನೋ ಅಲ್ಲಿಗೆ ಹೋಗಬೇಡ ಎಂದು ನನಗೆ ಹೇಳಬಲ್ಲವರಾರು?"

ಠಾಕೂರರು ಬೈರಾಗಿಯನ್ನು ಧನಂಜಯ ಎಂಬ ಹೆಸರಿನಿಂದ ಕರೆದಿದ್ದಾರೆ, ಧನದ ಆಸೆಯನ್ನು ಜಯಿಸಿದವನು. ಎಂದು ಅರ್ಥ. ಪ್ರಜಾ ಮುಖಂಡರು ಹಾಗೆ ಇರಬೇಕು.

\+ + +

ಠಾಕೂರರು ನ್ಯಾಶನಾಲಿಸಂ (ರಾಷ್ಟ್ರವೆಂಬ ಒಂದು ಅಲ್ಪ ಮನೋಧರ್ಮವನ್ನು)ವಿರೋಧಿಸಿದರು. ಇದರಿಂದ ಅವರಿಗೆ ದೇಶಭಕ್ತಿ ಕಡಿಮೆ ಎಂದು ಶಂಕಿಸಿದವರೂ ಉಂಟು. ರವೀಂದ್ರರ ಆ ಧ್ಯೇಯ "ಸರ್ವೇಜನಾಃ ಸುಖೀನೊ ಭವಂತು" ಎಂಬ ಧ್ಯೇಯಕ್ಕೆ ಅನುಸಾರವಾಗಿದ್ದಿತು. ಯಾವ ದೇಶವೂ ಮತ್ತೊಂದು ದೇಶದ ಮೇಲೆ ಆಕ್ರಿಕೆ ಮಾಡುವುದನ್ನು ಅವರು ಒಪ್ಪಲಿಲ್ಲ. ಒಂದು ಪಂಗಡ ಮತ್ತೊಂದು ಪಂಗಡವನ್ನು ಅಂಕೆಯಲ್ಲಿಟ್ಟು ಕೊಳ್ಳುವುದು ತಪ್ಪು ಎಂದು ಅವರು ಹೇಳಿದರು. "ಭರತಖಂಡದ ಮೇಲಿನ ಜಾತಿಗಳು ಕೆಳಗಿನ ಜಾತಿಗಳನ್ನು ಆಳುತ್ತೇವೆಂದು ತಮ್ಮ ಸಂಕೋಲೆಗಳನ್ನೇ ಗಟ್ಟಿಮಾಡಿಕೊಂಡರು. ಯೂರೋಪು, ಭಾರತದಲ್ಲಿ ಮಾಡುತ್ತಿರುವುದು ಇದೇ ಕಾರ್ಯ. ಯೂರೋಪು ತನ್ನ ಸುಖವನ್ನು ಮಾತ್ರ ಸಾಧಿಸಿಕೊಳ್ಳುತ್ತಾ ಮನುಷ್ಯ ಸಮಾಜದ ಸುಖವನ್ನು ಸಾಧಿಸುತ್ತಿದ್ದೇನೆಂದು ಭಾವಿಸುತ್ತಿದೆ. ತನಗೆ ಯಾವುದು ಒಳ್ಳೆಯದು ಅದು ತನಗಿಂತ ಕಡಿಮೆ ತರಗತಿಯ ಜನಕ್ಕೆ ಒಳ್ಳೆಯದಲ್ಲ ಎನ್ನುವುದು ಶುದ್ಧ ತಪ್ಪು. ಒಬ್ಬ ಮನುಷ್ಯ, ತಾನು ಇನ್ನೊಬ್ಬನಿಗಿಂತ ಹಿರಿಯ ಎನ್ನುವುದಕ್ಕಿಂತ ಹೆಚ್ಚು ಪಾತಕವಿಲ್ಲ. ಪೂರ್ವ ರಾಷ್ಟ್ರವಾವಾಗಲಿ ಪಶ್ಚಿಮ ರಾಷ್ಟ್ರವಾಗಲಿ, ಪ್ರಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಲೂಟಿಮಾಡುವುದನ್ನು ನಾನು ಸಹಿಸೆನು. ಆಂಗ್ಲ ರಾಷ್ಟ್ರಪ್ರೇಮ ಐರ್ಲೆಂಡಿನಲ್ಲಿ ಮಾಡುತ್ತಿರುವ ಭೀಕರ ಕೃತ್ಯಗಳನ್ನು ನೋಡಿ. ಆವಶ್ಯಕವಾದರೆ ನಮ್ಮ ರಾಷ್ಟ್ರಪ್ರೇಮಿಗಳೂ ಇದೇ ಕೃತ್ಯ ಮಾಡಿಯಾರು. ಭರತವರುಷ ಬರಿಯ ಒಂದು ಪ್ರದೇಶ ಅಥವಾ ಭೂಭಾಗವಲ್ಲ. ನಾನು ನನ್ನ ರಾಷ್ಟ್ರ ಸೋದರರನ್ನು ಜಗತ್ತಿನಲ್ಲೆಲ್ಲ ಕಾಣ ಬಯಸುತ್ತೇನೆ. ನಮ್ಮ ಧರ್ಮ, ಬರಿಯ ಒಂದು ಭೂಭಾಗಕ್ಕೆ ಮಿತವಾಗಬಾರದು. ಮಾನವ ಕುಲಕ್ಕೆಲ್ಲ ಅನ್ವಯಿಸಬೇಕು. ಜಗತ್ತಿನಲ್ಲಿರುವ ಎಲ್ಲ ತ್ಯಾಗಿಗಳೂ ಉದಾತ್ತ ಜೀವಿಗಳೂ ನನ್ನ ಬಂಧುಗಳು. ನನಗೆ ಭಾರತ, ಬರಿಯ ನೆಲವಲ್ಲ, ಭಾವನೆ. ಮನುಜ ಕುಲವೆಲ್ಲ

ಒಂದು ವ್ಯಕ್ತಿ. ಅದನ್ನು ಇದೇ ಬಾಳಿನಲ್ಲಿಯೇ ಅನುಭವಿಸುವುದು ನನ್ನ ಧ್ಯೇಯ. ಇದು ಒಂದು ದೇಶದಿಂದ ಆಗತಕ್ಕದ್ದಲ್ಲ. ಮಾನವ ಕುಲದ ಧ್ಯೇಯವಾದಿಗಳೆಲ್ಲ ಇದರಲ್ಲಿ ಸೇರಬೇಕು. ಇದನ್ನು ಭಾರತ ಮಾತ್ರ ಮಾಡ ಬಲ್ಲದು. ಏಕೆಂದರೆ ಇದು ಋಷಿಗಳ ನಾಡು. ಪರೋಪಕಾರಕ್ಕಾಗಿ ಬದುಕಿದವರ ನಾಡು. ಈಗ ಆಧುನಿಕ ನಾಗರೀಕತೆ ಯಾಂತ್ರೀಕರಣ ಔದ್ಯೋಗೀಕರಣ ಆವಶ್ಯಕತೆಗಳ ಹೆಚ್ಚಳದಿಂದ, ಎಲ್ಲ ರಾಷ್ಟ್ರಗಳೂ ತಮ್ಮ ಆತ್ಮವನ್ನು ಕಳೆದುಕೊಳ್ಳುತ್ತಿವೆ. ನಮಗೆ ಇರುವ ಮುಖ್ಯ ಅಪಾಯ, ಪಾಶ್ಚಾತ್ಯರ ಬಾಹ್ಯ ಪದ್ಧತಿಗಳ ಅನುಕರಣ..........ದುರಾಸೆ ಜನರ ಮುಖ್ಯ ಗುಣವಾದಾಗ ಅವರು ಸಂಯಮವನ್ನು ಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ಜನತೆ, ಒಬ್ಬರೊಂದಿಗೆ ಒಬ್ಬರು ಸೇರುವುದು ಮನುಷ್ಯನ ಬಾಂಧವ್ಯವನ್ನು ಸ್ಥಾಪಿಸುವುದಕ್ಕಾಗಿಯೇ. ಇಂದು ಪಾಶ್ಚಾತ್ಯರಲ್ಲಿ ಬರಿಯ ವ್ಯಾಪಾರಿ ಮನೋಭಾವವನ್ನು ಮೀರಿ, ಅಖಿಲ ಮಾನವ ಜಗತ್ತಿನ ಶುಭವನ್ನು ಸಾಧಿಸಲು ಹೊರಟಿರುವ ಜನ ಇದ್ದಾರೆ. ಈ ಧ್ಯೆಯದಲ್ಲಿ ಪೂರ್ಣನಂಬಿಕೆಯಿಟ್ಟು ತಮ್ಮ ರಾಷ್ಟ್ರೀಯತೆಯ ಬಂಧನವನ್ನು ಮೀರಿ ಮನೆ ಮಠ ಎಲ್ಲವನ್ನು ತೊರೆದು ಮನುಷ್ಯತ್ವವೆಲ್ಲ ಒಂದೆಂಬ ಈ ಧ್ಯೇಯಸಾಧನೆಗಾಗಿ ತಮ್ಮ ಬಾಳನ್ನು ವಿನಿಯೋಗಿಸುತ್ತಿರುವ ಅನೇಕರನ್ನು ನಾನು ನೋಡಿದ್ದೇನೆ. ಭಾರತದಲ್ಲಿ ಯಾವಾಗಲೂ ಸಂಕುಚಿತಭಾವನೆಯ ರಾಷ್ಟ್ರೀಯತೆ ಇರಲೇ ಇಲ್ಲ. ಮನುಷ್ಯ ಸಮಾಜದ ಐಕ್ಯತೆಯ ಸಾಧನವನ್ನು ಕಂಡುಕೊಳ್ಳಲು ಭಾರತ, ಪ್ರಯತ್ನಿಸುತ್ತಿದೆ. ಬರಿಯ ವಾಣಿಜ್ಯ ಅಥವ ರಾಜಕೀಯ ಐಕ್ಯತೆಯನ್ನು ಮಾತ್ರ ಸಾಧಿಸಲೆಳಸುವ ರಾಷ್ಟ್ರಗಳಿಗೆ, ಮಾನವನ ಐಕ್ಯತೆಯ ಪ್ರಶ್ನೆ, ದೊಡ್ಡದಾಗಿ ತೋರುವುದೇ ಇಲ್ಲ. ಜ್ಞಾನಿಗಳೂ ಮಹಾತ್ಮರೂ ಪ್ರತಿಭಾವಂತರೂ ಈ ಐಕ್ಯತೆಯ ಸಾಧನವನ್ನು ಕಂಡುಹಿಡಿದು, ಸಿದ್ಧಿಸಿಕೊಳ್ಳುವರು ಮತ್ತು ಜಗತ್ತಿಗೆ ಬೋಧಿಸುವರು. ಭಾರತ, ಎಲ್ಲ ಜನಾಂಗಗಳ ಹೊಂದಾಣಿಕೆಗಾಗಿ ಪ್ರಯತ್ನಿಸಿದೆ. ಜನಾಂಗ, ಜನಾಂಗಗಳಿಗಿರುವ ಭಿನ್ನತೆಯನ್ನು ಅರ್ಥಮಾಡಿಕೊಂಡು ಆದರೂ ಐಕ್ಯತೆಯ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಇದು ನಾನಕ್, ಕಬೀರ ಚೈತನ್ಯ ಮುಂತಾದ ನಮ್ಮ ಸಾಧು ಸಂತರ ಕಾರ್ಯವಾಗಿದೆ. ಅವರು ದೇವರು ಒಬ್ಬನೇ ಎಂಬುದನ್ನು ಭಾರತದ ಜನತೆಗೆಲ್ಲ ಬೋಧಿಸಿದ್ದಾರೆ."

ಹೀಗೆ ಠಾಕೂರರದು ವಿಶ್ವಮಾನವ ದೃಷ್ಟಿ. ರಾಷ್ಟ್ರ ರಾಷ್ಟ್ರವನ್ನು ಪ್ರತ್ಯೇಕಿಸಬಾರದು. ರಾಷ್ಟ್ರಗಳ ದುರಾಸೆಗೆ, ಮಾನವತ್ವದ ಕಲ್ಪನೆಯೇ ಇಲ್ಲ. ಜಾತಿ ಬಣ್ಣ ಜನಾಂಗ ಎಲ್ಲವನ್ನು ಮೀರಿನಿಂತಿರುವ ಸತ್ಯ ಮಾನವತೆ. ಇದನ್ನು ಪ್ರತಿಪಾದಿಸುವವರು ಪ್ರತಿರಾಷ್ಟ್ರಗಳಲ್ಲಿಯೂ ಆಗಿದ್ದಾರೆ. ಅವರೇ ನಿಜವಾಗಿ ಮಾನವನ ಹಿತೈಷಿಗಳು. ಈ ಕಾರ್ಯದಲ್ಲಿ ಹಿಂದೆ ಭಾರತ ಯಾವಾಗಲೂ ಅಗ್ರಸ್ಥಾನದಲ್ಲಿದ್ದಿತು. ಈಗಲೂ ಅದೇ ಭಾರತದ ಪ್ರಯತ್ನ ಎಂಬುದು ಠಾಕೂರರ ಅಭಿಪ್ರಾಯ. ಈ ಅಭಿಪ್ರಾಯವನ್ನು ಅವರು ತಮ್ಮ ಬಾಳಿನಲ್ಲಿ ಆಚರಿಸಲು ತಮ್ಮ ಸಮಸ್ತ ಶಕ್ತಿಯನ್ನೂ ಆದಕ್ಕಾಗಿ ವಿನಿಯೋಗಿಸಿದರು. ಜಗತ್ತಿನಲ್ಲಿ ದೇವರು ಭಾರತಕ್ಕೆ ಒಂದು ಹೊಣೆಗಾರಿಕೆಯನ್ನು ಕೊಟ್ಟಿದ್ದಾನೆಂದು ಅವರು ಭಾವಿಸಿದರು. 1900 ರಲ್ಲಿ ಅವರು ಬರೆದು, ಪ್ರಭಾಸಿ ಪತ್ರಿಕೆಯ ಪ್ರಥಮ ಸಂಪುಟದಲ್ಲಿ ಪ್ರಕಟಿಸಿದ ಕವನದಲ್ಲಿ "ನನ್ನ ಮನೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಇದೆ." ಎಂದು ಹೇಳಿದ್ದಾರೆ. ಹಾಗೆಯೇ "ಸ್ವದೇಶೀ ಸಮಾಜದಲ್ಲಿ" ಹೀಗೆ ಹೇಳಿದ್ದಾರೆ.

"ವಿವಿಧತೆಯಲ್ಲಿ ಏಕತ್ವ; ಬಹುಮುಖದಿಂದ ಒಮ್ಮುಖ ಇದೇ ಭಾರತದ ಸನಾತನಧರ್ಮ. ಅಭಿಪ್ರಾಯ ಭೇದವೇ ಹೋರಾಟ ಎಂದು ಭಾರತ ಒಪ್ಪುವುದಿಲ್ಲ. ಹೊಸಬರೆಲ್ಲ ಶತ್ರುಗಳೆಂದೂ ಭಾರತ ಒಪ್ಪುವುದಿಲ್ಲ. ಭಾರತ, ಯಾರನ್ನೂ ದ್ವೇಷಿಸುವುದಿಲ್ಲ. ಎಲ್ಲ ಧ್ಯೇಯಗಳ ಮಹತ್ವವನ್ನೂ ಒಪ್ಪಿ, ಎಲ್ಲರನ್ನೂ ಒಂದು ಸಮರಸವಾಗಿ ಮಾಡಲು ಭಾರತ ಪ್ರಯತ್ನಿಸುತ್ತದೆ."

ಹೀಗೆ ಠಾಕೂರರು ಪೂರ್ವದೇಶಕ್ಕೂ ಪಶ್ಚಿಮ ದೇಶಕ್ಕೂ ನಡುವಣ ಸೇತುವೆಯಾದರು. ಅವರು ಎಲ್ಲ ರೂಪದಲ್ಲಿಯೂ ಜಾತೀಯತೆ ಪ್ರಾಂತೀಯತೆಯನ್ನು ವಿರೋಧಿಸಿದರು. ಅನೇಕ ವರುಷಗಳ ಹಿಂದೆ ಅವರು ಬರೆದ "ಭಾರತ ತೀರ್ಥ" ಎಂಬ ಕವನದಲ್ಲಿ ಹೀಗೆ ಹೇಳಿದ್ದಾರೆ.

"ಎಷ್ಟು ಮಾನವ ಝುರಿಗಳು, ಯಾವ ಅದಮ್ಯ ಪ್ರವಾಹದಲ್ಲಿ ಹರಿದು ಬಂದು ಈ ಭಾರತ ಜನತಾ ಸಮುದ್ರದಲ್ಲಿ ವಿಲೀನವಾಗಿದೆಯೋ ನನಗೆ ತಿಳಿಯದು. ಇಲ್ಲಿ ಆರ್ಯರು, ಅಲ್ಲಿ ಅನಾರ್ಯರು, ಇಲ್ಲಿ ದ್ರಾವಿಡರು ಅಲ್ಲಿ ಚೀಣರು, ಶಕರು, ಹೂಣರು, ಪಠಾಣರು ಮೊಗಲರು ಎಲ್ಲರೂ ಇಲ್ಲಿ ಒಂದಾಗಿ ಸೇರಿದರು. ಇಂದು

ಪಾಶ್ಚಾತ್ಯರಿಗೂ ಬಾಗಿಲು ತೆರೆದಿದೆ. ಅಲ್ಲಿಂದಲೂ ನಜರುಗಳು ಬರುತ್ತಿವೆ. ಅವರೂ ಕೊಡುತ್ತಾರೆ,ತೆಗೆದುಕೊಳ್ಳುತ್ತಾರೆ, ನಮ್ಮೊಂದಿಗೆ ಮಿಳನವಾಗುತ್ತಾರೆ. ನಮ್ಮ ಕಡೆಗೆ ಯಾರೂ ಬೆನ್ನು ತಿರುಗಿಸುವುದಿಲ್ಲ. ಭಾರತದ ಜನತಾ ಸಮುದ್ರದ ತೀರದಲ್ಲಿ ಎಲ್ಲ ಸೇರಿದ್ದಾರೆ, ಬನ್ನಿ ಆರ್ಯರೇ ಅನಾರ್ಯರೆ ಹಿಂದು ಮುಸಲ್ಮಾನರೇ ಬನ್ನಿ. ಇಂದು ಬನ್ನಿ. ಇಂಗ್ಲೀಷರೆ ಬನ್ನಿ ಕ್ರಿಸ್ತರೆ ಬನ್ನಿ. ಎಲ್ಲರೂ ಹಸ್ತಲಾಘವ ಕೊಡಿ. ದೀನರೆ ದಳಿತರೆ ಎಲ್ಲ ಬನ್ನಿ. ನಿಮ್ಮ ಅವನತಿಯ ಕಾಲ ಮುಗಿಯಿತು. ಭಾರತ ಮಾತೆಯ ಪಟ್ಟಾಭಿಷೇಕಕ್ಕೆ ಎಲ್ಲ ಬನ್ನಿ. ಪಟ್ಟಾಭಿಷೇಕದ ತೀರ್ಥ ಕುಂಭ ಇನ್ನೂ ತುಂಬಿಲ್ಲ. ಭಾರತದ ಎಲ್ಲ ಪಂಗಡ ಜಾತಿ ಗುಂಪು ಧರ್ಮದ ಜನಗಳ ದೇವತಾ ಗ್ರಹಗಳ ತೀರ್ಥವೆಲ್ಲ ಇದಕ್ಕೆ ಸೇರಬೇಕಾಗಿದೆ."

ಎಲ್ಲ ಮಾನವ ಜನಾಂಗದೊಂದಿಗೂ ಬಾಂಧವ್ಯವನ್ನಿಟ್ಟುಕೊಳ್ಳುವ ದೃಷ್ಟಿಯಿಂದ ಅವರು ವಿಶಾಲಭಾರತ ಸಂಘವನ್ನು ಸ್ಥಾಪಿಸಿದರು. ಅವರು ಆಂಗ್ಲೇಯರನ್ನು ದ್ವೇಷಿಸಲಿಲ್ಲ. ಗಾಂಧೀಜಿಯವರೂ ಸಹ ಆಂಗ್ಲೇಯರನ್ನು ದ್ವೇಷಿಸಲಿಲ್ಲ. ದ್ವೇಷದಿಂದ ಎಂದಿಗೂ ಪ್ರೇಮವನ್ನು ಬೆಳೆಸುವುದು ಸಾಧ್ಯವಿಲ್ಲ. ಈಗಲೂ ಇಂಗ್ಲೀಷರಿಗೂ ಭಾರತೀಯರಿಗೂ ದ್ವೇಷವಿಲ್ಲದೆ ಇರಲು ಗಾಂಧಿ ಠಾಕೂರರು ಸ್ಥಾಪಿಸಿದ ಈ ಪ್ರೇಮ ಬಾಂಧವ್ಯವೇ ಕಾರಣ. ಇವನ್ನೇ ಠಾಕೂರರು ತಮ್ಮ 80ನೇ ವಯಸ್ಸಿನಲ್ಲಿ ಬರೆಸಿದ "ನಾಗರೀಕತೆಯ ವಿಷಮ ಸ್ಥಿತಿ ಎಂಬ ಪ್ರಬಂಧದಲ್ಲಿ ಹೀಗೆ ಹೇಳಿದ್ದಾರೆ.

"ಕಾಲಚಕ್ರದ ಗತಿಯಿಂದ, ಆಂಗ್ಲೇಯರು ಭಾರತದ ಚಕ್ರಾಧಿಪತ್ಯವನ್ನು ಬಿಟ್ಟು ಹೋಗಬೇಕಾಗಿ ಬರಬಹುದು. ಆದರೆ ಅವರು ಬಿಟ್ಟು ಹೋಗುವಭಾರತ ಯಾವ ಸ್ಥಿತಿಯಲ್ಲಿರುತ್ತದೆ? ಎಂತಹ ದಾರಿದ್ರ್ಯ! ಆಂಗ್ಲೇಯರ ಆಳ್ವಿಕೆಯ ಈ ಪ್ರವಾಹ ಶತಮಾನಗಳು ಹರಿದು ಹೋದಮೇಲೆ, ಹಿಂದೆ ಅವರು ಬಿಡುವ ಕೆಸರು ಕೊಳಕು ಎಷ್ಟು! ನಾಗರಿಕತೆಯ ಅಮೃತಝರಿ, ಯೂರೋಪಿನ ಹೃದಯದಿಂದ ಚಿಮ್ಮುವುದೆಂದು ನಾನು ನಂಬಿದ ಕಾಲವೊಂದಿತ್ತು. ಆದರೆ ಇಂದು ಮೃತ್ಯುವಿನ ಹೊಸಲಿನಲ್ಲಿ ನಿಂತಿರುವ ನನ್ನಿಂದ ಆ ನಂಬಿಕೆ ಪೂರ್ಣವಾಗಿ ಮಾಯವಾಗಿದೆ.

"ನನ್ನ ಸುತ್ತ ಕಾಣುತ್ತಿರುವುದೇನು ? ತಮ್ಮ ನಾಗರಿಕತೆ ಹೆಚ್ಚೆಂದು ಹೆಮ್ಮೆಗೊಂಡಿದ್ದ ಪಾಶ್ಚಾತ್ಯ ನಾಗರಿಕತೆಯ ಛಿದ್ರೀಕರಣ. ಆದರೂ

ಮಾನವ ಜನಾಂಗದಲ್ಲಿ ನಂಬಿಕೆಯನ್ನು ಕೆಡಿಸಿಕೊಳ್ಳುವ ಪಾಪವನ್ನು ನಾನು ಮಾಡುವುದಿಲ್ಲ. ಈ ಅವಾಂತರ ಕಳೆದನಂತರವೂ ಮಾನವನು ಸೇವೆ, ತ್ಯಾಗಗಳ ಪರಿಶುದ್ಧವಾದ ಹೊಸ ಇತಿಹಾಸವನ್ನು ಮತ್ತೆ ಪ್ರಾರಂಭಿಸುವನೆಂದು ನಾನು ನಂಬುತ್ತೇನೆ. ಈ ಪ್ರಭಾತ, ಸೂರ್ಯೋದಯವಾಗುವ ಪೂರ್ವದಿಕ್ಕಿನಿಂದ ಬರುವುದೆಂದು ನಾನು ಭಾವಿಸುತ್ತೇನೆ. ಅಜೇಯನಾದ ಪುರುಷ, ತನ್ನ ಹೋರಾಟದ ಹೆಜ್ಜೆಯನ್ನು ಹಿಂದಕ್ಕೆ ಇಟ್ಟು, ಎಲ್ಲ ಪ್ರತಿಬಂಧಕಗಳನ್ನೂ ಎದುರಿಸಿ ತನ್ನ ಮಾನವತೆಯನ್ನು ಪುನರುಜ್ಜೀವನ ಗೊಳಿಸಿಕೊಳ್ಳುವ ದಿನ ಬಂದೇ ಬರುತ್ತದೆ. ಹಿಂಸಾಪ್ರವೃತ್ತಿಯ ಉದ್ಧತತನವೇ ಇಂದು ನಮಗೆ ಕಾಣುತ್ತಿದೆ. ಪೂರ್ವದ ಋಷಿಗಳು ಹೇಳಿದವಾಕ್ಯ, ನಿಜವಾಗಿ ಫಲಿಸುವ ಕಾಲಬಂದೇ ಬರುತ್ತದೆ "ದುರ್ಮಾರ್ಗಗಳಿಂದ ಮನುಷ್ಯ ಹಣವಂತನಾಗಬಹುದು, ಶತ್ರುಗಳನ್ನು ಜಯಿಸಬಹುದು, ಆದರೆ ಅವನ ಮೂಲವೇ ನಾಶವಾಗುತ್ತದೆ."

ಠಾಕೂರರು ತಮ್ಮ ಬಾಲ್ಯದಿಂದಲೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದುದಂತೂ ಸರಿ. ಅದಕ್ಕಾಗಿ ಅವರು ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿ ಜಲಿಯನ್‌ವಾಲಾಬಾಗ್ ಅತ್ಯಾಚಾರವನ್ನು ಖಂಡಿಸಿ ಕೊನೆಗೆ ತಮ್ಮ ಸರ್ ಪದವಿಯನ್ನೂ ತ್ಯಜಿಸಿದರು. ಆದರೆ ರಾಜಕೀಯ ಸ್ವಾತಂತ್ರ್ಯದ ಜತೆ ವ್ಯಕ್ತಿ ಮತ್ತು ಮನಸ್ಸಿನ ಸ್ವಾತಂತ್ರ್ಯಕ್ಕೆ ಅವರು ಬಹು ಹೆಚ್ಚು ಬೆಲೆಯಿತ್ತರು. ಹೊರಗಡೆಯ ಅಡ್ಡಿ ಅಡಚಣೆಗಳಿಲ್ಲದಿರುವುದು, ತ್ಯಾಗ, ಜ್ಞಾನ, ಆತ್ಮಶುದ್ಧಿ ಸಂಯಮ ಇವುಗಳ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ ಎಂಬುದು ಅವರ ಅಭಿಪ್ರಾಯವಾಗಿದ್ದಿತು.

ಎಲ್ಲಿ ಮನಸ್ಸು ಭಯರಹಿತವಾಗಿದೆಯೋ, ತಲೆ ಎತ್ತಿ ನಿಂತುಕೊಳ್ಳಬಹುದೋ

ಜ್ಞಾನ ಎಲ್ಲಿ ಎಲ್ಲರಿಗೂ ಉಚಿತವೋ

ಎಲ್ಲಿ ಸಂಕುಚಿತ ಮನೋಭಾವದ ಗೋಡೆಗಳಿಂದ ಜಗತ್ತು ಛಿದ್ರ ಛಿದ್ರವಾಗಿಲ್ಲವೋ

ಎಲ್ಲಿ ಮಾತುಗಳು ಸತ್ಯದ ಮೂಲದಿಂದಲೇ ಹೊರಬರುತ್ತವೋ

ಎಲ್ಲಿ ಪರಿಪೂರ್ಣತೆಯ ಕಡೆಗೆ ಸತತ ಪ್ರಯತ್ನ ತನ್ನ ಬಾಹುಗಳನ್ನು ಚಾಚುತ್ತಿರುವುದೋ

ಎಲ್ಲಿ ಶುದ್ಧವಾದ ವಿವೇಕ, ಜಡತೆಯ ದಾರಿ ಹಿಡಿದು ನಿರ್ಜೀವ ಅಭ್ಯಾಸವಾಗಿಲ್ಲವೋ

ಎಲ್ಲಿ ಮನಸ್ಸು ನಿನ್ನಿಂದ ಪ್ರಚೋದಿತವಾಗಿ, ಎಂದೆಂದಿಗೂ ವಿಶಾಲ ವಾಗುತ್ತಿರುವ ಆಲೋಚನೆ ಮತ್ತು ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗುತ್ತದೆಯೋ

ಆ ಸ್ವಾತಂತ್ರ್ಯ ಸ್ವರ್ಗಕ್ಕೆ, ಹೇ ತಂದೆಯೆ ನನ್ನ ದೇಶ ಎಚ್ಚರ ಗೊಳ್ಳಲಿ.

ತಾವು ಬಡವರನ್ನು ಎಷ್ಟು ಪ್ರೀತಿಸಬೇಕೋ, ಅಷ್ಟು ಪ್ರೀತಿಸಲಿಲ್ಲ ಎಂಬುದು ಅವರ ಕೊರತೆಯಾಗಿದ್ದಿತು. ಅವರು ಗೀತಾಂಜಲಿಯಲ್ಲಿ ಹೀಗೆ ಕೊರಗಿದ್ದಾರೆ. ಹಾಗೆಯೇ ಮಹತ್ ಸ್ವರಮೇಳ ಎಂಬುದರಲ್ಲಿ ಹೀಗೆ ಹೇಳಿ ದ್ದಾರೆ.

“ನನಗೆ ಎಲ್ಲೆಡೆಯೂ ಪ್ರವೇಶ ದೊರೆತಿಲ್ಲ, ನನ್ನ ಜೀವನಕ್ರಮ, ಮಧ್ಯೆ ಅಡ್ಡಬಂದು ನನ್ನನ್ನ ಹೊರಗೆ ನಿಲ್ಲಿಸಿದೆ. ನೇಗಿಲು ಹಿಡಿದ ರೈತ, ಲಾಳಿ ಎಸೆ ಯುತ್ತಿರುವ ನೆಯ್ಗಾರ, ಬಲೆ ಬೀಸುತ್ತಿರುವ ಬೆಸ್ತರವ–ಮೀನುಗಾರ, ಹೀಗೆ ಬೇರೆ ಬೇರೆ ಸರ್ವವ್ಯಾಪಿಗಳಾದ ಕಸಬುಗಳಿಂದ ಜಗತ್ತನ್ನು ನಡೆಸುತ್ತಿರು ವವರಲ್ಲಿ ನನಗೆ ಪ್ರವೇಶ ದೊರೆತಿಲ್ಲ. ಅವರನ್ನೆಲ್ಲ ನಾನು ಒಂದು ಮೂಲೆ ಯಿಂದ ಮಾತ್ರ ನೋಡಿದ್ದೇನೆ. ನಾನು ಪ್ರಸಿದ್ಧಿಯಲ್ಲಿ ಬೆಳೆದೆ. ಸಮಾಜದಲ್ಲಿ ನಾನು ಉನ್ನತಸ್ಥಾನಕ್ಕೆ ಬಹಿಷ್ಕೃತನಾಗಿದ್ದೇನೆ.

ಈ ಜನತೆಯ ಹೊರಸೆರಗು ಮಾತ್ರ ನನಗೆ ಗೊತ್ತಾಗಿದೆ. ಅವ ರೊಂದಿಗೆ ಆತ್ಮೀಯತೆ ಹೊಂದಲು ನನಗೆ ಸಾಧ್ಯವಾಗಿಲ್ಲ.”

ದೀನರು ದಳಿತರು ಇವರನ್ನು ಕಂಡರೆ ಅವರ ಹೃದಯ ಯಾವಾಗಲೂ ಆರ್ದ್ರವಾಗುತ್ತಿದ್ದಿತು. 1910 ರಲ್ಲಿಯೇ ಅವರು ಗೀತಾಂಜಲಿಯಲ್ಲಿ ಹೀಗೆ ಹೇಳಿದರು.

“ ಹೇ ನನ್ನ ದುರದೃಷ್ಟ ರಾಷ್ಟ್ರವೇ, ನಿನ್ನ ಪ್ರಜೆಗಳಲ್ಲಿ ಯಾರನ್ನು ನೀನು ಅವಮಾನಿಸಿರುವೆಯೋ, ನಿನ್ನ ಅವಮಾನ ಅವರದಕ್ಕೆ ಸಮನಾಗು ವುದು. ಯಾರನ್ನು ನಿನ್ನ ಮಡಿಲಲ್ಲಿ ತೆಗೆದುಕೊಳ್ಳದೆ, ಬಾಗಿಲಿನಲ್ಲಿ ನಿಲ್ಲಿಸಿ

ಮಾನಸಪತಿಯ ಹಕ್ಕುಗಳನ್ನು ಅವರಿಗೆ ನಿರಾಕರಿಸಿದರೋ, ನಿನ್ನ ಅವಮಾನ ಅವರೆಲ್ಲರದಕ್ಕೆ ಸಮಾನವಾಗುವುದು."

ಸ್ತ್ರೀತ್ವದ ಆದರ್ಶವನ್ನು ಕುರಿತು ಠಾಕೂರರು 'ಚಿತ್ರ'ದಲ್ಲಿ ಹೀಗೆ ಹೇಳುತ್ತಾರೆ.

"ನಾನು ಚಿತ್ರ, ಪೂಜಿಸಿಕೊಳ್ಳುವ ದೇವತೆಯಲ್ಲ. ಉದಾಸೀನದಿಂದ ಆಚೆಗೆ ತಳ್ಳಿಸಿಕೊಳ್ಳುವ ಕನಿಕರಕ್ಕೆ ಪಾತ್ರಳಾದ ವಸ್ತುವೂ ಅಲ್ಲ. ಸಾಹಸ ಮತ್ತು ಅಪಾಯದ ಮಾರ್ಗದಲ್ಲಿ ನನ್ನನ್ನು ನಿನ್ನ ಬಾಳಿನ ಸಂಗಾತಿಯಾಗಿಟ್ಟುಕೊಳ್ಳಲು ನೀನು ಇಷ್ಟಪಡುವುದಾದರೆ, ನಿನ್ನ ಬಾಳಿನ ಉಚ್ಚ ಕರ್ತವ್ಯಗಳಲ್ಲಿ ನಾನು ಭಾಗಿಯಾಗಲು ನೀನು ಅವಕಾಶಕೊಡುವುದಾದರೆ, ಆಗ ನನ್ನ ನಿಜವಾದ ವ್ಯಕ್ತಿತ್ವ ನಿನಗೆ ಗೊತ್ತಾಗುವುದು."

ಇವೇ ಭಾವನೆಗಳನ್ನು ಅವರ ಸಬಲ ಮಹವ. ನಿಮ್ಮ, ನಾರಿ, ಆರೋಗ್ಯ ಮುಂತಾದ ಇತರ ಕವನಗಳಲ್ಲಿಯೂ, ಗೋರಾ ಮುಂತಾದ ಕಾದಂಬರಿಗಳಲ್ಲಿಯೂ ಸಣ್ಣ ಕತೆಗಳಲ್ಲಿಯೂ ಕಾಣಬಹುದು. ಇನ್ನು ದಾರಿತಪ್ಪಿ ಅಥವ ಅನೀತಿಯಲ್ಲಿ ನಡೆದ ಸಹೋದರಿಯನ್ನು ಕಂಡು ಠಾಕೂರರು ಬಹಳ ಮರುಗುತ್ತಿದ್ದರು. ಪತಿತಾ, ಕರುಣಾ, ಸತಿ, ಚೈತಾಳಿ, ನಾಗಾಬಾಲ, ಚತುರಂಗ ಮುಂತಾದ ಕವಿತೆಗಳು ಠಾಕೂರರ ಆರ್ದ್ರ ಹೃದಯವನ್ನು ತೋರಿಸುತ್ತವೆ.

ಕಾವ್ಯರಂಗದಲ್ಲಿ ಸಾಧಿಸಿದಷ್ಟೇ ಕಾರ್ಯವನ್ನು ಠಾಕೂರರು ಶಿಕ್ಷಣ ರಂಗದಲ್ಲಿಯೂ ಸಾಧಿಸಿದ್ದಾರೆ. ಅವರು ಸ್ಥಾಪಿಸಿದ ವಿಶ್ವಭಾರತಿಯ ಧ್ಯೇಯ ಹೀಗಿದೆ. "ಸರಳತೆ, ಕಷ್ಟಸಹಿಷ್ಣುತೆ, ಪಾರಿಶುದ್ಧತೆ ಮತ್ತು ಪಾತಿವ್ರತ್ಯ ಪರಿಶುದ್ಧ ಚಾರಿತ್ರ್ಯ ಆಧ್ಯಾತ್ಮಿಕತೆ, ಗುರುಶಿಷ್ಯಮಧುರಬಾಂಧವ್ಯ. ಔದ್ಯೋಗಿಕ ಮತ್ತುಜ್ಞಾನಶಿಕ್ಷಣ ಎರಡರ ಸಮ್ಮಿಳನ. ವಿಶ್ವಭಾರತಿಯಲ್ಲಿ ಭಾರತೀಯ ಸಂಸ್ಕೃತಿಗೆ ಪ್ರಾಧಾನ್ಯತೆಯಿದೆ. ಪ್ರಕೃತಿಯ ಮಡಿಲಲ್ಲಿರುವ ಆ ಸಂಸ್ಥೆಯಲ್ಲಿ, ಪ್ರಕೃತಿ, ಶಿಕ್ಷಣದ ಮೇಲೆ ತನ್ನ ಪ್ರಭಾವವನ್ನು ಪ್ರತಿ ಮಟ್ಟದಲ್ಲಿಯೂ ಬೀರುತ್ತಿದೆ. ಠಾಕೂರರು ಅಲ್ಲಿರುವಾಗ ಕ್ಲಿಪ್ತಕಾಲದಲ್ಲಿ ಪ್ರಾರ್ಥನೆ ನಡೆಸಿ ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಸ್ಫೂರ್ತಿದಾಯಕ ಭಾಷಣಗಳನ್ನು ಕೊಡುತ್ತಿದ್ದರು. ಋಷಿಗಳ ಆಶ್ರಮದಂತಿರುವ ಈ ಸಂಸ್ಥೆಯಲ್ಲಿ ಭಾರತೀಯ ಪ್ರಾಚೀನ ಸಂಸ್ಕೃತಿಗೆ ಪ್ರಾಧಾನ್ಯತೆಯಿದ್ದರೂ, ಅದರ ಬಾಗಿಲು ಜಗತ್ತಿನ ಎಲ್ಲ ಜ್ಞಾನವನ್ನೂ

ಅಂಗೀಕರಿಸಲು ತೆರೆದಿದೆ. ಬರಿಯ ಹಳೆಯ ಕಂದಾಚಾರವೆಂಬ ಕಾರಣದಿಂದ ಅವರು ಪ್ರಾಚೀನತೆಯನ್ನು ಒಪ್ಪಲಿಲ್ಲ. ಭಾರತದ ಯುವಕ ಯುವತಿಯರು ಭಾರತದ ಪ್ರಾಚೀನ ವೈಭವವನ್ನು ಅರಿತು ಅದರಿಂದ ಚೇತನಗೊಳ್ಳಬೇಕೆಂಬುದು ಅವರ ಗುರಿಯಾಗಿದ್ದಿತು. ವಾಸ್ತವವಾಗಿ ಠಾಕೂರರ ಬಾಳು ಕವಿತೆ ಎಲ್ಲ ಪೂರ್ಣ ಭಾರತೀಯತ್ವದ ಪ್ರತೀಕ. ಭಾರತಸಂಸ್ಕೃತಿಯ ಜತೆಗೆ ವಿಶ್ವಭಾರತಿಯಲ್ಲಿ, ಚೀಣ ಟಿಬೆಟ್ ಇಸ್ಲಾಂ ಬೌದ್ಧ ಎಲ್ಲ ಸಂಸ್ಕೃತಿಗಳ ವ್ಯಾಸಂಗ ನಡೆಯಲು ಅವರು ಏರ್ಪಾಡುಮಾಡಿದ್ದರು.

ವಿಶ್ವಭಾರತಿ, ಒಂದು ಸಾಂಸ್ಕೃತಿಕ ಮಿಳನ. ಅಲ್ಲಿ ಮನುಷ್ಯನ ಪೂರ್ಣ ವಿಕಾಸಕ್ಕೆ ಅವಕಾಶವನ್ನು ಠಾಕೂರರು ಕಲ್ಪಿಸಿದರು. ಮನುಷ್ಯ, ಜ್ಞಾನಿಯೂ ಆಗಬೇಕು, ಕಾರ್ಯದಕ್ಷನೂ ಆಗಬೇಕು. ಮಾಡುವವನೂ ತಿಳಿಯುವವನೂ ಆಗಬೇಕು. ಶಿಕ್ಷಣ ಬೌದ್ಧಿಕ, ಕಲಾತ್ಮಕ ಸೌಂದರ್ಯಾನುಭವ ಫಲವುಳ್ಳದುದಾಗಬೇಕು. ಮನುಷ್ಯ, ಸಮಾಜದಲ್ಲಿರುವುದಕ್ಕೂ ಏಕಾಂತದಲ್ಲಿರುವುದಕ್ಕೂ ತನ್ನನ್ನು ಸಿದ್ಧಗೊಳಿಸುವ ಶಿಕ್ಷಣವನ್ನೂ ಪಡೆಯಬೇಕು. ಈ ಗುರಿಯಿಂದ ಠಾಕೂರರು ವಿಶ್ವಭಾರತಿಯಲ್ಲಿ ಸಂಗೀತ, ಚಿತ್ರ, ಕುಶಲ ಕಲೆ, ವ್ಯವಸಾಯ ವೈಜ್ಞಾನಿಕ ಪ್ರಯೋಗಶಾಲೆ, ಶಿಲ್ಪತರಗತಿ ಸಹಕಾರಬ್ಯಾಂಕ್ ಸಾರ್ವಜನಿಕ ಆರೋಗ್ಯ ಸಂಸ್ಥೆ ಎಲ್ಲವನ್ನೂ ಸ್ಥಾಪಿಸಿದರು.

ಹಳ್ಳಿ ಎಂದ ಮೇಲೆ ಅದರಲ್ಲಿ ಪ್ರಕೃತಿ ಸೌಂದರ್ಯ ಇರಬೇಕು. ಬಾಳಿನ ಪೂರ್ಣತೆ ಮತ್ತು ಚೈತನ್ಯಕ್ಕಾಗಿ ಅದರಲ್ಲಿ ನಗರದ ಸೌಕರ್ಯಗಳೆಲ್ಲ ಇರಬೇಕು. ಎಲ್ಲ ಮಟ್ಟದಲ್ಲಿಯೂ ಸಹಶಿಕ್ಷಣವಿರಬೇಕು. ಜತೆಗೆ ವಿದ್ಯಾರ್ಥಿನಿಯರಿಗೆ, ವೈಜ್ಞಾನಿಕ ರೀತಿಯಲ್ಲಿ ಪೂರ್ಣಶಿಕ್ಷಣವನ್ನು ಕೊಡಲು ಒಂದು ವಿಶ್ವವಿದ್ಯಾಲಯವನ್ನೇ ಸ್ಥಾಪಿಸಬೇಕೆಂಬುದೂ ಅವರ ಇಷ್ಟವಾಗಿದ್ದಿತು. ಅವರು ವಿಶ್ವಭಾರತಿ ಎಂಬ ಸಂಸ್ಥೆಯನ್ನು ಮಾಡಿ ಕಟ್ಟಡ ಕಟ್ಟಿಸಿ ಹಣ ಕೊಟ್ಟು ಉಪಾಧ್ಯಾಯರು ವಿದ್ಯಾರ್ಥಿಗಳ ಸೌಕರ್ಯವನ್ನು ನೋಡಿಕೊಂಡುದರಿಂದ ಮಾತ್ರವೇ ತೃಪ್ತರಾಗಲಿಲ್ಲ. ಅದನ್ನು ಅವರು ಮಾಡಿರುವುದಂತೂ ಸರಿ. ವಿಶ್ವಭಾರತಿಗೆ ಹಣ ಒದಗಿಸಲು ಅವರು ತಮ್ಮ ಅನೇಕ ಗ್ರಂಥಗಳ "ಕಾಪಿರೈಟನ್ನೂ" ಮಾರಬೇಕಾಯಿತು. ತಮ್ಮ ಪತ್ನಿಯವರ ಒಡವೆಗಳನ್ನೆಲ್ಲ ಮಾರಬೇಕಾಯಿತು. ವೃದ್ಧಾಪ್ಯದಲ್ಲಿ ಸಹ ಅವರು ವಿಶ್ವ

ಭಾರತಿಗಾಗಿ ಹಣ ವಸೂಲಿಗೆ ಬಹಳ ಕಷ್ಟಪಟ್ಟರು. ಸಂಸ್ಥೆಯ ಪ್ರಾರಂಭ ದೆಸೆಯಲ್ಲಿ ಅವರು ಅದರ ಗುಮಾಸ್ತರಾಗಿ ಉಪಾಧ್ಯಾಯರಾಗಿ, ಎಲ್ಲ ಬಗೆಯ ಕೆಲಸಗಾರರೂ ಆಗಿ ದುಡಿದರು. ಹುಡುಗರಿಗೆ ಕಥೆ ಹೇಳುವುದು, ತಾನೇ ಕಂಡುಹಿಡಿದ ಹೊಸ ಬಗೆಯ ಆಟಗಳನ್ನು ಕಲಿಸುವುದು, ಹುಡುಗರೊಂದಿಗೆ ಆಟಗಳಲ್ಲಿ ಸ್ಪರ್ಧಿಸುವುದು, ಮತ್ತು ಆ ಸ್ಪರ್ಧೆಗಳಲ್ಲೆಲ್ಲ ಅವರೇ ಗೆಲ್ಲುತ್ತಿದ್ದರು. ಅವರು ತಮ್ಮ ಯೌವನಕಾಲದಲ್ಲಿ ಗರಡಿಯನ್ನು ಮಾಡಿ ದೃಢಕಾಯ ರಾದರು. ಆ ದಿನಗಳಲ್ಲಿ ಶ್ರೀಮತಿ ಠಾಕೂರರು (ಅವರು ಅಡಿಗೆ ಕೆಲಸ ಗಳಲ್ಲಿ ನಿಪುಣರಾಗಿದ್ದರು) ರುಚಿ ರುಚಿಯಾದ ತಿಂಡಿಗಳನ್ನು ವಿದ್ಯಾರ್ಥಿ ಗಳಿಗೆ ಮಾಡಿಕೊಡುತ್ತಿದ್ದರು. ಆಗ ಉಪಾಧ್ಯಾಯರ ಮತ್ತು ವಿದ್ಯಾರ್ಥಿ ಗಳ ಸಂಖ್ಯೆ ಕಡಿಮೆಯಾಗಿದ್ದಿತು. ವಿಶ್ವಭಾರತಿ ಎಲ್ಲರಿಗೂ ಸ್ವಂತ ಮನೆ ಯಾಗಿದ್ದಿತು. ಕೊನೆಯವರೆಗೆ ಕವಿ, ಸಂಸ್ಥೆಯಲ್ಲಿ ಆಗಿಂದಾಗ್ಗೆ ಪಾಠಗಳನ್ನು ಹೇಳಿಕೊಡುತ್ತಾ ಅದರ ಸಂಪರ್ಕವನ್ನಿಟ್ಟುಕೊಂಡಿದ್ದರು. ಅವರು ಜಪಾನಿ ನಿಂದ ಕುಸ್ತಿಮಾಡುವವರನ್ನು ಕರೆಸಿ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಜುಜುಟ್ಸುವನ್ನು ಕಲಿಸಿದರು. ಶಾಂತಿನಿಕೇತನದ ವಿದ್ಯಾರ್ಥಿಗಳು ಫುಟ್‌ಬಾಲ್ ಆಟದಲ್ಲಿಯೂ ಬಂಗಾಳದಲ್ಲಿ ಪ್ರಸಿದ್ಧರಾಗಿದ್ದಾರೆ.

ಪ್ರತಿ ವಿದ್ಯಾರ್ಥಿಯೂ ಹದಿನೈದು ನಿಮಿಷ ತನ್ನ ಪಾಡಿಗೆ ತಾನು ಮೌನವಾಗಿ ಕುಳಿತು ಧ್ಯಾನಮಾಡಿ ಅನಂತರ ಪಾಠಗಳಲ್ಲಿ ತೊಡಗುವುದು ವಿಶ್ವಭಾರತಿಯ ಪದ್ಧತಿ.

ವಿಶ್ವಭಾರತಿಯ ವಿದ್ಯಾರ್ಥಿಗಳೂ ಉಪಾಧ್ಯಾಯರೂ ನೆರೆಹೊರೆಯ ಗ್ರಾಮಗಳಲ್ಲಿ ಹೋಗಿ ಆಗಿಂದಾಗ್ಗೆ ಸೇವೆ ಮಾಡುತ್ತಿದ್ದರು. ಇಂತಹವರನ್ನು ತಯಾರು ಮಾಡುವುದಕ್ಕಾಗಿಯೇ ಪ್ರಸಾದ್‌ವಿದ್ಯಾಲಯ ಮತ್ತು ಸಂತಾಲರಿ ಗಾಗಿ ಪಿಯರ್‌ಸನ್ ವಿದ್ಯಾಲಯ ಇವು ಇದ್ದವು.

ಠಾಕೂರರು ಶಿಕ್ಷಣ ವಿಷಯದಲ್ಲಿ ತಮ್ಮದೇ ಆದ ಮಾರ್ಗದಲ್ಲಿ ಬಹಳ ಕೆಲಸಮಾಡಿದರು. ಪರೀಕ್ಷೆಗಳ ಕಾಲದಲ್ಲಿ, ವಿದ್ಯಾರ್ಥಿಗಳನ್ನು ಕಾಯದೆ ಅವರನ್ನು ನಂಬಿ ಬಿಡುವ ಪದ್ಧತಿಯನ್ನು ಅವರು ಅನುಸರಿಸಿದರು. ಅವರು 1925 ರಲ್ಲಿ ಶಿಕ್ಷಣಗಳಲ್ಲಿ ಪ್ರಯೋಗಗಳನ್ನು ನಡೆಸುವುದಕ್ಕಾಗಿಯೇ ಶಿಕ್ಷಾ ಸತ್ರವೆಂಬುದನ್ನು ಪ್ರಾರಂಭಿಸಿದರು. ಅದರ ಧ್ಯೇಯ ಹೀಗೆ ಇದ್ದಿತು.

"ಶಿಕ್ಷಾಸತ್ರದ ಗುರಿ ಇದು. ಮಗು ಸಾಧಾರಣವಾಗಿ 6 ರಿಂದ 12 ವರುಷದ ವರೆಗೆ ಕಣ್ಣುಗಳಿಂದಲೂ, ವಾಸನೆ ರುಚಿ, ಸ್ಪರ್ಶ, ಅದರಲ್ಲಿಯೂ ಕೈಗಳಿಂದಲೂ ಅನುಭವವನ್ನುಹೊಂದುತ್ತಿರುತ್ತದೆ. ಆದುದರಿಂದ ಮಗು ಶಿಕ್ಷಾ ಕ್ಷೇತ್ರದಲ್ಲಿ ಸೇರಿದಕೂಡಲೇ ಅದಕ್ಕೆಕುಶಲಕಲೆಗಳ ಅನುಭವ ಉಂಟಾಗುತ್ತದೆ. ಕುಶಲಕಲಾ ಮಂದಿರದಲ್ಲಿ ಮಗುವಿಗೆ ತಯಾರಿಯೂ ಪರಿಶ್ರಮವೂ ಉಂಟಾಗಿ ಅದು ಕೈಯನ್ನು ಉಪಯೋಗಿಸುವುದನ್ನೂ ಕೈ ಸ್ವಾತಂತ್ರ್ಯವನ್ನೂ ಕಲಿತು ಒಂದು ಸೃಷ್ಟಿಕರ್ತನಾಗುವುದು. ವಿದ್ಯಾಭ್ಯಾಸದಲ್ಲಿ ಬಾಲ್ಯದೆಸೆಯಲ್ಲಿಯೇ ಒಂದು ಕಸಬನ್ನು ಪ್ರಾರಂಭಿಸುವುದು ಒಳ್ಳೆಯದು. ಆ ಕಾರ್ಯ ಹುಡುಗರು ತಮ್ಮ ಸಣ್ಣ ಕೈಗಳಿಂದ ಮಾಡುವುದಾಗಿರಬೇಕು. ತಯಾರಾದ ಪದಾರ್ಥ ಮನೆಗೆ ಉಪಯೋಗವಾಗುವಂತಿರಬೇಕು. ಅಥವಾ ಮಾರಾಟವಾಗು ವಂತಿರಬೇಕು. ಈ ಕಸಬುಗಳನ್ನು ಮಾಡುವುದರಲ್ಲಿ ಕಲೆ, ವಿಜ್ಞಾನ, ವ್ಯಾಪಾರ ಎಲ್ಲ ಅಡಗಿರಬೇಕು.

ಠಾಕೂರರ ಬಂಗಾಳಿ ಹಸ್ತಾಕ್ಷರ ಬಹು ಸೊಗಸಾಗಿದ್ದಿತು ಅದನ್ನು ಬಂಗಾಳಿಗಳು ಎಲ್ಲರೂ ಅನುಸರಿಸ ತೊಡಗಿದರು.

ನೋಬಲ್ ಪಾರಿತೋಷಕ ದೊರೆಯುವುದಕ್ಕೆ ಮುಂಚೆಯೇ, ಠಾಕೂರರ ಕೆಲವು ಕವನಗಳು ಇಂಗ್ಲೀಷಿನಲ್ಲಿ ಅಚ್ಚಾಗಿದ್ದವು. ಅವರು ತಮ್ಮ ಪ್ರಾರಂಭ ಕವನಗಳನ್ನು ಲೋಕೇಂದ್ರನಾಥ ಪಾಲಿಟಾ ಐ.ಸಿ.ಎಸ್. ರವರಿಂದ ಇಂಗ್ಲಿಷಿಗೆ ತರ್ಜುಮೆಮಾಡಿಸುತ್ತಿದ್ದರು. "ತಾವೇ ಅನುವಾದ ಮಾಡಿ, ಚೆನ್ನಾಗುತ್ತದೆ" ಎಂದು ಹೇಳಿದಾಗ ಅವರು ತಮ್ಮ ಪದ್ಯದ ಎರಡು ಸಾಲುಗಳನ್ನು ಪ್ರತ್ಯು ತ್ತರವಾಗಿ ಹೇಳುತ್ತಿದ್ದರು. "ಬಹಳ ಹಿಂದೆಯೇ ಕಣ್ಣೀರಿನೊಂದಿಗೆ ಆಕೆಯಿಂದ ಬೀಳ್ಕೊಂಡೆನು. ಇನ್ನು ಯಾವ ಸಬೂಬಿನಿಂದ ಮತ್ತೆ ಹೋಗಿ ಅವಳನ್ನು ಕರೆಯಲಿ?" ಈ ಸಂಗತಿಯು ತಮ್ಮ ಬಾಲ್ಯದಲ್ಲಿಯೇ ಅವರು ಇಂಗ್ಲೀ ಷನ್ನೂ ಅದರ ಅಭ್ಯಾಸವನ್ನೂ ಉದಾಸೀನದಿಂದ ಕಡೆಗಾಣಿಸಿದುದಕ್ಕೆ ಸಂಬಂ ಧಿಸಿದುದಾಗಿದ್ದಿತು. ಆದರೆ ಇಂಗ್ಲೀಷ್ ಕವನ ದೇವತೆ, ಅವರನ್ನು ತನ್ನ ಕೈಯಿಂದ ತಪ್ಪಿಸಿಕೊಂಡು ಹೋಗಗೊಡಲಿಲ್ಲ. ಕೊನೆಗೆ ತಮ್ಮ ಅನೇಕ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನೂ ಠಾಕೂರರೇ ಮಾಡಿದರು.

ಠಾಕೂರರು ದೃಢಕಾಯರಾಗಿಯೂ ಸತತೋದ್ಯೋಗಿಗಳಾಗಿಯೂ ಇರುತ್ತಿದ್ದರು. ಅವರ ಮಿತ್ರರೊಬ್ಬರು ಹೀಗೆ ಹೇಳುತ್ತಾರೆ. "ಆಗಿಂದಾಗ್ಗೆ ಶಾಂತಿನಿಕೇತನದಲ್ಲಿ ಅನೇಕ ದಿವಸಗಳು ಕವಿಯ ಜತೆಯಲ್ಲಿರುವುದು ನನ್ನ ಭಾಗ್ಯವಾಗಿದ್ದಿತು. ನಾನು ಇದ್ದ ಕೊಠಡಿಯ ಎದುರಿನ ಸಣ್ಣ ಹೊಲದ ಆಚೆ ಕವಿಯ ನಿವಾಸಸ್ಥಾನ (ಅದರ ಹೆಸರು ದೆಹಲಿ ಎಂದು) ಇದ್ದಿತು. ಅವರು ಯಾವಾಗಲೂ ನನಗಿಂತ ಮುಂಚಿತವಾಗಿ ರಾತ್ರಿಹೊತ್ತು ಮಲಗಿದುದೇ ಇಲ್ಲ. ಬೆಳಗಿನ ಜಾವ ನಾನು ತಿರಗಾಟಕ್ಕೆ ಹೊರಡುತಿದ್ದೆನು. ಆದರೆ ಯಾವಾಗಲೋ ಕವಿ ಆ ವೇಳೆಗೆ ಆಗಲೇ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ತಮ್ಮ ಕೆಲಸದಲ್ಲಿ ತೊಡಗಿ ಬಹಳಹೊತ್ತು ಆಗಿರುತ್ತಿದ್ದಿತು. ಮಧ್ಯಾಹ್ನ ಊಟ ಮಾಡಿದ ನಂತರ ಕಿರುನಿದ್ರೆ ತೆಗೆಯುವುದಿರಲಿ, ಅವರು ಒಂದು ಗಳಿಗೆ ವಿಶ್ರಾಂತಿಯನ್ನು ಸಹ ತೆಗೆದುಕೊಳ್ಳುತ್ತಿರಲಿಲ್ಲ, ದಿವಸದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಊಟ ನಿದ್ರೆ ಸ್ನಾನಗಳಿಗೆ ಬಹಳ ಮಿತವಾದ ಕಾಲ ವನ್ನು, ವಿನಿಯೋಗಿಸಿ, ಉಳಿದ ಕಾಲವನ್ನೆಲ್ಲ ಅವರು ತಮ್ಮ ಬರವಣಿಗೆಗೆ ವಿನಿ ಯೋಗಿಸುತ್ತಿದ್ದರು. ಬಿಸಿಲಿನ ಕಾಲದಲ್ಲಿ ಸಹ ಅವರು ಬೀಸಣಿಗೆಯಿಂದ ಬೀಸಿಕೊಳ್ಳುತ್ತಿರಲಿಲ್ಲ. ಶಾಂತಿನಿಕೇತನದ ಬಿಸಿಲು, ಸಹಿಸಲಸಾಧ್ಯ ವೆಂಬುದು ಅನುಭವವಿರುವವರಿಗೆಲ್ಲ ಗೊತ್ತು. ಈಚೆಗೆ ಅವರ ಕಾಹಿಲೆಯಿಂದ, ಅವರು ಕೆಲಸ ಮಾಡುವುದು ಕಡಿಮೆಯಾಗಿದ್ದಿತು. ಆದರೂ ಅವರು, ಅನೇಕ ಯುವಕರಿಗಿಂತಲೂ ಹೆಚ್ಚು ಕೆಲಸಮಾಡುತ್ತಿದ್ದರು. ಮಹಾತ್ಮ ಗಾಂಧಿ ಯವರು ಶಾಂತಿನಿಕೇತನಕ್ಕೆ ಹೋಗಿದ್ದಾಗ ಕವಿವರ್ಯರಿಂದ "ಮಧ್ಯಾಹ್ನದ ಹೊತ್ತು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ" ಎಂಬ ವಾಗ್ದಾನವನ್ನು ಪಡೆದುಕೊಂಡರು.

ತಮ್ಮ ಯವ್ವನ ಕಾಲದಲ್ಲಿ ಮತ್ತು ಮುಪ್ಪಿನಲ್ಲಿ ಸಹ, ಠಾಕೂರರು ಆಹಾರ ವಿಷಯದಲ್ಲಿ ತಾವು ಮಾಡಿದ್ದ ದೀರ್ಘ ವ್ಯಾಸಂಗವನ್ನು ತಮ್ಮ ಮೇಲೆಯೇ ಪ್ರಯೋಗಿಸಿ ಕೊಳ್ಳುತ್ತಿದ್ದರು. ಭಾರತದಂತಹ ಬಡದೇಶದಲ್ಲಿ ಆಹಾರವನ್ನು ವ್ಯರ್ಥಮಾಡುವುದನ್ನು ಅವರು ಎಂದಿಗೂ ಒಪ್ಪುತ್ತಿರಲಿಲ್ಲ. ಆಹಾರ ವಿಷಯವಾದ ಹೊಸ ಪರಿಶೋಧನೆಗಳು, ಹೆಚ್ಚು ರುಚಿಯಾದ ಮತ್ತು ಹೆಚ್ಚು ಪುಷ್ಟಿಕರವಾದ ಆಹಾರವನ್ನು ಕಂಡುಹಿಡಿಯುವುದರಲ್ಲಿ ತೊಡಗಬೇಕೆಂ

ಬುದು ಅವರ ಅಭಿಪ್ರಾಯವಾಗಿದ್ದಿತು. ತಮ್ಮ ನಾಲಿಗೆಯರುಚಿಯನ್ನು ಅವರು ಹತೋಟಿಗೆ ತಂದುಕೊಂಡಿದ್ದರು. ಒಂದು ಕಾಲದಲ್ಲಿ ಅವರು ನಿತ್ಯ ಬೇವಿನ ಎಲೆಯನ್ನು ಆಹಾರದ ಜತೆ ಉಪಯೋಗಿಸುತ್ತಿದ್ದರು. ತವಡು ಸಹಿತವಾದ ಗೋಧಿಹಿಟ್ಟು,ಬೇಯಿಸದತರಕಾರಿ,ಅವರಿಗೆ ಪ್ರಿಯವಾಗಿದ್ದಿತು.ಸಕ್ಕರೆಯ ಬದಲು ಬೆಲ್ಲವನ್ನೇ ಅವರು ಉಪಯೋಗಿಸಿಸುತ್ತಿದ್ದರು. ಒಂದು ಕಾಲದಲ್ಲಿ ಶಾಂತಿನಿಕೇತನದಲ್ಲಿ ಆಹಾರಪದ್ಧತಿ, ಈ ಎಲ್ಲ ನಿಯಮಗಳಿಗೂ ಅನುಗುಣವಾಗಿದ್ದಿತು. ಠಾಕೂರರು ಯಾವ ರೂಪದಲ್ಲಿಯೂ ಹೊಗೆಯಸೊಪ್ಪನ್ನು (ತಂಬಾಕ) ಉಪಯೋಗಿಸುತ್ತಿರಲಿಲ್ಲ. ಎಲೆ ಅಡಕೆಯನ್ನೂ ಮುಟ್ಟುತ್ತಿರಲಿಲ್ಲ.

ಠಾಕೂರರು ಒಂದು ವಿಧವಾದ ಸಾಧಕರಾಗಿದ್ದರು. ಆದರೆ ವಿರಕ್ತರಾಗಿರಲಿಲ್ಲ. ಅವರು ಅತಿ ಸುಖಲೋಲುಪರೂ ಆಗಿರಲಿಲ್ಲ. ಅವರ ಧ್ಯೇಯ ಸಮತೆಯಾಗಿದ್ದಿತು. ‹‹ವಿರಕ್ತಿಯಲ್ಲಿಲ್ಲ ನನ್ನ ಬಿಡುಗಡೆ" ಎಂದು ಅವರು ಒಂದು ಕವನದಲ್ಲಿ ಹೇಳಿದ್ದಾರೆ.

"ನನ್ನ ಬಿಡುಗಡೆ ತ್ಯಾಗದಲ್ಲಿಲ್ಲ. ಆನಂದದ ಸಾವಿರಾರು ಬಂಧನದಲ್ಲಿ ನಾನು ಸ್ವಾತಂತ್ರ್ಯದ ಆಲಿಂಗನವನ್ನು ಹೊಂದುತ್ತೇನೆ. ನೀನು ನಿನ್ನ ಬೇರೆ ಬೇರೆ ವರ್ಣದ ವಾಸನೆಯ ಹೊಸಮಧುವನ್ನು ನನಗಾಗಿ ಒದಗಿಸಿ ಈ ಮಡಕೆಯನ್ನು ತುಂಬುತ್ತಿದ್ದಿ. ನನ್ನ ಜಗತ್ತು ತನ್ನ ನೂರಾರು ದೀಪಗಳನ್ನು ನಿನ್ನ ಜ್ಯೋತಿಯಿಂದ ಹತ್ತಿಸಿಕೊಂಡು ನಿನ್ನ ಸನ್ನಿಧಿಯ ಮುಂದೆ ಅವನ್ನು ಅರ್ಪಿಸುತ್ತಿದೆ. ಹೌದು, ನನ್ನ ಕುರುಡುನಂಬಿಕೆಗಳೆಲ್ಲ ಆನಂದ ಜ್ಯೋತಿಗಳಾಗಿ ಉರಿದು ನನ್ನ ಆಸೆಗಳೆಲ್ಲ ಪ್ರೇಮದ ಫಲಗಳಾಗಿ ಪರಿವರ್ತಿತವಾಗಿದೆ

ಠಾಕೂರರ ಸಂಸಾರ ಜೀವನದ ವಿಷಯದಲ್ಲಿ ಹೆಚ್ಚು ಸಂಗತಿಗಳು ತಿಳಿದಿಲ್ಲ. ಠಾಕೂರರು ಈ ವಿಷಯದಲ್ಲಿ ಏನನ್ನೂಹೇಳಿಲ್ಲ. ಠಾಕೂರರ ಹಿರಿಯಣ್ಣಂದಿರ ಹಿರಿಯಸೊಸೆ ಹೇಮಲತಾದೇವಿ, ಆಗಿನ ಪ್ರಭಾಸಿಯೆಂಬ ಬಂಗಾಳಿ ಪತ್ರಿಕೆಯಲ್ಲಿ "ಠಾಕೂರರ ಮನೆಯಲ್ಲಿ" ಎಂಬ ಲೇಖನವನ್ನು ಬರೆಯುವವರೆಗೆ ಠಾಕೂರರ ಸಂಸಾರಜೀವನದ ವಿಷಯ ಜಗತ್ತಿಗೆ ಹೆಚ್ಚಾಗಿ ತಿಳಿದಿರಲಿಲ್ಲ. ಆ ಲೇಖನದಲ್ಲಿ ಆಕೆ, ಠಾಕೂರರು ಎಂತಹ ಪ್ರೇಮಪೂರ್ಣಪತಿ, ವಿಶ್ವಾಸಿಪಿತಾ, ದಯಾರ್ದ್ರ ಹೃದಯದ ಯಜಮಾನ ಎಂಬ ಸಂಗತಿಗಳನ್ನೆಲ್ಲ ವಿವರಿಸಿದ್ದಾಳೆ. ಠಾಕೂರರು 1902ನೆ ಇಸ್ವಿ ನವಂಬರ್ 23ರಂದು ವಿಧುರರಾದರು. ಹೇಮ

ಲತಾ ದೇವಿಯ ಲೇಖನದ ಇಂಗ್ಲೀಷ್ ಭಾಷಾಂತರದ ಒಂದು ಭಾಗ (ಠಾಕೂರರ ವಿರಕ್ತ ಸ್ವಭಾವವನ್ನು ಕುರಿತುದನ್ನು) ನಾವು ಇಲ್ಲಿ ಗಮನಿಸ ಬಹುದು.

"ಠಾಕೂರರು ಇದ್ದಕ್ಕಿದ್ದಂತೆಯೇ, ಆಹಾರ ವಿಷಯದಲ್ಲಿ ಪ್ರಯೋಗ ವನ್ನು ಪ್ರಾರಂಭಿಸಿ ಬಿಡುತ್ತಿದ್ದರು. ಅವರ ನಿಯಮಗಳು ಬಹಳ ಕಟ್ಟು ನಿಟ್ಟಾಗಿರುತ್ತಿದ್ದವು. ಮನೆಯವರಿಗೆಲ್ಲ ಯೋಚನೆ ಹತ್ತಿಕೊಳ್ಳುತ್ತಿದ್ದಿತು........ ಈ ಪ್ರಯೋಗ, ಅನೇಕ ವೇಳೆ ಉಪವಾಸದ ಮಟ್ಟಕ್ಕೆ ಹೋಗುತ್ತಿದ್ದಿತು. ಆಗ ನಾವು "ಈ ಅನಾಹುತ"ವನ್ನು ತಪ್ಪಿಸಿ" ಎಂದು ಅವರ ಹೆಂಡತಿಯವರಲ್ಲಿ ಹೋಗಿ ಹೇಳುತ್ತಿದ್ದೆವು. ಆಕೆಗೆ ಗಂಡನ ಸ್ವಭಾವ, ಚೆನ್ನಾಗಿ ಗೊತ್ತಿದ್ದಿತು. ಆದುದರಿಂದ ಅವಳು ಯಾವ ತಂಟೆಗೂ ಹೋಗದೆ ಸುಮ್ಮನೆ ಇರುತ್ತಿದ್ದಳು. ಒಂದು ಸಲ ಆಕೆ ಹೀಗೆ ಹೇಳಿದುದು ಜ್ಞಾಪಕವಿದೆ. "ಅವರ ಸ್ವಭಾವ ನಿಮಗೆ ತಿಳಿಯದು. ಯಾವುದು ಬೇಡ ಎಂದು ಹೇಳುತ್ತೇವೆಯೋ ಅದನ್ನೇ ಮಾಡ ಬೇಕೆಂದು ಅವರು ಹಠ ಹಿಡಿಯುತ್ತಾರೆ. ಇಷ್ಟರಲ್ಲಿಯೇ ಅವರ ದೇಹ ಉಪವಾಸವನ್ನು ವಿರೋಧಿಸುತ್ತದೆ. ಆಗ ಅವರೇ ಆಹಾರವನ್ನು ತೆಗೆದು ಕೊಳ್ಳಲು ಪ್ರಾರಂಭಿಸುತ್ತಾರೆ.

"ಅವರು ಅತ್ಯಂತ ಪ್ರೇಮಪೂರಿತ ತಂದೆ. ತಮ್ಮ ಮೊದಲನೆಯ ಮಗ ಳನ್ನು—ಸಣ್ಣ ಹುಡಗಿಯನ್ನು, ಅವರು ತಾಯಿಗಿಂತ ಹೆಚ್ಚಾಗಿ ರಕ್ಷಿಸಿದರು. ಅದಕ್ಕೆ ಆಹಾರ ಕೊಡುವುದು, ಅದರ ಬಟ್ಟೆಗಳನ್ನು ಬದಲಾಯಿಸಿ ಹಾಕು ವುದು, ಹಾಸಿಗೆಯನ್ನು ಸಿದ್ಧಪಡಿಸಿ ಮಲಗಿಸುವುದು, ಎಲ್ಲವನ್ನೂ ಅವರೇ ಮಾಡುತ್ತಿದ್ದುದನ್ನು ನಾವೇ ನೋಡಿದ್ದೇವೆ"

ಮುಂದೆ ಹೇಮಲತಾ ದೇವಿಯವರು ಕವಿಯ, ಗೃಹಸ್ತ ಜೀವನದ ಒಂದು ನೋಟವನ್ನು ನಮ್ಮ ಮುಂದೆ ಇಡುತ್ತಾರೆ.

"ನಮಗೆಲ್ಲ ಚೆನ್ನಾಗಿ ಜ್ಞಾಪಕವಿದೆ. ಠಾಕೂರರ ಹೆಂಡತಿಗೆ ಕಾಹಿಲೆ ಯಾದಾಗ ಕವಿ, ಎಲ್ಲ ಕಾರ್ಯಗಳನ್ನೂ ಬಿಟ್ಟು ಅವಳ ಉಪಚಾರಕ್ಕೆ ನಿಂತರು. ಅವರು ಯಾವಾಗಲೂ ಅವಳ ಹಾಸಿಗೆಯ ಬಳಿಯಲ್ಲಿಯೇ ಕುಳಿತಿರುತ್ತಿದ್ದರು. ಎರಡು ತಿಂಗಳ ಕಾಲ, ಆಕೆ ಸ್ವರ್ಗಸ್ಥರಾಗುವವರೆಗೆ, ಕವಿ ಅತ್ತಿತ್ತ ಕದಲಲಿಲ್ಲ. ಅವರು ಮಾಡಿದ ಉಪಚಾರ, ಪ್ರೇಮಪೂರ್ಣವೂ ರೋಗಿಯ ಸೌಕರ್ಯವನ್ನು

ಮಾತ್ರವೇ ದೃಷ್ಟಿಯಲ್ಲಿಟ್ಟುಕೊಂಡದ್ದೂ ಆಗಿದ್ದಿತು. ಆ ಕಾಲದಲ್ಲಿ ವಿದ್ಯುತ್ ಬೀಸಣಿಗೆಗಳು ಇರಲಿಲ್ಲ. ತಾಳೇಗರಿಯ ಬೀಸಣಿಗೆಯನ್ನು ಕೈಯಲ್ಲಿ ಹಿಡಿದು, ಹೆಂಡತಿ ನಿದ್ರೆ ಹೋಗುವವರೆಗೆ ಅವಳಿಗೆ ಅದನ್ನ ಶ್ರದ್ಧೆಯಿಂದ ಕವಿ ಬೀಸುತ್ತಿದ್ದ ದೃಶ್ಯ, ಈಗಲೂ ನನ್ನ ಕಣ್ಣಿಗೆ ಕಟ್ಟಿದೆ. ಆ ಕಾಲದಲ್ಲಿ ರೋಗಿಗಳನ್ನು ಉಪಚರಿಸಲು ದಾದಿ (ನರ್ಸ್) ಯರನ್ನು ನಿಯಮಿಸುವುದು ಧನಿಕರ ಪದ್ಧತಿಯಾಗಿದ್ದಿತು. ಈ ನಿಯಮಕ್ಕೆ, ಕವಿಯ ಮನೆಯೊಂದೇ ಅಪವಾದವಾಗಿದ್ದಿತು."

ಠಾಕೂರರು ವಿಶ್ವಖ್ಯಾತ ಕವಿಯೂ, ತತ್ವಜ್ಞಾನಿಯೂ ಆಗಿರದಿದ್ದರೂ ಈ ಪ್ರೇಮ ಸ್ವಭಾವವೇ, ಅವರನ್ನು ಜನಪ್ರಿಯರನ್ನಾಗಿ ಮಾಡುತ್ತಿದ್ದುದರಲ್ಲಿ ಸಂದೇಹವಿಲ್ಲ.

ತಮ್ಮ ಗದ್ಯ ಕೃತಿಗಳಲ್ಲಿ ಠಾಕೂರರು ವ್ಯಕ್ತಿಯ ಬೆಳವಣಿಗೆಯಲ್ಲಿ ನಂಬಿಕೆ, ಜಗತ್ತು ಉತ್ತಮತೆಗೆ ಏರುತ್ತಿರುವುದೆಂಬ ಭರವಸೆಯನ್ನು ವ್ಯಕ್ತಪಡಿಸಿದ್ದಾರೆ. ಅವರ ನಾಟಕಗಳೆಲ್ಲ ಗೀತನಾಟಕಗಳು. ಸಂಗೀತ ಮಾಧುರ್ಯ, ಅವರ ಕವನಗಳಲ್ಲಿಯಂತೆ ಅಲ್ಲಿಯೂ ವಿಶೇಷ. ಠಾಕೂರರ ಕೃತಿಗಳೆಲ್ಲ ಬೇರೆ ಬೇರೆಯಾಗಿ ಕಂಡರೂ, ಅವೆಲ್ಲವೂ ಒಂದೇ ಉದ್ದೇಶವುಳ್ಳ ಒಂದು ಸಮರಸತೆಯ ಗುರಿಯತ್ತಸಾಗಿವೆ. ಠಾಕೂರರು ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿ ಔಧ್ಯೋಗೀಕರಣಗಳಿಂದ ಪ್ರಭಾವಿತರಾಗಿದ್ದರೂ ಅವರು ಮೂಲದಲ್ಲಿ ಪೂರ್ಣ ಭಾರತೀಯ ಸಂಸ್ಕೃತಿ ಭಕ್ತರು. ಅವರ ಕೃತಿಗಳಲ್ಲಿ ಎಲ್ಲಿಯೂ ಪಾಶ್ಚಾತ್ಯ ಅನುಕರಣವಿಲ್ಲ, ಅದರ ಬದಲು ಅವರು ಉಪನಿಷತ್ತುಗಳಿಂದ ಪೂರ್ಣವಾಗಿ ಪ್ರಭಾವಿತರಾಗಿ ಭಾರತದ ಕವಿಗಳಲ್ಲಿ ಅತ್ಯಂತ ಶ್ರೇಷ್ಠನಾದ ಕಾಳಿದಾಸನ ಮಾರ್ಗವನ್ನು ಅನುಸರಿಸಿದ್ದಾರೆಂದು ಹೇಳಬಹುದು, ಅವರು ವೈಷ್ಣವ ಭಕ್ತಿ ಕರಣೆ ಗೀತಗಳು ಜನಪದಗೀತ ಜನಪದ ನರ್ತನ ಜನಪದ ನಾಟಕ ಇವುಗಳಿಂದಲೂ ಬಹಳ ಪ್ರಭಾವಿತರಾಗಿದ್ದರು. ಅವರ ಉಪಕರಣ ಕವಿತೆ, ಗಾನ, ವೇದಾಂತ. ಆದರೆ ಠಾಕೂರರು ಎಂದೆಂದಿಗೂ ಉಳಿಯುವುದು ಅವರ ಕವಿತೆಗಳಿಂದ. ಆದುದರಿಂದಲೇ ಅವರಿಗೆ ಕವಿ ಎಂದೇ ಹೆಸರು. ನೋಬಲ್ ಕವಿಯಾದ ಠಾಕೂರರು ಮನುಷ್ಯ ಜಗತ್ತಿನ ಕವಿಗಳೇ ಆದರು. ವಿಶ್ವಕವಿ ಎಂಬ ಅವರ ಕೀರ್ತಿ ಅಮರವಾಗಿದೆ.

ರವೀಂದ್ರನಾಥ ಠಾಕೂರರು ಭಾರತದ ನೆಲವನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಅವರು ಒಂದು ಕಡೆ ಹೀಗೆ ಹೇಳುತ್ತಾರೆ.

“ನಾವು ಹುಟ್ಟಿರುವ ನೆಲ, ನಮ್ಮ ದೇಶ, ಹಳ್ಳಿಗಳ ನೆಲ, ಇದೇ ನಮ್ಮ ತಾಯಿ. ಈ ತಾಯಿಯ ಚರಣದಲ್ಲಿ ಕುಳಿತು ನಾವು ದಿನದಿನವೂ ಪೌಷ್ಟಿಕಾಂಶವನ್ನು ಪಡೆಯುತ್ತೇವೆ. ನಮ್ಮ ವಿದ್ಯಾವಂತರು ಈ ಶಾಶ್ವತವಾದ ಮೂಲವನ್ನು ಮರೆತು, ಮನೆ ಬಿಟ್ಟು ತಿರುಗುವ ಅರೆಹುಚ್ಚರಂತೆ ಧ್ಯೇಯಗಳ ಮುಗಿಲಿನಲ್ಲಿ ತಿರುಗುತ್ತಿರುತ್ತಾರೆ. ಈ ಮುಗಿಲು ಸೇವೆಯಲ್ಲಿ ಲೀನವಾಗದಿದ್ದಲ್ಲಿ ಭೂಮಾತೆಯೊಂದಿಗೆ ಮನುಷ್ಯನ ಸಂಬಂಧ ಅರ್ಥರಹಿತವಾಗುವುದು. ನಮ್ಮ ಅಭಿಪ್ರಾಯಗಳೆಲ್ಲ ಆಕಾಶದಲ್ಲಿ ಹೊಗೆಯಾಗಿಯೇ ತೇಲಿ ಹೋದರೆ, ನೂತನ ಜಗತ್ತಿನ ಮೊಳಕೆಯಾಗುವುದೇ ಇಲ್ಲ. ಮಳೆ ಇಲ್ಲ ಎಂದಲ್ಲ; ಆದರೆ ಭೂಮಿಯನ್ನು ಉತ್ತಿಲ್ಲ. ದೊಡ್ಡ ಕೊಯಿಲು ಬರುವ ಪ್ರದೇಶವನ್ನೆಲ್ಲ ನಾವು ಉದಾಸೀನ ಮಾಡಿದ್ದೇವೆ. ಇಂತಹ ವಿಶಾಲವಾದ ಬೆಂಗಾಡಿನಂತಹ ದೇಶ, ಬಾಯಾರಿಕೆಯಿಂದ ಅಂತರಿಕ್ಷದ ಕಡೆ ನೋಡಿ ಆರ್ತನಾದ ಮಾಡುವಂತಿದೆ. ಅದು ಹೀಗೆ ಹೇಳುತ್ತಿದೆ. “ನಿಮ್ಮ ಜ್ಞಾನದ ಫಲವನ್ನು ನನಗೆ ಎರೆಯಿರಿ. ನೀವು ಹೇಳುತ್ತಿರುವ ಸೊಗಸಾದ ಮಾತುಗಳ ವೈಭವಪೂರ್ಣ ಅರಿವನ್ನು ನನ್ನಲ್ಲಿ ಪ್ರಯೋಗಿಸಿ. ಅದನ್ನೆಲ್ಲ ತಾನು ಸ್ವೀಕರಿಸುವಂತೆ ನನ್ನನ್ನು ಸಿದ್ಧಗೊಳಿಸಿ. ನನಗೆ ನೀವು ಏನನ್ನು ಕೊಟ್ಟರೂ ನಾನು ಸಾವಿರಮಡಿ ಲಕ್ಷಮಡಿಯಾಗಿ ನಿಮಗೆ ಹಿಂದಿರುಗಿಸುತ್ತೇನೆ.

“ನನ್ನಿಂದ ಇನ್ನೂ ಹೆಚ್ಚು ಫಲವನ್ನು ಹೊಂದಿ” ಎಂಬ ನಿಟ್ಟುಸಿರಿನ ಕೇಳಿಕೆ, ಭೂಮಾತೆಯ ಹೃದಯದಿಂದ ಹೊರಟು ಈಗಾಗಲೇ ಅಂತರಿಕ್ಷವನ್ನು ಮುಟ್ಟಿದೆ. ಸಮೃದ್ಧವಾದ ಅಮೃತಧಾರೆ ಬರುತ್ತಿದೆ. ಇದುವರೆಗೆ ಕಾಲಕಳೆದುದು ಸಾಕು. ಇನ್ನು ನಮಗೆ ಲಭ್ಯವಾಗಿರುವ ಈ ಭೂಮಿಯನ್ನು ಉತ್ತು ಬಿತ್ತಿ ಪಾಕಮಾಡಿ, ಕಾಳಿನ ಕಣಜವನ್ನು ನಿರ್ಮಿಸೋಣ”

ರವೀಂದ್ರನಾಥಠಾಕೂರರು, ಭಾರತಮಾತೆಯ ಸುಪುತ್ರರು, ಕವಿ

ಗಾಯಕ ರಸಋಷಿ. ಕೊನೆಯ ಉಸಿರಿನವರೆಗೆ ಈ ನಾಡಿನ ಮಂಗಳವನ್ನು ಬಯಸಿ ದುಡಿದವರು. ಅವರು ಬಯಸಿದುದು ಸಮೃದ್ಧವಾದ, ಚೈತನ್ಯ ಯುಕ್ತವಾದ ಆತ್ಮಶಕ್ತಿಪೂರಿತ ಭಾರತ. ಅವರು ಈ ನಾಡಿನ ಮಂಗಳದ ಬೇಹುಗಾರರು.

ಅವರ ಸ್ಫೂರ್ತಿ, ನಮ್ಮನ್ನು ಎಂದೆಂದಿಗೂ ನಡೆಸಲಿ.

ಶ್ರೀ ರಂಗನಾಥ ಪವರ್ ಪ್ರೆಸ್, ಹಾಸನ.